ಸಂಪುಟ ೧
ಸಂಚಿಕೆ ೨

ಕರ್ನಾಟಕ ಭಾರತಿ

ಅಕ್ಷಯತೃತೀಯಾಸಂಚಿಕೆ

೧೯೬೯

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಮತ
ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗ
ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದ
ಮೂಲಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂ
ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಿನಲ್ಲಿ ಸಾಕಷ್ಟು ಮಾರ್ಜಿ
ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರ
ಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾ
ಯಾಗಲಿ ಇರಬಾರದು.

ಲೇಖನ ಸ್ವೀಕೃತವಾದಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕ
ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳ
ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವ
ಸಂಚಿಕೆಯ ಪ್ರತಿಯೊಂದಿಗೆ ಕಳಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದ
ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗ
ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, ಸಂಪಾದಕರು 'ಕರ್ನಾ
ಭಾರತಿ', ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩ ಇವ
ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎ
ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವದೇ ವಿಷಯಕ್ಕೆ ಡಾಯರೆಕ್ಟರ್, ವ್ಯಾಸಂಗ ವಿಸ್ತ
ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ರಾಜ್ಯೋದಯ ಸಂಚಿಕೆ ೨. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೫-೦೦ (ಅಂಚೆವೆಚ್ಚ ಸಹಿತ)
ಬಿಡಿಸಂಚಿಕೆಯ ಬೆಲೆ : ರೂ. ೩-೦೦ (ಅಂಚೆವೆಚ್ಚ ಪ್ರತ್ಯೇಕ)

ಹಣವನ್ನು ಮನಿಯಾರ್ಡರ್ ಇಲ್ಲವೆ ಪೋಸ್ಟಲ್ ಆರ್ಡರ್ ಮೂಲಕ
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩
ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ಅಧ್ಯಯನ ಪತ್ರಿಕೆ

ಂಪುಟ : ೧ ಸಂಚಿಕೆ : ೨

ಅಕ್ಷಯತೃತೀಯಾಸಂಚಿಕೆ

ಕ್ರಿ. ಶ. : ೧೯೬೯ ಶಾ. ಶ. : ೧೮೯೧

ರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ಅಯನ ಪತ್ರಿಕೆ

ಸಂಪುಟ : ೧, ಸಂಚಿಕೆ : ೨
ಎಪ್ರಿಲ್, ೧೯೬೯

ಎಲ್ಲ ಹಕ್ಕುಗಳನ್ನು ಕಾಯ್ದಿಡಲಾಗಿದೆ.

ಸಂಪಾದಕ ಮಂಡಲ :

ಡಾ. ಆರ್. ಸಿ. ಹಿರೇಮಠ (ಅಧ್ಯಕ್ಷರು)
ಪ್ರಿ. ರಾ. ಯ. ಧಾರವಾಡಕರ
ಡಾ. ಡಿ. ಎಂ. ನಂಜುಂಡಪ್ಪ
ಪ್ರಿ. ಎಸ್. ಎಸ್. ಬೊಮ್ಮಣ್ಣವರ
ಶ್ರೀ ಶರಣಬಸವಪ್ಪ. ಡಿ. ಅಪ್ಪಾ
ಶ್ರೀ ಸಿ. ಎಸ್. ಕಣವಿ (ಕಾರ್ಯದರ್ಶಿಗಳು)

ಪ್ರಕಾಶಕರು :

ಶ್ರೀ ಸದಾಶಿವ ಒಡೆಯರ
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

ಮುದ್ರಕರು :

ಶ್ರೀ ಬಿ. ಜಿ. ಗುತ್ತಲ, ಬಿ.ಎ., ಎಲ್‌ಎಲ್.ಬಿ.
ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪೀಕರ ರೋಡ್, ಹುಬ್ಬಳ್ಳಿ-೨೦

ಪರಿವಿಡಿ



ರಾಷ್ಟ್ರಪಿತ
ಮಹಾತ್ಮಾ ಗಾಂಧಿ

ಗಾಂಧೀಜಿ

ಮಧುಕರ ಯಕ್ಕುಂಡಿ

ಹುಟ್ಟಿ ನೂರು ವರ್ಷಗಳ ಮುದುಕನಾದರೂ ನೀ
ಸತ್ತು ಇಪ್ಪತ್ತು ವರುಷಗಳ ತರುಣನಿನ್ನು !
ನಿನ್ನ ಹುಟ್ಟಿನ ಹರುಷ ವರುಷಕೊಮ್ಮೆಯೊ
ನೂರು ವರುಷಕೊಮ್ಮೆಯೊ....

ನಿನ್ನ ಸಾವಿನ ನೋವು
ದಿನಕೊಮ್ಮೆ ಕ್ಷಣಕೊಮ್ಮೆ ಕೊರೆಯುತಿಹುದು.
ನೀ ಕಣ್ಣು ತೆರೆದಂದು ಮಲಗಿದ್ದ ಭಾರತವು
ಎದ್ದಾಗ ನೀ ಮಾತ್ರ ಕಣ್ಣು ಮುಚ್ಚಿದ್ದೆ.

ಎಂತಲೇ—
'ಹೇ ರಾಮ್' ಇಂದಿಗೂ ಮಾರ್ನುಡಿಯುತಿದೆ
ಭಾರತದ ಬರಿದಾದ ಗರ್ಭಗುಡಿಯಲ್ಲಿ.

ನಿನ್ನ ಸತ್ಯದ ಬದುಕು
ದಂತಕತೆಯಾಗಿ ಬೆಳೆದು
ನೂರು ವರುಷದಲೆ ಅಜ್ಜಿಕತೆಯಾಯಿತೆ !
ಇನ್ನೂರು ವರುಷಕೇನಿನ್ನು....

ಗರ್ಭಗುಡಿಯಲಿ ಕೊಳೆವ ಕಲ್ಲುದೇವರಾಗುವಿಯೊ ?
ನಿನ್ನ ಹೆಸರಲಿ ಏನೆಲ್ಲ ನಡೆದರೂ
ನೀ ಹೇಳಹೆಸರಾಗುತಿರುವೆ.
ನಿನ್ನ ಮರೆಯುವದೆ ಇದಕಿಂತ ಮೇಲು !

ಸತ್ತು ಈ ರೀತಿ ಬದುಕುವದಕಿಂತ
ಇನ್ನೊಮ್ಮೆ ಹುಟ್ಟಿ ಬರುವದೇ ಮೇಲು.
ನೀನೀಗ ಇನ್ನೊಮ್ಮೆ ಹುಟ್ಟಿಬಂದರೆ
ಗೀತೆಯಲ್ಲಿಯ ಮಾತು ದಿಟವಾಗಬಹುದು. □ □

ಗಾಂಧೀಜಿ ಅವರ ದೃಷ್ಟಿಯಲ್ಲಿ ಹಿಂದೂ ಧರ್ಮ

ವೀ. ಜಿ. ಕುಲಕರ್ಣಿ

ಗಾಂಧೀಜಿ ತಮ್ಮನ್ನು ಸನಾತನೀ ಹಿಂದು ಎಂದು ಕರೆದುಕೊಳ್ಳುತ್ತಿದ್ದರು. ಸನಾತನಧರ್ಮದಲ್ಲಿ ಗಾಢವಾದ ಶ್ರದ್ಧೆ ತಳೆದ ಅವರು ಭಾರತೀಯ ಸಂಸ್ಕೃತಿಯೇ ಜಗತ್ತಿಗೆ ಬೆಳಕನ್ನು ತೋರಬಲ್ಲುದೆಂಬ ನಂಬುಗೆಯನ್ನಿಟ್ಟುಕೊಂಡಿದ್ದರು. ನಮ್ಮ ದೇಶದ ಅಸಂಖ್ಯ ಹಿಂದೂ ಜನರು ಅವರನ್ನು ಹಿಂದೂ ಧರ್ಮದ ಪರಮ ಶ್ರೇಷ್ಠ ಸಂತರೆಂದು ಭಾವಿಸಿ ಅವರಿಗೆ ಪೂಜೆಯನ್ನು ಸಲ್ಲಿಸುತ್ತಿದ್ದರು. ಇಂದಿಗೂ ಅದೇ ಭಾವನೆಯನ್ನು ಬಹುಸಂಖ್ಯಾಕರಾದ ಹಿಂದುಗಳು ಇಟ್ಟುಕೊಂಡಿದ್ದಾರೆ. ಎಂದೆಂದಿಗೂ ಇದೇ ಭಾವನೆ ಉಳಿಯುವದೆಂಬುದರಲ್ಲಿ ಸಂಶಯವಿಲ್ಲ. ಆದರೆ ಹಿಂದೂಗಳಲ್ಲಿಯೇ ಕೆಲವರು—ಅವರು ತೀರ ಸ್ವಲ್ಪ ಜನರಿದ್ದಿರಬಹುದು —ಗಾಂಧೀಜಿ ಹಿಂದೂ ಧರ್ಮಕ್ಕೂ ಹಿಂದೂ ಸಂಸ್ಕೃತಿಗೂ ಹಿಂದೂ ಜನರಿಗೂ ಕಂಟಕಪ್ರಾಯರೆಂದು ತಿಳಿಯುವವರಿದ್ದರು. ಗಾಂಧೀಜಿಯವರ ತತ್ತ್ವಗಳೂ ಅವರ ರೀತಿನೀತಿಗಳೂ ಅಹಿಂದುವೆಂದೂ, ಅವರೊಬ್ಬ ಪ್ರಚ್ಛನ್ನ ಕ್ರೈಸ್ತರೆಂದೂ ಅವರಿಂದ ಹಿಂದೂ ಧರ್ಮಸಂಸ್ಕೃತಿಗಳಿಗೆ ವಿಪತ್ತು ಪ್ರಾಪ್ತವಾಗಿದೆಯೆಂದೂ ತಿಳಿಯುವವರಿದ್ದರು. ಇಂಥ ಅಸದ್ಭಾವನೆಯ ಉತ್ಕಟತೆಯೇ ಅವರ ಕೊಲೆಗೆ ಕಾರಣವಾಯಿತು. ಇಂಥ ವಿಚಾರಗಳನ್ನು ಹೃದಯದಲ್ಲಿ ಬಚ್ಚಿಟ್ಟುಕೊಂಡು ಕುದಿಯುತ್ತಿರುವವರು ಕೆಲವರಾದರೂ ಇನ್ನೂ ನಮ್ಮಲ್ಲಿ ಇದ್ದಾರೆಂದು ಸಂಶಯ ಪಡಲಿಕ್ಕೆ ಆಸ್ಪದವಿದೆ. ಆದುದರಿಂದ ಹಿಂದೂ ಧರ್ಮಸಂಸ್ಕೃತಿಗಳ ವಿಷಯ-ವಾಗಿ ಗಾಂಧೀಜಿಯವರ ವಿಚಾರಗಳನ್ನು ತಿಳಿದುಕೊಳ್ಳುವದು ಹಾಗೂ ಅವುಗಳ ಪ್ರಸಾರಮಾಡುವದು ಅಪೇಕ್ಷಣೀಯವೆಂದು ಕಾಣುತ್ತದೆ. ಈ ಲೇಖದಲ್ಲಿ ಅವುಗಳನ್ನು ವಿಶದೀಕರಿಸಿ ಪರೀಕ್ಷಿಸುವ ಯತ್ನವನ್ನು ಮಾಡಲಾಗಿದೆ.

ಮೊದಲು ಗಾಂಧೀಜಿ ಹುಟ್ಟಿ ಬೆಳೆದ ಮನೆತನವನ್ನೂ ಪ್ರಾರಂಭದಿಂದ ಅವರ ಮೇಲೆ ಉಂಟಾದ ಸಂಸ್ಕಾರಗಳನ್ನೂ ಗಮನಿಸಬೇಕು. ಅವರು ಜನಿಸಿದ್ದು ಸನಾತನೀ ಪದ್ಧತಿಗಳನ್ನು ಅನುಸರಿಸುವ ಒಂದು ಮಧ್ಯಮ ವರ್ಗದ ಕುಟುಂಬದಲ್ಲಿ. ಅಲ್ಲಿ ಸಮಾಜ ಸುಧಾರಣೆಯ ಗಾಳಿಯಾಗಲೀ ಬೇರೆ ಧರ್ಮ ಸಂಸ್ಕೃತಿಗಳ ಪ್ರಭಾವವಾಗಲೀ ಎಷ್ಟುಮಾತ್ರಕ್ಕೂ ಇದ್ದಿರಲಿಲ್ಲ. ಬಂಗಾಲದಲ್ಲಿ ಆ ಕಾಲಕ್ಕಾಗಲೇ ಕೆಲವು ಕುಟುಂಬಗಳಲ್ಲಿ ಪರಿವರ್ತನೆಯ ವಾತಾವರಣವು ಹಬ್ಬಿತ್ತು. ರವೀಂದ್ರನಾಥ ಠಾಕೂರ, ಸ್ವಾಮಿ ವಿವೇಕಾನಂದ, ಶ್ರೀ ಅರವಿಂದ— ಇವರು ಬೆಳೆದ ಪರಿಸರಗಳನ್ನೂ ಗಾಂಧೀಜಿ ಬೆಳೆದ ಪರಿಸರವನ್ನೂ ಹೋಲಿಸಿದರೆ ಅಂತರವು ಸ್ಪಷ್ಟವಾಗುವದು. ಅವರ ತಂದೆತಾಯಿಗಳಿಬ್ಬರೂ ಪರಂಪರೆಯಾಗಿ

ಬಂದ ಧಾರ್ಮಿಕ ಆಚರಣೆಗಳನ್ನು ಪಾಲಿಸುತ್ತಿದ್ದರು. ಅವರು ಧರ್ಮದ ಬಗ್ಗೆ ಬೌದ್ಧಿಕವಾಗಿ ಬಹಳ ವಿಚಾರಮಾಡದೆ ಶ್ರದ್ಧೆಯನ್ನಿಟ್ಟುಕೊಂಡವರು. ಅವರ ಮಾತೆ ಪುತಲೀಬಾಯಿಯಂತೂ ಅನೇಕ ವ್ರತನಿಯಮ ಉಪವಾಸಗಳನ್ನು ಮೇಲಿಂದಮೇಲೆ ಆಚರಿಸುತ್ತಿದ್ದರು. ದೇವಾಲಯಕ್ಕೆ ಪ್ರತಿದಿನವೂ ದರ್ಶನಕ್ಕೆ ಹೋಗುತ್ತಿದ್ದರು. ಆಗ ಅವರ ಚಿಕ್ಕ ಮಗ ಮೋಹನನೂ (ಗಾಂಧೀಜಿ) ಅವರ ಸಂಗಡ ಹೋಗುತ್ತಿದ್ದ. ಬಾಲ್ಯದಲ್ಲಿ ಗಾಂಧೀಜಿಯ ಮೇಲೆ ಪ್ರಭಾವ ಬೀರಿದ ಪೌರಾಣಿಕ ಪ್ರಸಂಗಗಳೆಂದರೆ, ಹರಿಶ್ಚಂದ್ರನ ಕಥೆ, ಪ್ರಹ್ಲಾದನ ಕಥೆ, ರಾಮ-ಚಂದ್ರನ ಕಥೆ, ಶ್ರವಣಕುಮಾರನ ಕಥೆ—ಇವೇ ಮೊದಲಾದವು. ಬಾಲ್ಯದಲ್ಲಿ ಪಡೆದ ಈ ಧಾರ್ಮಿಕ ಸಂಸ್ಕಾರವು ಕೊನೆಯವರೆಗೂ ಅವರಲ್ಲಿ ಸ್ಥಿರವಾಗಿ ಉಳಿಯಿತು. ಎಂದಮೇಲೆ ಅವರು ಹಿಂದುವಾಗಿ ಹುಟ್ಟಿ ಹಿಂದುವಾಗಿ ಬೆಳೆದು ಹಿಂದುವಾಗಿಯೇ ಕೊನೆಯವರೆಗೆ ಉಳಿದರೆಂಬುದು ಸ್ಪಷ್ಟವಿದೆ

ಗಾಂಧೀಜಿ ಧರ್ಮದ ವಿಷಯದಲ್ಲಿ ಒಂದು ಸಿದ್ಧಾಂತವನ್ನು ಪ್ರಸ್ಥಾಪಿಸಿದ ಆಚಾರ್ಯರೇನಲ್ಲ. ಧರ್ಮ ಮತಗಳ ವಿಷಯವಾಗಿ ಆಳವಾಗಿ ತುಲನಾತ್ಮಕವಾಗಿ ಅಭ್ಯಾಸಮಾಡಿ, ದೀರ್ಘವಾಗಿ ವಿಚಾರಮಾಡಿ ತಮ್ಮದೇ ಆದ ಒಂದು ತತ್ತ್ವ ಪ್ರಣಾಲಿಯನ್ನು ನಿರ್ಮಿಸಲಿಲ್ಲ. ಕೆಲವೊಂದು ಮೂಲ ತತ್ತ್ವಗಳನ್ನು ಅಂಗೀ-ಕರಿಸಿ ಅವುಗಳನ್ನನುಸರಿಸಿ ಅವಿರತ ಕರ್ಮದಲ್ಲಿ ತೊಡಗುವ ಪ್ರವೃತ್ತಿಯು ಳ್ಳವರವರು. ಅವರು ನಂಬಿದ ನಂಬುಗೆಗಳು, ಓದಿಕೊಂಡ ಕೆಲವೇ ಗ್ರಂಥ ಗಳು, ಮನನಮಾಡಿದ ವಿಚಾರಗಳು, ಹೃದಯದಲ್ಲಿ ನೆಲೆನಿಂತ ಭಾವಗಳು ಇವೆಲ್ಲವೂ ಅವರ ದೈನಂದಿನ ಕಾರ್ಯಗಳಲ್ಲಿ ಆಚರಣೆಗಳಲ್ಲಿ ಒಡಮೂಡುತ್ತಿದ್ದವು. ಮನೋವಾಕ್ಕಾಯಗಳ ಅದ್ಭುತ ಸಾಮರಸ್ಯವನ್ನು ಅವರ ಜೀವನದಲ್ಲಿ ಕಾಣು ತ್ತೇವೆ. ಅವರೇ ಹೇಳಿದಂತೆ ಅವರ ಜೀವನವೇ ಅವರ ಸಂದೇಶ; ಅವರ ತತ್ತ್ವಗಳ ಪ್ರಾತ್ಯಕ್ಷಿಕೆ. ಆಚರಣೆಯಲ್ಲಿ ಬಾರದ ವಿಚಾರ, ಆಚರಣೆಯಲ್ಲಿ ಬಾರದ ಓದು ವ್ಯರ್ಥವೆಂದು ಅವರು ತಿಳಿಯುತ್ತಿದ್ದರು. ಅವರೇನು ಧರ್ಮಗಳ ವಿಷಯದಲ್ಲಿಯಾಗಲೀ ಬೇರೆ ವಿಷಯಗಳಲ್ಲಿಯಾಗಲೀ ಬಹಳ ಓದಿಕೊಂಡವ ರಲ್ಲ. ಅವರು ಹಿಂದೂ ಧರ್ಮಗ್ರಂಥಗಳಲ್ಲಿ ಕೆಲವನ್ನು ಶ್ರದ್ಧೆಯಿಂದ ಓದಿ ಕೊಂಡಂತೆ ಕ್ರೈಸ್ತ, ಇಸ್ಲಾಮ, ಬೌದ್ಧ ಧರ್ಮಗಳ ಬಗ್ಗೆಯೂ ಕೆಲವು ಗ್ರಂಥ ಗಳನ್ನು ಅದೇ ಶ್ರದ್ಧೆಯಿಂದಲೇ ಓದಿಕೊಂಡಿದ್ದರು. ಈ ಎಲ್ಲ ಓದು ಮತ್ತು ಚಿಂತನೆಗಳ ಪರಿಣಾಮವೆಂದರೆ ಹುಟ್ಟಿನಿಂದ ಬಂದ ಹಿಂದೂ ಧರ್ಮದ ಅಭಿಮಾನವು ಅತ್ಯಂತ ಗಾಢವಾದ ಶ್ರದ್ಧೆಯಾಯಿತು.

ಹಿಂದೂ ಧರ್ಮ ಎಂದು ಹೇಳುತ್ತೇವೆ. ಆದರೆ 'ಹಿಂದೂ' ಎಂದರೇನು, 'ಧರ್ಮ' ಎಂದರೇನು ಎಂಬುದನ್ನು ನಾವು ಮೊದಲು ಸ್ಪಷ್ಟಪಡಿಸಿಕೊಳ್ಳಬೇಕು. ಕ್ರೈಸ್ತ ಮತ್ತು ಇಸ್ಲಾಮ ಮತಗಳ ವ್ಯಾಖ್ಯೆ ಕೊಡುವದು ಸುಲಭವಿದೆ. ಅದೇ

ಹಿಂದೂ ಎಂದಕೂಡಲೆ ಜಟಿಲವಾದ ಸಮಸ್ಯೆಗಳೇಳುತ್ತವೆ. ಏಕೆಂದರೆ ಹಿಂದೂ ಎಂಬುದು ಒಂದು ಮತವಲ್ಲ, ಒಂದು ಸಾಧನಮಾರ್ಗವಲ್ಲ. ಅನೇಕ ಮತಗಳು, ಅನೇಕ ಸಾಧನಮಾರ್ಗಗಳು, ಅನೇಕ ದರ್ಶನಗಳು ಈ ಹಿಂದೂ ಎಂಬ ಸರ್ವ-ಗ್ರಾಹಿಯಾದ ಪರಂಪರೆಯಲ್ಲಿ ಸಮಾವಿಷ್ಟವಾಗಿವೆ. ಒಂದು ದೃಷ್ಟಿಯಲ್ಲಿ ಇದೊಂದು religion (ಮತ-ಧರ್ಮ) ಅಲ್ಲ. (ಇಂಗ್ಲಿಷಿನ religion ಎಂಬ ಪದವನ್ನು ಧರ್ಮ ಎಂದು ಭಾಷಾಂತರಮಾಡುವದು ಅಷ್ಟೇನು ಸಾಧುವಲ್ಲ.) ಹಿಂದೂ ಎಂಬುದು ಒಂದು ಜೀವನಮಾರ್ಗ, ಒಂದು ಮನೋಧರ್ಮ, ಒಂದು ಸಂಸ್ಕೃತಿ —ಹೀಗೆ ಮುಂತಾಗಿ ಹೇಳಬೇಕಾಗುತ್ತದೆ. ಗಾಂಧೀಜಿ ಅವರಿಗೆ ಈ ಸಮಸ್ಯೆಯು ಸಂಪೂರ್ಣ ಅರಿವು ಇತ್ತು. ಆದ್ದರಿಂದ ಅವರು 'ಹಿಂದೂ' ಇದರ ವ್ಯಾಖ್ಯೆಯನ್ನು ತಮ್ಮದೇ ಆದ ಈ ರೀತಿಯಲ್ಲಿ ಮಾಡಿದ್ದಾರೆ:—

> "ಹಿಂದೂ ಧರ್ಮಕ್ಕೆ ಒಂದು ವಿಶಿಷ್ಟ ಮತ (creed) ಎಂಬುದಿಲ್ಲ. ಇದು ಸುದೈವವೆನ್ನಿರಿ, ಇಲ್ಲ ದುರ್ದೈವವೆನ್ನಿರಿ....ಹಿಂದೂ ಎಂಬ ಮತವೇ ಇದ್ದರೆ ಅದನ್ನು ನಾನು ಹೀಗೆ ವಿವರಿಸುತ್ತೇನೆ—'ಅಹಿಂಸಾಸಾಧನೆಯ ಮೂಲಕ ಸತ್ಯವನ್ನು ಶೋಧಿಸುವದು.' ದೇವರಲ್ಲಿ ನಂಬುಗೆಯಿಲ್ಲದವನೂ ಹಿಂದೂ ಎಂದು ಹೇಳಿಕೊಳ್ಳಬಹುದು. ಈ ಕಾರಣಕ್ಕಾಗಿ ಹಿಂದೂ ಧರ್ಮವು ಉಳಿದ ಧರ್ಮಗಳಿಗಿಂತ ಸಹಿಷ್ಣುತೆಯ ಪರಾಕಾಷ್ಠೆಯನ್ನು ಹೊಂದಿದೆ. ಅದು ಎಲ್ಲ ಮತಗಳನ್ನೂ ಒಳಗೊಳ್ಳುತ್ತದೆ."[೧]

ಹಿಂದೂ ಧರ್ಮವೆಂಬುದು ಎಲ್ಲಾ ಕಾಲಗಳಲ್ಲಿ ಒಂದೇ ಬಗೆಯಾಗಿ ಇದ್ದಿಲ್ಲವೆಂಬುದನ್ನು ನಾವು ಗಮನಿಸಬೇಕು. ಇದಕ್ಕೆ ಒಬ್ಬ ಸಂಸ್ಥಾಪಕ, ಒಂದು ಆಧಾರಗ್ರಂಥ, ಒಂದು ಮತ ಹೀಗೆ ಇಲ್ಲ. ಕೆಲವು ಮೂಲತತ್ತ್ವಗಳನ್ನು ಆಧರಿಸಿ ಕಾಲಕಾಲಕ್ಕೆ ಬದಲಾವಣೆ ಹೊಂದುತ್ತ ಬೆಳೆಯುತ್ತ ಬಂದ ಧರ್ಮವಿದು. ಯಹೂದೀ, ಕ್ರೈಸ್ತ ಮತ್ತು ಇಸ್ಲಾಮು ಮತಗಳ ರೀತಿ ಬೇರೆಯೇ ಆಗಿದೆ. ಆಯಾ ಮತಗಳು ಸ್ಥಾಪನೆಯಾದಂದಿನಿಂದ ಇಲ್ಲಿಯವರೆಗೆ ಅವುಗಳ ಮತಪ್ರಕ್ರಿಯೆಗಳೂ ಆಚರಣೆಗಳೂ ಒಂದೇ ಬಗೆಯಾಗಿವೆ. ಈ ಕಾರಣದಿಂದಲೇ ಬಹಳ ಜನ ಪಾಶ್ಚಾತ್ಯ ಪಂಡಿತರು ಹಿಂದೂ ಎಂಬುದು ಒಂದು ಮತಧರ್ಮವೇ (religion) ಎಂದು ಸಂಶಯವನ್ನು ವ್ಯಕ್ತಪಡಿಸುತ್ತಾರೆ. ವೇದಕಾಲದ ಹಿಂದೂ ಧರ್ಮ, ಉಪನಿಷತ್ಕಾಲದ ಹಿಂದೂ ಧರ್ಮ, ಪುರಾಣಕಾಲದ ಹಿಂದೂ

---

೧ It is the good fortune or bad fortune of Hinduism that it has no official creed....If I were asked to define the Hindu creed I should simply say search after Truth through non-violent means....of course, therefore Hinduism is the most liberant of all religions. Its creed is all embracing.

—***Young India*, 24-4-'2**

ಧರ್ಮ, ಆಧುನಿಕ ಕಾಲದ ಹಿಂದೂಧರ್ಮ, ಇವುಗಳಲ್ಲಿ ಅನೇಕ ವ್ಯತ್ಯಾಸಗಳನ್ನು ಕಾಣಬಹುದು. ನಮ್ಮಲ್ಲಿ ಉಪಲಬ್ಧವಿದ್ದ ನೂರಾರು ಸ್ಮೃತಿಗಳು ನಮ್ಮ ರೀತಿ ವಿಚಾರಗಳಲ್ಲಿ ಆದ ಬದಲಾವಣೆಗಳನ್ನು ಸೂಚಿಸುತ್ತವೆ. ಗಾಂಧೀಜಿ ಹಿಂದೂ ಧರ್ಮದ ಸತ್ತ್ವಯುತವಾದ ಪರಿವರ್ತನೆ, ಬೆಳವಣಿಗೆಯನ್ನು ಕುರಿತು ಹೀಗೆ ಹೇಳುತ್ತಾರೆ:

> "ಅವಿಭಕ್ತವಾಗಿ ಮೂಲದಲ್ಲಿ ಒಂದೇ ಇದ್ದು ಹಿಂದೂ ಧರ್ಮವು ಅನಂತಶಾಖೆಗಳುಳ್ಳ ಮಹಾವೃಕ್ಷದಂತೆ ಬೆಳೆದಿರುತ್ತದೆ. ಗಂಗಾನದಿಯಂತೆ ಉಗಮದಲ್ಲಿ ನಿರ್ಮಲವೂ ಪವಿತ್ರವೂ ಆಗಿ, ಮುಂದೆ ಹರಿದಂತೆ ಬೇರೆ ಬೇರೆ ಪ್ರದೇಶಗಳ ಅಶುದ್ಧತೆಯನ್ನು ಒಳಗೊಂಡು ಮುಂದೆ ಸಾಗಿದೆ. ಆದರೆ ಒಟ್ಟಿನಲ್ಲಿ ಜಾಹ್ನವಿಯಂತೆ ಪಾವನವೂ ಲೋಕೋಪಕಾರಿಯೂ ಆಗಿದೆ." ೩

ಶ್ರುತಿಸ್ಮೃತಿಪುರಾಣೋಕ್ತ ಧರ್ಮವು ಹಿಂದೂ ಧರ್ಮವೆಂದು ಸಾಮಾನ್ಯವಾಗಿ ಹೇಳಬಹುದು. ಇನ್ನು ಕೆಲವರ ಅಭಿಪ್ರಾಯದಲ್ಲಿ ಜೈನ ಮತ್ತು ಬೌದ್ಧ ಮತಗಳು ಶ್ರುತಿ ಸ್ಮೃತಿ ಪುರಾಣಗಳನ್ನು ಮನ್ನಿಸದಿದ್ದರೂ ಅವು ಕೂಡ ಹಿಂದೂ ಎಂಬುದರಲ್ಲಿಯೇ ಒಳಗೊಳ್ಳುತ್ತವೆ. ಏಕೆಂದರೆ ಮೂಲ ತತ್ತ್ವಗಳಲ್ಲಿ ಎಲ್ಲ ಭಾರತೀಯ ಮತಧರ್ಮಗಳಲ್ಲಿಯೂ ಒಂದು ಬಗೆಯ ಏಕತ್ವವಿದೆ. ಪುನರ್ಜನ್ಮ, ಯೋಗ, ಮೋಕ್ಷ, ಸಮಾಜವ್ಯವಸ್ಥೆ, ಕರ್ಮ, ಅಹಿಂಸೆ, ಧ್ಯಾನ—ಇವೇ ಮೊದಲಾದ ವಿಚಾರಗಳು ಎಲ್ಲ ಭಾರತೀಯ ಧರ್ಮಗಳಿಗೂ ಸಾಮಾನ್ಯವಾಗಿವೆ. ಗಾಂಧೀಜಿಯ ದೃಷ್ಟಿಯಲ್ಲಿ ಜೈನ ಮತ್ತು ಬೌದ್ಧ ಧರ್ಮಗಳೂ ಹಿಂದೂ ಪದದ ವ್ಯಾಪ್ತಿಯಲ್ಲಿ ಬರುತ್ತವೆ. "ಜೈನ ಮತ್ತು ಬೌದ್ಧ ಮತಗಳನ್ನು ಹಿಂದೂ ಧರ್ಮದಿಂದ ಬೇರೆಯೆಂದು ನಾನು ಭಾವಿಸುವದಿಲ್ಲ"೪ ಎಂದು ಗಾಂಧೀಜಿ ಹೇಳಿದ್ದಾರೆ. ಹಾಗೆ ನೋಡಿದರೆ ಜೈನಮತದ ವಿಶಿಷ್ಟ ತತ್ತ್ವಗಳೂ ಜೈನಯತಿಗಳೂ ಗಾಂಧೀಜಿಯವರ ಮೇಲೆ ಪ್ರಭಾವ ಬೀರಿದ್ದಾರೆ

ಶ್ರುತಿಸ್ಮೃತಿಪುರಾಣೋಕ್ತ ಧರ್ಮವು ಹಿಂದೂ ಧರ್ಮವೆಂದು ಸಾಮಾನ್ಯವಾಗಿ ತಿಳಿಯುವದಾದರೆ ಶ್ರುತಿಶ್ರುತಿಗಳಲ್ಲಿ ಸ್ಮೃತಿಸ್ಮೃತಿಗಳಲ್ಲಿ ಪರಸ್ಪರ ವಿರುದ್ಧಾಭಿಪ್ರಾಯಗಳು ಬಂದರೆ—ಹೀಗೆ ಅನೇಕ ಕಡೆಗಳಲ್ಲಿ ಬರುವದುಂಟು—

---

೩. One and indivisible at the root of Hinduism has grown into a vast tree with innumerable branches....Hinduism is with the Ganga pan and untallied at the source, but taking in its course the impurities on the way. Even like the Ganga it is beneficient in its total effect.

—Young India, 8-4-'26

೪. I do not regard Jainism and Buddhism as separate from Hinduism

—Young India, 20-10-'27

ಇದಕ್ಕೆ ಪರಿಹಾರವೇನು? ಯಾವುದನ್ನು ಆಧಾರವೆಂದು ಗ್ರಹಿಸಬೇಕು? ಎಂಬ ಸಮಸ್ಯೆ ಮೊದಲಿನಿಂದಲೂ ನಮ್ಮ ಪರಂಪರೆಯಲ್ಲಿ ಇದೆ. ಧರ್ಮದ ರಹಸ್ಯವು ಅತ್ಯಂತ ಗೂಢವಾದುದು. ನಮ್ಮ ಹಿಂದಿನ ಗ್ರಂಥಗಳಲ್ಲಿ ಹೇಳಿದಂತೆ-

ಶ್ರುತಿರ್ವಿಭಿನ್ನಾಃ ಸ್ಮೃತಯಶ್ಚ ಭಿನ್ನಾನೈಕೋ ಮುನಿರ್ಯಸ್ಯ ವಚೋಽಪ್ರಮಾಣಂ ।
ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಂ ಮಹಾಜನೋ ಯೇನ ಗತಃ ಸ ಪಂಥಾಃ ।

ಶ್ರುತಿಗಳಲ್ಲಿ ಭಿನ್ನತೆಯಿದೆ; ಸ್ಮೃತಿಗಳಲ್ಲಿ ಭಿನ್ನತೆಯಿದೆ; ಒಬ್ಬೊಬ್ಬ ಮುನಿಯ ವಚನವೂ ಪ್ರಮಾಣವೇ; ಧರ್ಮದ ತತ್ತ್ವವು ಗುಹೆಯಲ್ಲಿ ಅಡಗಿ ಕೂತಿದೆ; ಮಹಾಜನರು (ಶ್ರೇಷ್ಠರು) ನಡೆದ ದಾರಿಯನ್ನೇ ಹಿಡಿಯಬೇಕು. ನಮ್ಮ ಶ್ರುತಿಗಳು ಅನಂತವಾಗಿವೆ. ವೇದ ಎಂಬುದು ನಾಲ್ಕು ಗ್ರಂಥಗಳಿಗೆ ಮಾತ್ರ ಸೀಮಿತವಾಗಿಲ್ಲ. ಕಾಲಕಾಲಕ್ಕೆ ಶ್ರುತಿಗೆ, ಸ್ಮೃತಿಗೆ ನಮ್ಮ ಆಚಾರ್ಯರೂ ಅನುಭಾವಿಗಳೂ ತಮ್ಮ ತಮ್ಮ ದೃಷ್ಟಿಯಲ್ಲಿ ಭಾಷ್ಯಗಳನ್ನು ರಚಿಸಿದ್ದಾರೆ. ತಮ್ಮ ತಮ್ಮ ಜೀವನದ ಅನುಭವಗಳ ಮೇಲಿಂದ, ತಮ್ಮ ತಮ್ಮ ಅಂತರಾತ್ಮಾನುಭವಗಳ ಮೇಲಿಂದ ಅವನ್ನು ಪರೀಕ್ಷಿಸಿ ತಮಗೆ ಪ್ರತ್ಯಕ್ಷವಾದ ಸತ್ಯಗಳನ್ನು ಸಾರಿದ್ದಾರೆ. ಇಂಥ ಮಹನೀಯರ ಜೀವನವು ಹಾಗೂ ಅವರ ಸ್ವಾನುಭವೋಕ್ತಿಗಳು ಮಾತ್ರ ಪ್ರಮಾಣಭೂತವೆಂದು ಗ್ರಹಿಸಬೇಕು. ಮನುಸ್ಮೃತಿಯಲ್ಲಿ ಉಕ್ತವಾದ

ವಿದ್ವದ್ಭಿಃ ಸೇವಿತಃ ಸದ್ಭಿಃ ನಿತ್ಯಮದ್ವೇಷರಾಗಿಭಿಃ ।
ಹೃದಯೇ ಸಾಭ್ಯನುಜ್ಞಾತಃ ಯೋ ಧರ್ಮಸ್ತಂ ನಿಬೋಧತ ॥

ಈ ಉಕ್ತಿಯನ್ನು ಗಾಂಧೀಜಿ ಆಗಾಗ ಉಲ್ಲೇಖಿಸುತ್ತಿದ್ದರು. 'ನಮ್ಮ ಪೂರ್ವದ ಹಿಂದೂ ಉಕ್ತಿಯಲ್ಲಿ ಸಂಪೂರ್ಣ ವಿಶ್ವಾಸವಿದೆ; ಅದೇನೆಂದರೆ ಅಹಿಂಸಾ, ಸತ್ಯ, ಬ್ರಹ್ಮಚರ್ಯ, ಅಪರಿಗ್ರಹ, ವೈರಾಗ್ಯ—ಇವುಗಳಿಲ್ಲದವನಿಗೆ ಶಾಸ್ತ್ರಗಳ ನಿಜವಾದ ಅರ್ಥವು ತಿಳಿಯಲಾರದು.'[೪]

ನಮ್ಮ ಶಾಸ್ತ್ರಗ್ರಂಥಗಳು ಅಪಾರವಾಗಿವೆ. ಅವೆಲ್ಲವೂ ಪ್ರಮಾಣಭೂತವೆಂದು ಹೊರಟರೆ, ಅನೇಕ ಅನೀತಿಕರವಾದ ಅಸಹ್ಯಕರವಾದ ಆಚರಣೆಗಳಿಗೂ ಆಧಾರಗಳನ್ನು ತೋರಿಸಬಹುದು. ನೀತಿದೃಷ್ಟಿಗೂ ಬುದ್ಧಿಗೂ ಸರಿಯೆನಿಸದ ಶಾಸ್ತ್ರೋಕ್ತಿಗಳನ್ನು ಗಣನೆಗೆ ತಂದುಕೊಳ್ಳಕೂಡದೆಂದು ಗಾಂಧೀಜಿ ಸಾರುತ್ತಾರೆ.[೫] ಆದ್ದರಿಂದ ಶಾಸ್ತ್ರಗಳ ಅರ್ಥವನ್ನು ಅಧಿಕಾರಿಯಾದವನು ಮಾತ್ರ

೪. I believe implicitly in the Hindu aphorism, that no one truly knows the shastras who has not attained perfection in non-violence (Ahimsa), Truth (Satya) and Self control (Brahmacharya) and who has not renounced all acquisition or possession of wealth.

—Young India, 6—10—'21

೫. I decline to be bound by any interpretation, however barred it may be, if it is repugnant to reason or moral sense.

—Young India, 6—10—'21

ಮಾಡಬಲ್ಲನು. ಹೀಗೆ ಹೇಳುವಲ್ಲಿ ಗಾಂಧೀಜಿ ನಮ್ಮ ಪ್ರಾಚೀನ ಹಿಂದೂ ಪರಂಪರೆಯನ್ನೇ ಅನುಸರಿಸುತ್ತಾರೆಂಬುದನ್ನು ನಾವು ಗಮನಿಸಬೇಕು. ನಮ್ಮ ಯಾವ ಹಿಂದಿನ ಆಚಾರ್ಯರಾಗಲೀ ಸಂತರಾಗಲೀ ಶಾಸ್ತ್ರಗ್ರಂಥಗಳ ಪ್ರತಿಯೊಂದು ವಾಕ್ಯವೂ ಸತ್ಯವೆಂದು ಹೇಳಿಲ್ಲ. ಹಿಂದೂ ಶಾಸ್ತ್ರಗಳನ್ನು ಅರ್ಥೈಸುವ ಅಧಿಕಾರವು ಆಧುನಿಕ ಕಾಲದಲ್ಲಿ ಗಾಂಧೀಜಿಯವರಿಗೆ ಇದ್ದಂತೆ ಬಹಳ ಜನರಿಗೆ ಇದ್ದಿರಲಾರದು. ಪ್ರಾಚೀನಕಾಲದ ಆಚಾರ್ಯರು ಶಾಸ್ತ್ರಗಳಿಗೆ ಭಾಷ್ಯ ಬರೆದಂತೆ ಗಾಂಧೀಜಿ ನಮ್ರತೆಯಿಂದ ತಮ್ಮ ದೃಷ್ಟಿಯಿಂದ ಅವುಗಳನ್ನು ವಿಶದೀಕರಿಸಿದ್ದಾರೆ. ಬೇರೆ ಪಾಂಡಿತ್ಯ ಪ್ರಚುರವಾದ ಭಾಷ್ಯೆಯನ್ನು ಬರೆಯದೆ ತಮ್ಮ ದೈನಂದಿನ ಆಚರಣೆಯ ಜೀವಂತ ಭಾಷ್ಯವನ್ನೇ ಲೋಕಕ್ಕೆ ಪ್ರತ್ಯಕ್ಷ ಮಾಡಿ ತೋರಿಸಿದರು. ಗಾಂಧೀಜಿ ತಾವೊಬ್ಬ ತೀರ ಸಾಮಾನ್ಯ ವ್ಯಕ್ತಿಯೆಂದು ನಿಜವಾಗಿ ತಿಳಿದುಕೊಳ್ಳುತ್ತಿದ್ದರೂ ಅವರೊಬ್ಬ ಮಹಾತ್ಮರು, ಋಷಿಸದೃಶರು ಎಂಬುದನ್ನು ನಾವು ಮರೆಯುವಂತಿಲ್ಲ. ಈ ಅರ್ಥದಲ್ಲಿ ಹಿಂದೂ ಧರ್ಮದ ಸರ್ವೋಲ್ಲೇಖವನ್ನು, ನವೀನ ವಿವರಣೆಯನ್ನು ಮಾಡುವ ಅಧಿಕಾರವು ಅವರಿಗೆ ಪೂರ್ತಿಯಾಗಿ ಇದ್ದಿತೆಂದು ನಿಃಸಂಶಯವಾಗಿ ಹೇಳಬಹುದು.

ಗಾಂಧೀಜಿ ಸನಾತನೀ ಹಿಂದೂ ಎಂದು ಹೇಳಿಕೊಳ್ಳುತ್ತಿದ್ದುದು ಯಾವ ಅರ್ಥದಲ್ಲಿ? ಈಗ ಸನಾತನೀ ಎಂದ ಕೂಡಲೆ ನಮ್ಮ ಮನಶ್ಚಕ್ಷುವಿನ ಎದುರಿಗೆ ಒಂದು ವಿಕಾರವಾದ ಸ್ವರೂಪವು ಕಾಣಿಸಿಕೊಳ್ಳುತ್ತದೆ. ಅಂಧಶ್ರದ್ಧೆ, ಸುಧಾರಣಾವಿರೋಧ, ಅಸ್ಪೃಶ್ಯತೆ, ಜಾತಿಪದ್ಧತಿಗಳ ಪುರಸ್ಕಾರ, ಮಾನವರಲ್ಲಿ ಜನ್ಮದಿಂದ ಮೇಲು ಕೀಳೆಂಬ ಭಾವ, ಮತಗಳ ಬಾಹ್ಯಾಚರಣೆಗಳಲ್ಲಿ ತೀವ್ರಾಸಕ್ತಿ, ಮಡಿಮೈಲಿಗೆಯ ಖಟಾಟೋಪ, ಸ್ತ್ರೀ ಶೂದ್ರರ ವಿಷಯದಲ್ಲಿ ತಿರಸ್ಕಾರ, ಪ್ರಾಚೀನ ಕಾಲದ್ದೆಲ್ಲವೂ ಶ್ರೇಷ್ಠವೆಂಬ ಅಸತ್ಕಲ್ಪನೆ, ಎಲ್ಲದರಲ್ಲಿಯೂ ಪ್ರತಿಗಾಮೀ ಧೋರಣೆ—ಇವೆಲ್ಲವೂ 'ಸನಾತನೀ' ಎಂಬ ಶಬ್ದಕ್ಕೆ ಅಂಟಿಕೊಂಡುಬಿಟ್ಟಿವೆ. ಉದಾತ್ತವಾದ ಅರ್ಥವನ್ನು ಕೊಡುವ ಒಂದು ಶಬ್ದವು ಹೇಗೆ ವಿಪರ್ಯಾಸ ಹೋಗುತ್ತದೆ ಎಂಬುದಕ್ಕೆ 'ಸನಾತನ' ಶಬ್ದವೊಂದು ಒಳ್ಳೆಯ ಉದಾಹರಣೆ. ಸನಾತನೀ ಎಂಬ ಶಬ್ದಕ್ಕೆ ಅಂಟಿಕೊಂಡಿರುವ ಮೇಲೆ ಉಲ್ಲೇಖಿಸಿದ ಎಲ್ಲಾ ವಿಚಾರಗಳನ್ನು ಗಾಂಧೀಜಿ ಪ್ರತಿಭಟಿಸಿದರು; ಅವುಗಳನ್ನು ಮೂಲೋತ್ಪಾಟನ ಮಾಡಲಿಕ್ಕೆ ಕೊನೆಯ ವರೆಗೂ ಹೋರಾಡಿದರು. ಬಹುಮಟ್ಟಿಗೆ ಅದರಲ್ಲಿ ಜಯಶಾಲಿಯೂ ಆದರು. ಅವರು ಈಗ ಪ್ರಚಲಿತವಿರುವ ಅರ್ಥದಲ್ಲಿ ಸನಾತನೀ ಅಲ್ಲ, ಅದರ ನಿಜವಾದ ಸಾರವತ್ತಾದ ಅರ್ಥದಲ್ಲಿ ಸನಾತನೀ. ತಾವು ಸನಾತನೀ ಹಿಂದುವೆಂಬುದಕ್ಕೆ ಹೀಗೆ ಸಮರ್ಥನೆ ಕೊಟ್ಟಿದ್ದಾರೆ:

"ಸನಾತನ ಎಂಬ ಪದವನ್ನು ಅದರ ಸಹಜವಾದ ಮೂಲಾರ್ಥದಲ್ಲಿ ನಾನು ಬಳಸುತ್ತೇನೆ.

ಕೆಳಗೆ ಕಾಣಿಸಿದ ಕಾರಣಗಳಿಗಾಗಿ ನಾನು ಸನಾತನೀ ಹಿಂದು ಎಂದು ನನ್ನನ್ನು ಕರೆದುಕೊಳ್ಳುತ್ತೇನೆ.

೧. ವೇದ, ಉಪನಿಷತ್ತು, ಪುರಾಣಗಳು ಇನ್ನುಳಿದ ಹಿಂದೂ ಶಾಸ್ತ್ರಗಳಲ್ಲಿ ನನಗೆ ನಂಬುಗೆ ಇದೆ. ಅದರಂತೆ ಪುನರ್ಜನ್ಮ ಹಾಗೂ ಅವತಾರಗಳನ್ನು ನಂಬುತ್ತೇನೆ.

೨. ಪ್ರಾಚೀನ ವೇದಕಾಲದ ಕಲ್ಪನೆಯ ವರ್ಣಾಶ್ರಮ ತತ್ತ್ವದಲ್ಲಿ ನನಗೆ ವಿಶ್ವಾಸವಿದೆ—ಆದರೆ ಈಗ ಪ್ರಚಲಿತವಿದ್ದ ಅಪಾರ್ಥದಲ್ಲಿ ಅಲ್ಲ.

೩. ಗೋರಕ್ಷಣೆಯಲ್ಲಿ ನನಗೆ ನಂಬುಗೆ ಇದೆ—ಆದರೆ ಹೆಚ್ಚು ವಿಶಾಲವಾದ ಅರ್ಥದಲ್ಲಿ.

೪. ಮೂರ್ತಿಪೂಜೆಯಲ್ಲಿ ನನಗೆ ನಂಬುಗೆ ಇಲ್ಲದಿಲ್ಲ.

ಹಿಂದೂಧರ್ಮ ಗ್ರಂಥಗಳಲ್ಲಿ ನನಗೆ ಭಗವದ್ಗೀತಾ ಮತ್ತು ತುಲಸೀರಾಮಾಯಣ ಇವೆರಡು ಮಾತ್ರ ಚೆನ್ನಾಗಿ ಅವಗತವಾಗಿವೆ. ಅವುಗಳ ದಿವ್ಯಸಂಗೀತವು ನನ್ನ ಹೃದಯವನ್ನು ಮಿಡಿಯುವಂತೆ ಇನ್ನಾವುದೂ ಹಿಡಿಯಲಾರವು. ನನ್ನ ಕೊನೆಯ ಗಳಿಗೆ ಸಮೀಪಿಸಿತೆಂದು ನನಗೆ ಅನಿಸಿದಾಗ ಭಗವದ್ಗೀತೆಯೇ ನನಗೆ ಸಮಾಧಾನವನ್ನು ಕೊಟ್ಟಿತು. ಪ್ರಸಿದ್ಧ ಹಿಂದೂ ದೇವಾಲಯಗಳಲ್ಲಿ ನಡೆಯುತ್ತಿರುವ ಅನಾಚಾರಗಳ ಅರಿವು ನನಗೆ ಪೂರ್ತಿಯಾಗಿದೆ; ಆದರೆ ಅನೇಕ ದೋಷಗಳಿದ್ದರೂ ಅವುಗಳಲ್ಲಿ ನನಗೆ ಭಕ್ತಿಯಿದೆ. ನಾನು ಸಂಪೂರ್ಣ ಸುಧಾರಣಾವಾದಿ. ಆದರೆ ಈ ನನ್ನ ಸುಧಾರಣೆಯ ಆಸಕ್ತಿ ಹಿಂದೂ ಧರ್ಮದ ಯಾವ ಒಂದು ಮೂಲಭೂತ ತತ್ತ್ವವನ್ನು ಅಲ್ಲಗಳೆಯುವಂತೆ ಮಾಡಲಾರದು.[೬]

---

೬. The word Sanātana I use in its natural sense. I call myself a Sanātan Hindu because :

(1) I believe in the Vedas, the Upanishads, the Puranas and all that goes by the name of Hindu scriptures and therefore in avataras and rebirth,

(2) I believe in the Varnashrama Dharma in a sense, in my opinion, strictly Vedic, but not in its present popular and crude sense,

(3) I believe in the protection of the cow in its much larger sense than the popular.

(4) I do not disbelieve in idol-worship.

Nothing dotes me as the music of the Gita or the Ramayana by Tulsidas, the only two books in Hinduism that I may be said to know. When I fancied that I was taking my last breath the Gita was my solace. I know the voice that is going on today in all the Hindu shrines but I love them inspite of their failings. I am a reformer through and through. But my zeal never takes me to the rejection of any of the essential things of Hinduism.

—*Young India, 6–10–'21*

ಶ್ರುತಿಸ್ಮೃತಿಪುರಾಣಗಳಲ್ಲಿ ಪ್ರಣೀತವಾದ ಮೂಲತತ್ತ್ವಗಳನ್ನು ಅಂಗೀಕರಿಸಿ ಅವುಗಳನ್ನು ತಮ್ಮ ಬುದ್ಧಿ ಅನುಭವಗಳ ಸಹಾಯದಿಂದ ಅಳವಡಿಸಿಕೊಂಡು ತಮ್ಮ ದೃಷ್ಟಿಯಿಂದ ಅವುಗಳನ್ನು ಅರ್ಥೈಸುವ ಸ್ವಾತಂತ್ರ್ಯವನ್ನು ಗಾಂಧೀಜಿ ಇಟ್ಟುಕೊಂಡಿದ್ದರು. ನಮ್ಮ ಪೂರ್ವದ ಸಂಪ್ರದಾಯವೇ ಇದೆಂಬುದನ್ನು ಗಮನಿಸಬೇಕು. ಇದೂ ಹಿಂದೂ ಪರಂಪರೆಯೇ; ಸನಾತನ ಸಂಪ್ರದಾಯ. ಗಾಂಧೀಜಿ ಜಾತಿಪದ್ಧತಿಯನ್ನು ಸಂಪೂರ್ಣವಾಗಿ ನಿರಾಕರಿಸಿ ವರ್ಣವ್ಯವಸ್ಥೆಯನ್ನು ಪುರಸ್ಕರಿಸುತ್ತಿದ್ದರು. ಇಂದು ಹಿಂದೂ ಸಮಾಜದಲ್ಲಿ ಕಾಣಬರುವ ಸಹಸ್ರಾರು ಜಾತಿಗಳೂ ಉಪಜಾತಿಗಳೂ ನಮ್ಮ ಶಾಸ್ತ್ರಗಳಲ್ಲಿ ಆಧಾರವನ್ನು ಪಡೆದಿಲ್ಲ. ಅಲ್ಲಿ ಹೇಳಿರುವದು ಗುಣಕರ್ಮಗಳ ಮೇಲೆ ನಿಂತಂಥ ವರ್ಣವ್ಯವಸ್ಥೆಯಲ್ಲದೆ ಜನ್ಮದ ಮೇಲೆ ನಿಂತಂಥ ಜಾತಿವ್ಯವಸ್ಥೆ ಇಲ್ಲವೆ ಅವ್ಯವಸ್ಥೆಯಲ್ಲ. ಭಗವದ್ಗೀತೆಯಲ್ಲಿ ಹೇಳಿದಂತೆ, 'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ'. ಚಾತುರ್ವರ್ಣ್ಯ ಮತ್ತು ಜಾತಿಪದ್ಧತಿಗಳ ವಿಷಯದಲ್ಲಿ ಗಾಂಧೀಜಿಯವರ ವಿಚಾರಗಳಲ್ಲಿ ಕ್ರಮೇಣವಾಗಿ ಸ್ವಲ್ಪ ಬದಲಾವಣೆಯಾದದ್ದನ್ನು ನಾವು ಕಾಣಬಹುದು. ಮೊದಲಿಗೆ ಜಾತಿಪದ್ಧತಿಯ ವಿಷಯದಲ್ಲಿ ಅವರಿಗೆ ತೀವ್ರವಾದ ವಿರೋಧವಿರಲಿಲ್ಲ. ವರ್ಣವ್ಯವಸ್ಥೆಯೂ ಒಂದು ಆದರ್ಶವೆಂದು ಅವರು ಪುರಸ್ಕರಿಸುತ್ತಿದ್ದರು. ಆದರೆ ಆಮೇಲೆ ಅವರು ಹಿಂದೂ ಸಮಾಜಕ್ಕೆ ಜಾತಿಗಳು ಕಂಟಕಪ್ರಾಯವೆಂದು ಬಗೆಯಹತ್ತಿದರು. ಆದರ್ಶದ ಚಾತುರ್ವರ್ಣ್ಯದ ಕನಸನ್ನು ಬಿಟ್ಟು ಹಿಂದುಗಳೆಲ್ಲರೂ ಒಂದೇ ವರ್ಣದವರೆಂದು ಹೇಳಹತ್ತಿದರು. ಈ ವಿಷಯದಲ್ಲಿ ಅವರ ಉಕ್ತಿಗಳನ್ನೇ ನೋಡೋಣ.

> "ಜಾತಿಗೂ ಧರ್ಮಕ್ಕೂ ಏನೂ ಸಂಬಂಧವಿಲ್ಲ. ಈ ಪದ್ಧತಿಯ ಮೂಲವೇನೋ ನನಗೆ ಗೊತ್ತಿಲ್ಲ. ಆದರೆ ಇಷ್ಟು ಮಾತ್ರ ನನಗೆ ನಿಶ್ಚಿತವಾಗಿ ಗೊತ್ತು. ಅದೇನೆಂದರೆ ಜಾತಿಗಳು ಆಧ್ಯಾತ್ಮಿಕ ಮತ್ತು ರಾಷ್ಟ್ರೀಯ ಪ್ರಗತಿಗೆ ಮಾರಕವಾಗಿವೆ."[೭]

ಚಾತುರ್ವರ್ಣ್ಯದ ಆದರ್ಶವನ್ನು ಅವರು ಒಪ್ಪುತ್ತಿದ್ದರೂ ಇಂದಿನ ಪರಿಸ್ಥಿತಿಯಲ್ಲಿ ಅದನ್ನು ಕಾರ್ಯರೂಪದಲ್ಲಿ ಸಾಧಿಸುವದು ಶಕ್ಯವಿಲ್ಲೆಂದು ಅವರು ಅಭಿಪ್ರಾಯಪಡುವಂತೆ ಕಾಣುತ್ತದೆ.

> "ನನಗೆ ಅಧಿಕಾರವಿದ್ದರೆ, ನಾವೆಲ್ಲರೂ ಹಿಂದುಗಳು, ಒಂದೇ ವರ್ಣದವರೆಂದು ಘೋಷಿಸುತ್ತಿದ್ದೆ. ನಿಜವಾದ ವರ್ಣಗಳು ಇಂದಿನ ಕಾಲದಲ್ಲಿ

---

೭. Caste has nothing to do with religion. It is a custom whose origin I do not know......But I do know that it is harmful to both spiritual and national progress.

—Harijan, 18-7-'36

ಇಲ್ಲವೆಂದು ನಾನು ಪದೇ ಪದೇ ಹೇಳುತ್ತಲಿದ್ದೇನೆ. ನಿಜವಾದ ವರ್ಣ-ಧರ್ಮವನ್ನು ಯಾವಾಗ ಪ್ರಸ್ಥಾಪಿಸಲಿಕ್ಕೆ ಸಾಧ್ಯವಾದೀತೆಂದು ನಾನು ಹೇಳಲಾರೆ."[೮]

ಹೀಗೆ ಗಾಂಧೀಜಿ ಹಿಂದೂ ಸಮಾಜವ್ಯವಸ್ಥೆಯ ವಿಷಯದಲ್ಲಿ ಪ್ರಗತಿ-ಪರ ಕ್ರಾಂತಿಕಾರಕವಾದ ನಿಲುಮೆಯನ್ನು ತಳೆದಿದ್ದರು. ಅವರು ಅಂತರ-ಜಾತೀಯ ಹಾಗೂ ಅಂತರಪ್ರಾಂತೀಯ ವಿವಾಹಗಳನ್ನು ಪುರಸ್ಕರಿಸುತ್ತಿದ್ದರು. ತಮ್ಮ ಆಶ್ರಯದಲ್ಲಿಯೇ ಕೆಲವು ಹರಿಜನ ಸವರ್ಣವಿವಾಹಗಳನ್ನು ಮಾಡಿದರು. ಇವು ಅವರ ಸನಾತನೀ ಹಿಂದುತ್ವಕ್ಕೆ ಚ್ಯುತಿಯನ್ನುಂಟುಮಾಡಲಿಲ್ಲ.

ಗೋರಕ್ಷಣೆ, ಗೋಪೂಜೆಯ ವಿಷಯದಲ್ಲಿ ಸಾಮಾನ್ಯವಾದ ಹಿಂದೂ ಭಾವನೆಗಳಿಗಿಂತ ಅವರ ವಿಚಾರಗಳು ವಿಶಾಲವಾಗಿದ್ದವು. ಅವರ ಅಭಿಪ್ರಾಯ-ದಲ್ಲಿ ಗೋರಕ್ಷಣೆಯೆಂದರೆ ಸಕಲ ತಿರ್ಯಗ್ಜಾತಿಯ ವಿಷಯದಲ್ಲಿ ದಯೆ, ಅವುಗಳ ರಕ್ಷಣೆ, ಸಕಲ ಜೀವಾವಳಿಯ ಏಕತ್ವವನ್ನು ಕಂಡುಹಿಡಿದು ಆ ತತ್ವವನ್ನು ಲೋಕಕ್ಕೆ ಸಾರಿದ ಹಿರಿಮೆ ಹಿಂದೂ ಧರ್ಮದ್ದೆಂದು ಅವರು ಬಗೆಯುತ್ತಿದ್ದರು. ಈ ತತ್ತ್ವವೇ ಅಹಿಂಸೆಯ ತಳಹದಿಯೆಂದು ಅವರು ಹೇಳುತ್ತಾರೆ.

'ಅಹಿಂಸೆಯ ವಿಚಾರವು ಎಲ್ಲಾ ಧರ್ಮಗಳಲ್ಲಿಯೂ ಇದೆ. ಆದರೆ ಅದರ ಪರಮೋತ್ಕೃಷ್ಟವಾದ ಸಾಧನೆಯೂ ಘೋಷಣೆಯೂ ಹಿಂದೂ ಧರ್ಮದಲ್ಲಿದೆ. ಹಿಂದೂ ಧರ್ಮವು ಮಾನವರು ಮಾತ್ರವಲ್ಲದೆ ಸಕಲ ಜೀವಾ-ವಳಿಗಳೂ ಒಂದೇ ಎಂದು ತಿಳಿಯುತ್ತದೆ. ಗೋಪೂಜೆ ನನ್ನ ಅಭಿಪ್ರಾಯ-ದಲ್ಲಿ ಜೀವದಯೆಯ ವಿಚಾರಕ್ಕೆ ಅದರ ವಿಶಿಷ್ಟ ಕೊಡುಗೆ. ಸಕಲ ಜೀವವೂ ಒಂದೇ. ಆದ್ದರಿಂದ ಎಲ್ಲ ಜೀವವೂ ಪವಿತ್ರ ಎಂಬ ತತ್ತ್ವದ ಪ್ರತ್ಯಕ್ಷ ಸಾಧನೆಯೇ ಇದು.'[೯]

ಸನಾತನಧರ್ಮವು ಎಲ್ಲಾ ಮತಗಳಿಗೂ ಮನ್ನಣೆ ಕೊಡುತ್ತದೆ. ಬೇರೆ ಬೇರೆ ಮತಗಳೊಂದಿಗೆ ಸಾಮರಸ್ಯದಿಂದ ಬಾಳುತ್ತದೆ. ಕಲಹಕ್ಕೆ ಕಾರಣವಿಲ್ಲ

---

೮. If I had the power I should declare that we are all Hindus, all of th same Varna. I have made it clear over and over again that there is n real Varna today... I do not know, however, when we shall be ab to revive true Varna Dharma.

—*Harijan*, 4-4-'3

೯. Non-violence is common to all religions but it has found the highe expression and application in Hinduism. Hinduism believes in the on ness not of merely all human life but in the oneness of all that lives. I worship of the cow is, in my opinion, its unique contribution to t evolution of humanitarianism. It is a practical application of the belief the oneness and therefore sacredness of life.

—***Young India*, 20-10-'**

ಜಗತ್ತಿನಲ್ಲಿ ಇಷ್ಟು ಸರ್ವಗ್ರಾಹಿಯಾದ ಸರ್ವಸಹಿಷ್ಣುತೆಯುಳ್ಳ ಧರ್ಮವು ಬೇರೊಂದಿಲ್ಲ.

> "ಹಿಂದೂ ಧರ್ಮದ ಮಹತಿ ಅದರ ಸರ್ವಗ್ರಾಹಕ ಶಕ್ತಿಯಲ್ಲಿದೆ. ಮಹಾಭಾರತಕರ್ತನಾದ ದೇವರ್ಷಿ ತನ್ನ ಮಹಾಕೃತಿಯ ವಿಷಯಕ್ಕೆ ಹೇಳಿದ ಮಾತು ಹಿಂದೂ ಧರ್ಮಕ್ಕೂ ಅನ್ವಯಿಸುತ್ತದೆ. ಬೇರೆ ಬೇರೆ ಮತಧರ್ಮಗಳಲ್ಲಿ ಸಾರವತ್ತಾದ ಅಂಶಗಳೆಲ್ಲವೂ ಹಿಂದೂ ಧರ್ಮದಲ್ಲಿವೆ. ಇಲ್ಲಿ ಇಲ್ಲದವು ಸಾರವತ್ತಾದ ಅಂಶಗಳೇ ಅಲ್ಲ"[೧೦]

ಎಂದು ಗಾಂಧೀಜಿ ಹೇಳುತ್ತಾರೆ.

ಆದರೆ ಈ ಉಕ್ತಿಯು ಸನಾತನಧರ್ಮದ ಉಕ್ತಿಯೇ ಆಗಿದೆ. ಸನಾತನ ಧರ್ಮದಲ್ಲಿ ಮೊದಲಿನಿಂದಲೂ ನಾನಾಬಗೆಯಾದ ಮತಗಳೂ ಸಾಧನಮಾರ್ಗಗಳೂ ಸ್ವಭಾವವೈಚಿತ್ರ್ಯ, ರುಚಿವೈಚಿತ್ರ್ಯಗಳಿಗನುಗುಣವಾಗಿ ಅವಶ್ಯವಾಗುತ್ತವೆಂಬುದನ್ನು ಗುರುತಿಸಲಾಗಿತ್ತು. ಇಂಥ ವಿಚಾರದ ಸಮರ್ಥನೆಗಾಗಿ ಅನೇಕಾನೇಕ ಆಧಾರಗಳನ್ನು ಕೊಡಬಹುದು.

ಇಲ್ಲಿಯವರೆಗೆ ಹಿಂದೂ ಧರ್ಮದ ಬಗ್ಗೆ ಗಾಂಧೀಜಿಯವರ ಕೆಲವು ವಿಚಾರಗಳನ್ನು ಉಲ್ಲೇಖಿಸಿ ವಿಶದೀಕರಿಸಿದ್ದಾಯಿತು. ಈ ವಿಚಾರಗಳಷ್ಟೇ ಅಲ್ಲದೆ ಹಿಂದೂ ಧರ್ಮ, ಹಿಂದೂ ಸಮಾಜ, ಹಿಂದೂ ಜನರ ರೀತಿನೀತಿಗಳು, ತೀರ ಕ್ಷುಲ್ಲಕವೆನಿಸಬಹುದಾದ ಹಿಂದೂ ಪದ್ಧತಿಗಳು—ಇವೆಲ್ಲವುಗಳ ವಿಷಯವಾಗಿ ಗಾಂಧೀಜಿ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಿದ್ದಾರೆ. ಅವುಗಳ ವಿವೇಚನೆ ಇಲ್ಲಿ ಅಶಕ್ಯ.

ಗಾಂಧೀಜಿ ಹಿಂದೂ ಧರ್ಮದ ಆಧುನಿಕ ಕಾಲದ ಅತ್ಯಂತ ಶ್ರೇಷ್ಠ ಪ್ರತಿನಿಧಿ ಎಂಬುದು ಒಪ್ಪಬೇಕಾದ ಮಾತು. ಅವರು ಸನಾತನ ಧರ್ಮದ ಮೂಲಭೂತವಾದ ತತ್ತ್ವಗಳನ್ನು ಪ್ರತ್ಯಕ್ಷವಾಗಿ ಆಚರಿಸಿ ತೋರಿಸಿದ ಮಹಾತ್ಮರು. ಕೆಲವು ಜನರು—ಹಿಂದೂಗಳೇ—ತಿಳಿಯುವಂತೆ ಹಿಂದೂಧರ್ಮದ ವೈರಿಯಲ್ಲ. ಅವರು ಹಿಂದೂ ಪರಂಪರೆಯನ್ನು ಪೂರ್ತಿಯಾಗಿ ಅರಗಿಸಿಕೊಂಡ ವ್ಯಕ್ತಿ. ಸನಾತನ ಧರ್ಮದ ಬಗೆಗೆ ಗಂಭೀರವಾದ ಭಕ್ತಿಯನ್ನೂ ಅಭಿಮಾನವನ್ನೂ ಕೊನೆಯವರೆಗೂ ಇಟ್ಟುಕೊಂಡಂಥವರು. ಪರದೇಶದವರು ಕೂಡ ಈ ಮಾತನ್ನು ಲಕ್ಷಿಸಿದರು.

---

೧೦. The beauty of Hinduism lies in its all embracing inclusiveness. What the divine author of the Mahabharata said of his great creation is equally true of Hinduism. What of substance is contained in any other religion is always to be found in Hinduism. And what is not contained in it is insubstantial or unnecessary. —*Young India, 17-9-'25*

‘ಭಾರತದೇಶ ಮತ್ತು ಹಿಂದೂ ಧರ್ಮ—ಇವಲ್ಲದೆ ಬೇರೆ ದೇಶವೂ ಬೇರೆ ಧರ್ಮವೂ ಗಾಂಧೀ ಅಂಥವರಿಗೆ ಜನ್ಮಕೊಡಲಿಕ್ಕೆ ಶಕ್ಯವಿಲ್ಲ’’೧೧

ಎಂದು ಲಂಡನ್ ಟಾಯಿಮ್ಸ್ ಪತ್ರಿಕೆ ಘೋಷಿಸಿತು. ಅವರು ಸಂಪೂರ್ಣ ಭಾರತೀಯರೂ ಸಂಪೂರ್ಣ ಹಿಂದುವೂ ಆಗಿದ್ದರು. ಶ್ರೀಮತಿ ಸರೋಜಿನಿ ನಾಯುಡು ಅವರು ಇದೇ ವಿಚಾರವನ್ನು ಹೀಗೆ ಹೃದಯಸ್ಪರ್ಶಿಯಾಗಿ ನಿವೇದಿಸಿದ್ದಾರೆ:

“ಅಯ್ಯೋ, ಹಿಂದೂ ಸಮಾಜದ ದುರ್ದೈವವೇ! ಹಿಂದೂ ತತ್ತ್ವಗಳು, ಆದರ್ಶಗಳು, ವೇದಾಂತ—ಇವೆಲ್ಲವುಗಳನ್ನು ಅತ್ಯಂತ ನಿಷ್ಠೆಯಿಂದ ಆಚರಿಸುವ ಎಲ್ಲಾ ಕಾಲದಲ್ಲಿ ಜನಿಸಿದ ಹಿಂದುಗಳಲ್ಲಿ ಪರಮೋನ್ನತ ವ್ಯಕ್ತಿತ್ವವುಳ್ಳ ಹಿಂದುವನ್ನು ಒಬ್ಬ ಹಿಂದುವೇ ಕೊಂದನೆಂದರೆ—’’೧೨

ನಮ್ಮ ಶ್ರುತಿಸ್ಮೃತಿಪುರಾಣಗಳಲ್ಲಿಯೂ ಜೈನ ಬೌದ್ಧ ಧರ್ಮಗ್ರಂಥಗಳಲ್ಲಿಯೂ ಒಟ್ಟಿನಲ್ಲಿ, ಭಾರತೀಯ ಮತಧರ್ಮಗಳಲ್ಲಿ ಪ್ರಾಮುಖ್ಯವನ್ನು ಪಡೆದ ಮೂಲ ವಿಚಾರಗಳನ್ನು ಗಾಂಧೀಜಿ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲಿಕ್ಕೆ ಸತತವಾಗಿ ಸಾಧನೆಯನ್ನು ನಡೆಸಿದ್ದರು. ಅವುಗಳಲ್ಲಿ ಅವರಷ್ಟು ಸಿದ್ಧಿಯನ್ನು ಪಡೆದುಕೊಂಡ ಮಹಾಮಹಿಮರು ವಿರಳರೆಂದೇ ಹೇಳಬೇಕು. ಸತ್ಯ, ಅಹಿಂಸೆ, ತಪಸ್ಸು, ವೈರಾಗ್ಯ, ಅನಾಸಕ್ತಿ, ಚಿತ್ತವೃತ್ತಿನಿರೋಧ, ಬ್ರಹ್ಮಚರ್ಯ, ಆತ್ಮಸಂಯಮ, ಅಪರಿಗ್ರಹ, ಸರ್ವಸಮತಾಭಾವ, ಪರಧರ್ಮಸಹಿಷ್ಣುತೆ, ಭೂತದಯೆ, ಅಭಯ—ಇವೇ ಮೊದಲಾದವುಗಳನ್ನು ಅನುಷ್ಠಿಸಿ ಮಹಾತ್ಮರಾದರು.

ಇವೆಲ್ಲವೂ ಭಾರತೀಯ ಧರ್ಮಗಳಲ್ಲಿ ಇಲ್ಲವೆ ಸನಾತನ ಹಿಂದೂ ಧರ್ಮದಲ್ಲಿ ಉಕ್ತವಾದ ಮೂಲಭೂತ ವಿಚಾರಗಳು. ಇವುಗಳಲ್ಲಿ ಒಂದೊಂದನ್ನು ಗಾಂಧೀಜಿ ಹೇಗೆ ಸಾಧನೆ ಮಾಡಿದರು, ಆ ಮಾರ್ಗದಲ್ಲಿ ಯಾವ ಯಾವ ವಿಘ್ನಗಳನ್ನು ಎದುರಿಸಬೇಕಾಯಿತು, ಅವನ್ನು ಹೇಗೆ ಪರಿಹರಿಸಿ ಸಿದ್ಧರಾದರು ಎಂಬುದು ಒಂದೊಂದು ಪುಣ್ಯಕರವಾದ ಕಥೆಯೇ ಆಗುತ್ತದೆ.

ಗಾಂಧೀಜಿ ಸನಾತನಧರ್ಮಕ್ಕೆ ಒಂದು ಜೀವಂತ ಭಾಷ್ಯವನ್ನು ಆಚರಿಸಿ ಪ್ರದರ್ಶಿಸಿ ಆಧುನಿಕ ಋಷಿಯಾದರು. ಅವರು ಬರೆದ ಅಸಂಖ್ಯ ಲೇಖನಗಳು

೧೧ No country but India and no religion but Hinduism could hav[e] given birth to a Gandhi.

—London Time[s]

Editorial, 31-1-'4[8]

೧೨. "Alas, for the Hindu Community, that the greatest Hindu ever born, [the] only Hindu who was absolutely true to the doctrines, ideals and philo[-] sophy of Hinduism, should have been slain by the hand of a Hindu..."

—Sarojini Naidu

in a Broadcast Speech after Gandhi's assassination

ಅವರ ಆತ್ಮಚರಿತ್ರೆಯೂ ಇಂದಿನ ಕಾಲದ ಸ್ಮೃತಿಸದೃಶವಾಗಿವೆ. ಅವುಗಳ ಅಭ್ಯಾಸವು ನಿಜವಾದ ಹಿಂದೂಧರ್ಮದ ತಿರುಳನ್ನು ತಿಳಿದುಕೊಳ್ಳಲೂ, ಸನಾತನ ಧರ್ಮಕ್ಕೆ ಹೊಸ ಕಾಲಕ್ಕೆ ತಕ್ಕಂತೆ ಹೊಸ ಸ್ವರೂಪವನ್ನು ಕೊಡಲಿಕ್ಕೂ ಸಹಾಯಕಾರಿಯಾಗಿವೆ. ಸನಾತನಧರ್ಮವು ಚಿರಂತನವಾದುದು ; ನಿತ್ಯನೂತನವಾದುದು ; 'ಪುರಾಣೇ ನವಯುವತಿ' ಎಂಬಂತೆ. ಜಗದ್ವಂದ್ಯ ವಿಭೂತಿಯಾದ ಮಹಾತ್ಮರು ಸನಾತನೀ ಹಿಂದು—ತಮ್ಮದೇ ಆದ ನವೀನಾರ್ಥದಲ್ಲಿ, ನಿಜವಾದ ಅರ್ಥದಲ್ಲಿ.

ಕೂಡಲೂರು ಬಸವಲಿಂಗಶರಣರು

ಶಾಂತರಸ ರಾಯಚೂರು

೧

ಪೀಠಿಕೆ

ಹಾಡುಗಬ್ಬದ ಮೂಲಿಗರು :

ಹಾಡುಗಬ್ಬ ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ; ತತ್ತ್ವ ಅಧ್ಯಾತ್ಮ, ಅನುಭವ, ಅನುಭಾವ, ಆತ್ಮಿಕ ಸೌಂದರ್ಯಗಳಿಂದ ಕೂಡಿದ ಇದು ಕನ್ನಡನುಡಿಯ ಅಂತಸ್ಸತ್ವವನ್ನೂ ಚೆಲುವನ್ನೂ ಕಾಂತಿಯನ್ನೂ ಸಾರುತ್ತದೆ ಜನತೆಯ ನಿತ್ಯಬಳಕೆಯ ನುಡಿಯೇ ಹಾಡುಗಬ್ಬದ ನಾಲಗೆ; ಗೇಯತೆ ಇದು ಜೀವ; 'ದೇಸಿ' ಇದರ ಆತ್ಮ. 'ಜನ ಬದುಕಿ, ಇಲ್ಲಿ ಸಲ್ಲಿ ಅಲ್ಲಿ ಸಲ್ಲಲಿ' ಎಂಬುದೆ ಇದರ ಗುರಿ. ಈ ನೆಲದ ಗುಣ, ಈ ವಾತಾವರಣದ ವೈಶಿಷ್ಟ್ಯ, ಈ ಜನ ಸಂಸ್ಕೃತಿಯ ಸುಂದರ ಪ್ರತೀಕ ಹಾಡುಗಬ್ಬ.

ಹಾಡುಗಬ್ಬದ ಪ್ರಾಚೀನತೆ ಹಲವು ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ. ಉಪಲಬ್ಧ ಸಾಹಿತ್ಯವನ್ನವಲಂಬಿಸಿ ಹೇಳುವುದಾದರೆ ವಿಶ್ವಸಾಹಿತ್ಯಕ್ಕೆ ಮಹತ್ತರ ಕೊಡುಗೆಯಾದ ವಚನಸಾಹಿತ್ಯಕ್ಕೆ 'ಮೂಲಿಗರಾದ ಶಿವಶರಣರ ಹಾಡುಗಬ್ಬಕ್ಕೆ ಮೂಲಿಗರು'.

ಶಿವಶರಣರು ವಚನಗಳ ಜೊತೆಗೆ ಹಾಡುಗಳನ್ನೂ ರಚಿಸಿದರು. ಈ ಹಾಡುಗಳಿಗೆ ಸ್ವರವಚನ, ಸ್ವರಪದ ಎಂದು ಕರೆಯಲಾಗಿದೆ. '...ವಚನವೆಂದ ಈಗ ನಮಗೆ ಆಗುವಂತೆ ಚಿರಪರಿಚಿತವಿರುವ ಶರಣರ ವಚನಸಾಹಿತ್ಯಪ್ರಕಾ ಮಾತ್ರ, ಗದ್ಯವಾಗುವ ಸಂದರ್ಭಗಳು ಆಗಲೂ ಇದ್ದುದರಿಂದ ಶರಣರ ಹಾಡುಗಳನ್ನು ಖಚಿತವಾಗಿ ನಿರ್ದೇಶಿಸಲು ವಚನ ಎಂಬ ಸಾಮಾ ವಾಚಕವನ್ನು 'ಸ್ವರ' ಎಂಬುದರಿಂದ ವಿಶೇಷಿಸಿ ಸ್ವರವಚನ ಎಂದೂ ಕರೆಯುತ್ತಿದ್ದರು. ಆಮೇಲೆ ಸಂಶಯದ ಅವಲೇಶವಾದರೂ ಬಾರದಿರಲೆಂದು ಹಾಡುಗಳನ್ನು (ವಚನವೆನ್ನದೆ) ಸ್ವರಪದ (ಸ್ವರಸಹಿತವಾದ ಪದ್ಯಗಳು) ಎಂ ಕರೆದರು.[1]

ಮುಂದೆ ಬಂದವರು ಶರಣರ ವಚನಗಳನ್ನು ಸಂಕಲಿಸಿದಂತೆ ಶರ ಹಾಡುಗಳನ್ನೂ ಸಂಕಲಿಸಿದರು. ಜಕ್ಕಣ್ಣನ ಏಕೋತ್ತರಶತಸ್ಥಲ ಮ

---

೧. ಶಿವದಾಸ ಗೀತಾಂಜಲಿ: ಪೀಠಿಕೆ, ಪುಟ-೮೦.

ಶಿವಲಿಂಗದೇವರ ಶಿವಯೋಗಪ್ರದೀಪಿಕೆ—ಈ ಎರಡು ಗ್ರಂಥಗಳಲ್ಲಿ ಶರಣರ ಹಾಡುಗಳು ಸಂಕಲಿತವಾಗಿವೆ. ಶೂನ್ಯಸಂಪಾದನೆಯಲ್ಲಿ ಶರಣರ ಹಾಡುಗಳಿವೆ. ಇತ್ತೀಚೆಗೆ ಶ್ರೀ ಎಸ್. ಬಸವರಾಜು ಅವರು [1]ಶಿವದಾಸ ಗೀತಾಂಜಲಿ ಎಂಬ ಗ್ರಂಥದಲ್ಲಿ ಶಿವಶರಣರ ೧೫೯ ಹಾಡುಗಳನ್ನು ಸಂಕಲಿಸಿದ್ದಾರೆ. ಇದರಲ್ಲಿ ಸತ್ಯಯುತವಾದ, ವಿಚಾರವಿಮರ್ಶೆಗಳಿಂದ ಕೂಡಿದ ಪೀಠಿಕೆ ಇದೆ.

ಸಂಪ್ರದಾಯ ಬೆಳೆಸಿದವರು :

ಬಸವಾದಿ ಶಿವಶರಣರ ಈ ಹಾಡುಗಬ್ಬ ಸಂಪ್ರದಾಯವನ್ನು ಮುಂದೆ ಬಂದವರು ಉಳಿಸಿದರು, ಬೆಳೆಸಿದರು. ಕನ್ನಡಸಾಹಿತ್ಯಲೋಕವನ್ನು ಸಮೃದ್ಧಗೊಳಿಸಿದರು. [2]ಹರಿಹರ, ರಾಘವಾಂಕ[3], [3]ನೂರೊಂದು ವಿರಕ್ತರು, ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಸರ್ಪಭೂಷಣ ಶಿವಯೋಗಿ (ಸಪ್ಪಣ್ಣ), ಬಾಲಲೀಲಾ ಮಹಾಂತಶಿವಯೋಗಿ, ಮೈಲಾರ ಬಸವಲಿಂಗಶರಣ, ಘನಮಠ ದಾರ್ಯ—ಹೀಗೆ ಒಬ್ಬರೇ ಇಬ್ಬರೇ ಅನೇಕ ಜನ ವಾಗ್ಗೇಯಕಾರರು ಜನರ ಹೃದಯಗಳಲ್ಲಿ ಶಿವತತ್ತ್ವವನ್ನು, ಶಿವತೇಜವನ್ನು ಬಿತ್ತಿ ಬೆಳೆದರು. ಅವರು 'ದಾರಿ ತಪ್ಪಿದ ಮಂಕಾತಿ'ಯನ್ನು ತೋರಿಸಿಕೊಟ್ಟರು; ಪರಬೊಮ್ಮದ ನಿಲವನ್ನು ತಿಳಿದು ಕಾಣಿಸಿಕೊಟ್ಟರು; ಬದುಕನ್ನು ಹಸನುಗೈದು ಪರತತ್ತ್ವದ ಬೆಳೆಯನ್ನು ಬೆಳೆದರು; ಅನುಭಾವದ ಅಡುಗೆಯನ್ನು ಮಾಡಿ ಉಣಬಡಿಸಿದರು.

> "ಏಳಯ್ಯ ನಿಮ್ಮ ತಾಯಿತಂದೆಗಳು ಬಂದಿಹರು
> ಭಾಳಾಕ್ಷ ಶಿವ ಮಹಾಂತಲಿಂಗ ದೊರೆಯು"

ಎಂದು ಹಾಡಿ ಜನಕೋಟಿಯ ಆತ್ಮಲಿಂಗಗಳನ್ನು ಎಚ್ಚರಿಸಿದರು. 'ಆರು ನಾನೆಂದು ವಿಚಾರಿಸು' ಎಂದು ವಿಚಾರದ ಕಿಡಿಯನ್ನು ಕೆದರಿ,

> "ಜ್ಯೋತಿ ಬೆಳಗುತಿದೆ. . . . . .ಮಾತುಮನಂಗಳಿಂದತ್ತತ್ತ ಮೀರಿದ
> ಸಾತಿಶಯದ ನಿರುಪಾಧಿಕ ನಿರ್ಮಲಜ್ಯೋತಿ ಬೆಳಗುತಿದೆ"

ಎಂದು ಆ ಜ್ಯೋತಿಯ ದರ್ಶನಮಾಡಿಸಿದರು :

---

1. ಶಿವದಾಸ ಗೀತಾಂಜಲಿ, ಪ್ರಕಾಶಕರು : ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲಾ, ಮೈಸೂರು.

2-3 ಇವರು ಹಾಡುಗಳನ್ನು ಬರೆದಿದ್ದರೆಂಬುದಕ್ಕೆ ಆಧಾರಗಳಿವೆ : ಶಿವದಾಸ ಗೀತಾಂಜಲಿ : ಪೀಠಿಕೆ, ಪುಟ—೧೧೦—೧೧೨.

ಇವರಲ್ಲಿ ಸಪ್ತಕಾವ್ಯದ ಗುರುಬಸವ, ಕರಸ್ಥಲದ ನಾಗಿದೇವ, ನಿರಾಣಿ ಬೊಂತೇದೇವ ಇವರು ಹಾಡುಗಬ್ಬ ರಚಿಸಿದವರಲ್ಲಿ ಅಗ್ರಗಣ್ಯರು.

ಅವರವರ ದರುಶನಕೆ
ಅವರವರ ವೇಷಕ್ಕೆ
ಅವರವರಿಗೆಲ್ಲ ಗುರುವು ನೀನೊಬ್ಬನೇ"

ಎಂದು ಏಕೇಶ್ವರನ ಕೂನ ಗುರ್ತುಗಳನ್ನು ತೋರಿಸಿದರು.

ಬಾಲಲೀಲಾ ಮಹಾಂತ ಶಿವಯೋಗಿಗಳು, ಘನಮಠದಾರ್ಯರು — ಇವರೇ ವೀರಶೈವ ವಾಗ್ಗೇಯಕಾರರಲ್ಲಿ ಕೊನೆಯವರೆಂಬ ತಿಳಿವಳಿಕೆ ಬಹುಜನರಿಗಾದಂತಿದೆ. ಆದರೆ ಇದು ಸತ್ಯಕ್ಕೆ ದೂರವಾದ ತಿಳಿವಳಿಕೆ. ಇನ್ನೂ ಅನಂತ ಜನ ಸಂತರು, ಶರಣರು ಹಾಡುಗಳನ್ನು ರಚಿಸಿದ್ದಾರೆ ; ಅವರ ಹೆಸರು ಬಯಲಿಗೆ ಬಂದಿಲ್ಲ. ಅವರ ಕೃತಿಗಳು ಉಪಲಬ್ಧವಾಗಿಲ್ಲ. ಈ ನಿಟ್ಟಿನಲ್ಲಿ ಸಂಶೋಧನೆ ನಡೆಯಬೇಕಾಗಿದೆ.

ಹೈದರಾಬಾದ ಕರ್ನಾಟಕದಲ್ಲಿ ಅನೇಕ ಜನ ವಾಗ್ಗೇಯಕಾರರಾಗಿಹೋಗಿದ್ದಾರೆ. ಕೃಷ್ಣಾ–ತುಂಗಭದ್ರೆಯರ ತೋಳತೊಟ್ಟಿಲದಲ್ಲಿ ಮಲಗಿರುವ ದೋ–ಆಬ (ರಾಯಚೂರು ಜಿಲ್ಲೆ) ನಾಡಿನಲ್ಲಿ ಹುಟ್ಟಿ ಬೆಳೆದು ಬಾಳಿದ ವಾಗ್ಗೇಯಕಾರರ ಬಗ್ಗೆ ಸಂಶೋಧನೆಯಾಗಬೇಕಾಗಿದೆ. [೬]ದೇವದುರ್ಗದ ಚೆನ್ನಮಲ್ಲಕವಿ, [೭]ಬಳಗಾನೂರು ಮರಿಸ್ವಾಮಿ, ನೀರಲಕೆರೆ ಬಸವಲಿಂಗ ಶಿವಯೋಗಿ, [೮]ಗೂಗಲ್ಲಿನ ಪರಪ್ಪ, [೯]ಗಬ್ಬೂರಿನ ಮುದುಕಪ್ಪ, ಕೂಡಲೂರು ಬಸವಲಿಂಗಶರಣ, ನಾಗಭೂಷಣ ಘನಮಠದಾರ್ಯ, [೧೦]ಹೊಸಪೇಟೆ ಅಯ್ಯಪ್ಪ, [೧೧]ಕಲ್ಲೂರು ಅಡಿವೆಪ್ಪ ತಾತ—ಇವರು ದೋ–ಆಬ ನಾಡಿನವರು. ಇವರಲ್ಲಿ ಕೂಡಲೂರು ಬಸವಲಿಂಗಶರಣರು ಮತ್ತು ಘನಮಠದಾರ್ಯರು ಬೇರೆಡೆಗೆ ಜನ್ಮತಳೆದವರು. ಆದರೆ ಅವರ ಕಾರ್ಯಕ್ಷೇತ್ರ ರಾಯಚೂರು ಜಿಲ್ಲೆಯೇ ಆಗಿತ್ತು. ಈ ವಾಗ್ಗೇಯಕಾರರಲ್ಲಿ ಕೂಡಲೂರು ಬಸವಲಿಂಗಶರಣರು ತಮ್ಮದೇ ಆದ ಸ್ಥಾನಗಳಿಸಿದ್ದಾರೆ.

೨

ಬಸವಲಿಂಗಶರಣರ ಚರಿತ್ರೆ

ಹುಟ್ಟು :

ಕಲ್ಬುರ್ಗಿ ಜಿಲ್ಲೆಗೆ ಸೇರಿದ ಯಾದಗಿರಿ ತಾಲೂಕಿನಲ್ಲಿ 'ಬಳಿಚಕ್ರ' ಎಂಬ ಗ್ರಾಮವಿದೆ. ಬಸವಲಿಂಗಶರಣರು ಈ ಗ್ರಾಮದಲ್ಲಿ ಹುಟ್ಟಿದರು. ಮಹಾ-

೬, ೭, ೮, ೯, ೧೦, ೧೧—ಇವರ ಹಾಡುಗಬ್ಬಗಳು ಪ್ರಕಟವಾಗಿಲ್ಲ. ಇವರೆಲ್ಲರ ಹಾಡುಗಳು ಜನರ ನಾಲಗೆಯ ಮೇಲಿವೆ. ಚೆನ್ನಮಲ್ಲಕವಿಯ ಕರುಣೇಶ್ವರ ಪುರಾಣ ಪ್ರಕಟವಾಗಿದೆ.

ದೇವಪ್ಪ–ಗಂಗಾಂಬೆಯರು ಇವರ ತಂದೆ–ತಾಯಿಗಳು. ಈ ದಂಪತಿಗಳು ಸಾತ್ವಿಕರೂ ದೈವಭಕ್ತಿಯುಳ್ಳವರೂ ಆಗಿದ್ದು ಕಾಯಿಪಲ್ಲೆ ಮಾರುವ ಕಾಯಕ ಕೈಕೊಂಡಿದ್ದರು.

ಬಾಲ್ಯ, ಓದು :

ತಮ್ಮ ಮಗ ವಿದ್ಯಾವಂತನಾಗಬೇಕೆಂದು ಮಹಾದೇವಪ್ಪ-ಗಂಗಾಂಬೆಯರ ಹಿರಿಯಾಸೆಯಾಗಿತ್ತು. ಐದು ವರ್ಷ ತುಂಬಿದಾಗ ಮಗುವನ್ನು ಅಯ್ಯನವರ ಮಠಕ್ಕೆ ಕಳಿಸಿದರು. ಮಗು ಬಸವಲಿಂಗಪ್ಪ ಎಲ್ಲರಂತಿರಲಿಲ್ಲ. ಮಗ್ಗಿಗಳನ್ನು ಗಟ್ಟಿಮಾಡುತ್ತಿರಲಿಲ್ಲ. ಲೆಕ್ಕವೆಂದರೆ ಆತನಿಗೆ ತಲೆಬೇಸರ. ಗುರುಗಳಿಗೆ ಆತ ಆಗಾಗ ಆಧ್ಯಾತ್ಮದ ಪ್ರಶ್ನೆಗಳನ್ನು ಕೇಳುತ್ತಿದ್ದ. ಅವುಗಳ ಉತ್ತರವರಿಯದ ಗುರುಗಳು ಆತನನ್ನು ಗದರಿಸಿ ಸುಮ್ಮನಿರಿಸುತ್ತಿದ್ದರು. ಆಗ ಬಸವಲಿಂಗಪ್ಪ ಶಿವಶರಣರ ವಚನಗಳನ್ನು ಓದುತ್ತ ಕುಳಿತುಬಿಡುತ್ತಿದ್ದ. ಐದು ವರ್ಷಗಳುರುಳಿದುವು. ಮಗು ಬಸವಲಿಂಗಪ್ಪ ಧನಂಜಯು ಕಲಿಯಲಿಲ್ಲ, ಅಮರಕೋಶ ಬಾಯಿಪಾಠ ಮಾಡಲಿಲ್ಲ. ಶಬರಶಂಕರವಿಳಾಸ, ಚೆನ್ನಬಸವಪುರಾಣಗಳನ್ನು ಓದಲಿಲ್ಲ, ಲೆಕ್ಕವಂತೂ ಶೂನ್ಯ. ತಂದೆತಾಯಿಗಳು ಶಾಲೆ ಬಿಡಿಸಿ ಆತನನ್ನು ದನಕಾಯಲು ಕಳಿಸಿದರು.

ಕೀಡಿ–ತುಂಬಿ :

ಬಸವಲಿಂಗಪ್ಪನವರು ದನಕಾಯಲು ಮೊದಲುಮಾಡಿದರು ಅವರ ಅಂತರಂಗದಲ್ಲಿ ಯಾವುದೋ ಅವರಿಗರಿಯದಂತೆ ಒಂದು ಭಾವ ಮೈಮುರಿಯುತ್ತಿತ್ತು. ಮನಸ್ಸಿಗೆ ಏನೋ ತವಕ ; ಹೃದಯಕ್ಕೆ ಎಂತಹದೋ ಹಸಿವು ; ಯಾವಾಗಲೂ ಕಂಗಳು ಏನನ್ನೋ ಅರಸುತ್ತಿದ್ದುವು. ದಿನಗಳೆದಂತೆ ಆತ ಹೆಚ್ಚು ಹೆಚ್ಚು ಮೌನಿಯಾದ—ತಾನಾಯಿತು ತನ್ನ ಕಾಯಕವಾಯಿತು ; ಯಾರೊಡನೆಯೂ ಹೆಚ್ಚಿಗೆ ಮಾತಿಲ್ಲ

ಬಳೆಚಕ್ರದ ಹತ್ತಿರ 'ಸಿದ್ಧೇಶ್ವರ' ಎಂಬ ಒಂದು ಬೆಟ್ಟವಿದೆ. ನಿತ್ಯ ಬಸವ-ಲಿಂಗಪ್ಪನವರು ಆ ಬೆಟ್ಟದ ಒತ್ತಿಗೆ ದನಗಳನ್ನು ಮೇಯಲು ಬಿಟ್ಟು ತಾವು ಕಲ್ಲು ಬಂಡೆಯೊಂದರ ಮೇಲೆ ಕುಳಿತು ಅಂತರಂಗದಲ್ಲಿ ಕುದಿಯುತ್ತಿದ್ದ ನೂರಾರು ಪ್ರಶ್ನೆಗಳಿಗೆ ಉತ್ತರ ಹುಡುಕಲು ಪ್ರಯತ್ನಿಸುತ್ತಿದ್ದರು.

ಪ್ರತಿನಿತ್ಯ ಒಂದು ಹಸು ಎಲ್ಲಿಂದಲೋ ಬಂದು ಇವರ ದನಗಳಲ್ಲಿ ಕೂಡಿಕೊಳ್ಳುತ್ತಿತ್ತು. ಸಂಜೆಯಾಗುತ್ತಲೇ ಬೇರೆ ದಾರಿ ಹಿಡಿದು ಹೋಗಿ ಮಾಯವಾಗುತ್ತಿತ್ತು. ಬಸವಲಿಂಗ ಶರಣರಿಗೆ ಆ ಹಸುವಿನ ಬಗ್ಗೆ ಶೋಧಮಾಡುವ ಮನಸ್ಸಾಯಿತು. ಒಂದು ದಿನ ಸಾಯಂಕಾಲ ಅವರು ಆ ಆಕಳ ಹಿಂದೆ ಹಿಂದೆ ಹೋದರು. ಅದು ಒಂದು ಗುಹೆಯನ್ನು ಹೊಕ್ಕಿತು. ಬಸವಲಿಂಗಪ್ಪ-

ನವರೂ ಆ ಗುಹೆಯನ್ನು ಹೊಕ್ಕರು. ಅಲ್ಲಿ ಕೆಲವು ಜನ ಸಾಧುಗಳಿದ್ದರು. "ನಾನು ನಿಮ್ಮ ಆಕಳು ಕಾದಿದ್ದೇನೆ; ಅದರ ಕೂಲಿ ಕೊಡಿರಿ" ಎಂದು ಬಸವಲಿಂಗಪ್ಪನವರು ಅವರನ್ನು ಕೇಳಿದರು. ಸಾಧುಗಳು ಇವರನ್ನು ನೋಡಿದರು—ತುಂಬುದೃಷ್ಟಿಯಿಂದ. ಅವರಲ್ಲೊಬ್ಬರು ಮುಂದೆ ಬಂದು, "ಕೂಲಿ ಬೇಕೇ ನಿನಗೆ?" ಎಂದು ಬಸವಲಿಂಗಪ್ಪನವರ ಮಸ್ತಕದ ಮೇಲೆ ತಮ್ಮ ಹಸ್ತವನ್ನಿಟ್ಟರು. ಅವರು ಗುಹೆಯಿಂದ ಹೊರಬಂದರು. 'ಕೀಡಿ ಹೋಗಿ ತುಂಬಿಯಾಗಿತ್ತು.' ತುಂಬಿಯ ಝೇಂಕಾರ ಅಂದಿನಿಂದ ಮೊಳಗತೊಡಗಿತು.

ಮದುವೆ

ಬಸವಲಿಂಗಪ್ಪನವರ ಮೊಗ ಆಧ್ಯಾತ್ಮ ತೇಜಸ್ಸಿನಿಂದ ತುಂಬಿತ್ತು. ಕುಳಿತರೆ ನಿಂತರೆ ತತ್ತ್ವಚಿಂತನೆ. ಆಡಿದ ಮಾತು ಕಬ್ಬವಾಗತೊಡಗಿತು. ಅವರ ಮಾತು, ಹಾಡು ಜನರ ಅಂತರಂಗವನ್ನು ಬೆಳಗತೊಡಗಿದುವು. ಭಕ್ತಿ, ವೈರಾಗ್ಯ, ಯೋಗ ಇವುಗಳನ್ನು ಕುರಿತೇ ಅವರ ಚಿಂತನೆ, ಮಾತುಕತೆ. ತಂದೆತಾಯಿಗಳಿಗೆ ದಿಗಿಲಾಯಿತು. ಇದ್ದೊಬ್ಬ ಮಗ ಸನ್ಯಾಸಿಯಾದರೆ ಗತಿ ಏನು ? ಎಂದವರು ಚಿಂತಿಸಿದರು ಮಗನ ಮದುವೆಗೆ ಏರ್ಪಾಡು ಮಾಡತೊಡಗಿದರು. ಆಗ ಬಸವಲಿಂಗಪ್ಪನವರು :

> "ಇನ್ಯಾಕ ನನ ಮದಿವಿ ಚಿಂತೆ ನಿಮಗೆ
> ಎನ್ನಂಗಕೆ ಗುರು ಲಿಂಗ ಕಟ್ಟಿದ ಬಳಿಕ"

ಎಂದು ತಮ್ಮ ಮದುವೆಯ ಚಿಂತೆ ಬೇಡವೆಂದರು. ಮುಂದುವರಿದು :

> "ಅನ್ಯಳಿವಳೆಂದೆನ್ನದೆ ಸನ್ನೆಮಾಡಿ ಕರೆದೊಯ್ದು
> ತನ್ನ ಮನೆಗೆನ್ನನು ಯಜಮಾನಳನ್ನಾಗಿ ಮಾಡಿ
> ಕಣ್ಣುಮೂಗಿನಿಂದ ಚೆಲುವ ಕಾಮರಹಿತನವನು
> ಉನ್ನತಪುರುಷನೆನಗೆ ತಾಳಿ ಕಟ್ಟಿದ ಬಳಿಕ
> ಇನ್ಯಾಕೆ ನನ ಮದಿವಿ ಚಿಂತೆ ನಿಮಗೆ"—

ಎಂದು ತಾವು ಹೆಣ್ಣಾಗಿ ತಾಳಿ ಕಟ್ಟಿಕೊಂಡುದನ್ನು ಉಸುರಿದರು.

ಮಗನ ವರ್ತನೆ ತಂದೆತಾಯಿಗಳಿಗೆ ಸರಿಬರದಿದ್ದರೂ ಅವರು ಸುಮ್ಮನೆ ಇರಬೇಕಾಯಿತು. ವೇದಾಂತ ಎಷ್ಟು ದಿನದ್ದು. ಮುಂದೆ ಎಂದಾದರೂ ಆತ ದಾರಿಗೆ ಬಂದೇ ತೀರುವನೆಂದು ಅವರು ಭಾವಿಸಿದರು. ಹದಿನೈದು–ಹದಿನಾರರ ಹರೆಯದ ಮಗನಿಗೆ ಕಾಯಿಪಲ್ಲೆ ಮಾರುವ ಮನೆಯ ಕಾಯಕಕ್ಕೆ ಹಚ್ಚಿದರು.

ಕಾಯಕ :

ಬಸವಲಿಂಗ ಶರಣರು ಕಾಯಿಪಲ್ಲೆ ಹೊತ್ತುಕೊಂಡು ಬೆಳಗಾಗುವುದರೊಳಗಾಗಿ ಬಳಿಚಕ್ರದ ಹತ್ತಿರವಿರುವ ಕೂಡಲೂರಿಗೆ ಬರುತ್ತಿದ್ದರು.

ಕೂಡಲೂರಿನಲ್ಲಿ ಅಕ್ಕಸಾಲಿಗರ ಈಶ್ವರಪ್ಪನೆಂಬ ಶರಣನಿದ್ದನು. ಆತನ ಅಂಗಳದಲ್ಲಿ ಕಾಯಿಪಲ್ಲೆ ಬುಟ್ಟಿಯನ್ನಿಟ್ಟು, ಪಕ್ಕದಲ್ಲಿ ಚೀಲ ಹಾಸಿ, "ಪಾವು ಸೇರು ಜೋಳ ಹಾಕಿ, ನಿಮಗೆ ಬೇಕಾದ ಒಂದು ಸೇರು ಕಾಯಿಪಲ್ಲೆ ತೂಗಿ ಕೊಂಡು ಹೋಗಿರಿ" ಎಂದು ಜನರಿಗೆ ಹೇಳಿ, ಈಶ್ವರಪ್ಪನವರ ಮನೆಯಲ್ಲಿ ಅವರೊಡನೆ ಆಧ್ಯಾತ್ಮದ ಚರ್ಚೆಯಲ್ಲಿ ತೊಡಗುತ್ತಿದ್ದರು. ಹೊತ್ತು ನೆತ್ತಿಯ ಮೇಲೆ ಬರುವವರೆಗೆ ಚರ್ಚೆ ನಡೆಸಿ ಆ ಬಳಿಕ ಅಂಗಳದಲ್ಲಿದ್ದ ಜೋಳವನ್ನು ಬುಟ್ಟಿಯಲ್ಲಿ ಸುರುವಿ, ಹೊತ್ತುಕೊಂಡು ಬಳೆಚಕ್ರಕ್ಕೆ ಹೋಗುತ್ತಿದ್ದರು. ಬಸವಲಿಂಗಪ್ಪನವರು ತಾವು ಮಾಡಿದ ವ್ಯಾಪಾರವೆಂತಹದೆಂಬುದನ್ನು ಹೀಗೆ ಹೇಳಿದ್ದಾರೆ :

"ವ್ಯಾಪಾರ ಎನಗಾಯ್ತು । ಕೂಡ್ಲೂರು ಸಂತಿಲಿ
ವ್ಯಾಪಾರವೆನಗಾಯ್ತು ।
ವ್ಯಾಪಾರವೆನಗಾಯ್ತು ಕಾಪಾಲಿ ದಯದಿಂದ
ಆ ಪರಬ್ರಹ್ಮತ್ವವನು ಗಳಿಸಿಕೊಂಡಂಥ"

"ಐದು ಪದರಿನ ಚೀಲದಿ। ಬಗೆ ಬಗೆ ಸಾಮಾನು
ಅದರೊಳು ಹಾಕಿದ್ದೆನೋ ।
ಐದೈದು ಇಪ್ಪತ್ತೈದು ಸಾಲೋಳಿಡಲು
ಆದರದಿ ಕೊಂಡರು ಸರಿಕಂಡ ಬೆಲೆಯಿತ್ತು"

ಲೌಕಿಕ ಪಾರಮಾರ್ಥ ಈ ಎರಡರ ವ್ಯಾಪಾರಗಳನ್ನು ಏಕಕಾಲಕ್ಕೆ ನಡೆಸಿದ ಜಾಣರು ಬಸವಲಿಂಗಶರಣರು.

ಪರುಷಬಟ್ಟಲು :

ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿ ಶರಣರು ಊರು ಬಿಟ್ಟರು. ಅಲ್ಲಿ ಇಲ್ಲಿ ಸಂಚರಿಸಿ ಹಂಪೆಗೆ ಬಂದು ಗವಿಯೊಂದರಲ್ಲಿ ಯೋಗಾಭ್ಯಾಸ ನಡೆಸಿದರು. ಒಂದು ವರ್ಷ ಗತಿಸಿತು. ಅವರ ಅಂತರಂಗ ಪೂರ್ಣ ತೃಪ್ತಿಪಡೆಯಿತು; ಲೋಕದ ದ್ವಂದ್ವಗಳು ಅವರಿಂದ ದೂರ ಸರಿದುವು. ತಪಸ್ಸಿನ ಫಲವಾಗಿ ಅವರಿಗೆ 'ಪರುಷ ಬಟ್ಟಲು' ದೊರಕಿತು.

ಮತ್ತೆ ಊರಿಗೆ ಮರಳಿದರು; ತಮ್ಮ ಹಾಡುಗಬ್ಬಗಳಿಂದ ಜನಮನದ ಕತ್ತಲೆಯನ್ನು ಕಳೆಯತೊಡಗಿದರು. ನಿತ್ಯ ಅನೇಕ ಜಿಜ್ಞಾಸುಗಳು ಅವರೊಡನೆ ಚರ್ಚಿಸಲು ಬಳೆಚಕ್ರಕ್ಕೆ ಬರುತ್ತಿದ್ದರು. ಶರಣರೂ ಸುತ್ತುಮುತ್ತಿನ ಹಳ್ಳಿಗಳಿಗೆ ಹೋಗಿಬರುತ್ತಿದ್ದರು.

ಒಮ್ಮೆ ಕೂಡಲೂರಿಗೆ ಹೋಗಿದ್ದರು. ಅಲ್ಲಿಯ ಅಕ್ಕಸಾಲಿಗರ ಹೆಣ್ಣುಮಗಳು ಅವರ ಪರುಷಬಟ್ಟಲವನ್ನು ಕದ್ದಳು. ಶರಣರಿಗೆ ಅದು ಗೊತ್ತಾಯಿತು. ಕೇಳಿದರೆ ಆಕೆ ಕೊಡಲಿಲ್ಲ; ಕದ್ದಿಲ್ಲವೆಂದು ಬಸವಣ್ಣನ ಆಣೆಯಿಟ್ಟುಕೊಂಡಳು.

ಶರಣರು ನೊಂದುಕೊಳ್ಳಲಿಲ್ಲ. ನೋವು-ಶರಣತ್ವ ಪೂರ್ವ-ಪಶ್ಚಿಮವಲ್ಲವೇ ? ಅವರು ಹಾಡಿದರು :

"ಬಟ್ಟಲೋಯ್ತಿನ್ನೆಂಗ ಮಾಡಲಿ। ಏ ಬಣ್ಣಗಾರತಿ
ಬಟ್ಟಲೋಯ್ತಿನ್ನೆಂಗ ಮಾಡಲಿ ?
ಬಟ್ಟಲೋಯ್ತೆಂದು ಕೇಳಲು ।
ದಿಟ್ಟಿಯದನು ಬಚ್ಚಿಟ್ಟು
ಇಟ್ಟುಕೊಂಡಳು ಮತ್ತೆ ತಾನು ಬಸವಣ್ಣನಾಣೆಯು" ॥ ೧ ॥

"ಸಣ್ಣ ಹುಡುಗರು ಆಡೋ ಬಟ್ಟಲು। ಬಸವಣ್ಣನಿಗೆ
ಎಣ್ಣೆ ಬತ್ತಿ ಹಚ್ಚೊ ಬಟ್ಟಲು ।
ಕನ್ನೆಯೊಬ್ಬಳು ಕದ್ದುಕೊಂಡು
ತನ್ನ ಶಿಶುವಿನಾಣೆಗೈದಳು
ಚೆನ್ನ ಶ್ರೀ ಗುರು ಕೂಡಲೂರೇಶಂಗೆ ಬಟ್ಟಲು ಮುಟ್ಟಿತೋ ॥ ೨ ॥

ಈ ಹಾಡನ್ನು ಹಾಡುತ್ತ ಅವರು ಹುಟ್ಟಿದ ಬಳಿಚಕ್ರವನ್ನೂ ಆಧ್ಯಾತ್ಮದ ಅರಿವನ್ನು ಕೊಟ್ಟ ಕೂಡಲೂರನ್ನೂ ತೊರೆದು ನಡೆದರು. ಯಾದಗಿರಿ, ರಾಯಚೂರು, ನೀರಮಾನ್ವಿ, ಮಾನ್ವಿ, ದೇವದುರ್ಗ, ಗೊಬ್ಬೂರು, ಗೂಗಲ್ಲು— ಹೀಗೆ ಅನೇಕ ಊರುಗಳನ್ನು ಸುತ್ತಿ ರಾಯಚೂರು ಜಿಲ್ಲೆಗೆ ಸೇರಿದ ದೇವದುರ್ಗ ತಾಲೂಕಿನ ಗೊಬ್ಬೂರ ಹತ್ತಿರವಿರುವ ಖಾನಾಪುರಕ್ಕೆ ಬಂದರು. ಕೊನೆಯವರೆಗೆ ಅಲ್ಲಿಯೇ ಉಳಿದರು.

ಬಸವಲಿಂಗ ಶರಣರ ಗದ್ದುಗೆ ಕೂಡಲೂರು ಮತ್ತು ಖಾನಾಪುರ ಎರಡು ಊರುಗಳಲ್ಲಿಯೂ ಇದೆ. ಆದರೆ ಅವರು ಲಿಂಗೈಕ್ಯರಾದುದು ಖಾನಾಪುರ-ದಲ್ಲಿಯೇ. ಶಿವರಾತ್ರಿಗೆ ಎರಡು ಊರುಗಳಲ್ಲಿಯೂ ಜಾತ್ರೆ ನಡೆಯುತ್ತದೆ. ಇವರ ಶಿಷ್ಯತ್ವ ವಹಿಸಿದ ಮನೆತನಗಳು ಕಲ್ಬುರ್ಗಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಇಂದಿಗೂ ಇವೆ.

ಕಾಲ :

ಬಸವಲಿಂಗ ಶರಣರ ಕಾಲದ ವಿಷಯಕ್ಕೆ ನಮಗೆ ಏನೂ ತಿಳಿದು-ಬರುವುದಿಲ್ಲ. ಅವರ ಹಾಡುಗಳಲ್ಲಿ ಅವರ ಹುಟ್ಟು, ಮನೆತನ, ತಂದೆ-ತಾಯಿ ಇವುಗಳ ವಿಷಯಕ್ಕೆ ಏನೂ ತಿಳಿದುಬರುವುದಿಲ್ಲ. "ಕೂಡಲೂರು" ಎಂಬ ಹೆಸರು ಮಾತ್ರ ಬರುತ್ತದೆ.

ಜನಜನಿತವಾದ ಒಂದು ಘಟನೆ ಅವರ ಕಾಲದ ವಿಷಯಕ್ಕೆ ಸ್ವಲ್ಪಮಟ್ಟಿಗೆ ಬೆಳಕನ್ನು ಚೆಲ್ಲುತ್ತದೆ. ಇದನ್ನು ಎಷ್ಟರಮಟ್ಟಿಗೆ ನಂಬಬೇಕೋ ತಿಳಿಯದು.

ಒಮ್ಮೆ ನಾಗಭೂಷಣ ಘನಮಂಠದಾರ್ಯರೂ ಬಸವಲಿಂಗಶರಣರೂ ಗೂಗಲ್ಲಿನಲ್ಲಿ ಕೂಡಿದರಂತೆ. ಅನೇಕ ಭಕ್ತರು ಈ ಇಬ್ಬರು ಮಹಾತ್ಮರ

ದರ್ಶನಕ್ಕೆ ನೆರೆದರು. ಆಗಿನ ಕಾಲದ ಪದ್ಧತಿಯಂತೆ ಭಕ್ತರು ಅವರಿಗೆ ಪದಗಳನ್ನು ಮಾಡಲು ಹೇಳಿದರು. ಇದ್ದ ಸ್ಥಿತಿಯಲ್ಲಿಯೇ ಆಶುಕವಿತೆ ರಚಿಸಿ ಹಾಡುವುದು ಆಗಿನ ಸಂಪ್ರದಾಯವಾಗಿತ್ತು. ನೀವು ಮೊದಲು, ನೀವು ಮೊದಲು ಎಂದು ನಡೆದು ಕೊನೆಗೆ ಘನಮಠದಾರ್ಯರೇ ಮೊದಲು ಹಾಡಬೇಕೆಂದು ನಿರ್ಣಯವಾಯಿತು. ಆಗ ಅವರು ಈ ಹಾಡನ್ನು ಹಾಡಿದರು:

"ಕಾಯೋ ಬಸವಕುಮಾರ ಭೋ । ಮಾಯಸಂಹಾರ ॥ ಪ ॥

ಪರಮಪಾವನ ಭಕ್ತಲೋಲ ಶ್ರೀಗುರುವೆ ದಯಾಲ
ವರದಾ ತ್ರೈಜಗದಧೀಶ್ವರ ಹತಕಾಲ
ಸುಶೀಲ ಭಾಸುರ ಮುಕ್ತಿಮೂಲ

... ...

ಘನಮಠವಾಸ ಮಹೇಶ ದೌರ್ಗುಣಗಣನಾಶ
ಅನಘ ಸರ್ವಜ್ಞ ಭಂಜಿತಮೋಹಪಾಶ ಗಣೇಶ ಪಾವನಮುಕ್ತಿಕೋಶ"

ಈಗ ಬಸವಲಿಂಗಶರಣರ ಸರದಿ ಬಂದಿತು. ಅವರು, "ಅಯ್ಯೋ, ಇನ್ನೂ ಈ ಜಂಗಮ ಬೇಡುವುದರಲ್ಲಿಯೇ ಇದ್ದಾನಲ್ಲಾ" ಎಂದು ಈ ಪದವನ್ನು ಹಾಡಿದರಂತೆ :

" ಕಲ್ಲಪೂಜೆಯ ಮಾಡಿ ಕಲ್ಲಿನಂತಾಗುವರೆ ಕೇಳ ಕಲ್ಲೆ
ಕಲ್ಲು ಅಲ್ಲ ನೀನು ಅಲ್ಲಮಪ್ರಭು ಇದ್ದಿ ಕೇಳ ಕಲ್ಲೆ
ಎತ್ತೆತ್ತ ನೋಡಲು ಚಿತ್ಕಳೆ ನಿನ್ನದು ಕೇಳ ಕಲ್ಲೆ
ನಿತ್ಯನಾತ್ಮಕ ನೀನು ಮರತಿ ಯಾತಕ್ಕ ಕೇಳ ಕಲ್ಲೆ

... ...

ನಾದಬಿಂದು ಕಳೆ ಮೂರಕ್ಕತೀತನು ಕೇಳ ಕಲ್ಲೆ
ಮಾದೇವನೊಬ್ಬನೆ ಕೂಡಲೂರೇಶನು ಕೇಳ ಕಲ್ಲೆ "

ಮೂವತ್ತು ವರ್ಷಗಳ ಹಿಂದೆ ನಮ್ಮ ತಂದೆಯವರು ಗೂಗಲ್ಲಿನಲ್ಲಿ ನಡೆದ ಈ ಘಟನೆಯನ್ನು ವರ್ಣಿಸಿ ಹೇಳುತ್ತಿದ್ದುದನ್ನು ನಾನು ಕೇಳಿದ್ದೇನೆ ನಮ್ಮ ತಂದೆಯವರು ತೀರ ಚಿಕ್ಕವರಿರುವಾಗ ಬಸವಲಿಂಗ ಶರಣರನ್ನು ನೋಡಿದ ಹಿರಿಯರು ಇದ್ದರಂತೆ. ಅವರ ಬಾಯಿಂದ ಕೇಳಿದ್ದ ಸಂಗತಿಯಿದೆಂದು ನಮ್ಮ ತಂದೆ ಹೇಳುತ್ತಿದ್ದರು.

ಘನಮಠದಾರ್ಯರು ಲಿಂಗೈಕ್ಯರಾದುದು ಕ್ರಿ.ಶ. ೧೮೮೦ರಲ್ಲಿ. ಇದಕ್ಕೆ ಕೆಲವರ್ಷಗಳ ಹಿಂದೆ ಬಸವಲಿಂಗಪ್ಪನವರು ಘನಮಠದಾರ್ಯರು ಗೂಗಲ್ಲಿನಲ್ಲಿ ಕೂಡಿದ್ದರೆಂದು ಭಾವಿಸಿದರೆ ಬಸವಲಿಂಗ ಶರಣರು ಸುಮಾರು ೮೦ ವರ್ಷಗಳ ಹಿಂದೆ ಜೀವಿಸಿದ್ದರೆಂದು ಸದ್ಯಕ್ಕೆ ಇಟ್ಟುಕೊಳ್ಳಬಹುದು.

೩

(ಭಾವಗೀತೆ) ಹಾಡುಗಳನ್ನು ಕುರಿತು

ದಾರ್ಶನಿಕತೆ :

ಕೂಡಲೂರು ಬಸವಲಿಂಗ ಶರಣರ ಹಾಡುಗಳು ಅನುಭಾವ, ಸತ್ವ, ಸೌಂದರ್ಯ, ಅರ್ಥಗಳ ದೃಷ್ಟಿಯಿಂದ ಬಹಳ ಮೇಲ್ಮಟ್ಟದವುಗಳಾಗಿವೆ. ಜನರ ಆಡುನುಡಿಯಲ್ಲಿ ಪರತತ್ವದ, ಅಧ್ಯಾತ್ಮದ, ಆತ್ಮಾನುಭೂತಿಯ ವಿವರಣೆ ಸಹಜ ಸುಂದರವಾಗಿದೆ; ಜನಜೀವನದಿಂದ ಅತಿಸಾಮಾನ್ಯ ವಿಷಯ, ಘಟನೆಗಳನ್ನು ಎತ್ತಿಕೊಂಡು ಅನುಭಾವವನ್ನು ಅಭಿವ್ಯಕ್ತಗೊಳಿಸುವಲ್ಲಿ ಅವರ ಕಾವ್ಯದ ಸತ್ವಸೌಂದರ್ಯಗಳ ದರ್ಶನವಾಗುತ್ತದೆ. ಕಾವ್ಯಶ್ರೀಯನ್ನೂ ಆತ್ಮಶ್ರೀಯನ್ನೂ ಏಕಕಾಲಕ್ಕೆ ನಮ್ಮ ಕಣ್ಮುಂದೆ ನಿಲ್ಲಿಸುವ ಬಸವಲಿಂಗ ಶರಣರ ಪ್ರತಿಭೆಗೆ ನಾವು ಬೆರಗಾಗುತ್ತೇವೆ. ಸಾಮಾನ್ಯ ಜನರ ನಿತ್ಯಬಳಕೆಯ ವಿಷಯಗಳು, ವಸ್ತುಗಳು ಅವರ ಅಂತರಂಗದಲ್ಲಿ ಮಿಂದು ಕಾವ್ಯವಸನವನ್ನುಟ್ಟು ಅನುಭಾವದ ನಾಲಗೆ ಪಡೆಯುತ್ತವೆ.

ಕೂಡಲೂರು ಬಸವಲಿಂಗಶರಣರ ಆರು ಹಾಡುಗಳನ್ನು ದಿ. ರಾನಡೆಯವರು ತಮ್ಮ "ಕನ್ನಡ ಸಾಹಿತ್ಯದಲ್ಲಿ ಪರಮಾರ್ಥ ಪಥ" ಎಂಬ ಗ್ರಂಥದಲ್ಲಿ ಉದಾಹರಿಸಿ ಅವುಗಳ ಅರ್ಥವನ್ನು ಮನೋಹರವಾಗಿ ಬಿಡಿಸಿದ್ದಾರೆ:

"ಅಳುತಿದ್ಯಾ ಕಂದಾ ಅಳುತಿದ್ಯಾ
ತಿಳಿಯದೆ ಮರ್ತ್ಯಕೆ ಮರಳಿ ಬಂದೆನೆಂದು"

ಈ ಪದ್ಯದ ಅರ್ಥವನ್ನು ರಾನಡೆಯವರು ಹೀಗೆ ವಿವರಿಸಿದ್ದಾರೆ :

"ಕೂಡಲೂರೇಶರ ಈ ಪದವು ಪರಮಾತ್ಮನನ್ನು ನೆನೆಯುತ್ತಿರುವ ಮಗುವನ್ನು ಕುರಿತು ಕವಿಕಲ್ಪನೆಗಳಿಂದಲೂ ದಾರ್ಶನಿಕ ಆಲೋಚನೆಗಳಿಂದಲೂ ತುಂಬಿರುವುದು. ಈ ಅಂದವಾದ ಪದವು ಸಂಗೀತಜ್ಞರಾದ ಸಾಧಕರಿಗೆ ಒಂದು ಅತ್ಯುತ್ತಮ ವಿಷಯವನ್ನು ಸಲ್ಲಿಸಿರುವುದು."

"ಏನು ಹೇಳಲಿ ಎನ್ನ ಅಜ್ಞಾನವಶದಿಂದ
ನಾನು ನನ್ನನೆ ಮರೆತೆನಲ್ಲಾ"

ದಿ. ರಾನಡೆಯವರು ಈ ಹಾಡನ್ನು ಕುರಿತು ಹೀಗೆ ನುಡಿದಿರುವರು :

"ಕೂಡಲೂರೇಶ್ವರರ ಈ ಪದವು ಮಾನವನ ಅಜ್ಞಾನಸ್ವರೂಪವನ್ನು ಅರುಹುವ ಒಂದು ದಾರ್ಶನಿಕ ಪದವು, ಇದು ತನ್ನದೇ ಆದ ಒಂದು ಗುಂಪಿಗೆ ಸೇರಿಹುದು. ಕನ್ನಡ ಅನುಭಾವ ಸಾಹಿತ್ಯದಲ್ಲಿ ಈ ಬಗೆಯ ದಾರ್ಶನಿಕ ಕವನಗಳು ತೀರ ವಿರಲ. ಬಹುತರವಾಗಿ ಎಲ್ಲ ಪದಗಳು ನೀತಿವಿಷಯಕ,

ಸಾಧನವಿಷಯಕ, ರೂಪಾತ್ಮಕ ಇತ್ಯಾದಿ ಬಗೆಯವು ಇರುವವು. ಆದರೆ ಈ ಪದದಲ್ಲಿ ಕೂಡಲೂರೇಶರು ಮಾನವಪ್ರಾಣಿ ಮೇಲಿನ ಅಜ್ಞಾನಪ್ರಭಾವವನ್ನು ಬಣ್ಣಿಸಿರುವರು."

ಈ ಬದುಕು ದೊಡ್ಡದು :

ಬಸವಲಿಂಗಶರಣರ ಹಾಡುಗಳು ಸಾಮಾನ್ಯವಾಗಿ ಜನಪದ ಹಾಡುಗಳಂತೆ ವೇದಾಂತದಿಂದ ತುಂಬಿರುವಂತೆ ಮೇಲುನೋಟಕ್ಕೆ ಕಾಣುತ್ತವೆ. ಆದರೆ ಅವರ ವೇದಾಂತ 'ಮರುಳ' ವೇದಾಂತವಲ್ಲ; ಜೀವನದಿಂದ ಹಿಮ್ಮುಖವಾದ ವೇದಾಂತ-ವಲ್ಲ; ನಿಷ್ಕ್ರಿಯ ವೇದಾಂತವಲ್ಲ. ಇಲ್ಲಿರುವುದು ನಿಜವಾದ ವೇದಾಂತ. ಜನ-ಜೀವನಕ್ಕೆ ಸುಲಭವಾಗಿ ಇಳಿದುಬರುವ. ಸರ್ವರೂ ಆಚರಿಸಲು ಬರುವ ತಿಳಿವು ಇಲ್ಲಿದೆ. ಬಸವಲಿಂಗಶರಣರ ಮೇಲೆ ವಚನಕಾರರ ಪ್ರಭಾವ ಬಹಳವಾಗಿದೆ. ಅಂತೇನೇ ಅವರು ತಮ್ಮ ಅನುಭಾವವನ್ನು ಸರ್ವರಿಗೂ ಹಂಚಿದರು; ಈ ಬದುಕನ್ನು ಪ್ರೀತಿಸಿದರು; ಇಹವನ್ನು ಮಹವನ್ನಾಗಿ ಮಾಡಲು ಹೆಣಗಿದರು.

ಈ ಬದುಕು ಪವಿತ್ರವಾದುದು; ಈ ನೆಲ ಪಾವನವಾದುದು. ನರನು ಹರನಾಗಲು ಸಾಧನರಂಗ ಈ ಭೂಮಿಯೇ ಎಂಬುದನ್ನು ಅವರು ಅರಿತು ನಂಬಿದ್ದರು.

ನರಜನ್ಮವನ್ನು ಯಾರೋ ಹೀಯಾಳಿಸಿದ್ದನ್ನು ಶರಣರು ಕೇಳಿರಬೇಕು. ಆಗ ಅವರ ಅಂತರಂಗದಿಂದ ಹೊಮ್ಮಿದ ನುಡಿಯಿದು :

"ಬರಬಾರದಾಗಿತ್ತೆ ನಾನು । ನರಜನ್ಮದೊಳು
ಬರಬಾರದಾಗಿತ್ತೆ ನಾನು ? ।
ಬರಬಾರದೇಕೀ ನರಜನ್ಮ ದೊಡ್ಡದು ।
ಗುರುಪಾದ ದೊರಕಿತು ಪರಬ್ರಹ್ಮನಾದೆನು ।"

ಪರಬ್ರಹ್ಮನಾಗಲು ಈ ಜನ್ಮ ಬಿಟ್ಟು ಬೇರಾವ ಲೋಕದ ಜನ್ಮದಲ್ಲಿಯೂ ಸಾಧ್ಯವಿಲ್ಲ. ಭೋಗಭೂಮಿಯ ಭೋಗತನುವಿನಲ್ಲಿ ಆಗದ ಸಿದ್ಧಿಯನ್ನು ಕರ್ಮ ಭೂಮಿಯ ಕರ್ಮತನುವಿನಲ್ಲಿ ಸಾಧಿಸಬೇಕೆಂಬ ಚಾಮರಸನ ಮಾತನ್ನು ಇಲ್ಲಿ ನೆನೆಯಬಹುದು.

ಎಲ್ಲವೂ ನಶ್ವರ, ಯಾವುದರಿಂದಲೂ ಸುಖವಿಲ್ಲ. ಈ ಭವವು ಕೆಟ್ಟುದು; ಈ ಭೂಮಿ ಒಳ್ಳೆಯದಲ್ಲ ಎಂಬ ವಿಚಾರಗಳಿಂದ ಜನಜೀವನ ನಿಸ್ಸತ್ವವಾಗಿದ್ದ ಕಾಲದಲ್ಲಿ ಬಸವಲಿಂಗ ಶರಣರು 'ನರಜನ್ಮ ದೊಡ್ಡದು' ಎಂದು ಸಾರಿ ಈ ಜನ್ಮವನ್ನು ಹೇಗೆ ಸಾರ್ಥಕ ಮಾಡಿಕೊಳ್ಳಬೇಕೆಂಬುದನ್ನು ನಡೆದುತೋರಿಸಿದರು.

ಇನ್ನೊಂದೆಡೆ ಇದೇ ಭಾವವನ್ನು ಕುರಿತು ಹೀಗೆ ಹಾಡಿದ್ದಾರೆ :

"ಬಂದದ್ದು ಪಾಡಾಯಿತು ಭವಕ
ಹೊಂದಿದೆ ನಾನು ಗುರುಪಾದಕ
ಇಂದಿಂಗಾಯಿತು ಜನ್ಮವು ಸಾರ್ಥಕ
ಚೆಂದುಳ್ಳ ಮುಕ್ತಿಯ ಪಡೆವುದಕ"

ಗುರು :

ಗುರು ಹರನಿಗಿಂತ ದೊಡ್ಡವ. ಅನುಭಾವ, ಆತ್ಮದರಿವು ಅವನಿಲ್ಲದೆ ಸಾಧ್ಯವಾಗದು. ಅನುಭಾವವು,

"ಓದಿ ತಿಳಿಯುವ ಮರ್ಮವಿದು ಅಲ್ಲ। ಮತ್ತೆ
ಗಾದೆಯೊಳಾಡುವ ಮಾತಲ್ಲ
ವೇದ ನಾಲ್ಕಕ್ಕೆ ಇದು ನಿಲುಕೋದು ಅಲ್ಲ"

ಆದರೆ ಇದು ಶ್ರೀಗುರುವಿನಿಂದ ಸಾಧ್ಯವಾಗುವುದು. ಆ ಗುರುವು ಹೇಗಿರಬೇಕು ? ಎಂಥವನಿರಬೇಕು ?

"ಗುರುವು ತಾನಾದರೆ ನರಭಾವಗಳ ಕಳೆದು
ಹರನ ತೋರಿಸುವಾತ ನಿಜಗುರುವು"

ಆ ಗುರುವು ತನ್ನನ್ನು ಬೇಕೆಂದೇ ಲೋಕಕ್ಕೆ ಕರೆತಂದನಂತೆ :

"ನೀ ಕೊಟ್ಟ ವಾಕ್ಯವ ಎಂದಿಗೆ ಮರೆಯೆ
ಬೇಕೆಂದು ಲೋಕಕ್ಕೆ ಕರೆತಂದೆ ದೊರೆಯೆ"

ಮತ್ತೇನು ಮಾಡಿದ ಆ ಗುರು ?

"ಮುತ್ತಿನ ಮೂಗುತಿಯನೊಂದು
ತಂದು ಮೂಗಿನೊಳಿಟ್ಟ
ನೆತ್ತಿಮೇಲೆ ತನ್ನ ಹಸ್ತವನಿಟ್ಟು
ಸತ್ತು ಹುಟ್ಟದ ಹಾಂಗ ಮಾಡಿದ"

ಸತಿ-ಪತಿಭಾವ :

ಶರಣಸ್ಥಲದಲ್ಲಿ ಸತಿಪತಿಭಾವ ತನ್ನಷ್ಟಕ್ಕೆ ತಾನೇ ಮೈದೋರಿಬರುತ್ತದೆ. ಭಕ್ತ ತಾನು ಸತಿಯೆಂದು, ದೇವನು ಪತಿಯೆಂದು ಭಾವಿಸಿ ನುಡಿವ ನುಡಿ, ನಡೆವ ನಡೆ ವಿಶಿಷ್ಟವಾಗಿರುತ್ತದೆ. ಈ ಮಧುರಾಭಕ್ತಿಯಿಂದ ತುಂಬಿದ ಶರಣರ ಹಾಡುಗಳು ಬಹು ಸೊಗಸಾಗಿವೆ. ಲೌಕಿಕ ಮೋಹದ ಉದಾಹರಣೆಗಳನ್ನು ಬಳಸಿ, ಅಲೌಕಿಕ ಸೌಂದರ್ಯವನ್ನು, ಆತ್ಮಿಕ ಚೆಲುವನ್ನು, ಅಂಗ-ಲಿಂಗದ ಸಾಮರಸ್ಯವನ್ನು ವರ್ಣಿಸುವ ಶಕ್ತಿ, ಜಾಣ್ಮೆ ಬಸವಲಿಂಗಶರಣರಂಥವರಿಗೆ ಮಾತ್ರ ಇರುತ್ತದೆ.

ಲೌಕಿಕ ಮದುವೆಯನ್ನು ಬೇಡವೆಂದು, ಶರಣರು ತಾವೇ ಲಿಂಗಯ್ಯಗೆ ವಧುವಾದರು. ಶರಣಸತಿ ಲಿಂಗಪತಿಯು ಮದುವೆಯಾಯಿತು : ಆ ಮದುವೆಗೆ ಯಾರೂ ಬರಲಿಲ್ಲವಂತೆ :

"ನಾವು ನಾವೇ ನೀರು ಮಿಂದು
ಭಾವಕಂಕಣ ಕಟ್ಟಿಕೊಂಡು
ದೇವರಗುಡಿಗೆ ಹೋಗಿ ಮದುವೆಮಾಡಿಕೊಂಡೆವು
ಕೈವಲ್ಯ ತಾಳಿ ಕಟ್ಟಿಕೊಂಡು
ನಾವು ಮರುಳಲು ಭೂಮಿ ತುಳುಕಿತು
ಸಾವಧಾನದಿಂದ ಊರಿಗೆ ಊಟ ಹಾಕುವ ಹೊತ್ತಿಗೆ"

ಗಂಡನ ಮಾಡಿಕೊಂಡ ಬಳಿಕ ಮದುವಳಿಗೆಯ ಸ್ಥಿತಿ ಎಂತಹುದು ?

"ಕರಿಸೀರೆ ಹೋಯಿತವ್ವಾ। ನನಗ
ಬಿಳಿಸೀರೆ ಬೆಳೆದುಬಂತವ್ವ।
ಹರಿದುಹೋಗುವುದಲ್ಲ ಮತ್ತೆ ಮರಳಿ ಬರುವೂದಲ್ಲ
ಜರದ ಹೂವಿನ ಸೀರೆ ಎನಗೆ ಸ್ಥಿರಸವಾಯಿತಲ್ಲ"

ಮದುವೆಯಾದ ಗಂಡ ಎಂಥವ ?

"ಹೆತ್ತ ತಾಯಿತಂದೆಗಳ ಮರೆಸಿದನವ್ವ
ಮತ್ತೆ ನೂರೆಂಟು ಬಳಗವ ಬಿಡಿಸಿದನವ್ವ
ನತ್ತು ಒಂದು ಮೂಗಿನೊಳು ಇಟ್ಟನವ್ವ
ನೆತ್ತಿ ನೇವರಿಸೆನಗೆ ಹುಚ್ಚು ಹಿಡಿಸಿದನವ್ವ"

ಹೀಗೆ ಹುಚ್ಚುಹಿಡಿಸಿದವನು ಥಕ್ಕನೆ ಮರೆಯಾಗಬೇಕೆ ? ಶರಣಸತಿ ಪತಿಯು ಅಗಲಿಕೆಯಿಂದ ದಿಗಿಲುಗೊಂಡಳು. "ಮರೆಯಲಾರೆ ನಾನು ಅವನಾ। ಮರುಳು ಮಾಡಿ ಪೋದವನಾ।" ಎಂದು ಹಂಬಲಿಸಿ

"ಅದು ಎಂಥ ವ್ಯಾಳ್ಯಾದ ಭೋಗ
ಎದೆ ಭುಗಿಲು ನಿಲ್ಲಲೊಲ್ಲದೆನಗs
ಮೊದಲು ತಂದು ತೋರಿರೆ
ಚದುರ ಕೂಡಲೂರೇಶನ ಬೇಗ"

ಎಂದು ಕಂಡಕಂಡವರನ್ನು ಕೇಳುತ್ತಾಳೆ. ಶರಣಸತಿಯು ಕಳವಳಕ್ಕೆ ಮನಕರಗಿ ಲಿಂಗಪತಿ ಬಂದ. ಆಗ ತಾಯಿ ಹೇಳಿದಳು :

"ಗಂಡಗಂಜಿ ಬದುಕು ಮಾಡವ್ವಾ। ಮುತ್ತೈದೆತನ
ಕಳಕೋಬೇಡ ತಿಳಕೊ ತಂಗೆವ್ವಾ।
ಮೇಲುಮಹಲಿನ ಕೋಣೆ ತೆರಿಯವ್ವಾ। ನೀಲಜ್ಯೋತಿಯೆಂಬ

ಬಾಲಚಂದ್ರನ ಬೆಳಕ ನೋಡವ್ವಾ ।
ಕಾಲಕರ್ಮವನೆಲ್ಲ ಕಳೆದು ಕೂಡಲೂರೇಶನಲ್ಲಿ ।
ಲೀಲಳಾಗುವ ಯುಕ್ತಿ ತಿಳಿ ತಂಗೆವ್ವಾ ।"

ಸರಿ. ಅಂದಿನ ರಾತ್ರಿ ಶರಣಸತಿ ಏನು ಮಾಡಿದಳು ?

"ಪಟ್ಟೆಮಂಚವ ಹಾಕಿ ಮನೆಯೊಳು
ಘಟ್ಟಿತುಪ್ಪದ ಜ್ಯೋತಿ ಮುಡಿಸಿ
ಇಟ್ಟು ಮಲ್ಲಿಗಿ ಹೂವಿನಾರತಿ ಅವನ ದಾರಿ ನೋಡಿದೆ"

ಲಿಂಗಪತಿ ಬಂದ. ಬಂದೇನು ಮಾಡಿದ ? ಶರಣಸತಿಯು ಬಾಯಿಂದಲೇ ಅದನ್ನು ಕೇಳುವಾ :

"ನೆಟ್ಟನೇ ಅವ ಬಂದು ನಾನು
ಉಟ್ಟ ಸೀರೆಯ ಕುಪ್ಪಸವ
ತಟ್ಟಿ ಮುಟ್ಟದೆ ಕಳೆದ ಆ ಸುಖ ಎಷ್ಟು ಹೇಳಲಿ ?"

ಮೂಗುತಿ :

ಬಸವಲಿಂಗಶರಣರು "ಮೂಗುತಿ" ಎಂಬ ಶಬ್ದವನ್ನು ಬಹು ವಿಶಿಷ್ಟ ರೀತಿಯಲ್ಲಿ ಬಳಸಿದ್ದಾರೆ. ಅವರ ಹಾಡುಗಳಲ್ಲಿ ಈ ಶಬ್ದ ಹದಿಮೂರು ಸಲ ಬಂದಿದೆ. ಅವರಿಗೆ ಈ ಶಬ್ದದ ಬಗ್ಗೆ ಬಹಳ ಪ್ರೀತಿ ಇದ್ದಂತೆ ಕಾಣುತ್ತದೆ.

ಮೂಗುತಿ ಮೂಗಿಗೆ ಸಂಬಂಧಪಟ್ಟುದು. ಮೂಗು ಮುಖಕ್ಕೆ ಎಷ್ಟು ಶೃಂಗಾರವೋ ಅಷ್ಟೇ ವಿಕಾರಗುಣವುಳ್ಳದು. ವಾಸನೆಯನ್ನು ಕುರಿತು ಹೇಳುವಾಗ್ಗೆ ಮೂಗಿನ ಪ್ರಯೋಗವಾಗುತ್ತದೆ. "ಗುಹೇಶ್ವರಲ್ಲಯ್ಯಂಗೆ ಮೂಗಿಲ್ಲ,... ಮಗಳೇ" ಎಂದು ತಾವು ವಾಸನಾರಹಿತರೆಂಬುದನ್ನು ತಿಳಿಸುತ್ತಾರೆ ಅಲ್ಲಮಪ್ರಭುಗಳು. ಈ ವಾಸನೆಯನ್ನು ಗೆದೆಯಲೂ ಮೂಗು ಒಂದರ್ಥದಿಂದ ಸಾಧಕ. ಭ್ರೂಮಧ್ಯದಲ್ಲಿ ದೃಷ್ಟಿ ನಿಲ್ಲಿಸಲು ಮೂಗು ಸಹಾಯವಾಗುತ್ತದೆ ; ದೃಷ್ಟಿ ನಿಂತರೆ ಸುಳಿದು ಸೂಸುವ ಗಾಳಿ ನಿಲ್ಲುತ್ತದೆ ; ಗಾಳಿ ನಿಂತರೆ ಮನ ನಿಲ್ಲುತ್ತದೆ. ದೃಷ್ಟಿಗೂ ಉಸಿರಿಗೂ ಹೀಗೆ ಸಂಬಂಧ. ಉಸಿರೆಂದರೆ ಮೂಗು ಕುಂಡಲಿನೀ ಶಕ್ತಿಯನ್ನು ಜಾಗೃತಗೊಳಿಸಿ, ಅದನ್ನು ಊರ್ಧ್ವಗಾಮಿ ಮಾಡಿ, ಗುರಿಮುಟ್ಟುವಂತೆ ಮಾಡಲು ಮೂಗಿಲ್ಲದೆ ಸಾಧ್ಯವಿಲ್ಲ ಪ್ರಾಣಾಯಾಮಕ್ಕೆ ಮೂಗೇ ಪರಮಸಾಧನ. ಮೂಗಿನ ಸಂಕೇತವೇ ಮೂಗುತಿ. ಮೂಗುತಿ ಮುತ್ತೈದೆತನದ ಗುರುತೂ ಹೌದು.

ಬಸವಲಿಂಗಶರಣರು ಹೆಚ್ಚಾಗಿ ಮೂಗುತಿಯನ್ನು ಯೋಗಸಿದ್ಧಿಯ ಅರ್ಥದಲ್ಲಿ ಉಪಯೋಗಿಸಿದ್ದಾರೆ :

"ಕುಂದಣಬಿಟ್ಟಿದ ಮೂಗುತಿಟ್ಟು ಮೋಹಮಾಡಿದನಮ್ಮ"

"ನತ್ತು ಒಂದು ಮೂಗಿನೊಳಗೆ ಇಟ್ಟನವ್ವ
ನೆತ್ತಿ ನೇವರಿಸೆನಗೆ ಹುಚ್ಚು ಹಿಡಿಸಿದನವ್ವ"

"ತೋರರನ್ನದ ಮೂಗುತಿಟ್ಟುಕೊಂಡು ಮೇಲೆ ನಡಿಯುವಮ್ಮಾ"

"ಮುತ್ತೆ ಹನ್ನೊಂದು ರೂಪಾಯ್ಗಿ ಕೊಂಡೆನು
ಅತ್ಯಂತ ಪ್ರೀತಿಯು ಮುತ್ತಿನ ಮೂಗುತಿಯು"

"ಮುತ್ತು ಜತನ ಇಟುಕೊ ತಂಗೆಮ್ಮಾ"

ಹೀಗೆ ಮೂಗುತಿಯನ್ನು ರೂಪಕ ಮಾಡಿಕೊಂಡು ಬಳಸಿ ಮೂಗುತಿಗೆ ಮೂಗುತಿಯನ್ನಿಟ್ಟವರೆಂದರೆ ಕನ್ನಡಸಾಹಿತ್ಯದಲ್ಲಿ ಬಸವಲಿಂಗಶರಣರೊಬ್ಬರೇ.

ಕಾವ್ಯಸತ್ವ, ಸೌಂದರ್ಯ :

ಬಸವಲಿಂಗಶರಣರ ಹಾಡುಗಳು ಸುಂದರ ಭಾವಗೀತೆಗಳು. ನಾದ-ಮಾಧುರ್ಯ, ಅನುಭವ, ಅನುಭಾವದ ಪ್ರಾಮಾಣಿಕತೆ, ಆದೀರ್ಘತೆ, ಶ್ರುತಿ ಸುಭಗತೆ ಮುಂತಾದ ಭಾವಗೀತೆಯ ಎಲ್ಲ ಲಕ್ಷಣಗಳನ್ನು ನಾವು ಈ ಹಾಡುಗಳಲ್ಲಿ ಕಾಣುತ್ತೇವೆ. ಪ್ರಾರ್ಥನಾಪರವಾದುದು. ತತ್ವಮಯವಾದುದು ಕಾವ್ಯಾಂಶ ಗಳಿಂದ ದೂರಿರುತ್ತದೆಂಬುದಕ್ಕೆ ಈ ಶರಣರ ಹಾಡುಗಳು ಅಪವಾದವಾಗಿವೆ. ಉಪಮೆ, ರೂಪಕಗಳ ಬಳಕೆಯಂತೂ ಇಲ್ಲಿ ಬಹು ಅರ್ಥಪೂರ್ಣವಾಗಿದೆ.

"ಷಡುವರ್ಗ ಷಡುದುರಿತ ಷಟ್‌ಭ್ರಮೆಗೆ ಸಿಲುಕಿ
ಬಡಗಲ್ಲಿನೊಳು ಬಿದ್ದು ಮಿಡುಕುವೆಗ್ಗಣದಂತೆ
ಕಡುದುಃಖದಿ ಬಹು ನೊಂದೆನೋ"

ಇಲ್ಲಿ ಜೀವಿ ಮತ್ತು ಹೆಗ್ಗಣದ ಹೋಲಿಕೆ ಎಷ್ಟು ಅರ್ಥಸೌಂದರ್ಯದಿಂದ ಕೂಡಿದೆ !

"ಯಾರಿಲ್ಲ ನನಗೆಂದು ಜನರಾಡಿಕೊಳುತಿಹರು
ತೋರಿಸಿಕೊಡುವೆನು ನನಗಾರು ಇಹರೆಂದು
ಮಾರಹರನೇ ಬಲ್ಲ ನನ್ನ ಬಳಗವನೆಲ್ಲ
ಹೊರಗಿನ ಜನಕಿದು ತಿಳಿಯೋಣಿಲ್ಲ
ನನ್ನ ಉನ್ಮನಿಯೊಳಗಿದ್ದಂಥ ಭಾಗ್ಯವು
ಇನ್ನಾವ ಧನಿಕರೊಳಿರುತಿಹುದು ?
ಸನ್ನುತದೊಳಾರು ಹಿರಿಯಾಳುಗಳು ತಾವು
ಎನ್ನ ಬಾಗಿಲ ಕಾಯುವರು ಹಗಲಿರುಳು
ಶಾಂತಿ ಎಂಬೋ ಅತ್ತೆ ನಿಭ್ರಾಂತ ಮಾವನು
ಕಾಂತನಾಗಿಹನೆನಗೆ ಲಿಂಗದೇವನು
... ...

ಬುದ್ಧಿ ಸೂಕ್ಷ್ಮವು ತಾಯಿ, ಶ್ರವಣನು ತಂದೆ
ಶುದ್ಧಜ್ಞಾನಿ ಎಂಬ ಹಿರಿಯಣ್ಣನಿಹನು...."

ಇಲ್ಲಿಯ ಭಾವ, ಭಾಷೆ, ರೂಪಕ, ಅರ್ಥ, ಅನುಭಾವ— ಎಲ್ಲವೂ ಚೆಲುವಿನಿಂದ ತುಂಬಿವೆ.

"ಯಾರಿಲ್ಲ ನನಗೆಂದು ಜನರಾಡಿಕೊಳ್ಳುತಿಹರು"– ಈ ಸಾಲಿನಲ್ಲಿ ಹುದುಗಿದ 'ಔನ್ನತ್ಯ'ವನ್ನು ಅರಿತಷ್ಟೂ ಹಿತವೆನಿಸುತ್ತದೆ; ಕವಿಯ ಆತ್ಮಿಕ ಕೆಚ್ಚು ನಮ್ಮ ಹೃದಯದಲ್ಲಿಯೂ ಮೂಡಿಬರುತ್ತದೆ.

"ಎಂಥ ಮದುವಿ ಮಾಡಿಕೊಂಡೆ ಕೇಳಿರಕ್ಕಯ್ಯ
ನಿಂತವರೆಲ್ಲ ಹಂದರದಿ ಬೋಳೆರಕ್ಕಯ್ಯ"

"ಬೋಳೇರು" ಈ ಶಬ್ದ ಬಸವಲಿಂಗಶರಣರ ಸಾಧನ, ಸಿದ್ಧಿ ಎಲ್ಲವನ್ನೂ ನುಡಿಯುತ್ತದೆ. ಅವರೆಲ್ಲ ತಲೆ ಬೋಳಾದವರು—ಸಕಲ ವಿಕಾರಗಳನ್ನೂ ಲೋಕದ ದ್ವಂದ್ವಗಳನ್ನೂ ಗೆದ್ದವರು. ಮುಂದೆ ಕವಿ ಹೇಳುತ್ತಾನೆ: "ಕುಂಟ ಕುರುಡರೆಂಟು ಮಂದಿ ನೆಂಟರು; ಸೊಂಟ ಮುರಿದ ಬೀಗ ಬಿಗತಿ; ಐರಣಿ ಹೊತ್ತವರು ಐದು ರಂಡೆಯರು; ಸುರಗಿಯಲ್ಲಿ ನಿಂತವರು ಇಬ್ಬರು ಮುಂಡೆಯರು; ಒಸಗೆಮಾಡುವವರು ಗಂಡ ಬಿಟ್ಟ ಗಯ್ಯಾಳಿಯರು. ಶಾಸಿಯಾಗುವ ಸಮಯದಲ್ಲಿ ಒಂದು ಕೂಸು ಸತ್ತಿತು." ಪದ್ಯ ಬೆಡಗಿನಿಂದ ತುಂಬಿದಂತೆ ಕಂಡರೂ ಕಾವ್ಯಸೌಂದರ್ಯಕ್ಕೆ ಕೊರತೆಯಿಲ್ಲ. ಬೋಳೇರು, ರಂಡೆ, ಮುಂಡೆ, ಕುಂಟ, ಕುರುಡ—ಈ ತೀರ ಕೀಳು ಶಬ್ದಗಳ ರೂಪಕದಿಂದ ಅಸಾಮಾನ್ಯ ಅರ್ಥಸಂಪತ್ತಿಯನ್ನು, ಲಿಂಗಾಂಗಸಾಮರಸ್ಯವನ್ನು ಹೇಳುವ ಕವಿಯ ಜಾಣ್ಮೆ, ಪ್ರತಿಭೆ ಅಗಾಧವಾದುದು.

ಲಿಂಗಪತಿ ಶರಣಸತಿಯನ್ನು ನೀರಿಗೆ ಬಾ ಎಂದು ಕರೆಯುತ್ತಾನೆ:

"ನೀರಿಗಂತಲೆ ಬಾರೆ ನಾರಿ। ನೀನು ಬರುವ
ದಾರಿಲಾನು ಇರುತೀನಿ ಪೋರಿ।
ಕೊಡ ಹೊತ್ತುಕೊಂಡು ನೀ ಬಾರೆ। ಆ ಕೊಡ ಮತ್ತೆ
ಒಡಿತಂತೆ ಎಲ್ಲರಿಗೆ ನೀ ಸಾರೆ
ಬಿಡದೆನ್ನ ಕೈಯೊಳು ಸೇರೇ। ನಿನಗುಡಲು
ಕೊಡುವೆ ಲಿಂಗದ ಹೂವಿನ ಸೀರೆ।"

ಅರ್ಥಸೌಂದರ್ಯ, ತತ್ತ್ವಸೌಂದರ್ಯಗಳಿಂದ ಕೂಡಿದ ಇಂಥ ಪದ್ಯ ಪ್ರಪಂಚದ ಸಾಹಿತ್ಯವಲ್ಲಿಯೇ ವಿರಳ. ಸಾಮಾನ್ಯ ಘಟನೆಯೇ ಆತ್ಮಸಾಕ್ಷಾತ್ಕಾರದ, ದೇವದೇವನೊಡನೆ ಕೂಡುವ ಘಟನೆಯಲ್ಲಿ ಪರಿವರ್ತಿತವಾಗಿದೆ ಇಲ್ಲಿ. ಪ್ರೇಮಿಗಳ ನೋಟಕ್ಕೆ, ಕೂಟಕ್ಕೆ ನೀರು ತರುವ ದಾರಿ, ಹಳ್ಳ, ಒಳ್ಳಿಯ

ಸ್ಥಳಗಳು. ನೀರಿಗೆ ಬರಲು ಪ್ರಿಯ ಸಂಜ್ಞೆ ಮಾಡುವ; ಪ್ರೇಯಸಿ ಬರುವಳು. ದಾರಿಯಲ್ಲಿ, ಹಳ್ಳದಲ್ಲಿ ಸರಸಸಲ್ಲಾಪ. ಇಲ್ಲಿ ಲಿಂಗಪ್ರಿಯ ಭಕ್ತಪ್ರೇಯಸಿಯನ್ನು ನೀರಿಗೆ ಬರಲು ಕರೆಯುತ್ತಾನೆ "ಕೊಡ ಹೊತ್ತುಕೊಂಡು ಬರಬೇಕಂತೆ!" ನೀರಿಗೆ ಬರಿಗೈಲಿ ಬರುತ್ತಾರೇನು? ಹೊತ್ತುತಂದ ಕೊಡವನ್ನು ಮತ್ತೆ ಒಡೆದು ಬಿಡಬೇಕಂತೆ! ಎಂಥ ವಿಚಿತ್ರ! 'ಕೊಡ' ಎಂದರೆ ಶರೀರ. ಇದಿಲ್ಲದೆ ಯಾವ ಸಿದ್ಧಿಯೂ ಸಾಧ್ಯವಿಲ್ಲ. ಆದರೆ ಅದು ಹಾಗೆಯೇ ಇರಬಾರದು; ಒಡೆದು ಹೋಗಬೇಕು. ಎಂದರೆ 'ಅಕಾಯ'ವಾಗಬೇಕು. ಆಗ ಮಾತ್ರ ಶರಣಸತಿ ಲಿಂಗಪತಿಯ ಕೈಹಿಡಿಯಲು ಸಮರ್ಥಳು. ಲಿಂಗಪತಿಯು ಕೈಹಿಡಿದಾಗ ಆತ ಆಕೆಗೆ ಲಿಂಗದ ಹೂವಿನ ಸೀರೆಯನ್ನು ಉಡಲು ಕೊಡುತ್ತಾನಂತೆ. 'ಲಿಂಗದ ಹೂವಿನ ಸೀರೆ' ಎಂಬಲ್ಲಿಯ ಧ್ವನಿ, ತತ್ವಸೌಂದರ್ಯ ಆತ್ಮಕ್ಕೆ ಮುಟ್ಟುವಂತಹುದು. ಅಕಾಯಭಕ್ತೆಗೆ ಬೇಕಾದ ಸೀರೆ ಸಾಮಾನ್ಯವಾದುದೆ? ಅಲ್ಲ—ಅದು ಲಿಂಗದ ಹೂವಿನ ಸೀರೆಯೇ ಆಗಬೇಕು. ಈ ಪದ್ಯದಲ್ಲಿ ತುಂಬಿರುವ ರಸಿಕತೆ, 'ಭಾವೈಕ್ಯತೆ', ಅರ್ಥಗೌರವ, ನಾದಮಾಧುರ್ಯ, ತತ್ವದ ಸೊಗಸು ಇವೆಲ್ಲ ಈ ಹಾಡನ್ನು ಶ್ರೇಷ್ಠ ಭಾವಗೀತೆಯನ್ನಾಗಿಸಿವೆ.

ಬಸವಲಿಂಗಶರಣರು ತಮ್ಮನ್ನು ಒಕ್ಕಲಿಗರು, ಅಗಸರು, ಕುರುಬರು, ಕೊಜ್ಜೇರು ಎಂದು ಕರೆದುಕೊಂಡು ಹಾಡುಗಳನ್ನು ರಚಿಸಿದ್ದಾರೆ. ಅವು ತತ್ವದಿಂದಲೂ ಅರ್ಥಗಾಂಭೀರ್ಯದಿಂದಲೂ ತುಂಬಿರುವುವಲ್ಲದೆ ರಸವತ್ತಾಗಿಯೂ ಇವೆ.

ಒಕ್ಕಲುಮಗ ಏನು ಮಾಡಿದ?

"ಬಾಲಚಂದ್ರನೆಂಬೋ ಕುಡುಗೋಲು ಹಿಡಿದು
ಸ್ಥೂಲ ಸೂಕ್ಷ್ಮದ ದಂಟು ಕೊಯ್ದು ನೋಡಮ್ಮಾ
ಮಲತ್ರಯಗಳ ಸಿವುಡುಗಳ ಕಟ್ಟಿ
ಮೇಲ್ಮನೆ ಮಧ್ಯದಿ ಬಣವೆ ಒಟ್ಟಿದನಮ್ಮಾ"

ಬಾಲಚಂದ್ರ, ಮೇಲ್ಮನೆ—ಕುಡುಗೋಲು,—ಈ ಶಬ್ದಗಳು ಶರಣರ ಉಸಿರಿನಿಂದ ಆಧ್ಯಾತ್ಮದ ಜೀವವನ್ನು ಪಡೆದಿವೆ; ಸಹಸ್ರದಳಕಮಲದ ಆ ದಿವ್ಯ ನಸುನೀಲ ಬೆಳಕು ಈ ಶಬ್ದಗಳಿಗೇನೇ ಸಾಕ್ಷಾತ್ಕಾರವಾಗಿದೆಯೆನಿಸುತ್ತವೆ. ಇಂಥ ರೂಪಕ ಸಾಹಿತ್ಯದಲ್ಲಿ ಅಪರೂಪ. ಕುಂಡಲಿನೀ ಶಕ್ತಿ ಎಚ್ಚತ್ತು, ನೆತ್ತಿ ಉರಿದುದನ್ನು ಇಲ್ಲಿ ಕವಿ ಎಳೆಯೆಳೆಯಾಗಿ ವಿವರಿಸಿದ್ದಾನೆ. 'ಅರಿತವನು' ಈ ಸಾಲುಗಳನ್ನೋದಿದಾಗ 'ಕಂಡು' 'ಅನುಭವಿಸುತ್ತಾನೆ'.

ಇವರು ಕೊಜ್ಜೇರು—

"ಕೊಜ್ಜೀರಾದೆವೋ ನಾವು ಕೊಜ್ಜೀರಾದೆವೋ....
ಹೆಣ್ಣು ಅಲ್ಲ ಗಂಡು ಅಲ್ಲ ನಮ್ಮ ಪರಿ ಬೇರೆ ಉಂಟು
ಬಣ್ಣಬಣ್ಣದ ವಸ್ತ್ರಗಳ ಉಟ್ಟು ಮುರುಕ ಮಾಡೋದುಂಟು
ಚೆನ್ನ ಕೂಡಲೂರೇಶನ ಕೂಡಿಕೊಂಡು ಬಾಳ್ವುದುಂಟು"

ಹೆಣ್ಣಲ್ಲ—ಗಂಡಲ್ಲ—ಆತ್ಮ! ಆದರೂ ಸಂಸಾರದಲ್ಲಿ ಮೆರೆಯುತ್ತದೆ—ಬಣ್ಣ ಬಣ್ಣವಾಗಿ—ಆ ಬಣ್ಣ ಅಂಟದಂತೆ.

ಅತೀಂದ್ರಿಯ ಅನುಭವವನ್ನು ಉದಾಹರಣೆಗಳಿಂದ, ಉಪಮೆಗಳಿಂದ, ಲೌಕಿಕದ ಸಾಮಾನ್ಯ ಘಟನೆಗಳಿಂದ ಮನಮುಟ್ಟುವಂತೆ ಹೇಳುವ ಕಲೆ ಈ ಶರಣರದೇ. ಇಲ್ಲಿ ಶಬ್ದಗಳಿಗೆ ಅತೀಂದ್ರಿಯತನವುಂಟಾಗಿ ಅವು ಶರಣರ ಅನುಭಾವವನ್ನು ಪಡಿನುಡಿಯುತ್ತವೆ:

"ಹನ್ನೆರಡು ವರುಷದ ಕನ್ನೆ ಯೌವನ ಸೂಸುತದ
ಉನ್ಮತ್ತ ಸ್ತನಗಳೆರಡು ಒತ್ತುತsತವ
ಕಣ್ಣ ಮೂಗಿನ ಕೊನೆ ಪ್ರಜ್ವಲಿಸುತsದ
ಇನ್ನು ಗಂಡನ ಭಯವ್ಯಾಕ ಸುಮ್ಮನೆ...ಮಲಗು ಪೋರಿ..."

"ಬಣ್ಣಬಣ್ಣದ ಸೀರಿ ಬಿಗಿಯಿದ್ದ ಉಡಿಗಂಟು
ಇನ್ನು ಸಡಿಲಿಸಬೇಕು ತಡಮಾಡಬೇಡ
ರನ್ನದ ಮೂಗುತಿ ಓಲೆಗಳ ನೀನಿಟ್ಟುಕೊಂಡು
ಕನ್ನಡೀವಳಗ ಮುಖವ ನೋಡಿಕೋ ಪೋರಿ..."

... ...

"ಉದಯ ಮಂಗಳವಾರ ನಿಬ್ಬಣಕೆ ಹೊರಟರೆ
ಮೊದಲಗಿತ್ತಿಯು ನಾನು ಬಸುರಾದೆನು
ಸದಮಲ ಸುಜ್ಞಾನಿಗಳು ಶಾಸಿ ಇಡುತಿರೆ
ಮದುವೆ ಕಾಲದಿ ಮಗನ ಹಡೆದೆನು..."

... ...

"ಮೇಲುಮಾಳಿಗೆಯಲ್ಲಿ ಸಾಲುದೀವಿಗೆ ಹಚ್ಚಿ
ಕೂಡಲೂರೇಶನ ಕೂಡಿಕೋ ತಂಗಿ"

... ...

"ನಾನು ಒಂದು ಹೇಳತೀನಿ ಪ್ರಾಣಸಂಗಾತಿ ಕೇಳೆ
ಜ್ಞಾನಮೂರ್ತಿ ಬಂದು ಏನೇನೋ ಮಾಡಿದನಲ್ಲೆ

... ...

ತೋರಮುತ್ತಿನ ಮೂಗುತಿಯ ಮೂಗಿನೊಳಿಟ್ಟನಲ್ಲೆ

... ...

ತನ್ನ ಕೈಗಳಿಂದ ತಿದ್ದಿ ನನ್ನ ಬೈತಲೆ ತೆಗೆದನಲ್ಲೆ

... ...

ಹತ್ತೆಂಟು ಕಲೆಗಳ ತೋರಿ ನೆತ್ತಿಯ ನೇವರಿಸಿದನಲ್ಲೆ

... ...

ಗೊತ್ತಿದ್ದ ಜನರ ಮುಂದೆ ನಾನು ಬತ್ತಲಾಗಿ ನಿಂದೆನಲ್ಲೆ "

ಸಾಮಾನ್ಯ ನೀತಿ :

ಬಸವಲಿಂಗಶರಣರ ಹಾಡುಗಳಲ್ಲಿ ಆಧ್ಯಾತ್ಮದ ಜೊತೆಗೆ ಜನರ ಬದುಕಿಗೆ ಅರ್ಥವನ್ನು, ಶಕ್ತಿಯನ್ನು ಕೊಟ್ಟು ಮುನ್ನಡೆಸುವ ನೀತಿ ಹಾಸುಹೊಕ್ಕಾಗಿದೆ. ಅವರು ಬಹುಸುಲಭವಾಗಿ ನಾದಮಾಧುರ್ಯದೊಡನೆ ಈ ನೀತಿಯನ್ನು ಜನರ ಹೃದಯಕ್ಕಿಳಿಸಿಬಿಡುತ್ತಾರೆ.

" ಹೋಗಬ್ಯಾಡೋ ಹೋಗಬ್ಯಾಡೋ
ಭೋಗಪಡೆಯು ಆಸೆಯಿಂದ
ತ್ಯಾಗಮಾಡದ ಬಾಲೇರಲಿ

ಕುನ್ನಿಯಂತೆ ಬೊಗಳುವ ಜನರಲ್ಲಿ
ನಿನ್ನ ಬೆಲೆಯನು ತಿಳಿಯದವರಲ್ಲಿ
ಘನ್ನಘಾತಮಾಡುವ ಪಾತಕಿಗಳಲ್ಲಿ
ಬನ್ನಪಡಿಸುವಂಥ ನರಹೇಸಿಗಳಲ್ಲಿ
ಹೋಗಬ್ಯಾಡೋ

... ...

ಗುರುವಿನ ಮಂತ್ರ ನಿನಗೊಂದು ಹೇಳತಿನಿ
ಸಾಧುರ ಮಠಕ ಹೋಗಬ್ಯಾಡ
ಹೋದ್ರ್ಯಾಕ್ ಹೋಗುವಲ್ಲಿ ಮತ್ತೊಂದ ಹೇಳತಿನಿ
ಗಾಂಜಿ ತಂಬಾಕ ಸೇದಬಾರದು। ನಿಶೆ ಆಗಬಾರದು

ನಿನ್ನ ಹೆಂಡತಿ ಪತಿವ್ರತಿ ಆದರೇನು
ಆರ್ ತಿಂಗಳ ತವರಲಿ ಬಿಡಬಾರದು
ಬಿಟ್ಟರ್ಯಾಕ್ ಬಿಡವಲ್ಲಿ ಮತ್ತೊಂದ ಹೇಳತಿನಿ
ತಿಂಗಳಿಗೊಮ್ಮೆ ಹೋಗದಂತೆ ಇರಬಾರದು। ಬ್ಯಾಡ ಆಗಬಾರದು

ಹೊಲೆಯರು ಯಾರು ?

ಹೊಲೆಯರಲ್ಲವೆ ನಾವು। ಹೊಲೆಯರಲ್ಲವೆ ?
ಹೊಲೆಯೊಳು ಹುಟ್ಟಿ ನಾವು। ನಮ್ಮ
ಕುಲ ಮೇಲು ಎನ್ನುವವರು

ರಾಷ್ಟ್ರದೊಳು ಮೇಲು ಕೀಳು
ಸೃಷ್ಟಿ ಕೃತಕ ಮಾಡುವವರು
ಶ್ರೇಷ್ಠರೆನಿಸಿಕೊಂಡರೂ ನಷ್ಟರಾಗಿ ಹೋಗುವವರು
ಹೊಲೆಯರಲ್ಲವೇ-

ಜ್ಞಾನಿಯ ಗುಣ ಬ್ಯಾರೆ। ಅ-
ಜ್ಞಾನಿಯ ಗುಣ ಬ್ಯಾರೇ।

"ಉಪ್ಪು ಮುತ್ತು ಒಂದೆ ಜಲದಲ್ಲಿ ಹುಟ್ಟುವವು
ಉಪ್ಪು ಕರಗಿ ಮುತ್ತು ಉಳಿಯುವವು
ತಪ್ಪಿ ನುಡಿದರೆ ಜ್ಞಾನಿ-ಅಜ್ಞಾನಿ ಒಂದೆಂದು
ಒಪ್ಪುವನೆ ಈ ಮಾತು ಕೂಡಲೂರೇಶನು"

ಅನುಭಾವ-ಯೋಗ:

ಬಸವಲಿಂಗಶರಣರು ಮಹಾ ಅನುಭಾವಿಗಳು. ಶರಣರ ಭಕ್ತಿ, ವೈರಾಗ್ಯ, ಅನುಭಾವಗಳ ಪ್ರಭಾವ ಅವರ ಮೇಲೆ ಗಾಢವಾಗಿ ಆಗಿದೆ. ಭಕ್ತಿಯಿಂದ, ಅನುಭಾವಮಾರ್ಗದಿಂದ ಜೀವನ್ಮುಕ್ತಿ ಸಾಧ್ಯ, ಕೇವಲ ಯೋಗಮಾರ್ಗದಿಂದ ಅದು ಸಾಧ್ಯವಿಲ್ಲ ಎಂದು ಬಸವಲಿಂಗಶರಣರು ಹೇಳುತ್ತಾರೆ:

"ಆಗದಾಗದು ಮುಕ್ತಿ ಯೋಗಮಾರ್ಗದಲಿಂದ
ನೀಗಲರಿಯದು ಭವದ ರೋಗವದರಿಂದ
ಗಂಗೆ ಯಮುನೆ ಸರಸ್ವತಿ ಎಂಬ ತ್ರಿವೇಣಿಯ
ಸಂಗಮಕ್ಷೇತ್ರದೊಳು ಲಿಂಗವು ಉಂಟೆಂದು
ಕಂಗಳನು ಮುಚ್ಚಿ ಮತ್ತೆ ಮಂಗನಂತೆ ಕುಳಿತರೆ
ಹಿಂಗುವುದೆ ಭವ ಕರ್ಮ ಹಮ್ಮು ನೀಗದಲೆ

... ...

[೧೨] ದೇಹದಂಡನೆ ಮಾಡಿ ಕಾಯವನು ಕೆಡಿಸಿಕೊಂಬ
ಮಾಯಮೋಹಿಗಳಿಗೆಲ್ಲ ಮೋಕ್ಷ ದೊರಕುವುದೆ?"

ಅನುಭಾವಿ ಎಂಥವ? ಅವನ ನೆಲೆ ಕಲೆ ನಿಲುವು ಎಂಥದು?

"ಕೈಯಿಲ್ಲದೆ ಹಿಡಿಯುವ, ಕಾಲಿಲ್ಲದೆ ನಡೆಯುವ
ಮೈಯನೆಲ್ಲ ಸೋಂಕುವ
ಬಯಲೊಳು ಆಡುವಾ ನಿರ್ಬಯಲು ಬ್ರಹ್ಮ"ವೇ ತಾನಾದವ ಅನುಭಾವಿ.

ಈ ಹಾಡು ಅನುಭಾವಿಯ ಸಹಜಸ್ಥಿತಿಯನ್ನು ಚೆನ್ನಾಗಿ ಅರುಹುತ್ತದೆ:

---

೧೨. ನೆನೆಯಬಹುದು: "—ಕೂಡಲಸಂಗಮದೇವರನೊಲಿಸಬಂದ ಪ್ರಸಾದಕಾಯವ ಕೆಡಿಸಲಾಗದು." —ಬಸವಣ್ಣ

" ತಾನು ತನ್ನನು ತಿಳಿದು ತಾ ಬ್ರಹ್ಮನಾದಾಗ
ಕೂನಗುರ್ತುಗಳ ಹಂಗುಂಟೆ ಕೊರಡೆ.
ಭಾನುಕೋಟಿತೇಜವು ಹೃದಯದೊಳಡಗಿದೆ
ಮೌನಮುದ್ರೆಯೊಳು ನೀನಿರು ಕೊರಡೆ "

" ತತ್ವೈದು ಶ್ರುತಿ ನಾಲ್ಕು ನಿತ್ಯವೆಂದರಿದವಗೆ
ನಿತ್ಯನೇಮಂಗಳ ಹಂಗುಂಟೆ ಕೊರಡೆ
ಸತ್‌ಚಿತ್ತಾನಂದ ನಿತ್ಯಪರಿಪೂರ್ಣನಾದವಗೆ
ಮತ್ತೆ ಭವಕರ್ಮಗಳುಂಟೆ ಕೊರಡೆ "

" ಆಚಾರಕ್ರಿಯೆಗಳು ಆತ್ಮಾನುಭವದೊಳು
ಯೋಚಿಸಿ ನೀನು ತಿಳಿ ಕೊರಡೆ
ಖೇಚರಿ ಭೂಚರಿ ಸಾಚರಿ ಶಾಂಭವಿ-
ಯಾಚೆಯ ವಸ್ತು ನೀ ಕೊರಡೆ "

ಬಸವಲಿಂಗಶರಣರು ಆಧ್ಯಾತ್ಮಗಿರಿಯ ತುಟ್ಟತುದಿಯನ್ನೇರಿ, ಐಕ್ಯಸ್ಥಲದಲ್ಲಿ ನಿಂತು ಹಾಡಿದ ಹಾಡು ಅನುಭಾವಿಯ ನಿಲವನ್ನು ಸ್ಪಷ್ಟವಾಗಿ, ಸ್ಫುಟವಾಗಿ ಸಾರಿಹೇಳುತ್ತದೆ; ಈ ಹಾಡು ಬಹು ಜನಪ್ರಿಯವಾದುದು. ಇಂದಿಗೂ ರಾಯಚೂರು ಮತ್ತು ಕಲ್ಬುರ್ಗಿ ಜಿಲ್ಲೆಗಳಲ್ಲಿ ಜನರು ಈ ಹಾಡನ್ನು ಹಾಡಿ ನಲಿಯುತ್ತಾರೆ :

" ಯಾತರಿಂದಲಿ ಮಾಡಲಿ ಆತ್ಮನ ಪೂಜೆ
ಎತ್ತ ನೋಡಲು ತಾನೆ ತಾನಾಗಿಹನು
ನಿತ್ಯನಿರಂಜನ ನಿರಾಳ ನಿರ್ಗುಣ
ಅತ್ಯಧಿಕಾನಂದ ಪರಿಪೂರ್ಣಬ್ರಹ್ಮವು

ತನು ಮೂರು ಕರಣ ನಾಲ್ಕು ತತ್ತ್ವವೈದರೊಳು
ಇನಿತು ತೋರಿ ತಾನು ಪ್ರತಿಫಲಿಸಿಹನು
ಘನಚೈತನ್ಯದ ಮೂರುತಿ ತಾನಾದ
ಮನಕೆ ನಿಲುಕದ ಮಹಾ ಘನತೇಜ ಬ್ರಹ್ಮವು

ಅಣುರೇಣುತೃಣಕಾಷ್ಟದಿ ಭರಿತನಾಗಿ
ಎಣಿಕೆಗೆ ತಾನು ಮೀರಿ ಇಹನು
ಗಣಿತಕ್ಕಪ್ರಮೇಯ ಆಗಿ ತೋರುತಿಹನು
ಗುಣಕೆ ಮೀರಿದ ಮಹಾ ನಿರ್ಗುಣ ಬ್ರಹ್ಮವು

ನಾನಾಪರಿಯಲಿ ಪೂಜೆ ಮಾಡುವೆನೆಂದರೆ
ನನ್ನನು ಕೆಡಿಸಿ ತಾನೆ ತಾನಾಗಿಹನು
ಜ್ಞಾನಮೂರುತಿ ಗುರು ಕೂಡಲೂರೇಶನು
ಆನಂದರೂಪಾಗಿ ತೋರುತಲಿಹನು

೪

ವ್ಯಕ್ತಿತ್ವ

ದಿವ್ಯಗಳಿಗೆ ಎದೆಯೊಡ್ಡಿದರು :

ಕೂಡಲೂರು ಬಸವಲಿಂಗಶರಣರು ಮಹಾಕಾರಣಿಕರು; ಅವರು ಈ ಬದುಕನ್ನು, ಈ ನೆಲವನ್ನು ಪ್ರೀತಿಸಿ ಅದನ್ನು ಮಹವನ್ನಾಗಿ ಮಾಡಲು ಮಹಾ ಮಣಿಹವನ್ನು ಹೊತ್ತು ಬಂದವರು. ಅವರು 'ವೇದಾಂತಿ'ಗಳಾಗಿ ಜನರಿಗೆ ಹೊರೆಯಾಗಲಿಲ್ಲ. ಶರಣರ ತತ್ತ್ವದಂತೆ ಸತ್ಯ ಶುದ್ಧ ಕಾಯಕ ಮಾಡಿ ಬಾಳಿ-ದರು.

ಜನರ ಜೀವನವನ್ನು ತಿದ್ದಲು ಅವರು ಊರೂರು ಅಲೆದರು; ಆದರೆ ಜನರನ್ನು ನೆರೆಯಿಸಿ 'ಉಪದೇಶ' ಮಾಡಲಿಲ್ಲ. ತಮ್ಮ ನಡೆಯಿಂದ, ಅನುಭಾವದ ನುಡಿಯಿಂದ ಜನರ ಹೃದಯಗಳನ್ನು ಪರಿವರ್ತನಗೊಳಿಸಿದರು. 'ಸಾರಿ ಜೆಲ್ಲಿದ ಮುಕ್ತಿ'ಯನ್ನು ಕಾಣುವ ಕಣ್ಣನ್ನು, ಪಡೆಯುವ ಆತ್ಮವನ್ನು ಜನಕೋಟಿಗೆ ನೀಡಿದರು.

ಬಸವಲಿಂಗಶರಣರ ಜೀವನ ಸುಖಮಯವಾಗಿರಲಿಲ್ಲ. ಎಲ್ಲ ಶರಣರಂತೆ ಅವರೂ ನೂರಾರು 'ದಿವ್ಯ'ಗಳಿಗೆ ಎದೆಯೊಡ್ಡಿದರು. ಹೋದಲ್ಲೆಲ್ಲ ಎಲ್ಲರೂ ಅವರ ಮಾತುಗಳಿಗೆ ಕಿವಿಗೊಡಲಿಲ್ಲ. ಅನೇಕರು ಅನೇಕ ರೀತಿಯಾಗಿ ಅವರನ್ನು ಕಾಡಿಸಿದರು, ಪೀಡಿಸಿದರು,[೧೩] ಹೊಟ್ಟೆಗೆ ಹಿಟ್ಟು ದೊರಕದಂತೆ ಮಾಡಿದರು ; ನಿಂದೆ ಮಾಡಿದರು, ಬೂಟಾಟಿಕೆಯವನೆಂದರು. ಆದರೆ ಅವರು "ಬೈದವರೆನ್ನ ಬಂಧುಗಳೆಂ"ದರು ; "ಹೊಯ್ದವರೆನ್ನ ಹಿತವ"ರೆಂದರು. ಎಷ್ಟೋ ಸಲ ಕಠೋರನುಡಿಗಳನ್ನಾಡಿ ಜನರನ್ನು ದಾರಿಗೆ ತಂದುದೂ ಉಂಟು. "ತಂದೆ ಮಗನ ಅವಗುಣಕ್ಕೆ ಮುನಿವಂತೆ" ಅವರು ಜನರ ಮೇಲೆ ಮುನಿದರು.

ಜನರು ಅವರಿಗೆ ಕುರುಬ, ಅಗಸ, ಹೊಲೆಯ, ಬಣಜಿಗ, ಕೊಜ್ಜೀರವ ಎಂದು ಹಾಸ್ಯಮಾಡಿದರು. ಆ ಹೆಸರು ವೃತ್ತಿಗಳನ್ನೆತ್ತಿ ಶರಣರು ಸುಂದರ ಹಾಡುಗಳನ್ನು ಕಟ್ಟಿ ತತ್ತ್ವವನ್ನು ಬಿತ್ತಿದರು—ಜನರೆದೆಗಳಲ್ಲಿ "ಇವ ಏನು ಕವಿ? ಇವನೇನು ಪದ್ಯಮಾಡುತ್ತಾನೆ? ಛಂದಸ್ಸು, ಅಲಂಕಾರ ಯಾವುದೂ ಗೊತ್ತಿಲ್ಲ" ಎಂದು ಹೀಯಾಳಿಸಿದರಂತೆ ಯಾರೋ ಶರಣರನ್ನು. ಆಗ ಶರಣರು ಈ ಹಾಡು ಹಾಡಿದರು :

> " ಏನು ಮಾಡಿದೆ ಓ ಕವಿಯೇ ನೀನು
> ನೀನೆ ತಿಳಿಯದಂಥ ಒಂದು ಪದ್ಯ ಬರೆದೆಯಾ !

---

೧೩. ದುಷ್ಟರು ಅವರನ್ನು ಹಿಂಸಿಸಿ ಕೆರೆಯಲ್ಲಿ ಒಗೆದರೆಂದು ದಂತಕಥೆಯುಂಟು ಪ್ರತೀತಿಯಿದೆ.

ನಾನು_ನೀನೆಂಬ ಉಭಯ ಭೇದಭಾವವ ಹಿಡಿದು
ಜ್ಞಾನಕಸವಾನ ತಂದೆಯಾ ಬಳಲಿ ಜಿಂದೆಯಾ ?
ಯತಿಪ್ರಾಸಗಣಮಾತ್ರೆಗಳನೆಣಿಸಿ ಗುಣಿಸಿ
ಅತಿಬವಣೆಹೊಂದಿ ಬದುಕಿದರೇನು ಬಂತು ಕೇಳು
ನುತಿಗೆ ನಿಲುಕದ ನಿರ್ಗುಣ ನಿಜವಸ್ತುವನ್ನು ಅ-
ಮಿತದೊಳು ನಂಬು ಆಗ ನೀನೆ ಶಂಭು ॥

"ಇವನಾವ ಪಂಡಿತ ? ಶಾಸ್ತ್ರ ಇವನಿಗೆ ತಿಳಿಯುದು ? ಇವನೇನು ಕಾಶಿಯಲ್ಲಿ ಕಲಿತು ಬಂದವನೇ ?" ಎಂದರಂತೆ ಪಂಡಿತರು ಒಮ್ಮೆ. ಆಗ ಶರಣರು ಹಾಡಿದರು:

"ಕುಲಛಲಕೆ ಹೋರಾಡಿ ನೆಲಸಗತ್ತಲಾಗುವ
ಛಲಮಾರಿ ಜನರೆಲ್ಲ ಪಂಡಿತರೆ ?
... ...
ನಾಶವಾಗುವ ದೇಹವನ್ನೆ ನಿಜವೆಂದು ನಂಬಿರುವ
ಹೇಸಿ ಮನುಜರಿವರೆಲ್ಲ ಪಂಡಿತರೆ
ತಾಸುತಾಸಿಗೆ ಜೇರೆ ಜೇರೆ ವೇಷವ ಧರಿಸಿ
ಮೋಸಗೊಳಿಸುವರೆಲ್ಲ ಪಂಡಿತರೆ ?
ಕಾಶಿಯೊಳು ಓದಿ ಘನಬಿರುದುಗಳನಾಂತು
ದ್ವೇಷಮಾಡುವವರೆಲ್ಲ ಪಂಡಿತರೆ ?
ಅಮರ ಛಂದಸ್ಸು ನಿಘಂಟು ಎಲ್ಲ ಓದಿಕೊಂಡು
ಸಮರಸದಿರದವರು ಪಂಡಿತರೆ ?
ಭೂಮಿಯೊಳು ಪರಿಪರಿ ಗ್ರಂಥಗಳ ಬರೆದರೇನು
ಸ್ವಾಮಿನಿಷ್ಠೆಯಿಲ್ಲದವರು ಪಂಡಿತರೆ ?"

ಆತ್ಮಸಮರ್ಪಣೆ :

ಹೋದಹೋದಲ್ಲೆಲ್ಲ ಜನ ಅವರನ್ನು ಒಂದು ಪದ ಮಾಡಿರೆಂದು ಪೀಡಿಸುತ್ತಿದ್ದರು. ಒಮ್ಮೆ ಅಂಥ ಪ್ರಸಂಗದಲ್ಲಿ ಈ ಪದ ಹಾಡಿದರು :

"ಬರುತಾದೋ ಪದ ಬರುತಾದೋ
ನರಜನ್ಮಕೆ ಮರಳಿ ಹುಟ್ಟಿ ಬಾರದ ಪದ
ಆದಿಪ್ರಾಸ ಗುರುಲಘುಕನ್ನೆ ಸೊನ್ನೆಗಳೆಂಬ
ಬೆಡಗಿನ ಒತ್ತು ದೀರ್ಘಗಳ ನಾನರಿಯೆ
ನುಡಿಶಬ್ದ ಬಂಧುರ ತಾಳಲಯಗಳೆಂಬ
ಪಡುಪಾಟ್ಲನರಿಯದ ಪರಬ್ರಹ್ಮನ ಪದ"

ಬಸವಲಿಂಗಶರಣರಿಗೆ ಬಹುಭಾಷಾಪರಿಚಯವಿತ್ತು. ಉರ್ದು, ತೆಲುಗು, ಕನ್ನಡ ಮಿಶ್ರಮಾಡಿ ಬರೆದ ಹಾಡುಗಳಿವೆ. ಸಂಸ್ಕೃತ, ಮರಾಠಿ ಭಾಷೆಗಳಲ್ಲಿಯೂ ಅವರಿಗೆ ಗತಿ ಇತ್ತೆಂದು ತಿಳಿದುಬರುತ್ತದೆ.

ಕೂಡಲೂರು ಬಸವಲಿಂಗ ಶರಣರಂಥವರು "ಭುವನದ ಭಾಗ್ಯದಿಂದ
ಹುಟ್ಟಿಬರುತ್ತಾರೆ—ಭುವನದ ಕೊಳೆಯನ್ನು ಕಳೆಯಲು—ಲೋಕದ ಸಂಕಷ್ಟ
ಗಳನ್ನೆಲ್ಲ ತಾವು ಸಹಿಸಿ ಲೋಕಕ್ಕೆ ಹಿತವನ್ನೆಸಗಿದರು. ಅವರು ಗಂಧದಂ
ತವೆದು, ದೀಪದಂತೆ ಉರಿದು, ಸರ್ವಜೀವದ ಆತ್ಮೋನ್ನತಿಗಾಗಿ ಹಾಡಿದರು
ದಿ. ರಾನಡೆಯವರು ಬಸವಲಿಂಗಶರಣರನ್ನು ಕುರಿತು ಹೇಳಿದ ಮಾತುಗಳ
ಅವರ ವ್ಯಕ್ತಿತ್ವದ ಆಳ–ಎತ್ತರಗಳನ್ನು ತಿಳಿಸುತ್ತವೆ:

"....ಕ್ರಿಸ್ತ, ಬುದ್ಧ, ನಿಂಬರಿಗಿ ಮಹಾರಾಜರು ಮತ್ತು ಕೂಡಲೂರೇಶ
(ಬಸವಲಿಂಗಶರಣರು) ಅಂಥ ಮಾದರಿಯ ಸಂತರಿದ್ದರು. ತಮ್ಮ ಶಿಷ್ಯರನ
ಭಗವಂತನೆಡೆಗೆ ಒಯ್ಯುವುದೊಂದೇ ಇವರ ಕೆಲಸವಾಗಿದ್ದಿತು.

"ಕ್ರಿಸ್ತನು ಜಗತ್ತಿನ ಪಾತಕಗಳಿಗಾಗಿ ಮಡಿದನೆಂಬುದು ಸರ್ವಸ್ವೀಕೃತವಷ್ಟೆ
ಅದರಂತೆ ಕೂಡಲೂರೇಶರು ಕೂಡ ಜಾಗತಿಕ ಪಾತಕಗಳನ್ನಳಿಸಲು ಆತ್ಮ
ಯಜ್ಞಗೈದರು. ಬುದ್ಧಕ್ರಿಸ್ತರಂತೆ ಜಗತ್ತಿನ ಎಲ್ಲ ಸಂಕಟಗಳನ್ನೂ ನೈತಿ
ಬಾಧೆಗಳನ್ನೂ ತಾವು ಸ್ವೀಕರಿಸಿದರು."

ಸಹಾಯಕ ಗ್ರಂಥಗಳು

೧. ಕೂಡಲೂರು ಬಸವಲಿಂಗಶರಣರ ಕೃತಿ : ಬ್ರಹ್ಮತತ್ತ್ವರತ್ನಾಕರ — ಪ್ರಕಾಶಕರು : ಸಂಗಡಿಗರ ಸಮಿತಿ, ರಾಯಚೂರು

೨. ಶಿವಾನುಭವ ಗೀತಾಂಜಲಿ ... ಪ್ರಕಾಶಕರು : ಶ್ರೀ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂ

೩. ನನ್ನ ಸಂಗ್ರಹದಲ್ಲಿರುವ ಕೈಬರಹದ ಹಾಡುಗಬ್ಬಗಳ 'ಓಲೆ'

ವೈಜ್ಞಾನಿಕ ಕಥಾಲೇಖನ

ರಾಜಶೇಖರ ಭೂಸನೂರಮಠ

೧. ಪ್ರಾಸ್ತಾವಿಕ :

ವೈಜ್ಞಾನಿಕ ಕಥೆ-ಕಾದಂಬರಿಗಳು ಕನ್ನಡಸಾಹಿತ್ಯದಲ್ಲಿ ತೀರ ವಿರಳವೆಂದು ಹೇಳಬಹುದು; ಕನ್ನಡಸಾಹಿತ್ಯವು ಪ್ರಬಂಧ, ಕಾದಂಬರಿ, ಭಾವಗೀತೆ ಮತ್ತು ಸಣ್ಣ ಕತೆಗಳನ್ನು ವಿರಪಲಾಗಿ ಪಡೆದು, ಅರಗಿಸಿಕೊಂಡಂತೆ ವೈಜ್ಞಾನಿಕ ಕಲ್ಪನಾ ಸಾಹಿತ್ಯ(science - fiction)ದತ್ತ ಇನ್ನೂ ಕೈಚಾಚಿಲ್ಲ. ಆಧುನಿಕ ಕನ್ನಡ ಸಾಹಿತ್ಯದ ಇತಿಹಾಸ ಮತ್ತು ಯಥಾರ್ಥ ಮೌಲ್ಯಗಳ ಬಗೆಗೆ ತಜ್ಞರ ಅಭಿಪ್ರಾಯಗಳೇನಿದ್ದರೂ ಕಳೆದ ೫೦ ವರ್ಷಗಳು ಕನ್ನಡ ಸಾಹಿತ್ಯದಲ್ಲಿ ಕ್ರಾಂತಿಕಾರಕ ವರ್ಷಗಳಾಗಿವೆ ಎಂದು ಎಲ್ಲರೂ ಒಪ್ಪಿದ್ದಾರೆ, ಅಷ್ಟೇ ಅಲ್ಲ; ಈ ಕ್ರಾಂತಿಯು ಬಿರುಗಾಳಿ ಈ ಶತಮಾನದ ಉತ್ತರಾರ್ಧದಲ್ಲಿ (೧೯೫೦ ರ ಈಚೆಗೆ) ಇನ್ನಾವ ಮನ್ವಂತರ ಪ್ರಾರಂಭಿಸುವುದೋ ಎಂದು ನಾವೆಲ್ಲ ನಿರೀಕ್ಷೆಯಲ್ಲಿದ್ದೇವೆಂದರೂ ಸರಿ. ಅದರಲ್ಲಿ ವೈಜ್ಞಾನಿಕ ಕಥಾಸಾಹಿತ್ಯ (ಕಾದಂಬರಿಗಳನ್ನೊಳಗೊಂಡು)—ಇದಕ್ಕೆ ಇಂಗ್ಲೀಷಿನಲ್ಲಿ Science-fiction ಅಥವಾ ಸಂಕ್ಷಿಪ್ತವಾಗಿ SF[೧] ಎಂದು ಹೆಸರು—ತನಗೊಂದು ಶಾಶ್ವತ ಸ್ಥಾನ ಪಡೆಯಲು ಈಗ ಮುಹೂರ್ತ ಬಂದಿರಬಾರದೇಕೆ? ಸರಕಾರ ಮತ್ತು ವಿಶ್ವವಿದ್ಯಾಲಯಗಳು ವಿಜ್ಞಾನವನ್ನು ಜನತೆಗೆ ಕನ್ನಡದ ಮೂಲಕ ಅರ್ಥಮಾಡಿಕೊಡಲಿ. ಇಲ್ಲಿ ಆಶಯ ವಿಟ್ಟುಕೊಂಡು ಕಾರ್ಯನಿರತರಾದಾಗ, ಕನ್ನಡ ಲೇಖಕರು ಸಾಹಿತ್ಯಮುಖೇನ ವಿಜ್ಞಾನವನ್ನು ಸುಲಭವಾಗಿ ಜನತೆಗೆ ಮುಟ್ಟಿಸಬಹುದಾದ ಇಂಥ ಹೊಸ ಪ್ರಯೋಗಗಳನ್ನೇಕೆ ಪ್ರಾರಂಭಿಸಬಾರದು ?

ಕನ್ನಡದಲ್ಲಿ ವಿಜ್ಞಾನಸಾಹಿತ್ಯವನ್ನು ಜನಪ್ರಿಯಗೊಳಿಸುವ ಸಾಧ್ಯತೆಯ ಬಗೆಗೆ ಸಂಪೂರ್ಣ ಆಶಾವಾದಿಯಾಗಿದ್ದು, ಈ ಕಾರ್ಯವನ್ನು ಪರಿಣಾಮಕಾರಿಯಾಗಿ ಪ್ರಾರಂಭಿಸಲು ವಿಜ್ಞಾನಕ್ಷೇತ್ರದಲ್ಲಿದ್ದವರಿಗೆ ಸುಲಭಸಾಧ್ಯವೆಂದು ನಾನು ನಂಬಿರುವೆ. ಕನ್ನಡದಲ್ಲಿ ವೈಜ್ಞಾನಿಕ ಕಥಾಸಾಹಿತ್ಯ—SF—ವಿಪುಲವಾಗಿ ಸೃಷ್ಟಿಯಾಗಲೆಂಬ ಆಶೆಯಿಂದ, ಇಂಥ ತಲೆಬರಹದೊಂದಿಗೆ ಈ ಪ್ರಬಂಧವನ್ನು ಪ್ರಾರಂಭಿಸಿದ್ದೇನೆ.

---

೧. ಈ ಪ್ರಬಂಧದಲ್ಲಿ ವೈಜ್ಞಾನಿಕ ಕಥಾಸಾಹಿತ್ಯಕ್ಕೆ ಅನುಕೂಲಕ್ಕಾಗಿ SF ಎಂದೇ ಕರೆದಿದ್ದೇನೆ.

೨. ಕಥಾಸಾಹಿತ್ಯದಲ್ಲಿ ವಿಜ್ಞಾನದ ಸ್ಥಾನ :

ಸಾಹಿತ್ಯದಲ್ಲಿ ವಿಜ್ಞಾನಕ್ಕೆ ಸ್ಥಾನವಾದರೂ ಇದೆಯೇ ಎಂಬುದು ಮೊದಲು ಉದ್ಭವವಾಗುವ ಮೂಲ ಪ್ರಶ್ನೆ. ವೈಜ್ಞಾನಿಕ ಕಥಾಸಾಹಿತ್ಯ (SF) ಸಾಹಿತ್ಯ ಪ್ರಕಾರವೇ ಅಲ್ಲವೆಂದೂ, ಪತ್ತೇದಾರಿ ಅಥವಾ ಫ್ಯಾಂಟಸಿಯಂತೆ ಇದಕ್ಕೆ ಕೂಡ ಸಾಹಿತ್ಯದಲ್ಲಿ ಇರಬೇಕಾದ ಜೀವಂತ ಮೌಲ್ಯಗಳಿಲ್ಲವೆಂದೂ ಅನೇಕರು ಬಗೆದಿರುವುದು ಇಂಥ ಸಾಹಿತ್ಯಸೃಜನೆ ಇಷ್ಟು ತಡವಾಗಿ ಪ್ರಾರಂಭವಾದುದಕ್ಕೆ ಕಾರಣವಾಗಿದೆ. ಇಂಥ ಪ್ರತಿರೋಧಾತ್ಮಕ ಉಪೇಕ್ಷೆ ಯಾವುದೇ ಸಾಹಿತ್ಯ ಪ್ರಕಾರಕ್ಕೂ ಮಾರಕವಾಗಬಲ್ಲುದು. ಹೊಸಗನ್ನಡ ಕವಿತೆಗಳನ್ನು ಪೂಜ್ಯ 'ಶ್ರೀ'ಯವರು ಕನ್ನಡಿಗರ ಮುಂದಿಟ್ಟಾಗ, ಶ್ರೀನಿವಾಸರು ಸಣ್ಣ ಕತೆಗಳನ್ನು ಬರೆದಾಗ, ಅಡಿಗ–ಗೋಕಾಕರು ನವ್ಯಕಾವ್ಯ ಬರೆಯಲಾರಂಭಿಸಿದಾಗ ಕನ್ನಡ ಸಾಹಿತ್ಯ ಒಂದೊಂದು ಹೊಸ ಮೈಲಿಗಲ್ಲನ್ನು ತುಳಿಯಿತೆಂದು ಪ್ರಾಜ್ಞರು—ಸಂಶಯಪೀಡಿತರಿದ್ದಾಗ ಕೂಡ—ಒಪ್ಪಿಕೊಂಡಿದ್ದಾರೆ. ನಿಜವಾದ ಸಾಹಿತ್ಯ ಅನುಭವದ ಆಳದಿಂದ ಚಿಮ್ಮಬೇಕು; ಅನಿಸಿಕೆ–ಅಂಬೋಣಗಳ ಸುಸಂಸ್ಕೃತದ ಪಡಿಯಚ್ಚಿನಲ್ಲಿ ಮೈದಾಳಬೇಕು; ಹೃದಯವೇದ್ಯವಲ್ಲದೆ, ನಮ್ಮ ಭಾವನೆ-ಗಳನ್ನು ತಾಕಿ ನಮ್ಮ ಚಿತ್ತವನ್ನಪಹರಿಸಬೇಕು; ಕನಿಷ್ಟ, ಸಾಹಿತ್ಯವೆಂದು ಗುರುತಿಸಬಹುದಾದ ಯಾವುದಾದರೂ ರೂಢಮಾರ್ಗ ತಿಳಿದಿರಬೇಕು. ಈ ವಿಚಾರಗಳನ್ನು ನಾನು ಹೇಳಿದ್ದಲ್ಲ; ನಾನು ಸಾಹಿತ್ಯಶಾಸ್ತ್ರಜ್ಞನಲ್ಲವಾದ್ದರಿಂದ ವೈಜ್ಞಾನಿಕ ಕಥೆಗಳನ್ನು ಹೀಗಳೆಯಲು ಕಾರಣ ಕೊಡುತ್ತ ನನಗೆ 'ಛೀ' ಹಾಕಿದ ಮಿತ್ರರು ಎಚ್ಚರಿಕೆಗಾಗಿ ಹೀಗೆ ಹೇಳಿದ್ದುಂಟು. ಸಾಹಿತ್ಯಸೇವೆಯಲ್ಲಿ ಶ್ರದ್ಧೆಯಿದ್ದ ನನಗೂ ಇಂಥ ವಿಚಾರಗಳು ಒಪ್ಪಿತವೇ, ಆದರೆ, 'SF' ಸಾಹಿತ್ಯಪ್ರಕಾರವೇ ಅಲ್ಲವೆಂದವರಿಗೆ ನಾನು ಉತ್ತರಿಸಬೇಕಾಗಿದೆ. ಪ್ರಾಯಶಃ ವಿಜ್ಞಾನದ ಅಜ್ಞಾನ-ದಿಂದ ಹುಟ್ಟಿದ ಸಂಕುಚಿತತೆ ಕೆಲವರಿಗೆ ಇಂಥ ಅಭಿಪ್ರಾಯಕ್ಕೆ ಅಂಟಿಕೊಳ್ಳು-ವಂತೆ ಮಾಡಿರಬಹುದು. ಲಲಿತಸಾಹಿತ್ಯ ಅಥವಾ ಕಾವ್ಯದಂತೆ ಮನುಷ್ಯನ ಭಾವನೆಗಳನ್ನು ಕಡೆದು ವೈಜ್ಞಾನಿಕ ಸಾಹಿತ್ಯ (SF) ಹುಟ್ಟಲಾರದಾದರೂ, ಒಂದು ಆವಶ್ಯಕ ತಂತ್ರಕ್ಕಾಗಿ ವಿಜ್ಞಾನ ಹೇಗೆ ಸಾಹಿತ್ಯದಲ್ಲಿ ಬರುತ್ತದೆಂದು ನಾನು ತೋರಿಸಿದರೂ ಅರ್ಧ ಕೆಲಸವಾದಂತೆ.

ಮೊದಲು ವಿಜ್ಞಾನವನ್ನು ಸಾಹಿತ್ಯದಲ್ಲಿ ಹೇಗೆ ಹೆಣೆಯಬಹುದೆಂದು ನೋಡುವೆ. ಇದಕ್ಕೆ ಪ್ರಾರಂಭಿಕ ಉದಾಹರಣೆಯಾಗಿ ನಾವು ನಮ್ಮ ಪೌರಾಣಿಕ ಸಾಹಿತ್ಯವನ್ನೇ ನೋಡಬಹುದು. ಆದಿಕಾವ್ಯ ರಾಮಾಯಣದಲ್ಲಿ ಬರುವ ಪುಷ್ಪಕ

---

೨. Fantasy—ಜಾನಪದ ಕಥೆಗಳನ್ನು ಹೋಲುವ ಚಿತ್ರವಿಚಿತ್ರ ಕಲ್ಪನೆಗಳ ವಿಷಯಗಳ ಕಥಾನಿರೂಪಣೆ.

ವಿಮಾನದ ಕಲ್ಪನೆ, ಯುದ್ಧವಿದ್ಯೆ, ಮಾಯಾಲೋಕಗಳ ಕಲ್ಪನೆಗಳು ಅತ್ಯಾಧುನಿಕ SF-ಲೇಖಕನಿಗೂ ಕೂಡ ಹಿಡಿಸುವ ವಿಷಯಗಳೇ. ಮಂಗಳ-ಗ್ರಹದ ವಿಚಿತ್ರ ವಾಹನಗಳು ಮತ್ತು ಅಲ್ಲಿಯ ವಿಚಿತ್ರ ಜೀವಿಗಳ ಬಗೆಗೆ (ಊಹಿಸಿ) ಎಷ್ಟು ಬರೆದರೂ ಬೇಸರಿಸದ ಇಂದಿನ ಲೇಖಕನಿಗೂ, ಹತ್ತುತಲೆಯ ರಾಕ್ಷಸರು, ಸಮುದ್ರವನ್ನೇ ಮಥಿಸಬಲ್ಲವರ ಬಗೆಗೆ ಸಾಕಷ್ಟು ಬರೆದು (ಅವರ-ನ್ನೆಲ್ಲ ಸಾವಿರಾರು ವರ್ಷಗಳಾದರೂ ಅಳಿಯದಂತೆ ಜನಮನದಲ್ಲಿ ಮೂಡಿಸಿ) ಸಾಹಿತ್ಯಕ್ಷೇತ್ರದಲ್ಲಿ ಅಮರರಾದ ಪುರಾಣಕರ್ತೃಗಳಿಗೂ ಅಂತರವೆಷ್ಟು ?

ಮನುಷ್ಯ ಅಜ್ಞಾತವಾದುದಕ್ಕೆ ಎಂದೆಂದೂ ಹೆದರುತ್ತ ಬಂದಿದ್ದಾನೆ. ಗುಡುಗು–ಮಿಂಚು, ಗಾಳಿ–ಬೆಂಕಿ, ಪರ್ವತ–ಸಮುದ್ರಗಳಂಥವು ಮೊದ-ಮೊದಲು ಅವನಲ್ಲಿ ಪ್ರಚಂಡ ಭೀತಿಯನ್ನು ಹುಟ್ಟಿಸಿರಬೇಕು. ಭೀತಿಯ ಬೆನ್ನತ್ತಿ ಅವುಗಳ ಬಗೆಗೆ ಗೌರವವೂ, ಗೌರವದೊಡನೆ ಪೂಜ್ಯಭಾವವೂ ಸಹಜವಾಗಿ ಬರುತ್ತವೆ. ನಮ್ಮಲ್ಲಿ ಕೋಟಿಗಟ್ಟಲೆ ದೇವರುಗಳು ಪೂಜಿಸಲ್ಪಡುತ್ತಿರುವುದಕ್ಕೆ ಇದು ಮಹತ್ವದ ಕಾರಣವಿರಬೇಕೆಂದು ಮಾನವಶಾಸ್ತ್ರಜ್ಞರು ಸಂಶಯ-ಪಟ್ಟಿದ್ದಾರೆ. ಸೃಷ್ಟಿಯ ಇಂಥ ಅಜ್ಞಾತ ಭವ್ಯಭಯಾನಕ ಪರಿಸರದಲ್ಲಿ ಮನುಷ್ಯ ಅಲ್ಪಪ್ರಾಣಿಯಾಗಿ ತನ್ನ ಇತಿಹಾಸ ಪ್ರಾರಂಭಿಸಿದರೂ, ಒಂದೊಂದೇ ಸೃಷ್ಟಿ-ಶಕ್ತಿಗಳನ್ನು ಅರಿತು ಜಯಿಸುತ್ತ (ಅಥವಾ ಅವುಗಳೊಡನೆ ಒಪ್ಪಂದ ಮಾಡಿ-ಕೊಳ್ಳುತ್ತ) ಹೋದಾಗಲೆಲ್ಲ ನಾಗರಿಕತೆ ವಿಕಾಸಗೊಳ್ಳುತ್ತ ನಡೆಯಿತು. ಈಗ ಮತ್ತೊಮ್ಮೆ ನಾವು ಹೆಚ್ಚುಕಡಿಮೆ ಆದಿಮಾನವನ ಪರಿಸ್ಥಿತಿಗೆ ಹೋಲುವಂಥ ಸಂದಿಗ್ಧದಲ್ಲಿದ್ದೇವೆಂದು ನಮಗೆ ಗೊತ್ತಿದೆಯೇ ? ಈ ವಾಸ್ತವಿಕಸನ್ನಿವೇಶವನ್ನು ಅರಿಯಲು ಎಷ್ಟು ಸಾಹಿತಿಗಳು ಸಿದ್ಧರಾಗಿದ್ದಾರೆ ? ಈಗ ಚಂಪೂಕಾವ್ಯ ಪ್ರಯತ್ನಿಸಿದ ಅಥವಾ ರಾಜಾಶ್ರಯಕ್ಕಾಗಿ ಸಾಹಿತ್ಯ ರಚಿಸಬೇಕೆನ್ನುವ ಸಾಹಿತಿ ಹೇಗೆ ಹಾಸ್ಯಾಸ್ಪದನಾಗಬಹುದೋ, ಹಾಗೆ ನಾಳೆಯ ಪೀಳಿಗೆ ಬರಿ ರೊಮ್ಯಾಂ-ಟಿಕ್ ಸಂಪ್ರದಾಯದ ಅಥವಾ ಇಂದಿನ ವೈಜ್ಞಾನಿಕ ಪರಿಸರದ ಅಜ್ಞಾನ ವ್ಯಕ್ತಪಡಿಸಿದ ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸದಿರಬಹುದು.

ಸದ್ಯ ಮನುಷ್ಯಕುಲ ಎಲ್ಲಿ ಬಂದು ನಿಂತಿದೆ ? ಈ ಶತಮಾನದಲ್ಲಿ ವಿಜ್ಞಾನ ಜನಜೀವನವನ್ನು ಸಂಪೂರ್ಣವಾಗಿ ಆಕ್ರಮಿಸಿದೆ. ಇಂದು ದಿನಪತ್ರಿಕೆ ಯಿಂದ ಆರಂಭವಾದ ದಿನ ವಿಜ್ಞಾನದ ವಿವಿಧ ಉಪಯೋಗಗಳೊಂದಿಗೆ ಮುಗಿಯುತ್ತದೆಂಬ ಮಾತು ಹಳೆಯದಾಗಿದೆ. ಆದರೆ ವಿಜ್ಞಾನವೇ ನಮ್ಮ ಸುಖಶಾಂತಿಗಳಿಗೆ ತಾರಕ ಅಥವಾ ಮಾರಕವಾಗಬಲ್ಲ ಮಹತ್ತಮ ಶಕ್ತಿಯಾಗಿ ದೆಯೆಂದು ಎಷ್ಟು ಜನರಿಗೆ ಗೊತ್ತು ? ಇಂದು ರಾಜಕೀಯ ಯುಕ್ತಿಶಕ್ತಿ, ಸಾಮಾ ಜಿಕ ಜೀವನದ ಸ್ವಾಸ್ಥ್ಯ, ಬೌದ್ಧಿಕ ಇತಿಮಿತಿ ನಮ್ಮ ಆಧುನಿಕ ವಿಜ್ಞಾನವನ್ನೇ ಹೆಚ್ಚಾಗಿ ಅವಲಂಬಿಸಿದೆಯೆಂದು ಅದೆಷ್ಟು ಜನ ಕಂಡಿದ್ದಾರೆ ?

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನೋಡಿರಿ. ಇಂದು ಪರಮಾಣು ವಿಸ ಹೊಟ್ಟೆ ಸೀಳಿ, ಅದನ್ನು ಕೆಣಕಿ, ಶಕ್ತಿ ಹೀರಿದ ವಿಜ್ಞಾನಿ, ಅದರದೇ ಮಾರಕ ವಿಸರಣ ನಾಳೆಯ ಸಂತತಿಯಲ್ಲಿ ಏನು ಊನ ಮಾಡುವುದೋ ಎಂದು ಭಯ ವಿಹ್ವಲಿತನಾಗಿದ್ದಾನೆ. ಸ್ಪುಟ್ನಿಕ್‌ದಿಂದ ಪ್ರಾರಂಭಿಸಿದ ಅಂತರಿಕ್ಷಯಾನಸಾಹಸ ಅಪೊಲೋದ ಯಾತ್ರೆಯಲ್ಲಿ ಉತ್ತೇಜಿತ ಯಶಸ್ಸಿನ ಘಟ್ಟ ಮುಟ್ಟಿದಾಗ, ಮನುಷ್ಯ ತನಗೆ ನಿಲುಕದ ಅಂತರಿಕ್ಷದಾಳದಲ್ಲಿ ಧುಮುಕುವ ಹಮ್ಮಿನಲ್ಲಿ ತಾನು ನಿಂತ ನೆಲವನ್ನೇ ಮರೆತಾನೆಂಬ ಸಂಶಯವೂ ನಮ್ಮನ್ನು ಬಾಧಿಸತೊಡಗಿದೆ. ಆದಿಮಾನವನಿಗೆ ಸೃಷ್ಟಿಯ ಆದಿಶಕ್ತಿಗಳಾದ ಗಾಳಿ–ಬೆಂಕಿಗಳು ಹೇಗೆ ಆಹ್ವಾನ ವಿತ್ತವೋ ಹಾಗೆ ಇಂದಿನ ವಿಜ್ಞಾನಯುಗದ ಮಾನವನಿಗೆ ಪರಮಾಣುಲೋಕ ಮತ್ತು ಅಂತರಿಕ್ಷ ಆಹ್ವಾನವೊಡ್ಡಿ ನಿಂತಿವೆ.

ನಮ್ಮ ಸುತ್ತಮುತ್ತ ವಿಜ್ಞಾನ ತನ್ನ ಜಾಲ ಹರಡಿಕೊಂಡು ಮೈದಡವಿ ದರೂ ನಮ್ಮ ಸಾಹಿತಿಮಿತ್ರರು ವಿಜ್ಞಾನಕ್ಕೂ ಜೀವನಕ್ಕೂ ಸಂಬಂಧವೇ ಇಲ್ಲ ಎಂಬಂತೆ ವೈಜ್ಞಾನಿಕ ಸಾಹಿತ್ಯವನ್ನು ಉಪೇಕ್ಷಿಸಿದರೆ ಅದು ವಿಜ್ಞಾನದ ತಪ್ಪಲ್ಲ. ಜೀವನದ ಶಾಶ್ವತ ಮೌಲ್ಯಗಳ ಬಗೆಗೆ ವೈಜ್ಞಾನಿಕ ಸಾಹಿತ್ಯ ಹಾಡದಿರಬಹುದು; ಆದರೆ ಅದು ಚಿತ್ತಾಕರ್ಷಕವಾದ ವಾಸ್ತವಿಕ ಕಲ್ಪನೆಗಳ ಆಗರವಾಗಿ ಸಾಹಿತಿ ಗಳಿಗೊಪ್ಪಿತವಾದ ಕಥೆಕಾದಂಬರಿಗಳ ರೂಪದಲ್ಲಿ ಬಂದರೆ ಅದನ್ನು ಸಾಹಿತ್ಯ ವಲ್ಲವೆಂದು ಉಪೇಕ್ಷಿಸುವುದು ಸ್ವಲ್ಪ ಧಾರ್ಷ್ಟ್ಯವಾದೀತು.

ಅರೇಬಿಯನ್ ನೈಟ್ಸ್‌ದಲ್ಲಿ 'ಸಿಂದಬಾದನ ಕಥೆಗಳು', ಸ್ವಿಫ್ಟನ 'ಗಲಿವರನ ಕತೆಗಳು' ವೈಜ್ಞಾನಿಕ ಕಥಾಸಾಹಿತ್ಯವಲ್ಲದಿದ್ದರೂ (ಏಕೆಂದರೆ ಅವನ್ನು ಬರೆದ ವರಿಗೆ ಸಾಹಿತ್ಯದಲ್ಲಿ ವಿಜ್ಞಾನವನ್ನು ತರಬೇಕೆಂಬ ಹಟವಿರಲಿಲ್ಲ !) SF–ಕಥೆಗಳಿಗೆ ಅದೆಷ್ಟು ಸ್ಫೂರ್ತಿ ಕೊಟ್ಟಿಲ್ಲ ? ಜೂಲ್ಸ್ ವ್ಹರ್ನನ ಅಥವಾ ಎಚ್. ಜಿ. ವೆಲ್ಸನ ಕಥೆಗಳನ್ನು ಸಾಹಿತ್ಯವಲ್ಲವೆಂದು ಅದೆಷ್ಟು ಜನ ಅಲ್ಲಗಳೆಯಬಹುದು ? ಪಾಶ್ಚಾತ್ಯರ ವಿಜ್ಞಾನವನ್ನು ನಿಃಸಂಕೋಚವಾಗಿ ಉಪಯೋಗಿಸುವ ನಾವು, ಸಾಹಿತ್ಯಕ್ಷೇತ್ರದಲ್ಲಿ ವೈಜ್ಞಾನಿಕ ಕಥಾಸಾಹಿತ್ಯ ಇನ್ನೂ ಏಕೆ ಸೃಷ್ಟಿಸಲು ಆರಂಭಿ ಸಿಲ್ಲ ? ಪತ್ತೇದಾರಿ ಅಥವಾ ದೆವ್ವದ ಕಥೆಗಳಂತೆ ಇವನ್ನು ಸಾಮಾನ್ಯರಿಗೂ ಬರೆಯಲು ಸಾಧ್ಯವಿದ್ದಿದ್ದರೆ, ಕೀಳುದರ್ಜೆಯ SF–ಕಥೆಗಳು ಪೇಟೆಯಲ್ಲಿ ತುಂಬಿರುತ್ತಿದ್ದವೇನೋ ! ಆದರೆ ಈ ತರದ ಸಾಹಿತ್ಯನಿರ್ಮಾಣಕ್ಕೆ ವಿಜ್ಞಾನದ ಶಿಕ್ಷಣ, ಪ್ರತಿಭೆ ಮತ್ತು ಕಲ್ಪನಾವೈಖರಿ ಬೇಕಾಗುತ್ತದೆ. ವಿದೇಶಗಳಲ್ಲಿ ಕೂಡ ಸಾಹಿತ್ಯಕ್ಷೇತ್ರ ಸ್ವಾಗತಿಸಬಲ್ಲ ವೈಜ್ಞಾನಿಕ ಕಥೆಗಳನ್ನು ಬರೆಯುವವರ ಪ್ರಮಾಣ (ಉಳಿದ ಸಾಹಿತಿಗಳ ಸಂಖ್ಯೆಗೆ ಹೋಲಿಸಿದರೆ) ತೀರ ಕಡಿಮೆ. ವಿಜ್ಞಾನದ ತವರುಮನೆಯಲ್ಲಿದ್ದು, ಸಾಹಿತ್ಯದ ನಾನಾರೂಪಗಳ ಆವಿಷ್ಕಾರ ಮಾಡಿದ ಅವರಿಗೇ ಈ ಸಾಹಸ ದುಸ್ಸಾಧ್ಯವಾಗಿರುವಾಗ, ನಾವು ಅದನ್ನು ಇಲ್ಲಿ ಇನ್ನೂ

ಪ್ರಯೋಗದಲ್ಲಿ ತರದಿರುವುದು ಆಶ್ಚರ್ಯವೇನಲ್ಲ.

ಕಥೆಕಾದಂಬರಿಗಳ ತಂತ್ರಕ್ಕೆ ವಿಜ್ಞಾನ ಸುಲಭವಾಗಿ ಹೊಂದುತ್ತದೆಂದು ಪಾಶ್ಚಾತ್ಯ ಲೇಖಕರು ಈಗಾಗಲೇ ತೋರಿಸಿಕೊಟ್ಟಿದ್ದಾರೆ. ಕಥೆ ಮತ್ತು ವಿಜ್ಞಾನಗಳಲ್ಲಿ ಒಂದು ಮುಖ್ಯ ಸಾಮ್ಯವಿದೆ: ಕಲ್ಪನಾಪ್ರತಿಭೆಯಿಲ್ಲದೆ ಇವೆರಡೂ ಬೇರು ಬಿಟ್ಟು ಬೆಳೆಯಲಾರವು. ಪರಮಾಣುವನ್ನು ಯಾರು ಕಂಡಿದ್ದಾರೆ? ಆಕಾಶದಲ್ಲಿ ಚುಕ್ಕೆಯಂತೆ ಕಾಣುವುವೆಲ್ಲವೂ ಕಲ್ಪನೆಗೂ ಮೀರಿದ ಗಾತ್ರಗಳ ಗ್ರಹನಕ್ಷತ್ರಗಳೆಂದು ಅದಾರು ಮೊದಲು ಹೇಳಿದರು? ನೆಲದ ಮೇಲೆಯೇ ಕುಳಿತುಕೊಂಡು ಅಪೋಲೊವಿನ ಚಂದ್ರಗ್ರಹಯಾನವನ್ನು ಮುಂಚಿತವಾಗಿ ನಕಾಶೆ ತೆಗೆದು ನಿರೂಪಿಸಿದ ವಿಜ್ಞಾನಿಗಳು ಕಲ್ಪನಾಯಾನ ಮಾಡಿದಂತಲ್ಲವೇನು? ಇದರಂತೆಯೇ, ದಿನಪತ್ರಿಕೆಯಲ್ಲಿ ಬಂದ ಒಂದು ವರದಿಗೂ, ಅದರ ಆಧಾರದ ಮೇಲೆ ಬರೆದ ಕಥೆಗೂ ಎಷ್ಟು ಅಂತರ! ಸತ್ಯಕ್ಕೆ ಯಾವಾಗ ಕಲ್ಪನೆಯ ಗಿಲೀಟು ಹಚ್ಚಿ ಅದಕ್ಕೆ ಸ್ವತಂತ್ರ ಅಸ್ತಿತ್ವ ಕೊಟ್ಟು, ಅದನ್ನೇ ಕಥೆ ಮಾಡಿ ಬರೆಯುತ್ತೇವೆಯೋ ಆಗ ಅದು ಕಥಾಸಾಹಿತ್ಯಕ್ಷೇತ್ರದಲ್ಲಿ ಕಾಲಿಡಲು ಅರ್ಹವಾಯಿತು.

ಒಂದು ಕಾರಖಾನೆಯಿದೆಯೆನ್ನೋಣ. ಅಲ್ಲಿಯ ಕಾರ್ಮಿಕ ವರ್ಗದ ಶೋಷಣೆ–ಪೋಷಣೆ, ಸುಖದುಃಖ ಕುರಿತು ಕಲ್ಪಿಸಿ (ವಾಸ್ತವಿಕತೆಗೆ 'ಗಿಲೀಟು' ಹಚ್ಚಿ) ಕಥೆ ಬರೆದು ಎಷ್ಟೋ ಕಥೆಗಾರರು ಉತ್ತಮ ಸಾಹಿತಿಗಳೆನಿಸಿಕೊಂಡಿದ್ದಾರೆ. ಈಗ ಅದೇ ಕಾರಖಾನೆಯಿಂದ, ಯಾರದೋ ತಪ್ಪು ಅಥವಾ ದುರುದ್ದೇಶದ ಕಾರಣವಾಗಿ, ಒಂದು ವಿಷವಾಯು ಹೊರಡತೊಡಗಿ ಅದರಲ್ಲಿ ಕಾರ್ಮಿಕರು ಸಿಕ್ಕು ಸಾಯತೊಡಗಿದರೆನ್ನಿರಿ. ಅವರನ್ನು ಒಬ್ಬ ವಿಜ್ಞಾನಿ ಹೇಗೆ ಪಾರು ಮಾಡಿದನೆಂದು ಕಲ್ಪಿಸಿ ಚಿತ್ತಾಕರ್ಷಕವಾಗಿ ಬರೆದರೆ ಅದು SF–ಕಥೆ ಎನಿಸಿಕೊಳ್ಳುತ್ತದೆ. ಇಂಥ ಸಮಸ್ಯೆ ಕಾರ್ಮಿಕರ ಜೀವನಕ್ಕೆ ಸಂಬಂಧಪಟ್ಟಿಲ್ಲವೆಂದು ಯಾರೂ ಭಾವಿಸಕೂಡದು. ಉದ್ಯಮನಗರಗಳಲ್ಲಿ ಕಾರಖಾನೆಗಳು ಕಾರುತ್ತಿರುವ ಹೊಗೆ ಜಗತ್ತಿನ ವಾತಾವರಣವನ್ನು (ಹವೆಯನ್ನು) ಅದೆಷ್ಟು ವಿಷಮಯವಾಗಿಸಿದೆಯೆಂದರೆ, ಇನ್ನು ಕೆಲವೇ ವರ್ಷಗಳಲ್ಲಿ ನಮಗೆ ಉಸುರಾಡಿಸಲು ಜಗತ್ತಿನ ಯಾವುದೇ ಮೂಲೆಯಲ್ಲಿಯೂ ಶುದ್ಧ ಹವೆ ಸಿಗಲಿಕ್ಕಿಲ್ಲ. ಇಂಥ ಸಮಸ್ಯೆಗಳನ್ನೇ ವಿಜ್ಞಾನಿಗಳು ಕಥಾಲೇಖಕರಿಗಿಂತ ಗಂಭೀರವಾಗಿ ಲಕ್ಷಿಸಿ ಕ್ರಮ ಕೈಕೊಳ್ಳುತ್ತಿರುವಾಗ, ಅಂಥ ಕಥೆ ಕೊಟ್ಟ ಮುನ್ನೆಚ್ಚರಿಕೆಯ ಬೆಲೆ ಉಪೇಕ್ಷಿಸಲಾದೀತೇ? ಈಗ ಚಂದ್ರಗ್ರಹಯಾನದಲ್ಲಿ ನಡೆದ ಕಾಲ್ಪನಿಕ ಸನ್ನಿವೇಶಗಳ ಒಂದು ಕಥೆ ನಮ್ಮ ಮುಂದಿನ ಪೀಳಿಗೆಯವರಿಗೆ ವಾಸ್ತವಿಕವೆನಿಸುವಂತೆ ಕಾಣುವ ಕಲೆಗಾರಿಕೆಯಿಂದ ಕೂಡಿದ್ದರೆ ಅದು ಸಾಹಿತ್ಯವೇಕಲ್ಲ?

ಲೇಖನದ ಮೂಲೋದ್ದೇಶವನ್ನು ಬದಿಗಿಟ್ಟು, ಇಷ್ಟು ದೀರ್ಘ ಹಿನ್ನೆಲೆ ಬರೆಯಲು ಹಲವು ಕಾರಣಗಳು ನನ್ನನ್ನು ಪ್ರಚೋದಿಸಿದ್ದರೂ, ಈ ಚರ್ಚೆಯನ್ನು ಸಧ್ಯ ಬೆಳೆಸದೆ ಮುಖ್ಯ ವಿಷಯಕ್ಕೆ ಬರುತ್ತೇನೆ.

೩. ವೈಜ್ಞಾನಿಕ ಕಥಾಸಾಹಿತ್ಯದ ಸಂಕ್ಷಿಪ್ತ ಇತಿಹಾಸ :

ಕ್ರಿ.ಶ. ೧೬೦ರಲ್ಲಿ ಗ್ರೀಸ್ ದೇಶದ ಪ್ರಜೆ ಲೂಸಿಯನ್ 'ವ್ಹೆರಾ ಹಿಸ್ಟೋರಿಕಾ' (Vera Historica) ಎಂಬ ಚಂದ್ರಗ್ರಹಯಾನದ ಕಥೆ ಬರೆದನು. ಆ ಮೇಲೆ ಸುಮಾರು ಒಂದೂವರೆ ಸಾವಿರ ವರ್ಷಗಳಷ್ಟು ದೀರ್ಘಕಾಲದಲ್ಲಿ ಹೇಳಿಕೊಳ್ಳುವಂಥ ಯಾವ SF-ಕಥೆಯೂ ಬಂದಿಲ್ಲ. ಆದರಲ್ಲಿ, ಸಮುದ್ರಯಾನ ಮಾಡುತ್ತಿದ್ದ ಹಡಗವೊಂದು ಪ್ರಚಂಡಮಾರುತಕ್ಕೆ ಸಿಕ್ಕು ಅದರ ಕಪ್ತಾನನು ಸಮುದ್ರದ ದೈತ್ಯಾಕಾರದ ತೆರೆಗಳಿಂದ ಚಂದ್ರಗ್ರಹದ ಮೇಲೆ ತೂರಲ್ಪಟ್ಟ ವಿವರವಿದೆ. ಎಂಥ ಅದ್ಭುತ ಕಲ್ಪನೆ! ಕ್ರಿ.ಶ. ೧೮೩೫ರಲ್ಲಿ ರಿಚರ್ಡ್ ಲಾಕ್ ಎಂಬ ವರದಿಗಾರ, 'ಚಂದ್ರಗ್ರಹ ತಮಾಷೆ' (The moon hoax) ಎಂದು ಈಗ ಪ್ರಸಿದ್ಧವಾಗಿರುವ, ಒಂದು ಕಾಲ್ಪನಿಕ ಸಂಶೋಧನೆಯ ವೃತ್ತಾಂತವನ್ನು[೩] 'ದಿ ನ್ಯೂಯಾರ್ಕ್‌ಸನ್' ಪತ್ರಿಕೆಯಲ್ಲಿ ಪ್ರಕಟಿಸಿದನು. ಈ ವೃತ್ತಾಂತ ಸಾಮಾನ್ಯ ಜನರನ್ನಲ್ಲದೆ ಕೆಲವು ವಿಜ್ಞಾನಿಗಳನ್ನು ಕೂಡ ಮೋಸಗೊಳಿಸಿತ್ತು. ಇಂಥ ಮೋಸ ವಿಜ್ಞಾನದಲ್ಲಿ ಅನಪೇಕ್ಷಣೀಯವಿದ್ದರೂ, ರಿಚರ್ಡ್ ಲಾಕ್ SFಕ್ಕೆ ಅಮೌಲ್ಯ ಸೇವೆಸಲ್ಲಿಸಿದಂತಾಯಿತು. ಹೋದ ಶತಮಾನದ ಉತ್ತರಾರ್ಧದಲ್ಲಿ ಎಡ್ಗರ್ ಅಲನ್ ಪೋ, ನ್ಯಾಥಿನೆಯಲ್ ಹಾಥೋರ್ನ್, ಫಿಜ್ ಜೇಮ್ಸ್ ಓಬ್ರಿಯನ್, ಜೂಲ್ಸ್ ವ್ಹರ್ನ್ ಮತ್ತು ಸರ್ ಆರ್ಥರ್ ಕಾನ್ಯನ್ ಡಾಯಿಲ್ ಬಂದರು. ಅದೃಶ್ಯ ಮನುಷ್ಯರು, ಅದ್ಭುತ ವೈಜ್ಞಾನಿಕ ಉಪಕರಣಗಳು ಮತ್ತು ಸಂಶೋಧನೆಗಳು, ಅತೀಂದ್ರಿಯ ಶಕ್ತಿಗಳು, ಇತ್ಯಾದಿ ವಿಷಯಗಳನ್ನಿಟ್ಟುಕೊಂಡು ಸರಸ ಕಥೆಗಳನ್ನು ಜನಮನರಂಜನೆಗಾಗಿ ಬರೆದವರಿವರು. ಇವರೆಲ್ಲ ಸಾಹಿತ್ಯಕ್ಷೇತ್ರದಲ್ಲಿ ಪ್ರಥಮ ದರ್ಜೆಯ ಕಥೆಗಾರರೆಂದು ಆಗಲೇ ಪ್ರಸಿದ್ಧರಾಗಿದ್ದವರೆಂದು ಇಲ್ಲಿ ನೆನೆಯಬಹುದು.

ಈ ಶತಮಾನದ ಪೂರ್ವಾರ್ಧದಲ್ಲಿ SF-ಸಾಹಿತ್ಯದ ಅನಭಿಷಿಕ್ತ ದೊರೆ ಎಚ್. ಜಿ. ವೆಲ್ಸ್ ಎಂದು ಎಲ್ಲರೂ ಒಪ್ಪುವ್ವಾರೆ. ಆಲ್ಡಸ್ ಹಕ್ಸಲೀಯಂಥ ಪ್ರಬುದ್ಧ ಸಾಹಿತಿಗಳು ಈ ದಿಶೆಯಲ್ಲಿ ಶ್ರಮಿಸಿದ್ದರೂ ಕೂಡ ಅಂಥವರಲ್ಲಿ ದಾರ್ಶನಿಕತೆ ಹೆಚ್ಚಾಗಿ, ವಿಜ್ಞಾನದ ಬಿಗುವಿನ ಕೊರತೆ ಕಂಡುಬರುತ್ತದೆ.

---

೩. ಚಂದ್ರನ ಮೇಲೆ ಜೀವಿಗಳಿದ್ದಾರೆಂದು ಸರ್ ಜಾನ್ ಹರ್ಷೆಲ್ ತನ್ನ ಟೆಲಿಸ್ಕೋಪಿನಿಂದ ಕಂಡುಹಿಡಿದಿದ್ದಾರೆಂದು ಲಾಕ್ ತಮಾಷೆಗೆ ಬರೆದುಬಿಟ್ಟಿದ್ದ.

ಐತಿಹಾಸಿಕವಾಗಿ ನೋಡಿದರೆ, ಆಧುನಿಕ ವೈಜ್ಞಾನಿಕ ಕಥಾಸಾಹಿತ್ಯ ಸುಮಾರು ಒಂದು ಶತಮಾನದ ಹಿಂದೆಯೇ ಜನ್ಮ ತಾಳಿದೆ. ಆದರೆ ಕನ್ನಡ (ಮತ್ತು ಹೆಚ್ಚಾಗಿ ಉಳಿದ ಭಾರತೀಯ ಭಾಷೆಗಳಲ್ಲಿ ಕೂಡ)ದಲ್ಲಿ ಅದು ಇನ್ನೂ ಕ್ರಮಬದ್ಧವಾಗಿ ಪದಾರ್ಪಣೆ ಮಾಡಿಲ್ಲವೆಂದು ನಾನು ಧೈರ್ಯವಾಗಿ ಹೇಳಬಲ್ಲೆ. ಈ ಸಂಧಿ ಸಾಧಿಸಿ SF–ಲೇಖಕರು ಮುಂದೆ ಬಂದರೆ ಅವರು ಈ ಕ್ಷೇತ್ರದಲ್ಲಿ ಪ್ರಥಮ ಹೆಜ್ಜೆಗಳನ್ನಿಟ್ಟ ಗೌರವಕ್ಕೆ ಪಾತ್ರರಾಗುವರು.

೪. SF–ದ ವಿಭಾಗಗಳು :

ವೈಜ್ಞಾನಿಕ ಕಥೆಗಳಲ್ಲಿ ಎಷ್ಟು ಪ್ರಕಾರಗಳೆಂದು ನಿಷ್ಕೃಷ್ಟವಾಗಿ ಹೇಳಲು ಬರುವಂತಿಲ್ಲ. (ಸಾಹಿತ್ಯದ ಇತರ ಕ್ಷೇತ್ರಗಳಲ್ಲಿಯೂ ಇಂಥ ಸಮಸ್ಯೆ ಇದ್ದೇ ಇದೆ.) ಇಲ್ಲಿ ಅಭಿಪ್ರಾಯಗಳು ಬೇರೆ ಬೇರೆಯಾಗಿರುತ್ತವೆ. ಆದರೆ ಹೀಗೆ SF–ಕಥೆಗಳನ್ನು ವಿಂಗಡಿಸಲು ಸಾಧ್ಯವೆಂದು ಸುದೈವವಶಾತ್ ಎಲ್ಲರೂ ಒಪ್ಪುತ್ತಾರೆ. ಹೇಗೆ ಸ್ಥೂಲವಾಗಿ ನಾಟಕಗಳನ್ನು ಸುಖಾಂತ (comedy) ಮತ್ತು ದುಃಖಾಂತ (tragedy) ಕೃತಿಗಳೆಂದು ವಿಭಾಗಿಸಬಹುದೋ ಹಾಗೆ SF–ಕಥೆಗಳಲ್ಲಿ (a) ಕಾಲಜ್ಞಾನಾತ್ಮಕ (prophetic), (b) ದಾರ್ಶನಿಕ (philosophical) ಮತ್ತು (c) ಸಾಹಸಪೂರ್ಣ (adveuturous) ಕಥೆಗಳೆಂದು ವಿಂಗಡಿಸಬಹುದು. ಆದರೆ ಇಂಥ ಸ್ಥೂಲ ವಿಭಜನೆ ಯಾವ SF–ಲೇಖಕನಿಗೂ ಉಪಯೋಗವಾಗಲಾರದು. ಲೇಖಕರು ಸಾಮಾನ್ಯವಾಗಿ ತಮ್ಮ ಕಥೆಯನ್ನು ಕೆಳಗಿನ ಒಂದು ಯಾವುದಾದರೂ ವಿಭಾಗದಲ್ಲಿ ಬರೆಯಲಿಚ್ಛಿಸುತ್ತಾರೆ :

(a) ಪರಮಾಣುವಿಜ್ಞಾನದ ಕಥೆಗಳು.
(b) ಅಂತರಿಕ್ಷಯಾನದ ಕಥೆಗಳು.
(c) ಅದ್ಭುತ ಸಂಶೋಧನೆಗಳ ಕಥೆಗಳು.
(d) ಭವಿಷ್ಯದ ಕಥೆಗಳು.

ಈ ಸ್ಥೂಲವಿಂಗಡನೆ ಪ್ರಾರಂಭಿಕ ಲೇಕಖರಿಗೆ ಉಪಯೋಗವಾದೀತು. ಆದರೆ ಸೂಕ್ಷ್ಮ ವಿಂಗಡನೆ ಬೇಕೆನ್ನುವವರಿಗೆ ಇದು ಸಾಲದು.

ಇತ್ತೀಚಿನ ಒಂದು ರಶಿಯನ್ ಪತ್ರಿಕೆಯಲ್ಲಿ[೪] SF-ದ ವಿಭಾಗಗಳನ್ನು ಕೆಳಗಿನಂತೆ ಮಾಡಿಕೊಟ್ಟಿದಾರೆ. ಈ ವಿಂಗಡನೆ ಸಾಹಿತ್ಯಶಾಸ್ತ್ರಜ್ಞರಿಗೆ ಒಪ್ಪಿತ-ವಾಗುವದೆಂಬ ವಿಶ್ವಾಸದಿಂದ ಅದನ್ನು ಇಲ್ಲಿ ಕೊಡುತ್ತೇನೆ :

(i) ರೋಮಾಂಚಕ ವಿಷಯಗಳುಳ್ಳ ಕಥೆಗಳು
(ii) ರಹಸ್ಯಭೇದನದ ಕಥೆಗಳು

---

೪. ಸ್ಪುಟ್ನಿಕ್. ಸಂಚಿಕೆ ನೆನಪಿಲ್ಲ.

(iii) ವಿರೋಧಾಭಾಸಾತ್ಮಕ ಕಥೆಗಳು

(iv) ನವೀನ ತಾಂತ್ರಿಕ ಆವಿಷ್ಕಾರಗಳನ್ನು ನಿರೂಪಿಸುವ ಕಥೆಗಳು

(v) ವಿಜ್ಞಾನದ ಭವಿಷ್ಯದ ಮೇಲೆ ಬೆಳಕು ಬೀರುವ ಕಥೆಗಳು

(vi) ವಿಜ್ಞಾನದ ಪ್ರಗತಿಯಿಂದ ಆಗುವ ಸಾಮಾಜಿಕ ಪರಿಣಾಮಗಳನ್ನು ಹೇಳುವ ಕಥೆಗಳು

(vii) ಅಕಲ್ಪಿತ ಸನ್ನಿವೇಶಗಳಲ್ಲಿ ಸಿಕ್ಕುಬಿದ್ದ ಮನುಷ್ಯರ ಕಥೆಗಳು

(viii) ಭವಿಷ್ಯತ್ತಿನ ಪ್ರಪಂಚದಲ್ಲಿಯ ಜೀವನದ ಕಥೆಗಳು

(ix) ಭವಿಷ್ಯತ್ತಿನ ಸಾಮಾಜಿಕ ರಚನೆಯ ಮೇಲೆ ಬೆಳಕು ಬೀರುವ ಕಥೆಗಳು

ಈ ಒಂಬತ್ತು ವಿಭಾಗಗಳಿಗೆ ನನ್ನದಾಗಿ ಹತ್ತನೆಯದೊಂದನ್ನು ಸೇರಿಸಲೇ? ಅದು:

(x) ಕಲಾತ್ಮಕ ಸೃಷ್ಟಿಗಾಗಿ ಲಲಿತಸಾಹಿತ್ಯವಾಗಬಲ್ಲ ವೈಜ್ಞಾನಿಕ ಕಥೆಗಳು.

ಈ ವಿಭಾಗಗಳು ಸಂಪೂರ್ಣ ಸ್ವತಂತ್ರವೇನಲ್ಲ. ಒಂದು ಕಥೆಯನ್ನು ಒಮ್ಮೆಲೇ ಎರಡು-ಮೂರು ವಿಭಾಗಗಳಲ್ಲಿ ಸೇರಿಸಬಹುದು ಅಥವಾ ಯಾವುದರಲ್ಲಿಯೂ ಸೇರಿಸಲು ಸಾಧ್ಯವಾಗದಿರಬಹುದು. (ಏಕೆಂದರೆ ಯಾವುದೇ ಕಲಾಕೃತಿಯೂ ಸಂಪ್ರದಾಯಬದ್ಧವಾಗಿರಲೇಬೇಕೆಂಬ ನಿಯಮವೇನಿಲ್ಲವಲ್ಲ ?)

ನಾನು ಉಲ್ಲೇಖಿಸಿದ ವಿಭಾಗಗಳ ಉದಾಹರಣೆಯಾಗಿ ಕೆಲವು ಕಥೆಗಳ ವಿಚಾರ ಈಗ ನೋಡೋಣ: (ಕನ್ನಡ ವಾಚಕರ ಅನುಕೂಲತೆಗಾಗಿ 'ಮಯೂರ' ದಲ್ಲಿ ಸಪ್ಟೆಂಬರ್ ೧೯೬೮ ರಿಂದ ಕ್ರಮವಾಗಿ ಪ್ರಕಟವಾಗುತ್ತಿರುವ ನನ್ನ ಕಥೆಗಳ ಉದಾಹರಣೆಗಳನ್ನೇ ಕೊಡುತ್ತ ಹೋಗಿರುವೆ. ಇದು ಕೇವಲ ಅನುಕೂಲತೆಯ ದೃಷ್ಟಿಯಿಂದ)

(i) **ರೋಮಾಂಚಕ ಕಥೆಗಳು:** ವಿರಳವಲ್ಲದಿದ್ದರೂ ಬರೆಯಲು ಅಷ್ಟು ಸುಲಭವಾದುವಲ್ಲ. ಜೂಲ್ಸ್ ವ್ಹರ್ನ್ ಅಥವಾ ಪೋ ಯಾವಾಗಲೂ ಈ ಪ್ರಕಾರದ ಕಥೆಗಳಿಗೆ ಮಹತ್ವ ಕೊಟ್ಟಿದ್ದಾರೆ. ಭೂಮಿಯ ಬಸಿರಿನಲ್ಲಿ ಪ್ರಯಾಣ ಕೈಕೊಳ್ಳುವುದೋ, ಸಮುದ್ರದ ಅಂತರಾಳದಲ್ಲಿ ಓಡಾಡುವುದೋ ಎಂಥವರಿಗೂ ರೋಮಾಂಚನಗೊಳಿಸುವ ವಿಷಯಗಳು. ತರುಣರು ಇಂಥ ಕಥೆಗಳಿಗೆ ಬಹಳ ಬೇಗ ಮರುಳಾಗುತ್ತಾರೆ.

(ii) **ರಹಸ್ಯಭೇದನದ ಕಥೆಗಳು:** ಇವು SF–ದಲ್ಲಿಯ ಪತ್ತೇದಾರಿಗಳಂತಿದ್ದು ಕುತೂಹಲ ಕೆರಳಿಸುತ್ತವೆ. ನನ್ನ 'ಜೆಲಿಜೀವಿಗಳು' ಕಥೆಯಲ್ಲಿ

ಡಾ. ಫೂಲರ ನಿಗೂಢಸಾವಿನ ರಹಸ್ಯಭೇದನ ಬಹಳ ಮಹತ್ವದ್ದಾಗಿದೆ. ಒಂದು ಎಚ್ಚರಿಕೆಯೆಂದರೆ, ಪರಿಣಾಮಕ್ಕಾಗಿ ರಹಸ್ಯ ಒಳಿದು ತರದೆ, ವೈಜ್ಞಾನಿಕ ಹಿನ್ನೆಲೆಯಲ್ಲಿ ರಹಸ್ಯ ತಾನೇ ಇಣುಕುವಂತೆ ಕಥಾನಿರೂಪಣೆ ಮಾಡುವಲ್ಲಿ ಲೇಖಕನ ಜಾಣ್ಮೆಯಿರುತ್ತದೆ.

(iii) **ವಿರೋಧಾಭಾಸಾತ್ಮಕ ಕಥೆಗಳು :** ಕಾಲದಲ್ಲಿ ಚಲಿಸುವ ಪ್ರಯಾಣಿಕರ ಬಗೆಗೆ ಎಷ್ಟೋ ಜನ ಬರೆದಿದ್ದಾರೆ. ವೆಲ್ಸನ 'ದಿ ಟೈಮ್ ಮಶೀನ್' ಬಹಳ ಪ್ರಸಿದ್ಧವಾದದ್ದು. ನನ್ನ 'ಸ್ವಪ್ನದರ್ಶಿ'ಯಲ್ಲಿ ಕೂಡ ವಿರೋಧಾಭಾಸಕ್ಕೆಡೆಯಿದೆ. ೨೧ನೆಯ ಶತಮಾನದವ ಇಂದು ನಮ್ಮ ಮುಂದೆ ಬಂದು ನಿಂತರೆ ಆತ ೨೧ನೆಯ ಶತಮಾನದವ ಹೇಗಾಗುತ್ತಾನೆಂಬ ವಿಚಿತ್ರ ಸಮಸ್ಯೆ ನಮ್ಮನ್ನು ಕಾಡುತ್ತದೆ. ಈ ವಿಭಾಗದ ಕಥೆಗಳು ಓದುಗರ ಮನಸ್ಸಿಗೆ ಕಚಕುಳಿಯಿಟ್ಟಂತೆ ಮನೋರಂಜಕವಾಗಿರುತ್ತವೆ. ಆದರೆ ಇವನ್ನು ಬರೆಯುವಾಗ ಲೇಖಕ ಬಹಳ ತರ್ಕಬದ್ಧವಾಗಿ ಯಾವುದಾದರೊಂದು ವಿಜ್ಞಾನದ ವೈಪರೀತ್ಯವನ್ನು ಕಥೆಯ ಚೌಕಟ್ಟಿನಲ್ಲಿ ಇಳಿಸಬೇಕಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಇದು ಅತ್ಯಂತ ಕಠಿಣವಾದ (ಆದರೆ ಮತ್ಸರವುಂಟುಮಾಡುವಷ್ಟು ಸೊಗಸಾದ) ಸಾಧನೆ.

(iv) **ನವೀನ ತಾಂತ್ರಿಕ ಆವಿಷ್ಕಾರಗಳನ್ನು ನಿರೂಪಿಸುವ ಕಥೆಗಳು** : ಒಂದು ಅದ್ಭುತ ಯಂತ್ರವನ್ನೋ, ಉಪಕರಣವನ್ನೋ ಸಂಶೋಧಿಸಿ ಉಪಯೋಗಿಸಿದ ಕಥೆಗಳು ಈ ವಿಭಾಗದಲ್ಲಿ ಬರುತ್ತವೆ. ನನ್ನ 'ಟಚೀರಮಾ' ಅಥವಾ 'ಕ್ಷ–ದೃಷ್ಟಿ!' ಈ ತರಗತಿಯಲ್ಲಿ ಬರುತ್ತವೆ. 'ಟಚೀರಮಾ'ದಲ್ಲಿ ಪ್ರೇಕ್ಷಕರಿಗೆ ಸ್ಪರ್ಶಾಭಾಸವಾಗುವಂತೆ ಮಾಡಿದ ಸಿನಿಮಾತಂತ್ರದ ವಿಚಾರವಿದೆ. (ಈ ಕಥೆ ರೋಮಾಂಚಕ ಕಥೆಗೂ ಉದಾಹರಣೆಯಾಗಿದೆ.)

(v) **ವಿಜ್ಞಾನದ ಭವಿಷ್ಯದ ಮೇಲೆ ಬೆಳಕು ಬೀರುವ ಕಥೆಗಳು** : ಇವು ವಿಜ್ಞಾನಿಗಳನ್ನು ಕೂಡ ಆಕರ್ಷಿಸುತ್ತವೆ. ಇಷ್ಟು ಮುಂದುವರಿದ ವಿಜ್ಞಾನದಲ್ಲಿ ಇನ್ನೇನು ಶೋಧ ಮಾಡುವದುಳಿಯಿತೆಂದು ಕಥಾಲೇಖಕ ನಾಳೆಯ ವಿಜ್ಞಾನದ ಬಗೆಗೆ ಬರೆಯುತ್ತಾನೆ. ಜೂಲ್ಸ್ ವ್ಹರ್ನ್ ಸಬ್‌ಮೆರೀನುಗಳು ಬರುವ ಎಷ್ಟೋ ಮೊದಲೇ ಅದರ ಕಲ್ಪನೆಯನ್ನು ಕೊಟ್ಟಿದ್ದಾನೆ. ಅವನಂಥ ವಿಜ್ಞಾನ ಪ್ರವಾದಿಗಳು ಬರೆದದ್ದರಲ್ಲಿ ಎಷ್ಟೋ ಪಾಲು ಸತ್ಯವಾಗಿದೆ.

(vi) ಕೆಲವು ಲೇಖಕರಿಗೆ ಸಾಮಾಜಿಕ ಪ್ರಜ್ಞೆ ಹೆಚ್ಚು ಪ್ರಿಯವಾಗಿರುತ್ತದೆ. ನಾಳೆಯ ವೈಜ್ಞಾನಿಕ ಯುಗದಲ್ಲಿ ಮನುಷ್ಯನ ಸಮಾಜ ಎಂಥ ಏರಿಳಿತಗಳನ್ನನುಭವಿಸೀತೆಂದು ಅಂಥವರು ಚಿಂತಿಸಿ ಕಥೆ ಬರೆದಿರುತ್ತಾರೆ. ಜಾರ್ಜ್ ಆರ್ಸ್‌ವೆಲ್ಲನ ೧೯೮೪ ಇದಕ್ಕೆ ಅತ್ಯುತ್ತಮ ಉದಾಹರಣೆ.

(vii) **ಅಕಲ್ಪಿತ ಸನ್ನಿವೇಶಗಳಲ್ಲಿ ಸಿಕ್ಕುಬಿದ್ದ ಮನುಷ್ಯರ ಕಥೆಗಳು** : ಸಾಹಸಪೂರ್ಣವಾಗಿರುತ್ತವಲ್ಲದೆ ರೋಮಾಂಚಕವೂ ಆಗಿರುತ್ತವೆ. ವೆಲ್ಸನ 'The truth about Pyecraft' ಇದಕ್ಕೆ ಉತ್ತಮ ಉದಾಹರಣೆ. ತನ್ನ ತೂಕವನ್ನು ಸಂಪೂರ್ಣ ಕಳೆದುಕೊಂಡ ಕಥಾನಾಯಕನ ಪೇಚು ಇಲ್ಲಿ ಬಹಳ ವಿನೋದಪೂರ್ಣವಾಗಿ ಚಿತ್ರಿಸಲ್ಪಟ್ಟಿದೆ.

(viii) **ಭವಿಷ್ಯತ್ತಿನ ಪ್ರಪಂಚದ ಕಥೆಗಳು** : ವೆಲ್ಸನ 'Utopia' (ಆದರ್ಶಲೋಕ) ಮಾದರಿಯವು. ಮನುಷ್ಯ ಸ್ವರ್ಗದ ಕಲ್ಪನೆಯಲ್ಲಿ ತನ್ನ ಆದರ್ಶಸುಖಗಳ ಬೀಡನ್ನು ಕಂಡಂತೆ, ವಿಜ್ಞಾನ ಮನುಷ್ಯನಿಗೆ ಇಂಥ ಒಂದು ಸ್ವರ್ಗವನ್ನೇ ನಿರ್ಮಿಸಿಕೊಡಬಹುದು. ಅಥವಾ ತದ್ವಿರುದ್ಧವಾಗಿ ನರಕವನ್ನೇ ಸೃಷ್ಟಿಸಬಹುದು. ಈ ಕಲ್ಪನೆಗಳು ಇಂಥ ಕಥೆಗಳಲ್ಲಿರುತ್ತವೆ.

(ix) ಭವಿಷ್ಯತ್ತಿನ ಸಾಮಾಜಿಕ ರಚನೆಯನ್ನು ಎತ್ತಿ ತೋರಿಸುವ ಕಥೆಗಳು ನ್ಯಾಯವಾಗಿ SF-ಕಥೆಗಳೇ ಇರಬೇಕಿಲ್ಲ. (vi)ದಲ್ಲಿ ಕೊಟ್ಟ ಉದಾಹರಣೆ ಅಥವಾ ವೆಲ್ಸನ 'The Sleeper awakes' ಇದಕ್ಕೆ ಉದಾಹರಣೆ.

(x) ಕೊನೆಯದಾಗಿ, ನನ್ನ 'ಗಗನಕುಸುಮ'* ಕಲಾತ್ಮಕವಾದ ಕಥಾರಚನೆಗಾಗಿ ಬರೆದುದಷ್ಟೇ ಅಲ್ಲದೆ, ಅದರಲ್ಲಿ ವಿಜ್ಞಾನದ ಪಾತ್ರ ತೀರ ಗೌಣವೆಂದರೂ ನಡೆಯುತ್ತದೆ. ಸನ್ನಿವೇಶದ ನಾವೀನ್ಯಕ್ಕೆ, ಕಥೆಯ ಚಮತ್ಕಾರಕ್ಕೆ ಉಪಯೋಗವಾಗಲೆಂಬ ಒಂದೇ ಉದ್ದೇಶದಿಂದ ಅಲ್ಲಿ ನಾನು ವಿಜ್ಞಾನ ಬಳಸಿಕೊಂಡಿದ್ದೇನೆ. ಅಂತರಿಕ್ಷವಾಹನದಲ್ಲಿರದೆ, ಒಂದು ಚಕ್ಕಡಿಯಲ್ಲಿ ಪ್ರಯಾಣಿಸುತ್ತಿದ್ದರೂ ಕೂಡ ಒಂದು ಮಧುರ ತಪ್ಪಿಗಾಗಿ ಕಥಾನಾಯಕಿ ಹೇಗೆ ಪೇಚಾಡಬಲ್ಲಳೆಂದು ಯಾರಾದರೂ ಬರೆಯಬಹುದಿತ್ತು. ಇದನ್ನು ಕಥಾಸಾಹಿತ್ಯಕ್ಕೆ ಒಂದು ಅಲ್ಪ ಕಾಣಿಕೆ ಎಂದು ಸಹೃದಯರು ಭಾವಿಸಿದರೂ ನನ್ನ ಶ್ರಮ ಸಾರ್ಥಕವಾದಂತೆ

ಮೇಲಿನ ವಿಂಗಡನಾಕ್ರಮವಲ್ಲದೆ, ಕನ್ನಡಸಾಹಿತ್ಯಕ್ಕೆ ಅನುಕೂಲವಾಗುವಂತೆ ಒಂದು ನವೀನಕ್ರಮವನ್ನನುಸರಿಸಿ ಸಧ್ಯ ನಾನು ಕಥೆಗಳನ್ನು ಬರೆಯುತ್ತಿದ್ದೇನೆ. ಆದರೆ ಸಧ್ಯ ಇಂಥ ಪ್ರಯೋಗಗಳ ಬಗೆಗೆ ಪ್ರಾಜ್ಞರ ಮತ್ತು ಓದುಗರ ಪ್ರತಿಕ್ರಿಯೆ ಸ್ಪಷ್ಟವಾಗಿ ಬರದ ಹೊರತು ಅದರ ಬಗೆಗೆ ನಾನಿಲ್ಲಿ ಬರೆಯುವುದು ಅಷ್ಟು ಸರಿದೋರದು.

ವಿಂಗಡನಾಕ್ರಮ ಯಾವುದಾದರೂ ಇರಲಿ, ಅದರಲ್ಲಿ ಒಂದು ತರ್ಕಬದ್ಧ ಸೂತ್ರವಿರುವದನ್ನು ಓದುಗರು ಗಮನಿಸಿರಬಹುದು. ಹೊಸತಾಗಿ SF-ಕಥೆ

* ಸುಧಾ.

ಬರೆಯಲು ಪ್ರಾರಂಭಿಸಿದ ಲೇಖಕರು ಸಾಧ್ಯವಾದಷ್ಟು ತಮ್ಮ ಕಥಾವಸ್ತು ಯಾವ ವಿಭಾಗದಲ್ಲಿ ವಿಂಗಡಿಸಲ್ಪಡುವದೆಂದು ಸ್ಪಷ್ಟವಾಗಿ ತಿಳಿದಿರಬೇಕು. ಆಂದರೆ ಆಯಾ ವಿಭಾಗದ ವಿಶೇಷ ತಂತ್ರ ಮತ್ತು ವೈಜ್ಞಾನಿಕ ಹಿನ್ನೆಲೆ ಅವರಿಗೆ ಸುಲಭವಾಗಿ ಲಭ್ಯವಾಗುವದು. ಒಟ್ಟು ಒಂದು SF-ಕಥೆ ಬರೆಯಲೇ ಬೇಕೆಂದು ಸುಮ್ಮನೆ ವಿಜ್ಞಾನವನ್ನು ಎಳೆದು ತಂದು ಕಥೆಗಳಿಗೆ ಅಳವಡಿಸಿದರೆ ಅದು ವಿಜ್ಞಾನಕ್ಕೆ ಮತ್ತು ಸಾಹಿತ್ಯಕ್ಕೆ ಕೂಡಿಯೇ ಅಪಚಾರ ಬಗೆದಂತೆ. 'ನನಗೆ ಪರಮಾಣುಶಕ್ತಿಯ ವಿಚಿತ್ರ ಉಪಯೋಗ ಮತ್ತು ಅದರ ಪರಿಣಾಮಗಳ ಬಗೆಗೆ ಒಂದು ಕಥೆಯಲ್ಲಿ ಬರೆಯಬೇಕಾಗಿದೆ' ಎಂದು ನೀವು ಬರೆಯಲು ಕುಳಿತಿರೆಂದರೆ ಕನಿಷ್ಟ ಪರಮಾಣುವಿಜ್ಞಾನದ ಮೂಲಪಾಠಗಳನ್ನಾದರೂ ನೀವು ಕಲಿತಿರ-ಬೇಕು. ದೊಡ್ಡ ದೊಡ್ಡ ಫ್ಯಾಕ್ಟರಿ ಅಥವಾ ರಿಯಾಕ್ಟರುಗಳು, ದೊಡ್ಡ ವಿಜ್ಞಾನಿಗಳ ಹೆಸರು ಕಲ್ಪಿಸಿ ಕಥೆ ಬರೆದಿರೆಂದರೆ ಅದು ರವಿವಾರ ಪತ್ರಿಕೆಗಳಲ್ಲಿ ಬರುವ ಕಾಮಿಕ್ಸ್ (ಚಿತ್ರಮಾಲೆಗಳಲ್ಲಿ ಅದ್ಭುತ ಸಾಹಸಕಥೆ) ಕಥೆಗಳ ಮಟ್ಟಕ್ಕೆ ಬರಬಹುದಲ್ಲದೆ ನಿಜವಾದ SF ಆಗಲಾರದು.

೫. ವೈಜ್ಞಾನಿಕ ಕಥೆಗೆ ವಸ್ತು ಮತ್ತು ಕಲ್ಪನೆ :

SF-ಲೇಖಕನನ್ನು ಕಾಡುವ ಮುಖ್ಯ ಸಮಸ್ಯೆ ಸುಮಾರು ಐತಿಹಾಸಿಕ ಕಥಾಲೇಖಕನನ್ನು ಕಾಡುವ ಸಮಸ್ಯೆಯಂತೆಯೇ ಇದೆ. ಐತಿಹಾಸಿಕ ಕಥೆಗಳಲ್ಲಿ ಎಷ್ಟು ಅಂಶ ಐತಿಹಾಸಿಕ ಸತ್ಯವಿರಬೇಕು ಮತ್ತು ಎಷ್ಟು ಅಂಶ ಲೇಖಕನ ಕಲ್ಪನೆಯಿರಬೇಕೆಂದು ಭಿನ್ನಾಭಿಪ್ರಾಯಗಳಿವೆ. ಇತಿಹಾಸದ ವಸ್ತುವನ್ನಾರಿಸಿದಾಗ—ಎಷ್ಟೇ ಕಲಾತ್ಮಕವಾಗಿ ಕಥೆ ಹೆಣೆದರೂ ಲೇಖಕ ತನ್ನ ಕಲ್ಪನೆಯನ್ನು ಎಲ್ಲಿಯೂ ಬೆರೆಸದೆ ನಡೆದುದನ್ನು ನಡೆದಂತೆ ಹೇಳಿದರೆ ಅದು ಕಥಾಸಾಹಿತ್ಯದಲ್ಲಿ ಸ್ಥಾನ ಪಡೆಯಲಾರದು. ಇದಕ್ಕೆ ವಿರುದ್ಧವಾಗಿ, ಇತಿಹಾಸದ ಮೂಲಸತ್ಯಗಳನ್ನೆ ವಿಪರ್ಯಾಸಗೊಳಿಸಿ ಕಲ್ಪನಾವೈಖರಿಯಿಂದ ಅತ್ಯಂತ ಮನೋವೇಧಕ ಕಥೆ ಬರೆದರೂ ಅದು ಉತ್ತಮ ಕಥೆಯಾಗಬಹುದಾದರೂ ಅದಕ್ಕೆ ಯಾರೂ **ಐತಿಹಾಸಿಕ ಕಥೆ** ಎಂದು ಒಪ್ಪಲು ಸಾಧ್ಯವಿಲ್ಲ. ಇದನ್ನೇ SFಕ್ಕೆ ಹೋಲಿಸಿ ಹೀಗೆ ಹೇಳಬಹುದು : ಕಥಾವಸ್ತು ಮತ್ತು ನಿರೂಪಣೆ–ಆದೆಷ್ಟೇ ಕಲಾತ್ಮಕವಾಗಿ ಬರೆದರೂ ಸಂಪೂರ್ಣ ವಿಜ್ಞಾನಭರಿತವೇ ಆಗಿದ್ದರೆ ಅದು ಕಥೆಯಾಗಲಾರದು.[೬] ಅದು ಬರಿ ಜನಪ್ರಿಯ ವಿಜ್ಞಾನವಾಗಬಹುದು. ಇದಕ್ಕೆ ವಿರುದ್ಧವಾಗಿ, ಬರಿ ಕಲ್ಪನೆಗೇ

೬. ಉದಾಹರಣೆಗೆ, ಜಾರ್ಜ್ ಗಾಮೋನ 'ಟಾಂಪ್ಕಿನ್ಸ್'ನ ಸಾಹಸಗಳು SF–ಕಿಂತ ರೋಚಕವಾಗಿದ್ದರೂ SF-ಅಲ್ಲ. ಹಾಗೆ ಜಾರ್ಜ್ ಗಾಮೋ ಕೂಡ ಹೇಳಿಲ್ಲ.

ಬೆಲೆ ಕೊಟ್ಟು ವಿಜ್ಞಾನವನ್ನು ವಿಪರ್ಯಾಸಗೊಳಿಸಿದರೆ, (ಉದಾ : ಬೆಟ್ಟದಷ್ಟು ದೊಡ್ಡ ಪರಮಾಣುಗಳಿವೆಯೆಂದು ಒಬ್ಬ ಉತ್ಸಾಹಿ ಲೇಖಕ ಬರೆದರೆ) ಆದರಿಂದ ಎಷ್ಟೇ ಸುಂದರ ಕಥಾರಚನೆಯಾದರೂ ಅದು **ವೈಜ್ಞಾನಿಕ** ಕಥೆಯಾಗಲಾರದು.

ಐತಿಹಾಸಿಕ ಕಥಾಲೇಖಕರಿಗೂ, SF–ಲೇಖಕರಿಗೂ ಇನ್ನೂ ಒಂದು ಸಾಮ್ಯವಿದೆ. (ಆದರೆ ಈ ಸಾಮ್ಯದಲ್ಲಿ ಐತಿಹಾಸಿಕ ಕಥಾಲೇಖಕನೇ ಅದೃಷ್ಟ ಶಾಲಿ.) ಅದೆಂದರೆ ಇಬ್ಬರೂ ಕಥೆ ಹೇಳುವ ಕಲೆ ಸಾಧಿಸಿಕೊಂಡಿರಬೇಕು. ಅದು ಇತಿಹಾಸವೇ ಇರಲಿ, ಸಾಮಾಜಿಕ ಸಮಸ್ಯೆಯೇ ಇರಲಿ ಅಥವಾ ಪ್ರಣಯವೇ ಇರಲಿ, ಲೇಖಕ ಸಾಹಿತ್ಯಜ್ಞರಿಗೆ ಒಪ್ಪಿತವಾಗುವಂತೆ ಕಥೆ (ಅಥವಾ ಕಾದಂಬರಿ) ಬರೆಯುವ ಕಲೆ ಸಾಧಿಸಿರಲೇಬೇಕು. ಕಥಾಲೇಖನದ ಮೂಲತತ್ತ್ವ-ಗಳನ್ನರಿಯದವ ಅದೆಷ್ಟೇ ಪ್ರತಿಭಾನ್ವಿತ ಲೇಖನ ಬರೆದರೂ ಅದು ಕಥೆಯಾಗಲಾರದು. ಆದ್ದರಿಂದ SF–ಲೇಖಕ ಉತ್ತಮ ಕತೆಗಾರನಾಗಿರ ಬೇಕಾದುದು ಅವನ ಪ್ರಥಮ ಅರ್ಹತೆ. ಆದರೆ ಇತಿಹಾಸದ ಸತ್ಯವನ್ನು ಕಥೆಯಾಗಿ ಹೇಗೆ ನಿರೂಪಿಸಬೇಕೆಂದು ಐತಿಹಾಸಿಕ ಕಥಾಲೇಖಕನ ಸಮಸ್ಯೆ. ಇದಕ್ಕಾಗಿ ಅವನು ಬಹಳ ಪೇಚಾಡಬೇಕಾಗಿಲ್ಲ; ಶೂರತನದ, ತ್ಯಾಗದ, ಅನುಪಮ ಪ್ರೇಮದ ಉದಾಹರಣೆಗಳು ಇತಿಹಾಸದಲ್ಲಿ ಪುಟಪುಟಕ್ಕೂ ಸಿಗುತ್ತವೆ. ಇದೇ ಸೌಲಭ್ಯ SF–ಲೇಖಕನಿಗಿಲ್ಲ. ವಿಜ್ಞಾನದ ಪುಟಗಳು ಆದೆಷ್ಟೇ ಅದ್ಭುತ ವಿಷಯಗಳಿಂದ ಕೂಡಿದ್ದರೂ ಜನಮನದಲ್ಲಿ ಮೂಡಿಸಬಲ್ಲ ಯಾವ ಹೃದಯವ್ಯಾಪಾರವೂ ಅಲ್ಲಿ ನಡೆದಿರುವುದಿಲ್ಲ. [ನಿಜವಾಗಿ ನೋಡಿದರೆ, ಕಥೆ ಓದುವ 'ಹುಚ್ಚಿ'ದ್ದವರು ವಿಜ್ಞಾನದ ಅದ್ಭುತಲೋಕದಲ್ಲಿ ಕರೆದೊಯ್ಯುವ ಇಂಥ ಪುಟಗಳನ್ನು ಓದುವ ಚಟಕ್ಕೆ ಒಮ್ಮೆ ಬಲಿಯಾದರೆ ಅವರು ಕಾಲ್ಪನಿಕ ಕಥೆಗಳನ್ನು ಸಂಪೂರ್ಣ ತಿರಸ್ಕರಿಸುವಂತೆ ಮಾಡುತ್ತವೆ ವಿಜ್ಞಾನದ ಈ ಪುಟಗಳು !]

ಈ ಹಿನ್ನೆಲೆಯಲ್ಲಿ ಕಥಾವಸ್ತುವನ್ನು ಆಯ್ದುಕೊಳ್ಳಲು ಒಂದು ಸೂತ್ರ ಸಿಕ್ಕಂತಾಯಿತು. ಕಥೆ ಯಾವ ವಿಭಾಗದಲ್ಲಿರಬೇಕೆಂದು ನಿರ್ಣಯಿಸಿದನಂತರ, ಅದರಲ್ಲಿ ಕಲ್ಪನೆ–ವಿಜ್ಞಾನಗಳ ಪ್ರಮಾಣ ಮತ್ತು ಬೆಸುಗೆ ಎಷ್ಟರಮಟ್ಟಿಗೆ ಇರಬೇಕೆಂದು ವಿಚಾರಿಸಬೇಕು. ಈ ಕಲ್ಪನೆಯ ವಿಷಯದಲ್ಲಿ ಮತ್ತೆ ಎರಡು ಅಂಶಗಳಿವೆ; ಒಂದು : ಕಥೆಗೆ ಬೇಕಾದ ಪಾತ್ರಗಳು, ಸನ್ನಿವೇಶ ಇತ್ಯಾದಿ ಕಲ್ಪಿಸುವುದು. (ಇದು ಉಳಿದ ಕಥೆಗಾರರಿಗೂ ಇದ್ದ ಸಮಸ್ಯೆಯೇ!) ಎರಡು : ವಿಜ್ಞಾನದ ಯಾವುದೇ ಸಂಗತಿಯನ್ನು ಕಲ್ಪನಾತ್ಮಕವಾಗಿ ಕಥೆಯ ಚೌಕಟ್ಟಿಗೆ ಸರಿಯಾಗಿ ಹೊಂದುವಂತೆ ರೂಪಿಸುವುದು ; ಇದಕ್ಕೆ ನನ್ನ ಒಂದು ಕಥೆಯ ಉದಾಹರಣೆಯನ್ನೇ ಕೊಡುವೆ. ಆ ಕಥೆಯ ಕಲ್ಪನೆ–ಹೊಳವು ನನ್ನ ತಲೆ ಯಲ್ಲಿ ಹೇಗೆ ಮೂಡಿ ಮೈದಾಳಿತೆಂದು ವಿವರಿಸುವೆ.

ಒಂದು ನವೀನತಮ ಸಂಶೋಧನೆಯನ್ನು ಕಲ್ಪಿಸಿ ಅದರ ಉಪಯೋಗ ಕಥೆಯಲ್ಲಿ ಮಾಡಬೇಕೆಂದು ನಿರ್ಧರಿಸಿದೆ. ಸಿನಿಮಾತಂತ್ರದಲ್ಲಿ ಪ್ರೇಕ್ಷಕರಿಗೆ ಸ್ಪರ್ಶಾಭಾಸವಾಗುವಂತೆ ಮಾಡಿದರೆ ಹೇಗೆಂಬ ಹುಚ್ಚು ನನ್ನ ತಲೆಯಲ್ಲಿ ಹೊಕ್ಕಿತು. ಇದೊಂದರಿಂದಲೇ ನೂರಾರು ಸನ್ನಿವೇಶಗಳನ್ನು ಕಲ್ಪಿಸಿ ಕಥೆ ಬರೆಯಬಹುದು. ವಾಚಕರಿಗೆ ಈ ತೆರದ ಅದ್ಭುತ ಸಂಶೋಧನೆಯ ಬಗೆಗೆ ನಂಬಿಕೆ ಹುಟ್ಟಿಸಲು 'ಫೋಟೋ-ಎಲೆಕ್ಟ್ರಿಕ್ ಎಫೆಕ್ಟ್' ತಂದುದಾಯಿತು. ಚಲನ ಚಿತ್ರವಿಜ್ಞಾನಕ್ಷೇತ್ರದಲ್ಲಿ ಸಂಶೋಧನೆ ನಡೆಸುತ್ತಿದ್ದ ಒಬ್ಬ ವಿಜ್ಞಾನಿಯನ್ನು ಕಲ್ಪಿಸಿದ್ದಾಯಿತು. 'ಸಿನೆರಮಾ', 'ಸರ್ಕಾರಮಾ' ಪದಗಳಂತೆ 'ಸ್ಪರ್ಶ' ಅರ್ಥ ಬರುವ ಟಚ್ (touch) ಶಬ್ದವನ್ನು ಉಪಯೋಗಿಸಿ—'ಟಚೀರಮಾ'[೭] ಎಂಬ ಹೆಸರನ್ನೂ ಈ (ಕಾಲ್ಪನಿಕ) ಸಂಶೋಧನೆಗೆ ಕೊಟ್ಟದ್ದಾಯಿತು. ಇನ್ನು ಈ ಸಂಶೋಧನೆ ಜನತೆಯ ಗಮನ ಸೆಳೆಯಬೇಕಾದರೆ ಏನಾದರೂ ಅದ್ಭುತ ಘಟನೆ ಅಥವಾ ಅನಿರೀಕ್ಷಿತಘಟನೆ ನಡೆಯಿತೆಂದು ಹೇಳಬೇಕಷ್ಟೇ? ಅಂಥ ಘಟನೆ ಈ ಸಂಶೋಧನೆಯ ಬಗೆಗೆ ಜೀವಂತ ಕಲ್ಪನೆಯನ್ನು ವಾಚಕರಿಗೆ ಕೊಡದಿದ್ದರೆ, ಅಥವಾ ಶ್ರೀಸಾಮಾನ್ಯನೊಬ್ಬನ ಜೀವನಕ್ಕಷ್ಟೇ ಸಂಬಂಧಪಟ್ಟರೆ ವಾಚಕರೇ ಅನಾಸ್ಥೆ ತಳೆಯುವ ಭೀತಿಯಿದೆ. ಉದಾಹರಣೆಗೆ, ಈ ಟಚೀರಮಾ ಪ್ರದರ್ಶನ ನೋಡಲು ಪ್ರಣಯಿಗಳು ಹೋದಾಗ, ರಜತಪರದೆಯೊಳಗಿಂದ ಯುವತಿಯೊಬ್ಬಳ ಆಕಾರ ಮುಖ ಚಾಚಿ ಕಥಾನಾಯಕನಿಗೆ (ಪ್ರೇಕ್ಷಕನಾಗಿದ್ದವ) ಮುತ್ತು ಕೊಟ್ಟಂತೆ ಭಾಸವಾಗಿ, ನಮ್ಮ ಈ ಪ್ರಣಯಿಗಳ ನಡುವೆ ವಿರಸವಾದಂತೆ ಕಥೆ ಬರೆಯಬಹುದು. ಆದರೆ ಇಷ್ಟರಿಂದಲೇ 'ಟಚೀರಮಾ' ವಿಜ್ಞಾನದ ಅದ್ಭುತಸಂಶೋಧನೆಯೆಂದು ವಾಚಕರ ಮೇಲೆ ಪರಿಣಾಮವಾಗಬಲ್ಲದೇ? ಈಗ ಕಥೆಯನ್ನು ನಾನು ಬರೆದಂತೆ ನೋಡೋಣ. ಟಚೀರಮಾ ತಂತ್ರದಿಂದ ಒಬ್ಬ ರಾಜಕೀಯ ಮಹತ್ವದ ವ್ಯಕ್ತಿಯ ಕೊಲೆ ಮಾಡಲು ಯೋಜನೆಯಾಗಿತ್ತೆಂದು ಬರೆದರೆ, ಅದಕ್ಕಿಂತ ಕುತೂಹಲಜನಕ ವಿಷಯ ಬೇರೆ ಸಿಕ್ಕೀತೆ?

ಕಥಾವಸ್ತು ರೋಮಾಂಚಕವಿದ್ದಷ್ಟು ಅದರ ಹಿನ್ನೆಲೆಯ ವಿಜ್ಞಾನ ಓದುಗರನ್ನು ಹೆಚ್ಚುಹೆಚ್ಚಾಗಿ ಆಕರ್ಷಿಸುತ್ತದೆ. ಅದೆಷ್ಟೇ ರೋಮಾಂಚಕ ವೈಜ್ಞಾನಿಕ ಕಲ್ಪನೆಯಿದ್ದರೂ, ಅದರ ಸುತ್ತ ರಸಭರಿತ ಕಥಾಜಾಲ ಹರಡದಿದ್ದರೆ ಆ ಕಥೆ ಸಪ್ಪೆಯಾಗುತ್ತದೆ. ಪತ್ತೇದಾರಿ ಕಥೆಗಳಲ್ಲಿಯಂತೆ ರಹಸ್ಯಭೇದಕ ಅಥವಾ ರೋಮಾಂಚಕ ವಿಷಯಗಳನ್ನೇ SF–ಕಥೆಗಾರ ಹೆಚ್ಚಾಗಿ ಏಕೆ ಆರಿಸಬೇಕೆಂದು ಸವಾಲು ಹಾಕಿದವರಿದ್ದಾರೆ. ವಿಜ್ಞಾನದ ಬಗೆಗೆ ಜನಸಾಮಾನ್ಯರಲ್ಲಿ 'ಅಜ್ಞಾತ ಶಕ್ತಿ, ಅಜ್ಞಾತ ಜಗತ್ತು, ಸರ್ವಶಕ್ತ ರಾಕ್ಷಸ, ತರ್ಕಬದ್ಧ ಬೌದ್ಧಿಕ

೭. 'ಟಚೀರಮಾ' ಎಂಬ ಪದ ನಾಳೆ ಯಾರಾದರೂ ಚಲನಚಿತ್ರ ತಯಾರಕರು ಬಳಸಿಕೊಳ್ಳಲು ಇಚ್ಛಿಸಬಹುದು ಕೂಡ!

ಕಸರತ್ತು, ಐಂದ್ರಜಾಲಿಕ' ಇತ್ಯಾದಿ ವಿಚಿತ್ರ ಕಲ್ಪನೆಗಳು ಮನೆಮಾಡಿ-ಕೊಂಡಿವೆ. ಅಲ್ಲಾಉದ್ದೀನನ ಮಾಯಾದೀಪ ಅಥವಾ ಮಾಂತ್ರಿಕನ ದಂಡ ಸಣ್ಣ ಮಕ್ಕಳಿಗೆ ಹೇಗೆ ಮೆಚ್ಚುಗೆಯೋ ಹಾಗೆ ಪ್ರಬುದ್ಧ ವಾಚಕರಿಗೆ ವಿಜ್ಞಾನದ ಆವಿಷ್ಕಾರ ಮತ್ತು ಸಾಧನೆಗಳು. ಈ ವಿಜ್ಞಾನಲೋಕದಲ್ಲಿ ವಾಚಕನನ್ನು ಲೇಖಕನು ಕರೆದೊಯ್ದಾಗ, ವಾಚಕನು ಸಹಸಾ ಸಣ್ಣ-ಮಗುವಿನಂತೆ ಬೆರಗಾಗಿ ತನ್ನನ್ನೇ ಮರೆಯುತ್ತಾನೆ. ಓದುಗನ ಈ ಮಾನಸಿಕ ದುರ್ಬಲತೆಯೊಡನೆ ಚೆನ್ನಾಟವಾಡಬಲ್ಲ SF-ಲೇಖಕ ಯಶಸ್ವೀ ಲೇಖಕನಾಗುವ ನೆಂಬುದರಲ್ಲಿ ಸಂಶಯವಿಲ್ಲ. ವೆಲ್ಸನ 'ಜಗತ್ತುಗಳ ಯುದ್ಧ' (War of the Worlds) ಕಥೆಯು (ಅದು ಕಾದಂಬರಿ ರೂಪದಲ್ಲಿದೆ) ರೇಡಿಯೋ ರೂಪಾಂತರ ಅಮೇರಿಕದಲ್ಲಿ ಪ್ರಥಮ ಸಲ ಬಿತ್ತರಿಸಲ್ಪಟ್ಟಾಗ ಅದು ಇತಿಹಾಸವನ್ನೇ ನಿರ್ಮಿಸಿತು! ಶ್ರೋತೃಗಳ ಮೇಲೆ ಹೆಚ್ಚು ಪರಿಣಾಮ ಬೀರಲು ನಿವೇದಕನು ಹೊಸ ತಂತ್ರ ಉಪಯೋಗಿಸಿದ್ದ. ರೇಡಿಯೋ ಆಲಿಸುತ್ತಿದ್ದವರಿಗೆ ವಿಶೇಷ ವಾರ್ತಾಪ್ರಸಾರವೆಂಬಂತೆ ಹೀಗೆ ಸಂದೇಶ ಬಂದಿತು: 'ಆಗೋ! ವಿಚಿತ್ರ ವಾಹನಗಳಲ್ಲಿ ಮಂಗಳಲೋಕವಾಸಿಗಳು ಸಾವಿರಾರು ಸಂಖ್ಯೆಯಲ್ಲಿ ಭೂಮಿಗಿ-ಳಿದುಬಿಟ್ಟದ್ದಾರೆ. ಎಲ್ಲೆಲ್ಲೂ ಹಾಹಾಕಾರವಾಗತೊಡಗಿದೆ. ನಮ್ಮ ರಕ್ಷಣಾಪಡೆ ಇವರನ್ನು ಹಿಮ್ಮೆಟ್ಟಲು ಯತ್ನಿಸುತ್ತಿದ್ದಾರೆ....'[೮] ಆ ವರ್ಣನೆ ಎಷ್ಟು ಆಭಾಸ-ಕಾರಿಯಾಗಿತ್ತೆಂದರೆ, ಅದನ್ನು ನಂಬಿ ಅಮೆರಿಕದ ಮುಖ್ಯ ಪಟ್ಟಣಗಳಲ್ಲಿ ಜನ ಭಯಭೀತರಾಗಿ ಬೀದಿಗಿಳಿದುಬಿಟ್ಟದ್ದರು! ಇಂಥ ಘಟನೆಗಳು ಮತ್ತೆ ಆಗ-ಬಾರದೆಂದು ಹಿಂದಿನಿಂದ ರೇಡಿಯೋ ಪ್ರಸಾರದ ನಿಯಮಾವಳಿಯಲ್ಲಿ ವಿಶೇಷ ತಿದ್ದುಪಡಿಯಾಯಿತಂತೆ! ಮಾಂತ್ರಿಕರಿಗೆ ಅಥವಾ ರಾಕ್ಷಸರಿಗೆ ಹೆದರುವ ಮಕ್ಕಳಿಗೂ, ಮಂಗಳಲೋಕದ ಕಾಲ್ಪನಿಕ ಜೀವಿಗಳಿಗೆ ಹೆದರುವ ಪ್ರೌಢರಿಗೂ ಏನು ಅಂತರವುಳಿಯಿತು ?

SF-ಕಥೆಗಳಿಗೆ ವಸ್ತು ಮತ್ತು ಕಲ್ಪನೆಗಳನ್ನು ದೊರಕಿಸುವುದು ಕಠಿಣವೇನಲ್ಲ. ಇವುಗಳ ಕ್ಷೇತ್ರ ಅಪಾರವಾಗಿದೆ. ಸಾಮಾಜಿಕ ಅಥವಾ ಐತಿಹಾಸಿಕ ಕಥೆಗಳನ್ನು ಸಾವಿರಾರು ಬರೆದಮೇಲೆ ಒಂದು ತಲೆಮಾರಿನ ಲೇಖಕರು ಬೌದ್ಧಿಕ 'ದಿವಾಳಿ' ತೆಗೆಯಬಹುದು; ಆದರೆ SF-ಲೇಖಕರಿಗೆ ಈ ಚಿಂತೆಯಿಲ್ಲ. ಮತ್ತು ಅವರ ಕಲ್ಪನೆ ಮತ್ತು ವಸ್ತು ಎಂದೂ 'ದಿವಾಳಿ' ತೆಗೆಯಬೇಕಿಲ್ಲ. ಪರ-ಮಾಣುವಿನಿಂದ ಹಿಡಿದು ಪ್ರಚಂಡ ನಕ್ಷತ್ರಗಳವರೆಗೆ, ಭೌತವಿಜ್ಞಾನದಿಂದ ಹಿಡಿದು ಭೂಗರ್ಭಶಾಸ್ತ್ರದವರೆಗೆ ಇವರ ಕ್ಷೇತ್ರ ವ್ಯಾಪಿಸಿದೆ. ಅದರು ಗ್ರಹಾಂತರಯಾನ (ಅದರಲ್ಲೂ ಚಂದ್ರ ಅಥವಾ ಮಂಗಳಕ್ಕೆ ಪ್ರಯಾಣ

೮. ಇಲ್ಲಿ ಉಲ್ಲೇಖಿಸಿದ ಘಟನೆ ನಿಜವಿದ್ದರೂ, ಆ ಸಂದೇಶದ ವಾಕ್ಯಗಳು ಮಾತ್ರ ನನ್ನ ಕಲ್ಪನೆಯವೇ.

ಮತ್ತು ಪರಮಾಣು ಬಾಂಬುಗಳಂಥ 'ಚರ್ವಿತಚರ್ವಣ'ಗಳ ಮೇಲೆಯೇ ಲೇಖಕರು ಮೇಲಿಂದ ಮೇಲೆ ಬರೆದಿದ್ದರೆ ಅದು ವಾಚಕರ ಅಭಿರುಚಿ ತೋರಿಸುತ್ತದೆ. SF-ವಾಚಕವೃಂದ (ಇತರ ವಾಚಕರಂತೆ) ಕೆಲವೊಂದು ವಸ್ತು ಮತ್ತು ಕಲ್ಪನೆಗಳನ್ನು ಒಮ್ಮೆಲೆ ಸ್ವಾಗತಿಸುತ್ತದೆ. ಕನ್ನಡಸಾಹಿತ್ಯದಲ್ಲಿ ವಾಚಕರ ಅಭಿರುಚಿಯನ್ನು ನಿರ್ದೇಶಿಸಿ ರೂಪಿಸುವ ಮಹತ್ವದ ಹೊಣೆಗಾರಿಕೆ SF-ಲೇಖಕರ ಮೇಲಿದೆ. ಇನ್ನೂ ಕನ್ನಡ ಓದುಗರಿಗೆ SF ತೀರ ಹೊಸದು. SF-ತಂತ್ರದ ದುರುಪಯೋಗ ಮಾಡಿಕೊಂಡು ಸಾಮಾನ್ಯ ತರಗತಿಯ ನೀರಸ ವೃತ್ತಾಂತಗಳನ್ನು ಪೋಣಿಸಿ SF-ಕಥಾಲೇಖಕನೆನಿಸಿಕೊಳ್ಳುವ 'ಸೌಲಭ್ಯ' ಕನ್ನಡ ಲೇಖಕನಿಗಿದೆ. ಆದ್ದರಿಂದ ಈಗ ನಾವು ಬಹಳ ಎಚ್ಚರಿಕೆಯಿಂದ ಕಾಲಿಟ್ಟು ಸತ್‌ಸಂಪ್ರದಾಯ ಹಾಕಿಕೊಡಬೇಕು.

ಸಾಹಿತಿಗಿರಬೇಕಾದ ಪ್ರಾಮಾಣಿಕತೆಗಳು ಹಲವು. ಅವನು ಆರಿಸಿದ ವಸ್ತು, ಪಾತ್ರ, ಕಥೆಯ ಬೆಳವಣಿಗೆ ಮತ್ತು ಹಿನ್ನೆಲೆ ಸ್ವತಃ ತನಗೇ ದೋಷಪೂರ್ಣ ಅಥವಾ ಹೊಂದಾಣಿಕೆಯಿಲ್ಲದ್ದೆಂದು ಕಂಡುಬಂದಾಗ, ಈ ಗೊಂದಲವನ್ನು ಆತ ಓದುಗರ ತಲೆಗೆ ಮುಟ್ಟಿಸುವ ಶ್ರಮ ತೆಗೆದುಕೊಳ್ಳಬಾರದು. ತಾನು ಬರೆಯಬೇಕೆಂದಿರುವ ಕಥೆ—ಸಾಹಿತ್ಯಿಕ ಮೌಲ್ಯಗಳುಳ್ಳದಾಗಬೇಕಿದ್ದರೆ—ತಲೆಯಲ್ಲಿ ನೂರೆಂಟು ವೇಷ ತಾಳಿ ಕುಣಿಯಬೇಕು; ಕನಸು ಮನಸುಗಳಲ್ಲಿ ಬಿಡದ ರೋಗದಂತೆ ಅಂಟಬೇಕು; ಮೇಲಾಗಿ, ಇನ್ನು ಬರೆಯದಿರಲು ಸಾಧ್ಯವೇ ಇಲ್ಲವೆಂದು ಕೈಚೆಲ್ಲಿ, ಲೇಖಕನನ್ನು ಬರೆಯಲು ಹಚ್ಚಬೇಕು. ಕಲೆಯ ಜೀವಂತ ಉಗಮವೇ ಹೀಗೆ; ಇದಾವ ಸಂಭ್ರಮವೂ ಇಲ್ಲದೆ ಪ್ರತಿಷ್ಠೆಗಾಗಿ ಒತ್ತಾಯದಿಂದ ಬರೆಯಲ್ಪಟ್ಟ ಕಥೆ ಕಥೆಯೇ ಅಲ್ಲ. ಈ ಮಾತನ್ನು SF-ಲೇಖಕ ಸಾಹಿತಿಯಾಗಲು ಯೋಚಿಸುವ ಮೊದಲೇ ಮನಸ್ಸಿನಲ್ಲಿಟ್ಟುಕೊಳ್ಳುವದೊಳಿತು.

೭. ವೈಜ್ಞಾನಿಕ ಕಥೆಗಳ ನಿರೂಪಣೆ:

ಸಾಮಾನ್ಯವಾಗಿ ಕಥೆಗಳನ್ನು ಹೇಳುವ ಯಾವ ಪದ್ಧತಿಯೂ SF-ಕ್ಕೆ ಹೊಂದುತ್ತದೆ. ಆದರೆ ಇಲ್ಲಿ ಒಂದು ಹೊಸ ಪ್ರಶ್ನೆ ಉದ್ಭವಿಸುತ್ತದೆ: ಕಥೆಯ ಓಟ ನಿಲ್ಲಿಸಿ, ರಸಾಸ್ವಾದನೆಗೆ ಭಂಗ ಬಾರದಂತೆ, ಸಂಬಂಧಪಟ್ಟ ವಿಜ್ಞಾನವನ್ನು ಎಲ್ಲಿ ಮತ್ತು ಹೇಗೆ ಸೇರಿಸಬೇಕೆಂಬುದೇ ಆ ಪ್ರಶ್ನೆ. ಓದುಗನು ದೀರ್ಘ ವೈಜ್ಞಾನಿಕ ವಿವರಣೆ ಅಥವಾ ಗಹನ ವಿಷಯಗಳನ್ನು (ಅದೂ ಕಥೆ ಓದುವಾಗ) ಸಹಸಾ ಸ್ವಾಗತಿಸುವದಿಲ್ಲವೆಂದು SF-ಲೇಖಕ ನೆನಪಿಡಬೇಕು. ಆದರೆ ಕೆಲವೊಮ್ಮೆ ಇಂಥ ಗಡಚಾದ ವಿಷಯಗಳ ವಿವರಣೆ ಎಷ್ಟು ಅನಿವಾರ್ಯವಾಗುತ್ತದೆಂದರೆ, ಅದಿರದಿದ್ದರೆ ಕಥೆಯೇ ಮುಂದುವರಿಯದಿರಬಹುದು. ಈ

ಸಂದಿಗ್ಧಕ್ಕೆ ಬೇಕಾದಷ್ಟು ಪರಿಹಾರಗಳಿವೆ. ಮುಖ್ಯವಾಗಿ, ವೈಜ್ಞಾನಿಕ ವಿವರಣೆಗಳು ಸಾಧ್ಯವಿದ್ದಷ್ಟು ಸ್ಪಷ್ಟ ಮತ್ತು ಸರಳವಾಗಿರಬೇಕು, ಮತ್ತು ಅವಶ್ಯವಿದ್ದಷ್ಟೇ ಇರಬೇಕು. ಕಥೆಯನ್ನು ಎಂದೂ ವಿಜ್ಞಾನದ ವಿವರಣೆ ಅಥವಾ ಸಮಸ್ಯೆಗಳಿಂದ ಪ್ರಾರಂಭಿಸಬಾರದು. ಒಮ್ಮೆ ಓದುಗನು ಕಥೆಯಲ್ಲಿ ತಲ್ಲೀನನಾದಾಗ ಅವನಿಗೆ ಗೊತ್ತಾಗದಂತೆ ನಡುವೆಯೇ ಇಂಥ ವಿಜ್ಞಾನ ತರಬೇಕು. ಅದಲ್ಲದೆ, ಕಥೆಯ ಪ್ರಾರಂಭದಿಂದಲೇ, ಇಂಥ ವಿವರಣೆ ಮುಂದೆ ಬೇಕೆಬೇಕೇಂದು ಓದುಗನು ನಿರೀಕ್ಷಿಸುವಂತೆ, ಸಾವಕಾಶವಾಗಿ ಹಿನ್ನೆಲೆಯಲ್ಲಿ ಸ್ವಲ್ಪ ಸ್ವಲ್ಪ ವಿಜ್ಞಾನವನ್ನು 'ಸಿಂಪಡಿಸ'ಬೇಕು. ನನ್ನ 'ಜಲಜೀವಿಗಳು' ಕಥೆ ಒಂದು ಮುಂಜಾನೆ ಡಾ. ಪೂಲರು ರಹಸ್ಯಮಯವಾಗಿ ಮಾಯವಾದ ಕುತೂ-ಹಲಕಾರಕ ಸನ್ನಿವೇಶದಿಂದ ಪ್ರಾರಂಭವಾಗುತ್ತದೆ. ಅಥವಾ 'ಕ್ಷ-ದೃಷ್ಟಿ' ವಿಜ್ಞಾನಿಯೊಬ್ಬರ ವಿಚಿತ್ರ ಚಾಳೀಸು ಕಳುವಾದ ಘಟನೆಯಿಂದ ಪ್ರಾರಂಭ-ವಾಗುತ್ತದೆ. ಸಾಮಾನ್ಯ ಪತ್ತೇದಾರಿ ಕಥೆಗಳಂತೆ ಇದನ್ನೂ ವಾಚಕ ಓದುತ್ತ ಹೋದಂತೆ, ಅವನಿಗೆ ಆ ಘಟನೆಗಳ ಹಿಂದಿನ ವೈಜ್ಞಾನಿಕ ಮಹತ್ವ ಅರಿಯುವ ಕುತೂಹಲ ಹೆಚ್ಚುತ್ತಹೋಗುತ್ತದೆ. ಕಥೆಯ ನಡುವೆ ಸರಳವಾಗಿ ಮತ್ತು ಸಂಕ್ಷಿಪ್ತವಾಗಿ ಅದರ ವೈಜ್ಞಾನಿಕ ಹಿನ್ನೆಲೆ ಕೊಟ್ಟಿದ್ದೇನೆ.

SF-ಕಥಾನಿರೂಪಣೆಯಲ್ಲಿ ಇನ್ನೊಂದು ಗಮನಿಸಬೇಕಾದ ವಿಚಾರ-ವೆಂದರೆ ಶೈಲಿ. SF-ಲೇಖಕ ತನ್ನದೇ ಆದ ಹೊಸ ಶೈಲಿ ಹುಡುಕಲು ಶ್ರಮ-ಪಡಬೇಕಿಲ್ಲ. ಉಳಿದ ಕಥೆಗಾರರಂತೆ ಆತ ಕೂಡ ಎಲ್ಲರಿಗೂ ತಿಳಿಯುವಂತೆ ಬರೆಯುವುದು ಮುಖ್ಯ. ವೈಜ್ಞಾನಿಕ ಹಿನ್ನೆಲೆ ಮತ್ತು ಸನ್ನಿವೇಶಗಳನ್ನು ಬಳಸಿಕೊಳ್ಳುವಾಗ ಮಾತ್ರ ಆತ ಎಚ್ಚರಿಕೆ ವಹಿಸಬೇಕು. ಅಂಥಲ್ಲೆಲ್ಲ ಭಾಷೆ ಸಾಧ್ಯವಿದ್ದಷ್ಟು ವಿಚಾರ ಮತ್ತು ವಸ್ತುನಿಷ್ಠವಾಗಿರಬೇಕೇ ಹೊರತು ಭಾವನಾ ಪ್ರಧಾನವಾಗಿರಬಾರದು. ಅಲ್ಲಿ ಅನವಶ್ಯಕ ಅಲಂಕಾರ-ವರ್ಣನೆಗಳು ಕೆಲವೊಮ್ಮೆ ಕಥೆಯನ್ನೇ ಶಿಥಿಲಗೊಳಿಸಬಹುದು. ಕಥೆಯಲ್ಲಿನ ಒಂದು ಪಾತ್ರವೇ (ವಿಶೇಷ-ವಾಗಿ ಒಬ್ಬ ವಿಜ್ಞಾನಿಯ ಪಾತ್ರ) ಇಂಥ ವಿವರಣೆ ಅಥವಾ ವರ್ಣನೆ ಕೊಡುವಂತೆ ಮಾಡಿದರೆ, ಲೇಖಕ ಓದುಗರ ಸಹಾನುಭೂತಿ ಕಳೆದುಕೊಳ್ಳುವದಿಲ್ಲ. ಅದರಂತೆ ವಿಜ್ಞಾನದ ಪದಗಳನ್ನು ಬಳಸುವಾಗ ಕೂಡ ಎಚ್ಚರಿಕೆ ವಹಿಸಬೇಕು. ಕೆಲವೊಮ್ಮೆ 'ಟಚೀರಮಾ', 'ಸೈಕಾಟ್ರಾನ್', 'ಮೆಂಟಾನ್' ಇತ್ಯಾದಿ ಯೋಗ್ಯ-ಪದಗಳನ್ನು ಕಲ್ಪಿಸಿ ಉಪಯೋಗಿಸಿದರೆ ಕಥೆ ಪರಿಣಾಮಕಾರಿಯಾಗುವುದಲ್ಲದೆ, ಲೇಖಕ ವೈಯಕ್ತಿಕವಾಗಿ ಭಾಷಾಶಾಸ್ತ್ರಜ್ಞರಿಗೆ 'ನುರಿಸಲು' ಹೊಸ ಶಬ್ದಗಳ ಕಾಣಿಕೆ ಕೊಟ್ಟ ಶ್ರೇಯಃಪಾತ್ರನಾಗುತ್ತಾನೆ.

ನನ್ನ 'ಸ್ವಪ್ನದರ್ಶಿ'ಯಲ್ಲಿ ಕೆಲವು ವೈಜ್ಞಾನಿಕ ವಿರೋಧಾಭಾಸಗಳನ್ನು ಓದುಗರಿಗೆ ತಿಳಿಸಲು ವಿಜ್ಞಾನಿಗಳ ಸಂಭಾಷಣೆಯನ್ನೇ ಉಪಯೋಗಿಸಿ-

ಕೊಂಡಿದ್ದೇನೆ. ಈ ತಂತ್ರದಿಂದ ಕೆಲವು ವಿವರಣೆ ಓದುಗನಿಗೆ ತಿಳಿಯದಿದ್ದರೂ (ತಿಳಿಯಬಾರದೆಂದು ಕೂಡ ಕೆಲವೊಮ್ಮೆ ಲೇಖಕ ಉದ್ದೇಶಿಸಿರಬಹುದು!) ಆತ ಲೇಖಕನ ಮೇಲೆ ಸಿಟ್ಟಾಗಲಾರ; ಏಕೆಂದರೆ ಮೂಲ ಕಥೆಯ ಓಟಕ್ಕೆ ಭಂಗತರುವ ಅನವಶ್ಯಕ ವಿಚಾರ ಕೈಬಿಟ್ಟಷ್ಟು ಆತ ಲೇಖಕನಿಗೆ ಕೃತಜ್ಞ-ನಾಗುತ್ತಾನೆ.

ಬೇರೆ ಕಥೆಗಳಂತೆಯೇ SF-ದಲ್ಲಿ ಕೂಡ ವಾಸ್ತವಿಕತೆಯ ಭ್ರಮೆ ಬರುವಂತೆ ಬರೆದರೆ ಕಥೆ ನೇರವಾಗಿ ಹೃದಯಕ್ಕೆ ನಾಟುತ್ತವೆ. ಕಥೆಯಲ್ಲಿ ವಾಚಕ ತಾದಾತ್ಮ್ಯಹೊಂದುವಂತೆ ಮಾಡುವುದು ಸುಲಭವೇನಲ್ಲ, ಆದರೆ ಅದು ತೀರ ಅಪೇಕ್ಷಣೀಯ.

೭. ವೈಜ್ಞಾನಿಕ ಕಥೆಗಳ ಆದರ್ಶ ಮತ್ತು ಉದ್ದೇಶ :

ವೈಜ್ಞಾನಿಕ ಕಥೆಗಳನ್ನು ಏಕೆ ಬರೆಯಬೇಕೆಂದು ಯಾರಾದರೂ ವ್ಯಾವ-ಹಾರಿಕ ಬುದ್ಧಿಯವರು ಕೇಳಬಹುದು. ಸಾಹಿತ್ಯವೇಕೆ ಬೇಕೆಂಬ ಪ್ರಶ್ನೆಯ ಉತ್ತರವೇ ಇಲ್ಲಿಯೂ ಸಿಗುತ್ತದೆ. ಒಂದು ಉತ್ತಮ SF-ಕಥೆ ವಾಚಕರ ಮನಸ್ಸನ್ನು ಸೆರೆಹಿಡಿದು ಅವರ ಮಧುರ ಅನುಭವದೆಳೆಗಳಲ್ಲಿ ಒಂದಾದರೆ, ಅದು ತನ್ನ ಕಲಾಸಿದ್ಧಿ ಪಡೆದಂತೆ. ಸಾಮಾಜಿಕ ಕಥೆಗೆ ಸಮಾಜದಲ್ಲಿರುವ ಸಮಸ್ಯೆ-ಗಳನ್ನು ಹೇಗೆ ಎತ್ತಿ ತೋರಿಸುವ ಉದ್ದೇಶವಿರುವುದೋ, ಐತಿಹಾಸಿಕ ಕಥೆಗೆ ಇತಿಹಾಸದ ಕೆಲವು ಘಟನೆಗಳನ್ನು ಹೇಗೆ ಎತ್ತಿ ತೋರಿಸುವ ಉದ್ದೇಶ-ವಿರುತ್ತದೆಯೋ, ಹಾಗೆ SF-ಕ್ಕೆ ಕೂಡ ಕೆಲವು ಮೂಲ ಉದ್ದೇಶವಿಲ್ಲದಿಲ್ಲ. SF-ದ ವಿಭಾಗಗಳಿಂದ ಇದು ಸ್ಪಷ್ಟವಾಗುತ್ತದೆ. ಇಲ್ಲಿ ಸಂಕ್ಷಿಪ್ತವಾಗಿ SF-ದ ಉದ್ದೇಶವನ್ನು ಹೀಗೆ ಹೇಳಬಹುದು :

(i) ಕಥೆಕಾದಂಬರಿಗಳ ರಸಾಸ್ವಾದನೆ ಮಾಡಿಸುವುದು. (ಇದು ಎಲ್ಲ ಸಾಹಿತ್ಯಕ್ಕೂ ಅನ್ವಯಿಸುತ್ತದೆ.)

(ii) ವಿಜ್ಞಾನದ ಕೆಲವು ವಿಶೇಷ ಸಂಗತಿ ಸಂಶೋಧನೆಗಳ ಪರಿಚಯ ಮಾಡಿಕೊಡುವುದು.

(iii) ವಿಜ್ಞಾನದ ಮೂಲ ಮೌಲ್ಯಗಳು ಮನುಷ್ಯನ ಜೀವನದಲ್ಲಿ ಹೇಗೆ ಹಾಸುಹೊಕ್ಕಾಗಿವೆಯೆಂದು ತೋರಿಸುವುದು.

(iv) ವಿಜ್ಞಾನಯುಗದಲ್ಲಿ ಮನುಷ್ಯನ ಭವಿಷ್ಯವೇನೆಂದು 'ಕಾಲಜ್ಞಾನ' ನುಡಿಯುವುದು.

(v) ವಿಜ್ಞಾನಿಗಳಿಗೇ ನವೀನತಮ ಕಲ್ಪನೆ ಕೊಟ್ಟು ಅವುಗಳ ಮಹತ್ವ ಸೂಚಿಸುವುದು.

(vi) ವಿಜ್ಞಾನ ಮತ್ತು ಸಮಾಜಗಳ ನಡುವೆ ವಿಚಾರಸೇತುವೆ ನಿರ್ಮಿಸುವುದು.

(vii) ಮನುಷ್ಯಕುಲದ ವಿಶಿಷ್ಟ ಹೆಚ್ಚಳವಾದ ಕನಸುಗಾರಿಕೆಯ ಪ್ರವೃತ್ತಿಗೆ ನೀರೆರೆದು ಸಂತೃಪ್ತಿ ಪಡಿಸುವುದು.

(viii) ಮೇಲಿನ ಯಾವ ಉದ್ದೇಶಗಳೂ ಇರದೆ ಕಥೆಗಾಗಿ ಕಥೆ ಬರೆಯುವುದು.

ಇತರ ವಿಷಯಗಳಂತೆ ಇಲ್ಲಿ ಕೂಡ ನಿರ್ದಿಷ್ಟ ವಿಂಗಡನೆ ಮಾಡಲು ಬರುವಂತಿಲ್ಲ. ಆದರೂ SF–ಕಥೆಗಾರ—ಆತ ಎಚ್. ಜಿ. ವೆಲ್ಸ್ ಅಥವಾ ಫ್ರೆಡ್ ಹಾಯ್ಲ್‌ರಷ್ಟು ಉನ್ನತಸ್ಥಾನದಲ್ಲಿರದಿದ್ದರೆ—ಸ್ವಸಂತೋಷಕ್ಕಾಗಿ ಕಥೆ ಬರೆದರೂ ಸಾಕು. ವಿದೇಶಗಳಲ್ಲಿ SF–ಸಾಹಿತ್ಯಕ್ಕೆ ಅದ್ಭುತ ಪ್ರಚಾರ ಮತ್ತು ಬೇಡಿಕೆಯಿದೆ. ಪತ್ರಿಕೆಗಳಿಗಾಗಿ, ಚಲನಚಿತ್ರಗಳಿಗಾಗಿ, ಕಾಮಿಕ್ಸ್ ಚಿತ್ರಮಾಲೆಗಳಿಗಾಗಿ ಅಲ್ಲಿ SF-ಲೇಖನವನ್ನೇ ವೃತ್ತಿಯಾಗಿಸಿಕೊಂಡವರೂ ಇದ್ದಾರೆ. SF–ಕ್ಕಾಗಿ ಮೀಸಲಾದ ಪ್ರಮುಖ ಪತ್ರಿಕೆಗಳೇ ಅಲ್ಲಿ ಲಕ್ಷಗಟ್ಟಲೆ ಓದುಗರನ್ನು ಆಕರ್ಷಿಸುತ್ತವೆ. ಅಂಥ ಪತ್ರಿಕೆಗಳಿಗೆ ಪ್ರಥಮ ದರ್ಜೆಯ ವಿಜ್ಞಾನಿಗಳ ಕೂಡ ಕಥೆ ಬರೆಯುವುದುಂಟು. ಇಷ್ಟು ಮಾತ್ರ ನಿಜ : SF–ಲೇಖಕ— ಅವನು ಯಾವ ದೇಶ ಅಥವಾ ಭಾಷೆಯವನೇ ಆಗಿರಲಿ—ಸ್ವಲ್ಪ ಶ್ರದ್ಧೆಯಿಂದ ಮತ್ತು ತಾಳ್ಮೆಯಿಂದ ತನ್ನ ಕಾರ್ಯ ನಿರ್ವಹಿಸಿದರೆ ಅವನು ಮಾರುಕಟ್ಟೆಯಲ್ಲಿ ಉಳಿದವರಿಗಿಂತ ಬೇಗ ಯಶಸ್ವಿಯಾಗುವ ಸಂಭವವಿದೆ. ವಿಜ್ಞಾನದ ಭಾಷೆ ಅಂತರಾಷ್ಟ್ರೀಯ ಭಾಷೆಯಂತಿದ್ದುದರಿಂದ—ಸರಿಯಾದ ಪ್ರಚಾರ ಸಿಕ್ಕರೆ—ಯಾವುದೇ SF–ಲೇಖಕ ಕೂಡ ಅಂತರಾಷ್ಟ್ರೀಯ ಖ್ಯಾತಿ ಸಹಜವಾಗಿ ಗಳಿಸಬಹುದು. ಕನ್ನಡಿಗರ ಮತ್ತು ಕನ್ನಡ ಸಾಹಿತ್ಯದ ದುರ್ದೈವದಿಂದ ಇಂಥ ಉತ್ತಮ ಕ್ಷೇತ್ರ ಇದುವರೆಗೆ ಉಪೇಕ್ಷಿಸಲ್ಪಟ್ಟಿದೆ. ನಮ್ಮ ನೆರೆಯ ಮಲೆಯಾಳಿಗಳು SF–ದಲ್ಲಿ ಸುಮಾರು ಸಾಧನೆ ಮಾಡಿದ್ದಾರೆ. ಎಂದಿನಂತೆ ಅನುವಾದಪ್ರಿಯರಾಗಿ ನಾವೂ SF–ಬರೆದಿದ್ದೇವೆ ಎಂದು ಹೇಳಿಕೊಳ್ಳುವ ಬದಲು ಈಗ ಸ್ವತಂತ್ರವಾಗಿ ಕಾರ್ಯಪ್ರವೃತ್ತರೇಕಾಗಬಾರದು? ಬರೆಯುವವರಿಗೆ ಪ್ರೋತ್ಸಾಹಿಸಲು ಪತ್ರಿಕೆಗಳು, ಪುಸ್ತಕ ಪ್ರಕಾಶಕರು, ಚಲನಚಿತ್ರ ನಿರ್ಮಾಪಕರು ಮುಂದೆ ಬಂದರೆ SF–ಸಾಹಿತ್ಯ ಕೂಡ ಕನ್ನಡದಲ್ಲಿ ಕಣ

ತೆರೆಯಬಹುದು. ಈ ಶತಮಾನದ ಉತ್ತರಾರ್ಧದಲ್ಲಿದ್ದ ನಾವು ಈಗ SF–ಸಾಹಿತ್ಯದ ಏಳ್ಗೆ ಕಾಣುವಂತಾಗದಿದ್ದರೆ ನಮಗೇ ಎಂಥ ಅಪಾರ ನಷ್ಟವೆಂದು ಪ್ರಾಜ್ಞರು ಗಂಭೀರವಾಗಿ ಆಲೋಚಿಸಿ ತಕ್ಕ ಪ್ರಯತ್ನ ಕೈಕೊಳ್ಳಬೇಕು.

ಸಂಗಮದ ಅಂಗಳ

ಬಿ. ಎಂ. ಮಾಗಿ

ಸಂಗಮದ ಅಂಗಳದಿ ಮಂಗಳದ ಸುಸ್ವನವು
ಶುಭಮಸ್ತು ಶುಭಮಸ್ತು ಮೊಳಗುತ್ತಿದೆ
ಬಂದವರ, ಬರುವವರ, ನಿಂದವರ, ನೆರೆದವರ
ಕಂಗಳಲಿ ಶ್ರೀಕಾರ ಬರೆಯುತ್ತಿದೆ

ಓಂಕಾರದೊಳಗಿರುವ ಝೇಂಕಾರ ಹೊಮ್ಮಿದೊಲು
ಗಂಟೆಯಾ ಗಣಗಣವು ನುಡಿಯುತ್ತಿದೆ
ಶರಣಸತಿ ಲಿಂಗಪತಿ ಲಿಂಗಾಂಗ ರೂಪಾಗಿ
ಶೂನ್ಯದಲಿ ಸಾಕಾರ ಕೆತ್ತುತ್ತಿದೆ

ಮಂತ್ರಮಜ್ಜನಗೈದು, ತೀರ್ಥಸಿಂಚನಗೈದು
ಶ್ರೀಪ್ರಸಾದ ವಿತರಣ ಸಾಗುತ್ತಿದೆ
ಕಾಯಿ–ಕರ್ಪುರ ತಂದು ಮಂಗಳಾರತಿ ಎತ್ತಿ
ಅಬ್ಬರದ ಭಕ್ತಿ ಧುಮ್ಮಿಕ್ಕುತ್ತಿದೆ

ಬೆಳಕು ಬೆಳಕನೆ ಕೂಡಿ ಥಳಕು ಥಳಕಾಗಿರಲು
ಮಂದಸ್ಮಿತದ ನೆರೆಯು ತುಳುಕುತ್ತಿದೆ
ಶರಣೆಂದ ಶರಣರಿಗೆ ಕರುಣೆಯೇ ಕೃಪೆಯಾಗಿ
ಹರಜಟಾಜೂಟದಿಂ ಇಳಿಯುತ್ತಿದೆ

ನದಿಯು ಬೊಗಸೆಯು ನಡುವೆ ನೆನೆವ ಲಿಂಗನ ಕಾಂತಿ
ಐಕ್ಯತೆಗೆ ಮಂಗಲವ ಹಾಡುತ್ತಿದೆ
ಹೃದಯಪುಷ್ಪವ ತಂದು, ಭಾವಗಂಧವ ಬಳೆದು
ಹರಕೃಪಾಂಬುಧಿಯೊಳಗೆ ತೇಲುತ್ತಿದೆ □ □

ಪಾಲಿ

(ವ್ಯುತ್ಪತ್ತಿ ಹಾಗೂ ಅರ್ಥ)

ಬಿ. ಎಸ್. ಕುಲಕರ್ಣಿ

" ಇಂಡಿಯನ್ ಹಿಸ್ಟಾರಿಕಲ್ ಕ್ವಾರ್ಟರ್ಲಿ "ಯ ಹಳೆಯ ಸಂಪುಟಗಳನ್ನು ತಿರುವುತ್ತಲಿರುವಾಗ " ಪಾಲಿ "(ಭಾಷೆ)ಯ ನಿಷ್ಪತ್ತಿಯ ಬಗೆಗೆ ನಡೆದ ಚರ್ಚೆಯೊಂದು ನನ್ನ ಗಮನಕ್ಕೆ ಬಂದಿತು. (ಸಂಪುಟ ೪, ಪುಟ ೨೨೩, ಮತ್ತು ಸಂಪುಟ ೨, ಪುಟ ೩೨೨). ಪ್ರಾಚೀನ ಭಾರತದ ಸಂಸ್ಕೃತಿಯ ಇತಿಹಾಸದ ದೃಷ್ಟಿಯಿಂದ ಪಾಲಿಯಂತಹ ಉಪಯುಕ್ತ ಹಾಗೂ ದೊಡ್ಡ ಭಾಷೆಯ ಖಚಿತವಾದ ಅರ್ಥವನ್ನು ತಿಳಿಯುವದರಲ್ಲಿ ನಾನೂ ಆಶೆಯುಳ್ಳವನಾಗಿದ್ದೆ. ಕಾರಣ ಮೇಲಿನ ಚರ್ಚೆಯು ನನ್ನ ಗಮನವನ್ನು ಸೆಳೆಯಿತು.

ಡಾಕ್ಟರ ವಾಲೆಸರರು (ಸಂ. ೪ರಲ್ಲಿ) " ಪಾಲಿ "ಯ ನಿಷ್ಪತ್ತಿ " ಪಾಟಲಿಪುತ್ರ "ದಿಂದ ಆಗಿರಬೇಕೆಂದು ಹೇಳುತ್ತಾರೆ. ಅಂದರೆ ಆ ಪಟ್ಟಣದ ಭಾಷೆಯೆಂದು ಅದಕ್ಕೆ ಆ ಹೆಸರು ಬಂತು ಎಂಬುದು ಅವರ ಅಭಿಪ್ರಾಯ. ಆದರೆ ಒಂದು ನಗರ ಅಥವಾ ಪಟ್ಟಣದಿಂದ ಇಡೀ ಕ್ಷೇತ್ರದ, ಒಂದು ಜನಾಂಗದ ಭಾಷೆಯು ತನ್ನ ಹೆಸರನ್ನು ಪಡೆಯುತ್ತಿದೆಯೆಂಬುದು ಹೆಚ್ಚು ಅಸಂಭವನೀಯ. ಯಾವುದೇ ಭಾಷೆಯ ಇತಿಹಾಸದಲ್ಲಿ ಇಂತಹ ಮಾದರಿಯ ಉದಾಹರಣೆಗಳು ಸಿಕ್ಕುವದಿಲ್ಲ. ಆದರೂ ಅವರು ಹಾಗೆ ಹೇಳುವದರಲ್ಲಿ ಅಲ್ಪವಾದರೂ ಸತ್ಯಾಂಶವು ಇಲ್ಲದಿಲ್ಲವೆಂಬುದು ನನ್ನ ಮತ. ಇದನ್ನು ಮುಂದೆ ನೋಡಬಹುದು.

ಈ ಚರ್ಚೆಯ ಅಂಗವಾಗಿ ಪುಟ್ಟ ಲೇಖವೊಂದನ್ನು (ಸಂ. ೨ರಲ್ಲಿ) ಬರೆದ ಶ್ರೀ ಎಸ್. ವಿ ವಿಶ್ವನಾಥ ಅವರು " ಪಾಲಿ "ಯು " ಪಾಳಿ "ಯಿಂದ ನಿಷ್ಪತ್ತಿಯಾಗಿವೆಯೆಂದು ಬರೆಯುತ್ತಾರೆ. " ಪಾಳಿ " ಎಂದರೆ " ಮುನಿಗಳ ವಾಸಸ್ಥಾನ " ಅಥವಾ " ಮಸೀದೆ ". ಇವರ ಹೇಳಿಕೆಯು ಸತ್ಯಕ್ಕೆ ಸಮೀಪವಿದ್ದರೂ ಸಂಪೂರ್ಣ ಸತ್ಯವಲ್ಲ. ಏಕೆಂದರೆ " ಮುನಿಗಳ ವಾಸಸ್ಥಾನ " ಅಥವಾ " ಮಸೀದೆ "ಯಿಂದ ಒಂದು ಭಾಷೆ ತನ್ನ ಹೆಸರನ್ನು ಪಡೆಯುತ್ತದೆಂದು ಹೇಳುವುದೂ ಅಷ್ಟೊಂದು ಗ್ರಾಹ್ಯವಾಗಲಾರದು. ಅಂದರೆ " ಪಾಳಿ "ಯಿಂದ ನಿಷ್ಪತ್ತಿಯಾಗಿದೆಯೆಂಬುದು ಸತ್ಯವಿರುವ ಶಕ್ಯತೆ ಇದೆ. ಆದರೆ "ಪಾಳಿ" ಶಬ್ದಕ್ಕೆ ಅವರು ಹೇಳಿದ ಅರ್ಥ ಮಾನ್ಯವಾಗುವದಿಲ್ಲ. ಏಕೆಂದರೆ ಭಾಷೆ ಮೈದಾಳುವದು ಸಾಮಾಜಿಕ ಪರಿಸರದ ವ್ಯವಹಾರದಲ್ಲಿಯೇ ಹೊರತು ಯಾವದೇ ಪಟ್ಟಣ ಅಥವಾ ಒಂದು ವಿಶಿಷ್ಟ ಗುಡಿ ಅಥವಾ ಮುನಿಗಳ ವಾಸಸ್ಥಾನದಲ್ಲಿ ಅಲ್ಲ. ಆದರೆ

ಇವೆಲ್ಲ ಭಾಷೆಗೆ ಪೋಷಕವಾದ ಕಾರಣಗಳಾಗಬಲ್ಲವೇ ಹೊರತು ಅವೇ ಕೇವ
ಉಗಮಸ್ಥಾನವಾಗಲಾರವು.

ಜನರು ಪಶುಪಾಲನೆ ಮಾಡುತ್ತ ಬೇರೆ ಬೇರೆ ಪ್ರದೇಶಗಳಲ್ಲಿ ತಿರುಗುತ್ತ
ಕಾಲಕಳೆಯುವ ಕಾಲವೊಂದಿತ್ತು. ಈ ಕಾಲದಲ್ಲಿ ಬಹುಶಃ ಜನಾಂಗದ ಹೆಸ
ಭಾಷೆಗೆ ಬಂದಿತೆಂದು ಕಾಣುತ್ತದೆ. ಆದರೆ ಮುಂದೆ ಜನಾಂಗವು ಒಂದೇ ಕಡೆ
ವಾಸಿಸಲು ಆರಂಭಿಸಿದಮೇಲೆ ಅವರು ವಾಸಿಸುವ ಪ್ರದೇಶದ ಹೆಸರು ಭಾಷೆ
ಬಂದುವು.

ಶ್ರೀ ಎಸ್. ವಿ. ವಿಶ್ವನಾಥರು ತಮಿಳು ಶಬ್ದಕೋಶದಿಂದ "ಪಾಳಿ"ಯ
ಅರ್ಥವನ್ನು ಈ ರೀತಿ ಕೊಟ್ಟಿದ್ದಾರೆ: ಪಾಳಿ=ಮುನಿವರ ವಾಸಮ್. ಅಂದ
ಮುನಿಗಳ ವಾಸಸ್ಥಾನ ಅಥವಾ ಮಠೀದೆ. ಈ ಅರ್ಥವು ಸರಿಯೇ! ಆದರ
"ಪಾಳಿ"ಯ ಅರ್ಥ ಇದೊಂದೇ ಅಲ್ಲ. "ಪಾಳಿ" ಎಂದರೆ ಮುನಿವರ ವಾಸವ
ಎಂಬುದು ಯಾವದೇ ಸಂದರ್ಭದಲ್ಲಿ ಬರುವ ವಿಶೇಷಾರ್ಥ ಮಾತ್ರ. ಆದ
"ಪಾಳಿ" ಅಥವಾ "ಪಳ್ಳಿ"ಗಳು ಉತ್ತರ ಭಾರತದಲ್ಲಿ ಕ್ರಿಸ್ತಶಕದ ಆರಂಭದಿಂದಲ
ರೂಢವಾಗಿದ್ದುದನ್ನು ನಾವು ಕಾಣುತ್ತೇವೆ. ಸಂಸ್ಕೃತದಲ್ಲಿ "ಪಲ್ಲಿ" ಎಂದ
ಗುಡಿಸಲು, ಮನೆ, ಕಾಡು ಜನಾಂಗಗಳ ಸ್ಥಾನವೆಂದು ಅರ್ಥವಿದೆ. ದ್ರಾವಿ
ಭಾಷೆಗಳಲ್ಲಿ "ಪಳ್ಳಿ" ಎಂದರೆ ಮನುಷ್ಯರು ಮಲಗುವ ಸ್ಥಳ, ಸಣ್ಣ ಕ
ಹೆಗ್ಗಣ ಅಥವಾ ಇಲಿಯ ಬಿಲವೆಂದು ಅರ್ಥವಿದೆ.

"ಪಾಳಿ", "ಪಳ್ಳಿ", "ಪಲ್ಲಿ"[1] ಈ ಶಬ್ದಕ್ಕೆ "ವಾಸಸ್ಥಾನ"ವೆಂಬ ಅರ್ಥ
ಹೇಗೆ ಬಂದಿತೆಂಬುದನ್ನು ಅರಿಯಲು ಈ ಶಬ್ದದ ಮೂಲ ಅರ್ಥವೇನೆಂಬುದನ
ನಾವು ತಿಳಿಯುವ್ರದವಶ್ಯ.

ಸಂಸ್ಕೃತದಲ್ಲಿಯ "ಪಲ್ಲಿ" ಈ ಶಬ್ದದ ಮೂಲ ಆರ್ಯೇತರ ಭಾಷೆಗಳಲ್ಲಿ ಇ
ವೆಂಬುದು ಆಧುನಿಕ ಭಾಷಾಶಾಸ್ತ್ರಜ್ಞರ ಅಭಿಮತವಾಗಿದೆ. ದಕ್ಷಿಣ ಭಾರತ
ತುಂಬ "ಪಾಳ್ಯ"ಗಳು ಹರಡಿಕೊಂಡಿರುವುದನ್ನು ನಾವು ನೋಡುತ್ತೇ
ಸಂಸ್ಕೃತದ "ಪಾಲಯ" ಶಬ್ದದಿಂದ ಈ "ಪಾಳ್ಯ"ವು ಬಂದಿರುತ್ತದೆಂ
ಕೆಲವು ಪಂಡಿತರು ತಿಳಿಯುತ್ತಾರೆ. ಪಾಳಯಗಾರರ ಸೈನ್ಯಗಳ ಗುಂಪುಗಳ
ವೆಂದೂ ಹಾಗೂ ಅಲ್ಲಿಂದ ಅವರು ಕೆಲವೊಂದು ಕ್ಷೇತ್ರವನ್ನು ಆಳುತ್ತಿದ್ದರೆಂ

೧. "ಪಟ್ಟಿ", "ಪಾಡಿ", — "ಪಾಳಿ" — ಇವರ ಹೆಚ್ಚಿನ ಅಭ್ಯಾಸಕ್ಕಾಗಿ ಶ್ರೀ ಶಂ. ಬಾ.
ಜೋಶಿ ಅವರ ಕೆಳಗಿನ ಲೇಖನಗಳನ್ನು ನೋಡಬಹುದು.
1. "ಪಟ್ಟಿ", "ಪಾಡಿ", "ಪಾಳಿ" — ಭಂಡಾರಕರ ಓರಿಯಂಟಲ್ ರಿಸ
ಇನ್ಸ್ಟಿಟ್ಯೂಟ್, ಪೂನಾ, ಸಂಪುಟ 33, ಪುಟಗಳು 41-56, 1953 A.D.
(2) "ಕ್ಷೇ[illegible]" —
(i) "ಮರಾಠಿ ಸಾಹಿತ್ಯ ಪರಿಷತ್ಪತ್ರಿಕೆ", ಪೂನಾ, 1956.
(ii) "ನವಭಾರತ", ಬಾಂಬೆ, 1954.

ಅರ್ವಾಚೀನ ಇತಿಹಾಸವನ್ನು ಓದಿದವರಿಗೆಲ್ಲ ತಿಳಿದ ವಿಷಯ. ಪಾಳೆಗಾರ (ಪಾಲಯತಿ + ಇತಿ)ದಿಂದ ಆ ಕ್ಷೇತ್ರವು "ಪಾಳ್ಯ"ವಾಯಿತು. ಆದರೆ ಮೊನಿಯರ ವಿಲಿಯಮ್ಸ್ ಎಂಬ ವಿದ್ವಾಂಸರು "ಪಾಲಯ" ಈ ಶಬ್ದವು ಇಂಡೋ-ಯುರೋಪಿಯನ್ ಶಬ್ದವೇ ಎಂಬುದಕ್ಕೆ ಸಂಶಯಪಡುತ್ತಾರೆ. ಆ ಶಬ್ದದ ಬಗ್ಗೆ ಅವರು ಹೀಗೆ ಉದ್ಗಾರ ತೆಗೆದಿದ್ದಾರೆ. "as perhaps invented to account for Pālayati– "ಪಾಲಯತಿ" ಎಂಬುದರ ಅಸ್ತಿತ್ವವನ್ನು ಸ್ಥಿರಪಡಿಸುವ ಸಲುವಾಗಿ ಈ ಶಬ್ದವು ಬಹುಶಃ ಸಿದ್ಧಮಾಡಲ್ಪಟ್ಟಿದೆ." ಇದರಿಂದ "ಪಾಳ್ಯ"ವು "ಪಾಳಿ"ಯ ಸಂಸ್ಕೃತದ ರೂಪವೆಂದು ಮೇಲಿಂದೇ ಕಾಣುತ್ತದೆ.

"ಪಡು" ಎನ್ನುವ ಮೂಲರೂಪವು ಎಲ್ಲ ದ್ರಾವಿಡ ಭಾಷೆಗಳಲ್ಲಿಯೂ ಇದೆ.

"ಪಡು"— to come into existance, to appear, to incline: to lean over, to suffer, to put up with, to be buried; to spread at as bedding, to lie horizontally, to lie down, to sleep (as birds) etc. (ತಮಿಳ ಲೆಕ್ಸಿಕಾನ್).

"ಪಡು"— (i) to lie down, to repose, to go down;
(ii) to experience, to feel, to suffer (ಕಿಟೆಲ್ ಕನ್ನಡ-ಇಂಗ್ಲಿಷ್ ಶಬ್ದಕೋಶ).

ದ್ರಾವಿಡ ಭಾಷೆಗಳ ವೈಲಕ್ಷಣ್ಯವೆಂದರೆ—ಒಂದೇ ಶಬ್ದವು ಕ್ರಿಯಾ ಹಾಗೂ ನಾಮ ಇವೆರಡರ ಅರ್ಥವನ್ನೂ ಕೊಡುತ್ತದೆ.

"ಪಡು"— (ನಾಮ)— a place (hollow or hole) of refuge (for wild animals) between stones or rocks (ಕಿಟೆಲ್).

"ಪಟ್ಟಿ" < "ಪಡು"— cow stall; sheep fold; cattle pond; hamlet; village; place (small village) (ತಮಿಳ ಲೆಕ್ಸಿಕಾನ್).

"ಪಟ್ಟಿ"—a place of living down; i.e pen or fold; an abode; a hamlet; ಉದಾಹರಣೆಗಾಗಿ "ತುರುಕಾರಪಟ್ಟಿ" (ಕಿಟೆಲ್ ಕನ್ನಡ-ಇಂಗ್ಲಿಷ್ ಶಬ್ದಕೋಶ).

ಪಟ್ಟು < ಪಡು—a hamlet, a small town (ತಮಿಳ ಲೆಕ್ಸಿಕಾನ್).

ಆರ್ಯ-ದ್ರಾವಿಡ ಸಂಪರ್ಕದಿಂದಾಗಿ ಎರಡೂ ಜನಾಂಗಗಳ ಭಾಷೆಗಳಲ್ಲಿ ಶಬ್ದಗಳ ಉಚ್ಚಾರಣೆಯಲ್ಲಿ ಬದಲಾವಣೆ ಕಂಡುಬರುವಂತಾಯಿತು.

ಉದಾ :– ಮಾರ್ಗ > ಮಗ್ಗ > ಮಾಗ; ವ್ಯಾಘ್ರ > ವಗ್ಘ > ವಾಘ. ಅದರಂತೆ "ಪಟ್ಟಿ"ಯು "ಪಾಟಿ" ಅಥವಾ "ಪಾಡಿ" ಎಂದಾಯ್ತು.

"ಪಾಡಿ"—a hamlet, quarter, pastoral village, town or city (ತಮಿಳ).

"ಪಾಡಿ"— a hamlet, a village, a settlement (ಕಿಟೆಲ್).

ಈ ಅರ್ಥವನ್ನು ಕೊಡುವ ಇದೇ ಶಬ್ದವು ಕೇವಲ ಮಹಾರಾಷ್ಟ್ರದಲ್ಲಿಯಲ್ಲ, ಇಡೀ ಉತ್ತರ ಭಾರತದಲ್ಲೆಲ್ಲ ರೂಢಿಯಲ್ಲಿದೆ. ಉತ್ತರ ಭಾರತದ ಪ್ರಾಚೀನ ಶಾಸನಗಳಲ್ಲಿ "ಪಾಡಿ"ಗಳ ಉಲ್ಲೇಖವಿದೆ. ಮಾತನಾಡುವ ಭಾಷೆಯಲ್ಲಿ "ಪಾಡಿ"ಯು "ಪಾಟೀ" ಆಗುತ್ತದೆ. ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಹಳ್ಳಿ ಅಥವಾ ಊರು ಅಥವಾ ವಾಸಸ್ಥಾನ (village, settlement) ಎಂಬ ಅರ್ಥ ಕೊಡುವ ಅನೇಕ "ಪಾಟೀ"ಗಳಿವೆ. ಈ ದೃಷ್ಟಿಯಿಂದ ಗುಜರಾತದಲ್ಲಿರುವ "ಪಾಟೀ-ಠಾಣಾ" ಎಂಬ ಊರಿನ ಹೆಸರು ಮನೋರಂಜಕವಾಗಿದೆ. "ಪಾಟೀ-ಠಾಣಾ" ಇದು ದ್ವಿರುಕ್ತಿ. ಇಲ್ಲಿ ಒಂದೇ ಅರ್ಥವನ್ನು ಕೊಡುವ ಎರಡು ಶಬ್ದಗಳನ್ನು ಸೇರಿಸುವ ಅಗತ್ಯವೇನಿತ್ತು? ದ್ವಿರುಕ್ತಿಗಳಲ್ಲಿ ಪ್ರಾರಂಭದ ಶಬ್ದವು ತನ್ನ ಅರ್ಥ-ವನ್ನು ಕಳೆದುಕೊಂಡಾಗ ಅದೇ ಅರ್ಥವನ್ನು ಕೊಡುವ ರೂಢಿಯಲ್ಲಿದ್ದ ಶಬ್ದವನ್ನು ಉಪಯೋಗಿಸುವುದು ಅಗತ್ಯವಾಗುತ್ತದೆ– ಅನಿವಾರ್ಯವಾಗುತ್ತದೆ.[೨]

---

೨. ಪುಣೆ(ಮಹಾರಾಷ್ಟ್ರ)ಯ ಹತ್ತಿರ ಇರುವ "ಫಲ್ಟಣ" ಈ ಊರಿನ ಪ್ರಾಚೀನ ಹೆಸರು "ಪಟಿಯಠಾಣಾ" ಎಂದಿತ್ತು. ನನ್ನ ಅಭಿಪ್ರಾಯದಲ್ಲಿ ಇದು ಮೇಲೆ ಹೇಳಿದಂತೆ "ಪಾಟೀಠಾಣಾ". ೧೩ನೆಯ ಶತಮಾನದ ಮಹಾನುಭಾವ ಸಾಹಿತ್ಯದಲ್ಲಿ ಈ ಹೆಸರು "ಫಲಿ-ಠಾಣಾ" ಎಂದು ಉಕ್ತವಾಗಿದೆ. ಈ ತರಹದ ಬದಲಾವಣೆಗೆ (ಅಕ್ಷರಗಳ ವ್ಯತ್ಯಾಸಕ್ಕೆ) ಮರಾಠಿಯ ವಿಶಿಷ್ಟ ಉಚ್ಚಾರಣಾಕ್ರಮವೇ ಕಾರಣ. "ಪಾಟೀ" ಪ್ರಾಚೀನ ಅರ್ಥವನ್ನು ವಿಧಿಸಲು ಇರುವ, ದ್ವಿರುಕ್ತಿ ಶಬ್ದವಾದ "ಠಾಣಾ" ಶಬ್ದ ಇಲ್ಲದೆ ಮಹಾ-ರಾಷ್ಟ್ರದಲ್ಲಿ ಅನೇಕ "ಪಾಟೀ"ಗಳಿವೆ.

ಕೆಲವರು ಇದನ್ನು "ಪಟಿಯಸ್ಥಾಣಾ" ಅಂದರೆ "ಹಳೆಯ ವಸತಿಸ್ಥಾನ" ಎಂದು ಅನುವಾದ ಮಾಡುತ್ತಾರೆ. ಆದರೆ ಕ್ರಿ. ಶ. ೧೨ನೇ ಶತಮಾನದ ಮೊದಲು 'ಹಳೆಯದು, ಪೂರ್ವದ್ದು' ಎಂದು ಅರ್ಥ ಕೊಡುವಂತೆ ವಿಶೇಷಣವಾಗಿ "ಪಟಿಯ" ಉಪಯೋಗ-ವಾದ ಯಾವ ಊರಿನ ಹೆಸರೂ ನಮಗೆ ಇಲ್ಲಿಯ ವರೆಗೆ ದೊರೆತಿಲ್ಲ. ನಮ್ಮ ಈ ವಿಚಾರಕ್ಕೆ ವಿರುದ್ಧವಾಗಿ 'ಹಟೆಯಬೀಡು' ಒಂದು ಒಳ್ಳೆಯ ಉದಾಹರಣೆಯಾಗಿದೆ-ಯೆಂದು ಯಾರಾದರೂ ಹೇಳಬಹುದು. ಆದರೆ ಪ್ರಾಚೀನ ಕಾಲದಲ್ಲಿ "ಪಟೆಯ"ದ ಬದಲು ಯಾವದಾದರೂ ಹಳ್ಳಿ ಅಥವಾ ಪಟ್ಟಣ ಪ್ರಾಚೀನ ಕಾಲದ್ದೆಂದು ತೋರಿಸಲು "ಮುನ್ನ" ಶಬ್ದವು ಉಪಯೋಗಿಸಲ್ಪಡುತ್ತಿತ್ತು. ಉದಾ : ಮುನ್ನವಳ್ಳಿ- "ಮುನ್ನ"ದಂತೆ ಕೆಲವು ಸಲ "ಮುದು"– (ಹಳೆಯ)– ಶಬ್ದವು ಉಪಯೋಗವಾಗುತ್ತಿತ್ತು. ಆದರೆ 'ಪಟಿಯ' ಅಲ್ಲ. ಉದಾ : "ಮುದುವೊಳಲ್." ಆದ್ದರಿಂದ 'ಪಟಿಯಸ್ಥಾಣಾ'ದಲ್ಲಿಯ 'ಪಟೆಯ' ಇದು 'ಪಾಟೀ'ಯ ಅಂದರೆ 'ಹಳ್ಳಿ' ಎಂದು ಅರ್ಥ ಕೊಡುವ ಶಬ್ದದ ಇನ್ನೊಂದು ರೂಪಾಂತರವೆಂಬುದು ಮೇಲೆಯೇ ಸಿದ್ಧವಾಗುತ್ತದೆ. ತಮಿಳು ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಆರಂಭದಲ್ಲಿ 'ಪಟಿಯ' (ಪಟಿ) ಈ ಶಬ್ದವು ಹಣ್ಣಾ-ದದ್ದು, ಕೊಳೆತದ್ದು ಎಂದು ಅರ್ಥ ತೋರಿಸುತ್ತದೆ. ಕಾರಣ ಈ ಶಬ್ದದಲ್ಲಿಯ 'ಕಾಲ'ದ ಕಲ್ಪನೆಯ ಸ್ಥಾನ ಎರಡನೆಯದ್ದಾಗಿದೆ. ಆದರೆ 'ಪ್ರಾಚೀನ ಕಾಲದ್ದು' ಎಂಬ ಅರ್ಥ 'ಮುನ್ನ'ದಲ್ಲಿ ಸ್ಪಷ್ಟವಿದೆ.

' ಪಲ್ಲಿ ', ' ಪಾಡಿ ', ' ಪಳ್ಳಿ ' ಇವು ಊರ ಹೆಸರುಗಳ ಅಂತ್ಯಕ್ಕೆ ಬರುತ್ತವೆ. ಸ್ವತಂತ್ರವಾಗಿಯೂ ಸಿಕ್ಕುತ್ತವೆ.

' ಪಡು ' ಶಬ್ದದ ವಿವಿಧತೆಯಿಂದ ಹಾಗೂ ನಾವೀನ್ಯತೆಯಿಂದ ಕೂಡಿದ ಅರ್ಥಗಳು ಬಹು ಬೆಳಕನ್ನು ಬೀರುವಂತಹವಿವೆ. ಆ ಶಬ್ದವು ಜನರ ಜೀವನ ವಿಕಾಸಕ್ರಮದ ಮೇಲೆಯೇ ಬೆಳಕನ್ನು ಚೆಲ್ಲುತ್ತದೆ. ' ಪಡು ' (ನಾಮ)— a place of refuge between stones or rocks (ಕಲ್ಲುಬಂಡೆಗಳ ನಡುವಿನ ಆಶ್ರಯಸ್ಥಾನ) ಎಂಬುದು, ಅರ್ಥವನ್ನೇ ಅಕ್ಷರಶಃ ನೋಡಿದಾಗ, ಬಹುಶಃ, ಮಾನವನು ಬೇಟೆಯಾಡುತ್ತ ಕಲ್ಲುಬಂಡೆಗಳ ಸಂದುಗಳಲ್ಲಿ ಅಥವಾ ' ಹೊದರು ' ಅಥವಾ ' ತಗ್ಗು 'ಗಳಲ್ಲಿ ವಾಸಿಸುತ್ತಿದ್ದ ಅವಸ್ಥೆಯನ್ನು ಸೂಚಿಸುವಂತಿದೆ.

'ಪಡು' ಅಂದರೆ ಕಲ್ಲುಬಂಡೆಗಳ ನಡುವಿನ ಪೊಳ್ಳುಪ್ರದೇಶ. 'ಪಡು' ಅಥವಾ 'ಪಾಟಿ' ಇದೇ ಅರ್ಥವನ್ನು ಕೊಡುವ ಇನ್ನೊಂದು ಶಬ್ದ 'ಗುಹಾ' ಎಂಬುದು. ಸಾಮಾನ್ಯವಾಗಿ ಸನ್ಯಾಸಿಗಳು ಈ 'ಗುಹೆ'ಗಳಲ್ಲಿಯೇ ಅಂದರೆ 'ಪಡು' ಅಥವಾ 'ಪಾಟಿ'ಗಳಲ್ಲಿಯೇ ವಾಸಿಸುತ್ತಿದ್ದರು. ಶ್ರೀ ವಿಶ್ವನಾಥನ್ ಅವರ ವಿಚಾರಸರಣಿಯಂತೆ 'ಪಾಟಿ'ಯು 'ಮುನಿವರ ವಾಸಮ್' ಅಲ್ಲ. 'ಪಾಟಿ'ಗಳ ಸಂಗಡ 'ಮುನಿ'ಗಳ ಸಂಪರ್ಕ ಬಂದಮೇಲೆ ಈ ಅರ್ಥ ಬಂದಿತು. ಆದ್ದರಿಂದ 'ಮುನಿ'ಗಳಿಗಿಂತ 'ಪಾಟಿ'ಯು ಹೆಚ್ಚು ಪ್ರಾಚೀನವೆಂಬುದು ಸ್ವತಃ ಸಿದ್ಧ-ವಾದಂತಾಯಿತು.

ದ್ರಾವಿಡ ಸ್ಥಲನಾಮಗಳು ಕೇವಲ ಬಂಗಾಲದಲ್ಲಿಯಷ್ಟೇ ಅಲ್ಲ, ಇಡೀ ಉತ್ತರ ಭಾರತದ ತುಂಬೆಲ್ಲ ಸಿಕ್ಕುತ್ತವೆಂಬುದು ಸಂಶಯಾತೀತವಾಗಿ ಸಿದ್ಧವಾಗಿದೆ. ಕಾರಣ ಬಹು ಪ್ರಾಚೀನ ಕಾಲದಿಂದಲೇ ದ್ರಾವಿಡ ಉತ್ಪತ್ತಿಯ 'ಪಾಟಿ'ಯು ಉತ್ತರ ಭಾರತದಲ್ಲಿ ಇದ್ದುದಕ್ಕೆ ಯಾರೂ ಅಚ್ಚರಿಪಡಬೇಕಿಲ್ಲ.

'ಪಟ್ಟಿ' ಇದು 'ಪಡು'ದಿಂದ ಉತ್ಪತ್ತಿಯಾದ ಕ್ರಿಯಾನಾಮ.

'ಪಟ್ಟಿ' ಅಂದರೆ ಮನುಷ್ಯರ ವಾಸಸ್ಥಳ (a place of humam habitation), ಗುಡಿಸಲು (a hut), 'ದನ ಅಥವಾ ಕುರಿಗಳ ದಡ್ಡಿ' (a place of cattle or sheep) ಎಂದೂ ಅರ್ಥವಾಗುತ್ತದೆ. ಇದು ನಿಶ್ಚಯವಾಗಿಯೂ ಜನರು ಬೇಟೆಯಾಡುತ್ತ ತಿರುಗಾಡುತ್ತಿದ್ದ ಕಾಲದ ಮುಂದಿನ ಹಂತ !

'ಪಳ್ಳಿ' ಅಥವಾ 'ಪಾಳಿ' ಇದು ಸಾಮಾನ್ಯವಾಗಿ 'ಹಳ್ಳಿ'ಗಳಿಗೆ ಹೆಸರು. ಪ್ರಾಚೀನ ಮರಾಠಿಯಲ್ಲಿ 'ಹಾಳಿ-ಪಾಳಿ' ಎಂದರೆ 'ಹಳ್ಳಿಗಳು' ಎಂಬ ಒಂದು ನುಡಿ (phrase) ಇದೆ. ಮಹಾರಾಷ್ಟ್ರದ ಮಹಾನುಭಾವ ಪಂಥದ ಸಂಸ್ಥಾಪಕನಾದ ಚಕ್ರಧರನು ತನ್ನ ಕೊನೆಯ ಸಂದೇಶದಲ್ಲಿ ಸಾಮಾನ್ಯ ಮನುಷ್ಯನ ಜೀವನವನ್ನು ಉದ್ಧಾರಮಾಡಲು (जीवोद्धारणार्थ) ಪಟ್ಟಣ (पुरी–पट्टणी)

ಗಳಲ್ಲಿ ವಾಸಿಸದೆ ಹಾಳಿ–ಪಾಳಿ(ह्राढि–पाढि वसाते)ಗಳಲ್ಲಿ ವಾಸಿಸಬೇಕೆಂದು ತನ್ನ ಅನುಯಾಯಿಗಳಿಗೆ ಆಜ್ಞೆ ಮಾಡಿದನು.

'ಪಾಟಿ'ಯು ಸಂಸ್ಕೃತೀಕರಣದ (Sanskritised) ರೂಪ 'ಪಾಲಿ'. ಆದ್ದರಿಂದ ನನ್ನ ಮತದಲ್ಲಿ 'ಪಾಲಿ' ಎಂದರೆ 'ಪಾಟಿ'ಯು ಭಾಷೆ ಅರ್ಥಾತ್ ಹಳ್ಳಿಗಳ ಭಾಷೆ-ಸಾಮಾನ್ಯರ ಭಾಷೆ–ಮೇಲ್ಮಟ್ಟದವರ ಭಾಷೆಯಲ್ಲ!

ಉತ್ತರ ಭಾರತದ 'ನಾಥ' ಪಂಥದವರ ಸಂಪ್ರದಾಯವು ಒಂದಿಲ್ಲೊಂದು ರೀತಿಯಲ್ಲಿ 'ಚಕ್ರಧರ' ಹಾಗೂ 'ಸಂತಜ್ಞಾನೇಶ್ವರ'ರನ್ನು ಉದ್ದೀಪನಗೊಳಿಸಿದೆ. 'ನಾಥ' ಪಂಥದ ಸಂಪ್ರದಾಯಗಳ ಸುಳಿವು ನಂತರದ ಬೌದ್ಧಧರ್ಮದಲ್ಲಿ ಸಿಕ್ಕುತ್ತದೆ. ಸಾಮಾನ್ಯ ಮನುಷ್ಯನನ್ನು ಉದ್ಧರಿಸಬೇಕೆಂಬ ಅನುಕಂಪೆ-ಯಿಂದೊಡಗೂಡಿದ ಉತ್ಸಾಹವನ್ನು, ಬಹುಶಃ ಬೌದ್ಧ ಧರ್ಮದಿಂದ ಪಡೆ-ದಂತಿದೆ—ಚಕ್ರಧರ ಹಾಗೂ ಸಂತಜ್ಞಾನೇಶ್ವರರು! ಸಾಮಾನ್ಯ ಜನರಿಗೆ ತಮ್ಮ ತತ್ತ್ವಗಳನ್ನು ತಿಳಿಸಲು ಮರಾಠಿ(ಭಾಷೆ)ಯನ್ನು ಬಳಸಲು ಆರಂಭಮಾಡಿದವ-ರೆಂದರೆ ಮಹಾರಾಷ್ಟ್ರದ ಈ ಇಬ್ಬರು ಮಹಾತ್ಮರು !!

ಸಂಸ್ಕೃತವು ಮೇಲ್ಮಟ್ಟದವರ ಅರ್ಥಾತ್ ಪಂಡಿತರ ಭಾಷೆಯಾಗಿತ್ತು. ಸಾಮಾನ್ಯ ಮನುಷ್ಯನ ಉದ್ಧಾರವನ್ನೇ ತನ್ನ ಉದ್ದೇಶವನ್ನಾಗಿಟ್ಟುಕೊಂಡ ಗೌತಮ ಬುದ್ಧನು ತನ್ನ ತತ್ತ್ವಗಳನ್ನು ಉಪದೇಶಿಸಲು ಸಾಮಾನ್ಯರ ಭಾಷೆ-ಯನ್ನೇ ಅಂದರೆ 'ಪಾಟಿ'ಗಳ ಭಾಷೆ (ಪಾಟಿಗಳಲ್ಲಿರುವವರ ಭಾಷೆ)ಯನ್ನೇ ಆರಿಸಿದುದು ಸ್ವಾಭಾವಿಕವೇ ಆಗಿದೆ; ಸಮಂಜಸವೂ ಆಗಿದೆ. ಇಂದು ಬೌದ್ಧ ಧರ್ಮದ ತತ್ತ್ವಗಳೆಲ್ಲ 'ಪಾಟಿ', 'ಪಾಲಿ' ಭಾಷೆಯಲ್ಲಿ ಸಿಕ್ಕುತ್ತಲಿವೆಯೆಂಬುದು ನಮಗೆಲ್ಲ ಗೊತ್ತಿದ್ದ ಮಾತಾಗಿದೆ. ಆದ್ದರಿಂದ 'ಪಾಟಿ' ಎಂದರೆ 'ಹಳ್ಳಿ' ಎಂಬುದು ಸಾಮಾನ್ಯ ಅರ್ಥ.[೩]

---

೩. (ಉಚ್ಚಾರಶಾಸ್ತ್ರದ ತೀಕ್ಷ್ಣ ಒರೆಗಲ್ಲಿಗೆ ಹಚ್ಚಿ ಮಾತನಾಡುವುದಾದರೆ— ಪಾಡಿ > ಪಾಟಿ > ಪಾಳಿ > ಪಾಲಿ ಹೀಗೆ ನೇರವಾಗಿ ವ್ಯುತ್ಪತ್ತಿ ಸಿದ್ಧವಿರುವದರಿಂದ ಇವುಗಳ ನಡುವೆ 'ಪಟ್ಟಿ' ಮತ್ತು 'ಪಲ್ಲಿ' ಈ ಶಬ್ದಗಳನ್ನು ತಂದು ತೊಡಕನ್ನು ಹಚ್ಚಿ-ಸುವ ಆವಶ್ಯಕತೆಯಿಲ್ಲ. 'ಪಡು', 'ಪಾಡಿ' ಇವು ದ್ರಾವಿಡ ಭಾಷೆ ಶಬ್ದಗಳೆಂದು ಟಿ. ಬರೋ ಅವರು ಹೇಳಿರುತ್ತಾರೆ.—ಅವರ ಎಟಿಮಾಲಾಜಿಕಲ್ ಡಿಕ್ಶನರಿ ನೋಡಬಹುದು.)

ಬೆಟ್ಟದಜೀವ

(ಪುನರ್ವಿಮರ್ಶೆ)

ಜಿ. ಎಸ್. ಆಮೂರ

I

ಕಾರಂತರ ಅತ್ಯಂತ ಯಶಸ್ವೀ ಕೃತಿಗಳಲ್ಲೊಂದಾದ **'ಬೆಟ್ಟದಜೀವ'**ದ ಬಗ್ಗೆ ಇದುವರೆಗೆ ಬಂದ ವಿಮರ್ಶೆ ಒಂದಿಲ್ಲೊಂದು ಕಾರಣಕ್ಕಾಗಿ ಅಸಮಾಧಾನ ಕರವಾಗಿದೆ. ಈ ಕಾದಂಬರಿಯನ್ನು ವಿಮರ್ಶಿಸಿದ ವಿಮರ್ಶಕರು ಅದನ್ನು ಮುಖ್ಯವಾಗಿ ಪ್ರಾದೇಶಿಕ ಕಾದಂಬರಿ[೧] ಅಥವಾ ಪಾತ್ರಮುಖ್ಯ ಕಾದಂಬರಿ[೨] ಎಂದಾಗಿ ಮಾತ್ರ ಕಂಡಿದ್ದಾರೆ. ಹೀಗಾಗುವುದಕ್ಕೆ ಸ್ವತಃ ಕಾರಂತರೇ ಎಷ್ಟೋ ಮಟ್ಟಿಗೆ ಹೊಣೆಗಾರರಾಗಿದ್ದಾರೆ. **ಹುಚ್ಚು ಮನಸ್ಸಿನ ಹತ್ತು ಮುಖಗಳಲ್ಲಿ ಬೆಟ್ಟದಜೀವ**ವನ್ನು 'ಪ್ರಾದೇಶಿಕ ಚಿತ್ರ'ವೆಂದು ಕರೆದು, ಕಾದಂಬರಿಯ ಮುನ್ನುಡಿಯಲ್ಲಿ,

> 'ಘಟ್ಟದ ಬಳಿಯ ಕಗ್ಗಾಡಿನ ಜೀವನಚಿತ್ರವನ್ನು ಕೊಡಲು ಇಲ್ಲಿ ಯತ್ನಿಸಿದ್ದೇನೆ. ನಾಡಿನ ಕಾಡುಗಳೊಡನೆ ಸೆಣಸಾಡಿ ಜೀವನದ ನೆಲೆಯನ್ನು ನಿಲ್ಲಿಸಿದ ಹಳೆಯ ವೀರರ ಕೆಚ್ಚನ್ನೇ ಇಲ್ಲಿ ಇಂದಿನ ಕಥಾನಾಯಕ ನಾಯಿಕೆಯರಲ್ಲಿ ನೀವು ಕಾಣಬಹುದು'

ಎಂದು ಹೇಳಿ ಕಾದಂಬರಿಯನ್ನು ವಿಮರ್ಶಿಸುವ ರೀತಿಯನ್ನು ನಿರ್ದೇಶಿಸಿದ ಲೇಖಕರ ಅಭಿಪ್ರಾಯಗಳನ್ನೇ ವಿಮರ್ಶಕರು ಸಾಮಾನ್ಯವಾಗಿ ಎತ್ತಿ ಹಿಡಿಯುತ್ತ ಬಂದಿದ್ದಾರೆ. **ಬೆಟ್ಟದಜೀವ**ದಲ್ಲಿ ಗೋಪಾಲಯ್ಯ, ಶಂಕರಿ ಮೊದಲಾದ ಪಾತ್ರಗಳ ಚಿತ್ರಣ ಸುಂದರವಾಗಿದೆಯೆನ್ನುವ ಮಾತನ್ನಾಗಲಿ, ಅಲ್ಲಿ ವರ್ಣಿತವಾದ ದಕ್ಷಿಣ ಕನ್ನಡ ಜಿಲ್ಲೆಯ ಬೆಟ್ಟದ ಜೀವನದ ನಿರೂಪಣೆ ಸತ್ಯನಿಷ್ಠವಾಗಿದೆಯೆನ್ನುವುದನ್ನಾಗಲಿ ಯಾರೂ ಅಲ್ಲಗಳೆಯಲಾರರು. ಆದರೆ ಕೇವಲ ಈ ದೃಷ್ಟಿಗಳಿಂದ

---

೧. '....A fine instance of the novel of locality'—V. K. Gokak: *Contemporary Indian Literature*, 1957, p. 99.

೨. 'ಕಾದಂಬರಿ ಅನ್ನುವದಕ್ಕಿಂತ ಬೆಟ್ಟದ ಮುಡಿಲಿನ ವ್ಯಕ್ತಿಯೊಂದರ ಜೀವನಚಿತ್ರವೆನ್ನಬಹುದು.'—ಆರ್. ಎಸ್. ರಾಮರಾವ: **ಪ್ರಬುದ್ಧ ಕರ್ನಾಟಕ**, ೨೫-೨, ಪು. ೧೪೭.

'ಮುಖ್ಯವಾಗಿ ಈ ಕಾದಂಬರಿ ಪಾತ್ರರಚನೆಯ ಮೇಲೆ ಕಾಲೂರಿ ನಿಂತಿದ್ದಾಗಿದೆ. ಹಾಗೆ ನೋಡಿದರೆ ಸಂವಿಧಾನ ಇಲ್ಲವೇ ಇಲ್ಲವೆನ್ನಬಹುದು.'

—ಕೀರ್ತಿನಾಥ ಕುರ್ತಕೋಟಿ:

ಯುಗಧರ್ಮ ಹಾಗೂ ಸಾಹಿತ್ಯದರ್ಶನ, ಪು. ೨೦೭

ನೋಡಿದರೆ ಈ ಕಾದಂಬರಿಯ ಸಂವಿಧಾನವನ್ನು, ಅದರ ಅರ್ಥವ್ಯಾಪ್ತಿಯನ್ನು ತಿಳಿಯಲಾಗುವುದಿಲ್ಲವೆನ್ನುವುದೂ ಅಷ್ಟೇ ಖಚಿತವಾದ ವಿಮರ್ಶೆಯಾಗಿದೆ. **ಕಾದಂಬರಿ-ಸಾಮಾನ್ಯ ಮನುಷ್ಯ** ಎನ್ನುವ ತಮ್ಮ ಪುಸ್ತಕದಲ್ಲಿ ಎಲ್. ಎಸ್. ಶೇಷಗಿರಿರಾಯರು '**ಬೆಟ್ಟದಜೀವ** ಗೋಪಾಲಯ್ಯನ ವೈಯಕ್ತಿಕ ಜೀವನದ ಕಥೆಯಲ್ಲಿ, ನಿಸರ್ಗದ ಮಗುವಾಗಿ, ನಿಸರ್ಗದ ಭಾಗವಾಗಿ ಬದುಕುವ ಒಂದು ಜೀವನಚಿತ್ರ'[೩] ಎಂದು ಹೇಳಿ ಈ ಕಾದಂಬರಿಯ ಸಾಮಾನ್ಯ ವಿಮರ್ಶೆಯ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಆದರೆ, ಇದೂ ಸಾಲದು. ಶೇಷಗಿರಿ ರಾಯರು ಗೋಪಾಲಯ್ಯನ ಪಾತ್ರದ ಸಾಂಕೇತಿಕ ರೂಪವನ್ನು ಗುರುತಿಸುವಲ್ಲಿ ಸೂಕ್ಷ್ಮದೃಷ್ಟಿಯನ್ನು ತೋರಿದ್ದಾದರೂ ಅವರ ವಿಮರ್ಶೆಯೂ ಇನ್ನೊಂದು ದೃಷ್ಟಿಯಿಂದ ಪಾತ್ರನಿಷ್ಠ ವಿಮರ್ಶೆಯೇ ಆಗಿದೆ. ಈ ಕಾದಂಬರಿಯ ವಿಶಿಷ್ಟ ಸಂವಿಧಾನವನ್ನು ತಿಳಿಯುವಲ್ಲಿ ಅದು ಅಷ್ಟೊಂದು ಸಹಾಯಕಾರಿಯಾಗುವುದಿಲ್ಲ.

'ಬಾಳು ನನಗೆ ಮುಖ್ಯ. ಬಾಳನ್ನು ತಿಳಿಯಬೇಕಾದ ಸಾಧನಗಳೂ ಅಷ್ಟೇ ಮುಖ್ಯ'[೪]—ಕಾರಂತರ ಈ ಹೇಳಿಕೆಯ ಬೆಳಕಿನಲ್ಲಿ **ಬೆಟ್ಟದಜೀವ**ವನ್ನು ನೋಡಿದರೆ ಅದರ ನಿಜವಾದ ಅರ್ಥ, ಸ್ವರೂಪ ತಿಳಿಯಬಹುದು ಎಂದು ತೋರುತ್ತದೆ. ಬದಲಾಗುತ್ತಿರುವ ತಮ್ಮ ಸಮಾಜದಲ್ಲಿ ಮುಖ್ಯವಾಗಿ ಕಂಡು ಬಂದ ಎರಡು ಜೀವನದೃಷ್ಟಿಗಳನ್ನು ಒಂದರ ಬದಿಗೊಂದಿಟ್ಟು ಅವುಗಳ ಬಲಾಬಲಗಳನ್ನು ಪರೀಕ್ಷಿಸಿ ಕಾರಂತರು ಇಲ್ಲಿ ಪ್ರಯತ್ನಿಸಿದ್ದಾರೆ. ಈ ದೃಷ್ಟಿಯಿಂದ ಗೋಪಾಲಯ್ಯನೊಬ್ಬನೇ ಇಲ್ಲಿಯ ಮುಖ್ಯ ಪಾತ್ರವಲ್ಲ. ಗೋಪಾಲಯ್ಯ ಗ್ರಾಮಸಂವೇದನೆಯ, ಗ್ರಾಮಮೌಲ್ಯಗಳ ಪ್ರತಿನಿಧಿಯಾಗಿ ನಮ್ಮೆದುರಿಗಿದ್ದರೆ, ನಾಗರಿಕಪ್ರಜ್ಞೆಯ ಪ್ರತಿನಿಧಿಯಾಗಿ ಶಿವರಾಮಯ್ಯ (ಇವನೊಡನೆ ಕಾರಂತರಿಗೆ ಅನೇಕ ಹೋಲಿಕೆಗಳಿದ್ದರೂ, ಇವನು ಕಾರಂತರೇ ಎಂದು ನಾವು ಹಟ ಹಿಡಿಯಬೇಕಾಗಿಲ್ಲ.) ಕತೆಯನ್ನು ಪ್ರವೇಶಿಸುತ್ತಾನೆ. ಆತ್ಮವೃತ್ತದ ತಂತ್ರವನ್ನು ಕಾರಂತರು ಉಪಯೋಗಿಸುವುದು ನೈಮಿತ್ತಿಕವಲ್ಲ. ಕತೆಯ ದೃಷ್ಟಿಕೋನ ಶಿವರಾಮಯ್ಯನ ದೃಷ್ಟಿಕೋನ. ಶಿವರಾಮಯ್ಯ ನಗರವಾಸಿಯಾದರೂ ಅವನ ವೈಯಕ್ತಿಕ ಗುಣಗಳಿಂದಾಗಿ ಅವನಲ್ಲಿ ಗ್ರಾಮಜೀವನವನ್ನು ಅರ್ಥವಿಸಿಕೊಳ್ಳುವ ಶಕ್ತಿ, ಅದಕ್ಕೆ ಬೇಕಾದ ಆರ್ದ್ರಸಂವೇದನೆ ಇವೆ. ಇದರಿಂದಾಗಿ ಗೋಪಾಲಯ್ಯ-ಶಿವರಾಮಯ್ಯರ—ಅವರು ಸಂಕೇತಿಸಿರುವ ಸಂವೇದನೆ, ಜೀವನದೃಷ್ಟಿಗಳ—ಸಂಬಂಧದಲ್ಲಿಯೇ ಈ ಕತೆಯ ವಸ್ತುವನ್ನು ನಾವು ಗುರುತಿಸಬೇಕಾಗುತ್ತದೆ. ಇಲ್ಲಿನ ಮಾನವೀಯ ಸಂಬಂಧಗಳು, ಘಟನೆಗಳು,

೩. ಕಾದಂಬರಿ—ಸಾಮಾನ್ಯ ಮನುಷ್ಯ (೧೯೫೭), ಪು. ೧೧೪-೧೧೫.

೪. ಹುಚ್ಚು ಮನಸ್ಸಿನ ಹತ್ತು ಮುಖಗಳು, ೧೯೪೯, ಪು. ೧೭೪.

ವರ್ಣನೆಗಳು ಈ ವಸ್ತುವಿನ ಅಂಗಗಳಾಗಿಯೇ ಕಾದಂಬರಿಯಲ್ಲಿ ಕಾರ್ಯ ಮಾಡುತ್ತವೆ. ಹೀಗೆ ನೋಡಿದಾಗ ಮಾತ್ರ **ಬೆಟ್ಟದಜೀವ**ಕ್ಕೆ ತನ್ನದೇ ಆದ ತಂತ್ರ–ಸಂವಿಧಾನಗಳಿವೆಯೆನ್ನುವುದು ಸ್ಪಷ್ಟವಾಗುತ್ತದೆ.

ಬೆಟ್ಟದಜೀವ ಒಂದು ಉತ್ತಮ ಸಾಹಿತ್ಯ-ಕೃತಿಯಾಗಿದೆಯಾದರೂ ಅದರ ಮಹತ್ವವನ್ನು ಕೇವಲ ಸಾಹಿತ್ಯಿಕ ಗುಣಗಳ ಮೂಲಕ ಅಳೆಯುವುದು ಸಂಪೂರ್ಣ ವಿಮರ್ಶೆಯಾಗಲಾರದು. ಅದು ಎತ್ತಿಹಿಡಿಯುವ ಸಾಂಸ್ಕೃತಿಕ, ಮಾನವೀಯ ಮೌಲ್ಯಗಳನ್ನೂ ಇಲ್ಲಿ ನಾವು ಲಕ್ಷಿಸಬೇಕಾಗುತ್ತದೆ. ಈ ದೃಷ್ಟಿಯಿಂದ, **ಬೆಟ್ಟದಜೀವ**ದ ಸಾಮಾಜಿಕ ಮುಖ ಬಹಳೇ ಮಹತ್ವದ್ದಾಗಿದೆ. ಈ ಕಾದಂಬರಿಯಲ್ಲಿ ಬಳಸಲಾದ ಸಾಂಸ್ಕೃತಿಕ ಸಂದರ್ಭವನ್ನೂ ನಾವು ಗಮನಿಸಬೇಕು ನಾಗರಿಕ ಜೀವನಮೌಲ್ಯಗಳು ಮತ್ತು ಗ್ರಾಮಜೀವನ ಮೌಲ್ಯಗಳು ಇವುಗಳ ನಡುವೆ ನಡೆದ ತಾಕಲಾಟ ಕನ್ನಡದಲ್ಲಿ ಅನೇಕ ಸಲ ಸಾಹಿತ್ಯಿಕ ವಸ್ತುವಾಗಿ ಬಂದಿದೆ. ಆದರೆ ಇಂತಹ ಕತೆಗಳಲ್ಲಿ ಒಂದಿಲ್ಲೊಂದು ಬಗೆಯ ಸುಲಭೀಕರಣ ನಡೆದಿರುವುದೇ ಹೆಚ್ಚು. ಕಾರಂತರಂತೆ ನಮ್ಮ ಸಮಾಜದ ಈ ಸಾಂಸ್ಕೃತಿಕ ಅವಸ್ಥೆಯನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ಕಲಾತ್ಮಕವಾಗಿ ನಾಟ್ಯೀಕರಿಸಿದವರು ವಿರಳವೆಂದೇ ಹೇಳಬಹುದು.

II

ಬೆಟ್ಟದಜೀವದ ಕ್ರಿಯೆಯಲ್ಲಿ ಘರ್ಷಣೆ, ತಾಕಲಾಟಗಳಿಲ್ಲ. ಕತೆ ಹೇಳುವ ರೀತಿಯಲ್ಲಿ, ಹೇಳುವವನ ಮಾನಸಿಕ ಅವಸ್ಥೆಯಲ್ಲಿ ನಮಗೆ ಕಂಡು ಬರುವ ಮುಖ್ಯ ಅಂಶವೆಂದರೆ ವಿಶ್ರಾಂತಿ (relaxation). ನಗರಜೀವನದ ಒತ್ತಡಗಳಿಂದ ತಪ್ಪಿಸಿಕೊಂಡು ಬಂದ ಶಿವರಾಮಯ್ಯನಿಗೆ ಇದು ಸಹಜವಾದ ಭಾವನೆ. ಗೋಪಾಲಯ್ಯ ನಿಸರ್ಗದೊಡನೆ ನಡೆಸಿದ ಹೋರಾಟ–ಹೆಚ್ಚಾಗಿ ಭೂತಕಾಲಕ್ಕೆ ಸಂಬಂಧಿಸಿದ್ದು—ಇಲ್ಲಿ ಕತೆಯ ಒಂದು ಅಂಶ. ಮುಖ್ಯವಾಗಿ ನಾವಿಲ್ಲಿ ಕಾಣುವುದು ಶಿವರಾಮಯ್ಯನ ನಾಗರಿಕ ಸಂವೇದನೆ ಗ್ರಾಮಜೀವನದ ವಾತಾವರಣದಲ್ಲಿ ಸೃಷ್ಟಿಸುವ ಅನುಭವ. ಆ ಅನುಭವದ ಮೂಲಕ ವ್ಯಕ್ತವಾಗುವ ಅರ್ಥ ಪರಂಪರೆ. ಕತೆಯ ಉದ್ದಕ್ಕೂ ಶಿವರಾಮಯ್ಯ ತನ್ನ ಎನಿಸಿಕೆಗಳ, ವಿಚಾರಗಳ, ಅನುಭವದ ವಿಶ್ಲೇಷಣೆಯನ್ನು ನಡೆಸುತ್ತಾನೆ. ಹೊಸ ವಾತಾವರಣದಲ್ಲಿ ಹೊಕ್ಕಾಗ ತನ್ನಲ್ಲಾಗುವ ಮಾನಸಿಕ, ದೈಹಿಕ ಪರಿವರ್ತನೆಗಳನ್ನು ಲಕ್ಷಿಸುತ್ತಾನೆ. ಈ ಪರಿವರ್ತನೆಯ ಕಾರಣಗಳನ್ನು ಗುರುತಿಸುತ್ತಾನೆ.

ಶಿವರಾಮಯ್ಯ ಕೆಳಬೈಲಿಗೆ ಬರುವುದು ಒಂದು ಆಕಸ್ಮಿಕ ಘಟನೆ. ಕಳೆದು ಹೋದ ದನವೊಂದನ್ನು ಹುಡುಕುತ್ತ ಸುಬ್ರಹ್ಮಣ್ಯಕ್ಕೆ ಬಂದ ಶಿವರಾಮಯ್ಯ 'ನಿಂತ ಗಡಿಯಾರ'ವನ್ನು ನಂಬಿ (ಗಡಿಯಾರದ ಮೇಲಿನ ನಾಗರಿಕನ ವಿಶ್ವಾಸ

ವನ್ನು ನಾವಿಲ್ಲಿ ಲಕ್ಷಿಸಬೇಕು) ಪಂಜಕ್ಕೆ ಹೊರಟು, ಕತ್ತಲಾಗುವ ವೇಳೆಗೆ ಗುತ್ತಿಗಾರು–ಸುಳ್ಯ ರಸ್ತೆಗೆ ಸೇರುತ್ತಾನೆ. ಅಲ್ಲಿ ಅವನಿಗೆ ಹಳ್ಳಿಯ ಗೌಡರಿಬ್ಬರು ಸಿಕ್ಕುತ್ತಾರೆ. 'ಕಾಡಿನ ಹಕ್ಕಿಗಳಂತೆ, ಮರ, ಬೇರು, ಪೊದೆಗಳ ಎಡೆಯಿಂದ ರುಮು ರುಮು' ಸಾಗುತ್ತಿದ್ದ ಅವರ ಧೈರ್ಯ 'ನಿಮ್ಮ ಜತೆಯಲ್ಲಿ ಬಂದರೆ ರಾತ್ರಿ ಉಳಿದುಕೊಳ್ಳಲು' ಒಂದಿಷ್ಟು ಜಾಗ ಕೊಡಿಸುತ್ತೀರಾ?' ಎಂದು ಬೇಡುವ ತನ್ನ ದೈನ್ಯ ಇವೆರಡರ ಅನುಭವವೂ ಅವನಿಗೆ ಆಗುತ್ತದೆ. ದೇರಣ್ಣನ ಮನೆಯ ಹತ್ತಿರದ ಸೇತುವೆಯನ್ನು ಕತ್ತಲಲ್ಲಿ ದಾಟುವಾಗ ನಾಗರಿಕ ಶಿವರಾಮಯ್ಯನ ಗೌರವಭಂಗ ಅವನ ಪರಿವರ್ತಿತ ಅವಸ್ಥೆಯನ್ನು ಪ್ರಭಾವಿಯಾಗಿ ಸೂಚಿಸುತ್ತದೆ.

> 'ದೇರಣ್ಣ ಜಿಮುಕು ಜಿಮುಕು ಕುಣಿಯುವ ಆ ಅಡಕೆಮರದ ಸೇತುವೆಯ ಮೇಲೆ ಜಿಗಿದು ಸರಿದ. ನಾನು ಜೀವ ಹಿಡಿದು ನಿಂತೆ; ಕುಳಿತೆ; ಕೊನೆಗೆ **ಚತುಷ್ಪಾದ ಪ್ರಾಣಿಯಂತೆ**[೫] ಅತೀವ ಸಾಹಸದಿಂದ ಆ ನಾಲ್ಕು ಗಜ ದೂರವನ್ನು ದಾಟಿ ಮತ್ತೆ ಮನುಷ್ಯನಾದೆ.' (ಪು. ೬೭)[೬]

ಗೋಪಾಲಯ್ಯನವರ ಮನೆ ತಲುಪಿದಾಗ ಶಿವರಾಮಯ್ಯನಿಗೆ 'ಪರದೇಶಿ' ಯಾದ ತನಗೂ 'ಸಂಜೆದೇವ'ನಂತೆ ಕಾಣಿಸುತ್ತಿದ್ದ ಅವರಿಗೂ ಇದ್ದ ಅಂತರ ಒಡೆದುಕೊಂಡರೂ ಅವರು ತೋರುವ ಆದರ-ಪ್ರೀತಿಗಳಲ್ಲಿ ಅದನ್ನು ಮರೆತು ಬಿಡುತ್ತಾನೆ. ಪ್ರಕೃತಿಯ ಸಾನ್ನಿಧ್ಯ ಅವನಿಗೆ ಅಪೂರ್ವವಾದ ಆನಂದವನ್ನು ಕೊಡುತ್ತದೆ.

> 'ಕಂಗುಗಳ ನೀಳವಾದ ಕಾಂಡಗಳ ಬೆಂಗಡೆಯಿಂದ ಮಿಂಚಿ ಚಾವಡಿಯಲ್ಲಿ ನಮ್ಮ ಮೂವರ ಮೇಲೆ ತಿಂಗಳು ಚೆಲ್ಲಿ ನಕ್ಕೊಡನೆ, ನನಗೆ **ಗಭೀರ ರಹಸ್ಯವೊಂದರ** ಅರಿವಾಗುವಷ್ಟು ಆನಂದವಾಯಿತು (ಪು. ೧೭).

'ತಮ್ಮ ಹೃದಯವನ್ನು ಮರೆಯಿಸುವ ಶೀಲವೇ' ಇಲ್ಲದ ಗೋಪಾಲಯ್ಯ ಮಾತನಾಡುತ್ತಿದ್ದಂತೆ, ಅವರ ಮತ್ತು ಅವರ ಹೆಂಡತಿ ಶಂಕರಮ್ಮನ ಹೃದಯಗಳನ್ನು ಕೊರೆಯುತ್ತಿದ್ದ ಗುಪ್ತದುಃಖದ ಅರಿವು ಶಿವರಾಮಯ್ಯನಿಗೆ ಆಗುತ್ತದೆ. ಈ ಅರಿವು ಕಾದಂಬರಿ ಬೆಳೆದಂತೆ ಅವರೀರ್ವರ ನಡುವಿನ ಆಪ್ತತ್ವಕ್ಕೆ ಕಾರಣವಾಗುತ್ತದೆ. ತಮ್ಮ ಮಗ ಶಂಭುವನ್ನು ಅಪಹರಿಸಿದ್ದು ನಗರಜೀವನದ ಆಕರ್ಷಣೆಯೇ ಎಂದು ಶಂಕರಮ್ಮನ ಭಾವನೆ. '**ಪೇಟೆಯ ಹನೆ** ಒಂದು ಸಾರಿ ಹಿಡಿಯಿತೆಂದರೆ ಈ ಕೊಂಪೆ ದಿನಕ್ಕೆ ಬೇಡವಾಗುತ್ತದೆ.' (ಪು. ೨೪)

೫. ಈ ಲೇಖನದಲ್ಲಿ ಗೆರೆಗಳಿಂದ ಸೂಚಿಸಿದ ಒತ್ತುಗಳು ನನ್ನವು.
೬. ಪುಟಗಳ ಸೂಚನೆ ಬೆಟ್ಟದಜೀವದ ಆರನೆಯ ಆವೃತ್ತಿಗೆ ಸಂಬಂಧಪಟ್ಟಿವೆ.

ಕಾದಂಬರಿಯ ಎರಡನೆಯ ಪ್ರಕರಣದಿಂದ ಶಿವರಾಮಯ್ಯ ಗ್ರಾಮ-ಜೀವನಕ್ಕೆ ಆಕರ್ಷಿತನಾಗುವ, ಹೊಂದಿಕೊಳ್ಳುವ ಕ್ರಿಯೆ ಪ್ರಾರಂಭವಾಗುತ್ತದೆ. ಈ ಕ್ರಿಯೆಯ ಏರಿಳಿತಗಳೇ ಕಾದಂಬರಿಯ ಸಂವಿಧಾನವನ್ನು ರೂಪಿಸುವ ಮುಖ್ಯ ಘಟಕಗಳು. ಕತೆಯ ಕೊನೆಗೆ ಶಿವರಾಮಯ್ಯ ಗ್ರಾಮಜೀವನದ ಅನುಭವವನ್ನು ತನ್ನಲ್ಲಿ ಅರ್ಥವತ್ತಾಗಿ ಸೇರಿಸಿಕೊಳ್ಳುತ್ತಾನಷ್ಟೇ ಅಲ್ಲದೆ ತನ್ನ ಸ್ವಭಾವಸಹಜವಾದ ಅನುಕಂಪದ ಮೂಲಕ, ನಗರಜೀವನದ ತನ್ನ ವಿಶಾಲ-ವಾದ ಅನುಭವದ ಮೂಲಕ ಅವರ ದುಃಖವನ್ನು ನಿವಾರಿಸಲೂ ಶಕ್ತನಾಗು-ತ್ತಾನೆ. ಕತೆಯ ಮುಕ್ತಾಯವನ್ನು ಈ ದೃಷ್ಟಿಯಿಂದಲೇ ನಾವು ನೋಡ-ಬೇಕಾಗುತ್ತದೆ. ಇಲ್ಲವಾದರೆ ಶಿವರಾಮಯ್ಯ—ಸಂಚಾರಿಯಾದರೂ ಕೂಡ—ಶಂಭುವನ್ನು ಪುಣೆಯಲ್ಲಿ ಭೆಟ್ಟಿಯಾದುದೂ, ಕೆ. ಎಸ್. ಶರ್ಮನೇ ಶಂಭುವೆಂದು ಗುರುತಿಸುವುದೂ ಅತ್ಯಂತ ಆಕಸ್ಮಿಕವಾದ (ನಂಬಲಾರದ?) ಘಟನೆಗಳಾಗಿ ಕಂಡುಬರಬಹುದು.

ಶಿವರಾಮಯ್ಯನ ಹೊಂದಾಣಿಕೆಗೆ ಅವನ ಮಾನವೀಯ ಗುಣಗಳು ನೆರವಾದಂತೆ ಗ್ರಾಮಜೀವನವನ್ನು ಭೇದಿಸಿ ಒಳಹೊಕ್ಕ 'ಕಾಫಿ'ಯಂತಹ ನಾಗರಿಕತೆಯ ಅಂಶಗಳೂ ಕಾರಣವಾಗುತ್ತವೆ. ಎರಡನೆಯ ಪ್ರಕರಣದಲ್ಲಿ ನಡೆಯುವ ಮುಖ್ಯ ಘಟನೆಯೆಂದರೆ ಶಿವರಾಮಯ್ಯ ಕೆಳಬೈಲಿನ ಹೊಳೆಯಲ್ಲಿ ಮೀಯುವುದು. ಇದು ಅವನಿಗಾಗುವ ಗ್ರಾಮಜೀವನದ ಸಂಸ್ಕಾರದ (baptism) ಒಂದು ಪ್ರತೀಕ. 'ನಿಮ್ಮ ಊರು ಕೈಲಾಸವಲ್ಲ' ಎಂದು ಕೆಳಬೈಲನ್ನು ಹೊಗಳಿದರೂ, 'ನನ್ನಂಥವನು ತಿಂಗಳಿಗೆ ನೂರು ರೂಪಾಯಿ ಕೊಡುತ್ತೇನೆಂದರೂ ಅಲ್ಲಿಯೇ ಇದ್ದು ಆರು ತಿಂಗಳು ಸಮಯವನ್ನು ಕಳೆಯಲಾರ' ಎಂದು ಶಿವ-ರಾಮಯ್ಯ ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾನೆ. ಈ ರೀತಿಯ ಸಂದಿಗ್ಧತೆ ಅವನ ವೈಚಾರಿಕ, ಭಾವುಕ ಜೀವನಕ್ಕೆ ಸಂಬಂಧಪಟ್ಟ ಒಂದು ಮುಖ್ಯವಾದ ನಾಗರಿಕ ಅಂಶ. ಹೊಳೆಯ 'ತಿಳಿನೀರ ತಳದಿಂದ ಮೂಡಿ ಕಾಣುವ ಬೆಣಚು ಕಲ್ಲುಗಳ ದುಂಡಾದ ಆಕಾರಗಳನ್ನು' ಶಿವರಾಮಯ್ಯ ಮೋಹಿಸಿದರೂ ಅಲ್ಲಿ ಸ್ನಾನ ಮಾಡುವುದಕ್ಕೆ ಅವನು ಅಂಜುತ್ತಾನೆ.

> 'ಉಪಾಯಗಾಣದೆ ತಿರುಗಿ ನೀರಿಗಿಳಿದೆ. ಮೊದಲನೆಯ ಮುಳುಗಿಗೇ ಅಂತರಂಗ ಬಹಿರಂಗವೆಲ್ಲ ಅದುರಿತು. ನೀರಿಂದೆದ್ದು ನನ್ನ ಮೈಯನ್ನು ಬಿರುಸಾಗಿ ತಿಕ್ಕಿಕೊಂಡೆ, ಶೀತವಾದ ಗಾಳಿ ನನ್ನನ್ನು ಕೊರೆಯತೊಡಗಿತು. ಇದು ನನ್ನ ಸ್ನಾನದ ಪೂರ್ವಾರ್ಧ. ಉತ್ತರಾರ್ಧವು ದಂಡೆಯ ಮೇಲೆಯೇ ಮುಗಿಯಿತು.' (ಪು. ೩೫)

ಮೂರನೆಯ ಮತ್ತು ನಾಲ್ಕನೆಯ ಪ್ರಕರಣಗಳು ಹೆಚ್ಚಾಗಿ ಗೋಪಾ-ಲಯ್ಯನವರ ಸಾಧನೆಗಳಲ್ಲೊಂದಾದ ಕಾಟುಮೂಲೆಗೆ ಸಂಬಂಧಿಸಿವೆ. ದೇರಣ್ಣ,

ಗೋಪಾಲಯ್ಯ, ಶಂಕರಿ ಇವರಿಗೆ ಮಾತ್ರ 'ಸೀಮಿತವಾದ ಗ್ರಾಮ ಜೀವನ'ದ ಬೇರೆ ಕೆಲವು ಮುಖಗಳನ್ನು ನೋಡಲು ಇಲ್ಲಿ ಶಿವರಾಮಯ್ಯನಿಗೆ ಸಾಧ್ಯವಾಗುತ್ತದೆ. ಶಿವರಾಮಯ್ಯ ಈ ಹೊಸ ಜೀವನಕ್ಕೆ ತಕ್ಕಮಟ್ಟಿಗೆ ಹೊಂದಿಕೊಂಡಿದ್ದಾನೆ. ಇದರ ಒಂದು ನಿದರ್ಶನವನ್ನು ಅವನು ಕಾಟುಮೂಲೆಯ ಹತ್ತಿರದ ಗುಡ್ಡವನ್ನಿಳಿಯುವ ರೀತಿಯಲ್ಲಿ ನಾವು ಕಾಣಬಹುದು :

> '. . . ಆ ಬಯಲು ದಾಟಿ, ಇನ್ನೊಂದು ಚೂರು ಕಾಡು ಕಳೆದು, ಗುಡ್ಡದ ತುದಿಗೆ ಬಂದೆವು . . . ನನಗೆ ಕೆಳಗಡೆ ಪಾತಾಳಲೋಕವೇ ಕಾಣಿಸಿತು. ಅವರಿಬ್ಬರೂ ಆಚೀಚಿನ ದರ್ಭೆಹುಲ್ಲನ್ನು ಹಿಡಿದು, ಮರ ಇಳಿಯುವಂತೆ ಇಳಿದರು. ನಾನು ನೆಲಕ್ಕೆ ಮುಖಮಾಡಿ ಮಂಗನಂತೆ ಇಳಿಯಬೇಕೇ ಎಂದು ತಿಳಿಯದೆ, ಕೇವಲ **ಪೇಟೆಯ ಗೌರವ** ಕಾಯುವ ಸಲುವಾಗಿ ಅವರಂತೆ ಕೆಳಗಿಳಿದೆ.' (ಪು. ೫೨)

ಚತುಷ್ಪಾದಾವಸ್ಥೆಯ ಹೆದರಿಕೆಯಿಂದ ಈಗ ಶಿವರಾಮಯ್ಯ ಪಾರಾಗಿದ್ದಾನೆ.

ಕಾಟುಮೂಲೆಯ ನಾರಾಯಣಯ್ಯ ಗೋಪಾಲಯ್ಯನವರ ಸೃಷ್ಟಿ, ಗುರುವಿನ ಸಂದೇಶದ ಅರ್ಥ ತಿಳಿಯದೆ ಹೋದರೂ ಅವರಲ್ಲಿ ಅವನಿಗಿರುವ ಭಕ್ತಿ ಅಪಾರವಾದುದು. ನಾರಾಯಣಯ್ಯನಿಂದಾಗಿ ಶಿವರಾಮಯ್ಯನಿಗೆ ಗೋಪಾ-ಲಯ್ಯನವರ ಜೀವನದರ್ಶನದ ಪರಿಚಯ ಇನ್ನೂ ಗಾಢವಾಗುತ್ತದೆ. 'ಬದುಕುವುದು ಹೊನ್ನಿಗಾಗಿ ಅಲ್ಲ' ಎನ್ನುವ ಅವರ ತತ್ವದ ಸಿದ್ಧಿಯನ್ನೇ ಕಾಟು-ಮೂಲೆಯಲ್ಲಿ ಅವನು ಕಾಣುತ್ತಾನೆ. ನಾರಾಯಣಯ್ಯನಲ್ಲಿ ಗೋಪಾಲಯ್ಯನವರ ಸ್ಥೈರ್ಯ–ಧೈರ್ಯಗಳಿಲ್ಲ, ತನ್ನ ಭವಿಷ್ಯತ್ತನ್ನು ತಾನೇ ರೂಪಿಸಿಕೊಳ್ಳಬಲ್ಲೆನೆನ್ನುವ ಆತ್ಮವಿಶ್ವಾಸವಿಲ್ಲ. ಗೋಪಾಲಯ್ಯನವರಲ್ಲಿ ಅಗಾಧ ವಿಶ್ವಾಸವನ್ನಿಟ್ಟಿದ್ದರೂ ಮುಂದೆ ಅವರ ಮಗ ತನ್ನನ್ನು ಹೇಗೆ ನಡೆಸಿಕೊಂಡಾನು ಎನ್ನುವ ಮನುಷ್ಯಸಹಜವಾದ ಅಳುಕೂ ಅವನಲ್ಲಿದೆ. ಆದರೂ, ನಾರಾಯಣಯ್ಯನ ಸಂವೇದನೆ, ಜೀವನದ ರೀತಿಗಳಲ್ಲಿ ಗ್ರಾಮ–ಮೌಲ್ಯಗಳ ಪ್ರಭಾವವನ್ನೇ ನಾವು ಕಾಣುತ್ತೇವೆ. ಗೋಪಾಲಯ್ಯ – ಶಂಕರಮ್ಮನವರೊಡನೆ ಅವನು ಬೆಳೆಯಿಸಿಕೊಂಡು ಬಂದ ಮಧುರಸಂಬಂಧ ಶಿವರಾಮಯ್ಯ ಅನುಭವಿಸುವ ಗ್ರಾಮ-ಜೀವನದ ಆಕರ್ಷಕ ಅಂಶಗಳಲ್ಲೊಂದು.

ಕಾಟುಮೂಲೆಯಿಂದ ತಿರುಗಿ ಬಂದನಂತರ ಶಿವರಾಮಯ್ಯನಿಗೆ ಗೋಪಾ-ಲಯ್ಯನವರ ಹಸ್ತದಿಂದ ಅಭ್ಯಂಜನ ನಡೆಯುತ್ತದೆ. **ಬೆಟ್ಟದಜೀವದಲ್ಲಿ** ಅನೇಕ ಸಲ ನಡೆಯುವ ಈ ಕಾರ್ಯಕ್ರಮದ ಸಾಂಕೇತಿಕ ಅರ್ಥವನ್ನು ಈಗಾಗಲೇ ಸೂಚಿಸಿದ್ದಾಗಿದೆ. ಅದೊಂದು ವಿಧಿ (ritual) ! ಗ್ರಾಮಜೀವನದ ಶುದ್ಧಿಯ ಸಂಕೇತ ; ಶಿವರಾಮಯ್ಯನು ಅವಶ್ಯವಾಗಿ ಒಳಗಾಗಲೇಬೇಕಾದ

ಒಂದು ಸಂಸ್ಕಾರ. ಸ್ನಾನದಲ್ಲಿ ಗೋಪಾಲಯ್ಯನವರು ಪಡೆಯುವ ತೃಪ್ತಿ ನಾಗರಿಕ ಶಿವರಾಮಯ್ಯನಲ್ಲಿ ಕಂಡುಬರುವದಿಲ್ಲ. ಅವನ ಮಟ್ಟಿಗೆ ಅದು ಒಂದು ಒತ್ತಾಯ.

> 'ಬೇಡ. ಬೇಡ, ನಾನೇ ಎರೆದುಕೊಳ್ಳುತ್ತೇನೆ' ಎಂದು ನೀರ ಚಂಬನ್ನು ಹಿಡಿದರೆ, ಅದನ್ನು ಕಿತ್ತುಕೊಂಡು, ನನ್ನನ್ನು ಬಲವಂತದಿಂದ ಕುಳ್ಳಿರಿಸಿ. ಆರೆತಾಸಿನ ಸ್ನಾನವನ್ನು ಮಾಡಿಸಿಬಿಟ್ಟರು. ಉಸಿರಿಗೆ ಅವಕಾಶ ಕೊಡದಂತೆ. ನೀರಿನ ಧಾರೆಯೇ ಕಡಿಯದಂತೆ ಬಿಂದಿಗೆಯ ಮೇಲೆ ಬಿಂದಿಗೆ ನೀರನ್ನು ಎರೆದು ಒಮ್ಮೆ **ನಾನು ಈ ಸ್ನಾನದಿಂದ ಪಾರಾದರೆ ಸಾಕಪ್ಪಾ** ಎನಿಸುವಂತೆ ಮಾಡಿಬಿಟ್ಟರು.' (ಪು. ೭೩)

ಗೋಪಾಲಯ್ಯ ಶಿವರಾಮಯ್ಯ ಎಷ್ಟೋ ವಿಷಯಗಳನ್ನು ಚರ್ಚಿಸುತ್ತಾರೆ. ಅಲ್ಲಿಯೂ ಕೂಡ ಅವರ ಪಕ್ವವಾದ ಅನುಭವ ಮತ್ತು ತನ್ನ 'ಓದಿನ ಪಾಂಡಿತ್ಯ' ಇವುಗಳ ಅಂತರದ ಅರಿವು ಅವನಿಗೆ ಆಗದೆ ಹೋಗುವುದಿಲ್ಲ. ಗೋಪಾಲಯ್ಯ–ಶಂಕರಿಯರ ಅನ್ಯೋನ್ಯ ಸಂಸಾರದಲ್ಲಿ ಶಿವರಾಮಯ್ಯನಿಗೆ ಗ್ರಾಮಜೀವನದ ಇನ್ನೊಂದು ಸತ್ಯ ಗೋಚರಿಸುತ್ತದೆ :

> ' ಈ ಒಂದು ಗಳಿಗೆಯಲ್ಲಿ ಅವರ ಚಿಂತಾಮಯ ಜೀವನದ ಚಿತ್ರ ನನಗೆ ಕಾಣಿಸಿದ್ದು ನಿಜವಾದರೂ ಮಿಕ್ಕುಳಿದ ವೇಳೆ ಅವರು ಸಂತೋಷ ಪ್ರಿಯರಾದ ಎಣೆವಕ್ಕಿಗಳು ; ತೃಪ್ತಜೀವಿಗಳು ; ಕೃತಕರ್ಮರು. **ಬದುಕಿನ ಸಾರ್ಥಕ್ಯ ಅವರಲ್ಲಿ ಕಾಣಿಸಿದಷ್ಟು ಸೊಗಸಾಗಿ ಇನ್ನಿತರರಲ್ಲಿ ಕಾಣಿಸಲಿಲ್ಲ.** (ಪು. ೮೨)

ಐದನೆಯ ಪ್ರಕರಣದ ಘಟನೆಗಳಲ್ಲಿ ಹಾಸ್ಯ-ಗಂಭೀರತೆಗಳ ವೈವಿಧ್ಯವಿದೆ. ಈ ಹೊತ್ತಿಗೆ ಶಿವರಾಮಯ್ಯನ ಹೊಂದಾಣಿಕೆ ಸಾಕಷ್ಟು ಬಲಗೊಂಡಿದೆ. ಊರಿಗೆ ಹೊರಡುವ ವಿಚಾರವೇ ಅವನಿಗೆ ಒಗ್ಗುವುದಿಲ್ಲ. ಆದರೂ ನಗರ ಜೀವನಕ್ಕೆ ಸಹಜವಾದ ಮುಚ್ಚು-ಮರೆಯಿಂದ, ಆತಂಕದಿಂದ ಅವನು ಸಂಪೂರ್ಣವಾಗಿ ಪಾರಾಗಲು ಶಕ್ತನಾಗುವುದಿಲ್ಲ.—'ನೀವು ಅಪ್ಪಣೆ ಕೊಟ್ಟಾಗ ಹೊರಡುತ್ತೇನೆ" ಎನ್ನುವ ಮನಸ್ಸಾಯಿತು; ಆದರೆ ಯಾಕೋ ಆ ಮಾತನ್ನು ಹೇಳಲಿಲ್ಲ (ಪು. ೮೫), ನಿಲ್ಲಲು ಮನಸ್ಸಿದ್ದರೂ ನಿಲ್ಲುವುದಕ್ಕೊಂದು ನೆಪಬೇಕು.

ಈ ಪ್ರಕರಣದಲ್ಲಿಯ ಹಾಸ್ಯ ನಾಗರಿಕ-ಗ್ರಾಮ್ಯ ಅಂಶಗಳ ಮಿಶ್ರಣದಿಂದಲೇ ಹುಟ್ಟುತ್ತದೆ. ಗೋಪಾಲಯ್ಯ ಶಿವರಾಮಯ್ಯನಿಗೆ ತಹಶೀಲದಾರಿಕೆಯ ವೇಷವನ್ನು ತೊಡಿಸುತ್ತಾರೆ. ಅನಿಶ್ಚಿತ–ವ್ಯಕ್ತಿತ್ವ (identity) ದ ನಗರಜೀವಿ ಶಿವರಾಮಯ್ಯನಿಗೆ ಈ ಸೋಗು ಸಲೀಸಾಗಿ ಸರಿಹೋಗುತ್ತದೆ. ಸರಳಜೀವಿಗಳಾದ ಬಟ್ಯ, ದೇರಣ್ಣ, ನಾರಾಯಣಯ್ಯ ಮೋಸಹೋಗುತ್ತಾರೆ. ಸಾಮಾನ್ಯ

ವಾಗಿ ದಿಟ್ಟನಾಗಿ ವರ್ತಿಸುವ ದೇರಣ್ಣ ಕೂಡಾ ಮೆತ್ತಗಾಗುತ್ತಾನೆ. ಈ ಸೋಗಿನ ಮುಖ್ಯ ಉದ್ದೇಶ ನಗರಜೀವನ ಹಳ್ಳಿಯ ಜೀವನದ ಮೇಲೆ ಪ್ರಸ್ಥಾಪಿಸಿರುವ ಅಧಿಕಾರವನ್ನು ಉದಾಹರಿಸುವುದು. ಬಟ್ಯನ ಪಾತ್ರಕ್ಕೂ ಒಂದು ಸಾಂಕೇತಿಕ ಅರ್ಥವಿದೆ. ಹಳ್ಳಿಯ ಜೀವನದ ಒಂದು ಎದ್ದು ಕಾಣುವ ವೈಶಿಷ್ಟ್ಯ ಅದರ ಕಾಲ-ಪ್ರಜ್ಞೆ. 'ಈ ಕಾಡಿನ ರಾಜ್ಯದಲ್ಲಿ ದಿನ ಕಳೆದು ರಾತ್ರೆಯಾಗುವುದು, ಆ ರಾತ್ರಿ ಹೋಗಿ ಹಗಲಾಗುವುದೂ ಶಕ್ಯವೇ?' ಎಂದು ಶಿವರಾಮಯ್ಯ ಕೆಳ-ಬೈಲಿಗೆ ಬಂದ ಹೊಸತರಲ್ಲಿಯೇ ಅಚ್ಚರಿಬಡುತ್ತಾನೆ. ಈ ಕಲ್ಪನೆಯ ಮತ್ತೊಂದು ಮುಖ ಬಟ್ಯ. ಬಟ್ಯನಿಗೆ ವರ್ಷಗಳ ಲೆಕ್ಕವೇ ವಿಚಿತ್ರವಾಗಿ ತೋರುತ್ತದೆ. 'ಏನೋ ಬುದ್ಧಿ, ವಯಸ್ಸಾಯಿತು ತುಂಬ. ನಮ್ಮ ಅಯ್ಯ ಹೇಳುತ್ತಾರೆ—ನನಗೆ ನೂರು ವರ್ಷವಂತೆ. ನನ್ನ ಹೊಲತಿ ಅನ್ನುತ್ತಾಳೆ—ನೂರು ಗೀರು ಆಗಲಿಕ್ಕಿಲ್ಲ, ಇಪ್ಪತ್ತು ಮೂವತ್ತಕ್ಕೆ ಮೋಸವಿಲ್ಲ ಎಂದು. ಯಾವುದು ಸತ್ಯವೋ, ಯಾವುದು 'ಸುಳ್ಳೋ'—ಇದು ಬಟ್ಯನ ಕಾಲಪ್ರಜ್ಞೆ. ಬಟ್ಯನ ಮೂಲಕ ಗ್ರಾಮಜೀವನದ ಸಂಕೀರ್ಣತೆಯನ್ನು ಅದರ ಕೆಲವು ವಿಶಿಷ್ಟವಾದ ಮೌಲ್ಯಗಳನ್ನು ಶಿವರಾಮಯ್ಯ ಕಂಡುಕೊಳ್ಳುತ್ತಾನೆ. ಸಾವನ್ನು ಕಾಣುವ ಬಟ್ಯನ ದೃಷ್ಟಿಯಲ್ಲಿಯೂ ಇಂತಹದೊಂದು ಮೌಲ್ಯ ಅಡಗಿದೆ: 'ನಾನೇನು ಸಾಯಲಿಕ್ಕೆ ಹೆದರುತ್ತೇನೆಯೇ ?....ನಾನು ಬದುಕ್ಕಿದ್ದು ಸಾಕು; ಮೊಮ್ಮಕ್ಕಳಾಯಿತು; ಮರಿಮಕ್ಕಳಾದವು; ನನ್ನಂತೆ ಇಂದೋ ನಾಳೆಯೋ ಸಾಯುವವ ಹೀಗೆ ಬಲಿಯಾದರೆ, ಅದೂ ಒಂದು ಪುಣ್ಯವೇ. ಹೋಗಲಿ, ಈ ಹೊತ್ತಿನ ಕೆಲಸ ಏನು ಹೇಳಿ.' (ಪು. ೯೧) ಹಳೆಯ ಸಂಸ್ಕೃತಿಯಲ್ಲಿ ಆಳವಾದ ಬೇರುಬಿಟ್ಟ ಬಟ್ಯ ಹೊಲೆಯನಾದರೂ ಜೀವನವನ್ನು ಗೆದ್ದವರಲ್ಲಿ ಒಬ್ಬ.

ಈ ಪ್ರಕರಣದ ಗಂಭೀರ ಘಟನೆ ಶಿವರಾಮಯ್ಯನ ಕಾಟುಮೂಲೆಯ ಎರಡನೆಯ ಭೇಟಿಗೆ ಸಂಬಂಧಿಸಿದ್ದು. ಅಪರಿಚಿತನಾಗಿ ಕಾಟುಮೂಲೆಗೆ ಬಂದ ಶಿವರಾಮಯ್ಯನಿಗೆ ನಾರಾಯಣಯ್ಯನ ಹೆಂಡತಿ, ಗೋಪಾಲಯ್ಯನ ಮಗ ಶಂಭು ತನ್ನ ಮೈಮೇಲೆ ' ಕೈಮಾಡಿದ ' ಗೌಪ್ಯವನ್ನು ತಿಳಿಸುತ್ತಾಳೆ. ಅವಳ ದೃಷ್ಟಿಯಲ್ಲಿ ಈ ದುರ್ಘಟನೆಯ ಮೂಲ ನಗರಜೀವನದಲ್ಲಿಯೇ. ಓದುಬರಹ ಅತಿಯಾಗಿ, ಸಹವಾಸದೋಷದಿಂದಾಗಿ ಇಂತಹ ಪ್ರವೃತ್ತಿ ಅವನಲ್ಲಿ ಉಂಟಾ-ಗಿರಬೇಕು ಎಂದೇ ಅವಳ ಕಲ್ಪನೆ. ಶಿವರಾಮಯ್ಯ ಈ ಘಟನೆಯನ್ನು ನೋಡುವ ದೃಷ್ಟಿಯಲ್ಲಿ ಹೆಚ್ಚಿನ ವಸ್ತುನಿಷ್ಠತೆ ಇದೆ. (ನಾರಾಯಣಯ್ಯನ ಹೆಂಡತಿಗೂ ಕೂಡ ತಾನು ಮಾಡಿದ್ದೇ ಸಮವೆನ್ನುವ ಪೂರ್ಣ ವಿಶ್ವಾಸವಿಲ್ಲ.) ಶಂಭುವಿನ ಬಗ್ಗೆ ಅವನಲ್ಲಿ ವಿರೋಧಭಾವನೆ ಹುಟ್ಟುವದಿಲ್ಲವಷ್ಟೆ ಅಲ್ಲದೆ, ಅವನ ಶೀಲವನ್ನು ಅಳೆಯಲು ಒಂದು ಕುರುಹು ದೊರೆತುದರ ಸಮಾಧಾನವೂ ಕೂಡ ಆಗುತ್ತಿದೆ. ಒಟ್ಟಿನಲ್ಲಿ ಈ ಘಟನೆ ಗ್ರಾಮಜೀವನದ ಗುಪ್ತ ಒತ್ತಡ

ಗಳನ್ನು, ಲೈಂಗಿಕ ವಿಷಯದಲ್ಲಿನ ಕಟ್ಟುನಿಟ್ಟಾದ ವಿಚಾರಗಳನ್ನು ಬೆಳಕಿಗೆ ತರು ವುದಲ್ಲದೆ ಅವುಗಳಿಗೂ ನಗರಜೀವನಕ್ಕೂ ಇರುವ ಸಂಬಂಧವನ್ನೂ ಸೂಚಿಸು ತ್ತದೆ. ಶಂಭುವನ್ನು ಅವನ ತಂದೆ-ತಾಯಿಗಳಿಗೆ ಮರಳಿ ಸೇರಿಸಬೇಕು ಎನ್ನುವ ಶಿವರಾಮಯ್ಯನ ಇಚ್ಛೆಗೆ ಕೇವಲ ಅನುಕಂಪ--ಕೃತಜ್ಞತೆಗಳಷ್ಟೇ ಕಾರಣಗಳಲ್ಲ. ನಗರಜೀವನಕ್ಕೆ ತಾನೂ ಒಬ್ಬ ಹೊಣೆಗಾರ. ಆದರಿಂದ ಉಂಟಾದ ಸಮಸ್ಯೆ ಯನ್ನು ನಿವಾರಿಸುವ ಜವಾಬುದಾರಿ ತನ್ನದು ಎನ್ನುವ ಅನುದ್ದಿಷ್ಟಭಾವನೆಯೂ ಅವನಲ್ಲಿದ್ದಿರಬೇಕು.

ಹೆಚ್ಚುಕಡಿಮೆ ಕಾದಂಬರಿಯ ಮಧ್ಯದಲ್ಲಿ ಬರುವ ೬ನೆಯ ಪ್ರಕರಣದಲ್ಲಿ ಮಹತ್ವದ ಘಟನೆಗಳೇನೂ ನಡೆಯುವುದಿಲ್ಲ. ಇಲ್ಲಿ ಸಂಭಾಷಣೆಗೆ ಪ್ರಾಮುಖ್ಯ. ಗೋಪಾಲಯ್ಯನವರ ಮನೆಯಲ್ಲಿ ಆತ್ಮೀಯನಾಗಿ ಹೊಂದಿಕೊಂಡ ಶಿವ-ರಾಮಯ್ಯ ಅವರೊಡನೆ ಎಷ್ಟೋ ವಿಷಯಗಳನ್ನು ಮಾತನಾಡುತ್ತಾನೆ. ಅವರ ಜೀವನದ ತೀರ್ಮಾನಗಳಿಗೆ ತಲೆದೂಗುತ್ತಾನೆ. ಆದರೂ, ತನ್ನ ಎಳೆತಗಳೇ ಬೇರೆ ಎನ್ನುವುದರ ಅರಿವು ಅವನಿಗಿಲ್ಲದಿಲ್ಲ. 'ನಿಮ್ಮ ಮರ್ಜಿ ರೀತಿಗಳನ್ನೆಲ್ಲ ನೋಡಿ ನನಗೇನೆ ಇಲ್ಲಿ ನಿಮ್ಮ ಇನ್ನೊಬ್ಬ ಅಳಿಯನಾಗಿ ಬಂದು ಯಾಕೆ ತಣ್ಣಗೆ ಕುಳಿತಿರಬಾರದು ಎನಿಸುತ್ತದೆ' ಎಂದು ಗ್ರಾಮಜೀವನದ ಆಕರ್ಷಣೆಯನ್ನು ಅವನು ಬಹಿರಂಗವಾಗಿ ವಿವರಿಸಿದರೂ 'ಆ ಬೆಟ್ಟಗಾಡಿನ ಸಂದಿನಲ್ಲಿ ಇಂಥ ಒಂಟಿ ಜೀವನ ಮಾಡುವ ಧೈರ್ಯ ನನಗೆಲ್ಲಿಂದ ಬಂದೀತು' ಎಂದು ಅವನ ಅಂತರಂಗ ನುಡಿಯುತ್ತದೆ. ಇದು ಅವನ ಪ್ರಾಮಾಣಿಕತೆಯ ದ್ಯೋತಕವಾಗಿದ್ದಂತೆ ನಾಗರಿಕ ಸಂವೇದನೆಯ ಇತಿಮಿತಿಗಳನ್ನೂ ಸೂಚಿಸುತ್ತದೆ.

ಏಳನೆಯ ಪ್ರಕರಣದಲ್ಲಿ ಇವೆರಡೂ ಸಂವೇದನೆಗಳಲ್ಲಿನ ಅಂತರದ ಇನ್ನೂ ಕೆಲವು ಮಹತ್ವದ ಅಂಶಗಳು ಹೊರಬರುತ್ತವೆ. ಇವು ಮುಖ್ಯವಾಗಿ ನಿಸರ್ಗ ದತ್ತ ನೋಡುವ ಗೋಪಾಲಯ್ಯ—ಶಿವರಾಮಯ್ಯರ ದೃಷ್ಟಿಗಳಿಗೆ ಸಂಬಂಧಿಸಿವೆ.

> 'ಈ ದೆವ್ವನ ಹಾಗಿರುವ ಮರಗಳು, ಅವುಗಳನ್ನು ನುಂಗುವಂತೆ ಕಾಣುವ ಈ ಬೆಟ್ಟಗಳು — ಇವುಗಳೆಲ್ಲ ನೋಡಿದರೆ ಮನುಷ್ಯ ಎಷ್ಟು ಸಣ್ಣ ಪ್ರಾಣಿಯಾಗಿ ಕಾಣುತ್ತಾನೆ!. . . . . ನನಗೆ ಈ ಸುತ್ತಲೂ ನೋಡಿ ನನ್ನ ಕಿರಿತನದ ನೆನಪು ಬರುತ್ತದೆ ; ಮನುಷ್ಯ ಎಷ್ಟರವನು ಎಂದೆನಿಸು ತ್ತದೆ' (ಪು. ೧೩೦)

ಎಂದು ಶಿವರಾಮಯ್ಯನಿಗೆನಿಸಿದರೆ,

> '. . . . ಎತ್ತರದ ಗುಡ್ಡದ ತುದಿಯನ್ನೇರಿದರೆ . . . ಮನಸ್ಸಿ ಗೊಂದು ಹಿಗ್ಗು ಬರುವುದಿಲ್ಲವೇ ? ನನ್ನಷ್ಟು ದೊಡ್ಡವನ್ಯಾರು—ಎನಿ-ಸುತ್ತದೆ. ನೂರಾರು ಕಿರಿಯ ಜನರನ್ನು ಮೀರಿ ನಿಂತ ಹಾಗೆ ಮನಸ್ಸಿ ಗೊಂದು ಹೆಮ್ಮೆ ಉಂಟಾಗುವುದಿಲ್ಲವೇ' (ಪು. ೧೩೨)

ಎಂದು ಕೇಳುತ್ತಾರೆ ಗೋಪಾಲಯ್ಯ. ಶಿವರಾಮಯ್ಯನ ಅನುಭವದಲ್ಲಿ ತಾನು ಬೇರೆ, ನಿಸರ್ಗ ಬೇರೆ ಎನ್ನುವ ಕಲ್ಪನೆಯ ಪ್ರಭಾವ ಕಂಡಂತೆ, ಗೋಪಾಲಯ್ಯನ ಧ್ವನಿಯಲ್ಲಿ ನಿಸರ್ಗದೊಡನೆ ಅವನು ಸಾಧಿಸಿದ ಸಾಮರಸ್ಯದ, ಅದು ಅವನಿಗಿತ್ತ ಶಕ್ತಿಯ ಸೂಚನೆಯಿದೆ.

ಕೆಳಬೈಲಿಗೆ ಬಂದ ನಾಲ್ಕೇ ದಿನಗಳಲ್ಲಿಯೇ ಶಿವರಾಮಯ್ಯನಿಗೆ ಏನಾದರೂ 'ಪರಾಕ್ರಮ' ಮಾಡುವ ಇಚ್ಛೆಯಾಗುತ್ತದೆ. 'ನಾನೊಬ್ಬನೇ ನಿಮ್ಮೂರನ್ನು ತಿರುಗಾಡಿಕೊಂಡು ಬರುತ್ತೇನೆ' ಎಂದು ಹೊರಟುಬಿಡುತ್ತಾನೆ. ಶಿವರಾಮಯ್ಯ ತನ್ನ ಆತ್ಮವಿಶ್ವಾಸ ಒಂದು ಭ್ರಮೆ, ನಗರಜೀವಿ ಒಮ್ಮಿಂದೊಮ್ಮೆಲೆ ಗ್ರಾಮಜೀವಿಯಾಗಲಾರ ಎಂದು ತಿಳಿಯಲಿಕ್ಕೆ ಬಹಳ ವೇಳೆ ಹಿಡಿಯುವುದಿಲ್ಲ:

> 'ಬಯಲು ಬರಿಯ ಎರಡು ಫರ್ಲಾಂಗಿನೊಳಗಾಗಿ ಕಾಡನ್ನು ಸೇರಿಕೊಂಡಿತು. ಅಲ್ಲಿಯ ತನಕವೂ ಹೋದೆ. ಅಲ್ಲಿ ಬಯಲಿನ ರಕ್ಷಣೆಗೆ ಏರ್ಪಡಿಸಿದ ಬೇಳಲಿನ ಬೇಲಿಯನ್ನು ಕಂಡು, ಕಣ್ಣು ಮಿಟಿ ಮಿಟಿ ಮಾಡುತ್ತ ನಿಂತೆ...ಹಾಗೇನೆ ಬೇಲಿಯನ್ನು ಏರಿ, ದಾಟುವ ಗಳಿಗೆಯಲ್ಲಿ ಪಂಚೆಯನ್ನು ಹರಿದುಕೊಂಡು, ಇಳಿದು, ತಿರುಗಿ ಏರಿ, ಬೇಲಿಯಾಚೆ ಕಾಡಿನಲ್ಲಿ ದಾರಿಯೇನಾದರೂ ಇದೆಯೋ ಎಂದು ಅರಸತೊಡಗಿದೆ. ಅಲ್ಲಿಂದ ನನ್ನ ಬಲಮಗ್ಗುಲಿಗೆ, ತುಸುದೂರದಲ್ಲಿ ದನಕರುಗಳು ಮೇಯುತ್ತಿರುವುದು ಕಂಡಿತು. . . . . .ಹಿಂದಕ್ಕೆ ಬಂದು ಕವಲೊಡೆಯುವ ಒಂದು ಹಾದಿಯಿಂದ ಮುಂದುವರಿದೆ. ತಿರುಗಿ ನನ್ನೆದುರಿಗೆ ಅಡ್ಡವಾಗಿ ತಂತಿಯಾದ ಹಾಳು ನದಿ ಬರಬೇಕೇ.' (ಪು. ೧೩೫–೬)

ಇದು ಶಿವರಾಮಯ್ಯನ ಫಜೀತಿಯ ವಿವರ. ವೈಚಾರಿಕವಾಗಿ, ಭಾವನಾತ್ಮಕವಾಗಿ ಶಿವರಾಮಯ್ಯ ಗ್ರಾಮಜೀವನದೊಂದಿಗೆ ಸಮರಸವಾಗಲು ತಕ್ಕಮಟ್ಟಿಗೆ ಶಕ್ತನಾದರೂ, ಇಲ್ಲಿನ ವಾಸ್ತವಿಕ ಲೋಕ ಅವನನ್ನು ಅಪರಿಚಿತನೆಂದೇ ಬಗೆಯುತ್ತದೆ. ಜ್ವರಗಡ್ಡೆಯಿಂದ ಉಬ್ಬಿಹೋದ ಹೊಟ್ಟೆಯಿದ್ದರೂ ಬಟ್ಟು ತೆಂಗಿನಮರವನ್ನು ಮಂಗನಂತೆ ಏರುವುದರಲ್ಲಿ ಶಿವರಾಮಯ್ಯನ ಅನುಭವಕ್ಕೆ ವಿರುದ್ಧವಾದ ಒಂದು ಸಂಗತಿಯನ್ನು ನಾವು ನೋಡುತ್ತೇವೆ.

ಗೋಪಾಲಯ್ಯನವರಲ್ಲಿ ಎಷ್ಟೇ ಕರ್ತೃತ್ವಶಕ್ತಿಯಿದ್ದರೂ ಅವರು ವಾತಾವರಣಕ್ಕೆ ಬಲಿ ಎಂದು ಶಿವರಾಮಯ್ಯನಿಗೆ ಅರಿವಾಗುವುದು. ಅವನು ಗೋಪಾಲಯ್ಯ ನೀರ್ಕಟ್ಟೆ ಮಾಡಲು ಯತ್ನಿಸಿದ ಜಾಗವನ್ನು ಸಂದರ್ಶಿಸಿದಾಗ. ಇದುವರೆಗೆ ಕೇವಲ ಯಶಸ್ಸಿನ ಕತೆಯಂತಿದ್ದ ಅವರ ಕೃತಿಗಳ ವರ್ಣನೆಗೆ ಈ ವಿವರದಿಂದ ಜಟಿಲತೆ ಬರುತ್ತದೆ. ಆದರೆ ಇಲ್ಲಿಯೂ ಕೂಡ ಶಿವರಾಮಯ್ಯನಿಗೆ ಗೋಪಾಲಯ್ಯನವರು ನಂಬಿದ ಇನ್ನೊಂದು ಮೌಲ್ಯ

ಪರಿಚಯವಾಗುತ್ತದೆ. 'ಅಷ್ಟೆಲ್ಲ ದುಡ್ಡು ಖರ್ಚುಮಾಡಿ ಏನು ಬಂತು?' ಎಂದು ಶಂಕರಮ್ಮ ತಕರಾರು ಮಾಡಿದರೆ, 'ನಮ್ಮ ಋಣದಲ್ಲಿದ್ದುದು ನಮಗೆ ಸಿಕ್ಕಿತು. ಆನೆಯ ಋಣದಲ್ಲಿದ್ದುದು ಅವಕ್ಕೆ ಹೋಯಿತು' ಎಂದು ಗೋಪಾಲಯ್ಯನವರ ಉತ್ತರ.

ಕೆಳಬೈಲಿನಲ್ಲಿಯ ಶಿವರಾಮಯ್ಯನ ಅನುಭವವನ್ನು ಒಂದು ರೀತಿಯಿಂದ ಕನಸಿನ ಅನುಭವಕ್ಕೆ ಹೋಲಿಸಬಹುದು. ತನ್ನ ವಾಸ್ತವಿಕ ಲೋಕದಿಂದ ತಪ್ಪಿಸಿಕೊಂಡು ಅವನಿಲ್ಲಿ ಬಂದು ಸೇರಿದ್ದಾನೆ. ಆದರೆ ಕನಸಿಗೂ ಒಂದು ಕೊನೆಯಿರುವಂತೆ ಶಿವರಾಮಯ್ಯನ ಕೆಳಬೈಲು ವಾಸಕ್ಕೂ ಕೊನೆಬರುತ್ತದೆ. ಇದರ ಮುನ್ಸೂಚನೆ ಶಿವರಾಮಯ್ಯ ಅನುಭವಿಸುವ ಜ್ವರ (ಪು. ೮). ಬಟ್ಯನ ವಕೀಲಿಯಿಂದಾಗಿ ನಾರಾಯಣಯ್ಯ ತನ್ನ ಮುಂದಿಟ್ಟ ಸಮಸ್ಯೆ ಬಗೆಹರಿದಾಗ (ಪು. ೯) ಕೆ. ಎಸ್. ಶರ್ಮ ಶಂಭುವೇ ಎಂದು ಹೊಳೆದು ಗೋಪಾಲಯ್ಯ–ಶಂಕರಿಯರ ದುಃಖದ ನಿವಾರಣೆ ಸಂಭಾವ್ಯವಾದಾಗ (ಪು. ೧೦), ಶಿವರಾಮಯ್ಯ ಕೆಳಬೈಲಿನಲ್ಲಿ ತನ್ನ ವಾಸವನ್ನು ಮುಂದುವರಿಸುವುದು ಕಾದಂಬರಿಯ ಕ್ರಿಯೆಯ ದೃಷ್ಟಿಯಿಂದ ಅವಶ್ಯವಾಗುತ್ತದೆ. ಆದರೆ ಇದು ಶಿವರಾಮಯ್ಯನ ಕನಸಿನ ಕೊನೆಯೂ ಅಹುದು. ಅವನು ಇಲ್ಲಿ ಆಗಂತುಕ ಮಾತ್ರ. ತನ್ನ ವಾತಾವರಣಕ್ಕೆ ಅವನು ಮರಳುವುದು ಸ್ವಾಭಾವಿಕದ್ದಂತೆ, ಅನಿವಾರ್ಯವೂ ಆಗಿದೆ. ಈ ಕನಸು ಅವನ ಬಾಳಿಗೆ ಹೊಸ ಅರ್ಥವನ್ನು, ಮೌಲ್ಯಗಳನ್ನು ಕೊಡುತ್ತದೆ ಎನ್ನುವುದೇ ಕ್ರಿಯೆಯ ಸಾಫಲ್ಯ. ಶಿವರಾಮಯ್ಯ ಗೋಪಾಲಯ್ಯ ಜೊತೆಗೂಡಿ ಪುತ್ತೂರಿಗೆ ಹೊರಡುವುದರಲ್ಲಿ ನಗರಜೀವನ–ಗ್ರಾಮಜೀವನಗಳ ಅನ್ಯೋನ್ಯ ಸಂಬಂಧದ ಸಂಕೇತವನ್ನು ಕೂಡಾ ನಾವು ಕಾಣಬಹುದು.

III

ಬೆಟ್ಟದಜೀವ ಪ್ರಕಟವಾದಾಗ ಇದೂ ಒಂದು ಕಾದಂಬರಿಯೇ ಎಂದು ಓದುಗರಿಗೆ ಸಂಶಯ ಬಂದದ್ದುಂಟು.[2] ಕಥೆಯೇ ಕಾದಂಬರಿಯ ಮುಖ್ಯ ಅಂಗ ಎಂದು ತಿಳಿದಿದ್ದ ಆ ಕಾಲದಲ್ಲಿ ಈ ಪ್ರತಿಕ್ರಿಯೆ ವಿಚಿತ್ರವೆನಿಸಲಿಲ್ಲ. ಆದರೆ ಇಂದು ಕನ್ನಡದಲ್ಲಿ ಕಾದಂಬರಿ ಬೆಳೆದು ಪ್ರಬುದ್ಧ ಸಾಹಿತ್ಯ ರೂಪವಾದಾಗ ಕಾದಂಬರಿಯ ಅರ್ಥವ್ಯಾಪ್ತಿಯನ್ನು, ತಂತ್ರವನ್ನು ತಿಳಿಯುವ, ಅಳೆಯುವ ದೃಷ್ಟಿ ಬದಲಾದಾಗ ಅದೇ ಅಭಿಪ್ರಾಯವನ್ನಿಟ್ಟುಕೊಳ್ಳುವುದು ತಪ್ಪಾಗುತ್ತದೆ. ಇಂದು ನಾವು ಹಿಂದಿರುಗಿ ನೋಡಿದಾಗ **ಬೆಟ್ಟದಜೀವದ** ಆಧುನಿಕ ತಂತ್ರ ನಮಗೆ ಆಶ್ಚರ್ಯವನ್ನುಂಟುಮಾಡುತ್ತದೆ. ಇಲ್ಲಿನ ತಂತ್ರ ಕತೆಯ ಹುಟ್ಟು–ಬೆಳವಣಿಗೆ–ತುರೀಯಾವಸ್ಥೆ–ಮುಕ್ತಾಯಗಳ ಸಾಂಪ್ರದಾಯಿಕ ಬಂಧದಿಂದ ದೂರ ಸರಿದು ತನ್ನದೇ ಬಂಧವನ್ನು ಸಿದ್ಧಪಡಿಸಿಕೊಳ್ಳುತ್ತದೆ. ಪಾತ್ರ, ಘಟನೆ,

---

೨. ನಿಹಾರಿ, **ಜಯಂತಿ**, ಅಕ್ಟೋಬರ, ೧೯೪೩.

ಆವರಣಗಳ ವಾಸ್ತವಿಕತೆ, ಅವುಗಳನ್ನೊಂದು ನಿಯಂತ್ರಿತ ಉದ್ದೇಶಕ್ಕಾಗಿ ಬಳಸಿಕೊಂಡ ಜಾಣ್ಮೆ, ಸಾಹಿತ್ಯಿಕ ದೃಷ್ಟಿಯಿಂದ ನಾವಿಲ್ಲಿ ಮೆಚ್ಚಬೇಕಾದ ಮುಖ್ಯ ಗುಣಗಳಾಗಿವೆ. ಈ ಉದ್ದೇಶ ಈಗಾಗಲೇ ವಿವರಿಸಿದಂತೆ, ಗ್ರಾಮ-ಜೀವನದ ಮೌಲ್ಯಗಳನ್ನು ನಾಗರಿಕ ಸಂವೇದನೆಯ ಬೆಳವಣಿಗೆಗಾಗಿ, ವಿಕಾಸ-ಕ್ಕಾಗಿ ಉಪಯೋಗಿಸುವುದು. ಈ ದೃಷ್ಟಿಯಿಂದ ಶಿವರಾಮಯ್ಯ ಕತೆಯ ಕೇಂದ್ರಪ್ರಜ್ಞೆಯಾದರೆ ಗೋಪಾಲಯ್ಯ ಕತೆಯ ಮೌಲ್ಯಗಳ ಕೇಂದ್ರಪ್ರತೀಕ. ಪ್ರಜ್ಞೆ-ಪ್ರತೀಕಗಳೆರಡರ ಸಾಹಿತ್ಯಿಕ ಸೃಷ್ಟಿಯಲ್ಲಿ ಅವುಗಳ ಸಂಬಂಧವನ್ನು ನಾಟ್ಯೀಕರಿಸುವ ಸಂವಿಧಾನದ ರಚನೆಯಲ್ಲಿ ಕಾರಂತರು ಪಡೆದಿರುವ ಯಶಸ್ಸು ಈ ಕಾದಂಬರಿಯ ಸಫಲತೆಗೆ ಕಾರಣವಾಗಿದೆ ಎಂದು ಹೇಳಬಹುದು. ಕಾರಂತರು ಪ್ರಸ್ಥಾಪಿಸುವ ಸಾಂಪ್ರದಾಯಿಕ ಮೌಲ್ಯಗಳು ಇಂದಿನ ನವ್ಯಪ್ರಜ್ಞೆಗೆ ಅಗ್ರಾಹ್ಯ ವೆಂದೆನಿಸಿದರೂ, ಅವರು ಚಿತ್ರಿಸಿದ ಗ್ರಾಮಜೀವನದ ಸಂಪೂರ್ಣತೆಯನ್ನಾಗಲಿ, ಪ್ರಾತಿನಿಧಿಕ ಸ್ವರೂಪವನ್ನಾಗಲಿ ನಾವು ಒಂದುವೇಳೆ ಒಪ್ಪದೇ ಹೋದರೂ ಅವರ ಕಾದಂಬರಿಯ ಸಾಹಿತ್ಯಿಕ ಸಾಧನೆಯ ಹಿರಿಮೆಯನ್ನು ನಾವು ಅಲ್ಲಗಳೆ-ಯಲಿಕ್ಕಾಗುವುದಿಲ್ಲ. ಒಂದುವೇಳೆ, **ಚೆಟ್ಟದಜೀವದ** ಮಾನವೀಯ ಮೌಲ್ಯ-ಗಳು ಇನ್ನೂ ಸಜೀವ ಮೌಲ್ಯಗಳು, ಅವಕ್ಕೊಂದು ಸಾರ್ವಕಾಲಿಕ ಸತ್ಯತೆಯಿದೆ ಎಂದೆನಿಸಿದರೆ ಈ ಕೃತಿಯ ಘನತೆ ಇನ್ನೂ ಹೆಚ್ಚುತ್ತದೆ.

ಚೆಟ್ಟದಜೀವದ ಭಾಷೆಯ ಬಗ್ಗೆಯೂ ಒಂದು ಮಾತು ಹೇಳಬೇಕೆನ್ನಿ-ಸುತ್ತದೆ. 'ಹವ್ಯಕರ ಅಚ್ಚಗನ್ನಡವನ್ನು ಬರೆಯದೇ ಉಪಕಾರ ಮಾಡಿ-ಕೊಟ್ಟಿದ್ದಾರೆ' ಎಂದು ವಿಮರ್ಶಕರೊಬ್ಬರು ಬರೆದಿದ್ದರೂ, ಇಲ್ಲಿ ಭಾಷೆ ತನ್ನ ವೈವಿಧ್ಯವನ್ನು ಕಳೆದುಕೊಂಡು ಕೆಲಮಟ್ಟಿಗೆ ಬಡವಾಗಿದೆ. **ಗ್ರಾಮಾಯಣ, ಮೂರು ದಾರಿಗಳು, ನೈನೀ ಸತ್ತಾಗ ನಾನ್ಯಾ ಅತ್ತೆ** ಇಂತಹ ಕಾದಂಬರಿ-ಗಳೊಡನೆ ಈ ದೃಷ್ಟಿಯಿಂದ **ಚೆಟ್ಟದಜೀವವನ್ನು** ಹೋಲಿಸಿದಾಗ ಒಂದು ರೀತಿಯ ಅಸಮಾಧಾನವಾಗುವುದು ಸಹಜವಾಗಿದೆ. ಆದರೆ ಹೀಗೆ ವಿಚಾರ-ಮಾಡುವಾಗ ಒಂದು ಮಹತ್ವದ ಮಾತನ್ನು ನಾವು ಲಕ್ಷ್ಯದಲ್ಲಿಡಬೇಕಾಗುತ್ತದೆ. ಅದೆಂದರೆ, ಈ ಕಾದಂಬರಿಯ ಸಾಮಗ್ರಿ ಶಿವರಾಮಯ್ಯ ಅನುಭವಿಸಿದಂತೆ ಅವನ ಮನಸ್ಸಿನಲ್ಲಿ ಸ್ಥಿತ್ಯಂತರಹೊಂದಿ, ಅವನ ಟೀಕೆ, ವರ್ಣನೆ, ವಿಶ್ಲೇಷಣೆ-ಗಳೊಂದಿಗೆ ನಿವೇದಿತವಾಗುವುದರಿಂದ ಅದು ಮುಖ್ಯವಾಗಿ ಅವನಿಗೆ ಸಹಜವಾದ ಭಾಷೆಯಲ್ಲಿಯೇ ಬರುತ್ತದೆನ್ನುವುದು. ನಾವು ನೇರವಾಗಿ ಮುಟ್ಟುವುದು ನಗರ ಸಂವೇದನೆ. ಅದರ ಮಾಧ್ಯಮ ನಾಗರಿಕನ ಅಗ್ರಾಮ್ಯ ಭಾಷೆ. ಇಗ್ಗಪ್ಪ ಹೆಗ್ಗಡೆಯ ವಿವಾಹಪ್ರಹಸನದಂತಹ ನಾಟ್ಯಕೃತಿಗಳು ಹೈಗರ ಭಾಷೆಯನ್ನು ಕೈಬಿಟ್ಟಿದ್ದರೆ ಆಗಬಹುದಾಗಿದ್ದ ಹಾನಿ ಮಾರಕವಾಗಬಹುದಾಗಿತ್ತು, ಆದರೆ **ಚೆಟ್ಟದಜೀವದಲ್ಲಿ** ಅದು ಧ್ವನಿವೈವಿಧ್ಯದ ಅಭಾವಕ್ಕೆ ಮಾತ್ರ ಕಾರಣವಾಗುತ್ತದೆ.

ಜನ್ನನ ಯಶೋಧರ ಚರಿತೆ

(ಒಂದು ಪುನರ್ವಿಮರ್ಶೆ)

ಗಿರಡ್ಡಿ ಗೋವಿಂದರಾಜ

'ಯಶೋಧರ ಚರಿತೆ' ಕನ್ನಡದ ಉತ್ತಮ ಕಾವ್ಯಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದೆ. ಆದರೂ ಇದೊಂದು ಮತೀಯ ಅಭಿಪ್ರಾಯಗಳನ್ನು ಮಂಡಿಸುವ ಕಾವ್ಯವೆಂದೂ, ಭವಾವಳಿಯ ನೀರಸ ನಿರೂಪಣೆಯಿಂದಾಗಿ ಏರ ಬೇಕಾದ ಎತ್ತರಕ್ಕೆ ಏರಿಲ್ಲವೆಂದೂ ವಿಮರ್ಶಕರು ಒಮ್ಮತದಿಂದ ನಿರ್ಣಯಕ್ಕೆ ಬಂದಿದ್ದಾರೆ. ಹಾಗೆಯೇ ಈ ಕಾವ್ಯದ ಯಶಸ್ಸಿನ ಮೂಲ ಯಶೋಧರ–ಅಮೃತಮತಿಯರ ಪ್ರಣಯಕಥೆಯಲ್ಲಿದೆ ಎಂಬ ಭಾವನೆ ಸಾರ್ವತ್ರಿಕವಾಗಿರು ವಂತಿದೆ. ಈ ಪ್ರಣಯಕಥೆಯೇ ಯಶೋಧರ ಚರಿತೆಯ ತಿರುಳು ಎಂದು ತೀ. ನಂ. ಶ್ರೀಕಂಠಯ್ಯನವರೂ[೧] ಈ ಕಾವ್ಯದ ಆಕರ್ಷಣವು ಅದರ ಪ್ರಣಯ ಕಥೆಯಲ್ಲಿಯೇ ಇದೆ ಎಂದು ರಾ. ಯ. ಧಾರವಾಡಕರರೂ[೨] ಅಭಿಪ್ರಾಯ ಪಟ್ಟಿದ್ದಾರೆ.

ಆದರೆ ಯಶೋಧರ–ಅಮೃತಮತಿಯರ ಪ್ರಣಯಕಥೆಯಲ್ಲಿ ವಿಮರ್ಶ ಕರು ಅನೇಕ ಬಗೆಯ ತೊಡಕುಗಳನ್ನು ಕಂಡಿದ್ದಾರೆ. ಈ ವರೆಗೆ **ಯಶೋಧರ ಚರಿತೆಯ** ಮೇಲೆ ಬಂದಿರುವ ಎಲ್ಲ ವಿಮರ್ಶೆಯೂ ಈ ಸಮಸ್ಯೆಗಳನ್ನು ಬಿಡಿ ಸುವದರಲ್ಲಿಯೇ ಮಗ್ನವಾಗಿದೆ. ಮುಖ್ಯವಾಗಿ ಈ ಪ್ರಣಯಕಥೆಯಲ್ಲಿ ಉದ್ಭವಿ ಸುವ ಪ್ರಶ್ನೆಗಳನ್ನು ಹೀಗೆ ಪಟ್ಟಿಮಾಡಬಹುದು :

(೧) ಅಮೃತಮತಿ ಸಂಗೀತಪ್ರಿಯಳೆಂಬ ಸೂಚನೆ ಎಲ್ಲೂ ಇಲ್ಲ. ಆದರೂ ಆಕಸ್ಮಿಕವಾಗಿ ಕೇಳಿದ ಬದಗನ ಸಂಗೀತಕ್ಕೆ ಅವಳು ಇಷ್ಟೊಂದು ತೀವ್ರ ವಾಗಿ ಮನಸೋತದ್ದು ಹೇಗೆ?

(೨) ಯಶೋಧರನಂಥ ಸುಂದರನೂ, ವೀರನೂ, ಸುಸಂಸ್ಕೃತನೂ ಆದ ಗಂಡನಿದ್ದು ಬದಗನಂಥ ವಿಕಾರರೂಪನಲ್ಲಿ ಅವಳು ಅನುರಕ್ತಳಾದದ್ದು ಹೇಗೆ?

(೩) ಹಾಗೆಯೇ, ಒಂದು ಕ್ಷಣದ ತೀವ್ರತೆಯಲ್ಲಿ ಹತೋಟಿ ತಪ್ಪಿ ಜಾರಿಬಿದ್ದರೂ ಅವಳು ಮುಂದಾದರೂ ಏಕೆ ಚೇತರಿಸಿಕೊಳ್ಳಲಿಲ್ಲ?

---

೧. "ಕಾವ್ಯಸಮೀಕ್ಷೆ"—ತೀ. ನಂ. ಶ್ರೀಕಂಠಯ್ಯ ; ಪುಟ : ೫೯.

೨. "ಸಾಹಿತ್ಯಸಮೀಕ್ಷೆ"—ರಾ. ಯ. ಧಾರವಾಡಕರ ; ಪುಟ : ೧೧೯–೨೦.

(೪) ಬದಗನು ಅಷ್ಟೊಂದು ವಿಕಾರರೂಪನಾಗಿರುವದು ಕಾವ್ಯಸಂದರ್ಭದ ದೃಷ್ಟಿಯಿಂದ ಆವಶ್ಯಕವಾಗಿತ್ತೆ? ಇತ್ಯಾದಿ.

ಈ ಪ್ರಣಯದುರಂತಕ್ಕೆ ವಿಧಿಯ ಮುಸಕವೇ ಕಾರಣವೆಂದು ಒಂದು ಸಮಾಧಾನ ವ್ಯಕ್ತವಾಗಿದೆ.[೩] ಅಮೃತಮತಿ ಜಾರುವದಕ್ಕೆ ಸಂಗೀತ ಒಂದು ನೆವಮಾತ್ರವಲ್ಲ, ಅದೇ ಮುಖ್ಯ ಕಾಗಣ; ಸಂಗೀತದ ಪ್ರಭಾವ ಅಷ್ಟು ಪ್ರಬಲವಾದುದು ಎಂಬ ಒಂದು ವಿವರಣೆಯೂ ಬಂದಿದೆ.[೪] ಅಮೃತಮತಿಯ ಪ್ರಣಯ ಒಂದು ವಿಪರೀತ ಮನೋವಿಕಾರ ಎಂಬ ಸಮಾಧಾನವನ್ನೂ ಕೊಡಲಾಗಿದೆ.[೫] ವೈಪರೀತ್ಯಮನೋವಿಜ್ಞಾನದ ಸಿದ್ಧಾಂತಗಳಿಂದ ಈ ಪ್ರಸಂಗವನ್ನು ವಿವರಿಸುವ ಪ್ರಯತ್ನವೂ ನಡೆದಿದೆ.[೬]

ಒಟ್ಟಿನಲ್ಲಿ ಈ ಪ್ರಶ್ನೆಗಳನ್ನು ಕೇಳುವದರ ಅರ್ಥವೆಂದರೆ ವಾಸ್ತವಿಕತೆಯ ದೃಷ್ಟಿಯಿಂದ ಈ ಸನ್ನಿವೇಶದ ಚಿತ್ರಣ ಸಮಾಧಾನಕರವಾಗಿ ಕಾಣುವದಿಲ್ಲ. ಆದರೆ **ಯಶೋಧರ ಚರಿತೆ**ಯಂಥ ಕಾವ್ಯದಲ್ಲಿ ವಾಸ್ತವ ಚಿತ್ರಣವನ್ನು ಅಪೇಕ್ಷಿಸುವದು ಎಷ್ಟರಮಟ್ಟಿಗೆ ಸಮಂಜಸ ಎಂಬುದೇ ಮುಖ್ಯವಾದ ಪ್ರಶ್ನೆ. ಇದು ವಿಶಿಷ್ಟ ಪರಿಸರವನ್ನು ಹೊಂದಿರುವ ಕಾವ್ಯ. ಹಿಟ್ಟಿನ ಕೋಳಿಯಲ್ಲಿ ಬೆಂತರವೊಂದು ಬಂದು ಸೇರಿ ಕೂಗುವದರಲ್ಲಿ, ಭವಾವಳಿಯ ನಿರೂಪಣೆಯಲ್ಲಿ, ಮಾರಿದೇವತೆ ಪ್ರತ್ಯಕ್ಷವಾಗಿ ಮನಃಪರಿವರ್ತನೆಹೊಂದುವಲ್ಲಿ ಈ ಕಾವ್ಯ ವಾಸ್ತವದ ಮಟ್ಟಕ್ಕಿಂತ ಭಿನ್ನವಾದ ಮಟ್ಟದಲ್ಲಿ ಕೆಲಸಮಾಡುತ್ತದೆ. ಬೆಂತರದ ಪ್ರಸಂಗ, ಭವಾವಳಿ, ಮಾರಿದೇವತೆಯ ಮನಃಪರಿವರ್ತನೆ ಮುಂತಾದ ವಾಸ್ತವಿಕವಲ್ಲದ ಘಟನೆಗಳನ್ನು ಪ್ರಶ್ನಿಸದೆ ಒಪ್ಪಿಕೊಳ್ಳುವ ವಿಮರ್ಶಕರು ಅಮೃತಮತಿಯ ಪ್ರಣಯಪ್ರಸಂಗವನ್ನು ಮಾತ್ರ ವಾಸ್ತವಿಕ ಒರೆಗಲ್ಲಿಗೆ ಹಚ್ಚಿನೋಡುವದು ಎಷ್ಟರಮಟ್ಟಿಗೆ ಯುಕ್ತವಾಗಿದೆ? ಕಾವ್ಯದ ಒಟ್ಟು ಶಿಲ್ಪದಲ್ಲಿ ಬೆಂತರದ ಕೂಗಿಗೂ, ಭವಾವಳಿಯ ಚಿತ್ರಣಕ್ಕೂ, ಮಾರಿದೇವತೆಯ ಮನಃಪರಿವರ್ತನೆಗೂ ನಿರ್ದಿಷ್ಟವಾದ, ಅನಿವಾರ್ಯವಾದ ಉದ್ದೇಶವಿರುವಂತೆ ಅಮೃತಮತಿಯ ಪ್ರಣಯಪ್ರಸಂಗಕ್ಕೂ ಒಂದು ನಿರ್ದಿಷ್ಟವಾದ ಅನಿವಾರ್ಯವಾದ ಉದ್ದೇಶವಿದೆ. ಮುಖ್ಯವಾಗಿ ಈ ಪ್ರಸಂಗದ ಸಲುವಾಗಿ ಎದ್ದಿರುವ ಗೊಂದಲಕ್ಕೆ ಈ ಕಾವ್ಯವು ಕೆಲಸಮಾಡುತ್ತಿರುವ ನಿರ್ದಿಷ್ಟ ಪಾತಳಿಯನ್ನು ನಿರ್ಲಕ್ಷಿಸಿ ವಾಸ್ತವ ದೃಷ್ಟಿಕೋನದಿಂದ ಪರೀಕ್ಷಿಸಲು ಯತ್ನಿಸಿರುವದೇ ಕಾರಣವಾಗಿದೆ.

---

೩. "ಸಾಹಿತ್ಯಸಮೀಕ್ಷೆ"--ಪುಟ : ೧೩೧.

೪. "ಕಾವ್ಯವ್ಯಾಸಂಗ"—ಎಲ್. ಆರ್. ಹೆಗಡೆ ; ಪುಟ : ೫೩–೫೪.

೫. "ದ್ರೌಪದಿಯ ಶ್ರೀಮುಡಿ"—ಕುವೆಂಪು ; ಪುಟ : ೨೭–೨೮.

೬. "ಕಾವ್ಯವ್ಯಾಸಂಗ"—ಎಲ್. ಆರ್. ಹೆಗಡೆ.

ಇದರ ಜೊತೆಗೆ ಕಾವ್ಯದ ಮುಖ್ಯ ಉದ್ದೇಶವನ್ನು ಮರೆತು, ಕಾವ್ಯದ ಒಟ್ಟು ಶಿಲ್ಪದಲ್ಲಿ ಒಂದು ಪಾತ್ರದ ಔಚಿತ್ಯವೇನೆಂದು ಗಮನಿಸದೆ, ಕಾವ್ಯ-ಸಂದರ್ಭದಿಂದ ಅದನ್ನು ಬೇರ್ಪಡಿಸಿ ಪರೀಕ್ಷಿಸಲೆತ್ನಿಸಿರುವದೂ ಈ ಎಲ್ಲಾ ಸಮಸ್ಯೆಗಳು ಉದ್ಭವಿಸುವದಕ್ಕೆ ಕಾರಣವಾಗಿದೆ. ಕಾವ್ಯದಲ್ಲಿಯ ಪಾತ್ರಗಳಿ-ಗಾಗಲಿ, ಪ್ರಸಂಗಗಳಿಗಾಗಲಿ, ಕಾವ್ಯದ ಉದ್ದೇಶವನ್ನು ಮೀರಿದ ಸ್ವತಂತ್ರ ಜೀವಂತಿಕೆ ಇರಬಹುದಾದರೂ, ಆ ಉದ್ದೇಶಕ್ಕೆ ಪೂರ್ತಿ ಹೊರತಾದ ವ್ಯಕ್ತಿತ್ವ-ವಂತೂ ಖಂಡಿತ ಇರುವದಿಲ್ಲ. ಆದ್ದರಿಂದ ಕಾವ್ಯಸಂದರ್ಭದಿಂದ ಅವುಗಳನ್ನು ಬೇರ್ಪಡಿಸಿ ನಮ್ಮ ಸುತ್ತುಮುತ್ತಲಿನ ಜೀವಂತವ್ಯಕ್ತಿಗಳಂತೆಯೇ ಅವುಗಳನ್ನು ಪರೀಕ್ಷೆಗೆ ಗುರಿಪಡಿಸಿದಾಗ ಎಷ್ಟೋ ಸಲ ಅವು ತೀರಾ ವಿಚಿತ್ರವಾಗಿ, ಅವಾಸ್ತವ-ವಾಗಿ ಕಾಣುತ್ತವೆ. ಅಲ್ಲದೆ ಹೀಗೆ ಆ ಪಾತ್ರಗಳನ್ನು ಬೇರ್ಪಡಿಸಿ ಸ್ವತಂತ್ರವಾಗಿ ನಿಲ್ಲಿಸಿ ಪರೀಕ್ಷಿಸುವದರಿಂದ ಕಾವ್ಯದ ಮೂಲ ಉದ್ದೇಶಕ್ಕೆ, ಸಮಗ್ರ ಶಿಲ್ಪಕ್ಕೆ ಕೊಡಬೇಕಾದಷ್ಟು ಗಮನಕೊಟ್ಟಂತಾಗುವದಿಲ್ಲ. ಯಶೋಧರ–ಅಮೃತಮತಿ-ಯರ ಪ್ರಣಯಪ್ರಸಂಗವೇ **ಯಶೋಧರ ಚರಿತೆಯ** ತಿರುಳು ಎಂದು ಹೇಳುವ ದಾದರೆ ಆ ಕಾವ್ಯದ ಉದ್ದೇಶವನ್ನು ಸರಿಯಾಗಿ ಗ್ರಹಿಸಿದಂತಾಗುವದಿಲ್ಲ. ಕಾವ್ಯದ ಇನ್ನನೇಕ ಪ್ರಸಂಗಗಳಂತೆ ಇದೂ ಒಂದು ಮಹತ್ವದ ಪ್ರಸಂಗವೇ ಹೊರತು, ಅದೇ ಕಾವ್ಯದ ಜೀವಾಳವಲ್ಲ. ಹಾಗೆ ಹೇಳುವದು **ಯಶೋಧರ ಚರಿತೆಯ** ಸಂವಿಧಾನಕೌಶಲಕ್ಕೆ ಅಪಚಾರ ಮಾಡಿದಂತೆ.

ಅಮೃತಮತಿಯ ಪಾತ್ರವಿಶ್ಲೇಷಣೆಯಲ್ಲಿ ಅನೇಕ ಜನ ವಿಮರ್ಶಕರು ತೋರಿಸಿರುವ ಆಸಕ್ತಿ ಒಂದು ದೃಷ್ಟಿಯಿಂದ ಅಸಾಹಿತ್ಯಿಕವಾದುದು. ಇದಕ್ಕೆ ದುರಂತಪಾತ್ರದ ವೈಭವವನ್ನು ಕೊಡುವ ಪ್ರಯತ್ನ ಕೂಡಾ ನಡೆದಿವೆ. ಇದು ನಮ್ಮ ಸುತ್ತುಮುತ್ತಲಿನ ಜೀವನದಲ್ಲಿ ಬದುಕಿರುವ ಜೀವಂತ ವ್ಯಕ್ತಿಯೆಂಬಂತೆ ಅದರ ಪ್ರತಿಯೊಂದು ನಡತೆಯನ್ನೂ ಪ್ರಶ್ನಿಸಿ, ಸಂದೇಹಿಸಿ ಆ ಪ್ರಶ್ನೆ–ಸಂದೇಹ ಗಳಿಗೆ ವಾಸ್ತವದೃಷ್ಟಿಯ ಉತ್ತರ–ಸಮಾಧಾನಗಳನ್ನು ಕೊಡಲು ಯತ್ನಿಸಲಾ-ಗಿದೆ. ಕೆಲವರಂತೂ ಜನ್ನ ಅಮೃತಮತಿಯ ಪಾತ್ರಕ್ಕೆ ಬಹಳ ಅನ್ಯಾಯಮಾಡಿ ದ್ದಾನೆಂದು ನೊಂದುಕೊಂಡು ಆ ಪಾತ್ರವನ್ನು ಉದಾತ್ತೀಕರಿಸಲು ಅವಶ್ಯವಾದ ಬದಲಾವಣೆ ಮಾಡಿಕೊಂಡು ಹೊಸ ಕತೆ ಬರೆದಿದ್ದಾರೆ. ಇದಕ್ಕೆ ಜನ್ನನ ಕಾವ್ಯೋ ದ್ದೇಶವನ್ನು ತಪ್ಪಾಗಿ ತಿಳಿದುಕೊಂಡ ಬಾಲಿಶ ಭಾವಾತಿರೇಕವೇ ಕಾರಣವೇ ಹೊರತು ಇನ್ನೇನೂ ಅಲ್ಲ. ಹಾಗೆಯೇ ಅಮೃತಮತಿಯ ವಿಚಿತ್ರ ನಡವಳಿಕೆಗೆ ಲೈಂಗಿಕ ಮನಃಶಾಸ್ತ್ರದ ವಿಕೃತ ಕಾಮದ ಸಿದ್ಧಾಂತಗಳ ವಿವರಣೆ ಕೊಡುವ ಪ್ರಯತ್ನವೂ ಅಸಾಧುವಾಗಿದೆ. ಈ ಯಾವ ವಿವರಣೆಯೂ ಕಾವ್ಯದ ನಿಜವಾದ ಉದ್ದೇಶದ ಮೇಲೆ ಬೆಳಕು ಚೆಲ್ಲುವದಿಲ್ಲ. ಆದ್ದರಿಂದ ಕಾವ್ಯೋದ್ದೇಶಕ್ಕೆ ಸಂಬಂಧ ವಿಲ್ಲದ ಎಲ್ಲ ವಿವರಣೆಗಳನ್ನೂ ಅಸಾಹಿತ್ಯಿಕವೆಂದು ತಳ್ಳಬೇಕಾಗುತ್ತದೆ. ಎಂದರೆ

ಇದು ಕಾವ್ಯದ ಆಶಯಕ್ಕೆ ಹೊರತಾದ ಬಾಹ್ಯ ವಿವರಣೆಯಾಗುತ್ತದೆಯೇ ಹೊರತು, ಆಂತರಿಕ ಪ್ರಮಾಣಗಳಿಂದ ಪುಷ್ಟಿಪಡೆಯುವದಿಲ್ಲ. ಒಂದು ಕಾವ್ಯದ ಯಾವದೇ ಪಾತ್ರದ ಅಥವಾ ಪ್ರಸಂಗದ ಔಚಿತ್ಯ ಮತ್ತು ಯಶಸ್ಸು ಆ ಕಾವ್ಯದ ಒಟ್ಟು ಆಶಯದಿಂದಲೇ ನಿರ್ಣಯಿಸಲ್ಪಡಬೇಕೇ ಹೊರತು, ಕಾವ್ಯದ ಹೊರಗಿನ ವೈಜ್ಞಾನಿಕ ಸಿದ್ಧಾಂತಗಳಿಂದಲ್ಲ, ಕಾವ್ಯದ ಪುಟಗಳ ಹೊರಗಿರುವ ವಾಸ್ತವಿಕ ಜೀವನದಿಂದಲ್ಲ. ಎಂದರೆ ಆ ಪಾತ್ರ ವಾಸ್ತವಿಕ ಜೀವನಕ್ಕೆ ಎಷ್ಟು ಸಮೀಪ ವಾಗಿದೆ ಎಂಬುದಲ್ಲ, ಕಾವ್ಯೋದ್ದೇಶವನ್ನು ಎಷ್ಟರ ಮಟ್ಟಿಗೆ ಪೋಷಿಸುತ್ತದೆ ಎಂಬುದೇ ಮುಖ್ಯವಾದ ಪ್ರಶ್ನೆ. **ಯಶೋಧರ ಚರಿತೆ**ಯಲ್ಲಂತೂ ವಾಸ್ತವಿಕ-ಚಿತ್ರಣ ಕವಿಯ ಉದ್ದೇಶವಲ್ಲವೇ ಅಲ್ಲ. ಆದ್ದರಿಂದ ಅಮೃತಮತಿಯ ಪಾತ್ರ ವನ್ನು ಈ ಒರೆಗಲ್ಲಿಗೆ ಹಚ್ಚುವದು ಅವಾಸ್ತವವಾಗುತ್ತದೆ.

ಅಂತೆಯೇ **ಯಶೋಧರ ಚರಿತೆ**ಯಲ್ಲಿ ಕವಿಯ ಆಶಯ ಏನಿತ್ತೆಂಬುದನ್ನು ಕಂಡುಹಿಡಿಯುವದು ವಿಮರ್ಶೆಯ ಮೊದಲ ಕೆಲಸವಾಗಿದೆ. ಕಾವ್ಯದಲ್ಲಿ ಪಾತ್ರಗಳ ಬಿಡಿಬಿಡಿಯಾದ ಅಭ್ಯಾಸದಿಂದ, ಪಾತ್ರಗಳು ವ್ಯಕ್ತವಾಗಿ ಹೇಳುವ ಮಾತುಗಳಿಂದ, ಅಥವಾ ಕವಿಯೇ ಹೇಳಿಕೊಳ್ಳುವ ವಿಚಾರಗಳಿಂದ ಕವಿಯ ಆಶಯವನ್ನು ನಿರ್ಣಯಿಸುವದಕ್ಕಿಂತಲೂ ಹೆಚ್ಚು ಮಹತ್ವದ್ದು ಆದರ ಪ್ರತಿಮಾ ಸಂಯೋಜನೆಯ ಪರೀಕ್ಷೆ. ಒಂದು ಕಾವ್ಯದ ಅರ್ಥದ ಸಂಘಟನೆಯನ್ನು ಶಬ್ದವಿನ್ಯಾಸ (verbal patterns), ವಸ್ತುಸೂಚಕ ಪ್ರತಿಮೆಗಳು (thematic imagery), ಸಂಕೇತಗಳು, ಸಾಂಕೇತಿಕ ಕ್ರಿಯೆಗಳು ಮೊದಲಾದ ಪ್ರಾಥಮಿಕ ಘಟಕಗಳಿಗೆ ಇಳಿಸಿ ಆದರ ಆಶಯವನ್ನು ಪುನಃ ರಚಿಸಬಹುದು. ಒಂದು ಕಾವ್ಯದ ಸ್ವರೂಪ ಮೂಲಭೂತವಾಗಿ ಅರ್ಥಗಳ ಬಂಧವಾಗಿದೆ. ಆದರ ವಸ್ತುವಿನ ಬೆಳವಣಿಗೆಯನ್ನು ಪ್ರತಿಮೆಗಳ ವಿನ್ಯಾಸ–ಪ್ರತಿವಿನ್ಯಾಸಗಳಲ್ಲಿ ನೋಡಬಹುದು. ಪ್ರತಿಮೆಗಳೆಂದರೆ ಕಾವ್ಯಕ್ಕೆ ಸೊಬಗನ್ನು, ಆಸ್ವಾದತೆಯನ್ನು ನೀಡುವ ಆಲಂಕಾರಗಳು ಮಾತ್ರವಲ್ಲ; ವಾತಾವರಣವನ್ನು ನಿರ್ಮಿಸುವದಷ್ಟೇ ಅವುಗಳ ಕೆಲಸವಲ್ಲ; ಪ್ರತಿಮೆಗಳೆಂದರೆ ಕಾವ್ಯದ ಅರ್ಥ, ಬಂಧ ಹಾಗೂ ಪರಿಣಾಮಗಳನ್ನು ಸೂಚಿಸುವ ಸಾಧನಗಳಾಗಿವೆ. ಪಾತ್ರಗಳ ಮಾತು–ಕ್ರಿಯೆಗಳಿಗಿಂತಲೂ ವಿಶಿಷ್ಟ ಪ್ರತಿಮೆಗಳ ಪುನರಾವರ್ತನ, ಬೆಳವಣಿಗೆಗಳಲ್ಲಿ ಕಾವ್ಯದ ವಸ್ತು ಹಾಗೂ ಆ ವಸ್ತುವಿನ ಬಗೆಗಿನ ಕವಿಯ ಧೋರಣೆಯನ್ನು ಗುರುತಿಸಬಹುದು.[೭] ಈ ದೃಷ್ಟಿಯಿಂದ '**ಯಶೋಧರ ಚರಿತೆ**'ಯ ಅಭ್ಯಾಸವು ಪ್ರಯೋಜನಕರವಾಗಬಹುದು.

---

೭. ಈ ದೃಷ್ಟಿಯಿಂದ ಕೆರೊಲಾಯಿನ್ ಸ್ಪರ್ಜನ್ ಹಾಗೂ ಜಿ. ವಿಲ್ಸನ್ ನಾಯಿಟ್ ಇವರು ಮಾಡಿರುವ ಷೆಕ್ಸ್‌ಪಿಯರ್‌ನ ನಾಟಕಗಳ ಅಭ್ಯಾಸದಿಂದ ಆಂಗ್ಲ ವಿಮರ್ಶೆಯಲ್ಲಿ ಹೊಸದೊಂದು ಮನ್ವಂತರವೇ ಆರಂಭವಾಗಿದೆ.

ಯಶೋಧರ ಚರಿತೆಯ ಮೂರನೆಯ ಅವತಾರದಲ್ಲಿ ಈ ಪದ್ಯಗಳಿವೆ :

"ಏಕೆ ಕನಸೆಂದು ನುಡಿದೆನಿ
ದೇಕಂಬಿಕೆ ಬಲಿಯನೊಡ್ಡಿದಳ್ ಕೂಗಿದುದೇ
ಕೀ ಕೃತಕ ತಾಮ್ರಚೂಡನಿ
ದೇಕೆಂದಾರಱಿವರಯ್ಯ ವಿಧಿವಿಳಸನಮಂ ॥

ಅಮೃತಮತಿಯೆಂಬ ಪಾತಕಿ
ಯ ಮಾಯೆ ಬನಮಾಯ್ತು ಚಂದ್ರಮತಿ ಮಾತೆಯ ಮಾ
ತೆಮಗೆ ಬಲಿಯಾಯ್ತು ಹಿಂಸನ
ಮಮೋಘ ಶರಮಾಯ್ತು ಕೆಡೆದುದಾತ್ಮಕುರಂಗಂ ॥"

ಇವೆರಡೂ ಪದ್ಯಗಳು **ಯಶೋಧರ ಚರಿತೆಯ** ಹೃದಯಸ್ಥಾನದಲ್ಲಿ ಇದ್ದು ಕಾವ್ಯದ ಎರಡು ಮಹತ್ವದ ವಸ್ತುಗಳನ್ನು ಸೂಚಿಸುತ್ತವೆ. "ಆರಱಿವರಯ್ಯ ವಿಧಿವಿಳಸನಮಂ" ಎಂಬ ಉದ್ಗಾರ ಇಡಿಯ ಕಾವ್ಯದ ತುಂಬ ಪ್ರತಿಧ್ವನಿಸುವ ವಿಧಿಯ ಕೈವಾಡವನ್ನು ಸೂಚಿಸುತ್ತದೆ. ಈ ಉದ್ಗಾರ ಕಾವ್ಯದಲ್ಲಿ ಇದೊಂದೇ ಅಲ್ಲ. ಅಭಯರುಚಿ–ಅಭಯಮತಿಯರನ್ನು ಚಂಡಕರ್ಮ ಹಿಡಿದುಕೊಂಡು ಹೋಗುವಾಗ ಅಭಯರುಚಿ "ನಿಯತಿಯನಾರ್ ಮೀರಿದಪರ್ ?" ಎನ್ನುತ್ತಾನೆ. ಬದಗನಂಥ ರೂಪಾಧಮನಲ್ಲಿ ಅನುರಕ್ತಳಾದ ಅಮೃತಮತಿಯ ಸ್ಥಿತಿಯನ್ನು ಕುರಿತು "ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ" ಎನ್ನುತ್ತಾಳೆ ಅವಳ ದೂದವಿ. ಅಮೃತ-ಮತಿಯ ಪತನದ ಕಥೆಯನ್ನು ಕೇಳಿದ ಮಾರಿದತ್ತನೂ ಕನಲಿ, "ಆ ಗಂಡ-ನನಪ್ಪಿದ ತೋಳ್ ಪೋಗಂಡನನಪ್ಪುವಂತೆ ಮಾಡಿದ ಬಿದಿಯಂ ಮೂಗಂ ಕೊಯ್ದು ಟ್ಟಗೆಯೊಳ್ ಪೋಗೊರಸದೆ ಕಂಡೆನಾದೊಡೇಂ ಬಿಟ್ಟಪೆನೇ ?" ಎನ್ನುತ್ತಾನೆ. ಆದಕ್ಕೆ "ಮನಸಿಜನ ಮಾಯೆ ವಿಧಿವಿಳಸನದ ನೆರಂಬಡೆಯೆ ಕೊಂದು ಕೂಗದೆ ನರರಂ!" ಎಂದು ಅಭಯರುಚಿ ಸಮಾಧಾನ ನೀಡುತ್ತಾನೆ. ಇವೆಲ್ಲವುಗಳಿಗೆ ಕಳಸವಿಟ್ಟಂತೆ 'ಏಕೆ ಕನಸೆಂದು ನುಡಿದೆಂ, ಇದೇಕೆ ಅಂಬಿಕೆ ಬಲಿಯನೊಡ್ಡಿದಳ್, ಕೂಗಿದುದೇಕೀ ಕೃತಕ ತಾಮ್ರಚೂಡಂ, ಇದೇಕೆ ಎಂದು ಆರಱಿವರಯ್ಯ ವಿಧಿವಿಳಸನಮಂ !' ಎಂಬ ಮಾತು ಬರುತ್ತದೆ. ಯಶೋಧರನ ಈ ಮಾತುಗಳಲ್ಲಿ ಈ ಎಲ್ಲಾ ಘಟನೆಗಳು ಸಂಭವಿಸುತ್ತಿರುವ ರೀತಿಯಲ್ಲಿಯೇ, ಅವುಗಳ ಅತಾರ್ಕಿಕತೆಯಲ್ಲಿಯೇ ಮನುಷ್ಯನ ಶಕ್ತಿಗೆ ಮೀರಿದ ದೈವದ ಸಂಕಲ್ಪ ಕೆಲಸಮಾಡುತ್ತಿರುವ ಪರಿಯನ್ನು ಕವಿ ಗುರುತಿಸಿದ್ದಾನೆ. ಇವೆಲ್ಲ ಹೀಗೇಕೆ ಸಂಭವಿಸಬೇಕಾಗಿತ್ತು ಎಂಬುದಕ್ಕೆ ವಾಸ್ತವದೃಷ್ಟಿಯ ತರ್ಕಬದ್ಧ ಉತ್ತರ ಸಾಧ್ಯವಿಲ್ಲವೆಂದು ಅವನ ಸ್ಪಷ್ಟವಾದ ತಿಳಿವಳಿಕೆ. ವಿಧಿವಿಳಸನವೊಂದೇ ಇದಕ್ಕೆ ಕಾರಣವೆಂದು ಪುನರುಕ್ತಿಗಳ ಮೂಲಕ, ಬೇರೆಬೇರೆ ಸಂದರ್ಭಗಳಲ್ಲಿ ಬೇರೆಬೇರೆ ಪಾತ್ರಗಳ ಬಾಯಲ್ಲಿ ಈ ಮಾತನ್ನಾಡಿ ತೋರಿಸಿದ್ದಾನೆ.

ಇನ್ನೊಂದು ಪದ್ಯದಲ್ಲಿ ಬೇಟೆಯ ಪ್ರತಿಮೆ ಇದೆ. ಈ ಪ್ರತಿಮೆಯ ವೈಶಿಷ್ಟ್ಯವೆಂದರೆ ಇಡಿಯ **ಯಶೋಧರ ಚರಿತೆಯ** ತಿರುಳನ್ನೇ ಬೇಟೆಯ ಚಿತ್ರದಲ್ಲಿ ಸಂಗ್ರಹಿಸಿ ಆ ಮೂಲಕ ಕವಿ ತನ್ನ ಧೋರಣೆಯನ್ನು ಸೂಚಿಸಿ-ರುವದು. "ಅಮೃತಮತಿಯೆಂಬ ಪಾತಕಿಯ ಮಾಯೆ ಬನಮಾಯ್ತು" ಎಂಬ ಮಾತಿನಲ್ಲಿ ಅಮೃತಮತಿ ಪಾತಕಿ ಎಂಬುದನ್ನೂ ಅವಳ ಪ್ರೀತಿ ಕೇವಲ ಮಾಯೆ, ತೋರಿಕೆ, ಆಮಿಷ ಎಂಬುದನ್ನೂ ಸೂಚಿಸಲಾಗಿದೆ. ಈ ಮಾಯೆಯ ಬನದಲ್ಲಿ ಮೈಮರೆತು ವಿಹರಿಸುತ್ತಿದ್ದ ಕುರಂಗ ಯಶೋಧರ. ಅಮೃತಮತಿಯೆಂಬ ಪಾತಕಿಯ ಕೃತ್ಯದ ನೆವವಾಗಿ ಯಶೋಧರ ತಾಯಿಯ ಮುಂದೆ ಹೆಂಡತಿಯ ಪಾಪವನ್ನು ಕನಸಿನ ಕಥೆಯಾಗಿ ಮುಚ್ಚಿ ಹೇಳುತ್ತಾನೆ. ಆದರ ಅನಿಷ್ಟ ಪರಿಹಾರಕ್ಕಾಗಿ ಕನಿಷ್ಠ ಪಕ್ಷಕ್ಕೆ ಹಿಟ್ಟಿನ ಕೋಳಿಯನ್ನಾದರೂ ಬಲಿಕೊಡ-ಬೇಕೆಂದು ಹಟಹಿಡಿದ "ಚಂದ್ರಮತಿ ಮಾತೆಯ ಮಾತೆಮಗೆ ಬಲೆಯಾಯ್ತು". ಯಶೋಧರ ತಿಳಿದೂ ತಿಳಿದೂ ಈ ಬಲೆಯಲ್ಲಿ ಬೀಳುತ್ತಾನೆ. ಹಿಟ್ಟಿನ ಕೋಳಿಯ ಹಿಂಸನಕ್ಕೆ ಸಂಕಲ್ಪ ಮಾಡುತ್ತಾನೆ. "ಹಿಂಸನಂ ಅಮೋಘ ಶರಮಾಯ್ತು." ಈ ಸಂಕಲ್ಪಹಿಂಸೆಯೇ ಅಮೋಘ ಶರವಾಗಿ ಯಶೋಧರನ ಆತ್ಮಕುರಂಗವನ್ನು ಬಲಿ ತೆಗೆದುಕೊಂಡಿತು. ಇಲ್ಲಿ ಬೇಟೆಗಾರ ಯಾರು ಎಂಬು ದನ್ನು ಸೂಚಿಸಿಲ್ಲ. ಆದರೆ ಹಿಂದಿನ ಪದ್ಯದಲ್ಲಿ ವಿಸ್ತಾರವಾಗಿ ಸೂಚಿತವಾಗಿರುವ ವಿಧಿವಿಳಸನವನ್ನು ತೋರಿಸುವ ಘಟನೆಗಳನ್ನೂ "ಆರಱಿವರಯ್ಯ ವಿಧಿವಿಳಸ-ನಮಂ" ಎಂಬ ಉದ್ಗಾರವನ್ನೂ ಗಮನಿಸಿದಾಗ ವಿಧಿಯೇ ಇಲ್ಲಿಯ ಬೇಟೆಗಾರ ಎಂಬುದು ಸ್ಪಷ್ಟವಾಗುತ್ತದೆ. ಇಲ್ಲಿಯ ಬೇಟೆಯ ಪ್ರತಿಮೆಯಲ್ಲಿ ತೀರ ಸರಳ-ವಾದ ಸಮೀಕರಣಗಳು (ಅಮೃತಮತಿಯೆಂಬ ಪಾತಕಿಯ ಮಾಯೆ = ಬನ-ಇತ್ಯಾದಿ) ಆದರ ಅರ್ಥವ್ಯಾಪ್ತಿಯನ್ನು ಸಂಕುಚಿತಗೊಳಿಸುತ್ತಿದ್ದರೂ "ಕೆಡೆದು-ದಾತ್ಮಕುರಂಗಂ" ಎಂಬ ಮಾತಿನಲ್ಲಿಯ 'ಆತ್ಮ' ಎನ್ನುವ ಶಬ್ದಕ್ಕಿರುವ ಶ್ಲೇಷಾರ್ಥ ಇಡಿಯ ಕಾವ್ಯದ ಆಧ್ಯಾತ್ಮಿಕ ಸಮಸ್ಯೆಯ ಮೇಲೆ ಬೆಳಕು ಚೆಲ್ಲುತ್ತದೆ. ಯಶೋಧರ 'ತಾನು' (ಆತ್ಮ) ಎಂಬ ಕುರಂಗ ಕೆಡೆದುದು ಎಂದು ಸಾಮಾನ್ಯ ಅರ್ಥದಲ್ಲಿ ಹೇಳುವದರ ಜೊತೆಗೆ ತನ್ನ 'ಆತ್ಮ' ಎನ್ನುವ ಕುರಂಗ ಬಲಿಯಾಗಿ ಕೆಡೆದುದು ಎಂಬ ಧ್ವನ್ಯಾರ್ಥವನ್ನೂ ಸೂಚಿಸುತ್ತಾನೆ. ಇಡಿಯ **'ಯಶೋಧರ ಚರಿತೆ'**ಯ ಕಥೆ ಒಂದರ್ಥದಲ್ಲಿ ಯಶೋಧರನ ಆತ್ಮ ಹೀಗೆ ಬೇಟೆಯು ಬಲಿ-ಯಾಗಿ ಜನ್ಮಾಂತರಗಳಲ್ಲಿ ಬಳಲಿದ ಕಥೆಯಾಗಿದೆ.

ಆದ್ದರಿಂದಲೇ ಕಾವ್ಯದ ತುಂಬೆಲ್ಲ ಬೇಟೆಯ ಪ್ರತಿಮೆ ಓತಪ್ರೋತವಾಗಿ ಬಂದಿರುವದನ್ನು ಗಮನಿಸಬಹುದು. ಅವನು ಹುಟ್ಟಿದಾಗಲೇ "ಅನಿತೆಸೆವ ಚಂದ್ರಮತಿಗಂ ಜನಪತಿಗಂ ಪುಟ್ಟಿದಾ ಯಶೋಧರನೆಂಬಂ ಜಗಮೋಹನಬಾಣಂ ಕರ್ಬಿನ ಬಿಲ್ಲಂ ಸನೆಯನಾರಿಗಂ ಪುಟ್ಟಿದವೊಲ್" ಎಂದು ಹೇಳುವಾಗಲೇ ಕವಿ

ಅವನನ್ನು ಕಾಮನ ಬಾಣಕ್ಕೆ ಹೋಲಿಸಿ ಯಶೋಧರನ ಜೀವನದಲ್ಲಿ ಅಷ್ಟೊಂದು ಮಹತ್ವ ಪಡೆಯಲಿರುವ ಪ್ರಣಯವ್ಯಾಪಾರಕ್ಕೆ ನಾಂದಿ ಹಾಕಿದ್ದಾನೆ. ಅವನ ಹಾಗೂ ಅಮೃತಮತಿಯ ಪ್ರಣಯಸಂಬಂಧವೂ ಕೂಡ ಬೇಟೆಯ ಪ್ರತಿಮೆಯಲ್ಲೇ ಸೂಚಿತವಾಗಿದೆ :

> "ಅಮೃತಮತಿ ಗಡ ಯಶೋಧರ-
> ನ ಮನಃಪ್ರಿಯೆ ಆಕೆ ದೀವವಾಗೆ ಪುಳಿಂದ ॥
> ಸುಮನೋಬಾಣಂ ತದ್ ಭೂ-
> ರಮಣನನೊಲಿದಂತೆ ಗೋರಿಗೊಳಿಸುತ್ತಿರ್ಕುಂ ॥"

ಇಲ್ಲಿ ಪುಳಿಂದನಾದ ಸುಮನೋಬಾಣ ಅಮೃತಮತಿಯನ್ನು ದೀವವನ್ನಾಗಿ ಮಾಡಿಕೊಂಡು, ಅವಳು ಯಶೋಧರನನ್ನು ಒಲಿದಿರುವ ಹಾಗೆ ತೋರಿಸಿ ಮೋಸಗೊಳಿಸುತ್ತಿದ್ದ ಎನ್ನುವ ಮಾತಿನಲ್ಲಿ ಯಶೋಧರನ ಬಗ್ಗೆ ಅಮೃತ-ಮತಿಯ ಪ್ರೀತಿ ಸೈಜವಾದುದಲ್ಲ, ಅದು ಕೇವಲ ತೋರಿಕೆ, ಕಾಮ ಯಶೋ-ಧರನಿಗೆ ಅಮೃತಮತಿಯ ದೀವವನ್ನು ತೋರಿಸಿ ಅವನನ್ನು ಬೇಟೆಯಾಡಿ ಮೋಸಗೊಳಿಸಿದ ಎನ್ನುವ ಅರ್ಥ ಸ್ಪಷ್ಟವಾಗಿದೆ. ಆದ್ದರಿಂದ ಅವಳು ಯಶೋ-ಧರನನ್ನು ಬಿಟ್ಟುಹೋದದ್ದರಲ್ಲಿ, ಇನ್ನೊಬ್ಬನಿಗೆ ಒಲಿದು ಹೋಗಿ ಅವನನ್ನು ಮೋಸಗೊಳಿಸಿದ್ದರಲ್ಲಿ, ಅವಳ ಪ್ರೀತಿಯನ್ನು ನಂಬಿಹೋದ ಯಶೋಧರ-ಪ್ರಣಯದ ಬೇಟೆಯಲ್ಲಿ ಬಲಿಯಾದುದರಲ್ಲಿ ಆಶ್ಚರ್ಯವೇನೂ ಇಲ್ಲ. ಹೀಗೆ ಅಮೃತಮತಿ–ಯಶೋಧರ–ಚಂದ್ರಮತಿಯರ ದೈವಗತಿ ಒಂದು ಬೇಟೆಯ ಹಾಗೆ ನಡೆದುಹೋಗುತ್ತದೆ. ಅಮೃತಮತಿಯ ಸ್ಥಿತಿಯಾದರೂ ಅಷ್ಟೇ. ದೂದಿಯ ಮುಖದಿಂದ ತಾನು ಮನಸೋತ ಬದಗನ ರೂಪವರ್ಣನೆಯನ್ನು ಕೇಳಿದಾಗ "ಪುಳಿಂದನ ಕಣೆಗಟ್ಟಿ ನಿಂದ ವನಹರಿಣಿಯವೊಲ್" ಅವಳ ಸ್ಥಿತಿಯಾಯಿತಂತೆ. ಇನ್ನೊಂದು ಅರ್ಥದಲ್ಲಿ ಅವಳೂ ಬೇಟೆಯ ಬಲಿಯೇ ಆಗಿದ್ದಾಳೆ. ಇನ್ನೊಂದು ಸಂದರ್ಭದಲ್ಲಿ ಕನಸಿನ ದೋಷಪರಿಹಾರಕ್ಕಾಗಿ ಕುರಿಯ ಬಲಿ ಕೊಡಲು ಹೇಳಿದ ತಾಯಿಗೆ "ಕಾವರೆ ಕಣೆಗೊಳ್ವೊಡೆ ಬಾರಿಪರೊಳರೆ ?" ಎಂದು ಕೇಳುತ್ತಾನೆ ಯಶೋಧರ ಧರ್ಮದ ದಾರಿಯನ್ನು ತೋರಿಸಿ ಕಾಪಾಡಬೇಕಾದ ತಾಯಿಯೇ ಬಾಣವನ್ನು ಹಿಡಿದರೆ ತಡೆಯುವವರಾದರೂ ಯಾರು ?

ಮೂರನೆಯ ಅವತಾರದಲ್ಲಿ ಆರಂಭವಾಗುವ ಜನ್ಮಾಂತರಗಳ ಕಥೆ ಯಂತೂ ಒಂದು ಸುದೀರ್ಘವಾದ ಬೇಟೆಯ ವರ್ಣನೆಯೇ ಆಗಿದೆ. ಮೊದಲಿನ ಆರು ಭವಗಳಲ್ಲಿಯೂ ಯಶೋಧರ–ಚಂದ್ರಮತಿಯರು ಪ್ರಾಣಿಗಳಾಗಿ ಹುಟ್ಟಿ ನಿರ್ದಯವಾಗಿ ಬೇಟೆಯಾಡಲ್ಪಡುತ್ತಾರೆ. ಈ ಜನ್ಮದಲ್ಲಿ ಆರಂಭವಾದ ಬೇಟೆ ಮುಂದಿನ ಆರು ಜನ್ಮಗಳಲ್ಲಿಯೂ ಬೆನ್ನುಹತ್ತಿದ ಕರ್ಮದ ಹಾಗೆ ಪುನರಾವೃತ್ತವಾಗುತ್ತದೆ. ಈ ಭಾಗದ ತುಂಬ ತುಂಬಿರುವ ಹಿಂಸೆ, ನಿರ್ದಯತೆ, ರಕ್ತಪಾತ,

ಸಂಬಂಧಗಳ ಕಲಸುಮೇಲೋಗರ, ದೈವದ ವಿಕಟತೆ ದಟ್ಟವಾಗಿ ಒಟ್ಟುಗೂಡಿ ಉಸಿರಾಡಿಸಲೂ ಪುರುಸೊತ್ತಿಲ್ಲದಂತೆ ಮನಸ್ಸನ್ನಾವರಿಸುತ್ತವೆ.

ಇದರಲ್ಲಿ ಭವಾವಳಿಯ ವಿವರಗಳೆಲ್ಲ ಜನ್ನನಿಗೂ ಅವನ ಮೂಲವಾದ ವಾದಿರಾಜನಿಗೂ ಕೂಡಿಯೇ ಪರಂಪರಾಗತವಾಗಿವೆ. ವಾದಿರಾಜ ತನ್ನ ಕಾವ್ಯದಲ್ಲಿ ಸಾಂಪ್ರದಾಯಿಕವಾದ ಧಾರ್ಮಿಕ ಕಥೆಯೊಂದನ್ನು ವೇಗವಾಗಿ, ಸರಳವಾಗಿ, ಚೊಕ್ಕವಾಗಿ ಹೇಳಿಕೊಂಡು ಹೋಗಿದ್ದಾನೆ. ಈ ಕಾವ್ಯವನ್ನು ಜನ್ನ ವಿವರವಿವರಗಳಲ್ಲೂ ಅನುಸರಿಸಿದ್ದಾನೆ. ವಾದಿರಾಜ ಹೇಳಿದ್ದರಲ್ಲಿ ಏನನ್ನೂ ಅವನು ಬಿಟ್ಟಿಲ್ಲ. ವಾದಿರಾಜನ ತಾಸಿಗೆ ನೂರು ಮೈಲು ವೇಗದ ಕಥೆಯ ಓಟವನ್ನೂ ಉಳಿಸಿಕೊಂಡಿದ್ದಾನೆ. ಆದರೆ ಭವಾವಳಿಯ ಕಥೆಯಲ್ಲಿ ವಾದಿರಾಜನಿಗೆ ಕಾಣದ ಭವ್ಯವಾದ ಬೇಟೆಯ ಚಿತ್ರವನ್ನು ಜನ್ನ ಕಂಡಿದ್ದಾನೆ. ಈ ಬೇಟೆಯ ಚಿತ್ರದಲ್ಲಿಯ ಅವಕಾಶಗಳನ್ನು ಕಂಡುಕೊಂಡು ಅದರಲ್ಲೇ ಇಡಿಯ ವಸ್ತುವಿನ ಧೋರಣೆಯನ್ನು ನಿರೂಪಿಸುವ, ಅದಕ್ಕೊಂದು ಹೊಸ ಅರ್ಥವನ್ನು ಕೊಡುವ ಅವಕಾಶವನ್ನು ಅಸ್ಪಾದೃಶವಾಗಿ ಬಳಸಿಕೊಂಡಿದ್ದಾನೆ. ಭವಾವಳಿಯ ಬೇಟೆಗೆ ಅವನು ಕಾವ್ಯದ ಆದಿಭಾಗದ ಯಶೋಧರನ ಕಥೆಯಲ್ಲೇ ಸಿದ್ಧತೆ ಮಾಡಿಕೊಂಡಿರುವದನ್ನು ನೋಡಿದಾಗ ಈ ಮಾತು ಸ್ಪಷ್ಟವಾಗುತ್ತದೆ. ಯಶೋಧರನ ಕಥೆಯ ಮೊದಲ ಭಾಗದಲ್ಲಿ ಬರುವ ಬೇಟೆಯ ಪ್ರತಿಮೆಗಳೆಲ್ಲ ಜನ್ನ ಸ್ವತಂತ್ರವಾಗಿ ನಿರ್ಮಿಸಿಕೊಂಡವುಗಳು ಎಂಬುದನ್ನು ಗಮನಿಸಿದರೆ ಅವನು ಎಂಥ ಸಂವಿಧಾನಕುಶಲ ಎಂಬುದು ಗೊತ್ತಾಗುವದು.

ಇದರ ಜೊತೆಗೆ, ಭವಾವಳಿಯಲ್ಲಿ ಬನ್ನಪಡುವ ಪ್ರಾಣಿಗಳಿಗೆ ಸಂವಾದಿಯಾಗಿ ಕಾವ್ಯದ ಆರಂಭದಿಂದಲೂ ಜನ್ನ ಪ್ರಾಣಿಗಳ ಪ್ರತಿಮೆಗಳನ್ನು ಹೊಸದಾಗಿ ಸೇರಿಸಿರುವದನ್ನೂ ನೋಡಬಹುದು. ಚರಿಗೆಗೆಂದು ಗುರುಗಳನ್ನು ಬೀಳ್ಕೊಟ್ಟು ಬಂದ ಅಭಯಮತಿ–ಅಭಯರುಚಿಯರನ್ನು ಚಂಡಕರ್ಮ "ತರುಣ ವನಹರಿಣಯುಗಮಂ ತರಕ್ಷು ಪಿಡಿವಂತೆ" ಹಿಡಿದೊಯ್ದನಂತೆ. ಅಷ್ಟಾವಂಕ "ಮುದುಗರಡಿಯ ಮುದುದೊವಲಂದದ ಕರಿಯ"ನೆಂದೂ, ಅವನ "ಕಾಲ್ ಮಜೆಯಿಸುವುದು ಟೊಂಕ ಮುರಿದ ಕತ್ತೆಯ ಕಾಲಂ" ಎಂದೂ ದೂದವಿ ವರ್ಣಿಸುತ್ತಾಳೆ. ಅಂಥವನನ್ನು ಕೂಡಿದ ಅಮೃತಮತಿ ಯಶೋಧರನನ್ನು ಮೆಚ್ಚದಂತಾದುದು "ಬೇವಂ ಮೆಚ್ಚಿದ ಕಾಗೆಗೆ ಮಾವಿಳಿದಪ್ಪಂತೆ" ಆಗುತ್ತದೆ. ತಡವಾಗಿ ಬಂದ ಅಮೃತಮತಿಯನ್ನು ಬದಗ "ಕಳಹಂಸೆಗೆ ಗಿಡಗನೆಱಗಿದಂತಿರೆ" ಹೊಡೆಯುತ್ತಾನೆ. ಅವನು ಒದೆದಾಗ ಅವನ ಕಾಲ ಮೇಲೆ ಕೆರೆಯಹಾವು ಹೊರಳುವಂತೆ ಅಮೃತಮತಿ ಹೊರಳಾಡುತ್ತಾಳೆ. ಅಮೃತಮತಿ ಬದಗರನ್ನು ಕೊಲ್ಲಲು ಹೇಸಿದ ಯಶೋಧರ "ಕರಿ ಕರಿಗಲ್ಲದಿಱಂಪೆಗೆ ಪರಿವುದೆ, ಹರಿ ಕರಿಯನಲ್ಲದಿಱಿವುದೆ ನರಿಯಂ?" ಎಂದುಕೊಳ್ಳುತ್ತಾನೆ. ತಾಪದಿಂದ

ನಿಸ್ತೇಜನಾದ ಮಗನನ್ನು ನೋಡಿ "ಮರುಗಿದುದಱುನೀರ ಮೀನ್‌ಬೊಲಿಂದೆನ್ನ ಮನಂ" ಎನ್ನುತ್ತಾಳೆ ಚಂದ್ರಮತಿ. ಪ್ರಾಣಿಬಲಿಯನ್ನು ಕೊಡಹೇಳಿದ ತಾಯಿಗೆ ಯಶೋಧರ "ಸಾಗುದುರೆಗೆ ಪುಲ್ಲನಡಕಿ ಕೆಡುವನೆ ಚದುರಂ" ಎಂದು ಮನುಷ್ಯ-ಜನ್ಮದ ಅನಿತ್ಯತೆಯನ್ನು ಕುರಿತು ಹೇಳುತ್ತಾನೆ. ಹಿಟ್ಟಿನ ಕೋಳಿ ಕೂಗಿದ್ದನ್ನು ಕೇಳಿದಾಗ ಹೇಡಿಗೆ ಹಾವು ಅಡರಿದ ಹಾಗೆ ಬೆದರುತ್ತಾನೆ. ಹೀಗೆ ಜನ್ನನ ಸ್ವತಂತ್ರಪ್ರತಿಮಾಲೋಕವೆಲ್ಲ ಪ್ರಾಣಿಪ್ರಪಂಚದಿಂದ ತೆಗೆದುಕೊಂಡದ್ದಾಗಿದೆ.* ಯಶೋಧರ, ಅಮೃತಮತಿ, ಚಂದ್ರಮತಿಯರನ್ನು ಪದೇ ಪದೇ ಪ್ರಾಣಿಗಳಿಗೆ ಹೋಲಿಸಿ ಮುಂಬರುವ ಭವಾವಳಿಯ ಪ್ರಾಣಿಪ್ರಪಂಚದ ವ್ಯಾಪಾರಗಳಿಗೆ ಸಿದ್ಧತೆ ಮಾಡಿಕೊಂಡಿದ್ದಾನೆ. ಅಲ್ಲದೆ, ಈ ತಂತ್ರ ಜನ್ನನಿಗೆ ಆಯಾ ಮಾನವೀಯ ವ್ಯಾಪಾರಗಳಿಗೆ ತನ್ನ ಸ್ವಂತದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವ ಮಾರ್ಗ-ವಾಗಿದೆ. ಎಂದರೆ ಮಾನವೀಯ ಸಂಗತಿಗಳನ್ನು ಪ್ರಾಣಿಗಳ ವ್ಯವಹಾರಗಳ ಮೂಲಕ ವಿವರಿಸಿ ಆ ಸಂಗತಿಗಳ ಬಗೆಗೆ ತನ್ನ ದೃಷ್ಟಿಕೋನವೇನೆಂಬುದನ್ನು ಅವನು ಸೂಚಿಸುತ್ತಾನೆ. ಉದಾಹರಣೆಗೆ, ಅಮೃತಮತಿ–ಬದಗರ ಪ್ರಣಯ ಸಂಬಂಧದಲ್ಲಿ ಜನ್ನ ಕೇವಲ ಅಮಾನುಷವಾದ ಪಶುಪ್ರವೃತ್ತಿಯನ್ನು ಕಂಡುದು ಸ್ಪಷ್ಟವಾಗಿದೆ. ಅಂತೆಯೇ ಆ ವಿಷಯದಲ್ಲಿ ಅವನ ಸಹಾನುಭೂತಿ ಇಲ್ಲವೆಂಬು-ದನ್ನೂ ಅರ್ಥಮಾಡಿಕೊಳ್ಳಬಹುದು.

ಅಂತೂ, ಬೇಟೆ, ಪ್ರಾಣಿಗಳ ಪ್ರತಿಮಾಪ್ರಪಂಚ, ವಿಧಿವಿಳಸನ ಇವು ಮೂರು ಒಂದಕ್ಕೊಂದು ಭಿನ್ನವಾದುವೇನೂ ಅಲ್ಲ. ಹಿಂದೆ ಹೇಳಿದ ಹಾಗೆ ಬೇಟೆಯ ಚಿತ್ರವೂ ಕೂಡ ವಿಧಿವಿಳಸನದ ಒಂದು ಭಯಂಕರವಾದ ಮೂರ್ತ-ರೂಪವೇ ಆಗಿದೆ. ಇಲ್ಲಿಯ ಮಾನವಜೀವಿಗಳೆಲ್ಲ ಪ್ರಾಣಿಗಳಂತೆ ನಿಸ್ಸಹಾಯಕ-ರಾಗಿ ದೈವದ ಆಟದಲ್ಲಿ ಬೇಟೆಯ ಬಲಿಗಳಾಗಿರುವದನ್ನು ಜನ್ನ ಈ ಮೂಲಕ ಎತ್ತಿತೋರಿಸಿದ್ದಾನೆ. ಇದು ಯಶೋಧರಚರಿತೆಯಲ್ಲಿ ಜನ್ನ ಕಂಡುಕೊಂಡಿರುವ ದರ್ಶನ, ಪರಂಪರಾನುಗತಿಕವಾದ ಧಾರ್ಮಿಕ ಕಥೆಯಲ್ಲಿ ಅವನು ಓದಿ-ಕೊಂಡಿರುವ ಸಂಕೀರ್ಣ ಅರ್ಥ.

ಇದರ ಜೊತೆಗೆ **ಯಶೋಧರಚರಿತೆ**ಯ ಉದ್ದೇಶ ಸ್ಪಷ್ಟವಾಗಿ ಧಾರ್ಮಿಕ ವಾದುದು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಇದು ಮುಖ್ಯವಾಗಿ ಪಾಪ ಮತ್ತು ಅದಕ್ಕೆ ಅನಿವಾರ್ಯವಾದ ಪ್ರಾಯಶ್ಚಿತ್ತದ ಕಥೆ. ಯಶೋಧರನ ಕಥೆಯ ಮೂಲಕ ಜೀವಹಿಂಸೆಯಿಂದ ಉಂಟಾಗುವ ಅನರ್ಥಗಳನ್ನು ತೋರಿ-

---

* ಯಶೋಧರ ಶಯ್ಯಾಧವಳ ಪ್ರಾಸಾದವನ್ನೇರುವಾಗ ಅಂಬರತರಂಗಿಣೀ ಪುಳಿನ-ವನ್ನೇರುವ ಹಂಸಕ್ಕೆ, ಅಮೃತಮತಿಯೊಡನೆ ಕೇಳಿಯಲ್ಲಿದ್ದಾಗ ಅಭ್ರಮುವಿನೊಡನಿದ್ದ ಅಭ್ರಗಜಕ್ಕೆ ಹೋಲಿಸಲಾಗಿದೆ. ಆದರೆ ಇವೆರಡೂ ವಾದಿರಾಜನ ಮೂಲಕಾವ್ಯದಲ್ಲಿವೆ.

ಸುವದು ಜನ್ನನ ಉದ್ದೇಶವಾಗಿದೆ. ಈ ದೃಷ್ಟಿಯಿಂದ ಇದು ಒಂದು ಪ್ರಚಾರಾತ್ಮಕ ಕಾವ್ಯ. ಈ ಪ್ರಚಾರಾತ್ಮಕ ಕಥೆಯಲ್ಲಿ ಹೆಚ್ಚಿನ ಕಲಾತ್ಮಕ ಅವಕಾಶಗಳನ್ನು ಕಂಡದ್ದೇ ಜನ್ನನ ಹೆಚ್ಚಳಿಕೆ. ಆದರೆ ಮೂಲದ ಪ್ರಚಾರಾತ್ಮಕ ಕಥೆಯೊಂದಿಗೆ ಜನ್ನನ ಹೊಸ ಅರ್ಥ ಎಷ್ಟರಮಟ್ಟಿಗೆ ಹೊಂದಿಕೊಂಡಿದೆ ಎಂಬುದೇ ಮುಖ್ಯ ಪ್ರಶ್ನೆ.

ಯಶೋಧರ ಮಾಡಿದ್ದು ನಿಜವಾದ ಹಿಂಸೆಯನ್ನಲ್ಲ; ಅದು ಕೇವಲ ಸಂಕಲ್ಪಹಿಂಸೆ ಈ ಸಂಕಲ್ಪಹಿಂಸೆಯನ್ನಾದರೂ ಅವನು ಮಾಡಿದ್ದು ಹೇಗೆ? 'ಮನಃಪ್ರಿಯೆ'ಯಾದ ಹೆಂಡತಿ ಮೋಸ ಮಾಡಿ ಮತ್ತೊಬ್ಬ ಅಪಾತ್ರನಲ್ಲಿ ಅನುರಕ್ತಳಾದುದನ್ನು ನೋಡಿ ಹೇಸಿ ವೈರಾಗ್ಯದತ್ತ ಹೊರಳಿದವನು ಯಾವದೋ ನಿಮಿತ್ತದಿಂದ ತಾಯಿಯನ್ನು ಕಾಣುತ್ತಾನೆ. ಆದರೂ ಹೆಂಡತಿಯ ಮೇಲಿನ ಮೋಹ ಅವನನ್ನು ಬಿಡಲೊಲ್ಲದು. ಅವಳ ಅವಿಧೇಯತೆಯಿಂದುಂಟಾದ ನೋವನ್ನು ತಡೆಯಲಾರದೆ, ಅಪರೋಕ್ಷವಾಗಿ ತಾಯಿಯ ಮುಂದೆ "ಪೊಂದಾವರೆಗೊಳದಂಚೆ ಕೞಲ್ದಾವರೆಗೊಳದೊಳಗೆ ನಲಿವ" ಕನಸನ್ನು ಕಂಡುದಾಗಿ ಹೇಳಿ ತನ್ನ ಯಾತನೆಯನ್ನು ಸೂಚಿಸುತ್ತಾನೆ. ಈ ಸಂದರ್ಭದಲ್ಲಿ ಅವಳನ್ನು ಯಶೋಧರ ಪ್ರಾಣಿಗೆ ಹೋಲಿಸಿದ್ದರೂ ಹಂಸದ ನಿರ್ದೇಶನದಲ್ಲಿ ಅವನಿಗೆ ಅವಳ ಬಗ್ಗೆ ಇನ್ನೂ ಉಳಿದಿರುವ ಮೋಹವೇ ವ್ಯಕ್ತವಾಗಿದೆ. ಈ ಕೆಟ್ಟ ಕನಸಿನ ದೋಷ ಪರಿಹಾರಕ್ಕೆಂದು ದೇವಿಯ ಮುಂದೆ ದಾವಣಿಗುರಿಯನ್ನು ಬಲಿಗೊಡಬೇಕೆಂದು ತಾಯಿಯು ಸೂಚಿಸುತ್ತಾಳೆ. ಹೆಂಡತಿಯ ತಪ್ಪನ್ನು ಹೇಳಿಕೊಳ್ಳಹೋದರೆ "ಏೞುಭವದ ಕೇಡಡಸುವ ಕಿೞ್ ನುಡಿ"ಯನ್ನು ಅವಳಾಡುತ್ತಾಳೆ. ಈ ಮಾತಿನಲ್ಲಿ ಏಳು ಭವಗಳ ಕೇಡಿನ ಮುನ್ಸೂಚನೆ ಅತ್ಯಂತ ಸಹಜವಾಗಿ ಬಂದಿದೆ. ಯಶೋಧರನಿಗೆ ಇದು ಸರಿಯಾದ ಮಾರ್ಗವಲ್ಲ ಎಂಬುದು ಗೊತ್ತು. "ಜೀವದಯೆ ಜೈನಧರ್ಮಂ, ಜೀವಹಿತ ಸಂಬುವವರ್ಗೆ ಹಿಂಸೆಯ ಮೋಹಂ ಭಾವಿತಮೇ?" ಎಂದು ಹೇಳುತ್ತಾನೆ. ಕನಿಷ್ಠ ಪಕ್ಷಕ್ಕೆ ಒಂದು ಹಿಟ್ಟಿನ ಕೋಳಿಯನ್ನಾದರೂ ಬಲಿಕೊಡಲೇಬೇಕೆಂದೂ, ಇಲ್ಲವಾದರೆ ತಾನೇ ಬಲಿಯಾಗಿಯಾದರೂ ಈ ಅಶುಭವನ್ನು ಪರಿಹರಿಸುವದಾಗಿಯೂ ತಾಯಿ ಹಟಹಿಡಿಯುತ್ತಾಳೆ. ಮಗನ ಮೇಲಿನ ಅವಳ ಮೋಹವೇ ಈ ಮಾತನ್ನು ನುಡಿಸುತ್ತದೆ. ಆದರೆ ಇದು ಯಶೋಧರನಿಗೆ ಧರ್ಮಸಂಕಟವನ್ನೊಡ್ಡುತ್ತದೆ. "ಭಾವನೆಯಿಂದಮಪ್ಪುದಾಸ್ರವಂ, ಎನಗಿನ್ನೆಂತಪ್ಪ ಪಾಪಮಿದಿರ್ ವಂದಪುದೋ!" ಎಂಬ ಭಯ ಅವನಿಗಿದೆ. ಆದರೆ ಹಿಟ್ಟಿನ ಕೋಳಿಯ ಬಲಿಕೊಡದಿದ್ದರೆ ತಾಯಿಗೆ ನೋವು, ಕೊಟ್ಟರೆ ತನ್ನ ಒಂದು ಗತಿಗೆ ಕೇಡು ಈ ಇಕ್ಕಟ್ಟಿನ ಪ್ರಸಂಗದಲ್ಲಿ ಕೊನೆಗೂ ಹಿಟ್ಟಿನ ಕೋಳಿಯ ಬಲಿಗೆ ಒಪ್ಪುತ್ತಾನೆ. ಆದರೆ ಬಲಿಕೊಡುವಾಗ ಯಾವ ಮಾಯೆಯಿಂದಲೋ ಆ ಹಿಟ್ಟಿನ ಕೋಳಿಯ ದೇಹದಲ್ಲಿ ಸೇರಿದ ಬೆಂತರ

ಘಾಸಿಗೊಂಡು "ಕೂಗಿ ಕರೆವ ದುರಿತಂಗಳ ಬಲ್ಲುಲಿಯೆನೆ" ಕೂಗಿಕೊಳ್ಳುತ್ತದೆ. ಅಂತೂ ಹಿಂಸೆ ಘಟಿಸಿಹೋಯಿತು. ಮನಸ್ಸಿಲ್ಲದ ಮನಸ್ಸಿನಿಂದ, ಆದರೂ ಇದು ಪಾಪವೆಂದು ಗೊತ್ತಿದ್ದೂ, ಕೇವಲ ನಿರ್ಜೀವವಾದ ಹಿಟ್ಟಿನ ಕೋಳಿಯನ್ನು ಬಲಿಕೊಟ್ಟರೂ ಹೇಗೋ ಜೀವಹತ್ಯೆ ಸಂಭವಿಸಿಬಿಡುತ್ತದೆ. ಈ ಪಾಪದಲ್ಲಿ ದೈವದ ಭಾಗವೆಷ್ಟು, ಯಶೋಧರನ ಸ್ವತಂತ್ರ ಜವಾಬ್ದಾರಿ ಎಷ್ಟು? ಒಂದು ವೇಳೆ ದೈವನಿಯೋಜನೆಯಿಂದಲೇ ಈ ಪಾಪ ಸಂಭವಿಸಿದ್ದರೆ ಅದರ ಪ್ರಾಯಶ್ಚಿತ್ತಕ್ಕೆ ಯಶೋಧರ ಹೇಗೆ ಹೊಣೆಯಾಗುತ್ತಾನೆ?

"ಏಕೆ ಕನಸೆಂದುಃ ನುಡಿಡೆನಿ
ದೇಕಂಬಿಕೆ ಬಲಿಯನೊಡ್ಡಿದಳ್ ಕೂಗಿದುದೇ
ಕೀ ಕೃತಕ ತಾಮ್ರಚೂಡನಿ
ದೇಕೆಂದಾರಱಿವರಯ್ಯ ವಿಧಿವಿಳಸನಮಂ ॥"

ಎಂದುಕೊಳ್ಳುವ ಯಶೋಧರನ ಮಾತಿನಲ್ಲಿ ಇದೆಲ್ಲ ಯೋಜನೆಯ ಹಿಂದೆ ವಿಧಿವಿಳಸನದ ಚಿತ್ರವೊಂದೇ ದೊಡ್ಡದಾಗಿ ಎದ್ದು ನಿಲ್ಲುತ್ತದೆ. ವಿಧಿಯೇ ಸಂಚುಹೂಡಿ ಮಾಡಿಸಿದಂತೆ ಪಾಪ ಸಂಭವಿಸುತ್ತದೆ. ಆದರೆ ಬಲಿಕೊಡುವದು ತಪ್ಪೆಂದು ತಿಳಿದೂ ತಿಳಿದೂ, ಯಶೋಧರ ಅದಕ್ಕೊಪ್ಪಿದನಲ್ಲ! ಆದ್ದರಿಂದ ಅವನೂ ತನ್ನ ಕೃತ್ಯದ ಜವಾಬ್ದಾರಿಯನ್ನು ಹಾರಿಸಿಕೊಳ್ಳಲಾರ. ಸಂಕಲ್ಪ-ಮಾತ್ರವೇ ಆಗಿರಲಿ, ಅಂತೂ ಹಿಂಸೆ ಸಂಭವಿಸಿತು. ಅಷ್ಟಕ್ಕಾಗಿಯೇ ಈ ಹಿಂಸೆಯ ಪಾಲುಗಾರಳಾದ ಚಂದ್ರಮತಿಯೊಡನೆ ಯಶೋಧರ ಏಳು ಜನ್ಮಗಳಲ್ಲಿ ಪಾಡುಪಡಬೇಕಾಯಿತು. ಇದರ ಹಿಂದೆಯೂ ಕೂಡ ವಿಧಿಯ ಸಂಚು ಅವ್ಯಾಹತವಾಗಿ ನಡೆಯುತ್ತದೆ. ಕೋಳಿಯ ಕೂಗಿನಿಂದ ಜೀವನದ ನಿಸ್ಸಾರತೆಯ ಅರಿವಾಗಿ ವೈರಾಗ್ಯಹೊಂದಿ ಅಡವಿಗೆ ಹೋಗಬೇಕೆಂದ ಯಶೋಧರ–ಚಂದ್ರಮತಿಯರು ಯಾವದೋ ಮಾಯೆಯಿಂದ ಅಮೃತಮತಿಯ ಆಮಂತ್ರಣವನ್ನು ಸ್ವೀಕರಿಸಿ ಅವಳು ಈರ್ಷೆಯಿಂದ ನೀಡಿದ ಈ ನಂಜಿನ ಲಡ್ಡುಗೆಗಳನ್ನು ತಿಂದು ಸಾಯುತ್ತಾರೆ. ಮಾಡಿದ ಪಾಪಕ್ಕಾಗಿ ಈ ಜನ್ಮದಲ್ಲೇ ಪ್ರಾಯಶ್ಚಿತ್ತ ಮಾಡಿಕೊಳ್ಳುವ ಅವಕಾಶವೂ ಅವರಿಗೆ ಸಿಗುವದಿಲ್ಲ. ಕೇವಲ ಸಂಕಲ್ಪ ಮಾತ್ರದ ಹಿಂಸೆಯಿಂದಲೂ ಜನ್ಮಾಂತರಗಳ ಯಾತನೆಯನ್ನನುಭವಿಸಬೇಕಾಯಿತು ಎಂಬುದನ್ನು ಕವಿಗೆ ಒತ್ತಿಹೇಳಬೇಕಾಗಿದೆ. ಈ ಇಕ್ಕಟ್ಟಿಗೆ ಯಶೋಧರ-ನನ್ನು ಸಿಲುಕಿಸುವದಕ್ಕಾಗಿಯೇ ಕವಿ ವಿಧಿವಿಳಸನದ ವಸ್ತುವನ್ನು ಉದ್ದೇಶಪೂರ್ವಕವಾಗಿ ಬಳಸಿಕೊಂಡಿದ್ದಾನೆ.

ಜನ್ಮಾಂತರಗಳ ಕಥೆಯಲ್ಲಿ ಸಾಂಕೇತಿಕತೆ ಹೆಚ್ಚು ದಟ್ಟವಾಗುತ್ತದೆ. ಪಾತ್ರಗಳು ತಮ್ಮ ಮೊದಲಿನ ಖಚಿತತೆಯನ್ನು ಕಳೆದುಕೊಳ್ಳುತ್ತವೆ. ಈ ಭಾಗದಲ್ಲಿ, ಕೇವಲ ಹಿಂಸೆಯ ಸಂಕಲ್ಪದಿಂದಲೇ ಒದಗುವ ಕಷ್ಟಪರಂಪರೆಗಳ

ಭಯಾನಕವಾದ ಚಿತ್ರವನ್ನು ಓದುಗರಿಗೆ ಕಣ್ಣಿಗೆ ಕಟ್ಟುವಂತೆ ತೋರಿಸುವದರಲ್ಲಿ ಕವಿಗೆ ಲಕ್ಷ್ಯವಿದೆಯೇ ಹೊರತು, ಪಾತ್ರಗಳ ಆಂತರಿಕ ಜೀವನದ ಸೂಕ್ಷ್ಮಗಳಲ್ಲಿ ಅಲ್ಲ ಅಂತೆಯೇ ಏನೊ, ಭವಾವಳಿಯ ನಿರೂಪಣೆಯೆಲ್ಲ ಕೇವಲ ಜೈನ ಧರ್ಮಕ್ಕೆ ಅನಿವಾರ್ಯವಾದ ನಂಬಿಕೆಗಳ ಅಭಿವ್ಯಕ್ತಿಯಾಗಿದೆಯೆಂದೂ, ಕೇವಲ ಅರ್ಥವಿಲ್ಲದ ಪುನರುಕ್ತಿಯೆಂದೂ, ನೀರಸ ಭಾಗವೆಂದೂ ಭಾವಿಸಿ ವಿಮರ್ಶಕರು ಅದಕ್ಕೆ ಸರಿಯಾದ ಗಮನವನ್ನೇ ಕೊಟ್ಟಿಲ್ಲ. ಅಮೃತಮತಿ-ಯಶೋಧರ-ಚಂದ್ರಮತಿಯರ ಚಿತ್ರಣದಷ್ಟು ಇದು ಓದುಗರ ತೀವ್ರಾಸಕ್ತಿಯನ್ನು ಕೆರಳಿಸುವದಿಲ್ಲವೆಂಬುದು ನಿಜ. ಇದರಲ್ಲಿ ಮಾನವೀಯ ಅಂಶಗಳು ಕಡಿಮೆ ಎಂಬುದೂ ನಿಜ. ಆದರೆ ವಸ್ತುವಿನ ಬೆಳವಣಿಗೆಯ ದೃಷ್ಟಿಯಿಂದ ಇದು ಅನೇಕ ಮಹತ್ವದ ಸಂಗತಿಗಳನ್ನು ಸೂಚಿಸುತ್ತದೆ. ಯಶೋಧರ-ಚಂದ್ರಮತಿಯರು ಒಟ್ಟಿಗೆ ಏಳು ಭವಗಳಲ್ಲಿ ತೊಳಲಿದರೆಂಬುದಷ್ಟೇ ಇಲ್ಲಿ ಮಹತ್ವದ್ದಲ್ಲ. ಈ ಏಳು ಭವಗಳಲ್ಲಿ ಒಂದೊಂದಕ್ಕೂ ಪ್ರತ್ಯೇಕವಾದ ಸಾಂಕೇತಿಕ ಉದ್ದೇಶವಿದೆಯಲ್ಲದೆ ಒಂದರಿಂದ ಒಂದಕ್ಕೆ ಸಾವಯವ ಬೆಳವಣಿಗೆಯೂ ಇದೆ. ಜೊತೆಗೆ ಪ್ರಾಣಿಗಳಾಗಿ ಹುಟ್ಟುವ ಯಶೋಧರ-ಚಂದ್ರಮತಿಯರು ತಮ್ಮ ಪಾಪದ ಪ್ರಾಯಶ್ಚಿತ್ತವನ್ನು ಅನುಭವಿಸುತ್ತಿರುವ ಅರಿವನ್ನು ಕ್ರಮೇಣವಾಗಿ ಪ್ರಜ್ಞೆಯ ಸ್ಥಿತಿಯಲ್ಲಿ ಕಂಡುಕೊಳ್ಳುವದನ್ನು ನಾವಿಲ್ಲಿ ಕಾಣುತ್ತೇವೆ. ಹಿಂಸೆಗೆ ಪ್ರೇರಿಸಿದ ತಾಯಿಯೇ ತನ್ನ ಕೇಡಿಗೆ ಕಾರಣಳಾದಳೆಂಬ ಯಶೋಧರನ ಅವ್ಯಕ್ತ ರೋಷ ಭವಾವಳಿಯಲ್ಲಿ ಮೂರ್ತರೂಪ ಪಡೆದಿರುವದನ್ನು ನೋಡಬಹುದು. ಆದಕ್ಕಾಗಿಯೇ ಯಶೋಧರ-ಚಂದ್ರಮತಿಯರು ಪ್ರಾಣಿಜನ್ಮಗಳಲ್ಲಿ ಒಬ್ಬರನ್ನೊಬ್ಬರು ಕೊಲ್ಲುತ್ತಾರೆ. ಅವರ ನಡುವೆ ಅನೈಸರ್ಗಿಕ ಸಂಬಂಧಗಳು ಏರ್ಪಡುತ್ತವೆ. ಅವರು ಭವಭವಗಳನ್ನು ದಾಟುತ್ತ ಕ್ರಮೇಣ ಮಾನವೀಯ ಪ್ರವೃತ್ತಿಗಳಿಂದ ದೂರ ಹೋಗಿ ಸಂಪೂರ್ಣ ಪಶುಪ್ರವೃತ್ತಿಗಿಳಿದು, ನಂತರ ಮತ್ತೆ ಕ್ರಮೇಣ ಮಾನವೀಯ ಪ್ರಜ್ಞೆಯನ್ನು ಗಳಿಸಿಕೊಂಡುದರ ಹಂತಹಂತಗಳನ್ನು ಭವಾವಳಿಯ ಚಿತ್ರಣದಲ್ಲಿ ತೋರಿಸಲಾಗಿದೆ.

ಮೊದಲ ಭವದಲ್ಲಿ ಯಶೋಧರ-ಚಂದ್ರಮತಿಯರು ನವಿಲು-ನಾಯಾಗಿ ಹುಟ್ಟಿ ಹೇಗೋ ಬಂದು ತಮ್ಮ ಅರಮನೆಯಲ್ಲಿ ಸೇರುತ್ತಾರೆ. ಎಲ್ಲಿ ರಾಜ-ರಾಜಮಾತೆಯರಾಗಿ ಮೆರೆದಿದ್ದರೋ ಅಲ್ಲಿಯೇ ಕಂಡವರ ಎಂಜಲವನ್ನುಣ್ಣುವ ನವಿಲು-ನಾಯಿಗಳಾಗುವ ಯೋಗ ಅವಕ್ಕೊದಗಿತು. 'ನೋಡ ಪಾಪದ ಫಲಮಂ' ಎನ್ನುತ್ತಾನೆ ಕವಿ. ಪೂರ್ವಜನ್ಮದ ಪೂರ್ಣಪ್ರಜ್ಞೆ ಇರದಿದ್ದರೂ ನವಿಲು ಅಲ್ಲಿ ಅಮೃತಮತಿಯೊಡನಿದ್ದ ಬದಗನನ್ನು ಕಂಡು ಹಿಂದಿನ ರೋಷದಿಂದ ಅವನ ಕಣ್ಣನ್ನು ಕುಕ್ಕುತ್ತದೆ. ಯಶೋಧರನಿಗೆ ಈ ಜನ್ಮದಲ್ಲೂ ಅಮೃತಮತಿಯ ಮೇಲಿನ ಮೋಹ ಹೋಗಿಲ್ಲ. ಅಲ್ಲದೆ ಹಿಂದಿನ ಜನ್ಮದಲ್ಲಿ ಮಾಡಲು ಹೇಸದ

ಹಿಂಸಾಪಾಪವನ್ನು ಈ ಪ್ರಾಣಿಜನ್ಮದಲ್ಲಿ ಮಾಡಿಯೇ ಬಿಡುತ್ತಾನೆ. ಆ ನವಿಲನ್ನು ಅಮೃತಮತಿ ಸಿಟ್ಟಿನಿಂದ ಹೊಡೆದು ಕೆಳಗೆ ಬೀಳಿಸುವದೂ, ನಾಯಿ–ನವಿಲು ಗಳು ಸತ್ತಾಗ ಯಶೋಮತಿ ತಾಯಿ–ತಂದೆಯರನ್ನು ಕಳೆದುಕೊಂಡಂತೆ ಮರುಗುವದೂ ಹಿಂದಿನ ಜನ್ಮಕ್ಕೂ ಈ ಜನ್ಮಕ್ಕೂ ಇನ್ನೂ ಉಳಿದಿರುವ ಸಂಬಂಧ ಗಳನ್ನು ಸೂಚಿಸುತ್ತವೆ. ನಾಯಿಯಾಗಿದ್ದ ಚಂದ್ರಮತಿ ಮುಂದಿನ ಜನ್ಮದಲ್ಲಿ ಹಾವಾಗಿ ಹುಟ್ಟುತ್ತಾಳೆ. ನವಿಲಾಗಿದ್ದ ಯಶೋಧರ ಹಂದಿಯಾಗಿ ಹುಟ್ಟಿ, ಹಾವನ್ನು ತಿಂದು ಹಿಂದಿನ ಜನ್ಮದ ಸೇಡನ್ನು ತೀರಿಸಿಕೊಳ್ಳುತ್ತಾನೆ. ಈ ಸಂಬಂಧ ಸಂಪೂರ್ಣವಾಗಿ ಪ್ರಾಣಿಸಹಜವಾದ ಅವೈಯಕ್ತಿಕ ಮಟ್ಟದಲ್ಲೇ ಉಳಿಯು ತ್ತದೆ. ಮೂರನೆಯ ಜನ್ಮದಲ್ಲಿ ಯಶೋಧರ ಮೀನಾಗಿ, ಚಂದ್ರಮತಿ ಮೊಸಳೆ ಯಾಗಿ ಹುಟ್ಟುತ್ತಾರೆ. ಯಶೋಮತಿ ಅವೆರಡನ್ನೂ ಕೊಲ್ಲಿಸಿ, ಮೀನದ ರೂಪ ದಲ್ಲಿರುವ ಯಶೋಧರನ ಮಾಂಸದಿಂದ ಆವನಿಗೇ ಶ್ರಾದ್ಧ ಮಾಡಿಸುತ್ತಾನೆ. ಇದು ವಿಧಿಯ ಒಂದು ವಿಕಟ ವ್ಯಂಗ್ಯದಂತೆ ಕಾಣುತ್ತದೆ. ನಾಲ್ಕನೆಯ ಜನ್ಮದಲ್ಲಿ ಚಂದ್ರಮತಿ ಆಡಾಗಿ, ಅದರ ಗರ್ಭದಲ್ಲಿ ಯಶೋಧರ ಹೋತವಾಗಿ ಹುಟ್ಟು ತ್ತಾರೆ. ಈ ಜನ್ಮದಲ್ಲಿ ಯಶೋಧರ–ಚಂದ್ರಮತಿಯರ ಮೂಲ ಮಾನವೀಯ ಸಂಬಂಧ ಸಂಪೂರ್ಣ ತೊಡೆದುಹೋಗಿ ಅವರೀಗ ಪೂರ್ತಿ ಪಶುಪ್ರವೃತ್ತಿಗಳಲ್ಲಿ ಮಗ್ನರಾಗಿರುವದನ್ನು ಮಗನಾದ ಯಶೋಧರ–ಹೋತತಾಯಾದ ಚಂದ್ರಮತಿ–ಆಡಿನೊಡನೆ ರಮಿಸುವದರಲ್ಲಿ ಸೂಚಿಸಲಾಗಿದೆ. ಮಾನವೀಯ ಸಂಬಂಧಗಳೆಲ್ಲ ಕಲಬೆರಕೆಯಾಗಿ ಹೋಗಿ ಬೀಭತ್ಸವು ಪರಾಕಾಷ್ಠೆಯನ್ನು ಮುಟ್ಟುತ್ತದೆ. ಹಾಗೆ ರಮಿಸುತ್ತಿದ್ದ ಹೋತವನ್ನು ಬೇರೊಂದು ಹೋತ ತಿವಿದು ಕೊಂದುದೂ ಆ ಹೋತ ತಾಯಿಯ ಗರ್ಭವನ್ನೇ ಸೇರಿ ಬೆಳೆಯುವದೂ ಮಾನವೀಯ ಸಂಬಂಧಗಳ ಮೌಲ್ಯಗಳ ಅಸ್ತವ್ಯಸ್ತತೆಯನ್ನು ತೋರಿಸುತ್ತದೆ. ಇದು ಅವರ ಪಶುಪ್ರವೃತ್ತಿಯ ಕೊನೆಯ ಮೆಟ್ಟಲು. ಇಲ್ಲಿಂದ ಮತ್ತೆ ಮಾನವೀಯ ಪ್ರಜ್ಞೆ ಚೇತರಿಸಿಕೊಳ್ಳಲಾರಂಭಿಸುತ್ತದೆ. ಈ ಗರ್ಭಿಣಿ ಆಡನ್ನು ಯಶೋಮತಿ ಬಾಣ ದಿಂದ ಗಾಯಗೊಳಿಸಿ ಕೊಂದಾಗ, ಅದೇ ಗಾಯದಿಂದ ಹೋತವಾಗಿ ಹೊರ ಬಂದು ಯಶೋಧರ ಐದನೆಯ ಜನ್ಮಕ್ಕೆ ಕಾಲಿರಿಸುತ್ತಾನೆ. ಮಾಂಸವನ್ನುಂಡು ಯಶೋಧರ–ಚಂದ್ರಮತಿಯರನ್ನು ಹರಸುವ ಬ್ರಾಹ್ಮಣರ ಮಾತಿನಿಂದ ಹಿಂದಿನ ಜನ್ಮದ ನೆನಪಾಗಿ ಹೋತ ಪರಿತಪಿಸುತ್ತದೆ. ಮತ್ತೆ ಅಮೃತಮತಿಯ ನೆನಪಾಗಿ—

> "ಇರ್ದಳೊ ಮೇಣ್ ಬರ್ದಳೊ ಮೇಣ್
> ಅರ್ದಳೊ ಮೇಣ್ ಅಷ್ಟವಂಕನೊಳ್ ಕಷ್ಟೆ ಅದೆಂ
> ತಿರ್ದಳೊ ಕಾಣೆನದೇಕೆನು
> ತಿರ್ದುದು ಕೋಟಲೆಗೆ ಕೋಡು ಮೂಡಿದ ತೆಱದಿಂ ॥"

ಇಲ್ಲಿ ಯಶೋಧರ ಅಮೃತಮತಿಯ ಬಗ್ಗೆ ಇನ್ನೂ ಯೋಚಿಸುತ್ತಿದ್ದಾನೆ. ಪ್ರಜ್ಞೆಯ ಸ್ಥಿತಿಯಲ್ಲೇ ಪ್ರಾಯಶ್ಚಿತ್ತದ ಅನುಭವವನ್ನು ಅವನು ಇಲ್ಲಿ ಪಡೆಯುತ್ತಾನೆ. ಚಂದ್ರಮತಿ ಕೋಣವಾಗಿ ಹುಟ್ಟಿ ಯಶೋಧರನಿಂದ ಕೊಲ್ಲಲ್ಪಡುತ್ತಾಳೆ. ಈ ಕೋಣ ಹಾಗೂ ಹೋತದ ಮಾಂಸವನ್ನು ಅಮೃತಮತಿ ಉಣ್ಣುವದರೊಂದಿಗೆ ವರ್ತುಳ ಮುಗಿದಂತಾಗಿ, ಯಶೋಧರ–ಚಂದ್ರಮತಿಯರ ನರಕಯಾತನೆಗೆ ಕಾರಣಳಾದ ಅವಳೇ ಮತ್ತೆ ಈ ಜನ್ಮದಲ್ಲೂ ಅವರ ಸಾವಿಗೆ ಕಾರಣವಾಗುತ್ತಾಳೆ. ಅಂತೂ ಪ್ರಾಯಶ್ಚಿತ್ತದ ಈ ಅರಿವಿನಿಂದ ಯಶೋಧರ–ಚಂದ್ರಮತಿಯರ ಮುಂದಿನ ಜನ್ಮ ಹೆಚ್ಚು ಸಹ್ಯವಾಗುತ್ತದೆ. ಹೊಲೆಗೇರಿಯಲ್ಲಿ ಕೋಳಿಗಳಾಗಿ ಹುಟ್ಟಿದರೂ, ಅಕಂಪನ ಮುನಿಗಳ ಉಪದೇಶವನ್ನು ಕೇಳುವ ಯೋಗ ಅವಕ್ಕೊದಗುತ್ತದೆ. ಈ ಸಂದರ್ಭದಲ್ಲಿ ಬರುವ ಆತ್ಮದ ಅಸ್ತಿತ್ವವನ್ನು ಕುರಿತ ಚರ್ಚೆ ತುಸು ದೊಡ್ಡದಾಯಿತೆನಿಸಿದರೂ ಕಾವ್ಯದ ಆಧ್ಯಾತ್ಮಿಕಸ್ವರೂಪವನ್ನು ಅದು ಸೂಚಿಸುತ್ತದೆ. ಹಿಂಸೆ ಮೊದಲಾದ ಪಾಪಗಳಿಗಾಗಿ ತೊಳಲುವದು ದೇಹ ಮಾತ್ರವಲ್ಲ, ಆತ್ಮ ಎಂದು ಸೂಚಿಸಿ ಅಕಂಪನ ಮುನಿಗಳು ಯಶೋಧರ–ಚಂದ್ರಮತಿಯರ ಆತ್ಮಗಳ ಜನ್ಮಾಂತರದ ತೊಳಲಾಟವನ್ನು ಉದಾಹರಿಸುತ್ತಾರೆ. "ತನ್ನಂತಿರೆ ಬಗೆವುದು ಪೆಱರಂ, ಪ್ರಾಣಹಿಂಸೆಯಂ ಮಾಡಲ್ವೇಡ, ದಯಾಮೂಲಂ ಧರ್ಮಂ" ಎಂಬ ಉಭಯಭವಕ್ಕೂ ಹಿತವಾದ ಮಾತು ಕೇಳಿ ಆ ಕೋಳಿಗಳು ಮನಸ್ಸಿನಲ್ಲಿ ಪರಮೋತ್ಸವದಿಂದ ವ್ರತವನ್ನು ಧರಿಸುತ್ತವೆ. ಆದ್ದರಿಂದಲೇ ಯಶೋಧರನ ಬಾಣಕ್ಕೆ ತುತ್ತಾಗಿ ಸತ್ತರೂ ಮಾನವಜನ್ಮ ಅವಕ್ಕೆ ಲಭ್ಯವಾಗುತ್ತದೆ. ಹಿಂದಿನ ಜನ್ಮದಲ್ಲೇ ಅವುಗಳ ಮನಸ್ಸು ಅಹಿಂಸಾವ್ರತದಲ್ಲಿ ನಟ್ಟಿರುವದರಿಂದ ಈ ಜನ್ಮದಲ್ಲಿ ಅವರು ಸ್ವಭಾವಸಿದ್ಧರಾಗಿಯೇ ಬೆಳೆಯುತ್ತಾರೆ. ಹೀಗೆ ಈ ಭವಾವಳಿಯ ಕಥೆಯಲ್ಲಿ ಪತಿತ ಆತ್ಮಗಳು ಯಾತನೆ, ಪ್ರಾಯಶ್ಚಿತ್ತಗಳ ಮೂಲಕ ಮತ್ತೆ ಪರಿಶುದ್ಧವಾದ ಚಿತ್ರವನ್ನು ಕಾಣಬಹುದಾಗಿದೆ.

ಇಲ್ಲಿಯ ವರೆಗಿನ ವಿಶ್ಲೇಷಣೆಯಲ್ಲಿ ಯಶೋಧರನ ಕಥೆಯಲ್ಲಿ ಕವಿಯ ಉದ್ದೇಶವೇನಿತ್ತೆಂಬುದು ಸ್ಪಷ್ಟವಾಗಿದೆ. ಆದರೆ ಇದರಲ್ಲಿ ಉದ್ದೇಶಪೂರ್ವಕವಾದ ಉತ್ಪ್ರೇಕ್ಷೆ ತುಂಬಿಕೊಂಡಿರುವುದೂ ಅಷ್ಟೇ ಸ್ಪಷ್ಟವಾಗಿದೆ. "ಸಂಕಲ್ಪನ ವಧೆಗಿನಿತಾಯ್ತು, ದಿಟದಿನೇನೇನಾಗರ್?" ಎನ್ನುತ್ತಾನೆ ಯಶೋಮತಿ ಒಂದು ಕಡೆ. ಹಿಂಸೆಯ ಘೋರ ಪರಿಣಾಮಗಳನ್ನು ಬಿಂಬಿಸಲೆಂದೇ, ಕೇವಲ ಸಂಕಲ್ಪ ಹಿಂಸೆಗೇ ಜನ್ಮಾಂತರಗಳಲ್ಲಿ ತೊಳಲಿಸುವ ಸಾಮರ್ಥ್ಯವಿರುವದಾದರೆ ಪ್ರತ್ಯಕ್ಷ ಹಿಂಸೆಯ ಫಲ ಇನ್ನೆಷ್ಟು ಘೋರವಾಗಿರಬಹುದು ಎಂಬುದನ್ನು ಕವಿ ಉತ್ಪ್ರೇಕ್ಷೆಗೊಳಿಸಿ ಹೇಳುತ್ತಾನೆ. ಈ ಸೂಚನೆಯ ಹಿನ್ನೆಲೆಯಲ್ಲಿ ಅಮೃತಮತಿಯ ಪ್ರಣಯಪ್ರಸಂಗವನ್ನು ಈಗ ಪರಿಶೀಲಿಸಬಹುದು.

ಅಮೃತಮತಿಯ ಪ್ರಣಯಪ್ರಸಂಗ ಯಶೋಧರನ ಕಥೆಗೆ ಪ್ರೇರಕವಾಗಿರುವಂತೆ, ಕಾವ್ಯದ ಮೂಲ ಉದ್ದೇಶದ ದೃಷ್ಟಿಯಿಂದ ಯಶೋಧರನ ಸಮಸ್ಯೆಗೆ ಪೂರಕವಾಗಿದೆ. "ಸಂಕಲ್ಪನವಧೆಗಿನಿತಾಯ್ತು, ದಿಟದಿನೇನೇನಾಗರ್" ಎಂಬ ಮಾತಿನಲ್ಲಿಯ ಮೊದಲ ಭಾಗದ ಸಮಸ್ಯೆಯನ್ನು ಯಶೋಧರನ ಕಥೆಯಲ್ಲಿ ನೋಡಬಹುದಾದರೆ, ಎರಡನೆಯ ಭಾಗದ ಸಮಸ್ಯೆಯನ್ನು ಅಮೃತಮತಿಯ ಕಥೆಯಲ್ಲಿ ನೋಡಬಹುದು. ಪ್ರತ್ಯಕ್ಷ ಪಾಪದಿಂದ ಉಂಟಾಗುವ ಅನಾಹುತವನ್ನು ಕವಿ ಅಮೃತಮತಿಯ ಕಥೆಯಲ್ಲಿ ತೋರಿಸಿದ್ದಾನೆ. ಇಲ್ಲಿಯೂ ಕೂಡ ವಿಧಿವಿಳಸನದ ಪಾತ್ರವನ್ನೂ, ಉತ್ಪ್ರೇಕ್ಷೆಯ ತಂತ್ರವನ್ನೂ ಕೂಡಿಯೇ ಕವಿ ಉಪಯೋಗಿಸಿಕೊಂಡಿದ್ದಾನೆ.

ಅಮೃತಮತಿಯ ಪತನವನ್ನು ವಾಸ್ತವಿಕ ದೃಷ್ಟಿಕೋನದಿಂದ ವಿವರಿಸುವ ಕೆಲವು ಪ್ರಯತ್ನಗಳನ್ನು ಆರಂಭದಲ್ಲಿಯೇ ಗಮನಿಸಲಾಗಿದೆ. ಇವು ಸಮಾಧಾನಕರ ವಿವರಣೆ ನೀಡಲು ಸಾಧ್ಯವಾಗದ್ದಕ್ಕೆ ಮುಖ್ಯಕಾರಣವೆಂದರೆ—ಈ ಪ್ರಸಂಗದಲ್ಲಿ ವಾಸ್ತವಿಕ ಶಬ್ದಗಳಿಂದ ವಿವರಿಸಬಹುದಾದ ಸಂಗತಿಗಳನ್ನು ಕವಿ ಉದ್ದೇಶಪೂರ್ವಕವಾಗಿಯೇ ತೆಗೆದುಹಾಕಿದ್ದಾನೆ. ಬದಲಾಗಿ ಈ ಘಟನೆಯ ಅತಾರ್ಕಿಕತೆಯನ್ನೂ ಅವಾಸ್ತವತೆಯನ್ನೂ ಎತ್ತಿತೋರಿಸಿ ಅಮೃತಮತಿಯ ಪಾಪದ ಘೋರತೆಯನ್ನು ಅತಿರಂಜಿತಗೊಳಿಸುವದೇ ಅವನ ಉದ್ದೇಶ. ಅದಕ್ಕಾಗಿಯೇ ಯಶೋಧರಚರಿತೆಯ ಇನ್ನಿತರ ಮೂಲಗಳಲ್ಲಿ ಸೂಚಿತವಾಗಿರುವ ಸಂಗೀತದ ಕಾಮಪ್ರಚೋದಕ ಶಕ್ತಿಯ ವಿವರಣೆಯನ್ನಾಗಲಿ, ಅಮೃತಮತಿ ಯಶೋಧರನನ್ನು ಮನಸ್ಸಿಲ್ಲದೆ ಮದುವೆಯಾಗಿದ್ದಳೆಂಬ ಸಂಗತಿಯನ್ನಾಗಲಿ, ಜನ್ನ ವಾದಿರಾಜರು ಉಪಯೋಗಿಸಿಕೊಂಡಿಲ್ಲ.೮ ಅಮೃತಮತಿ–ಯಶೋಧರರ ದಾಂಪತ್ಯದಲ್ಲಿ ಯಾವ ಅರಕೆಗಳಿದ್ದ ಸೂಚನೆಗಳೂ ಇಲ್ಲಿಲ್ಲ. ಹಾಗಿದ್ದೂ ಅಮೃತಮತಿ ಇರುಳಿನ ಬೆಳಗಿನ ಜಾವದಲ್ಲಿ ಅಷ್ಟಾವಂಕನ ಸಂಗೀತ "ಮುಟ್ಟದ ಮನಮಂ ತೊಟ್ಟನೆ ಪಸಾಯದಾನಂಗೊಟ್ಟಳ್". ಇಲ್ಲಿ ಪಾತ್ರಾಪಾತ್ರದ ವಿವೇಚನೆಯಾಗಲಿ, ಸಾರಾಸಾರ ವಿಚಾರವಾಗಲಿ ಒಂದೂ ನಡೆಯುವದಿಲ್ಲ. ಅವಳು "ವಿಕಲಸ್ವಾಂತೆ"ಯಾಗುತ್ತಾಳೆ. ಆ ಗಾಯಕನನ್ನು "ನೋಡುವ ಕೂಡುವ ಚಿಂತೆ ಕಡಲ್ವರಿದುದಂದು ಬೆಳಗಪ್ಪಿನೆಗಂ." ಈ ಚಿಂತೆ ಕಡಲ್ವರಿಯುವ ಪ್ರತಿಮೆಯಲ್ಲಿಯೇ ಅವಳ ಬಯಕೆಯ ಪ್ರಚಂಡತೆ, ಆದಮ್ಯತೆ ಸೂಚಿತವಾಗಿವೆ. ದೂತಿಯನ್ನು ಸಂಧಾನಕ್ಕಾಗಿ ಕಳಿಸಿ 'ವಿಷಣ್ಣಾನನೆ'ಯಾಗಿ, 'ಮಾರ್ಗಾವಲಗ್ನನೇತ್ರೆ'ಯಾಗಿ, 'ಉಚ್ಛ್ವಾಸನಿತಪ್ತಾಧರರುಚಿ'ಯಾಗಿ ಕುಳಿತ ಅವಳ ಸ್ಥಿತಿಯಲ್ಲಿ ಗಂಭೀರವೂ, ನೈಜವೂ ಆದ ಅವಳ ಭಾವನೆಗಳನ್ನು ನೋಡುತ್ತೇವೆ. ದೂತಿ ವ್ಯಂಗ್ಯವಾಗಿ "ಇಂತಪ್ಪ ಕಾಮದೇವಂಗೆಂತೆಂತಾಯ್ದಬಿಸಿ ಕೂರ್ತೆಯೆಂದಾನ-

೮. ಸೋಮದೇವನ "ಯಶಸ್ತಿಲಕ ಚಂಪು"ವಿನಲ್ಲಿ ಈ ವಿವರಗಳಿವೆ.

ಱಿಯೆಂ” ಎಂದಾಗ ತನ್ನ ಕಾದಲ ಅಷ್ಟು ಚೆಲುವನೇ ಎಂದು ಅವಳಿಗೆ ಆತುರ, ಸಂತೋಷ. ಆದರೆ ಅವನ ರೂಪವಿದ್ದುದು ಹೀಗೆ :

“ಪಱಿದಲೆ ಕುೞಿನೊಸಲಟೀಗ
ಣ್ಣೊಱೆವಾಯ್ ಹಪ್ಪಳಿಕೆ ಮೂಗು ಮುರುಟಿದ ಕಿವಿ ಬಿ
ಜ್ಬಿಱಿವಲ್ ಕುಸಿಗೊರಲಿೞಿದೆರ್ದೆ
ಪೊಱಿಂಟ ಬೆನ್ ಬಾತ ಬಸಿಱಿಡಂಗಿದ ಜಘನಂ ॥

ಕಱಿದೊವಲ ಪೞೆಯ ಕುೞಿಯಂ
ತೆಱೆದಂದದ ಮೆಯ್ಯ ನಾತನೂತನ ಕಯ್ಗಳ್
ಕುಱುಗಣ್ಣು ಕೂನಬೆನ್ ಕಾಲ್
ಮಱೆಯಿಸುವುದು ಟೊಂಕ ಮುಱಿದ ಕತ್ತೆಯ ಕಾಲಂ ॥

ಮುದುಗರಡಿಯ ಮುದುದೊವಲಂ
ದದ ಕರಿಯಂ ತಾಳಕಾಯ ಮೋಳಿಗೆಯೊಂದಂ
ದದ ಮುರುಡನಷ್ಟವಂಕಂ
ಮೊದಲೊಣಗಿದ ಕೂನ ಗೊರಡಿನಂದದ ಕೊಂಕಂ ॥”

ಇಲ್ಲಿ ಜನ್ನ ವಾದಿರಾಜನ ವರ್ಣನೆಯನ್ನೇ ಅನುಸರಿಸಿದ್ದರೂ ಆದಕ್ಕೆ ಇನ್ನೂ ಅಷ್ಟು ವಿವರ ಸೇರಿಸಿ, ಉತ್ಪ್ರೇಕ್ಷೆಗೊಳಿಸಿ ಬದಗನ ರೂಪವನ್ನು ಹೆಚ್ಚು ಅಸಹ್ಯವಾಗಿ ಮಾಡಿದ್ದಾನೆ. “ಆದರೆ ಜನ್ನ ಚಿತ್ರಿಸುವಷ್ಟು ರೂಪವಿಕಾರ ಅವನಿಗೆ ಇರಬೇಕಾದ ಅವಶ್ಯಕತೆ ತೋರುವದಿಲ್ಲ” ಎಂದು ಡಿ. ಎಲ್ ನರಸಿಂಹಾಚಾರ್ ಅವರು ಅಭಿಪ್ರಾಯಪಟ್ಟಿದ್ದಾರೆ[9] “ಅಮೃತಮತಿಯ ವಿಕಾರದ ಪರಮಾವಧಿಯನ್ನು ತಿಳಿಸಲೂ, ಆಕೆಯ ಹೃದಯಪ್ರಿಯನಾದ ಯಶೋಧರನಿಗೆ ವೈರಾಗ್ಯ ಉಂಟಾಗಲೂ ಅದು ಅಗತ್ಯ” ಎಂದು ಕುವೆಂಪು ಅವರ ಅಭಿಪ್ರಾಯವನ್ನು ಅನುಸರಿಸಿ ಎಲ್. ಆರ್. ಹೆಗಡೆಯವರು ಸಮಾಧಾನ ಕೊಟ್ಟಿದ್ದಾರೆ.[10] ಇದರಲ್ಲಿ ಮೊದಲನೆಯ ಕಾರಣ ಕಾವ್ಯೋದ್ದೇಶದ ದೃಷ್ಟಿಯಿಂದ ಸರಿಯಾಗಿದೆ ಎಲ್ಲ ಭೋಗಭಾಗ್ಯಗಳಿದ್ದೂ ಇಂಥ ಅಸಹ್ಯರೂಪಿನ ಬದಗನಲ್ಲಿ ಅವಳು ಅನುರಕ್ತ-ವಾಗುವದರ ಅಸಹಜತೆಯನ್ನೂ, ಅತಾರ್ಕಿಕತೆಯನ್ನೂ ಎತ್ತಿ ಹೇಳಿ ಅವಳ ಪಾಪಕ್ಕೆ ಘೋರ ಸ್ವರೂಪವನ್ನು ಕೊಡುವದೇ ಕವಿಯ ಉದ್ದೇಶ. ಯಶೋ-ಧರನ ವೈರಾಗ್ಯಕ್ಕೆ ಮಾತ್ರ ಇಷ್ಟು ಭೀಕರವಾದ ಅನುಭವವೇ ಆಗಬೇಕೆಂದಿರಲಿಲ್ಲ. ಸಾಮಾನ್ಯವಾಗಿ ಜೈನಕಥೆಗಳಲ್ಲಿ ಒಂದು ನರೆಗೂದಲು ಕಂಡರೂ ವಿರಕ್ತಿಗೆ ಸಾಕಾಗುತ್ತದೆ. ಈ ಸಂದರ್ಭದಲ್ಲಿ ಯಶೋಧರನಿಗೆ ಅಮೃತಮತಿಯ ಮೇಲೆ

೯. ‘ಜನ್ನನೂ ವಾದಿರಾಜನೂ’—ಡಿ. ಎಲ್. ನರಸಿಂಹಾಚಾರ್; ಸಾಹಿತ್ಯಪರಿಷತ್ಪತ್ರಿಕೆ, ಸಂ. ೧೫, ಸಂ. ೪ರಲ್ಲಿ

೧೦. “ಕಾವ್ಯವ್ಯಾಸಂಗ”—ಎಲ್. ಆರ್. ಹೆಗಡೆ; ಪುಟ : ೫೪.

ಇದ್ದ ವಿಪರೀತ ಮೋಹವನ್ನು ಗಮನಿಸಿದರೆ ಅಮೃತಮತಿಗೆ ಸಂಬಂಧಿಸಿದಂತೆಯೇ ಅವನಿಗೊಂದು ಆಘಾತ ಒದಗಿ ಆದರಿಂದಲೇ ಅವನ ಮನಸ್ಸು ವಿರಕ್ತಿಗೆ ತಿರುಗುವಂತೆ ಆಗಲು ಈ ಅಸಹ್ಯ ರೂಪದ ಬದಗನೊಡನೆ ಅವಳ ಸಂಬಂಧವನ್ನು ತೋರಿಸುವದು ಅವಶ್ಯವಾಗಿತ್ತೆಂದು ಸಮರ್ಥಿಸಬಹುದಾದರೂ ಯಶೋಧರನ ವಿರಕ್ತಿಯ ವಸ್ತುವನ್ನು ಕಾವ್ಯದಲ್ಲಿ ಸೋದ್ದಿಶ್ಯವಾಗಿ ಉಪಯೋಗಿಸಿಕೊಂಡಿಲ್ಲ. ಆದ್ದರಿಂದ ಅದು ಇಲ್ಲಿ ಮಹತ್ವದ್ದಲ್ಲ. ಈ ಬೀಭತ್ಸ ವರ್ಣನೆಯ ಮುಖ್ಯ ಕೆಲಸವೆಂದರೆ—ಆದು ಯಶೋಧರನಿಂದ ಎಸಗಲ್ಪಡುವ ಹಿಂಸಾಪಾಪದ ಸ್ವರೂಪವನ್ನು ನಿರ್ಣಯಿಸುತ್ತದೆ. ಬದಗನೊಂದಿಗೆ ರಮಿಸುವ ಹೆಂಡತಿಯನ್ನು ನೋಡಿದಾಗ ಕನಲಿ ಕೊಲ್ಲಬೇಕೆಂದು ಯಶೋಧರನಿಗೆ ಗೊತ್ತಿಲ್ಲದ ಹಾಗೆಯೇ ಅವನ ಕೈ ಖಡ್ಗವನ್ನೆತ್ತುತ್ತದೆ. ಆದರೆ ಬದಗನ ಬೀಭತ್ಸ ರೂಪವನ್ನು ನೋಡಿ, ಅಂಥವನಲ್ಲಿ ಅನುರಕ್ತಳಾದ ತನ್ನ ಹೆಂಡತಿಯ ವಿಕೃತ ಮನಸ್ಸನ್ನು ನೆನೆದು ಅವರನ್ನು ಕೊಲ್ಲಲಿಕ್ಕೂ ಕೂಡ ಅವನು ಹೇಸಿಬಿಡುತ್ತಾನೆ. "ಈ ಪುಟುಕರನಿಱಿವುದೆ ಮದ್‌ಭುಜಾಸಿಯಿದು?", ರಣರಂಗದಲ್ಲಿ ರಕ್ತದಿಂದ ಮಡಿಯಾದ ಖಡ್ಗ "ಈ ಮಸಿಮುಸುಡನ ಜೀವಕಪ್ಪಿನಿಂ ಕಂದಿದೊಡೆನ್ ದೆಸೆಯುನಡರ್ದೆನ್ನ ಕೀರ್ತಿಪ್ರಸರದ ಕುಡಿ ಕಯ್ಪುಸೋರೆಯ ಕುಡಿಯುವೊಲಕ್ಕುಂ", "ಪೆಣ್ ತಪ್ಪಿ ನಡೆಯೆ ಚಿಃ ಕಿಸುಗುಳಮೆಂದುಟಿವುದೆ ಗೆಲ್ಲಂ. (ಕೊಂದಾ) ಪುಳು ಪುಟ್ಟುವ ನರಕದೊಳಗೆ ಬೀಬ್ಬನೆ ಚದುರಂ?" ಎನಿಸಿ ಯಶೋಧರ ಅವರನ್ನು ಕೊಲ್ಲದೆ ಬಿಡುತ್ತಾನೆ. ಹೀಗೆ ಅವರನ್ನು ಕೊಲ್ಲಲು ಕೂಡ ಅಸಹ್ಯವಾಗುವಂಥ ಪ್ರಸಂಗವನ್ನು ಒದಗಿಸುವದೇ ಇಲ್ಲಿಯ ಉದ್ದೇಶ. ಅಂದರೆ ಯಶೋಧರ ಕೊಲೆಯಂಥ ಪ್ರತ್ಯಕ್ಷ ಪಾಪವನ್ನು ಮಾಡುವದು ಇಲ್ಲಿ ಬೇಕಾಗಿಲ್ಲ. ಬೇಕಾದದ್ದು ಕೇವಲ ಸಂಕಲ್ಪಹಿಂಸೆ. ಯಾಕಂದರೆ ಸಂಕಲ್ಪಹಿಂಸೆಗೇ ಒದಗಬಹುದಾದ ಜನ್ಮಾಂತರಗಳ ದುಃಖವನ್ನು ಕವಿಗೆ ತೋರಿಸಬೇಕಾಗಿದೆ. ವೈರಾಗ್ಯವನ್ನು ಪ್ರಚೋದಿಸುವ ಕೆಲಸವನ್ನು ಮಾಡುವದರ ಜೊತೆಗೆ, ಯಶೋಧರ ಪ್ರತ್ಯಕ್ಷ ಹಿಂಸೆಯನ್ನು ಮಾಡದಂತೆ ತಡೆಯುವದೂ ಕಥಾಸಂವಿಧಾನದ ದೃಷ್ಟಿಯಿಂದ ಇಲ್ಲಿ ಮಹತ್ವದ್ದಾಗಿದೆ.

ಹಾಗೆಯೇ, ಇದು ಅಮೃತಮತಿಯ ಅನುರಕ್ತಿಯ ಅಪಾತ್ರತೆಯನ್ನು ಸೂಚಿಸುತ್ತದೆ. ಅದಕ್ಕಾಗಿಯೇ ದೂತಿ "ಚಿತ್ರಮಪಾತ್ರೇ ರಮತೇ ನಾರೀ", "ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ" ಎಂದು ಉದ್ಗರಿಸುತ್ತಾಳೆ. ಇವೆರಡೂ ಉದ್ಗಾರಗಳು ಅಮೃತಮತಿಯ ಪ್ರಣಯದ ಸ್ವರೂಪವನ್ನು ವಿವರಿಸುತ್ತವೆ. ಇದೊಂದು ವಿಚಿತ್ರವೆಂದು ತೋರುತ್ತದೆಯೇ ಹೊರತು ಯಾವ ದೃಷ್ಟಿಯಿಂದಲೂ ಇದನ್ನು ಸಮರ್ಥಿಸಲಿಕ್ಕಾಗುವದಿಲ್ಲವೆಂಬುದೇ ಇಲ್ಲಿಯ ಮಹತ್ವದ ಅಂಶ. ಜೊತೆಗೆ ಇಲ್ಲಿಯೂ ಕೂಡ ಕವಿ ವಿಧಿಯ ಕೈವಾಡವನ್ನು ಕಾಣುವ ಸೂಚನೆ ಇದೆ. ಈ

ಪ್ರಚಂಡ ಬಯಕೆಯ ಮುಂದೆ ಅಸಹಾಯಳಾದ ಅವಳ ಸ್ಥಿತಿಯನ್ನು "ಪುಳಿಂದನ ಕಣೆಗಟ್ಟಿ ನಿಂದ ವನಹರಿಣಿಯವೊಲ್" ಎಂದು ವರ್ಣಿಸುವಾಗಲೂ, "ಮನಸಿಜನ ಮಾಯೆ ವಿಧಿವಿಳಸನದ ನೆರಂಬಡೆಯೆ ಕೋದು ಕೂಗದೆ ನರರಂ?" ಎಂದು ಕಾಮದ ವೈಚಿತ್ರ್ಯ ಹಾಗೂ ವಿಧಿವಿಳಸನದ ರಹಸ್ಯಗಳನ್ನು ಕೂಡಿಸಿ ವ್ಯಾಖ್ಯಾನಿಸುವಾಗಲೂ ವಿಧಿಯ ಕೈವಾಡದ ಅಸ್ತಿತ್ವವನ್ನು ಒತ್ತಿಹೇಳಲಾಗಿದೆ. ಇದು ಅಮೃತಮತಿಯ ಪ್ರಣಯಪ್ರಸಂಗ ಅತಾರ್ಕಿಕವೂ, ಅವಾಸ್ತವವೂ, ವಿಚಿತ್ರವೂ ಆಗಿರುವದನ್ನೇ ಸಾರಿಹೇಳಿದಂತಿದೆ. ಅದನ್ನು ವಾಸ್ತವ ಕಾರಣಗಳನ್ನು ಕೊಟ್ಟು ವಿವರಿಸುವದು ಸಾಧ್ಯವಿಲ್ಲದ್ದರಿಂದಲೇ ಇದೊಂದು ವಿಧಿಯ ವೈಚಿತ್ರ್ಯವೆಂದು ಹೇಳಿ ಕವಿ ಸುಮ್ಮನಾಗಿದ್ದಾನೆ.

ಆದರೆ ಅಮೃತಮತಿ ತನ್ನ ಪಾಪದ ಹೊಣೆಯನ್ನು ಸ್ಥಿರಸಂಕಲ್ಪದಿಂದಲೇ ಹೊತ್ತುಕೊಳ್ಳುತ್ತಾಳೆಯೇ ಹೊರತು, ಯಶೋಧರನಂತೆ ವಿಧಿಯ ವಿಳಸನಕ್ಕೆ ಆರೋಪಿಸುವದಿಲ್ಲ. ದೂತಿಯು ಮುಖಾಂತರ ಬದಗನ ವರ್ಣನೆಯನ್ನು ಕೇಳಿದಾಗ "ಮರುಳೆ, ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್", "ಒಲವಾದೊಡೆ ರೂಪಿನ ಕೋಟಲೆಯೇವುದೊ !" ಎಂದು ಹೇಳಿ ತನ್ನ ಪಾಪದ ಬಯಕೆಯನ್ನು ಮನಃಪೂರ್ವಕವಾಗಿ ಸಮರ್ಥಿಸಿಕೊಳ್ಳುತ್ತಾಳೆ. ಈ ವಿಷಯದಲ್ಲಿ ಅವಳಲ್ಲಿ ಯಾವ ಹೊಯ್ದಾಟವೂ ಇಲ್ಲ. ಬದಗ ಅವಳನ್ನು ಕ್ರೂರವಾಗಿ ಹಿಂಸಿಸಿದಾಗಲೂ ಅವಳು ಸೈರಿಸುತ್ತಾಳೆ. ಯಶೋಧರ ಪರ್ಯಾಯವಾಗಿ ತನ್ನ ಬಗ್ಗೆ ಆಡಿದ ಚುಚ್ಚುಮಾತಿನಿಂದಲೇ ಸಿಟ್ಟಿಗೇಳುತ್ತಾಳೆ. ಆ ಮಾತಿಗಾಗಿಯೇ, ವೈರಾಗ್ಯತಾಳಿ ಅಡವಿಗೆ ಹೊರಟಿದ್ದ ಗಂಡ-ಅತ್ತೆಯರಿಗೆ ವಿಷವಿಟ್ಟು ಕೊಲ್ಲುತ್ತಾಳೆ. ಮುಂದೆಯೂ ತನ್ನ ಪಾಪದ ಬಗ್ಗೆ ಅವಳಿಗೆ ಎಂದೂ ಪಶ್ಚಾತ್ತಾಪ ಹುಟ್ಟುವದೇ ಇಲ್ಲ. ತನ್ನ ಅಧಃಪತನದ ಅರಿವೂ ಅವಳಿಗಿಲ್ಲವಾದ್ದರಿಂದ, ಅದರಿಂದ ಮೇಲೇಳುವ ಪ್ರಯತ್ನವೂ ಇಲ್ಲ. ಬದಗನ ಸಹವಾಸದಿಂದಾಗಿ ಮುಂದೊದಗಲಿರುವ ನರಕಯಾತನೆಯ ಮೊದಲ ಚಿಹ್ನೆಗಳನ್ನು ಈ ಜನ್ಮದಲ್ಲೇ ಅವಳು ಅನುಭವಿಸುತ್ತಾಳೆ:

"ಬಸಿದಪುದು ಮೆಯ್ಯ ಕೀವುಂ
ರಸಿಗೆಯುಮೊಡಲಱಿದುದಾದೊಡಂ ಮಾಣಳೆ ನಾಯ್
ಬಸನಿಗತನಮುಂ ಮಾಣ್ದೇ
ಕಿಸುಗುಳಿಯಂ ಜವನುಯ್ಯಲೇಂ ಪೇಸಿದನೋ ॥

ಮದನನ ಮಾಱಂಕದ ಚೆಂ
ದದ ಗಂಡನನಮೃತದನ್ನಳತ್ತೆಯುನಿವಳೋ
ವದೆ ಕೊಂದಳ್ ಪಾಪಂ ತಿ
ನ್ನದು ಪಾತಕಿ ಪುೞಿತೊಡಲ್ಲದೇಂ ಸತ್ತಪಳೇ ॥

ತೊನ್ನನ ಕೂಟದಿನಾದುದು
ತೊನ್ನೀ ರೋಗಕ್ಕೆ ಬಾಡು ಕಳ್ ವಿಷಮೆನೆಯುಂ
ಮನ್ನಿಸಳೆ ಮಗನ ಮಾತನಿ
ದೇಂ ನಾಯಕನರಕಮೀಕೆಗೊಚ್ಚತನಾಯ್ತೋ ॥"

ದಾಸಿಯರು ಆಡಿಕೊಳ್ಳುವ ಈ ಮಾತುಗಳಲ್ಲಿ ಅಮೃತಮತಿಯ ಆತ್ಮ ಎಂಥ ಹೀನಾವಸ್ಥೆಗಿಳಿದಿದೆ ಎಂಬುದರ ಚಿತ್ರವತ್ತಾದ ವರ್ಣನೆ ಇದೆ. ಅಷ್ಟಾವಂಕನೊಡನೆ ಕೂಡಿ ಅಸಹ್ಯವಾದ ವ್ಯಭಿಚಾರದ ಪಾಪವನ್ನು ಮಾಡಿದ್ದಲ್ಲದೆ, ಗಂಡ-ಅತ್ತೆಯರಿಗೆ ವಿಷವಿಟ್ಟು ಕೊಂದ ಪ್ರತ್ಯಕ್ಷ ಹಿಂಸೆಯ ಪಾಪವೂ ಅವಳ ಪಾಲಿಗಿದೆ. ಆದ್ದರಿಂದ ಅವಳದು ಅಕ್ಷಮ್ಯವಾದ ಪಾಪ. ಕೇವಲ ಮಾನಸಿಕವಾಗಿ ಹಿಂಸೆಮಾಡಿದ್ದರೂ ವಿಧಿಯ ಕೈವಾಡದಿಂದ ಅದೇ ದೊಡ್ಡದಾಗಿ ಯಶೋಧರ ಜನ್ಮಾಂತರಗಳಲ್ಲಿ ಪಾಡುಪಡಬೇಕಾಯಿತು. ಆದರೂ ಅವನಿಗೆ ಮುಕ್ತಿಯ ಮಾರ್ಗ ಮುಚ್ಚಿಲ್ಲ. ಪ್ರಾಯಶ್ಚಿತ್ತದಿಂದ ಪರಿಶುದ್ಧವಾದ ಬಳಿಕ ದೈವದ ಕೃಪೆ ಅವನಿಗೆ ಬಂದೇ ಬರಬೇಕು. ಆದರೆ ಅಮೃತಮತಿಯ ಪಾಪ ದೈವದ ಕೃಪೆಗೆ ಪಾತ್ರವಾಗದಷ್ಟು ಘೋರವಾಗಿದೆ. ಅಂತೆಯೇ ಎಂದೆಂದಿಗೂ ಮುಕ್ತಿಯ ಆಶೆಯಿಲ್ಲದಂತೆ ಪಂಚಮನರಕವಾದ ಧೂಮಪ್ರಭೆಯಲ್ಲಿ ಅವಳು ಬೀಳಬೇಕಾಯಿತು.

ಈ ಸಂದರ್ಭದಲ್ಲಿ ಅಮೃತಮತಿ ಬದಗನಲ್ಲಿ ಕೊನೆಯವರೆಗೆ ಉಳಿಸಿಕೊಂಡು ಬಂದ ಪ್ರೀತಿ ಉಜ್ವಲವಾದುದೆಂದೂ ಅಚಲವಾದುದೆಂದೂ ಸಾಧಿಸುವ ವಿಮರ್ಶಕ ಪ್ರಯತ್ನಗಳು ನಡೆದಿವೆ. ಈ ಪ್ರೀತಿಯ ಆದರ್ಶೀ-ಕರಣ ಎಲ್ಲಿಯ ವರೆಗೆ ಹೋಗಿದೆಯೆಂದರೆ—"ಹುಳಿತು ನಾರುತ್ತಿದ್ದರೂ ಅಷ್ಟಾವಂಕನೇ ತನಗೆ ಕಾಮದೇವನೆಂದು ಕೊನೆತನಕ ಭಾವಿಸಿದ ಅಮೃತ-ಮತಿಯ ಅಭಿರುಚಿಗೆ ನಾವು ಜುಗುಪ್ಸೆಪಟ್ಟರೂ ಅವಳ ಸ್ಥಿರವಾದ ಅನನ್ಯವಾದ ಪ್ರಣಯಕ್ಕೆ ತಲೆದೂಗಬೇಕಲ್ಲವೇ ?" ಎಂದಿದ್ದಾರೆ ಶ್ರೀ ತೀ. ನಂ. ಶ್ರೀಕಂಠಯ್ಯನವರು.[೧೧] ತಲೆದೂಗಬಹುದಾದ ಉಜ್ವಲ ಅನನ್ಯ ಪ್ರಣಯವನ್ನು ಚಿತ್ರಿಸುವದು ಜನ್ನನ ಉದ್ದೇಶವಲ್ಲವೇ ಅಲ್ಲ. ಈ ಸಂಬಂಧವನ್ನು ಪ್ರೀತಿ ಎಂಬ ಹೆಸರಿನಿಂದ ಕರೆಯುವದಕ್ಕೂ ಅವನು ಸಿದ್ಧನಿಲ್ಲ. ಅವನ ದೃಷ್ಟಿಯಲ್ಲಿ ಇದೊಂದು ಪಾಪ. ಘೋರವಾದ, ಅಸಮರ್ಥನೀಯವಾದ, ಅತಾರ್ಕಿಕವಾದ ಪಾಪ. ಅಂತೆಯೇ ಅದು ಅಕ್ಷಮ್ಯವಾದುದು. ಧೂಮಪ್ರಭೆಯೊಂದೇ ಅದಕ್ಕೆ ತಕ್ಕ ಶಿಕ್ಷೆ. ಮೈಯೆಲ್ಲ ರೋಗವಡರಿ ಬಸಿಯುತ್ತಿದ್ದರೂ ಅವಳು ಬದಗನೊಡನೆ ಇನ್ನೂ ವಿಹರಿಸುತ್ತಿರುವದು ಅವಳ ಪ್ರೀತಿಯ ಅನನ್ಯತೆಯನ್ನಲ್ಲ, ಅವಳು ಪಾಪದಲ್ಲಿ ಎಷ್ಟು ಆಳಕ್ಕೆ ಮುಳುಗಿದ್ದಾಳೆಂಬುದನ್ನು ಸೂಚಿಸುತ್ತದೆ. ಅವಳ

೧೧. "ಕಾವ್ಯಸಮೀಕ್ಷೆ"—ಪುಟ : ೭೫.

ಹಾಗೂ ಬದಗನ ಸಂಬಂಧವನ್ನು ಸೂಚಿಸಲು ಕವಿ ಬಳಸಿರುವ ಶಬ್ದಗಳನ್ನೇ ನೋಡಬಹುದು. "ವಿಕಲಸ್ವಾಂತೆಗೆ ನೋಡುವ **ಕೂಡುವ** ಚಿಂತೆ ಕಡಲ್ವರಿ-ದುದು." "ಚಿತ್ರಮಪಾತ್ರೇ **ರಮತೇ** ನಾರೀ." ಇಲ್ಲಿ 'ಕೂಡುವ' ಮತ್ತು 'ರಮತೇ' ಎಂಬ ಶಬ್ದಗಳು ಕೇವಲ ಕಾಮವ್ಯಾಪಾರವನ್ನು—ದೇಹಸಂಬಂಧ ವನ್ನು ಸೂಚಿಸುತ್ತವೆ. "ಇಂತಪ್ಪ ಕಾಮದೇವಂಗೆಂತೆಂತಾಯ್ದಳಿಸಿ ಕೂರ್ತೆ?" ಎನ್ನುವ ದೂತಿಯ ಮಾತಿನಲ್ಲಿ 'ಕೂರ್ತೆ' ಎಂಬ ಶಬ್ದ ವ್ಯಂಗ್ಯವಾಗಿ ಬಳಸಲ್ಪಟ್ಟಿದೆ. "ಒಲವಾದೊಡೆ ರೂಪಿನ ಕೋಟಲೆಯೇವುದೊ!" ಎಂಬಲ್ಲಿ 'ಒಲವು' ಎನ್ನುವ ಶಬ್ದವನ್ನು ಅವಳೇ ಬಳಸಿಕೊಳ್ಳುತ್ತಾಳೆ. ಅವಳ ರೀತಿ "ಬೇವಂ ಮೆಚ್ಚಿದ ಕಾಗೆ" ಯಂತೆ-ಎನ್ನುವಲ್ಲಿ ಕವಿ ಈ ಪ್ರಸಂಗದ ಬಗ್ಗೆ ತನ್ನ ಧೋರಣೆ ಏನೆಂಬುದನ್ನು ಸ್ಪಷ್ಟಪಡಿಸಿದ್ದಾನೆ. ಅವಳ ಪತನದನಂತರ ಕವಿ ಅವಳ ಬಗೆಗೆ ಬಳಸುವ 'ಕಿಸುಗುಳಿ', 'ಪಾತಕಿ', 'ಪಾದರಿ', 'ಪಾಣ್ಬೆ', 'ಸಾಯ್ಬುಸನಿಗತನ' ಮುಂತಾದ ವಿಶೇಷಣಗಳು ಈ ದೃಷ್ಟಿಯಿಂದ ಅರ್ಥಪೂರ್ಣವಾಗಿವೆ. "ಬದಗನುಮಂ ತನ್ನವ ಳೊಡಗೂಡಿರೆ","ಅಷ್ಟವಂಕಂಗೆ ಮರುಳ್ಗೊಂಡು" ಎಂಬ ಮಾತುಗಳೂ ಅದನ್ನೇ ಸೂಚಿಸುತ್ತವೆ. ಹೀಗೆ ಕವಿಯ ದೃಷ್ಟಿಯಲ್ಲಿ ಅದೊಂದು ಪಾಪ. ಕಾವ್ಯದ ಉದ್ದೇಶದ ದೃಷ್ಟಿಯಿಂದ ಅದೇ ಸಮರ್ಥನೀಯ.

ಹಾಗೆಯೇ, ಅಮೃತಮತಿಯನ್ನು ಒಂದು ದುರಂತಪಾತ್ರವೆಂದು ಬಗೆ ಯುವ ಪ್ರಯತ್ನವೂ ನಡೆದಿದೆ. ಇದೊಂದು ಹಾಸ್ಯಾಸ್ಪದ ಕಲ್ಪನೆ. ಈ ವಿಷಯ ದಲ್ಲಿ ಕುವೆಂಪು ಅವರ ವಾದ ಸಮಂಜಸವಾಗಿದೆ.[೧೨] ದುರಂತದ ತಿರುಳಿರುವದು ಸಂವೇದನಾಶೀಲ ಮನಸ್ಸಿನ ಯಾತನೆಯಲ್ಲಿ, ಸದಸದ್ವಿವೇಕದ ಹೊಯ್ದಾಟದಲ್ಲಿ, ಒಳಿತು-ಕೆಡುಕುಗಳ ಎಳೆದಾಟದಲ್ಲಿ. ಬದುಕಿನ ಯಾವದೋ ದುರ್ಬಲ ಕ್ಷಣ ದಲ್ಲಿ ಘಟಿಸುವ ತಪ್ಪಿನಿಂದ ಒದಗುವ ಅನಾಹುತಗಳ ಪರಂಪರೆಯ ಮೂಲಕ ವ್ಯಕ್ತಿ ಮೇಲೇಳಬೇಕೆಂಬ ಆಶೆಯಿದ್ದರೂ ಅಪರಿಹಾರ್ಯವಾಗಿ ಕೆಳಗೆ ಬೀಳು-ತ್ತಾನೆ. ಅಂತೆಯೇ ಅಂಥ ವ್ಯಕ್ತಿಯ ಪತನದಲ್ಲಿ ಸಹಾನುಭೂತಿಯನ್ನು ಹುಟ್ಟಿ ಸುವ ಶಕ್ತಿ ಇದೆ. ಅಮೃತಮತಿಯಲ್ಲಿ ಇಂಥ ಸಂವೇದನಾಶೀಲ ಮನಸ್ಸನ್ನಾ-ಗಲಿ, ಸದಸದ್ವಿವೇಕದ ಅಸ್ತಿತ್ವವನ್ನಾಗಲಿ, ಕೆಡುಕಿಗೆ ಪ್ರತಿಯಾದ ಒಳಿತಿನ ಸೆಳೆತ ವನ್ನಾಗಲಿ ನಾವು ಕಾಣುವದಿಲ್ಲ. ಅವಳದು ದುರ್ಬಲ ಕ್ಷಣದಲ್ಲಿ ಘಟಿಸುವ ತಪ್ಪಲ್ಲ, ಒಮ್ಮನಸ್ಸಿನಿಂದ ಮಾಡಿದ ಪಾಪ. ತನ್ನ ಪತನದಿಂದ ಮೇಲೇಳುವ ಬಯಕೆಯ ಸೂಚನೆಯೇ ಅವಳ ಪಾತ್ರದಲ್ಲಿ ಇಲ್ಲ. ಅವಳ ಪಾತ್ರ ಓದುಗರಲ್ಲಿ ಹುಟ್ಟಿಸುವದು ಸಹಾನುಭೂತಿಯನ್ನಲ್ಲ, ತೀವ್ರವಾದ ಅಸಹ್ಯ ಭಾವವನ್ನು. ಇಲ್ಲಿಯೂ ಕವಿ ಓದುಗರಿಂದ ಹೊರಡಿಸುವ ಪ್ರತಿಕ್ರಿಯೆ ಕಾವ್ಯದ ಉದ್ದೇಶಕ್ಕೆ ಅನುಗುಣವಾಗಿಯೇ ಇದೆ.

---

೧೨. "ದ್ರೌಪದಿಯ ಶ್ರೀಮುಡಿ"—ಕುವೆಂಪು ; ಪುಟ : ೧೬-೧೭.

ಇದರ ಜೊತೆಗೆ ಯಶೋಧರ ಮತ್ತು ಅಮೃತಮತಿಯರ ಜೀವನದಲ್ಲಿ ದೈವದ ಕೈವಾಡವನ್ನು ಸೂಚಿಸುವದರ ಮೂಲಕ ಕವಿ ಜೀವನದಲ್ಲಿ ಹಾಸು–ಹೊಕ್ಕಾಗಿರುವ ವಿಧಿಯ ಸಂಕಲ್ಪವನ್ನು ಎತ್ತಿತೋರಿಸಿದ್ದಾನೆ. ಆದರೆ ಎಲ್ಲವೂ ವಿಧಿಯ ಲೀಲೆಯಿಂದಲೇ ನಡೆಯುತ್ತದೆಯೇ ಹೊರತು, ಮನುಷ್ಯನಿಗೆ ಪಾಪ-ಮಾಡುವ ಸ್ವಾತಂತ್ರ್ಯವಾಗಲಿ, ಅದರ ಪ್ರಾಯಶ್ಚಿತ್ತವನ್ನು ಅನುಭವಿಸುವ ಸ್ವಾತಂತ್ರ್ಯವಾಗಲಿ ಇಲ್ಲವೆಂದು ಅವನ ಅರ್ಥವಲ್ಲ. ಯಶೋಧರನಿಂದ ನಡೆದ ಸಂಕಲ್ಪಹಿಂಸೆಯ ಹಿಂದೆ ವಿಧಿಯ ಕೈವಾಡ ಎಷ್ಟೇ ಪ್ರಬಲವಾಗಿದ್ದರೂ ಅವನ ವೈಯಕ್ತಿಕ ಜವಾಬ್ದಾರಿ ಇದ್ದೇ ಇದೆ. ಹಿಟ್ಟಿನ ಕೋಳಿಯಲ್ಲಿ ಬೆಂತರ ಬಂದು ಸೇರಿದ್ದು ಸಾಂಕೇತಿಕವಾಗಿ ತುಂಬ ಅರ್ಥವತ್ತಾಗಿದೆ. 'ಮಾಡಿದ ಕೋಳಿ'ಯನ್ನು ಬಲಿ ಕೊಡುವದೂ ಸಹ ಹಿಂಸೆಯೇ. ಆದರ ಹಿಂದೆ ಇಂಥ ಹಿಂಸೆ ಪಾಪವೆಂದು ಗೊತ್ತಿದ್ದೂ ಅದಕ್ಕೆ ಮುಂದಾಗುವ ಯಶೋಧರನ ವೈಯಕ್ತಿಕ ಹೊಣೆಯನ್ನು ಮರೆಯುವಂತಿಲ್ಲ. ಈ ಪಾಪದ ಸೂಕ್ಷ್ಮಸ್ವರೂಪವನ್ನು ಎತ್ತಿತೋರಿಸಲೆಂದೇ ಇಲ್ಲಿ ಬೆಂತರದ ಪ್ರವೇಶವನ್ನು ಬಳಸಿಕೊಳ್ಳಲಾಗಿದೆ. ಹಿಟ್ಟಿನ ಕೋಳಿಯ ಹಿಂಸೆಯೂ ಜೀವಹಿಂಸೆಯೇ ಆಗಬಲ್ಲದು ಎಂಬುದನ್ನು ಇದು ತೋರಿಸುತ್ತದೆ. ಅಮೃತಮತಿಯ ಪತನದಲ್ಲಿ ವಿಧಿಯ ಕೈವಾಡ ಇಷ್ಟು ದಟ್ಟವಾಗಿಲ್ಲ. ಅಲ್ಲಿಯ ಪಾಪದ ಜವಾಬ್ದಾರಿ ಹೆಚ್ಚಾಗಿ ಅವಳದೇ. ಹಾಗೆಂದೇ ಯಶೋಧರ ಪುನಃ ದೈವಕೃಪೆಗೆ ಅರ್ಹತೆ ಪಡೆದರೆ, ಅಮೃತಮತಿ ಅದಕ್ಕೆ ಅನರ್ಹಳಾಗುತ್ತಾಳೆ. ಹೀಗೆ ಜನ್ನ ಮೂಲಕಥೆಯಲ್ಲಿ ತಾನು ಕಂಡ ಹೆಚ್ಚಿನ ಅರ್ಥವನ್ನು, ಹೆಚ್ಚು ಬದಲಾವಣೆಗಳನ್ನು ಮಾಡಿಕೊಳ್ಳದೆ, ಅಲ್ಲೊಂದು ಇಲ್ಲೊಂದು ಅರ್ಥಪೂರ್ಣವಾದ ಪ್ರತಿಮೆಯಿಂದಲೊ, ಉದ್ಗಾರದಿಂದಲೊ, ಜಾಣ್ಮೆಯಿಂದ ಸೇರಿಸಿಕೊಂಡಿದ್ದಾನೆ. ಈ ಮೂಲಕ ಜೀವನದಲ್ಲಿ ವಿಧಿಯ ಕೈವಾಡವನ್ನು ಉತ್ಪ್ರೇಕ್ಷಿಸಿ ಜೀವನದ ಅನಿತ್ಯತೆ, ಅಸಾರತೆಗಳನ್ನು ಬಿಂಬಿಸುವದೂ ಇಲ್ಲಿಯ ಉದ್ದೇಶವಾಗಿದೆ. ವಿಧಿ ಜೀವನದ ಒಂದು ಅನಿವಾರ್ಯವಾದ ಭಾಗ. ಮನಸ್ಸುಮಾಡಿದರೆ ವಿಧಿ ಮನುಷ್ಯನ ಬದುಕಿನೊಡನೆ ಬೇಟೆಯಾಡಿಬಿಡಬಹುದು. ಅಲ್ಪ ಆಶೆಗಳಿಗೆ ಮೋಹಗೊಂಡು ಮುಂದಿನ ಮುಕ್ತಿಗೆ ಕೇಡು ತಂದುಕೊಳ್ಳಬಾರದು. ಯಶೋಧರ-ಅಮೃತಮತಿಯಂಥವರ ಬಾಳೇ ಹೇಗಾಗಿಬಿಟ್ಟಿತು ! "ಮರ್ತ್ಯಂಗೆ ನಿತ್ಯಮೇ ಮಾನಸವಾಙ್ ? ಈಗಳೊ ಮೇಣ್ ಆಗಳೊ ಮೇಣ್ ಸಾಗುದುರೆಗೆ ಪುಲ್ಲನಡಕಿ ಕೆಡುವನೆ ಜೆದುರಂ ?" ಎನ್ನುತ್ತಾನೆ ಯಶೋಧರ. ಆದರೆ ಸ್ವತಃ ತಾನೇ ಈಗಳೊ ಆಗಳೊ ಸಾಯುವ ಕುದುರೆಗೆ ಹುಲ್ಲನ್ನು ಅಡಕಿ ಕೇಡಿಗೊಳಗಾಗುತ್ತಾನೆ. ಸಂಸ್ಕಾರ ಬಲದಿಂದ ಈ ಸಂಸಾರದ ಲೋಭ-ಮೋಹಗಳಿಂದ ಅತೀತನಾದ ಅಭಯಮತಿಯಾದ ಮೇಲೆ "ಭವನಿಬದ್ಧಂ ಅಟಲಿಸಿತೆಮ್ಮಂ" ಎನ್ನುತ್ತಾನೆ :

"ಎನಿತೊಳವಪಾಯಕೋಟಿಗ
ಳನಿತರ್ಕಂ ಗೇಹವುತ್ತೆ ದೇಹಮಿದಂ ನೆ
ಟ್ಟನೆ ಪೊತ್ತು ಸುಖಮನಱಿಸುವ
ಮನುಜಂ ಮೊರಡಿಯೊಳೆ ಮಾದುಪಟಿಮನಱಿಸದಿರಂ ॥"

ಒಟ್ಟಿನಲ್ಲಿ **ಯಶೋಧರ ಚರಿತೆ**ಯಲ್ಲಿ ಮತತತ್ವನಿರೂಪಣೆಯೇ ಪ್ರಧಾನವಾದುದೆಂಬುದು ನಿರ್ವಿವಾದ. "ಆಲೋಚನೆ, ಅಭಿಪ್ರಾಯ, ಧ್ಯೇಯ, ತತ್ವದಂಥ ಆಂತರಿಕ ಭಾವನೆಗೆ ಮುಖ ಬಾಹು ಪಾದ ರುಂಡ ಮುಂಡಾದಿಗಳನ್ನಿತ್ತು, ಪ್ರಾಣವಾಯುವನ್ನು ಊದಿ, ಚೈತನ್ಯಗೂಡಿಸಿ, ಎಬ್ಬಿಸಿ ನಿಲ್ಲಿಸಿ, ರಾಗಮಯ ಬಾಳನ್ನು ಅದು ಬಾಳುವಂತೆ ನಿಯೋಜಿಸುವದು ಜನ್ನನ ಅಪೂರ್ವ ಸಾಹಸದ ಉದ್ಯೋಗ. 'ಸಂಕಲ್ಪನ ವಧೆಗಿನಿತಾಯ್ತು ದಿಟದಿನೇನೇನಾಗರ್' ಎಂಬ ಪ್ರಧಾನ ತತ್ವ ಜನಿಸಿ, ಬೆಳೆದು, ತ್ರಾಣಗೊಂಡು, ದರ್ಪದಿಂದ ನಡಸಿಕೊಂಡು ಹೋಗುತ್ತದೆ ಕಥೆಯನ್ನು. ಅದೇ ನಿಪುಣ ಕುರುಬ; ಪಾತ್ರ, ಭಾಷೆ, ಘಟನೆ, ಪ್ರಸಂಗವೆಲ್ಲವೂ ಹಿಂಡಿನೊಳಗಣ ಕುರಿ. ಇಹಕ್ಕೆ ಜುಗುಪ್ಸೆಪಟ್ಟು, ಪರದ ಕಡೆಗೆ ಒಲೆಯಬೇಕೆನ್ನುವ ನಚ್ಚಿನ ಧ್ಯೇಯ ಎರಡನೆಯದು: ಅದನ್ನು ಕುರುಬಿತ್ತಿ ಎಂದು ಕರೆಯಬಹುದು. 'ಚಿತ್ರಮಪಾತ್ರೇ ರಮತೇ ನಾರೀ' ಎಂಬ ಮೂರನೆಯ ಅಭಿಪ್ರಾಯ ಕುರಿಕಾಯಲು ನೆರವಾಗುವ ಶ್ವಾನದಂತೆ. 'ಅರಱಿವರಯ್ಯ ವಿಧಿವಿಳಸನಮಂ' ಇತ್ಯಾದಿ ಆಲೋಚನೆ ಅಲ್ಲಲ್ಲಿ ಕಲಕಲಗುಟ್ಟಬಹುದು: ಕುರುಬ–ಕುರುಬಿತ್ತಿಯರಿಗೆ ಮಕ್ಕಳುಮರಿ ಇರುವುದಿಲ್ಲವೇ?" ಎಸ್. ವಿ. ರಂಗಣ್ಣನವರ ಈ ಮಾತು[೧೩] **ಯಶೋಧರ ಚರಿತೆ**ಯ ಶಿಲ್ಪದ ಆಂತರಿಕ ಸ್ವರೂಪದ ಶಕ್ತಿಪೂರ್ಣ ವಿಶ್ಲೇಷಣೆಯಾಗಿದೆ. ನಮ್ಮ ಅನೇಕ ಜನ ವಿಮರ್ಶಕರು ಈ ಮಾತನ್ನು ಲಕ್ಷಿಸದೆ, ಅಲ್ಲಿಯ ಪಾತ್ರಗಳ ಅಭ್ಯಾಸಕ್ಕೆ ಕೈಹಾಕಿ ಎಂಥೆಂಥ ಹಾಸ್ಯಾಸ್ಪದ ವಾದಗಳನ್ನು ಮುಂದೊಡ್ಡಿದ್ದಾರೆ ಎಂಬುದನ್ನು ನೋಡಿದರೆ ಕಾವ್ಯ–ಕಾದಂಬರಿ–ಕಥೆಗಳನ್ನು ವಸ್ತು, ಪಾತ್ರ, ಪರಿಸರ, ಭಾಷೆ, ಜೀವನದರ್ಶನ ಇತ್ಯಾದಿ ಕೃತ್ರಿಮವಾಗಿ ವಿಭಾಗಿಸಿ ಒಂದಕ್ಕೊಂದು ಸಂಬಂಧವಿಲ್ಲದಂತೆ ಅಭ್ಯಾಸಮಾಡುವ ವಿಮರ್ಶೆಯ ರೀತಿ ಎಂಥ ಅಪಾಯದ ಮಟ್ಟವನ್ನು ಮುಟ್ಟಿದೆ ಎಂಬುದು ಗೊತ್ತಾಗುವಂತಿದೆ. ರಂಗಣ್ಣನವರು ಹೇಳಿರುವ ವಿಷಯಗಳ ಪ್ರಾಮುಖ್ಯತೆಯ ಕ್ರಮವನ್ನು ನಾವು ಒಪ್ಪದೆ ಹೋಗಬಹುದು. ಹಿಂಸೆಯ ಅನಾಹುತಗಳ ಚಿತ್ರಣವನ್ನೇ ಪ್ರಮುಖವಾಗಿಟ್ಟುಕೊಂಡು ಜನ್ನ ಅದಕ್ಕೆ ವಿಧಿವಿಳಸನವನ್ನೂ ವಿರಕ್ತಿಪ್ರಚೋದನೆಯನ್ನೂ ಪೂರಕವಾಗಿ ಬಳಸಿಕೊಂಡಿದ್ದಾನೆಂದು ಈಗಾಗಲೇ ನೋಡಿದ್ದೇವೆ. ಜನ್ನನ ಸಂವಿಧಾನಕುಶಲತೆಯೆಂದರೆ ಈ ಪೂರಕ ವಿಷಯಗಳನ್ನು ಮುಖ್ಯ ವಿಷಯದ ಅಂಗದಲ್ಲೇ

೧೩. "ಶೈಲಿ-೨"—ಎಸ್. ವಿ. ರಂಗಣ ; ಪುಟ : ೧೯.

ಆಳವಡಿಸಿಕೊಂಡು, ಒಟ್ಟಾಗಿಯೇ ಪ್ರತಿಪಾದಿಸಿ, ಒಂದನ್ನು ಇನ್ನೊಂದರ ಪುಷ್ಟಿಗಾಗಿ ಉಪಯೋಗಿಸಿಕೊಂಡಿರುವದು. ಹಾಗಾಗಿ, ಈ ವಿಷಯಗಳನ್ನೆಲ್ಲ ಪಟ್ಟಿಮಾಡಿ ಹೇಳಬಹುದಾದರೂ, ಅವುಗಳನ್ನು ಒಂದರಿಂದ ಇನ್ನೊಂದನ್ನು ಪ್ರತ್ಯೇಕಿಸಲಿಕ್ಕಾಗುವದಿಲ್ಲ. ಈ ತತ್ವಗಳಿಗೆ ಪ್ರಾಣಪ್ರತಿಷ್ಠೆ ಮಾಡುವ ಕೆಲಸಕ್ಕೆ ಎಷ್ಟು ಆವಶ್ಯಕವೋ ಅಷ್ಟರಮಟ್ಟಿಗೇ ಜನ್ನ ಪಾತ್ರ–ಪ್ರಸಂಗಗಳನ್ನು ಉಪಯೋಗಿಸಿಕೊಂಡಿದ್ದಾನೆ. ಈ ತತ್ತ್ವದ ಹೊರತು ಅವುಗಳಿಗೆ ಸ್ವತಂತ್ರ ಅಸ್ತಿತ್ವವಿಲ್ಲ. ಜೀವಂತ ಪಾತ್ರಸೃಷ್ಟಿ ಅವನ ಉದ್ದೇಶವೇ ಅಲ್ಲ. ಅವುಗಳ ಕೆಲಸ ತೀರಿತೆಂದರೆ ಅವಕ್ಕೆ ಏನಾಯಿತೆಂದು ಅವನು ಹೊರಳಿ ಕೂಡ ನೋಡುವದಿಲ್ಲ. ಆದ್ದರಿಂದಲೇ ಇಲ್ಲಿಯ ಪಾತ್ರಗಳಿಗೆ ಬರಿಯ ಸಾಂಕೇತಿಕ ಬೆಲೆ ಮಾತ್ರ ಉಂಟು. ಕಾವ್ಯದ ಆರಂಭದಲ್ಲಿ ಇವು ಸ್ವತಂತ್ರ ಜೀವಂತ ವ್ಯಕ್ತಿಗಳ ಹಾಗೆ ಕಾಣಿಸಿಕೊಂಡರೂ ಬಹುಬೇಗ ತಮ್ಮ ಸಾಂಕೇತಿಕ ಕರ್ಮಕ್ಕೆ ಅಂಟಿಕೊಂಡುಬಿಡುತ್ತವೆ. ಕೊನೆಕೊನೆಗಂತೂ ಅವುಗಳನ್ನು ವ್ಯಕ್ತಿಗಳೆಂದು ಗುರುತಿಸುವದೂ ಕಷ್ಟವಾಗುತ್ತದೆ. **ಯಶೋಧರ ಚರಿತೆಯ** ಈ ಮೂಲ ಸ್ವರೂಪವನ್ನು ಗುರುತಿಸದೇ ಹೋದರೆ ಕಾವ್ಯದಲ್ಲಿ ಅನೇಕ ತೊಡಕುಗಳು ಉದ್ಭವಿಸುತ್ತವೆ.

ಹೀಗೆ **ಯಶೋಧರ ಚರಿತೆ** ಮತೀಯ ತತ್ವವನ್ನು ಸಾರಹೊರಟಿರುವ ಕಾವ್ಯವೇನೋ ಹೌದು. ಆದರೆ ಹಿಂಸೆ ಮಾಡುವದು ತಪ್ಪು ಎಂಬ ಮಾತು ಜೈನಧರ್ಮಕ್ಕೇ ಸೀಮಿತವಾಗಬೇಕಾಗಿಲ್ಲ. ಯಾವ ಧರ್ಮವೂ ಹಿಂಸೆಯನ್ನು ಬೋಧಿಸುವದಿಲ್ಲ. (ಬಹುಶಃ ಇಸ್ಲಾಂ ಒಂದೇ ಧರ್ಮರಕ್ಷಣೆಗಾಗಿ ರಕ್ತಪಾತವನ್ನು ಅನುಮೋದಿಸಿದ್ದು.) ಆದರೆ **ಯಶೋಧರ ಚರಿತೆಯಲ್ಲಿ** ಅದಕ್ಕೆ ಸೀಮಿತ ಮತೀಯ ಸ್ವರೂಪ ಬಂದಿರುವದಕ್ಕೆ ಜನ್ನ ಹಾಗೂ ಅವನ ಮೂಲ ಕವಿಗಳು ಬಳಸಿಕೊಂಡಿರುವ ಉತ್ಪ್ರೇಕ್ಷೆಯ ತಂತ್ರವೇ ಕಾರಣವಾಗಿದೆ. ಇಲ್ಲಿ ತತ್ತ್ವ ತನ್ನಷ್ಟಕ್ಕೇ ತಾನು ಸಂಪೂರ್ಣವಾಗಿ, ಪ್ರತ್ಯೇಕವಾಗಿ ನಿಂತುಬಿಡುತ್ತದೆ. ಸೂಕ್ಷ್ಮವಾದ ಮಾನವೀಯ ಸಮಸ್ಯೆಗಳನ್ನು ಅದು ಗಮನಕ್ಕೆ ತೆಗೆದುಕೊಳ್ಳುವದೇ ಇಲ್ಲ. ಯಶೋಧರ ಸಂಕಲ್ಪಹಿಂಸೆಯನ್ನು ಮಾಡಿದ್ದರಲ್ಲೂ ಕೂಡ ಅವನ ಸ್ವಂತದ ಜವಾಬ್ದಾರಿ ತೀರ ಅಲ್ಪ. ದೈವದ ಸಂಕಲ್ಪವೇ ಅವನನ್ನು ಸುತ್ತುಗಟ್ಟಿ ಅದಕ್ಕೆ ಪ್ರೇರಿಸುತ್ತದೆ. ಆದರೂ ಹಿಂಸೆಯ ಪಾಪ ನಿರ್ದಯವಾಗಿ ಅವನನ್ನು ಬೆನ್ನಟ್ಟುತ್ತದೆ. ಕಣ್ಣಿಲ್ಲದ ನ್ಯಾಯದಂತೆ, ಧಾರ್ಮಿಕ ಮೌಲ್ಯಗಳು ಮಾನವೀಯ ಸಮಸ್ಯೆಗಳಿಗೆ ಕುರುಡಾಗುವದೂ, ಈರ್ಷೆಯಿಂದೆಂಬಂತೆ ಸೇಡು ತೀರಿಸಿಕೊಳ್ಳುವದೂ ಆ ಮೌಲ್ಯಗಳ ಸಾರ್ವತ್ರಿಕತೆಯನ್ನು, ಔದಾರ್ಯವನ್ನು ಸೀಮಿತಗೊಳಿಸುತ್ತದೆ. ಹಾಗಲ್ಲದೆ, ಜೀವನದಲ್ಲಿ ವಿಧಿಯ ನಿರ್ದಯ ಶಕ್ತಿಯನ್ನೂ, ಅಲ್ಪ ತಪ್ಪಿಗೂ ಘೋರ ಶಿಕ್ಷೆಗೆ ಒಳಗಾಗಬೇಕಾಗುವ ಅನ್ಯಾಯ-

ವನ್ನೂ ತೋರಿಸಿ, ಆ ಮೂಲಕ ಜೀವನದ ನಶ್ವರತೆಯನ್ನು ಬಿಂಬಿಸಿ ವೈರಾಗ್ಯ-ವನ್ನು ಬೋಧಿಸುವದೇ ಕವಿಯ ಉದ್ದೇಶವೆಂದು ಭಾವಿಸಿದರೂ, ಈ ತತ್ತ್ವವಾದರೂ ತನ್ನ ಮತೀಯ ವಾಸನೆಯನ್ನು ಕಳೆದುಕೊಂಡು ವಿಶುದ್ಧ ಮೌಲ್ಯವಾಗಿ ನಿಲ್ಲುವದಿಲ್ಲ. ಇದು ಮನುಷ್ಯನ ಜೀವನದ ಉದ್ದೇಶವನ್ನೇ ನಿರಾ-ಕರಿಸುತ್ತದೆ. ಬದುಕು ಒಡ್ಡುವ ಸವಾಲುಗಳನ್ನು ಧೈರ್ಯದಿಂದ ಎದುರಿಸಲು ಪ್ರಚೋದಿಸುವದರ ಬದಲು ಜೀವನವಿಮುಖತೆಯನ್ನು ಬೋಧಿಸುತ್ತದೆ. ಅಂತೆಯೇ ಒಂದು ಬಗೆಯ ಸಂಕುಚಿತತೆ ಈ ಮೌಲ್ಯಗಳನ್ನು ಆವರಿಸಿಕೊಂಡಿದೆ. ಕವಿಯ ನಂಬಿಕೆಗಳನ್ನು ವಿಮರ್ಶೆ ಪ್ರಶ್ನಿಸಬಾರದೆಂದು ಇತ್ತೀಚೆಗೆ ಕೆಲವು ಧ್ವನಿಗಳು ಕೇಳಿಬರುತ್ತಿವೆ. ಆದರೆ ಮೌಲ್ಯಗಳ ಸಾಧಕ–ಭಾಧಕಗಳನ್ನು ಮರೆತು ಕಾವ್ಯವನ್ನು ಓದುವದು ಸಾಧ್ಯವಲ್ಲ. ಯಾಕಂದರೆ ಒಂದು ಕಾವ್ಯ ಮಹತ್ವದ್ದಾಗುವದು ಅದು ಜೀವನಕ್ಕೆ ಏನನ್ನು ಕೊಡುತ್ತದೆ ಎಂಬುದನ್ನು, ಬದುಕಿನ ಗಹನ ಪ್ರಶ್ನೆಗಳನ್ನು ಎಷ್ಟರಮಟ್ಟಿಗೆ ತಟ್ಟುತ್ತದೆ ಎಂಬುದನ್ನು ಅವಲಂಬಿಸಿದೆ. ಈ ಪ್ರಶ್ನೆಗಳಿಗೆ **ಯಶೋಧರ ಚರಿತೆ** ಸಮಾಧಾನಕರ ಉತ್ತರ ವನ್ನು ಕೊಡುವದಿಲ್ಲ.

ಕರ್ನಾಟಕದ ಕಲ್ಲುಗಳ ವಯಸ್ಸು

ಟಿ. ಸಿ. ದೇವರಾಜ

ಭೂವಿಜ್ಞಾನದ ಸಂಶೋಧನೆಗಳ ಫಲವಾಗಿ ಮನುಷ್ಯ, ಪ್ರಾಣಿ, ಪಕ್ಷಿ-ಗಳಿಗಿರುವಂತೆ, ಕಲ್ಲುಗಳಿಗೂ ಜೀವವಿದೆಯೆಂದು, ಕಲ್ಲುಗಳಿಂದಲೇ ಆದ ಭೂಮಿಗೇ ಒಂದು ವಯೋಮಿತಿ ಇರುವಂತೆ ಕಲ್ಲುಗಳಿಗೂ ವಯೋಮಿತಿ ಇದೆಯೆಂದು ವೇದ್ಯವಾಗಿದೆ.[೧] ಮಾನವನ ಪ್ರತ್ಯಕ್ಷ ಪರೀಕ್ಷೆಗೆ ನಿಲುಕುವ ಭೂಮಿಯ ೫–೬ ಮೈಲು ದಪ್ಪದ, ತೆಳ್ಳನೆಯ ಹೊರಪದರಿನಲ್ಲಿ ಭೂಮಿಯು ಹುಟ್ಟಿ ಲಕ್ಷಾಂತರ ವರ್ಷಗಳ ನಂತರ ವಿವಿಧ ರೀತಿಯಲ್ಲಿ ಹಾಗೂ ವಿವಿಧ-ಕಾಲಗಳಲ್ಲಿ ಸೃಷ್ಟಿಯಾಗಿರುವ ಕಲ್ಲುಗಳೇ ಇವೆ. ಈ ಹೊರಪದರಿನಲ್ಲಿ ಇರುವ ಕಲ್ಲುಗಳ ವಯಸ್ಸಿನಲ್ಲಿ ಬಹಳ ವ್ಯತ್ಯಾಸವಿದೆ. ಕೆಲವು ೩೦೦–೩೫೦ ಕೋಟಿ ವರ್ಷಗಳಷ್ಟು ಹಳೆಯವಾದರೆ (ಉದಾಹರಣೆಗೆ: ರಷ್ಯದ ಕೋಲಾ ಪ್ರಾಂತದಲ್ಲಿ ಸಿಗುವ ಒಂದು ಕಲ್ಲಿಗೆ ೩೫೦ ಕೋಟಿ ವರ್ಷಗಳೆಂದು ನಿರ್ಧರಿಸಲಾಗಿದೆ) ಮತ್ತೆ ಕೆಲವು ತೀರ ಇತ್ತೀಚೆಗೆ ಸೃಷ್ಟಿಯಾಗಿವೆ. ಶಿಲೆಗಳ ಸೃಷ್ಟಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅನೇಕ ವಿಧಗಳಲ್ಲಿ ದಿನನಿತ್ಯವೂ ನಡೆಯುತ್ತಲೇ ಇದ್ದರೂ ಭೂಮಿಯ ಹೊರಪದರಿನ ಬಹುಭಾಗದ ಕಲ್ಲುಗಳು ೧೦ ಲಕ್ಷಗಳಿಗೂ ಹೆಚ್ಚು ವಯಸ್ಸಿನವು ಎಂದು ಹೇಳಬಹುದು.

ಈಗ ಕಲ್ಲುಗಳ ವಯಸ್ಸನ್ನು ನಿಷ್ಕರ್ಷೆ ಮಾಡುವ ಕೆಲವು ಆಧುನಿಕ ವಿಧಾನಗಳ ಸಂಕ್ಷಿಪ್ತ ಪರಿಚಯ ಮಾಡಿಕೊಳ್ಳೋಣ.

ಕಲ್ಲುಗಳ ವಯಸ್ಸನ್ನು ನಿರ್ಧರಿಸಲು ಇಂದು ಬಳಕೆಯಲ್ಲಿರುವುದು ರೇಡಿಯೋಮೀಟ್ರಿಕ್ (Radiometric) ವಿಧಾನ. ಇದರ ಮೊದಲ ಯಶಸ್ವೀ ಪ್ರಯೋಗ ಆರ್ಥರ್ ಹೋಮ್ಸ್[೨] ಎಂಬ ಪ್ರಖ್ಯಾತ ಬ್ರಿಟನ್ನಿನ ಭೂವಿಜ್ಞಾನಿ-ಯಿಂದ ೧೯೧೩ ರಲ್ಲಿ ಆಯಿತೆನ್ನಬಹುದು. ಈ ವಿಧಾನವನ್ನು ಕಂಡುಹಿಡಿಯುವ ಮೊದಲು ಕಲ್ಲುಗಳ ವಯಸ್ಸನ್ನು ಇಷ್ಟೇ ಎಂದು ಅಂಕಿಸಂಖ್ಯೆಗಳಲ್ಲಿ ನಿಷ್ಕರ್ಷೆ ಮಾಡಿ ಹೇಳುವಂತಹ ಯಾವ ಸರಿಯಾದ ವಿಧಾನವೂ ಇರಲಿಲ್ಲವೆಂದು ಹೇಳ-ಬಹುದು. ಈ ವಿಧಾನ ಬಳಕೆಗೆ ಬರುವ ಮೊದಲು ಕಲ್ಲುಗಳು ನಿಸರ್ಗದಲ್ಲಿ ಸಿಗುವ ರೀತಿಯನ್ನು ಅಭ್ಯಸಿಸಿ ಒಂದು ಪ್ರಾಂತದ ಹಲವಾರು ಕಲ್ಲುಗಳಲ್ಲಿ

---

೧. ಇತ್ತೀಚಿನ ಸಂಶೋಧನೆಗಳ ಪ್ರಕಾರ ಭೂಮಿಯ ವಯಸ್ಸು ಕನಿಷ್ಟ ೫೦೦ ಕೋಟಿ ವರ್ಷಗಳಾದರೂ ಇರಬೇಕು.

೨. "The Age of the Earth" by Arthur Holmes (1913), Harper Brothers, New York,

ಸಾಪೇಕ್ಷವಾಗಿ ಯಾವುದು ಹೆಚ್ಚು ಹಳೆಯದು ಎಂಬುದನ್ನಷ್ಟೇ ಹೇಳಲಾಗುತ್ತಿತ್ತು.

ರೇಡಿಯೋಮೀಟ್ರಿಕ್ ಪದ್ಧತಿಯ ಪ್ರಕಾರ ಕಲ್ಲುಗಳ ವಯಸ್ಸನ್ನು ನಿರ್ಧರಿಸಬೇಕಾದರೆ, ಆ ಕಲ್ಲುಗಳಲ್ಲಿ ರೇಡಿಯೋ ವಿಕಿರಣಶೀಲ (Radioactive) ಯುರೇನಿಯಂ *ಥೋರಿಯಂ ಧಾತುಗಳು, *ಪೊಟ್ಯಾಸಿಯಂ (K^{40}) *ರುಬೀಡಿಯಂ *ರೇನಿಯಂ (RC^{137}) ಮತ್ತು ‡ಇಂಗಾಲ (C^{14}) ಧಾತುಗಳ ಕೆಲವು ಐಸೋಟೋಪ(Isotope)ಗಳನ್ನು ಒಳಗೊಂಡ ಯಾವುದಾದರೂ ಖನಿಜಗಳು (ಅಥವಾ ವಸ್ತುಗಳು) ಅವಶ್ಯವಾಗಿ ಇರಲೇಬೇಕು. ಈ ರೇಡಿಯೋ ವಿಕಿರಣಶೀಲ ಧಾತುಗಳು ಅಸ್ಥಿರವಾದುವು. ಅವು ಕಲ್ಲುಗಳ ನಿರ್ಮಾಣವಾದಂದಿನಿಂದಲೂ ಏಕಪ್ರಕಾರವಾಗಿ ಬದಲಾವಣೆ ಹೊಂದಿ ಕಟ್ಟಕಡೆಗೆ ಸ್ಥಿರವಾದ ಹೊಸ ಧಾತುಗಳಾಗಿ ಪರಿವರ್ತನೆಯಾಗುತ್ತವೆ. ಯುರೇನಿಯಂ ಮತ್ತು ಥೋರಿಯಂಗಳು, ಸೀಸ ಮತ್ತು ಹೀಲಿಯಂ ಆಗುತ್ತವೆ. ಪೊಟ್ಯಾಸಿಯಂ (K^{40}) ಆರ್ಗಾನ್ (A^{40}) ಆನೀವಾಗುತ್ತದೆ. ರುಬೀಡಿಯಂ (Rb^{89}) ಸ್ಟ್ರಾನ್ಸಿಯಂ (Sr^{87}) ಆಗುತ್ತದೆ. ರೇನಿಯಂ (Re^{187}) ಓಸ್ಮಿಯಂ (Os^{187}) ಆಗುತ್ತದೆ. ಮತ್ತು ಇಂಗಾಲ (C^{14}, ಸಾಮಾನ್ಯ ಇಂಗಾಲ (C^{12}) ಆಗುತ್ತದೆ.

ವಿಕಿರಣವೇಗ[೩] ಮತ್ತು ರೇಡಿಯೋ ವಿಕಿರಣಶೀಲ ಮೂಲಧಾತು ಮತ್ತು ಆದರ ವಿಕಿರಣದಿಂದ ಉತ್ಪತ್ತಿಯಾದ ಹೊಸ ಸ್ಥಿರಧಾತುವಿನ ಪ್ರಮಾಣಗಳನ್ನು[೪] ಅಳತೆ ಮಾಡಿ ರೇಡಿಯೋ ವಿಕಿರಣಶೀಲ ಮೂಲಧಾತು ಎಷ್ಟು

---

* ಇವೆಲ್ಲವುಗಳಿಂದ ಕೆಲವು ದಶಲಕ್ಷ ವರ್ಷಗಳಿಗೂ ಹೆಚ್ಚು ಹಳೆಯ ಕಲ್ಲುಗಳ ವಯಸ್ಸನ್ನಷ್ಟೇ ಸರಿಯಾಗಿ ನಿರ್ಧರಿಸಲು ಸಾಧ್ಯ. ಯುರೇನಿಯಂ ಮತ್ತು ಥೋರಿಯಂಗಳು ಪಿಚ್‌ಬ್ಲೆಂಡ್ (Pitchblende), ಮಾನೊಜೈಟ್ (Monozite), ಗಲೆನಾ (Galena), ಜಿರ್‌ಕಾನ್ (Zircon) ಮತ್ತಿತರ ಖನಿಜಗಳಲ್ಲಿರುತ್ತವೆ. ಪೊಟ್ಯಾಸಿಯಂ ಮತ್ತು ರುಬೀಡಿಯಂಗಳು ಅಭ್ರಕ (Mica), ಫೆಲ್‌ಸ್ಪಾರ್ (Felspar), ಆಂಫಿಬೋಲ್ (Amphibole), ಕೆಲವು ಪೈರಾಕ್ಸೀನ (Pyroxene) ಇನ್ನೂ ಮುಂತಾದ ಖನಿಜಗಳಲ್ಲಿರುತ್ತವೆ. ರೇನಿಯಂ ಮಾಲಿಬ್ಡಿನೈಟ್ (Molybdenite), ಗೆಡೋಲಿನೈಟ್ (Gedolinite), ಕೋಲಂಬೈಟ್ (Columbite), ಟಾಂಟಲೈಟ್ (Tantalite), ಮ್ಯಾಂಗನೀಜ ಆಕ್ಸೈಡ್ (Manganese Oxide), ತಾಮ್ರದ ಸಲ್ಫೈಡ್ (Copper Sulphide) ಆದಿರು ಮುಂತಾದವುಗಳಲ್ಲಿರುತ್ತದೆ.

‡ ಇದು ೫೦ ಸಾವಿರ ವರ್ಷಗಳಿಗೂ ಕಡಿಮೆ ವಯಸ್ಸಿನ ಕಲ್ಲುಗಳ ವಯಸ್ಸನ್ನು ನಿಖರವಾಗಿ ನಿರ್ಧರಿಸಲು ಬೇಕಾದ ಅತಿ ಪ್ರಯೋಜನಕಾರಿ ಧಾತು ಇದು ಕಲ್ಲುಗಳಲ್ಲಿ ಹುದುಗಿರುವ ಚಿಪ್ಪು (Shell), ಸಸ್ಯ ಮತ್ತು ಮೂಳೆಗಳ ಚೂರುಗಳಲ್ಲಿರುತ್ತವೆ.

೩. ಇದನ್ನು ವಿಶಿಷ್ಟರೀತಿಯ ಗೈಗರ್ ಕೌಂಟರ್(Geiger Counter)ನಿಂದ ಅಳೆಯುತ್ತಾರೆ.

೪. ಈ ಅಂಶವನ್ನು ಮಾಸ್ ಸ್ಪೆಕ್ಟ್ರೋಮೀಟರ್(Mass Spcetrometer)ನಿಂದ ಅಳೆಯುತ್ತಾರೆ.

ವರ್ಷಗಳಿಂದ ಆ ಖನಿಜದಲ್ಲಿ ಸೇರಿಕೊಂಡಿದೆ ಎಂಬ ಅಂಶವನ್ನು ಅಥವಾ ಆ ಖನಿಜ (ಪರೋಕ್ಷವಾಗಿ ಖನಿಜದಿಂದ ನಿರ್ಮಿತವಾದ ಕಲ್ಲು) ಸೃಷ್ಟಿಯಾಗಿ ಎಷ್ಟು ವರ್ಷಗಳಾದವು ಎಂಬ ಅಂಶವನ್ನು ಗುರುತಿಸಬಹುದು. ಇದು ರೇಡಿಯೋಮೀಟ್ರಿಕ್ ವಿಧಾನದ ಸಂಕ್ಷಿಪ್ತ ರೂಪರೇಖೆ.

ಇನ್ನು ಕರ್ನಾಟಕದ ಕಲ್ಲುಗಳು ಮತ್ತು ಅವುಗಳ ವಯಸ್ಸನ್ನು ತಿಳಿಯೋಣ.

ಕರ್ನಾಟಕದ ಕಲ್ಲುಗಳಿಗೇ ಏಕೆ ಇಡೀ ಭಾರತ ದೇಶದಲ್ಲಿ ಸಿಗುವ ಕೆಲವೇ ಕಲ್ಲುಗಳಿಗೆ ಮಾತ್ರ ರೇಡಿಯೋಮೀಟ್ರಿಕ್ ವಿಧಾನದಿಂದ ನಿರ್ದಿಷ್ಟಪಡಿಸಿದ ವಯಸ್ಸುಗಳಿವೆ. ಈ ಕೆಲವೇ ಕಾಲಗಳ ನಿರ್ಧಾರವೂ, ಅಮೇರಿಕ, ರಸಿಯಾ, ಝೆಕೊಸ್ಲೊವಾಕಿಯ ಮತ್ತಿತರ ಪರದೇಶದ ಸಂಶೋಧನಾಲಯಗಳಲ್ಲಿ ಮಾಡಲ್ಪಟ್ಟವೆ. ಇದಕ್ಕೆ ನಮ್ಮ ದೇಶದಲ್ಲಿ ಈ ಸಂಶೋಧನೆಯನ್ನು ಮಾಡಲು ಬೇಕಾದ ಸಲಕರಣೆಗಳ ಅಭಾವವೇ ಕಾರಣ.


ಕನ್ನಡ ರಾಜ್ಯ ಸುಮಾರು 73,7000 ಚದುರು ಮೈಲಿ ವಿಸ್ತೀರ್ಣವಾಗಿದ್ದು ಪೂರ್ವ ರೇಖಾಂಶ 74^{o} ಮತ್ತು 78^{o} 2′, ಮತ್ತು ಉತ್ತರ ಅಕ್ಷಾಂಶ 11^{o} 45′ ಮತ್ತು 18^{o} 20′ ಗಳಿಂದ ಪರಿಮಿತವಾಗಿದೆ ಇದು ಪ್ರಪಂಚದಲ್ಲಿ ಅತಿ ಪುರಾತನ ಭೂಭಾಗಗಳಲ್ಲೊಂದಾದ ಭಾರತದ ದಕ್ಷಿಣ ದ್ವೀಪಕಲ್ಪದ ಒಂದು ಭಾಗ. ಇಲ್ಲಿ ಹಲವಾರು ವಯಸ್ಸಿನ ನಾನಾತರಹದ ಕಲ್ಲುಗಳು ಹರಡಿವೆ.

ಕನ್ನಡ ರಾಜ್ಯದಲ್ಲ ಹರಡಿರುವ ಕಲ್ಲುಗಳನ್ನು[ಜ] ಮುಖ್ಯವಾಗಿ (೧) ಆರ್ಷೇಯ ಶಿಲಾಸಮುದಾಯ, (೨) ಕಲಾದಗಿ–ಭೀಮಶಿಲಾ ಸಮುದಾಯ ಮತ್ತು (೩) ದಕ್ಷಿಣ ಟ್ರ್ಯಾಪ್ (Deccan Trap)ಎಂದು ಮೂರು ಮುಖ್ಯವಾದ ಭಾಗಗಳಲ್ಲಿ ವಿಂಗಡಿಸಬಹುದು. ಈ ಮೂರು ಪಂಗಡಗಳಿಗೆ ಸೇರಿರುವ ಕಲ್ಲುಗಳು ಹರಡಿರುವ ರೀತಿಯನ್ನು ನಕ್ಷೆ ೧ರಲ್ಲಿ ತೋರಿಸಲಾಗಿದೆ.

ಆರ್ಷೇಯ ಯುಗದ ಶಿಲಾಸಮುದಾಯವು ಸುಮಾರು 58000 ಚ ಮೈ. ಆವರಿಸಿದೆ. ಇವು ಉಳಿದೆರಡು ಶಿಲಾಸ್ತೋಮಗಳಿಗಿಂತಲೂ ಅತಿ ಪುರಾತನವಾದುವು. ಇವುಗಳನ್ನು ಸ್ಥೂಲವಾಗಿ—

೧. ಧಾರವಾಡ ಶಿಲೆಗಳು (Dharwar–Rocks)
೨. ನೈಸ್–ಗ್ರ್ಯಾನೈಟ್ (Gneiss–Granite) ಶಿಲೆಗಳು ಮತ್ತು
೩. ಡೈಕ (Dyke) ಶಿಲೆಗಳೆಂದು ವಿಂಗಡಿಸಬಹುದು.

ಜ. ಹೆಚ್ಚಿನ ವಿವರಗಳಿಗೆ "A Handbook of the Geology of Mysore State Southern India" by B. Rama Rao (1962) —ಪುಸ್ತಕವನ್ನು ಓದಬಹುದು.


ನಕ್ಷೆ 1
ಕರ್ನಾಟಕದ ಶಿಲೆಗಳನ್ನು ತೋರಿಸುವ ನಕ್ಷೆ
74°
75°
76°
77°
78°
18°
17°
16°
15°
14°
13°
12°
ಬೀದರ
ಗುಲಬರ್ಗ
ಬಿಜಾಪುರ
ಬೆಳಗಾಂ
ಧಾರವಾಡ
ರಾಯಚೂರು
ಬಳ್ಳಾರಿ
ಕಾರವಾರ
ಚಿತ್ರದುರ್ಗ
ಶಿವಮೊಗ್ಗ
ತುಮಕೂರು
ಕೋಲಾರ
ಚಿಕ್ಕಮಗಳೂರು
ಹಾಸನ
ಮಂಗಳೂರು
ಬೆಂಗಳೂರು
ಮಂಡ್ಯ
ಮಡಿಕೇರಿ
ಮೈಸೂರು
ಅರಬ್ಬಿ ಸಮುದ್ರ
ಆಧುನಿಕ
ಡೆಕ್ಕನ್
ಕಲಾದಗಿ
ಭೀಮಾ
ಕ್ಲೋಸ್‌ಪೇಟ್ ಗ್ರಾನೈಟ್
ಪೆನಿನ್ಸುಲಾರ್ ನೈಸ್
ಚಾಂಪಿಯನ್ ನೈಸ್
ಚಾರ್ನೋಕೈಟ್
ಧಾರವಾಡ ಶಿಲಾಸ್ತೋಮ
0 32

ಧಾರವಾಡ ಶಿಲೆಗಳು ಸುಮಾರು 8,000 ಚ. ಮೈ. ಮತ್ತು ನೈಸ್-ಗ್ರ್ಯಾನೈಟ್ ಶಿಲೆಗಳು 50,000 ಚ.ಮೈ. ಪ್ರದೇಶವನ್ನು ಆಕ್ರಮಿಸಿವೆ. ಡೈಕ್‌ಗಳ ವಿಸ್ತೀರ್ಣವು ಬಹಳ ಕಡಿಮೆ ಇದ್ದು ಅದನ್ನು ಉಳಿದೆರಡು ಶಿಲೆಗಳ ವಿಸ್ತೀರ್ಣದ ಲೆಕ್ಕದಲ್ಲಿ ಸೇರಿಸಲಾಗಿದೆ.

ಧಾರವಾಡ ಶಿಲೆಗಳು ವಿಸ್ತೀರ್ಣದ ಬೇರೆ ಬೇರೆ ಉದ್ದ ಪಟ್ಟಗಳಲ್ಲಿ (Bands) ಉತ್ತರ-ದಕ್ಷಿಣವಾಗಿ ಹಬ್ಬಿವೆ (ನಕ್ಷೆ ೧ನ್ನು ನೋಡಿ) ಇವುಗಳ ಸುತ್ತಲೂ ಗ್ರ್ಯಾನೈಟ್ ಮತ್ತು ನೈಸ್ ಶಿಲೆಗಳು ಹರಡಿಕೊಂಡಿವೆ. ಧಾರವಾಡ ಶಿಲಾ ಸಮುದಾಯವು ಹಾರ್ನ್‌ಬ್ಲೆಂಡ್ (Hornblende), ಕ್ಲೋರೈಟ್ (Chlorite), ಅಭ್ರಕ (Mica) ಮುಂತಾದ ಪದರ ಶಿಲೆಗಳು (Schists), ರೂಪಾಂತರ ಹೊಂದಿದ ನಾನಾರೀತಿಯ ಮಡ್ಡಿ (Sedimentary) ಮತ್ತು ಶಿಲಾರಸಪ್ರವಾಹ (Volcanic) ಶಿಲೆಗಳು ಮುಂತಾದ ರೂಪಾಂತರ ಶಿಲೆಗಳ ಮಿಶ್ರಣವಾಗಿದೆ. ಈ ಶಿಲಾಸಮುದಾಯವು ನಮ್ಮ ರಾಜ್ಯದಲ್ಲಿ ಬೇರೆಲ್ಲ ಕಲ್ಲುಗಳಿಗಿಂತ ಅತಿಪುರಾತನವಾದುದೆಂದು ನಂಬಿಕೆ. ಆದರೆ ಈಗ ಪ್ರಸಿದ್ಧವಾಗಿರುವ ಎರಡು ರೇಡಿಯೋಮೀಟ್ರಿಕ್ ವಯಸ್ಸುಗಳು (ಕೋಷ್ಟಕ ೧ನ್ನು ನೋಡಿ.) ಈ ನಂಬಿಕೆಯನ್ನು ಅಷ್ಟು ಸಮರ್ಥಿಸಿಲ್ಲ ಇದಕ್ಕೆ ಮುಖ್ಯ ಕಾರಣ ವಯಸ್ಸನ್ನು ನಿರ್ಧರಿಸಲು ಉಪಯೋಗಿಸಿರುವ ಎರಡೂ ಖನಿಜಗಳು ಅಚ್ಚ ಧಾರವಾಡ ಶಿಲೆಗಳನ್ನು ಭೇದಿಸಿಕೊಂಡು ಅನೇಕ ವರ್ಷಗಳ ತರುವಾಯ ರೂಪುಗೊಂಡ ಪೆಗ್ಮಟೈಟ್ (Pegmatite) ಎಂಬ ಶಿಲಾಗುಂಪುಗಳಿಗೆ ಸೇರಿರುವುದೇ ಎಂದು ಹೇಳಬಹುದು. ಈ ವಯಸ್ಸುಗಳ ಆಧಾರದ ಮೇಲೆ ಧಾರವಾಡ ಶಿಲೆಗಳು 250 ರಿಂದ 245 ಕೋಟಿ ವರ್ಷಗಳಿಗೂ ಹೆಚ್ಚು ಹಳೆಯವೆಂದು ಹೇಳಬಹುದು.

ನೈಸ್ ಮತ್ತು ಗ್ರ್ಯಾನೈಟ್ ಶಿಲಾಸ್ತೋಮಗಳು ಪ್ರಧಾನವಾಗಿ ರೂಪಾಂತರಶಿಲೆಗಳು. ಇವುಗಳನ್ನು (1) ಚಾರ್ನೋಕೈಟ್ (Charnockite), (2) ಚಾಂಪಿಯನ್ ನೈಸ್ Champion Gneiss), (3) ದ್ವೀಪಕಲ್ಪೀಯ ನೈಸ್ (Peninsular Gneiss) ಮತ್ತು (4) ಕ್ಲೋಸ್‌ಪೇಟ್ ಗ್ರ್ಯಾನೈಟ್ (Closepet Granite) ಎಂದು ನಾಲ್ಕು ಗುಂಪುಗಳಲ್ಲಿ ವಿಂಗಡಿಸಲಾಗಿದೆ (ನಕ್ಷೆ ೧ನ್ನು ನೋಡಿರಿ). ಇವೆಲ್ಲವೂ ಬಣ್ಣ, ರೂಪು, ರಚನೆ, ಕಣಪರಿಮಾಣ ಮತ್ತು ರೂಪಾಂತರ ದರ್ಜೆಯಲ್ಲಿ ಬಹಳ ವ್ಯತ್ಯಾಸ ಉಳ್ಳಂತಹ ಹಲವಾರು ಪ್ರಕಾರದ ಶಿಲಾಸಂಕೀರ್ಣಗಳಾಗಿವೆ. ಇವು ಕನಿಷ್ಟಪಕ್ಷ ಎರಡು ಬೇರೆ ಬೇರೆ ಯುಗಗಳಲ್ಲಿ ನಿರ್ಮಾಣವಾದವುಗಳೆಂದು ತಿಳಿದುಬಂದಿದೆ. ಮೊದಲನೆಯ ಯುಗದಲ್ಲಿ ರೂಪುಗೊಂಡ ಚಾರ್ನೋಕೈಟ್ ಸುಮಾರು 295 ರಿಂದ 395 ಕೋಟಿ ವಯಸ್ಸಿನದು ಮತ್ತು ಎರಡನೆಯ ಯುಗದಲ್ಲಿ ರೂಪುಗೊಂಡು ಚಾಂಪಿಯನ್ ನೈಸ್ ದ್ವೀಪಕಲ್ಪೀಯ ನೈಸ್ ಮತ್ತು ಕ್ಲೋಸ್‌ಪೇಟ್ ಗ್ರ್ಯಾನೈಟ್ ಸುಮಾರು 200 ರಿಂದ 250 ಕೋಟಿ

ಕೋಷ್ಟಕ–೧

ಕರ್ನಾಟಕ ಶಿಲೆಗಳ ರೇಡಿಯೋಮೀಟ್ರಿಕ್ (Radiometric) ವಯಸ್ಸುಗಳು.

ಅ. ಸಂ	ವಯಸ್ಸಿನ ನಿಷ್ಕರ್ಷೆಗೆ ಒಳಪಟ್ಟಿರುವ ಶಿಲೆ ಅಥವಾ ಖನಿಜದ ಹೆಸರು.	ಶಿಲಾಸಮುದಾಯದ ಹೆಸರು.	ಸಿಗುವ ಪ್ರದೇಶ	ವಯಸ್ಸನ್ನು ನಿಷ್ಕರ್ಷಿಸಿರುವ ಪದ್ಧತಿ.	ವಯಸ್ಸು (ಕೋಟಿ ವರ್ಷಗಳಲ್ಲಿ)
೧	(ಅ) ಕ್ಲೋಸ್‌ಪೇಟ ಗ್ರಾನೈಟ್ (ಅಖಂಡಶಿಲೆ)	ಕ್ಲೋಸ್‌ಪೇಟ್ ಗ್ರಾನೈಟ್ (Closepet Granite)	ಮೊಳಕಾಲ್ಮೂರು	ರುಬೀಡಿಯಂ (Rb^{87})- ಸ್ಟ್ರಾನ್ಸಿಯಾ (St^{67})	= 250 §
	(ಆ) I (ಅ) ನಲ್ಲಿರುವ ಪೊಟ್ಯಾಸಿಯಂ ಫೆಲ್ಸ್ಪಾರ್	— ,, —	— ,, —	— ,, —	= 250 §
	(ಇ) I (ಅ) ನಲ್ಲಿರುವ ಬೈಯೊಟೈಟ್ (Biotite)	— ,, —	— ,, —	— ,, —	= 229 §
	(ಈ) — ,, —	— ,, —	— ,, —	ಪೊಟ್ಯಾಸಿಯಂ (K^{40})- ಆರ್ಗಾನ್ (A^{40})	= 192 †
೨	(ಅ) ದ್ವೀಪಕಲ್ಪೀಯ ನೈಸ್ (ಅಖಂಡ ಶಿಲೆ)	ದ್ವೀಪಕಲ್ಪೀಯ ನೈಸ್ (Peninsular Gneiss)	ಬೆಂಗಳೂರು	ರುಬೀಡಿಯಂ (Rb^{87})- ಸ್ಟ್ರಾನ್ಸಿಯಂ (Sr^{87})	= 250 §
	(ಆ) 2 (ಅ) ನಲ್ಲಿರುವ ಬೈಯೋಟೈಟ್	— ,, —	— ,, —	— ,, —	= 250 §
	(ಇ) — ,, —	— ,, —	— ,, —	ಪೊಟ್ಯಾಸಿಯಂ (K^{40})- ಆರ್ಗಾನ್ (A^{40})	= 199 †
೩	(ಅ) ಚಾಂಪಿಯನ್ ನೈಸ್ (ಅಖಂಡ ಶಿಲೆ)	ಚಾಂಪಿಯನ್ ನೈಸ್ (Champion Gneiss)	ಕೋಲಾರ	ರುಬೀಡಿಯಂ (Rb^{87})- ಸ್ಟ್ರಾನ್ಸಿಯಂ (Sr^{87})	= 250 §
	(ಆ) 3 (ಅ) ನಲ್ಲಿರುವ ಬೈಯೋಟೈಟ್	— ,, —	— ,, —	— ,, —	= 249 §
	(ಇ) — ,, —	— ,, —	— ,, —	ಪೊಟ್ಯಾಸಿಯಂ (K^{40})- ಆರ್ಗಾನ್ (A^{40})	= 202 †

೩		— ,, —	— ,, —	— ,, —	= 295 §
	(ಇ) ಆಮ್ಲಬಗೆಯ ಚಾರ್ನೊಕೈಟ್ (Acid charnockite) (ಅಖಂಡ ಕಲ್ಲು)	— ,, —	— ,, —	— ,, —	= 295 §
	(ಈ) 4 (ಇ) ನಲ್ಲಿರುವ ಮೈಕ್ರೋಕ್ಲೈನ್ (Microcline)	— ,, —	— ,, —	— ,, —	= 295 §
	(ಉ) 4 (ಇ) ನಲ್ಲಿರುವ ಬೈಯೊಟೈಟ್	— ,, —	— ,, —	— ,, —	= 275 §
	(ಊ) — ,, —	— ,, —	— ,, —	ಪೊಟ್ಯಾಸಿಯಂ (K^{40})- ಆರ್ಗಾನ್ (A^{40})	= 213 †
೪	(ಅ) ಮಾನೊಜೈಟ್ (Monazite)	ಧಾರವಾಡ ಶಿಲಾಸ್ತೋಮ (Dharwar Rocks) ದಲ್ಲಿರುವ ಪೆಗ್ಮಟೈಟ್ (Pegmatite)	ಎಡಿಯೂರು (ಬೆಂಗಳೂರಿನ ಹತ್ತಿರ)	ಯುರೇನಿಯಂ-ಥೋರಿಯಂ- ಸೀಸ	= 230 ± 10 *
	(ಆ) ಗೆಲೆನಾ (Gelena)	— ,, —	ಇಂಗಳದುಳು (ಚಿತ್ರದುರ್ಗದ ಹತ್ತಿರ)	— ,, —	= 245 ∓ 10 *

§ ಈ ವಯಸ್ಸುಗಳು ಮೂರ್ತಿ ಮತ್ತು ಸದಾಶಿವಯ್ಯ (1966) ಇವರುಗಳಿಂದ ನಿರ್ಧರಿಸಲ್ಪಟ್ಟಿವೆ. (" Rubidium-strontium ages of the pre-Cambrian crystalline complex, Mysore, India " by Murthy, V. Rama and Sadashivaiah. H. S. Trans. Amer. Geophys. Union Vol—47, p—207 (abstract).

† ಈ ವಯಸ್ಸುಗಳನ್ನು ಸದಾಶಿವಯ್ಯ ಮತ್ತು ನಾಗಣ್ಣ (1964) ಇವರುಗಳು ಒದಗಿಸಿದ್ದಾರೆ. (Dating the post - Dharwar Crystallines of Mysore State by Sadashivaiah and Naganna, Geol. Soc. and Symposium on stratigraphy, age and correlation of the Archacan Provinces of India (abstracts).

* ಈ ವಯಸ್ಸುಗಳು ಆರ್ಥರ್ ಹೋಮ್ಸ್ (1955) ರವರಿಂದ ನಿರ್ಧರಿಸಲ್ಪಟ್ಟಿವೆ. (" Dating the pre-Cambrian of Peninsular India and Ceylon " by Holmes, A. Proc. Geol. Assoc. Canada, Vol—7, pp. 81—106).

ವಯಸ್ಸಿನವೆಂದು ಕ್ಷೇತ್ರಸಂಶೋಧನೆ ಮತ್ತು ರೇಡಿಯೋಮೀಟ್ರಿಕ್ ವಯೋ-ನಿರ್ಧಾರಗಳ ಮೂಲಕ ನಿರ್ಧರಿಸಲಾಗಿದೆ. (ಕೋಷ್ಟಕ ೧ನ್ನು ನೋಡಿ) ಈ ಶಿಲಾಸ್ತೋಮದ ಸರಿಯಾದ ವಯಸ್ಸಿನ ಅರಿವು ಮುಖ್ಯವಾಗಿ ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಭೂವಿಜ್ಞಾನ ವಿಭಾಗದ ಇತ್ತೀಚಿನ ಸಂಶೋಧನೆಯ ಫಲವಾಗಿದೆ.

ಆರ್ಷೇಯ ಶಿಲಾಸಮುದಾಯದಲ್ಲಿ ಇನ್ನುಳಿದವು ಚಿಕ್ಕ ವಯಸ್ಸಿನ ಕೆಲವು ಡೈಕ್ ಶಿಲೆಗಳು. ಇವು ಮೇಲೆ ವಿವರಿಸಿದ ಎಲ್ಲ ತರಹದ ಆರ್ಷೇಯ ಶಿಲೆಗಳನ್ನು ಭೇದಿಸಿಕೊಂಡು ತರುವಾಯ ಉದ್ಭವಿಸಿರುವ ಕಲ್ಲುಗಳು. ನಿಸರ್ಗದಲ್ಲಿ ಇವು ಸಾಮಾನ್ಯವಾಗಿ ತಮ್ಮ ಉದ್ದ-ಅಗಲಕ್ಕೂ ಚದುರಿದ ಸಣ್ಣ ದೊಡ್ಡ ಗುಂಡುಬಂಡೆಗಳ ಸಾಲಿನಂತೆ ಕಾಣುತ್ತವೆ. ಇವೂ ರಚನೆ, ಕಣಪರಿಮಾಣ, ಗಾತ್ರ ಮತ್ತು ಮಾರ್ಪಾಟಿನ ದರ್ಜೆಯಲ್ಲಿ ಸಾಕಷ್ಟು ವ್ಯತ್ಯಾಸ ಹೊಂದಿವೆ. ಆದರೆ ಕ್ಷಾರ (Basic) ಜಾತಿಯ ಡೋಲೆರೈಟ್ (Dolerite) ಎಂಬ ಕರೀಕಲ್ಲು ಈ ಗುಂಪಿನ ಕಲ್ಲುಗಳಲ್ಲೆಲ್ಲಾ ಹೇರಳವಾಗಿದ್ದು ಆರ್ಷೇಯ ಶಿಲೆಗಳು ಹರಡಿರುವ ನಮ್ಮ ರಾಜ್ಯದ ಎಲ್ಲ ಭಾಗಗಳಲ್ಲೂ ಕಂಡುಬರುತ್ತವೆ. ಡೈಕ್ ಗುಂಪಿಗೆ ಸೇರಿದ ಯಾವ ಕಲ್ಲಿನ ವಯಸ್ಸನ್ನೂ ರೇಡಿಯೋಮೀಟ್ರಿಕ್ ಪದ್ಧತಿಯಿಂದ ನಿರ್ಧರಿಸಿಲ್ಲ. ಆದರೆ ಅವು ನಿಸರ್ಗದಲ್ಲಿ ಸಿಗುವ ರೀತಿಯ ಆಧಾರದಮೇಲೆ 200-250 ಕೋಟಿಗೂ ಬಹಳ ಕಡಿಮೆ ವಯಸ್ಸಿನವೆಂದು ಖಂಡಿತವಾಗಿ ಹೇಳಬಹುದು.

ಪುರಾಣಯುಗಕ್ಕೆ ಸೇರಿದ ಕಲಾದಗಿ-ಭೀಮಶಿಲಾಸ್ತೋಮಗಳು ಪ್ರಧಾನವಾಗಿ ಬೆಳಗಾವಿ, ವಿಜಾಪುರ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿ ಸುಮಾರು 1500 ರಿಂದ 2000 ಚ.ಮೈ.ಗಳನ್ನು ಆವರಿಸುತ್ತವೆ. ಇವು ಒತ್ತಡದಿಂದ ಸಂಕುಚಿತವಾಗಿ ಮಡಿಸಿ, ತಿರುಗಿ ಚೂರ್ಣೀಕೃತವಾದ ಆರ್ಷೇಯ ಯುಗದ ಶಿಲಾಸಮುದಾಯದ ಮೇಲ್ಭಾಗದಲ್ಲಿ ಸಂಗ್ರಹವಾಗಿ ಉತ್ಪನ್ನವಾದ ನಿರ್ದಿಷ್ಟ ಪಳೆಯುಳಿಕೆಗಳಿಲ್ಲದ ಪುರಾತನ ಪ್ರಸ್ತರಿ (Sedimentory) ಶಿಲೆಗಳು. ಈ ಶಿಲಾಸಮುದಾಯವು ಮುಖ್ಯವಾಗಿ ಕಲಬೆರಕೆ ಕಲ್ಲು (Conglomerite), ಮರಳುಕಲ್ಲು (Sand Stone), ಸುಣ್ಣಕಲ್ಲು (Lime Stone) ಮತ್ತು ಹಿಟ್ಟುಕಲ್ಲು (Shale) ಗಳನ್ನು ಒಳಗೊಂಡಿದೆ. ಈ ಸಮುದಾಯದ ಯಾವ ಶಿಲೆಯನ್ನೂ ಇಂದಿನವರೆಗೂ ರೇಡಿಯೋಮೀಟ್ರಿಕ್ ಪದ್ಧತಿಯ ವಯೋನಿರ್ಧಾರಕ್ಕೆ ಒಳಪಡಿಸಿಲ್ಲ. ಆದರೆ ವಯಸ್ಸು ನಿಷ್ಕರ್ಷೆಯಾಗಿರುವ ಬೇರೆ ಪ್ರಾಂತದ ಇಂತಹದೇ ಶಿಲಾ-ಸಮುದಾಯಕ್ಕೆ ಹೋಲಿಸಿ ಇವುಗಳ ವಯಸ್ಸು 80 ರಿಂದ 150 ಕೋಟಿ ವರ್ಷಗಳಿರಬಹುದೆಂದು ಹೇಳಬಹುದು.

ದಕ್ಷಿಣ ಟ್ರ್ಯಾಪ್ ಶಿಲಾಸಮುದಾಯವು ನಮ್ಮ ರಾಜ್ಯದ ಉತ್ತರ ಗಡಿಯ ಉದ್ದಕ್ಕೂ ಹರಡಿದೆ. ಇದು ಸುಮಾರು 180 ಮೈಲಿ ಉದ್ದ ಮತ್ತು 25 ರಿಂದ

70 ಮೈಲು ಆಗಲವಿದ್ದು ಬೆಳಗಾವಿ, ವಿಜಾಪೂರ, ಕಲಬುರ್ಗಿ ಮತ್ತು ಬೀದರ ಜಿಲ್ಲೆಗಳಲ್ಲಿ ಹೆಚ್ಚು ಕಡಿಮೆ 10,000 ಚ. ಮೈ.ಗಳನ್ನು ಆವರಿಸಿರುತ್ತದೆ. ಈ ಶಿಲಾಸಮುದಾಯವು ಕಲಾದಗಿ-ಭೀಮಸ್ತೋಮಗಳು ರಚಿತವಾದ ಕೋಟ್ಯಂತರ ವರ್ಷಗಳಾದ ಮೇಲೆ ಮಧ್ಯಜೀವ ಯುಗದ (Merozoic era) ಅಂತ್ಯ ಭಾಗದಲ್ಲಿ ನೆಲ ಬಿರಿದು ಹೊರಹೊಮ್ಮಿದ ಶಿಲಾರಸವು ಘನಿಸಿ ನಿರ್ಮಾಣವಾದದ್ದು. ಇದೇ ಕಲ್ಲು ನಮ್ಮ ರಾಜ್ಯದ ಉತ್ತರಕ್ಕಿರುವ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದ ಬಹುಭಾಗಗಳನ್ನು ಆವರಿಸಿದೆ. ಇದು ಪ್ರಧಾನವಾಗಿ ಕ್ಷಾರ ಬಗೆಯ ಬೆಸಾಲ್ಟ್ (Basalt) ಎನ್ನುವ ಕರೀಕಲ್ಲು. ಇತ್ತೀಚೆಗೆ ಪ್ರಕಟವಾಗಿರುವ ರೇಡಿಯೋಮೀಟ್ರಿಕ್ ವಯೋನಿರ್ಧಾರದ ಪ್ರಕಾರ ಈ ಶಿಲೆಯು 6 ರಿಂದ 9 ಕೋಟಿ ವರ್ಷಗಳಷ್ಟು ಹಳೆಯದೆಂದು ತಿಳಿಯಲಾಗಿದೆ.

ಮೇಲೆ ವಿವರಿಸಿದ ಶಿಲಾಸಮುದಾಯಗಳಲ್ಲದೆ ಪಶ್ಚಿಮ ಕಡಲತೀರದಲ್ಲಿ ಗೋವಾದಿಂದ ಮಂಗಳೂರಿನ ದಕ್ಷಿಣಕ್ಕೆ 10–15 ಮೈಲಿಗಳವರೆಗೂ ಸುಮಾರು 200 ಮೈಲಿ ಉದ್ದ ಮತ್ತು 10–15 ಮೈಲಿ ಆಗಲದಲ್ಲಿ ಹರಡಿರುವ ಆಧುನಿಕ (1 ಲಕ್ಷಕ್ಕೂ ಕಡಿಮೆ ವಯಸ್ಸಿನ) ಶಿಲಾಸಮುದಾಯವಿದೆ. ಇದರ ರೇಡಿಯೊ ಮೀಟ್ರಿಕ್ ವಯೋನಿರ್ಧಾರವೂ ಇನ್ನೂ ಆಗಿಲ್ಲ.

ಭಾರತದಲ್ಲಿ ಅಗತ್ಯವಾಗಿ ಆಗಬೇಕಾಗಿರುವ ಹಲವಾರು ರೀತಿಯ ಭೂ-ವಿಜ್ಞಾನ ಸಂಶೋಧನೆಗಳಲ್ಲಿ ಶಿಲೆಗಳ ರೇಡಿಯೋಮೀಟ್ರಿಕ್ ವಿಧಾನದ ವಯೋ ನಿರ್ಧಾರವೂ ಒಂದು. ಈ ಸಂಶೋಧನೆಯು ಶಿಲೆಗಳ ವಯಸ್ಸು, ನಿರ್ಮಾಣ-ವಾಗಿರುವ ಕ್ರಮ ಮತ್ತು ಚರಿತ್ರೆಗಳನ್ನು ತಿಳಿಯಲು ಸಹಾಯವಾಗುವದರ ಜೊತೆಗೆ ನಮ್ಮ ದೇಶದಲ್ಲಿ ಪ್ರಧಾನವಾಗಿ ಇರುವ ಆರ್ಷೇಯ ಶಿಲಾಸ್ತೋಮದಲ್ಲಿ ಅಡಗಿರುವ ಅಮೂಲ್ಯವಾದ ಖನಿಜಗಳನ್ನು ಕಂಡುಹಿಡಿಯಲು ಅತಿ ಸಹಾಯ-ಕಾರಿಯಾಗುತ್ತದೆ.

ಗಳಗನಾಥರ ಕೃತಿಗಳು

(ಸಂಖ್ಯಾನಿರ್ಣಯ)

ಬೆಟಗೇರಿ ಕೃಷ್ಣಶರ್ಮಾ

ಕನ್ನಡನಾಡಿನ ಐತಿಹಾಸಿಕ ಕಾಲದ ಸಾಹಿತ್ಯಿಕ ವ್ಯಕ್ತಿಗಳ ಜೀವನಚರಿತ್ರೆಯನ್ನು ಕುರಿತು ವಾಸ್ತವದೃಷ್ಟಿಯಿಂದ ವಿಚಾರ ಮಾಡಬೇಕೆನ್ನುವವರಿಗೆ ಅವರ ದೇಶ-ಕಾಲಗಳ ವಿಷಯವೂ ಒಡೆಯದ ಒಗಟೆನಿಸುವುದು; ಕೆಲವೊಂದು ಕೃತಿಗಳ ನಿಜವಾದ ಕರ್ತೃಗಳಾರೆಂಬುದೂ ತಿಳಿಯದ ವಿಷಯವೆನಿಸುವುದು. ಇದಕ್ಕೆ ಮುಖ್ಯವಾದ ಕಾರಣವೆಂದರೆ ನಮ್ಮ ನಾಡಿನಲ್ಲಿ ಪರಂಪರೆಯಾಗಿ ನಡೆದು-ಕೊಂಡು ಬಂದಿರುವ ಐತಿಹಾಸಿಕ ಪ್ರಜ್ಞೆಯ ಅಭಾವ. ಹೆಚ್ಚು ಜನಪ್ರಿಯತೆ-ಯನ್ನು ಗಳಿಸಿದ ಕೃತಿಯ ಕರ್ತೃವಿನ ಬಗೆಗೆ, ಆತನ ತರುವಾಯ, ಆತನ ಮೇಲ್ಮೆಯನ್ನು ಸಾರುವುದಕ್ಕೆ, ಅವಾಸ್ತವವೆನಿಸುವಂತಹ ಪುಕ್ಕಟೆ ಪುರಾಣ-ಗಳು ಹುಟ್ಟಿಕೊಂಡಿರುತ್ತವೆ. ಅವುಗಳನ್ನು ಪ್ರಮಾಣವೆಂದು ಹಿಡಿದು ಸಂಶೋಧನೆಗೆ ಹೊರಟರೆ, ಸಂಶೋಧಕನ ಸಂಶೋಧನೆಯೂ ಹುರುಳಿಲ್ಲದುದಾಗುವುದು.

ದಿ. ಗಳಗನಾಥರು, ನಮ್ಮಲ್ಲಿ ಇತಿಹಾಸಪ್ರಜ್ಞೆಯನ್ನು ಮೂಡಿಸಿದ ಈ ಇಪ್ಪತ್ತನೆಯ ಶತಮಾನದಲ್ಲಿಯೆ ಬಹುದಿನ ಬದುಕಿ, ಬಹುಜನಪ್ರಿಯವೆನಿಸಿದ ವಿಪುಲ ಸಾಹಿತ್ಯವನ್ನು ನಿರ್ಮಿಸಿ ಹೋದವರು. ಅವರನ್ನು ನೋಡಿದವರು, ಕೂಡಿ ಆಡಿದವರು, ಅವರ ಸಾಹಿತ್ಯಕೃತಿಗಳ ಪರಿಮಿತಿಯನ್ನು ಅರಿತವರು, ಈಗಲೂ ಸಾಕಷ್ಟು ಜನರು ಜೀವಿಸಿದ್ದಾರೆ. ಅವರ ಜೀವನಚರಿತ್ರೆಯನ್ನು ಬರೆಯಬೇಕೆನ್ನುವವರಿಗೂ, ಅವರ ಕೃತಿಗಳ ಸಂಖ್ಯೆಯನ್ನು ಅರಿತುಕೊಳ್ಳ-ಬೇಕೆನ್ನುವವರಿಗೂ-ಸ್ವಲ್ಪ ಶ್ರಮವಹಿಸಿದರೆ-ಸಾಕಷ್ಟು ಸಾಕ್ಷಿಪ್ರಮಾಣ ಸಂಗತಿಗಳು ದೊರೆಯುವುವು.

ದಿ. ಗಳಗನಾಥರು ಬದುಕಿ ಇರುವಾಗ, ಅವರ ಜೀವನ ಚರಿತ್ರೆಯನ್ನು ಬರೆಯಬೇಕೆಂದು ಯಾರೂ ಮುಂದೆ ಬರಲಿಲ್ಲ. ಹಾಗೆ ಯಾರಾದರೂ ಮುಂದೆ ಬಂದಿದ್ದರೆ. ಅವರ ವಿವಿಧಮುಖ ಕಾರ್ಯದ—ತುಂಬುಬಾಳಿನ—ಕೂಲಂಕಷ-ವಾದ ಜೀವನಚರಿತ್ರೆ ನಮಗೆ ದೊರೆಯಬಹುದಾಗಿದ್ದಿತೇನೋ! ಆದರೆ ಆಗ ಯಾರಲ್ಲಿಯೂ ಈ ಅರಿವು ಉದಯಿಸಲಿಲ್ಲ. ಅವರು ಗತಿಸಿದ ತರುವಾಯ, ಐದಾರು ವರುಷಗಳು ಕಳೆದಮೇಲೆ, ಅವರ ವಿಷಯಕವಾದ ಆದರ ಶ್ರದ್ಧೆ-ಗಳನ್ನಿರಿಸಿಕೊಂಡಿದ್ದ ದಿ. ರಂಗನಾಥ ನೆಗಳೂರ (ನೆರಂಗ) ಅವರು, ಗಳಗನಾಥರ ಜೀವನ-ಸಾಹಿತ್ಯಗಳ ಪರಿಚಯವನ್ನೊಳಗೊಂಡ ಪುಟ್ಟ ಹೊತ್ತಗೆಯೊಂದನ್ನು ಪ್ರಕಟಿಸಿದ್ದಾರೆ. ಅದಕ್ಕಾಗಿ ಅವರು, ವಾಸ್ತವ ಸಂಗತಿಗಳನ್ನು ಸಂಗ್ರಹಿಸಲು

ಸಾಕಷ್ಟು ಶ್ರಮವಹಿಸಿದುದು ಕಂಡುಬರುವುದಾದರೂ, ಗಳಗನಾಥರು ಬರೆದ ಗ್ರಂಥಗಳ ಪಟ್ಟಿಯನ್ನು ಅವರಿಗೆ ಒದಗಿಸಿದವರು, ಸಾಕಷ್ಟು ವಾಸ್ತವದೃಷ್ಟಿಯನ್ನು ಇರಿಸಿಕೊಂಡವರಾಗಿರಲಿಲ್ಲವೆಂದು ತೋರುತ್ತದೆ. ಎಂತಲೇ ನೆಂಗರು ಬರೆದು ಪ್ರಕಟಿಸಿದ ಗಳಗನಾಥರ ಪರಿಚಯಾತ್ಮಕ ಪುಸ್ತಕದ ಕೊನೆಯಲ್ಲಿ ಅಚ್ಚುಗೊಂಡಿರುವ ಗಳಗನಾಥರ ಗ್ರಂಥಗಳ ಪಟ್ಟಿಯಲ್ಲಿ, ಬೇರೆ ಲೇಖಕರ ಕೆಲವು ಕೃತಿಗಳೂ ಸೇರಿಕೊಂಡಿವೆ; ಅಲ್ಲದೆ ಕಾಲಾನುಕ್ರಮಕ್ಕೆ ಅನುಸಾರವಾಗಿ ಸಿದ್ಧಪಡಿಸಿದ ಪಟ್ಟಿಯೂ ಅದಲ್ಲ. ಇನ್ನಿಷ್ಟು ಪ್ರಯತ್ನಪಟ್ಟಿದ್ದರೆ, ದಿ. ಗಳಗನಾಥರ ಕೃತಿಗಳ ಪ್ರಾಮಾಣಿಕ ಪಟ್ಟಿಯನ್ನು ಅವರು ಒದಗಿಸಬಹುದಾಗಿತ್ತು.

ಈಗ ದಿವಂಗತ ಗಳಗನಾಥರ ಜನ್ಮಶತಾಬ್ದಿಯ ಉತ್ಸವವು, ನಮ್ಮ ನಾಡಿನ ಅನೇಕ ಪುರ–ಪಟ್ಟಣಗಳಲ್ಲಿ ನಡೆಯಿತು. ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಮೊದಲಾದ ಮಹಾಸಂಸ್ಥೆಗಳೂ ದಿ. ಗಳಗನಾಥರ ಜನ್ಮಶತಾಬ್ದಿಯ ಉತ್ಸವವನ್ನು ವಿಜೃಂಭಣೆಯಿಂದ ಜರುಗಿಸಿ, ಕನ್ನಡಸಾಹಿತ್ಯಪಿತಾಮಹನಿಗೆ ತಮ್ಮ ಗೌರವವನ್ನು ಸಲ್ಲಿಸಿದುವು. ಆದರೆ ಈ ಉತ್ಸವಗಳ ಸಂಚಾಲಕರೆಲ್ಲರೂ, ದಿ. ರಂಗನಾಥ ನೆಗಳೂರ ಅವರ ಪುಸ್ತಕದಲ್ಲಿ ಅಚ್ಚಾಗಿರುವ ಗಳಗನಾಥರ ಕೃತಿಗಳ ಪಟ್ಟಿಯನ್ನೇ ಪ್ರಮಾಣವೆಂದು ಭಾವಿಸಿರುವಂತೆ ತೋರುತ್ತದೆ. ಆದರೆ ಆಧುನಿಕ ಸಾಹಿತ್ಯಿಕನೊಬ್ಬನ ಕೃತಿ, ಕೃತಿಸಂಖ್ಯೆಗಳ ಬಗೆಗೆ ಆಭಾಸಜ್ಞಾನ ನೆಲೆಗೊಳ್ಳಬಾರದೆಂದು, ಅವುಗಳ ವಾಸ್ತವಸ್ಥಿತಿಯನ್ನು ತಿಳುಹಲೆಂಬ ಐತಿಹಾಸಿಕ ಪ್ರಜ್ಞೆಯಿಂದ ನಾನಿಲ್ಲಿ ಕೆಲವು ಪ್ರಮಾಣಿತ ಸತ್ಯಸಂಗತಿಗಳನ್ನು ಬರೆಯುತ್ತಲಿದ್ದೇನೆ.

ಇದನ್ನು ಬರೆಯಲು ನನಗಿರುವ ಅಧಿಕಾರದ ಬಗೆಗೆ ಅನೇಕರು ಶಂಕೆ ತಾಳಬಹುದು. ಅಂತಹ ಶಂಕಾಶೀಲರಿಗೆ ನನ್ನ ಸಮಾಧಾನದ ಉತ್ತರವೆಂದರೆ, ದಿ. ಗಳಗನಾಥರ ಮೊದಲನೆಯ ಕೃತಿಯಾದ **‘ಕಮಲಕುಮಾರಿ’**ಯಿಂದ ಮೊದಲು ಮಾಡಿ, **‘ಸ್ವರಾಜ್ಯ ಸುಗಂಧ’**ದ ವರೆಗೆ ಎಲ್ಲ ಕಾದಂಬರಿಗಳನ್ನೂ ಅವು ಹುಟ್ಟಿದ ಕಾಲಾನುಕ್ರಮದಲ್ಲಿಯೆ ಓದುತ್ತ ಬಂದಿದ್ದೇನೆ. ಇದುವರೆಗೂ ನಾನು ನೋಡದಿರುವ ಕಾದಂಬರಿಯೆಂದರೆ ‘ದುರ್ಗದ ಬಿಚ್ಚುಗತ್ತಿ’ ಒಂದೇ ಒಂದು. ಅಲ್ಲದೆ ಕಾದಂಬರಿಗಳಲ್ಲದ ಬೇರೆ ಚರಿತ್ರೆ, ಪ್ರಬಂಧಗಳನ್ನೂ ನಾನು ಆಗಾಗ ತರಿಸಿಕೊಂಡು ಓದಿನೋಡಿದ್ದೇನೆ. **‘ಕಲಿಕುಠಾರ’** ಎಂಬ ಸಾಧು ಚರಿತ್ರೆಯೊಂದನ್ನು ಮಾತ್ರ ನಾನು ನೋಡಿಲ್ಲ. ಪ್ರಕಟವಾಗಿರುವ ಪಟ್ಟಿಯಲ್ಲಿ ಇರುವ ಕೆಲವು ಕಾದಂಬರಿ, ಜೀವನಚರಿತ್ರೆ, ಪ್ರಬಂಧ ಇವು ಬೇರೆಯವರ ಕೃತಿಗಳೆಂಬುದನ್ನೂ, ಅವುಗಳ ಪ್ರತ್ಯಕ್ಷವಾಚನದಿಂದ ಅರಿತುಕೊಂಡಿದ್ದೇನೆ. ಇಷ್ಟೇ ಅಲ್ಲದೆ, ದಿ. ಗಳಗನಾಥರ **‘ಕುಟುಂಬ’** ಎಂಬ ಪ್ರಬಂಧದ ಎರಡನೆಯ ಆವೃತ್ತಿಯಲ್ಲಿ (೧೯೧೮), ಗಳಗನಾಥ ಸುರಸ ಗ್ರಂಥಮಾಲೆಗೆ ಸೇರಿದ ಗ್ರಂಥಗಳ ಪಟ್ಟಿ-

ಯೊಂದು ಶಬ್ದಾರ್ಥ—ಟೀಕೆಗಳೊಂದಿಗೆ ಪ್ರಕಟವಾಗಿದ್ದು, ಅದು ಗಳಗ
ಮತ್ತು ಅನ್ಯರ ಕೃತಿಗಳಾವುವೆಂಬುದನ್ನು. ಗಳಗನಾಥರ ಬಹುಗಳಲ್ಲಿಯೂ ತಿ
ತ್ತದೆ. ಇದಕ್ಕಿಂತ ಪ್ರಮಾಣಭೂತವಾದುದೆಂದರೆ. ೧೯೩೦ರಲ್ಲಿ ಪ್ರಕಟ
ರಾದ—ಗಳಗನಾಥರ ಆತ್ಮಚರಿತ್ರೆಯು ಅನೇಕ ಅಂಶಗಳಿಂದ ತುಂಬಿದು
'ಸದ್ಗುರುಕೃಪಾವ' ಎಂಬ ಪುಸ್ತಕದ ಕೊನೆಯ ಪುಟಗಳಲ್ಲಿ, ಗಳಗನಾ
—ಅದುವರೆಗೆ—ತಾವು ಬರೆದ ಗ್ರಂಥಗಳ ಹೆಸರುಗಳನ್ನು, ಅವುಗಳ ಚಿಕ್ಕ
ಚಯಗಳೊಂದಿಗೆ ಹೇಳಿದ್ದಾರೆ. ಇವೆಲ್ಲವುಗಳ ಪ್ರಮಾಣಗಳಿಂದ ನಾನು
ಗಳಗನಾಥರ ನಿಜವಾದ ಕೃತಿಗಳ ಪಟ್ಟಿಗಳನ್ನು, ವಿಷಯಾನುಸಾರವಾಗಿ ವಿ
ಗಿಸಿ ಕೊಡುತ್ತಲಿದ್ದೇನೆ. ಗಳಗನಾಥರ ನಿಜವಾದ ಸಾಹಿತ್ಯನಿರ್ಮಿತಿ .
ಎಂಬ ಸತ್ಯಸಂಗತಿಯು ನಮ್ಮ ಜನರಿಗೆ ಗೊತ್ತಾಗಬೇಕೆಂಬುದೇ ಇದರ ಉದ್ದೇ
ಮೊದಲು ಪ್ರಕಟಿತ ಗ್ರಂಥಗಳ ವಿವರಣೆ ಕೊಡುವೆನು :

೧. ಕಾದಂಬರಿಗಳು*

[ಸದ್ಬೋಧಚಂದ್ರಿಕೆಯಲ್ಲಿ ಪ್ರಕಟವಾದ ಗಳಗನಾಥರ ಕಾದಂಬರಿಗಳು]

(೧) **ಪದ್ಮನಯನೆ** (ಸ್ವತಂತ್ರ ರಮ್ಯ ಕಾದಂಬರಿ) ಇದೇ ಮುಂದೆ '**ಪ್ರ**
ಪದ್ಮನಯನೆ'ಯಾಯಿತು.

(೨) **ಕಮಲಕುಮಾರಿ** (ಮರಾಠಿಯಿಂದ ಅನುವಾದಿತ ಐತಿಹಾಸಿಕ ಕಾದ

(೩) **ಮೃಣಾಲಿನಿ** (ಬಂಕಿಮಚಂದ್ರರ ಬಂಗಾಲಿ ಐತಿಹಾಸಿಕ ಕಾದಂಬ
ಅನುವಾದ) ಇದು ೧೯೩೦ರಲ್ಲಿ ಕೊನೆಯ ಕೆಲವು ಪ್ರಕರಣಗಳ
ರಾಣಿ '**ಮೃಣಾಲಿನಿ**' ಆಯಿತು.

(೪) **ವೈಭವ** (ಮರಾಠೀ ಅನುವಾದ) ಚಂದ್ರಗುಪ್ತನ ಚರಿತ್ರೆಯನ್ನು
ಗೊಂಡುದು.

(೫) **ಕುಮುದಿನಿ** (ಸ್ವತಂತ್ರ ಐತಿಹಾಸಿಕ ಕಾದಂಬರಿ) ಚಂದ್ರಗಿರಿಯ
ರಾಜರ ಇತಿಹಾಸಕಥೆ.

(೬) **ಈಶ್ವರೀಸೂತ್ರ** (ಮರಾಠಾ ಐತಿಹಾಸಿಕ ಕಾದಂಬರಿ) 'ಉಷ
ಎಂಬುದರ ಅನುವಾದ.

(೭) **ಕ್ಷಾತ್ರತೇಜ** (ರಾಜಪುತ್ರ ಐತಿಹಾಸಿಕ ಕಾದಂಬರಿ) ಮರಾಠಿ
ಅನುವಾದ.

* ಕಾಲಾನುಕ್ರಮವಾಗಿ.

) **ಧರ್ಮರಹಸ್ಯ** (ಮರಾಠೀ ಕಾದಂಬರಿಯ ಅನುವಾದ) ಅಶೋಕನ ಇತಿಹಾಸ ಸಂಬಂಧಿ ಕಾದಂಬರಿ

) **ಸತ್ತ್ವಸಾರ** (ಪ್ರತಾಪಸಿಂಗನ ಜೀವನಕಾದಂಬರಿ) ರಜಪೂತ ಇತಿಹಾಸ.

) **ತಿಲೋತ್ತಮೆ** (ಬಂಗಾಲದ ಸನ್ನಿವೇಶದಲ್ಲಿಯ ರಜಪೂತ ಐತಿಹಾಸಿಕ ಕಾದಂಬರಿ).

) **ಕನ್ನಡಿಗರ ಕರ್ಮಕಥೆ** (ವಿಜಯನಗರದ ವಿನಾಶದ ಕಥೆ-ಮರಾಠಿಯಿಂದ ಅನುವಾದ).

) **ಶಿವಪ್ರಭುವಿನ ಪುಣ್ಯ** (ಮರಾಠಾ ಇತಿಹಾಸ ಸಂಬಂಧ ಕಾದಂಬರಿಯ ಅನುವಾದ.)

) **ಕುರುಕ್ಷೇತ್ರ** (ಪೇಶವೆಯರ ಇತಿಹಾಸಕ್ಕೆ ಸಂಬಂಧಿಸಿದುದು—ಅನುವಾದ).

[ಸುರಸ ಗ್ರಂಥಮಾಲೆಯಲ್ಲಿ ಪ್ರಕಟವಾದ ಗಳಗನಾಥರ ಕಾದಂಬರಿಗಳು.]

) **ಮರಾಠರ ಅಭ್ಯುದಯ** (ಮರಾಠಾ ಇತಿಹಾಸಕ್ಕೆ ಸಂಬಂಧಿಸಿದುದು—ಅನುವಾದ).

) **ಛತ್ರಪತಿ** (ಶಿವಾಜಿಯ ಚರಿತ್ರೆಗೆ ಸಂಬಂಧಿಸಿದುದು—ಅನುವಾದ).

) **ಮಾಧವಕರುಣಾವಿಲಾಸ** (ಸ್ವತಂತ್ರ, ವಿಜಯನಗರ ರಾಜ್ಯಸ್ಥಾಪನೆಯ ಕಥೆ).

) **ಗೃಹಕಲಹ** (ಮರಾಠಾ ಐತಿಹಾಸಿಕ ಕಾದಂಬರಿ—ಅನುವಾದ).

) **ರಾಣಾ ರಾಜಸಿಂಹ** (ರಜಪೂತ ಐತಿಹಾಸಿಕ—ಅನುವಾದ).

) **ಧಾರ್ಮಿಕತೇಜ** (ಬುಂದೇಲಖಂಡದ ರಾಜಾಛತ್ರಸಾಲನ ಕಥೆ—ಅನುವಾದ).

) **ಸಂಸಾರಸುಖ** (ಮೊಗಲರ ಇತಿಹಾಸಕ್ಕೆ ಸಂಬಂಧಪಟ್ಟುದು—ಅನುವಾದ).

) **ಸ್ವರಾಜ್ಯ ಸುಗಂಧ** (ಮರಾಠಾ ಐತಿಹಾಸಿಕ—ಅನುವಾದ).

) **ಸತ್ತ್ವದರ್ಶ** (ಈ ಕಾದಂಬರಿಯ ಹೆಸರು 'ಕಾಟಿಂಬಾದ ಪಟ್ಟಿಯಲ್ಲಿ ಬಂದಿರುವುದಾದರೂ 'ಸದ್ಗುರುಪ್ರಭಾವ'ದಲ್ಲಿಲ್ಲ.)

) **ದುರ್ಗದ ಬಿಚ್ಚುಗತ್ತಿ, ಭಾಗ—೧** (ಚಿತ್ರದುರ್ಗದ ಇತಿಹಾಸಕ್ಕೆ ಸಂಬಂಧಪಟ್ಟ ಸ್ವತಂತ್ರ ಕಾದಂಬರಿ).

) **ಭಗವತೀ ಕಾತ್ಯಾಯಿನಿ** (ಪೌರಾಣಿಕ ಕಾದಂಬರಿ—ಸ್ವತಂತ್ರ).

[ಗಳಗನಾಥರವಲ್ಲದ ಕಾದಂಬರಿಗಳು.]

) **ಲಕ್ಷ್ಮೀಬಾಯಿ** (ಸಾಮಾಜಿಕ) ಲೇ. ವಲ್ಲಭ ಮಹಾಲಿಂಗ ಶೆಟ್ಟಿ, ಧಾರವಾಡ

) **ಗುರುಪ್ರಸಾದ** (,,) ,, ,,

(೩) ಸತೀಸಾಹಸ (ಚಿಕ್ಕ ಕಾದಂಬರಿ) ಲೇ. ಶ್ರೀಕಂಠಶಾಸ್ತ್ರಿಗಳು, ಆನಂದವನ
(೪) ಶೌರ್ಯಸಂಜೀವನ (ಐತಿಹಾಸಿಕ) ಲೇ. ಆರ್. ಆರ್. ಗುಡಿಸಾಗರ, ಗದಗ
(೫) ಮುರಾರರಾವ (ಪತ್ತೇದಾರಿ) ಲೇ. ತ. ನಾ. ಅಮ್ಮಿನಭಾವಿ, ಧಾರವಾಡ.

೨. ಪೌರಾಣಿಕ ಕಥೆಗಳು

[ಗಳಗನಾಥರವು]

(೧) ಗಿರಿಜಾಕಲ್ಯಾಣ, (೨) ಉತ್ತರರಾಮಚರಿತ್ರ, (೩) ನಳಚರಿತ್ರ, (೪) ಚಿದಂಬರಚರಿತ್ರ, (೫) ಭಾಗವತಾಮೃತ, (೬) ಶೈವಸುಧಾರ್ಣವ, (೭) ತುಲಸೀರಾಮಾಯಣ, (೮) ಮಹಾಭಾರತ–ಆದಿಪರ್ವ, (೯) ಸಭಾ-ಪರ್ವ.

[ಗಳಗನಾಥರವಲ್ಲದುವು]

(೧) ಆನಂದರಾಮಾಯಣ (ಲೇ. ಶ್ರೀಕಂಠಶಾಸ್ತ್ರಿಗಳು—ಆನಂದವನ)
(೨) ವೆಂಕಟೇಶ ಮಾಹಾತ್ಮ್ಯ (ಲೇ. ಶ್ರೀ. ವೆಂ. ಕಾಟೋಟಿ, ಹುಬ್ಬಳ್ಳಿ)
(೩) ಶುಕಸಂಜೀವಿನೀ (ಲೇ. ಕೃ. ಶಂ. ಇಂಗಳಿಗಿ, ಶಿಕ್ಷಕರು)
(೪) ದತ್ತಕಥಾಮೃತಸಾರ (ಲೇ. ಹಾವನೂರ, ಆನಂದವನ)

೩. ಸತ್ಪುರುಷ ಚರಿತ್ರಗಳು

[ಗಳಗನಾಥರವು]

(೧) ನಿರ್ಯಾಣಮಹೋತ್ಸವ, (೨) ಸದ್ಗುರುಪ್ರಭಾವ, (೩) ಕಲಿಕುಠಾರ.

[ಗಳಗನಾಥರವಲ್ಲದುವು]

(೧) ಭಕ್ತಿವಿಜಯ (ಲೇ. ಶ್ರೀ ಯು. ಗು. ಕುಲಕರ್ಣಿ, ಆನಂದವನ)
(೨) ಸುರೇಶ್ವರಾಚಾರ್ಯರ ಚರಿತ್ರೆ (ಲೇ. ನಾ. ಶ್ರೀ. ರಾಜಪುರೋಹಿತ, ಧಾರವಾಡ)
(೩) ಶ್ರೀ ಫಕೀರೇಶ್ವರ ಪುರಾಣ (ಲೇ. ಶ್ರೀ. ಜಾಧವ)
(೪) ಸಾಧು ಸದಾಶಿವಲೀಲೆ (ಲೇ. ಶ್ರೀ. ಬಸವಣ್ಣಸ್ವಾಮಿ)

೪. ನಿಬಂಧಗಳು-ಪ್ರಬಂಧಗಳು

[ಗಳಗನಾಥರವು]

(೧) ದಾಂಪತ್ಯ, (೨) ಕುಟುಂಬ, (೩) ಸುಂದರಲೇಖಸಮುಚ್ಚಯ, (೪) ನಿಬಂಧಶಿಕ್ಷಣ, (೫) ಕನ್ಯಾಶಿಕ್ಷಣ, (೬) ರಾಜನಿಷ್ಠೆ, (೭) ಶ್ರೇಷ್ಠ ಸಮಾಪದೇಶ, (೮) ಬ್ರಾಹ್ಮಣಪ್ರಾಪ್ತಿಸಾಧನೆ.



ಕನ್ನಡ ಕಾದಂಬರಿ ಪಿತಾಮಹ
ಗಳಗನಾಥ

[ಗಳಗನಾಥರವಲ್ಲದುವು]

(೧) ಪುನರ್ಜನ್ಮ (ಲೇ. ಶ್ರೀಕಂಠಶಾಸ್ತ್ರಿ, ಆನಂದವನ)
(೨) ವರ್ಣಾಶ್ರಮಧರ್ಮ (ಲೇ. ವ. ಮ. ತಟ್ಟಿ, ಧಾರವಾಡ)
(೩) ಹಿಂದುಸಮಾಜವ್ಯವಸ್ಥೆ (,, ,,)
(೪) ಗೀತಾವಲೋಕನ (,, ,,)
(೫) ರಹಸ್ಯಗಳು (ಪಟ್ಟಿಯಲ್ಲಿ ಈ ಹೆಸರಿದೆಯಾದರೂ ಲೇಖಕರು ಗೊತ್ತಿಲ್ಲ.)
(೬) ಕಣ್ವಸಂಹಿತೆ (ವೈದಿಕಮಂತ್ರಗಳ ಸಂಕಲನ).

ಪ್ರಕಟಿತ ಗ್ರಂಥಗಳಲ್ಲಿ ಕಾದಂಬರಿಗಳು ೨೪, ಪೌರಾಣಿಕ ಕಥೆಗಳು ೯, ಸತ್ಪುರುಷರ ಚರಿತ್ರೆಗಳು ೩, ನಿಬಂಧ–ಪ್ರಬಂಧಗಳು ೮—ಹೀಗೆ ಒಟ್ಟು ೪೪ ಗ್ರಂಥಗಳು ದಿ. ಗಳಗನಾಥರಿಂದ ನಿರ್ಮಿತವಾದವು; ಅಲ್ಲದೆ ನಾಲ್ಕೂ ವಿಭಾಗ ಗಳಲ್ಲಿ ಸೇರಿದ ೫+೪+೪+೬ ಹೀಗೆ ಒಟ್ಟು ೧೯ ಗ್ರಂಥಗಳು ಗಳಗನಾಥರವರ ಹೆಸರಿನ ಪಟ್ಟಿಯಲ್ಲಿ ಸೇರಿದ ಬೇರೆಯವರ ಗ್ರಂಥಗಳು.

ಅಪ್ರಕಟಿತ ಗ್ರಂಥಗಳ ಹೆಸರುಗಳೂ ಗಳಗನಾಥರವರ ಕೃತಿಗಳ ಪಟ್ಟಿಯಲ್ಲಿ ಕಾಣುತ್ತವೆ. ಮಹಾಭಾರತದ ವನಪರ್ವದಿಂದ ಸ್ವರ್ಗಾರೋಹಣ ಪರ್ವದವರೆಗಿನ ಈ ಹದಿನಾರು ಪರ್ವಗಳ ಕಥೆಯನ್ನು ಅವರು ಅನುವಾದಿಸಿ ಇರಿಸಿರುವುದು ಸರಿಯೇ ಸರಿ! ಅದರಂತೆಯೆ 'ಕಲಿಕುಠಾರ' (ಭಾಗ ೨), 'ದುರ್ಗದ ಬಿಚ್ಚುಗತ್ತಿ' (ಭಾಗ ೨) ಇವುಗಳ ಹಸ್ತಪ್ರತಿಗಳೂ ಇವೆ. 'ಅಧ್ಯಾತ್ಮ ರಾಮಾಯಣ'ದ ಅನುವಾದ ದಿ. ಗಳಗನಾಥರದಲ್ಲವೆಂದು ತೋರುವುದು; ಏಕೆಂ-ದರೆ ಸಂಚಿಕಾರೂಪದಿಂದ ಈ ಮೊದಲೇ ಪ್ರಕಟವಾಗಿರುವ ಅಧ್ಯಾತ್ಮರಾಮಾ-ಯಣದ ಭಾಗಗಳ ಮೇಲೆ, ಬೇರೆ ಲೇಖಕರ ಹೆಸರು ಇದ್ದಂತೆ ನನಗೆ ನೆನಪಿದೆ. ಇವರೂ ಪ್ರತ್ಯೇಕವಾಗಿ ಆ ರಾಮಾಯಣವನ್ನು ಅನುವಾದಿಸಿದ್ದರೆ ಆ ವಿಷಯ ವನ್ನು ನಾನರಿಯೆ. 'ನಿಬಂಧಲೇಖನ' ಎಂಬ ವಿಷಯವು 'ಸದ್ಗುರುಪ್ರಭಾವ' ಎಂಬುದರಲ್ಲಿ ಪ್ರಕಟವಾಗಿದೆ. ಚಿಕ್ಕ ಪ್ರಬಂಧವಿದು.

ದಿ. ಗಳಗನಾಥರ ಲೇಖನಿ ಅವಿಶ್ರಾಂತವಾಗಿ ೪೦–೪೫ ವರ್ಷಗಳವರೆಗೆ ಕಾರ್ಯವನ್ನು ಮಾಡಿರುವುದು. ಅವರು ಬರೆದಿರಿಸಿದ ಬೇರೆ ಹಸ್ತಪ್ರತಿಗಳೂ, ಹುಡುಕಾಡಿದರೆ ದೊರೆಯಬಹುದು. ಸರಕಾರ, ಸಾಂಸ್ಕೃತಿಕ ಸಂಸ್ಥೆಗಳು ನೆರವು ಕೊಡಲು ಮುಂದೆ ಬಂದರೆ, ದಿ. ಗಳಗನಾಥರ ಸಾಹಿತ್ಯನಿರ್ಮಿತಿಯ ಸಂಪೂರ್ಣ ಸ್ವರೂಪ ಜನತೆಯ ಕಣ್ಣಿಗೆ ಕಂಡೀತು ; ಅವರ ಕಾರ್ಯಕ್ಕಾಗಿ ನಾಡಿಗರಿಂದ ಸಲ್ಲಬೇಕಾಗಿದ್ದ ಕೃತಜ್ಞತೆಯ ಸಲುವಳಿ ಸಂದಂತಾದೀತು.

ಗಳಗನಾಥಕೃತ

ಕನ್ನಡಿಗರ ಕಾದಂಬರಿಗಳು

ಕೃಷ್ಣಮೂರ್ತಿ ಕಿತ್ತೂರ

ಈ ಶತಮಾನದ ಆದಿಭಾಗದಲ್ಲಿ ಕನ್ನಡದಲ್ಲಿ ವಿಪುಲವಾದ ಕಾದಂಬರೀ ಸಾಹಿತ್ಯವನ್ನು ನಿರ್ಮಿಸಿ ಗಳಗನಾಥರು ಕನ್ನಡದ ಮೇಲೆ ಅಪಾರವಾದ ಋಣ-ಭಾರವನ್ನು ಹೊರಿಸಿರುವರು. ಅವರ ಕಾದಂಬರಿಗಳಲ್ಲಿ ಹೆಚ್ಚಿನವು ಅನುವಾದ ಅಥವಾ ರೂಪಾಂತರಗಳು. ಅವೂ ಕೂಡ ಹೆಚ್ಚಾಗಿ ಮರಾಠರ ಮತ್ತು ರಜ-ಪೂತರ ಇತಿಹಾಸಕ್ಕೆ ಸಂಬಂಧಿಸಿದವುಗಳೇ ಆಗಿವೆ. ಮೊದಮೊದಲು ಅಂಥ ಕಾದಂಬರಿಗಳನ್ನು ಮರಾಠಿಯಿಂದ ಅನುವಾದ ಮಾಡಿದ ಗಳಗನಾಥರಿಗೆ ತಾವು ಕನ್ನಡ ನಾಡಿನ ಇತಿಹಾಸಕ್ಕೆ ಸಂಬಂಧಿಸಿದ ಕೃತಿಗಳನ್ನು ನಿರ್ಮಿಸಬೇಕೆಂಬ ಹೆಬ್ಬಯಕೆ ಉಂಟಾದುದು ಸಹಜ. ಕನ್ನಡ ಅರಸುಮನೆತನಗಳಾದ ಚಾಲುಕ್ಯ, ಕದಂಬ, ಹೊಯ್ಸಳ ಮತ್ತು ವಿಜಯನಗರಗಳ ಇತಿಹಾಸದ ಹಿನ್ನೆಲೆಯಲ್ಲಿ ಕಾದಂಬರಿಗಳನ್ನು ಬರೆಯಬೇಕೆಂದು ಅವರು ಯೋಜಿಸಿದರು. ಆದರೆ ವಿಜಯ-ನಗರ ಇತಿಹಾಸಕ್ಕೆ ಸಂಬಂಧಿಸಿದಂತೆ ಎರಡು ಸ್ವತಂತ್ರ ಕಾದಂಬರಿಗಳನ್ನೂ ಒಂದು ಅನುವಾದವನ್ನೂ ಮತ್ತು ಚಿತ್ರದುರ್ಗದ ಇತಿಹಾಸಕ್ಕೆ ಸಂಬಂಧಿಸಿದಂತೆ ಒಂದು ಸ್ವತಂತ್ರ ಕಾದಂಬರಿಯನ್ನೂ ಮಾತ್ರ ಬರೆಯಲು ಅವರು ಸಮರ್ಥ-ರಾದರು. ಈ ಕಾದಂಬರಿಗಳ ಸಂಕ್ಷಿಪ್ತ ವಿವೇಚನೆಯೇ ಈ ಲೇಖನದ ಉದ್ದೇಶ-ವಾಗಿದೆ.

(೧)

ಗಳಗನಾಥರು ೧೯೧೩ರಲ್ಲಿ "ಕುಮುದಿನಿ"ಯನ್ನೂ, ೧೯೧೬ರಲ್ಲಿ "ಕನ್ನಡಿ-ಗರ ಕರ್ಮಕಥೆ"ಯನ್ನೂ, ೧೯೨೩ರಲ್ಲಿ "ಮಾಧವಕರುಣಾವಿಲಾಸ"ವನ್ನೂ ಮತ್ತು ೧೯೩೪ರಲ್ಲಿ "ದುರ್ಗದ ಬಿಚ್ಚುಗತ್ತಿ"ಯನ್ನೂ ಬರೆದರು. ಇವುಗಳಲ್ಲಿ ಮೊದಲಿನ ಮೂರು ಕಾದಂಬರಿಗಳು ವಿಜಯನಗರ ಇತಿಹಾಸದ ಹಿನ್ನೆಲೆಯಲ್ಲಿ ಬರೆದವುಗಳಾದರೂ, ಕಥಾವಸ್ತುವಿನ ದೃಷ್ಟಿಯಿಂದ ಅವುಗಳ ಕ್ರಮದಲ್ಲಿ ಮಾತ್ರ ವಿಲೋಮತೆ ಇದೆ. ಏಕೆಂದರೆ ಮೊದಲು ಬರೆದ "ಕುಮುದಿನಿ"ಯು ವಿಜಯನಗರ ಸಾಮ್ರಾಜ್ಯದ ವಿನಾಶದನಂತರದ ಕಥೆಯನ್ನೂ, "ಕನ್ನಡಿಗರ ಕರ್ಮಕಥೆ"ಯು ವಿನಾಶದ ಕಥೆಯನ್ನೂ ಮತ್ತು "ಮಾಧವ ಕರುಣಾ ವಿಲಾಸ"ವು ಸಾಮ್ರಾಜ್ಯಸ್ಥಾಪನೆಯ ಕಥೆಯನ್ನೂ ಹೇಳುತ್ತವೆ. ಇದನ್ನು ನೋಡಿದರೆ ಅವರಿಗೆ ಲೇಖನಕಾರ್ಯದಲ್ಲಿ ಒಂದು ವ್ಯವಸ್ಥಿತವಾದ ಯೋಜನೆ

ಇದ್ದಿರಲಿಲ್ಲವೆಂಬ ಕಲ್ಪನೆಯುಂಟಾಗುವಂತಿದೆ. ಇದು ಅಷ್ಟು ಸರಿಯಲ್ಲ. ಏಕೆಂದರೆ "ಕುಮುದಿನಿ"ಯ ಮುನ್ನುಡಿಯಲ್ಲಿ ಅವರು "ಕನ್ನಡದಲ್ಲಿ ಐತಿಹಾಸಿಕ ಸಾಧನೆಗಳು ಕಡಿಮೆ. ಲೇಖಕನಿಗೆ ಇಂಥ ಹೊಸ ಕಾದಂಬರಿಗಳನ್ನು ಬರೆದು ಅನುಭವವಿಲ್ಲ" ಎಂದು ತಮ್ಮ ಅಡಚಣೆಗಳನ್ನು ಹೇಳಿರುವರು. ಅದಕ್ಕೇ "ಕುಮುದಿನಿ"ಯಂಥ ಚಿಕ್ಕ ಕಾದಂಬರಿಯನ್ನು (೧೯೮ ಪುಟಗಳು) ಮೊದಲು ಬರೆದು ಅನುಭವ ಪಡೆದು, ಆತ್ಮವಿಶ್ವಾಸ ಬೆಳೆದನಂತರ ಅವರು ತಮ್ಮ ಮೇರು ಕೃತಿಯಾದ "ಮಾಧವಕರುಣಾವಿಲಾಸ"ವನ್ನು (೭೭೨ ಪುಟಗಳು) ಬರೆದರೆಂದು ನಾವು ಊಹಿಸಬಹುದಾಗಿದೆ.

(೨)

"ಕುಮುದಿನಿ"ಗೆ ಅವರು ತಮ್ಮ ಪದ್ಧತಿಯಂತೆ "ಬಾಲಕ್ಕೆ ಬಡಿದಾಟ" ಎಂಬ ಬೇರೊಂದು ಹೆಸರನ್ನೂ ಕೊಟ್ಟಿರುವರು. ಕಥಾನಾಯಿಕೆ ಕುಮುದಿನಿಯಾದ್ದರಿಂದ ಕಾದಂಬರಿಗೆ ಅವಳ ಹೆಸರೇ ಬಂದಿತು. ಅದರಂತೆ ವಿಜಯನಗರದ ರಾಯರು ತಮ್ಮ ಆನೆಯಂಥ ಸಾಮ್ರಾಜ್ಯವನ್ನು ಕಳೆದುಕೊಂಡು, ಬಾಲದಂಥ ಚಂದ್ರಗಿರಿಯ ಸಂಸ್ಥಾನಕ್ಕಾಗಿ ತಮ್ಮೊಳಗೆ ಬಡಿದಾಡಿದ್ದನ್ನು ಈ ಕಾದಂಬರಿಯು ಚಿತ್ರಿಸಿರುವುದರಿಂದ ಇದಕ್ಕೆ "ಬಾಲಕ್ಕೆ ಬಡಿದಾಟ" ಎಂಬ ಹೆಸರನ್ನು ಇಡಲಾಗಿದೆಯೆಂದು ಲೇಖಕರೇ ಹೇಳಿರುವರು. ಆದರೆ "ಕುಮುದಿನಿ"ಯ ನಿಜವಾದ ನಾಯಕ ಎಚ್ಚಮನಾಯಕನೇ ಆಗಿರುವನು. ಏಕೆಂದರೆ ಕಾದಂಬರಿಯ ಆದಿ, ಮಧ್ಯ ಮತ್ತು ಅಂತ್ಯಭಾಗಗಳಲ್ಲೆಲ್ಲ ಅವನೇ ವ್ಯಾಪಿಸಿರುವನು. ವಿಜಯನಗರ ಅರಸುಮನೆತನಕ್ಕೆ ಅತ್ಯಂತ ನಿಷ್ಠನಾದ ಈ ವೀರ ಸರದಾರನ ವೀರವೃತ್ತಿಯನ್ನು ಬಣ್ಣಿಸುವುದೇ ಈ ಕಾದಂಬರಿಯ ಉದ್ದೇಶವಾಗಿದೆ.

ವಿಜಯನಗರವು ಹಾಳಾಗಿ ಸರಾಸರಿ ೫೦ ವರ್ಷಗಳು ಗತಿಸಿದ್ದುವು. ಆ ರಾಜ್ಯವನ್ನು ತಿರುಗಿ ಕಟ್ಟಲು ರಾಯರ ಅಭಿಮಾನಿಗಳಾದ ಅನೇಕ ಸರದಾರರು ಯತ್ನಿಸುತ್ತಿದ್ದರು. ಅಂಥವರಲ್ಲಿ ಪ್ರತಾಪದುರ್ಗದ ನಾಯಕನಾದ ಎಚ್ಚಮನ ತಂದೆಯೂ ಒಬ್ಬನು. ಆತನು ಸಾಯುವಾಗ ತನ್ನ ಕಾರ್ಯವನ್ನು ಮುಂದುವರಿಸುವಂತೆ ಎಚ್ಚಮನಿಂದ ವಚನವನ್ನು ತೆಗೆದುಕೊಂಡಿದ್ದನು. ಎಚ್ಚಮನಾಯಕನು ವಿಜಯನಗರವನ್ನು ಒಮ್ಮೆ ಕಣ್ಣಾರೆ ಕಾಣಬೇಕೆಂಬ ಆಸೆಯಿಂದ ಬಂದರೆ, "ಅಲ್ಲಿಯ ಅರಮನೆಗಳು, ಸಭಾಸ್ಥಾನಗಳು, ಗಜಶಾಲೆಗಳು, ಹಯಶಾಲೆಗಳು, ಗೋಶಾಲೆಗಳು, ರಾಜಪುರುಷರ ಹಾಗು ಧನಿಕರ ಅಂತಸ್ತಿನ ಮನೆಗಳು, ಭವ್ಯವಾದ ದೇವಾಲಯಗಳು ನಾಶದ ಪಥವನ್ನು ಹಿಡಿದು" ವಿದ್ರೂಪವಾಗಿರುವುದನ್ನು ಕಂಡು ಅವನ ಮನಸ್ಸು ಬಹುವಾಗಿ ನೊಂದಿತು. ಆತನು ವಿರೂಪಾಕ್ಷನ ದೇವಾಲಯಕ್ಕೆ ಬಂದು ದುಃಖಾವೇಶದಿಂದ ತನ್ನ ಖಡ್ಗವನ್ನು ದೇವರಿಗೆ ಅರ್ಪಿಸಿಬಿಟ್ಟನು. ಆದರೆ ಅರ್ಚಕರು ಆತನನ್ನು ಸಂತೈಸಿ,

ಆತನು ಖಡ್ಗವನ್ನು ಸ್ವೀಕರಿಸಿ ತನ್ನ ಕಾರ್ಯದಲ್ಲಿ ಮುಂದುವರಿಯುವಂತೆ ಪ್ರೋತ್ಸಾಹಿಸಿದರು.

ಮರುದಿನ ರಾತ್ರಿಯನ್ನು ಎಚ್ಚಮನಾಯಕನು ದೇವಾಲಯದಲ್ಲಿಯೇ ಕಳೆದನು. ಆಗ ಆತನು ಅಲ್ಲಿ ಒಬ್ಬ ದಿವ್ಯ ಪೂಜಾರಿಯನ್ನೂ ಅತ್ಯಂತ ರೂಪಸಿ-ಯಾದ ಚಂಪಾ ಎಂಬ ತರುಣಿಯನ್ನೂ ಕಂಡು ಚಕಿತನಾದನು. ಅವರನ್ನು ಮಾತನಾಡಿಸಬೇಕೆನ್ನುವಷ್ಟರಲ್ಲಿ, ಚಂದ್ರಗಿರಿಯಿಂದ ದೂತನೊಬ್ಬನು ಬಂದು ಅವನನ್ನು ಅರಸನ ಹತ್ತಿರ ಕರೆದೊಯ್ದನು.

ಚಂದ್ರಗಿರಿಯ ಅರಸು ಮೊದಲನೆಯ ವೆಂಕಟದೊರೆಯು ಅಸ್ವಸ್ಥನಾಗಿ-ದ್ದನು. ವಿಜಯನಗರದ ಅಳಿಯ ರಾಮರಾಯನ ವಂಶದವನಾದ ಈ ವೆಂಕಟ-ದೊರೆ ನಿಪುತ್ರಕನಾಗಿದ್ದನು. ಆದರೆ ಆತನ ಹೆಂಡತಿ ಬಾಯಮ್ಮ ಕಪಟದಿಂದ ದಾಸಿಯ ಕೂಸನ್ನು ತನ್ನದೆಂದೇ ನಾಟಕವಾಡಿದ್ದಳು. ಉಳಿದವರು ಅದನ್ನು ನಂಬಿದ್ದರೂ ಎಲ್ಲವನ್ನೂ ಬಲ್ಲ ದೊರೆಯು ತನ್ನನಂತರ ರಾಜ್ಯವು ತನ್ನ ವಂಶ-ದವರಿಗೇ ಹೋಗಬೇಕೆಂದು ಬಯಸಿದನು. ತನ್ನ ಅಣ್ಣನ ಮಗನಿಗೆ ಪಟ್ಟವನ್ನು ಒಪ್ಪಿಸಬೇಕೆಂದು ಆತನ ವಿಚಾರ. ಸರದಾರರ ಸಭೆಯಲ್ಲಿ ತನ್ನ ನಿರ್ಧಾರವನ್ನು ಪ್ರಕಟಿಸಿ, ಎಚ್ಚಮನು ಅದರಂತೆ ಕಾರ್ಯಮಾಡಬೇಕೆಂದು ವಿಧಿಸಿದನು. ಇದು ದೊರೆಯ ಮಾವನಾದ ಜಗರಾಯನಿಗೂ ಉಳಿದ ಕೆಲವು ನಾಯಕರಿಗೂ ಒಪ್ಪಿಗೆಯಾಗಲಿಲ್ಲ. ಬಾಯಮ್ಮನ ಮಗನಿಗೇ ಪಟ್ಟವಾಗಬೇಕೆಂದು ಅವರ ಆಸೆಯಾಗಿತ್ತು. ಪಟ್ಟಕ್ಕಾಗಿ ಈ ಮನಸ್ತಾಪವೇ ತನಗೆ ಬೇಡವೆಂದರೂ ಚಿಕ್ಕ-ರಾಯನು (ಮೂರನೆಯ ರಂಗರಾಯ) ಪಟ್ಟಕ್ಕೆ ಕೂಡ್ರಬೇಕಾಯಿತು. ಪಟ್ಟಾಭಿಷೇಕದನಂತರ ಎಚ್ಚಮನಾಯಕನು ತನ್ನ ಪ್ರತಾಪದುರ್ಗಕ್ಕೆ ಬಂದನು. ಮಹಾಬ್ರಾಹ್ಮಣನೊಬ್ಬನು ಚಂಪೆಯನ್ನು ಕರೆತಂದು, ಅವಳ ಕಥೆಯನ್ನೆಲ್ಲ ತಿಳಿಸಿ, ಅವಳನ್ನು ಎಚ್ಚಮನಾಯಕನಿಗೆ ಒಪ್ಪಿಸಿ, ಅವಳ ಪಾಣಿಗ್ರಹಣ ಮಾಡ-ಬೇಕೆಂದು ಹೇಳಿದನು. ಚಂಪೆಯು ಕಾಂಚನಗಡದ ಅಧಿಪತಿಯಾದ ನರಸಿಂಗ-ರಾಯನ ಮಗಳಾಗಿದ್ದಳು. ಅವಳ ಮೊದಲ ಹೆಸರು ಮೋಹಿನಿ ಎಂದಿತ್ತು. ಮೊದಲಿನಿಂದಲೂ ಮೋಹಿನಿಯು ಎಚ್ಚಮನ ಮನವನ್ನು ಮೋಹಿಸಿದ್ದಳು. ಇಬ್ಬರ ಹಿರಿಯರೂ ಅವರ ಲಗ್ನವನ್ನು ಮಾಡಲು ನಿಶ್ಚಯಿಸಿದ್ದರು. ಆದರೆ ನರಸಿಂಗನಾಯಕನು ವಿಜಯನಗರದ ಪಕ್ಷವನ್ನು ವಹಿಸಿ ಕಾದಿ ಮಡಿದನು. ಆಗ ಮೋಹಿನಿಯೂ ಮುಸಲ್ಮಾನರ ಕೈಸೇರುವವಳಿದ್ದಳು. ಆದರೆ ಆ ಬ್ರಾಹ್ಮ-ಣನ ಆಶ್ರಯದಿಂದ ಪಾರಾಗಿದ್ದಳು. ಅವಳಿಗೆ 'ಕುಮುದಿನಿ' ಎಂಬ ಹೆಸರನ್ನು ಆತನೇ ಕೊಟ್ಟಿದ್ದನು.

ಅವರ ಲಗ್ನದ ದಿನವೇ ಚಂದ್ರಗಿರಿಯಿಂದ ಕೆಟ್ಟ ಸಮಾಚಾರ ಬಂದಿತು. ಜಗರಾಯನು ಮೋಸದಿಂದ ಹೊಸ ಅರಸನ ಮೇಲೇರಿಬಂದಿದ್ದನು. ಎಚ್ಚಮನು

ಕೂಡಲೇ ಯುದ್ಧ ಸನ್ನದ್ಧನಾಗಿ ಚಂದ್ರಗಿರಿಗೆ ಹೊರಟನು. ತನ್ನ ಪತಿಕಾರ್ಯವು ಕೈಗೂಡುವವರೆಗೆ ಬ್ರಹ್ಮಚರ್ಯವನ್ನು ಪಾಲಿಸುವುದಾಗಿ ಪ್ರತಿಜ್ಞೆಮಾಡಿ, ಕುಮುದಿನಿಯೂ ಪುರುಷವೇಷ ಧರಿಸಿ ಅಶ್ವಾರೂಢಳಾಗಿ ಎಚ್ಚಮನಾಯಕನ ಜೊತೆ ನಡೆದಳು.

ಇತ್ತ ಜಗರಾಯನು ಕೋಟೆಯನ್ನು ವಶಪಡಿಸಿಕೊಂಡು, ತನ್ನ ಮೊಮ್ಮಗನನ್ನು ಪಟ್ಟಕ್ಕೆ ಕೂಡ್ರಿಸಿ, ರಂಗರಾಯನನ್ನೂ ಅವನ ಪರಿವಾರದವರನ್ನೂ ಸೆರೆಯಲ್ಲಿಟ್ಟಿದ್ದನು. ಎಚ್ಚಮನು ಚಂದ್ರಗಿರಿಯ ಸಮೀಪ ಬೀಡು ಬಿಟ್ಟು, ಅರಸನ ಬಿಡುಗಡೆಯ ಯೋಜನೆಗಳಲ್ಲಿ ತೊಡಗಿದನು. ಕುಮುದಿನಿ ಆ ಕಾರ್ಯದಲ್ಲಿ ಬಹು ಸಹಾಯ ಸಲ್ಲಿಸಿದಳು. ಅವಳು ಚಾಣಾಕ್ಷತೆಯಿಂದ ಅಗಸನೊಬ್ಬನ ಸಹಾಯದಿಂದ ಸೆರೆಯಲ್ಲಿದ್ದ ರಂಗರಾಯನ ಒಬ್ಬ ಮಗನನ್ನು ಹಾರಿಸಿಕೊಂಡು ಬಂದಳು. ಇಷ್ಟರಲ್ಲಿ ವಿಜಾಪುರ ಬಾದಶಹನಿಂದ ಸಿಡಿದುಬಂದ ಚಾಂದಬಾಗನೆಂಬ ಸರದಾರನೂ ಎಚ್ಚಮನ ನೆರವಿಗೆ ನಿಂತನು. ಅರಮನೆಗೆ ಕನ್ನ ಕೊರೆದು ಗುಪ್ತಮಾರ್ಗದಿಂದ ರಂಗರಾಯನನ್ನೂ ಅವನ ಪರಿವಾರವನ್ನೂ ಪಾರುಮಾಡಬೇಕೆಂದು ಹೂಡಿದ ಆತನ ಯತ್ನವು ವಿಫಲವಾಯಿತು. ಅದರಂತೆ ಓಬಲೇಶ್ವರನೆಂಬ ಸರದಾರನೂ ಅರಸನನ್ನು ಬಂಧಮುಕ್ತಮಾಡಲು ಪ್ರಯತ್ನಿಸಿ ಸೋತನು. ಕ್ರುದ್ಧನಾದ ಜಗರಾಯನು ಅರಸನನ್ನೂ ಅವನ ಪರಿವಾರದವರೆಲ್ಲರನ್ನೂ ಕೊಲ್ಲಿಸಿಬಿಟ್ಟನು. ಇದರಿಂದ ಎಲ್ಲರಿಗೂ ಆಘಾತವಾಯಿತು. ಅನೇಕ ಸರದಾರರು ಜಗರಾಯನ ಪಕ್ಷವನ್ನು ಬಿಟ್ಟುಬಂದು ಎಚ್ಚಮನಾಯಕನನ್ನು ಕೂಡಿಕೊಂಡರು. ಆದರೂ ಅರಸನ ಕಗ್ಗೊಲೆಯಿಂದ ನಾಯಕನು ದಿಗ್ಭ್ರಾಂತನಾದನು. ದಿವ್ಯ ಮಹರ್ಷಿಯೊಬ್ಬನು ಬಂದು ಎಚ್ಚಮನನ್ನು ಸಂತೈಸಿ, ಅವನನ್ನು ಕಾರ್ಯಪ್ರವೃತ್ತನನ್ನಾಗಿ ಮಾಡಿದನು. ಎಚ್ಚಮನು ೨೦ ಸಾವಿರ ಸೈನ್ಯದೊಂದಿಗೆ ಚಂದ್ರಗಿರಿಯನ್ನು ಮುತ್ತಿ ವಶಪಡಿಸಿಕೊಂಡು, ರಂಗರಾಯನ ಮಗ ಚಿನ್ನವೆಂಕಟನನ್ನು ಪಟ್ಟಕ್ಕೆ ಕೂಡ್ರಿಸಿದನು.

ಚಿನ್ನವೆಂಕಟನ ಪಟ್ಟಾಭಿಷೇಕದ ಶುಭದಿನವೇ ಎಚ್ಚಮನಾಯಕನು ಕುಮುದಿನಿಯನ್ನು ವರಿಸಿದನು. ಋಷೀಶ್ವರನು ರಾಜಮನೆತನದವರು ತಮ್ಮತಮ್ಮೊಳಗೆ ಬಡಿದಾಡುವುದನ್ನು ಬಿಟ್ಟುಬಿಡಬೇಕೆಂದು ಬೋಧಿಸಿದನು. ಅದರಂತೆ ಎಚ್ಚಮನಾಯಕನು ಜಗರಾಯನನ್ನು ಕ್ಷಮಿಸಿ, ಆತನಿಗೆ ಸ್ನೇಹಹಸ್ತವನ್ನು ಚಾಚಿದನು. ಚಿನ್ನವೆಂಕಟನು ಪ್ರಬುದ್ಧನಾಗುವವರೆಗೆ ಎಚ್ಚಮನು ಅಲ್ಲಿಯೇ ನಿಂತು, ಅನಂತರ ತನ್ನ ಪ್ರತಾಪದುರ್ಗಕ್ಕೆ ಬಂದನು.

—ಅನೇಕ ಇತಿಹಾಸ ಗ್ರಂಥಗಳಲ್ಲಿ ಈ ಕಥಾವಸ್ತುವಿನ ವಿವರಗಳು ದೊರೆಯುವುದಿಲ್ಲ. ಆರ್. ಸತ್ಯನಾಥ ಅಯ್ಯರ ಅವರು ತಮ್ಮ 'History of India' ಎಂಬ ಗ್ರಂಥದಲ್ಲಿ ಚಂದ್ರಗಿರಿಯನ್ನು ೧೫೮೫ ರಿಂದ ೧೬೧೪ ರ ವರೆಗೆ

ಆಳಿದ ಒಂದನೆಯ ವೆಂಕಟರಾಯನ ಬಗ್ಗೆ ಸಾಕಷ್ಟು ಬರೆದಿದ್ದರೂ, ಆತನ ಮರಣದನಂತರ ನಡೆದ ವಿಪ್ಲವದ ಬಗ್ಗೆ ಏನನ್ನೂ ಹೇಳಿಲ್ಲ.[೧] ಆದರೆ ಗಳಗನಾಥರು ತಮ್ಮ ಈ ಕಾದಂಬರಿಗೆ ಕಥಾವಸ್ತುವನ್ನು ಮುಖ್ಯವಾಗಿ ರಾಬರ್ಟ್ ಸಿವೆಲ್ ಅವರ "ಎ ಫಾರ್‌ಗಾಟನ್ ಎಂಪಾಯರ–ವಿಜಯನಗರ"[೨] ಎಂಬ ಗ್ರಂಥದಿಂದಲೇ ತೆಗೆದುಕೊಂಡಿರುವರು. ೧೬೧೬ನೆಯ ಇಸ್ವಿಯ ಡಿಸೆಂಬರ ತಿಂಗಳ ೧೨ನೆಯ ತಾರೀಖಿನಂದು ಕೋಚೀನ್ ಪಟ್ಟಣದಿಂದ ಮ್ಯಾನ್ಯುಎಲ್ ಬರಡಸ್ (Manuel Barradas) ಎಂಬವನು ಬರೆದ ಪತ್ರವು ಲಿಸ್‌ಬನ್ನಿನ ಹಳೆಯ ಪತ್ರಾಗಾರದಲ್ಲಿ ದೊರೆತಿದ್ದು, ಅದರ ಮುಖ್ಯಾಂಶಗಳನ್ನು ಆಂಗ್ಲ ಭಾಷೆಗೆ ಅನುವಾದ ಮಾಡಿ ಸಿವೆಲ್ಲರು ತಮ್ಮ ಗ್ರಂಥದಲ್ಲಿ ಕೊಟ್ಟಿರುವರು. ಗಳಗನಾಥರಿಗೆ ಈ ಪತ್ರವೇ ಆಕರವಾಗಿದೆ. ಆ ಪತ್ರದಲ್ಲಿಯ ವಿಷಯಕ್ಕೂ ಗಳಗನಾಥರ "ಕುಮುದಿನಿ"ಯ ಕಥಾನಕಕ್ಕೂ ಬಹಳ ಹೆಚ್ಚುಕಡಿಮೆಯಿಲ್ಲ.

ಕಾದಂಬರಿಯಲ್ಲಿ ಬಂದಿರುವ ಎಚ್ಚಮನಾಯಕ, ಜಗರಾಯ, ರಂಗರಾಯ, ಬಾಯಮ್ಮ, ಚಿಕ್ಕರಾಯ, ಓಬಲರಾಯ ಮೊದಲಾದವರೆಲ್ಲ ಐತಿಹಾಸಿಕ ವ್ಯಕ್ತಿಗಳೇ ಆಗಿದ್ದಾರೆ. ಬರಡಸ್‌ನೂ ಕೂಡ ಎಚ್ಚಮನ ಶೌರ್ಯ–ನಿಷ್ಠೆಗಳನ್ನೂ, ಜಗರಾಯನ ಕಪಟ–ಸ್ವಾರ್ಥಗಳನ್ನೂ, ಆತ ಸರದಾರರನ್ನು ಲಂಚದಿಂದ ತನ್ನ ಪಕ್ಷಕ್ಕೆ ಒಡೆದುಕೊಂಡುದನ್ನೂ, ಕಡೆಗೆ ಸೋತು ಅಡವಿಯನ್ನು ಸೇರಿದ್ದನ್ನೂ, ಬಾಯಮ್ಮ ಕಪಟದಿಂದ ಬ್ರಾಹ್ಮಣ ದಾಸಿಯೊಬ್ಬಳ ಮಗುವನ್ನು ತನ್ನ ಕೂಸೆಂದು ಹೇಳಿ ಹೂಡಿದ ನಾಟಕದ ವಿಷಯವನ್ನೂ, ಜಗರಾಯನು ಸೆರೆಯಲ್ಲಿಟ್ಟ ಮೂರನೆಯ ರಂಗರಾಯನನ್ನು ಆತನ ಹೆಂಡತಿಮಕ್ಕಳುಸಹಿತವಾಗಿ ಕೊಲೆ ಮಾಡಿಸಿದುದನ್ನೂ, ಅನಂತರ ಎಚ್ಚಮನು ಯುದ್ಧ ಹೂಡಿ ರಂಗರಾಯನ ಮಗನಿಗೆ ರಾಜ್ಯವನ್ನು ಗೆದ್ದುಕೊಟ್ಟದ್ದನ್ನೂ ವಿವರಿಸಿರುವನು. ಗಳಗನಾಥರು ಈ ಕಂಕಾಲವನ್ನೇ ರಕ್ತಮಾಂಸಗಳಿಂದ ತುಂಬಿ ಜೀವಂತ ಕಾದಂಬರಿಯನ್ನಾಗಿಸಿರುವರು.

ಕಥಾನಾಯಕಿಯಾದ ಕುಮುದಿನಿ ಮಾತ್ರ ಗಳಗನಾಥರ ಸೃಷ್ಟಿ. ಅವಳ ಅಪರೂಪದ ರೂಪ–ಸೌಂದರ್ಯ–ಭಕ್ತಿ–ಪ್ರೇಮಗಳ ಜೊತೆಗೆ ಅವಳ ಶೌರ್ಯ–ಸಾಹಸ–ಚಾತುರ್ಯಗಳನ್ನೂ ಲೇಖಕರು ಕಾದಂಬರಿಯಲ್ಲಿ ಚಿತ್ರಿಸಿ ಆ ಪಾತ್ರಕ್ಕೆ ಮೋಹಕತೆಯನ್ನೂ ಮಹತ್ವವನ್ನೂ ತಂದಿರುವರು. ಅದರಂತೆ ಕಾದಂಬರಿಯಲ್ಲಿ ಬಂದಿರುವ ಚಾಂದಖಾನ ಎಂಬ ಪಾತ್ರವೂ ಕಾಲ್ಪನಿಕವಾದುದೇ ಆಗಿದೆ.

೧. "Though he married six ladies, he had no son, and his death in 1641 was followed by a great war of succession which divided and emasculated the empire." P. 350.

೨. A Forgotten Empire (Vijayanagar) by Robert Sewell. Published by George Allen & Unwin Ltd., in 1900. Reprinted in 1942.

ಕನ್ನಡ ರಾಜರನ್ನು ಮೆಚ್ಚಿ, ಅವರ ಸ್ನೇಹಿತರಾಗಿ ಸಹಾಯಮಾಡಿದ ಅನೇಕ ಮುಸಲ್ಮಾನ ಸರದಾರರನ್ನೂ ಗಳಗನಾಥರು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿರುವರು. ಅವರಲ್ಲಿ ಈ ಚಾಂದಖಾನನೂ ಒಬ್ಬ. ಎಚ್ಚಮನ ಶೌರ್ಯ–ಪರಾಕ್ರಮ–ಧರ್ಮಯುದ್ಧಗಳಿಗೆ ಮಾರುಹೋದ ಈ ಶೂರ ತರುಣನು ಕೊನೆಯವರೆಗೂ ಎಚ್ಚಮನಾಯಕನಿಗೆ ನಿಷ್ಠನಾಗಿ ಉಳಿಯುವನು.

ಕಾದಂಬರಿಯ ಆರಂಭದಲ್ಲಿ ಬಂದಿರುವ ಹಾಳುಹಂಪೆ, ವಿರೂಪಾಕ್ಷದೇವರ ಪೂಜಾರಿಗಳು, ಸೌಂದರ್ಯಮೂರ್ತಿ ಚಂಪಾ, ತರುಣ ಎಚ್ಚಮ, ಕತ್ತಲೆ–ಮಳೆಗಳಿಂದ ಕೂಡಿದ ಕಾಳರಾತ್ರಿ, ರಾಜಕುಮಾರನ ಪಟ್ಟಾಭಿಷೇಕ, ಕುಮುದಿನಿ–ಎಚ್ಚಮರ ಸಮಾಗಮ ಮೊದಲಾದವುಗಳನ್ನು ಲೇಖಕರು ಚೆನ್ನಾಗಿ ಬಣ್ಣಿಸಿರುವರು. "ಅಂತಕನ ಕೋಲಾಹಲ"ವೆಂಬ ಪ್ರಕರಣದಲ್ಲಿ ಬಂದಿರುವ ರಂಗರಾಯನ ಕುಟುಂಬದ ಕಗ್ಗೊಲೆಯ ಸನ್ನಿವೇಶವಂತೂ ರೋಮಾಂಚಕಾರಿಯಾಗಿದೆ. ದಿವಂಗತ ಟಿ. ಎಸ್. ವೆಂಕಣ್ಣಯ್ಯನವರು ಬಹುಶಃ ಇದನ್ನು ಮೆಚ್ಚಿಯೇ " 'ಕುಮುದಿನಿ'ಯನ್ನು ಓದುವಾಗ ಎಷ್ಟೋ ಸಾರೆ ನನ್ನ ನೇತ್ರಗಳು ಅಶ್ರು-ಪೂರ್ಣವಾದವು....ಅದರಲ್ಲಿ ದೋಷವೇನೂ ಇದ್ದಂತೆ ನನಗೆ ಬೋಧೆಯಾಗಲಿಲ್ಲ" ಎಂದು ಗಳಗನಾಥರಿಗೆ (೨೧–೬–೧೯೧೫ರಂದು) ಪತ್ರ ಬರೆದಿದ್ದರು. ಇನ್ನೊಬ್ಬ ಸಾಮಾನ್ಯ ವಾಚಕರು "ಕುಮುದಿನಿ"ಯ 'ಅಂತಕನ ಕೋಲಾಹಲ'ವನ್ನು ಕುರಿತು "೧೨ನೆಯ ಪ್ರಕರಣವನ್ನು ಓದುವಾಗ ಅದರೊಳಗಿನ ಚಿನ್ನ ಓಬಲನ ಕ್ರೂರತನವನ್ನೂ ದುಃಖದ ಪ್ರಸಂಗವನ್ನೂ ಓದಿ ನಮ್ಮೊಳಗಿನ ಮಿದುಳಿನ ಅಶಕ್ತತೆಯುಳ್ಳ ಒಬ್ಬ ಮಿತ್ರರು ಮೂರ್ಛಿತರಾದರು.........ಎಚ್ಚತ್ತಮೇಲೆ ಅವರು ಕಾದಂಬರಿಯನ್ನು ಮುಟ್ಟದಾದರು. ಚಿನ್ನ ಓಬಲನೆಂಬ ವ್ಯಕ್ತಿಯ ಕ್ರೂರತನವು ನಿಜವಾಗಿ ಒದಗಿದ್ದೇ ಆದರೆ ಆ ನೀಚನು ಈಗಲೂ ರೌರವ ನರಕದಲ್ಲಿರಬಹುದು...." ಎಂದು ಗಳಗನಾಥರಿಗೆ ಪತ್ರ ಬರೆದರು. ಇಂಥ ಮೆಚ್ಚುಗೆಯ ಮಾತುಗಳನ್ನು ಕೇಳಿ ಗಳಗನಾಥರು ಸಂತೋಷಪಟ್ಟರು, ಕೃತಾರ್ಥತೆಯ ಭಾವವನ್ನು ತಳೆದರು.

"ಹಾಸ್ಯರಸವೊಂದನ್ನು ಬಿಟ್ಟು ಉಳಿದ ರಸಗಳೆಲ್ಲ ಬಹುತರ ಈ ಕಾದಂಬರಿಯಲ್ಲಿ ಇರುತ್ತವೆಂದು ಹೇಳಬಹುದು" ಎಂದು ಲೇಖಕರು ಕಾದಂಬ-ರಿಯ ಮುನ್ನುಡಿಯಲ್ಲಿ ಹೇಳಿರುವುದು ಬಹುಮಟ್ಟಿಗೆ ಸರಿಯಾಗಿದೆ. ಆದರೂ ಕಾದಂಬರಿಯಲ್ಲಿ ಮುಖ್ಯವಾಗಿ ವೀರ, ಕರುಣ ಮತ್ತು ಶೃಂಗಾರ ರಸಗಳು ಚೆನ್ನಾಗಿ ನಿರೂಪಿತವಾಗಿವೆ. "ಶೃಂಗಾರಸಾಗರ" ಎಂಬ ಪ್ರಕರಣದಲ್ಲಿಯ ವರ್ಣನೆ ಅತಿಯಾಗಿದ್ದರೂ ಎಲ್ಲಿಯೂ ಅಶ್ಲೀಲಕ್ಕೆಡೆಯಿಲ್ಲ. ಕಾದಂಬರಿಯನ್ನು ಇಡಿಯಾಗಿ ಓದಿ ಸವಿಯಬೇಕೆಂಬ ಅಭಿಪ್ರಾಯ ಲೇಖಕರದಾದರೂ, ಹಾಗೆ "ಕುಮುದಿನಿ"ಯನ್ನು ಸಂಪೂರ್ಣವಾಗಿ ಓದಲಾಗದವರು ಈ ಕಾದಂಬರಿಯ

"ಮುಖದಂತೆ ಇದ್ದ ಕಡೆಯ ಐದು ಪ್ರಕರಣಗಳನ್ನಾದರೂ ದಯವಿಟ್ಟು ಅವಲೋಕಿಸಬೇಕು" ಎಂದು ಅವರು ಬಿನ್ನವಿಸಿರುವರು. ಆದರೆ ನಿಜವಾಗಿ ನೋಡಿದರೆ ಕೊನೆಯ ಮೂರು ಪ್ರಕರಣಗಳು ಅನಾವಶ್ಯಕವಾಗಿ ಲಂಬಿಸಿವೆ ಎಂದು ಹೇಳಬಹುದು. ಆದರೂ ಗಳಗನಾಥರ ವಾಚಕರು ಈ ಕಾದಂಬರಿಯನ್ನು ಇಡಿಯಾಗಿ ಓದಿ ಮೆಚ್ಚಿದರೆಂದೇ ನಾವು ಊಹಿಸಬಹುದಾಗಿದೆ. ಏಕೆಂದರೆ "ಕುಮುದಿನಿ"ಯು ಗಳಗನಾಥರ ಕಾದಂದಬರಿಗಳಲ್ಲಿ ಬಹು ಜನಪ್ರಿಯವಾಗಿತ್ತು. ಕಥಾವಸ್ತುವಿನಂತೆ ಗಳಗನಾಥರ ಸುರಸಶೈಲಿಯೂ ಅದಕ್ಕೆ ಕಾರಣವಾಗಿತ್ತು.

"ಕುಮುದಿನಿ" ಗಳಗನಾಥರ ಪ್ರಥಮ ಸ್ವತಂತ್ರ ಐತಿಹಾಸಿಕ ಕಾದಂಬರಿ ಎಂಬುದನ್ನು ಮನದಂದು ಪರಿಶೀಲಿಸಿದಾಗ ನಾವು ಅವರ ಯಶಸ್ಸನ್ನು ಕಂಡು ಮೆಚ್ಚಲೇಬೇಕು.

(೩)

"ಕನ್ನಡಿಗರ ಕರ್ಮಕಥೆ"ಯು ರಕ್ಕಸತಂಗಡಿಗೆಯ ಕಾಳಗದಲ್ಲಿ ರಾಮರಾಯನ ಸೇನಾಧಿಪತ್ಯದಲ್ಲಿದ್ದ ವಿಜಯನಗರದ ಸೈನ್ಯವು ಹೇಗೆ ಸೋತು, ಅದರಿಂದ ರಾಮರಾಯನ ಮತ್ತು ವಿಜಯನಗರದ ನಾಶವಾಯಿತೆಂಬುದನ್ನು ಬಿತ್ತರಿಸುತ್ತದೆ. ಈ ಕಾದಂಬರಿಯು "ಕುಮುದಿನಿ"ಯಂತೆ ಗಳಗನಾಥರ ಸ್ವತಂತ್ರ ಕಾದಂಬರಿಯಲ್ಲ. ಮರಾಠಿ ಸಾಹಿತ್ಯದ ಆ ಕಾಲದ ಸುಪ್ರಸಿದ್ಧ ಕಾದಂಬರಿಕಾರರಾದ ಹರಿ ನಾರಾಯಣ ಆಪಟೆ ಅವರ ಕಾದಂಬರಿಯ ರೂಪಾಂತರವಾಗಿದೆ. ಮರಾಠಿ ಆಪಟೆಯವರಿಗೆ ವಿಜಯನಗರ ಸಾಮ್ರಾಜ್ಯದ ನಾಶವು "ವಜ್ರಾಘಾತ"ವಾಗಿದ್ದರೆ, ಕನ್ನಡಿಗರಾದ ಗಳಗನಾಥರಿಗೆ ಅದು "ಕನ್ನಡಿಗರ ಕರ್ಮಕಥೆ" ಆಯಿತು.

ಕೃಷ್ಣದೇವರಾಯನು ವಿಜಯನಗರವನ್ನು ಆಳುತ್ತಿದ್ದ ಕಾಲಕ್ಕೆ ಪ್ರತಾಪಶಾಲಿಯಾದ ಸೇನಾಪತಿ ರಾಮರಾಯನು ಪ್ರಸಿದ್ಧಿಗೆ ಬಂದನು. ಆತ ಒಬ್ಬ ಯವನತರುಣಿಯನ್ನು (ಮೆಹರ್ಜಾನ) ಕಂಡು ಮೋಹಿಸಿ, ಅವಳಿಗೆ ಆಸೆ ತೋರಿವರಿಸಿದನು. ಆದರೆ ಕೃಷ್ಣದೇವರಾಯನ ಅಳಿಯನಾಗುವ ಯೋಗ ಒದಗಿ ಬರಲು ಅವಳನ್ನು ನಿರ್ಲಕ್ಷಿಸಿದನು. ಕ್ರೋಧಗೊಂಡ ಅವಳು ಹುಟ್ಟಲಿರುವ ತನ್ನ ಮಗನಿಂದಲೇ ರಾಮರಾಯನ ಮೇಲೆ ಸೇಡು ತೀರಿಸಿಕೊಳ್ಳುವ ಪ್ರತಿಜ್ಞೆ ಮಾಡಿ ವಿಜಯನಗರವನ್ನು ತ್ಯಜಿಸಿದಳು. ರಾಮರಾಯ ಪಶ್ಚಾತ್ತಾಪದಿಂದಲೂ ಮನದ ತಳಮಳದಿಂದಲೂ ಗಾಸಿಗೊಂಡನು.

ಕೃಷ್ಣದೇವರಾಯನ ಮರಣದನಂತರ ಪಟ್ಟಕ್ಕೆ ಬಂದ ಅಚ್ಯುತರಾಯನ ಕಾಲಕ್ಕೆ ರಾಮರಾಯನು ಹಿಂದುಳಿದನು. ಆದರೆ ಚತುರನಾದ ಆತನು ಮುಂದೆ ಸದಾಶಿವರಾಯನನ್ನು ಪಟ್ಟಕ್ಕೆ ಕೂಡ್ರಿಸಿ, ತಾನೇ ಅರಸನಂತೆ ಮೆರೆಯತೊಡ-

ಗಿದನು. ವಿಜಾಪುರ, ಗೋವಳಕೊಂಡ, ಅಹಮ್ಮದನಗರ ಮೊದಲಾದ ಬಾದಶಹರನ್ನು ಒಬ್ಬರ ಮೇಲೊಬ್ಬರನ್ನು ಎತ್ತಿಕಟ್ಟಿ ತನ್ನ ವರ್ಚಸ್ಸನ್ನು ಬೆಳೆಯಿಸಿಕೊಂಡನು. ಕೊನೆಗೊಮ್ಮೆ ಮುಸಲ್ಮಾನ ಬಾದಶಹರಿಗೆ ರಾಮರಾಯನ ತಂತ್ರ ತಿಳಿದು, ಅವರು ತಮ್ಮತಮ್ಮಲ್ಲಿಯ ವೈರವನ್ನು ತ್ಯಜಿಸಿ ಒಂದಾಗಿ ವಿಜಯನಗರದ ಮೇಲೇರಿಬರಲು ಹೊಂಚುಹಾಕತೊಡಗಿದರು.

ಈ ಮಧ್ಯೆ ಮೆಹರ್ಜಾನಳು ತನ್ನ ಮಗ ರಣಮಸ್ತಾಖಾನನನ್ನು ವಿಜಾಪುರ ಬಾದಶಹನ ವಕೀಲನೆಂದು ನಿಯಮಿತನಾಗಿ ವಿಜಯನಗರಕ್ಕೆ ಬರುವಂತೆ ಯತ್ನಿಸಿದಳು ರಣಮಸ್ತಾಖಾನನನ್ನು ಕಂಡು ರಾಮರಾಯನಲ್ಲಿ ವಿಲಕ್ಷಣವಾದ ಪ್ರೇಮಭಾವವು ಉಂಟಾಯಿತು. ಅವನು ತನ್ನ ಮತ್ತು ಮೆಹರ್ಜಾನಳ ಮಗನಿರಬೇಕೆಂದು ಆತ ಭಾವಿಸಿದ. ರಣಮಸ್ತಾಖಾನನು ವಿಜಾಪುರದವರನ್ನು ಬಿಟ್ಟು ರಾಮರಾಯನ ಪಕ್ಷವನ್ನು ವಹಿಸಿದವರಂತೆ ವರ್ತಿಸಿದನು. ಆತನ ಕಪಟವನ್ನರಿಯದ ರಾಮರಾಯನು ಆತನಿಗೆ ಹೆಚ್ಚಿನ ಸವಲತ್ತುಗಳನ್ನೂ ಅಧಿಕಾರವನ್ನೂ ಕೊಟ್ಟು, ತನ್ನ ಆಪ್ತಮಂತ್ರಾಲೋಚಕನನ್ನಾಗಿ ಮಾಡಿಕೊಂಡನು. ಇದರಿಂದ ನಿಷ್ಠುರರಾದ ಕೆಲವು ಹಿಂದೂ ಸರದಾರರು ನೊಂದುಕೊಂಡರು.

ಒಂದು ಸಣ್ಣ ಕಾರಣಕ್ಕಾಗಿ ನಾಲ್ವರು ಸುಲ್ತಾನರು ವಿಜಯನಗರದ ಮೇಲೇರಿ ಬಂದರು. ಅಪಾರ ಸೈನ್ಯವುಳ್ಳ ರಾಮರಾಯ ಹೆದರಲಿಲ್ಲ. ಆದರೆ ಮುಸಲ್ಮಾನರ ಯುಕ್ತಿ–ಕುಯುಕ್ತಿಗಳೂ ರಣಮಸ್ತಾಖಾನನ ವಿಶ್ವಾಸಘಾತವೂ ಕಾರಣವಾಗಿ ರಾಮರಾಯನ ಸೈನ್ಯವು ಸೋತು ಓಡತೊಡಗಿತು. ರಣಮಸ್ತಾಖಾನನು ರಾಮರಾಯನನ್ನು ಕೊಂದು, ಅವನ ತಲೆಯನ್ನು ತಂದು ತನ್ನ ತಾಯಿ ಮೆಹರ್ಜಾನಳಿಗೆ ತೋರಿದ. ಅವಳು ಉಕ್ಕಿಬಂದ ದುಃಖದಿಂದ ಪತಿಯ ರುಂಡದೊಡನೆ ಪುಷ್ಕರಿಣಿಯ ಜಲದಲ್ಲಿ ಹಾರಿಕೊಂಡು ಪ್ರಾಣಬಿಟ್ಟಳು. ರಣಮಸ್ತಾಖಾನನು ಮೋಹಿಸಿದ ನೂರಜಹಾನಳು ಆತನ ಜನನವೃತ್ತಾಂತವನ್ನು ತಿಳಿದು, ಪಿತೃವಧೆ ಮಾಡಿದವನೆಂದು ಆತನನ್ನು ಜರೆದು ನಿರಾಕರಿಸಿದಾಗ, ಆತನೂ ಅವಳೊಡನೆ ಅದೇ ಪುಷ್ಕರಿಣಿಯಲ್ಲಿ ಹಾರಿಕೊಂಡು ಪ್ರಾಣಬಿಡುವನು.

ಮುಸಲ್ಮಾನ ಸೈನ್ಯವು ಅಖಂಡ ಮೂರು ದಿನಗಳವರೆಗೆ ವಿಜಯನಗರವನ್ನು ಸುಲಿಗೆಮಾಡಿ, ಸರ್ವಸ್ವವನ್ನೂ ದೋಚಿಕೊಂಡು ಹೋಗಿ ಪಟ್ಟಣವನ್ನು ಹಾಳುಗೆಡವಿತು.

—ಇದಿಷ್ಟು ಕಥಾನಕವನ್ನು ಲೇಖಕರು ೩೫೬ ಪುಟಗಳಷ್ಟು ದೊಡ್ಡ ಕಾದಂಬರಿಯಾಗಿ ಬರೆದಿರುವರು. ಈ ಕಾದಂಬರಿಯ ಕಥಾವಸ್ತು, ಸನ್ನಿವೇಶ ರಚನೆ, ಪಾತ್ರಪೋಷಣೆ ಮೊದಲಾದವುಗಳ ಗುಣದೋಷಗಳೆಲ್ಲ ಮೂಲ ಕಾದಂಬರಿಕಾರರಾದ ಆಪಟೆಯವರಿಗೇ ಅನ್ವಯಿಸಬೇಕು. ಆಪಟೆಯವರು ತಮ್ಮ ಕಾದಂಬರಿಯ ಮೂಲಧನಕ್ಕಾಗಿ Robert Sewell ಅವರ "A Forgo-

tten Empire' ಎಂಬ ಗ್ರಂಥವನ್ನೇ ಅವಲಂಬಿಸಿರುವರು. ಅದರಲ್ಲೂ ಮುಖ್ಯವಾಗಿ ಆ ಗ್ರಂಥದ "Destruction of Vijayanagar" ಎಂಬ ೧೫ನೆಯ ಪ್ರಕರಣವು ಅವರಿಗೆ ಬಹು ಸಹಾಯಕಾರಿಯಾಗಿದೆ. ಅಲ್ಲಿಯ ಅನೇಕ ವಿವರಗಳು ಕಾದಂಬರಿಯಲ್ಲಿ ಇದ್ದಕ್ಕಿದ್ದಂತೆ ಕಾಣಿಸಿಕೊಂಡಿವೆ.

ಕಲ್ಪಕ ಬುದ್ಧಿಯ ಆಪಟೆಯವರು ತಮ್ಮ ಪ್ರತಿಭೆಯನ್ನು ಈ ಕಾದಂಬರಿಯಲ್ಲಿ ಚೆನ್ನಾಗಿ ಪ್ರಕಟಿಸಿರುವರು. ರಾಮರಾಯನ ಅಪಾತ್ರಪ್ರೇಮ ಮತ್ತು ಆತನ ಕೃತಘ್ನತೆಗಳೇ ಮುಂದೆ ಆತನ ನಾಶಕ್ಕೆ ಕಾರಣವಾದುವೆಂದು ಅವರು ಪ್ರಭಾವಿಯಾಗಿ ನಿರೂಪಿಸಿರುವರು. ರಾಮರಾಯ–ಮೆಹರ್ಜಾನ ಇವರ ದುರಂತ ಪ್ರಣಯದ ಕಥೆಯೂ ವಿಜಯನಗರದ ರಾಜಕೀಯ ಕಥೆಯೂ ಜೊತೆಗೇ ಬೆಳೆಯುತ್ತ ಹೋಗುತ್ತವೆ. ರಾಮರಾಯನು ಮೆಹರ್ಜಾನಳನ್ನು ಕಂಡು ಮೋಹಿಸಿದಾಗಲೇ 'ವಿನಾಶಾಂಕುರ'ವು ಮೊಳೆಯಿತು; ರಾಮರಾಯನು ಮಹತ್ತ್ವಾಕಾಂಕ್ಷೆಯಿಂದ ಕೃಷ್ಣದೇವರಾಯನ ಮಗಳನ್ನು ವರಿಸಲು ಬಯಸಿದಾಗ ಅದು ಕುಡಿಯೊಡೆಯಿತು; ಮೆಹರ್ಜಾನಳ ತಾಮಸಿಕ ಸ್ವಭಾವವು ಅದಕ್ಕೆ ನೀರುಣಿಸಿ ಬೆಳೆಯಿಸಿತು; ರಾಮರಾಯನು ನೂರಜಹಾನಳನ್ನು ಅವಮಾನಪಡಿಸಿದುದು ಆ ಗಿಡಕ್ಕೆ ಗೊಬ್ಬರ ಹಾಕಿದಂತಾಯಿತು; ಕೊನೆಗೆ ರಾಮರಾಯನು ರಣಮಸ್ತಖಾನನನ್ನು ಕುರುಡು ಪ್ರೀತಿಯಿಂದ ಅತಿಯಾಗಿ ನಂಬಿ ಮೋಸ ಹೋಗಿ ಆತ ರಾಮರಾಯನ ತಲೆಯನ್ನು ಕತ್ತರಿಸುವಲ್ಲಿ ಅದು ಫಲಿತವಾಯಿತು! ಪರಿಣಾಮ ಸರ್ವಸ್ವನಾಶ! ಇದನ್ನು ಚಿತ್ರಿಸುವಲ್ಲಿ ಆಪಟೆಯವರು ಇತಿಹಾಸಕ್ಕೆ ಬಾಧೆ ತಟ್ಟದಂತೆ ಕಲಾತ್ಮಕವಾಗಿ ಕಥೆಯನ್ನು ಹೆಣೆದಿರುವರು.

ಅವರು ಸೃಷ್ಟಿಸಿದ ಮೆಹರ್ಜಾನಳು ಎಷ್ಟು ಸುಂದರಿಯೊ ಅಷ್ಟೇ ವಿಷಭರಿತಳೂ ಆಗಿದ್ದಳು. ಮಾರ್ಜಿನೆಯು ಅವಳನ್ನು ಕಾಳಸರ್ಪಕ್ಕೆ ಹೋಲಿಸಿದುದು ತೀರ ಸರಿ. ಅವಳ ಮಗ ರಣಮಸ್ತಖಾನನ ಕಥೆಯೂ ಅಷ್ಟೇ ದುರಂತವಾಗಿದೆ. ತನ್ನ ತಂದೆಯೆಂದು ಅರಿಯದೆ ತಾಯಿ ಮತ್ತು ಪ್ರೇಯಸಿಯ ಆಸೆಯಂತೆ ರಾಮರಾಯನ ತಲೆಯನ್ನು ಕತ್ತರಿಸಿ ತಂದು ತೋರಿಸಿದ. ಆದರೆ ಅದರಿಂದ ಯಾರಿಗೂ ಹಿತವಾಗಲಿಲ್ಲ. ಆತನ ಉದ್ಧತವೃತ್ತಿ, ನಿರ್ಭೀತಿ, ಕಾಪಟ್ಯ, ಶೌರ್ಯಗಳು ಕಾದಂಬರಿಯಲ್ಲಿ ಚೆನ್ನಾಗಿ ನಿರೂಪಿತವಾಗಿವೆ. ಆದರೆ ಇತಿಹಾಸಕಾರರು ಹೇಳುವಂಥ ರಾಮರಾಯನ ದರ್ಪ ಮತ್ತು ಮತ್ಸದ್ದಿತನಗಳು ಕಾದಂಬರಿಯಲ್ಲಿ ಚಿತ್ರಿತವಾಗಿಲ್ಲ. ಶೂರನಾದ ರಾಮರಾಜ ಕಾಮರಾಜನ ವಶನಾಗಿ ಅರ್ಧ ಹಾಳಾದರೆ, ರಣಮಸ್ತಖಾನನ ಮೇಲೆ ತೋರಿದ ಅತಿ ವಾತ್ಸಲ್ಯ ವಿಶ್ವಾಸಗಳಿಂದ ಸಂಪೂರ್ಣವಾಗಿ ಹಾಳಾದನು. ರಣಮಸ್ತಖಾನನ ಸೊಕ್ಕಿನ ವರ್ತನೆಯನ್ನು ತಾಳಿಕೊಳ್ಳುವ ರೀತಿ ರಾಮರಾಯನ ವ್ಯಕ್ತಿತ್ವಕ್ಕೆ ಕುಂದನ್ನೇ ತಂದಿದೆ. ಅಂತೂ ಕಾಮ–ಪ್ರೇಮಗಳ ಸುಳಿಯಲ್ಲಿ ಸಿಕ್ಕು ಕೊಚ್ಚಿಕೊಂಡು

ಹೋದ ರಾಮರಾಯನ ಚಿತ್ರವು ಓದುಗರ ಕರುಳನ್ನೂ ಮಿಡಿಯುತ್ತದೆ.

ಮೂಕನಂತೆ ನಟಿಸುವ, ರಾಮರಾಯನ ಸೇವಕ ಕರಿಯ 'ಟೂಣಪ ಧನಮಲ್ಲ'ನ ಪಾತ್ರಕ್ಕೆ ಕಾದಂಬರಿಯಲ್ಲಿ ಹೆಚ್ಚಿನ ಅವಕಾಶವಿಲ್ಲದಿದ್ದರೂ ಅದೊಂದು ವೈಶಿಷ್ಟ್ಯಪೂರ್ಣವಾದ ಪಾತ್ರ. ಆತ ತನ್ನ ಒಡೆಯನ ಪ್ರೇಯಸಿಯನ್ನೇ ಮೂಕವಾಗಿ ಪ್ರೇಮಿಸಿದ. ಆತನ ಆ ಮೂಕಪ್ರೇಮವು ಭಯಂಕರವಾಗಿದೆ.

ಕಾದಂಬರಿಯಲ್ಲಿ ರಾಮರಾಯ–ಮೆಹರ್ಜಾನರ ಪ್ರಣಯ ಸನ್ನಿವೇಶ, ರಣಮಸ್ತಾಖಾನನು ರಾಮರಾಯನ ತಲೆ ಕೊಯ್ಯುವ ಪ್ರಸಂಗ, ಕೊನೆಯಲ್ಲಿ ತಾಯಿ–ಮಗ ಇಬ್ಬರೂ ಪುಷ್ಕರಿಣಿಯಲ್ಲಿ ಹಾರಿಕೊಂಡು ಪ್ರಾಣ ಬಿಡುವ ಸನ್ನಿವೇಶ, ಮತ್ತು ಮುಸಲ್ಮಾನರು ವಿಜಯನಗರವನ್ನು ಹಾಳುಗೆಡವಿದ ಚಿತ್ರ —ಇವು ಅತ್ಯಂತ ಹೃದಯಸ್ಪರ್ಶಿಯಾಗಿವೆ. ಇಂಥ ಚಿತ್ರಗಳಿಂದ ಕಾದಂಬರಿಯ ವಾಚನೀಯತೆ ಹೆಚ್ಚಿದೆ. ಆಪಟೆಯವರ ತಂತ್ರ ಇಲ್ಲಿ ಸಂಪೂರ್ಣವಾಗಿ ಫಲಿಸಿದೆ.

ಗಳಗನಾಥರಿಗೂ ಈ ಕಾದಂಬರಿಯು ಅತ್ಯಂತ ಮಾರ್ಮಿಕವಾಗಿ ಕಂಡಿದೆ. ಅದುಕಾರಣವೇ ಅವರು ಇದನ್ನು ಹೆಚ್ಚಿನ ಕಳಕಳಿಯಿಂದ ಕನ್ನಡಿಸಿದ್ದಾರೆ. ಗಳಗನಾಥರು ಆಪಟೆಯವರ ಈ ಕಾದಂಬರಿಯನ್ನು ಅಕ್ಷರಶಃ ಭಾಷಾಂತರ ಮಾಡಿಲ್ಲ. ಇದೊಂದು ರೂಪಾಂತರವೆಂದು ಅವರೇ ಹೇಳಿರುವರು. ಮೂಲ ಮರಾಠಿ ಕೃತಿಯನ್ನೂ ಕನ್ನಡ ಅನುವಾದವನ್ನೂ ತುಲನಾತ್ಮಕವಾಗಿ ಪರೀಕ್ಷೆ ಮಾಡಿ, ಗಳಗನಾಥರು ಎಲ್ಲೆಲ್ಲಿ ಹೆಚ್ಚುಕಡಿಮೆ ಮಾಡಿಕೊಂಡಿದ್ದಾರೆಂಬುದನ್ನೂ, ಅವರ ಗುಣದೋಷಗಳನ್ನೂ ಚರ್ಚಿಸಲು ಹೆಚ್ಚಿನ ಅಭ್ಯಾಸ ಅವಶ್ಯ.

(೪)

"ಮಾಧವಕರುಣಾವಿಲಾಸ"ವು ೧೯೨೩ರಲ್ಲಿ ಪ್ರಕಟವಾಯಿತು. ಆದರ ಕೆಲವು ಭಾಗವು ಮೊದಲು "ಸದ್ಗುರು" ಮಾಸಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬಂದು ವಾಚಕರ ಮನವನ್ನು ಆಕರ್ಷಿಸಿಬಿಟ್ಟಿತು. "ಈ ಪ್ರಚಂಡ ಸುರಸ ತಾತ್ವಿಕ ಐತಿಹಾಸಿಕ ಕಾದಂಬರಿ"ಯನ್ನು ಬರೆದು ಮುಗಿಸಿ ಗಳಗನಾಥರಿಗೆ ಹಿಡಿಸಲಾರದಷ್ಟು ಸಂತೋಷವಾಯಿತಂತೆ. "ಮಾಧವಕರುಣಾವಿಲಾಸವನ್ನು ಪ್ರೇರಿಸುವವರು ಮಹಾತ್ಮರಾದ ಮಾಧವಾಚಾರ್ಯರು ; ಅವರು ಕರುಣಿಸಿ ಪ್ರೇರಿಸಿದ್ದನ್ನಷ್ಟು ಬರೆಯುವವನು ಪಾಮರನಾದ ಗಳಗನಾಥನು" ಎಂದು ಪ್ರಸ್ತಾವನೆಯಲ್ಲಿ ಹೇಳಿರುವಲ್ಲಿ ಲೇಖಕರ ಶ್ರದ್ಧಾ–ಭಕ್ತಿಗಳು ಪ್ರಕಟವಾಗಿವೆ.

"ಮಾಧವಕರುಣಾವಿಲಾಸ"ದಲ್ಲಿ ಗಳಗನಾಥರು ವಿಜಯನಗರ ಸಾಮ್ರಾಜ್ಯದ ಸಂಸ್ಥಾಪನೆಯ ಕಥೆಯನ್ನೇ ಹೇಳಿರುವರು. ಕರ್ನಾಟಕದ ಮೇಲೆ ಮಹಮ್ಮದೀಯರ ದಾಳಿಗಳು ಮತ್ತು ಅವುಗಳಿಂದ ಹಿಂದೂ ಧರ್ಮಕ್ಕೆ ಒದಗಿದ

ಗಂಡಾಂತರದ ಹಿನ್ನೆಲೆಯನ್ನು ಚಿತ್ರಿಸಿ, ಅಂಥ ಸಮಯದಲ್ಲಿ ಹುಕ್ಕ–ಬುಕ್ಕರು ವಿದ್ಯಾರಣ್ಯರೆಂದು ಖ್ಯಾತರಾದ ಮಾಧವಾಚಾರ್ಯರ ಪ್ರೇರಣೆಯಿಂದ ಹೇಗೆ ಹೊಸ ರಾಜ್ಯವನ್ನು ಸ್ಥಾಪಿಸಿದರೆಂಬುದನ್ನು ಈ ಬೃಹತ್ ಕಾದಂಬರಿ ವಿವರಿಸುತ್ತದೆ.

ಗುರುಗಳಾದ ವಿಷ್ಣುಶರ್ಮರ ಅನುಜ್ಞೆಯನ್ನು ಪಡೆದು ಬಂದ ಮಾಧವನು ದೇಶಕಾರ್ಯಕ್ಕೆ ತೊಡಗದ ಜೀವನವು ವ್ಯರ್ಥವೆಂದು ಬಗೆದನು. "ನೀನು ಒಂಟಿ ಹೊರೆಯ ಪುಸ್ತಕಗಳನ್ನು ಓದಿದ್ದು ವ್ಯರ್ಥವಲ್ಲವೇ ?... ಈಗ ಪುಸ್ತಕವನ್ನು ನೀನು ಕೈಮುಟ್ಟ ಕಟ್ಟಿ ಅತ್ತ ನಾಗವಂದಿಗೆಯ ಮೇಲೆ ಇಟ್ಟುಬಿಡು" ಎಂದು ತನಗೆ ತಾನೇ ಹೇಳಿಕೊಂಡು, ಸಾಧ್ವಿಯಾದ ಹೆಂಡತಿಯ ಅನುಮತಿ ಪಡೆದು ಪಂಪಾಕ್ಷೇತ್ರಕ್ಕೆ ಬಂದು ಉಗ್ರತಪಸ್ಸು ಮಾಡಿ ಲಕ್ಷ್ಮೀದೇವಿಯನ್ನು ಒಲಿಸಿಕೊಂಡು ಅವಳಿಂದ ಸುವರ್ಣವೃಷ್ಟಿಯ ವರವನ್ನು ಪಡೆದನು.

ಮುಸಲ್ಮಾನರ ಕೊಲೆ–ಸುಲಿಗೆ–ಅತ್ಯಾಚಾರಗಳು ಲಂಗುಲಗಾಮು ಇಲ್ಲದೆ ನಡೆದೇ ಇದ್ದುವು. ವರಂಗಲ್ಲಿನ ಪ್ರತಾಪರುದ್ರದೇವನ ಆಶ್ರಯವೂ ತಪ್ಪಿದ್ದರಿಂದ ಹಿಂದುಗಳನ್ನು ಮುಸಲ್ಮಾನರಿಂದ ರಕ್ಷಿಸುವವರೇ ಇಲ್ಲದಂತಾಗಿದ್ದರು. ಮಹಮ್ಮದ ತಘಲಖನಂತೂ ಹಿಂದುಗಳಿಗೆ ಯಮಸದೃಶನಾಗಿದ್ದನು. ಅವನ ಕ್ರೂರತನದಿಂದ ತಪ್ಪಿಸಿಕೊಳ್ಳಲು ಆತನ ಅಣ್ಣನ ಮಗನಾದ ಬಹಾವುದ್ದೀನನು ಆನೆಗೊಂದಿಯ ಪುರಾತನ ರಾಜವಂಶದ ಜಂಬುಕೇಶ್ವರನೆಂಬ ರಾಯನ ಮೊರೆ ಹೊಕ್ಕಿದ್ದನು.

ಇಂಥ ಕಾಲದಲ್ಲಿ ಕುರುಬರ ಹೆಗ್ಗನು ಮುಸಲ್ಮಾನರ ಉಪಟಳದಿಂದ ಕಂಗೆಟ್ಟವರಿಗೆಲ್ಲ ಸಹಾಯಮಾಡುತ್ತಿದ್ದನು. ಕುರುಬರ ಮಲ್ಲನ ಹೆಂಡತಿ ಚಿನ್ನಮ್ಮ ಮತ್ತು ಆನೆಗೊಂದಿಯ ದೇವರಾಯನ ಮಗಳಾದ ಪದ್ಮಿನಿ ಮೊದಲಾದ ಹಿಂದೂ ಸ್ತ್ರೀಯರನ್ನು ಹೆಗ್ಗನು ಮುಸಲ್ಮಾನರ ದವಡೆಯೊಳಗಿಂದ ಪಾರು ಮಾಡಿದ್ದನು. ಅದರಿಂದ ಹೆಗ್ಗನ ಗೌರವ ಹೆಚ್ಚಿ ಅನೇಕರು ಅವನ ದಂಡನ್ನು ಸೇರಿದರು.

"ಬಿಸಿ ಹತ್ತದೆ ಬೆಣ್ಣೆ ಕರಗುವದಿಲ್ಲ"ವೆಂಬಂತೆ ಕನ್ನಡಿಗರೂ ಈಗ ಜಾಗೃತರಾದರು. ಹೆಗ್ಗನಂತೆ ಆತನ ತಮ್ಮ ಬುಕ್ಕನೂ ತನ್ನದೊಂದು ಸೈನ್ಯವನ್ನು ಕಟ್ಟಿ ಮುಸಲ್ಮಾನರ ವಿರುದ್ಧ ಹೋರಾಡಲು ಸಿದ್ಧನಾಗುತ್ತಿದ್ದನು. ಪ್ರತಾಪರುದ್ರ-ದೇವನ ಮಗನಾದ ಕೃಷ್ಣನಾಯಕನೂ ಬಂದು ಬುಕ್ಕನನ್ನು ಕೂಡಿಕೊಂಡನು. ಆತನ ಸೈನ್ಯಸಿದ್ಧತೆಯು ದೇವಿಯ ಕೊಳ್ಳ ಎಂಬ ದುರ್ಗಮಪ್ರದೇಶದಲ್ಲಿ ನಡೆದಿತ್ತು. ಆತನಿಗೆ ರಹಮಾನಸಾಹೇಬ, ಅಬ್ದುಲ್‌ಸಾಹೇಬರಂಥ ನಿಷ್ಠ ಮುಸಲ್ಮಾನ ಸ್ನೇಹಿತರೂ ಇದ್ದರು.

ಕಾಸೀಮನು ಮಹಮ್ಮದ ತಘಲಕನ ಅತ್ಯಂತ ಶೂರ ಮತ್ತು ಕ್ರೂರ ಸೇನಾಪತಿಯಾಗಿದ್ದನು. ಆತನು ಹುಕ್ಕಬುಕ್ಕರ ತಂದೆಯಾದ ಸಂಗಮರಾಯ-

ನನ್ನು ಹಿಡಿದು ಸೆರೆಯಲ್ಲಿಟ್ಟಿದ್ದನು. ಅದರಂತೆ ಆನೆಗೊಂದಿಯ ದೇವರಾಯನ ಮಗಳು ಪದ್ಮಿನಿಯ ಮೇಲಿನ ಆಸೆಯಿಂದ ಅವಳನ್ನು ಅಪಹರಿಸಿ ತಂದು ಕಂಪಿಲಿಯ ಕೋಟೆಯಲ್ಲಿಟ್ಟು ತನ್ನನ್ನು ನಿಕಾ ಮಾಡಿಕೊಳ್ಳುವಂತೆ ಒತ್ತಾಯಪಡಿಸುತ್ತಿದ್ದನು. ಆದರೆ ಮಾಧವಾಚಾರ್ಯರ ಪ್ರಭಾವದಿಂದ ಕಾಶೀಮನ ಮನಃಪರಿವರ್ತನೆಯಾಯಿತು. ಆತ ಕನ್ನಡಿಗರಿಗೆ ಸ್ನೇಹಿತನಾದನು. ಮಾಧವಾಚಾರ್ಯರು ತಮ್ಮ ತಪಃಪ್ರಭಾವದಿಂದಲೂ ಪ್ರವಚನ ಹಿತೋಪದೇಶಗಳಿಂದಲೂ ಕನ್ನಡಿಗರನ್ನೆಲ್ಲ ಒಂದುಗೂಡಿಸಿದರು. ವಿರೂಪಾಕ್ಷಾರ್ಯ ಎಂಬ ವೀರಶೈವ ಜಂಗಮರ ಸಹಾಯವೂ ದೊರೆಯಿತು. ಮಾಧವಾಚಾರ್ಯರ ಮಾರ್ಗದರ್ಶನದಲ್ಲಿ ಹುಕ್ಕಬುಕ್ಕರು ಕಂಪಲಿಯ ಕೋಟೆಯನ್ನೂ ನಂತರ ಕಾಂಚನಗಡ ಕೋಟೆಯನ್ನೂ ಗೆದ್ದುಕೊಂಡರು.

ಮಾಧವಾಚಾರ್ಯರ ಮಾರ್ಗದರ್ಶನದಿಂದ ಕನ್ನಡಿಗರು ದಕ್ಷಿಣದಲ್ಲಿ ಕಾಲೂರುತ್ತಿದ್ದ ಮುಸಲ್ಮಾನರನ್ನು ಹೊಡೆದೋಡಿಸಿ ಜಯದಮೇಲೆ ಜಯಗಳನ್ನು ಗಳಿಸತೊಡಗಿದರು. ಮಾಧವಾಚಾರ್ಯರಿಂದಲೇ ಇದೆಲ್ಲ ಸಾಧ್ಯವಾಯಿತೆಂದು ಅರಿತ ಜನರು ಅವರಿಗೆ ತನುಮನಧನಗಳನ್ನು ಅರ್ಪಿಸಲು ಸಿದ್ಧರಾದರು. ಮಾಧವಾಚಾರ್ಯರು ಸ್ವರಾಜ್ಯಸ್ಥಾಪನೆಯ ಕಾರ್ಯಕ್ಕೆ ಸಕಲ ಸಂಪತ್ತಿನ ಸಹಾಯ ಮಾಡಬೇಕೆಂದು ಎಲ್ಲರಿಗೂ ಸಂದೇಶ ಕಳಿಸಿದರು. ಅದರಂತೆ ಬಡವ-ಬಲ್ಲಿದರೆನ್ನದೆ ಕನ್ನಡಿಗರ ಅಪಾರ ಜನಸಾಗರವು ಚಿತ್ರಾಪೂರ್ಣಿಮೆಯ ದಿನ ಹಂಪೆಯಲ್ಲಿ ನೆರೆಯಿತು. ಅವರೆಲ್ಲ ತಮ್ಮಲ್ಲಿದ್ದ ಎಲ್ಲ ಸಂಪತ್ತನ್ನೂ ಬಂಡಿ, ಆನೆ, ಒಂಟೆ, ಹೇಸರಗತ್ತೆ, ಕುದುರೆ, ಎತ್ತುಗಳ ಮೇಲೆ ಹೇರಿಕೊಂಡು ಬಂದು ಮಾಧವಾಚಾರ್ಯರಿಗೆ ಅರ್ಪಿಸಿದರು. ಅದನ್ನು ಎಲ್ಲರಿಂದಲೂ ಸ್ವೀಕರಿಸಲು ಮಾಧವಾಚಾರ್ಯರಿಗೆ ಸಾಧ್ಯವಿರಲಿಲ್ಲ. ಪಂಪಾಪತಿಯ ರಥೋತ್ಸವ ಮುಗಿದ ಬಳಿಕ ಮಾಧವಾಚಾರ್ಯರು ನೆರೆದ ಜನರನ್ನು ಕುರಿತು "ನೀವು ಇದ್ದ ಸ್ಥಳದಲ್ಲಿಯೇ ಕೃಷ್ಣಾರ್ಪಣಬುದ್ಧಿಯಿಂದ ಸ್ವರಾಜ್ಯಕ್ಕಾಗಿ ತಂದ ಧನವನ್ನು ನೆಲಕ್ಕೆ ಸುರುವಿಬಿಡಿರಿ" ಎಂದು ಹೇಳಿದರು. ಜನ ಅದರಂತೆ ಮಾಡಿತು. ಅದುವೇ ವರದಾನವಿತ್ತ ಸುವರ್ಣವೃಷ್ಟಿಯಾಯಿತು.

ನಂತರ ಸಡಗರದ ಸಮಾರಂಭಗಳು ನಡೆದುವು. ಸಂಗಮರಾಜನು ಪಟ್ಟಾಭಿಷಿಕ್ತನಾದನು. ಹುಕ್ಕನು ಯುವರಾಜನಾದನು ಪದ್ಮಿನೀದೇವಿಯೊಂದಿಗೆ ಹುಕ್ಕನ ಮದುವೆಯೂ ನೆರವೇರಿತು. ಸಮಾರಂಭಗಳನ್ನು ನೋಡುತ್ತಿದ್ದ ದೇಶಾಭಿಮಾನಿಗಳ ನೇತ್ರಗಳು ಆನಂದಬಾಷ್ಪಪೂರ್ಣವಾದುವು. "ಮಹಾತ್ಮರ ಭವಿಷ್ಯಕಥನ"ದೊಂದಿಗೆ ಕಾದಂಬರಿಯು ಮುಗಿಯುತ್ತದೆ

ಗಳಗನಾಥರು ಕಾದಂಬರಿಯ ಪ್ರಸ್ತಾವನೆಯಲ್ಲಿ "ಈ ಕಾದಂಬರಿಯೊಳಗಿನ ಮುಖ್ಯ ಮುಖ್ಯ ಪಾತ್ರಗಳು ನೀವೆಂಬ ಬಗ್ಗೆ, ಹಾಗು ಮಾಧವಾರ್ಯರ

ಸುವರ್ಣವೃಷ್ಟಿಯೇ ಮೊದಲಾದ ದೈವೀಸಹಾಯದಿಂದ ಹುಕ್ಕಬುಕ್ಕರು ವಿಜಯನಗರದ ರಾಜ್ಯವನ್ನು ಸ್ಥಾಪಿಸಿದರೆಂಬ ಬಗ್ಗೆ ಇತಿಹಾಸವೂ, ಆಖ್ಯಾಯಿಕೆಯೂ, ದಂತಕಥೆಗಳೂ, ತಾಮ್ರಪಟ–ಶಿಲಾಶಾಸನಗಳೂ ಸಾಕ್ಷಿಯಾಗಿರುವವು" ಎಂದು ಹೇಳಿರುವರು. ಆದರೆ ಅವರು ಯಾವ ಉಚಿತವಾದ ಆಕರಗಳನ್ನು ಬಳಸಿಕೊಂಡರೆಂಬುದು ಸ್ಪಷ್ಟವಿಲ್ಲ. ವಿಜಯನಗರ ಸಾಮ್ರಾಜ್ಯಸ್ಥಾಪನೆಯ ಬಗ್ಗೆ ಇತಿಹಾಸಜ್ಞರಲ್ಲಿ ಬಹಳಷ್ಟು ಭಿನ್ನಮತವಿದೆ.

ಹುಕ್ಕಬುಕ್ಕರು ಕನ್ನಡಿಗರೇ ತೆಲುಗರೇ, ಅವರು ಹೊಯ್ಸಳ ಅರಸರ ಸೇವೆಯಲ್ಲಿದ್ದರೇ ಅಥವಾ ವರಂಗಲ್ಲಿನ ಪ್ರತಾಪರುದ್ರದೇವನ ಸೇವೆಯಲ್ಲಿದ್ದರೆ, ಅವರನ್ನು ದಿಲ್ಲಿಯ ಸುಲ್ತಾನನು ಸೆರೆಹಿಡಿದು ಮುಸಲ್ಮಾನದೀಕ್ಷೆ ಕೊಟ್ಟನಂತರ ಅವರು ಪುನಃ ಹಿಂದುಗಳಾಗಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರೆ, ವಿದ್ಯಾರಣ್ಯರೇ ಮಾಧವಾಚಾರ್ಯರೇ, ಮಾಧವಾಚಾರ್ಯರು ವಿದ್ಯಾರಣ್ಯರ ಸಹೋದರರೇ, ಮತ್ತು ವಿದ್ಯಾರಣ್ಯರಿಗೂ ಸಾಮ್ರಾಜ್ಯಸ್ಥಾಪನೆಗೂ ಏನೂ ಸಂಬಂಧವೇ ಇಲ್ಲವೇ?—ಇದೇ ಮೊದಲಾದ ಪ್ರಶ್ನೆಗಳ ಬಗ್ಗೆ ಇತಿಹಾಸಕಾರರಲ್ಲಿ ಬಹಳ ಭಿನ್ನಾಭಿಪ್ರಾಯಗಳಿವೆ.[೩]

ಆದರೆ ಗಳಗನಾಥರು ಮಾತ್ರ ವಿದ್ಯಾರಣ್ಯರೆಂದು ಖ್ಯಾತರಾದ ಮಾಧವಾಚಾರ್ಯರೇ ಹುಕ್ಕಬುಕ್ಕರಿಗೆ ಮಾರ್ಗದರ್ಶನ ಮಾಡಿ ಅವರಿಂದ ಕನ್ನಡರಾಜ್ಯ ಸ್ಥಾಪಿಸಿದರೆಂದು ಪ್ರತಿಪಾದಿಸಿರುವರು. ಹುಕ್ಕಬುಕ್ಕರು ವರಂಗಲ್ಲಿನಿಂದ ಬಂದಿದ್ದರೂ ಅವರು ಕನ್ನಡಿಗರಾಗಿದ್ದರೆಂದು ಅವರು ಪ್ರತಿಪಾದಿಸಿರುವರು.[೪]

ಸರ್ವಜ್ಞ ವಿಷ್ಣುಶರ್ಮರ ಶಿಷ್ಯನಾಗಿದ್ದ "ಮಾಧವನು ದ್ರೋಣಾಚಾರ್ಯರಂತೆ ಚತುರ್ವೇದಜ್ಞನಂತೂ ಇದ್ದೇ ಇರುವನು; ಆದರೆ ಆತನು ಭಾರತೀಯ ಆ ಶ್ರೇಷ್ಠ ಆಚಾರ್ಯನಂತೆ ಅಪ್ರತಿಮ ಧನುರ್ಧಾರಿಯಾಗಿರದಿದ್ದರೂ ರಾಜಕಾರಣಪಟುವಾಗಿರುವನು. ತರುಣರ ಮನಸ್ಸನ್ನು ಎಳೆದುಕೊಳ್ಳುವಲ್ಲಿ ಮಾಧವನು ಬಲು

---

೩. ನೋಡಿರಿ : *A Forgotten Empire* by Robert Sewell.
The Delhi Sultanae (Bharateeya Vidya Bhavan.)
Social and Political Life in Vijayanagar by Dr. B. A. Saletore.
Beginnings of Vijayanagar by H. Heras.
The Cambridge History of India, Vol. III.
ವಿಜಯನಗರ ಸಾಮ್ರಾಜ್ಯ ಸ್ಥಾಪನೆ—ಎಸ್. ಬಿ. ಕೋಡದ.

೪. "ಹುಕ್ಕದೊರೆಯು ಕುರುಬನಾಗಿರದೆ ಯಾದವಕುಲೋತ್ಪನ್ನ ಕ್ಷತ್ರಿಯನಾಗಿದ್ದು, ವರಂಗಳ ರಾಜಧಾನಿಯು ಹಾಳಾದಾಗ ಕುರುಬರ ವೇಷದಿಂದ ತನ್ನ ತಮ್ಮನಾದ ಬುಕ್ಕನೊಡನೆ ಆತನು ದಕ್ಷಿಣಕ್ಕೆ ಬಂದಿದ್ದನು." —ಮಾಧವಕರುಣಾವಿಲಾಸ (೩ನೆಯ ಮುದ್ರಣ), ಪುಟ—೭೬೪.

ಬಲ್ಲಿದನು ಆತನ ಯುಕ್ತಿಗಂತೂ ಎಣೆಯಿಲ್ಲ" ಎಂದು ಆರಂಭದಲ್ಲಿ ಹೊಗಳಿಸಿ ಕೊಂಡಿರುವ ಇಂಥ ಶ್ರೇಷ್ಠ ವ್ಯಕ್ತಿತ್ವವು ಮಾತ್ರ ಮುಂದೆ ನಿರೂಪಿತವಾಗಿಲ್ಲ. ಗಳಗನಾಥರು ಮಾಧವಾಚಾರ್ಯರು ಮೊದಲು ಗೃಹಸ್ಥಾಶ್ರಮಿಗಳಾಗಿದ್ದರೆಂದೂ ಚಾಲುಕ್ಯಕುಲದ ಅಮಾತ್ಯನಾದ ವೀತಿಹೋತ್ರಿಯ ಮಗಳಾದ ವೈತಿಹೋತ್ರಿ-ಯನ್ನು ಮದುವೆಯಾಗಿದ್ದರೆಂದೂ, ವೈತಿಹೋತ್ರಿಯು ತನ್ನ ಪತಿಯ ಕಾರ್ಯಕ್ಕೆ ವಿಘ್ನವಾಗದೆ ಅವನನ್ನು ಪ್ರೋತ್ಸಾಹಿಸಿ ಕಳುಹಿದಳೆಂದೂ ನಿರೂಪಿಸಿರುವರು.

ಕಾದಂಬರಿಯಲ್ಲಿ ಬಂದಿರುವ ಉಳಿದ ಪಾತ್ರಗಳಲ್ಲಿ ಮಹಮ್ಮದ ತಘಲಕ, ನಾಯಬಸಾಹೇಬ, ಬಹಾವುದ್ದೀನ ಮೊದಲಾದವರು ಐತಿಹಾಸಿಕ ವ್ಯಕ್ತಿಗಳೇ ಆಗಿದ್ದಾರೆ. ಆದರೂ ಗಳಗನಾಥರು ಕಾದಂಬರಿಯಲ್ಲಿ ಚಿತ್ರಿಸಿದಂತೆಯೇ ಅವರು ಇದ್ದರೆಂದು ಹೇಳಲು ಬರುವಂತಿಲ್ಲ. ಕಾಸೀಮ, ರಹಮಾನ, ಅಬ್ದುಲ್, ಮಲಿಕ, ಮಲ್ಲಸರ್ಜ, ಆತನ ಹೆಂಡತಿ ಚಿನ್ನಮ್ಮ, ಮಾದರ ದುರಗಪ್ಪ, ತಿರುವೇಂಕಟ, ವಿರೂಪಾಕ್ಷಾರ್ಯ, ಪದ್ಮಿನಿ ಮೊದಲಾದವರು ಲೇಖಕರ ಕಲ್ಪನಾಸೃಷ್ಟಿಯವರು. ಇವರಲ್ಲಿ ತಘಲಕ ಮಹಮ್ಮದನು ಮಾತ್ರ ತುಂಬ ಜೀವಂತವಾಗಿ ಕಾಣುವನು. ಗಳಗನಾಥರು ಈ "ಹುಚ್ಚ ಮಹಮ್ಮದ"ನ ಕ್ರೂರತನವನ್ನೂ ವಿಕ್ಷಿಪ್ತತೆ-ಯನ್ನೂ ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿರುವರು.

ಉಡದ ಸಹಾಯದಿಂದ ಕೋಟೆಯನ್ನೇರುವುದು, ರಾತ್ರಿಯಲ್ಲಿ ಕಪಟ-ದಿಂದ ವೈರಿಗಳ ಮೇಲೇರಿ ಹೋಗಿ ಅವರನ್ನು ಹಣ್ಣು ಮಾಡುವುದು, ಅನೇಕ ತಂತ್ರ-ಕುತಂತ್ರಗಳನ್ನು ಬಳಸಿ ವೈರಿಗಳನ್ನು ದಂಗುಬಡಿಸುವುದು—ಇವೇ ಮೊದಲಾದ ತಂತ್ರಗಳಲ್ಲಿ ಮರಾಠಾವೀರರ ಕಾದಂಬರಿಗಳ ಪ್ರಭಾವವನ್ನು ಗುರುತಿಸಬಹುದಾಗಿದೆ.

ಅನೇಕ ಸನ್ನಿವೇಶಗಳನ್ನು ಲೇಖಕರು ರೋಮಾಂಚಕಾರಿಯಾಗಿ ಚಿತ್ರಿಸಿರು-ವರಾದರೂ, ಒಟ್ಟಿನಲ್ಲಿ ಕಾದಂಬರಿಯ ಬಂಧದಲ್ಲಿ ಹೆಚ್ಚಿನ ಶೈಥಿಲ್ಯ ಕಂಡು-ಬಂದಿದೆ. ಅದಕ್ಕೆ ಮುಖ್ಯ ಕಾರಣವೆಂದರೆ ಗಳಗನಾಥರು "ಮಾಧವಕರುಣಾ ವಿಲಾಸ"ವನ್ನು ಕೇವಲ ಕಾದಂಬರಿಯನ್ನು ಬರೆಯಬೇಕೆಂಬ ಕಲಾದೃಷ್ಟಿಯಿಂದ ಬರೆದಿಲ್ಲವೆಂಬುದೇ ಆಗಿದೆ. "ಈ ಕಾದಂಬರಿಯನ್ನು ಬರಿಯ ಕಾದಂಬರಿ ಎಂಬ ದೃಷ್ಟಿಯಿಂದ ಬಡಬಡ ಓದಿಬಿಡುವದಕ್ಕಿಂತ ಇದೊಂದು ಅಭ್ಯಾಸಮಾಡತಕ್ಕ ಪುಸ್ತಕವೆಂದು ವಿಚಾರಪೂರ್ವಕವಾಗಿ ಓದುವದು ಲಾಭಕರವಾಗಿರುವದೆಂ"ದು ಅವರೇ ಪ್ರಸ್ತಾವನೆಯಲ್ಲಿ ಹೇಳಿರುವರು. ಹಾಗೆ ಹೇಳಲಿಕ್ಕೆ ಕಾರಣವೆಂದರೆ ಅವರು ಕಾದಂಬರಿಯಲ್ಲಿ ಧರ್ಮ, ವೈದಿಕ ಮತ್ತು ಅವೈದಿಕಧರ್ಮಗಳು, ಧರ್ಮದ ದುರಭಿಮಾನ, ಅಸ್ಪೃಶ್ಯತೆ ಮತ್ತು ಧಾರ್ಮಿಕವ್ಯವಹಾರ, ಅಸ್ಪೃಶ್ಯತೆ ಮತ್ತು ರಾಜಕೀಯ ವ್ಯವಹಾರ ಸಹಯೋಗ, ಅಸಹಯೋಗ, ಅಹಿಂಸಾತತ್ತ್ವ ಹಾಗು ರಾಜಕೀಯ ಅಹಿಂಸೆ ಇವೇ ಮೊದಲಾದ ವಿಷಯಗಳನ್ನು ಕುರಿತು ವಿಸ್ತಾರವಾಗಿ

ಪ್ರತಿಪಾದಿಸಿರುವರು,[೫] ಮಾಧವಾಚಾರ್ಯ ಮತ್ತು ವಿರೂಪಾಕ್ಷಾರ್ಯರ ಪ್ರವಚನ, ಉಪದೇಶ, ನೀತಿಬೋಧೆ ಇವುಗಳಿಂದ ಭಾರವಾಗಿ ಮಧ್ಯೆ ಮಧ್ಯೆ ಕಾದಂಬರಿಯ ಕಥೆಯು ಕುಂಟುತ್ತ ಸಾಗುತ್ತದೆ. ಅಲ್ಲದೆ ಈ ಮಹಾಪುರುಷರು ಕೇವಲ ಉಪದೇಶದ ಅಸ್ತ್ರದಿಂದಲೇ ಕಾಸೀಮ, ತಿರುವೇಂಕಟರಂತಹ ವೈರಿಗಳನ್ನೂ ಸಹ ಸೋಲಿಸಿಬಿಡುವರು ! ಇದು, ಈಗ ಕಾದಂಬರಿಯಲ್ಲಿ ಚಿತ್ರಿತವಾದಂತೆ, ಸಹಜ, ವಾಸ್ತವ ಎಂದು ಕಾಣುವುದಿಲ್ಲ. ಅದರಿಂದ ಪಾತ್ರಗಳು ತಮ್ಮ ಜೀವಕಳೆಯನ್ನು ಕಳೆದುಕೊಳ್ಳುತ್ತವೆ. ಆದರೂ "ಮಾಧಕರುಣಾವಿಲಾಸ"ವು ಸೃಷ್ಟಿಯಾದ ಕಾಲಕ್ಕೆ ಕನ್ನಡ ವಾಚಕರು ಇದನ್ನು ಒಳ್ಳೇ ಆದರದಿಂದಲೇ ಬರಮಾಡಿ-ಕೊಂಡರು.

ಸ್ವತಃ ಲೇಖಕರಿಗೂ ತಮ್ಮ ಈ ಬೃಹತ್ ಕೃತಿಯ ಬಗ್ಗೆ ಹೆಚ್ಚಿನ ಅಭಿ-ಮಾನವಿದೆ.[೬] ಪ್ರಸ್ತಾವನೆಯಲ್ಲಿ "ನನ್ನ ಲೇಖನವ್ಯವಸಾಯದ ಅಖಂಡವಾದ ಹದಿನೆಂಟು ವರ್ಷಗಳ ಅವಧಿಯಲ್ಲಿ ಇಷ್ಟು ಗೌರವದ ಹಾಗು ಇಷ್ಟು ದೊಡ್ಡದಾದ ಸ್ವತಂತ್ರ ವಿಚಾರದ ಪುಸ್ತಕವನ್ನು ನಾನು ಬರೆಯಲೇ ಇಲ್ಲ"—ಎಂದು ಹೇಳಿ ಗಳಗನಾಥರು ಈ ಕಾದಂಬರಿಯನ್ನು ಓದಿ ಕನ್ನಡಿಗರೂ, ಭಾರತೀಯರೂ ಜಾಗೃತರಾಗಬೇಕೆಂದು ಬಯಸಿರುವರು.[೭] ಅಲ್ಲದೆ ಬ್ರಾಹ್ಮಣ, ವೀರಶೈವ ಜಂಗಮ, ಮುಸಲ್ಮಾನ ಮತ್ತು ಹೊಲೆಯ ಇವರು ಒಟ್ಟಾದರೆ ಸ್ವಾತಂತ್ರ್ಯವನ್ನು ಸಹಜವಾಗಿ ಪಡೆಯಬಹುದೆಂಬುದನ್ನು ಕಾದಂಬರಿಯಲ್ಲಿ ಮಾಧವಾ-ಚಾರ್ಯ, ವಿರೂಪಾಕ್ಷಾರ್ಯ, ಕಾಸೀಮ ಮತ್ತು ಮಾದರ ದುರ್ಗಪ್ಪ ಇವರ ಮುಖಾಂತರ ನಿರೂಪಿಸಿರುವರು. ಆದರಂತೆ ಮುಸಲ್ಮಾನರ ವಿರುದ್ಧ ಹಿಂದುಗಳ ಭಾವನೆಯನ್ನು ಕೆರಳಿಸಬಾರದೆಂಬ ಗಳಗನಾಥರ ಮನೋಭಾವವನ್ನೂ ಇಲ್ಲಿ ಗುರುತಿಸಬಹುದಾಗಿದೆ. ಅವರು ಹಿಂದೂ ಸೈನ್ಯವನ್ನು "ಕನ್ನಡ ಸೈನ್ಯ"ವೆಂದು ಕರೆದಿರುವುದನ್ನೂ ನೋಡಬೇಕು.

"ಅವರ (ಗಳಗನಾಥರ) ಉಳಿದ ಕಾದಂಬರಿಗಳ ಮಟ್ಟಕ್ಕೆ 'ಮಾಧವ ಕರುಣಾವಿಲಾಸ'ವು ಬರಲಿಲ್ಲ. ಇದಕ್ಕೆ ಕಾರಣಗಳಿಲ್ಲದಿಲ್ಲ. ವಿಜಯನಗರ

---

೫. "ಮಾಧವನಕರುಣಾವಿಲಾಸ"ದ ೨೮ ರಿಂದ ೪೦ ಹಾಗು ೪೬ನೆಯ ಪ್ರಕರಣಗಳನ್ನು ಮುಖ್ಯವಾಗಿ ಅವಲೋಕಿಸಬೇಕು.

೬. ಗಳಗನಾಥರ "ಸದ್ಗುರುಪ್ರಭಾವ" (೧೯೨೮) ಎಂಬ ಗ್ರಂಥದಲ್ಲಿ ೩೩, ೪೧, ೧೧೬ ಮತ್ತು ೧೧೭ನೆಯ ಪುಟಗಳನ್ನು ನೋಡಿರಿ.

೭. "ಕನ್ನಡಿಗರನ್ನು ಹಿಂದಕ್ಕೆ ಉದ್ಧರಿಸಿದ ಮಹಾತ್ಮರಾದ ಆ ಮಾಧವಾಚಾರ್ಯರು ಈಗಾ-ದರೂ ಕನ್ನಡಿಗರೊಡನೆ ಇಡಿಯ ಭಾರತಭೂಮಿಯನ್ನೇ ಜಾಗೃತಗೊಳಿಸುವದಕ್ಕಾಗಿ ನನ್ನ ಮುಖಾಂತರ ಈ ಕಾದಂಬರೀ ರೂಪದಿಂದ ಬೋಧಿಸಿರುವರೆಂದು ತಿಳಿದು ನೀವು ಜಾಗೃತರಾಗತಕ್ಕದ್ದು.—"ಮಾಧವನಕರುಣಾವಿಲಾಸ" (ಮೂರನೆಯ ಆವೃತ್ತಿ) ಪ್ರಸ್ತಾವನೆ; ಪುಟ: ೬.

ಸಾಮ್ರಾಜ್ಯದ ಸಂಸ್ಥಾಪನೆಯಂಥ ವಸ್ತು ಸಹಜವಾಗಿಯೇ ಆಕರ್ಷಕವಾಗಬಹುದಿತ್ತು. ಆದರೆ ಕಥಾವಸ್ತು ಗಳಗನಾಥರ ಶಕ್ತಿಯನ್ನು ಮೀರಿ ದೊಡ್ಡದಾಯಿತೋ, ಅಥವಾ ತತ್ತ್ವ ಧರ್ಮಗಳ ಮೇಲಿನ ದೀರ್ಘ ಚರ್ಚೆಗಳಿಂದ ಅವರೇ ಅದನ್ನು ದೊಡ್ಡದಾಗಿಸಿದರೋ ಹೇಳುವದು ಬಿಗಿಯಾಗಿದೆ....ಅಪ್ಟೆ ಶೈಲಿ ಈ ಕಾದಂಬರಿಗೆ ಹೊಂದಿಕೆಯಾಗದಿರುವದೇ ದೋಷವಾಗಿದೆ. ಇದರ ಜೊತೆಗೆ ನಡುನಡುವೆ ಬರುವ ತತ್ತ್ವಮಥನ ಹಾಗು ಧರ್ಮದ ದೀರ್ಘ ಚರ್ಚೆಗಳು ತಲೆಹಿಡಿಸುತ್ತವೆ. ಆ ಚರ್ಚೆ-ವಾದಗಳಲ್ಲಿ ವಿದ್ಯಾರಣ್ಯರ ವ್ಯಕ್ತಿತ್ವದ ಓಜಸ್ಸು ಕಂಡುಬರುವದಿಲ್ಲ. ಜಾತೀಯತೆ, ಅಸ್ಪೃಶ್ಯತೆ ಮೊದಲಾದ ಸಮಕಾಲೀನ ಜೀವನದ ಸಮಸ್ಯೆಗಳು ಬರುವದರಿಂದ ಒಮ್ಮೊಮ್ಮೆ ಈ ಪಾತ್ರಗಳ ಗುರುತು ಕೂಡಾ ತಪ್ಪಿಹೋಗುವಂತಾಗುತ್ತದೆ. ಮೊದಲಿನ ಅನುಭವವನ್ನೆಲ್ಲ ಉಪಯೋಗಿಸಿಕೊಂಡು, ಇತಿಹಾಸದ ಪುನಃಸೃಷ್ಟಿಯೊಂದನ್ನೆ ಲಕ್ಷ್ಯದಲ್ಲಿಟ್ಟು ಈ ಕಾದಂಬರಿಯನ್ನು ಬರೆದಿದ್ದರೆ ಕನ್ನಡದಲ್ಲಿ ಇದೊಂದು ಯುಗವನ್ನೇ ನಿರ್ಮಿಸಬಹುದಾಗಿತ್ತು"[೮] ಎಂದು ಆಧುನಿಕ ವಿಮರ್ಶಕರು "ಮಾಧವಕರುಣಾವಿಲಾಸ"ದ ಬಗ್ಗೆ ನಿರಾಶೆಯಿಂದ ನುಡಿದುದೂ ಉಂಟು. ಆದರೆ ನಿಜವಾಗಿ ವಿಚಾರಮಾಡಿ ನೋಡಿದರೆ "ಮಾಧವಕರುಣಾವಿಲಾಸ"ವನ್ನು ಆಧುನಿಕ ವಿಮರ್ಶಾ ದೃಷ್ಟಿಯಿಂದ ನೋಡುವುದು ಅಷ್ಟು ಸಮಂಜಸವಾಗಲಾರದು. ಇಂಥ ಕೃತಿಗಳು ರಚನೆಯಾದ ಕಾಲ–ಪರಿಸರವನ್ನು ಗಮನದಲ್ಲಿಟ್ಟುಕೊಂಡೇ ನಾವು ಅವುಗಳ ಬೆಲೆ ಕಟ್ಟಬೇಕು. ಹಾಗೆ ನೋಡಿದರೆ "ಮಾಧವಕರುಣಾವಿಲಾಸ"ವು ಅಂದಿನ ವಾಚಕರನ್ನು ಸಂಪೂರ್ಣವಾಗಿ ತೃಪ್ತಿಪಡಿಸಿತ್ತು.[೯] ಗಳಗನಾಥರ ವಾಚಕರು "ಕಾದಂಬರಿಯು ಬಲು ಸವಿ"[೧೦] ಎಂದೇ ಕೊಂಡಾಡಿದರು.

ಏನೇ ಆದರೂ "ಮಾಧವಕರುಣಾವಿಲಾಸ"ಕ್ಕೆ ಕನ್ನಡ ಕಾದಂಬರೀ ಇತಿಹಾಸದಲ್ಲಿ ಒಂದು ವಿಶಿಷ್ಟವಾದ ಸ್ಥಾನವಿದೆಯೆಂದು ಒಪ್ಪಲೇಬೇಕಾಗುವುದು.

(೫)

"ದುರ್ಗದ ಬಿಚ್ಚುಗತ್ತಿ" ಅಥವಾ "ಮುರಗೀಶ ಮಹಿಮೆ" ಎಂಬ ಕಾದಂಬರಿಯ ಮೊದಲನೆಯ ಭಾಗವು ೧೯೩೮ರಲ್ಲಿ ಗಳಗನಾಥರ 'ಸಾಲ ತೀರಿಸುವ ಪುಸ್ತಕಗಳ' ಮಾಲಿಕೆಯಲ್ಲಿ ಪ್ರಕಟವಾಯಿತು. "ಮಾಧವಕರುಣಾವಿಲಾಸ"ವನ್ನು ಮಾಧವಾಚಾರ್ಯರು ಪ್ರೇರಿಸಿದಂತೆ ಇದನ್ನು ಶ್ರೀ

---

೮. ಕೆ. ಡಿ. ಕುರ್ತಕೋಟಿ—"ಯುಗಧರ್ಮ ಹಾಗು ಸಾಹಿತ್ಯದರ್ಶನ", ಪುಟ ೧೮೫-೧೮೬.

೯. ಕಾದಂಬರಿಯ ಪ್ರಥಮ ಮುದ್ರಣದ ನೂರು ಸಾವಿರ ಪ್ರತಿಗಳು ೧೯೨೮ರ ಸಮಯಕ್ಕೆ ಮಾರಾಟವಾಗಿದ್ದವು ಎಂಬುದನ್ನೂ ಗಮನಿಸಬೇಕು.

೧೦. "ಮಾಧವಕರುಣಾವಿಲಾಸ", ಪ್ರಸ್ತಾವನೆ, ಪುಟ ೮.

ಮುರಗೀಶ ಗುರುವರರು ತಮಗೆ ಪ್ರೇರಿಸಿ ಬರೆಸಿದರೆಂದು ಗಣನಾಥನು ಹೇಳಿರುವರು.

ಕಾದಂಬರಿಯ ಮೊದಲನೆಯ "ನಾಯಕರ ಮೂಲ ಪೀಠಿಕೆ" ಮತ್ತು ಎರಡನೆಯ "ನಾಯಕರ ಉತ್ಕರ್ಷ" ಎಂಬ ಪ್ರಕರಣಗಳಲ್ಲಿ ಚಿತ್ರದುರ್ಗದ ಹಿಂದಿನ ಪಾಳೆಯಗಾರರ ವಿವರವಾದ ಚರಿತ್ರೆ ಮಾತ್ರ ಬಂದಿದೆ. "ಎಲ! ಇದೇನು?" ಎಂಬ ಮೂರನೆಯ ಪ್ರಕರಣದಿಂದ ನಿಜವಾದ ಕಾದಂಬರಿಯು ಆರಂಭವಾಗುತ್ತದೆ.

ಚಿತ್ರದುರ್ಗದ ನಾಯಕಪಟ್ಟವು ಭರಮನಾಯಕನಿಗೆ ದೊರೆಯಬೇಕಾಗಿತ್ತು. ಆದರೆ ಮುದ್ದಣ್ಣನೆಂಬ ಪ್ರಬಲವಾದ ದಳವಾಯಿಯು ದೊಣ್ಣೆ ರಂಗಪ್ಪ ನಾಯಕ ಎಂಬವನನ್ನು ಪಟ್ಟಕ್ಕೆ ಕೂಡ್ರಿಸಿ ತಾನೇ ಕಾರ್ಯಭಾರವನ್ನು ವಹಿಸಿದ್ದನು. ಭರಮನಾಯಕನು ತನ್ನ ಬಿಚ್ಚುಗತ್ತಿಯಿಂದ ದಳವಾಯಿ ಮುದ್ದಣ್ಣನನ್ನು ಕೊಲ್ಲುವ ಪ್ರತಿಜ್ಞೆಯನ್ನು ಮಾಡಿದ್ದನು, ಆತನಿಗೆ ಕೆಲವರು ಸಹಾಯಕರೂ ಇದ್ದರು. ಅಂಥವರಲ್ಲಿ ರಣಹುಚ್ಚಿಯೂ ಒಬ್ಬಳು. ದಳವಾಯಿಗಳ ದಂಗೆಯಲ್ಲಿ ರಾಜರ ಪಕ್ಷ ವಹಿಸಿದ್ದ ಅವಳ ತಂದೆ ಚಿನ್ನ ಓಬಲನನ್ನು ದಳವಾಯಿ ಪಂಚಮ ಮುದ್ದಣ್ಣನು ಕೊಲ್ಲಿಸಿದ್ದನು. ರಣಹುಚ್ಚಿಯು ಈಗ ಆ ಸೇಡು ತೀರಿಸಿಕೊಳ್ಳಲು ನಿರತಳಾಗಿದ್ದಳು. ಮುದ್ದಣ್ಣನ ತಮ್ಮಂದಿರು ಆ ಸಾಹಸಿಯಾದ ರಣಹುಚ್ಚಿಯನ್ನು ಅಂದು ಬಂಧಿಸಿ ಅವನ ಕಡೆಗೆ ತಂದಿದ್ದರು. ಅವಳಿಗೆ ಉಗ್ರ ಶಿಕ್ಷೆ ಕೊಡಬೇಕೆಂದು ಮುದ್ದಣ್ಣ ಯೋಚಿಸುತ್ತಿದ್ದ. ಅಷ್ಟರಲ್ಲಿ ಅವನ ಅರಮನೆಗೆ ದಿವ್ಯ ವಿರಕ್ತ ಮುರಗೀಶ ಗುರುಗಳು ಬಂದರು. ಅವರು ರಣಹುಚ್ಚಿಯ ಕಥೆಯನ್ನು ಹೇಳಿದರು.

ದಳವಾಯಿ ಮುದ್ದನು ತನಗೆ ವಿರೋಧಿಯಾದ ದಳವಾಯಿ ಭರಮನನ್ನು ಹುಲಿಯ ಬಾಯಿಗೆ ಕೊಡಲು ನಿರ್ಧರಿಸಿದನು. ಆದರೆ ಹುಲಿಯ ಬಾಯಿಗೆ ಬೀಳಲು ಭರಮನಿಗೆ ಬದಲಾಗಿ ಬೇರೆಯವರು ಸಿದ್ಧರಾದರೆ ಅವನ ಬಿಡುಗಡೆ ಸಾಧ್ಯ ಎಂದು ಸಾರಲಾಯಿತು. ಆಗ ಒಬ್ಬ ತಪಸ್ವಿನಿಯು (ರಣಹುಚ್ಚಿಯು) ಬಂದು, ಹುಲಿಯ ಹಣೆಗೆ ವಿಭೂತಿಯನ್ನು ಹಚ್ಚಿದಳು. ಆಗ ಅದು ಸಾಕಿದ ಬೆಕ್ಕಿನಂತೆ ಅವಳ ಬೆನ್ನುಹತ್ತಿ ಅರಣ್ಯದಲ್ಲಿ ಹೋಗಿಬಿಟ್ಟಿತು. ನೆರೆದವರೆಲ್ಲರೂ ಚಿತ್ರದ ಗೊಂಬೆಗಳಂತೆ ಸುಮ್ಮನೆ ನೋಡುತ್ತ ಕುಳಿತುಬಿಟ್ಟರು.

"ಮುಂದೆ ಏನಾಯಿತೆಂಬುದನ್ನು ಇಲ್ಲಿ ಹೇಳಲಾಗುವದಿಲ್ಲ. ಈ ಕಾದಂಬರಿಯ ಎರಡನೆಯ ಭಾಗವಾದ 'ಸತ್ಸಮಾಗಮ-ಪ್ರಭಾವ' ಎಂಬುದರಲ್ಲಿ ಅದನ್ನು ಬರೆಸುವದು ಶ್ರೀ ಮುರಗೀಶ ಗುರುವನ್ನೇ ಕೂಡಿರುವದರಿಂದ, ಈಗ ಸದ್ಯಕ್ಕೆ ನಾವು ಲೇಖನಿಯನ್ನು ಕೆಳಗಿಟ್ಟುಬಿಡುವೆವು"– ಎಂಬಲ್ಲಿ ಕಾದಂಬರಿಯ ಒಂದನೆಯ ಭಾಗವು ಮುಗಿದಿದೆ.

೨೦೭ ಪುಟಗಳ ಈ ಕಾದಂಬರಿಯಲ್ಲಿ ಕಥಾಭಾಗ ತೀರ ಕಡಿಮೆ. ಮಧ್ಯದ ೧೦, ೧೧, ೧೨ ಮತ್ತು ೧೩ನೆಯ ಪ್ರಕರಣಗಳಲ್ಲಿ ಮುರಗೇಶ ಗುರುಗಳ ಪ್ರವಚನ, ತತ್ತ್ವೋಪದೇಶ ಮೊದಲಾದವುಗಳೇ ತುಂಬಿವೆ. ಮೊದಲಿನ ಎರಡು ಪ್ರಕರಣಗಳಲ್ಲಿ ಕೇವಲ ಚಿತ್ರದುರ್ಗದ ಇತಿಹಾಸವಿದೆ. [ಇದನ್ನು ನಾಯಕರ ವಂಶಜರಾದ ಮದಕರಿನಾಯಕ ಭರಮಸಾಗರ ಅವರು ಲೇಖಕರಿಗೆ ಕೊಟ್ಟಿದ್ದ ಕೈಬರೆಹದ ಪುಸ್ತಕಗಳಿಂದಲೂ ಪಾಳಯಗಾರರ ಚರಿತ್ರದ ಪ್ರಿಂಟಾದ ಪುಸ್ತಕಗಳಿಂದಲೂ ದೊರಕಿಸಲಾಗಿದೆ.][೧೧] ಆದರೆ ಕೇವಲ ಇತಿಹಾಸದಿಂದ ಐತಿಹಾಸಿಕ ಕಾದಂಬರಿಯಾಗದು. ಕಾದಂಬರಿಯಲ್ಲಿ ಬಂದಿರುವ ಅಲ್ಪ ಕಥಾಂಶದಲ್ಲಿ ಅನಾವಶ್ಯಕ ಅದ್ಭುತರಮ್ಯ ನಿರೂಪಣೆ ಬಂದಿದೆ. ಅಲ್ಲದೆ ಕಥೆಯೂ ಅಪೂರ್ಣವಾಗಿದೆ.[೧೨] ಆದ್ದರಿಂದ ಹೆಚ್ಚಿನ ವಿವೇಚನೆಗೆ ಅವಕಾಶವಿಲ್ಲ.

(೬)

ಇಲ್ಲಿಯ ವರೆಗೆ ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ ಗಳಗನಾಥರ ನಾಲ್ಕು ಕಾದಂಬರಿಗಳ ಸಂಕ್ಷಿಪ್ತ ವಿವೇಚನೆಯನ್ನು ಮಾಡಲಾಯಿತು. ಗಳಗನಾಥರ ಪಾತ್ರಪರಿಪೋಷಣೆ, ಸನ್ನಿವೇಶನಿರ್ಮಾಣ, ಅವರ ಪ್ರಾಸಾದಿಕ ಶೈಲಿ, ಕಾದಂಬರಿಗಳ ವೈಶಿಷ್ಟ್ಯಗಳು, ಜನಪ್ರಿಯತೆಯ ಗುಟ್ಟು, ಕಾದಂಬರಿಗಳಲ್ಲಿ ನೀತಿ ನಿರೂಪಣೆ, ಕನ್ನಡಕ್ಕೆ ಗಳಗನಾಥರ ಕೊಡುಗೆ— ಇವೇ ಮೊದಲಾದವುಗಳನ್ನು ಕುರಿತು ಬರೆಯಲು ಬೇಕಾದಷ್ಟು ಅವಕಾಶವಿದೆ.

---

೧೧. ಈ ಇತಿಹಾಸವು ಬಿ. ಹಯವದನರಾಯರು ಸಂಪಾದಿಸಿದ Mysore Gazetteer, Vol V ದಲ್ಲಿಯ ಚಿತ್ರದುರ್ಗ ಜಿಲ್ಲೆಯ ಚರಿತ್ರೆಯ ವಿವರಗಳಿಗೆ ಹೆಚ್ಚಾಗಿ ಸರಿಹೋಗುತ್ತದೆ.

೧೨. ಗಳಗನಾಥರು "ದುರ್ಗದ ಬಿಚ್ಚುಗತ್ತಿ"ಯ ಎರಡನೆಯ ಭಾಗವನ್ನೂ ಬರೆದಿದ್ದರು. ಆದರೆ ಅದಿನ್ನೂ ಅಚ್ಚಾಗಿಲ್ಲ. ಅಚ್ಚಾಗುವ ಸಂಭವವೂ ಇಲ್ಲ. ಯಾಕೆಂದರೆ ಅದರ ಹಸ್ತಪ್ರತಿಯೇ ಕಳೆದುಹೋಗಿದೆಯೆಂದು ಅವರ ಮಗ ಶ್ರೀ ಬಿ. ವ್ಹಿ. ಕುಲಕರ್ಣಿ ಅವರು ಲೇಖಕರಿಗೆ ತಿಳಿಸಿದರು.

ಕೃತಕ ವಿಸರಣಕ್ರಿಯೆ

[Artificial Radio-activity]

ಟಿ. ಎಸ್. ಮುಧೋಳೆ ಮತ್ತು ಎನ್. ಉಮಾಕಾಂತ

ಪರಮಾಣುಕೇಂದ್ರಕಣದಿಂದ ವಿದ್ಯುತ್ತುಳ್ಳ ಕಣಗಳು ಮತ್ತು ವಿದ್ಯುತ್ಕಾಂತ ತರಂಗಗಳು ಹೊರಸೂಸುವುದಕ್ಕೆ ವಿಸರಣಕ್ರಿಯೆ ಎಂದು ಹೆಸರು. ಹೊರಸೂಸಿದ ವಸ್ತುಕಣ ಮತ್ತು ವಿದ್ಯುತ್ಕಾಂತ ಪ್ರಭೆಗೆ ಕೇಂದ್ರ-ಕಣ-ವಿಸರಣ ಎನ್ನುವರು. ಹೀಗೆ ಹೊರಸೂಸಿದ ಕಣ ಮತ್ತು ಕಿರಣ-ಗಳನ್ನು (1) ಅಲ್ಫಾಕಣಗಳು (α), (2) ಬೀಟಾಕಣಗಳು (β) ಮತ್ತು (3) ಗಾಮಾ ಕಿರಣಗಳು (γ) ಎಂದು ವಿಭಾಗಿಸಲಾಗಿದೆ. ಈ ಕಣಗಳ ನಿಜವಾದ ಗುಣಧರ್ಮಗಳು ಗೊತ್ತಿಲ್ಲದಿದ್ದಾಗ ಗ್ರೀಕವರ್ಣಮಾಲೆಯ ಅಕ್ಷರಗಳನ್ನನುಸರಿಸಿ ಇವುಗಳಿಗೆ ಈ ರೀತಿ ಹೆಸರುಗಳನ್ನು ಕೊಟ್ಟಿರುತ್ತಾರೆ. ಈಗ ಅಲ್ಫಾ(ಧನ)ಕಣವು ಹೀಲಿಯಂ ಮೂಲವಸ್ತುವಿನ ಕೇಂದ್ರಕಣವೆಂದೂ, ಧನವಿದ್ಯುತ್ ಇರುವ ಬೀಟಾಕಣಕ್ಕೆ ಧನವಿದ್ಯುತ್ಕಣವೆಂದೂ, ಋಣವಿದ್ಯುತ್ತುಳ್ಳ ಬೀಟಾಕಣವು ಋಣ ವಿದ್ಯುತ್ಕಣವೆಂದೂ ಮತ್ತು ಗಾಮಾಕಿರಣಗಳು ಹೆಚ್ಚು ಶಕ್ತಿಯ ವಿದ್ಯುತ್ಕಾಂತ ಪ್ರಭೆ ಎಂದೂ ಖಚಿತವಾಗಿ ಗೊತ್ತಾಗಿದೆ. ನಿಸರ್ಗದಲ್ಲಿ ಸಿಗುವ ಮೂಲವಸ್ತುವಿನಲ್ಲಿ ಕೇಂದ್ರಕಣವಿಸರಣಕ್ರಿಯೆಯು ಕಂಡುಬಂದರೆ ಅದಕ್ಕೆ ಸ್ವಾಭಾವಿಕ ವಿಸರಣಕ್ರಿಯೆ ಎನ್ನುವರು. ಉದಾಹರಣೆಗೆ, ಪ್ರಕೃತಿಯಲ್ಲಿ ಸಿಗುವ ಯುರೇ-ನಿಯಂ, ಥೋರಿಯಂ ಮುಂತಾದವುಗಳು ಈ ಕ್ರಿಯೆಯನ್ನು ಸ್ವಾಭಾವಿಕವಾಗಿ ಪ್ರದರ್ಶಿಸುತ್ತವೆ. ಮಾನವನು ಉದ್ದೇಶಪೂರ್ವಕವಾಗಿ ಈ ವಿಸರಣಕ್ರಿಯಾ-ಸಾಮರ್ಥ್ಯವುಳ್ಳ ಕೇಂದ್ರಕಣಗಳನ್ನು ಸೃಷ್ಟಿಸಬಹುದು. ಈ ಮಾನವಕೃತ ಕೇಂದ್ರಕಣವಿಸರಣಕ್ರಿಯೆಗೆ ಕೃತಕ ವಿಸರಣಕ್ರಿಯೆ ಎಂದು ಹೆಸರು.

ಈ ಲೇಖನದಲ್ಲಿ ವಿಸರಣಕ್ರಿಯಾಸಾಮರ್ಥ್ಯವುಳ್ಳ ಕೇಂದ್ರಕಣಗಳನ್ನು ಉತ್ಪಾದಿಸುವ ಅವಶ್ಯಕತೆ ಮತ್ತು ರೀತಿಗಳನ್ನೂ ವಿಸರಣಕ್ರಿಯೆಯಿಂದ ಹೊರಸೂಸಿದ ಕಣ ಮತ್ತು ವಿದ್ಯುತ್ಕಾಂತ ಕಿರಣಗಳನ್ನು ಗುರ್ತಿಸುವ ಪದ್ಧತಿಗಳನ್ನೂ ಮತ್ತು ವಿಸರಣಕ್ರಿಯೆಯ ಉಪಯೋಗಗಳನ್ನೂ ಪರ್ಯಾಲೋಚಿಸ-ಲಾಗಿದೆ.

ಕೇಂದ್ರಕಣವು ಸ್ಥೂಲಧನಕಣ ಮತ್ತು ತಟಸ್ಥಕಣ ಎಂಬ ಎರಡು ಜಾತಿಯ ಆದರೆ ಸಮದ್ರವ್ಯರಾಶಿಯ ಮೂಲಕಣಗಳಿಂದ ಕೂಡಿರುತ್ತದೆ. ವಿದ್ಯುತ್ಕಣಗಳಲ್ಲಿ ಋಣವಿದ್ಯುತ್ತು ಮತ್ತು ಸ್ಥೂಲಧನಕಣಗಳಲ್ಲಿ ಧನವಿದ್ಯುತ್ತು

ಇರುತ್ತದೆ. ಆದರೆ ತಟಸ್ಥಕಣಗಳಲ್ಲಿ ಋಣ ಇಲ್ಲವೆ ಧನವಿದ್ಯುತ್ತಿರುವದಿಲ್ಲ; ಆದುದರಿಂದಲೇ ಇವುಗಳಿಗೆ ತಟಸ್ಥಕಣಗಳೆಂದು ಹೆಸರು. ಪರಮಾಣುವಿಗೆ ಕೊಟ್ಟ ಚಿಹ್ನೆಯನ್ನೇ ಕೇಂದ್ರಕಣಕ್ಕೂ ಕೊಡುವುದು ರೂಢಿ. ಕೇಂದ್ರಕಣದಲ್ಲಿರುವ ಸ್ಥೂಲಧನಕಣಗಳ ಸಂಖ್ಯೆಯನ್ನು ಪರಮಾಣುಚಿಹ್ನೆಯ ಕೆಳ ಎಡ-ಭಾಗದಲ್ಲೂ. ಸ್ಥೂಲಧನಕಣ ಮತ್ತು ತಟಸ್ಥಕಣಗಳ ಸಂಕಲನವನ್ನು ಪರ-ಮಾಣುಚಿಹ್ನೆಯ ಬಲಮೇಲ್ಭಾಗದಲ್ಲೂ ಬರೆಯುವುದು ವಾಡಿಕೆ. ಉದಾಹರ-ಣೆಗೆ $_{29}Cu^{64}$ ಎಂದು ಬರೆದಾಗ Cu ಎನ್ನುವದು ತಾಮ್ರದ ಪರಮಾಣುವಿನ ಚಿಹ್ನೆ; 29 ಕೇಂದ್ರಕರಣದಲ್ಲಿರುವ ಒಟ್ಟು ಸ್ಥೂಲಧನಕಣಗಳನ್ನೂ, 64 ಕೇಂದ್ರ ಕಣದಲ್ಲಿರುವ ಸ್ಥೂಲಧನಕಣ ಮತ್ತು ತಟಸ್ಥ ಕಣಗಳ ಸಂಕಲನವನ್ನೂ ಸೂಚಿಸು ತ್ತವೆ. ಗ್ರಹಗಳು ಸೂರ್ಯನ ಸುತ್ತಲೂ ಸುತ್ತುವಂತೆ ಕೇಂದ್ರಕರಣದ ಸುತ್ತಲೂ ವಿದ್ಯುತ್ಕಣಗಳು ಸುತ್ತುತ್ತಿರುತ್ತವೆ. ಕೇಂದ್ರಕಣದಲ್ಲಿ ಎಷ್ಟು ಸ್ಥೂಲಕಣಗಳಿರು ತ್ತವೆಯೋ ಅಷ್ಟೇ ವಿದ್ಯುತ್ಕಣಗಳು ಕೇಂದ್ರಕಣದ ಸುತ್ತಲೂ ಇರುತ್ತವೆ. ಪ್ರತಿಯೊಂದು ವಿದ್ಯುತ್ಕಣದಲ್ಲೂ 9.1×10^{-28} ಗ್ರಾಮುನಷ್ಟು ದ್ರವ್ಯರಾಶಿಯೂ 4.8×10^{-10} ಸ್ಥಾಯಿ ವಿದ್ಯುತ್‌ಮಾನದಷ್ಟು ವಿದ್ಯುತ್ತೂ ಇರುತ್ತವೆ. ಪರ-ಮಾಣುವಿನ ರಾಸಾಯನಿಕ ಗುಣಧರ್ಮಗಳು ಆದರಲ್ಲಿರುವ ವಿದ್ಯುತ್ಕಣಗಳ ಸಂಖ್ಯೆಯ ಮೇಲೆ ಅವಲಂಬಿಸಿರುತ್ತದೆ. ಈ ಸಂಖ್ಯೆಗೆ ಪರಮಾಣು ಸಂಖ್ಯೆ ಎಂದು ಹೆಸರು. ಇದು ಆ ಪರಮಾಣುವಿನ ಕೇಂದ್ರಕಣದಲ್ಲಿರುವ ಸ್ಥೂಲ-ಧನಕಣಗಳ ಸಂಖ್ಯೆಯನ್ನೂ ಸೂಚಿಸುತ್ತದೆ. ಎರಡು ಕೇಂದ್ರಕಣಗಳಲ್ಲಿ ಸ್ಥೂಲ ಧನಕಣಗಳ ಸಂಖ್ಯೆ ಒಂದೇ ಇದ್ದು ತಟಸ್ಥಕಣಗಳ ಸಂಖ್ಯೆ ಭಿನ್ನವಾಗಿದ್ದರೆ ಆ ಎರಡೂ ಪರಮಾಣುಗಳು ಒಂದೇ ಮೂಲಧಾತುವಿಗೆ ಸೇರಿರುತ್ತವೆ, ಉದಾ-ಹರಣೆಗೆ, $_{29}Cu^{63}$ ಮತ್ತು $_{29}Cu^{65}$ ಇವು ಎರಡೂ ತಾಮ್ರದ ಪರಮಾಣುಗಳು. ಇಂಥ ಪರಮಾಣುಗಳಿಗೆ ಸಮಸ್ಥಾನೀಯ ಪರಮಾಣುಗಳೆಂದೂ ಇಂಥ ಕೇಂದ್ರ-ಕಣಗಳಿಗೆ ಸಮವಿದ್ಯುತ್‌ಕೇಂದ್ರಕಣಗಳೆಂದೂ ಹೆಸರು. ಕೇಂದ್ರಕಣದಲ್ಲಿರುವ ಒಟ್ಟು ಕಣಗಳ ಸಂಖ್ಯೆಯು ಒಂದು ಸ್ಥೂಲಧನಕಣ ಇಲ್ಲವೆ ತಟಸ್ಥಕಣಕ್ಕಿಂತ, ಆ ಕೇಂದ್ರಕಣವು ಎಷ್ಟು ಪಟ್ಟು ಭಾರವಾಗಿದೆ ಎಂಬುದನ್ನು ಸೂಚಿಸುತ್ತದೆ. ಈ ಸಂಖ್ಯೆಗೆ ದ್ರವ್ಯಮಾನ ಸಂಖ್ಯೆ ಎಂದು ಹೆಸರು. ದ್ರವ್ಯಮಾನ ಸಂಖ್ಯೆ ಮತ್ತು ಪರಮಾಣುಸಂಖ್ಯೆ ಇವುಗಳ ವ್ಯತ್ಯಾಸವು ಕೇಂದ್ರಕಣದಲ್ಲಿರುವ ತಟಸ್ಥಕಣಗಳನ್ನು ಸೂಚಿಸುತ್ತದೆ.

ಕೇಂದ್ರಕಣದಲ್ಲಿ ಸ್ಥೂಲಧನಕಣ ಮತ್ತು ತಟಸ್ಥಕಣಗಳು ಒಂದು ನಿಶ್ಚಿತ ಪ್ರಮಾಣದಲ್ಲಿದ್ದರೆ ಮಾತ್ರ ಆ ಕೇಂದ್ರಕಣವು ಸ್ಥಿರಾವಸ್ಥೆಯಲ್ಲಿ ಉಳಿ-ಯುವುದು. ಇವುಗಳ ಪ್ರಮಾಣವು ಹೆಚ್ಚುಕಡಿಮೆಯಾದರೆ ಕೇಂದ್ರಕಣವು ಅಸ್ಥಿರವಾಗಿ ವಿದ್ಯುತ್ತುಳ್ಳ ಕಣಗಳನ್ನು ಹೊರಸೂಸಿ ಸ್ಥಿರಾವಸ್ಥೆಯನ್ನು

ಹೊಂದುವುದು. ಈ ಕ್ರಿಯೆಯಲ್ಲಿ ವಿದ್ಯುತ್ಕಾಂತ ಪ್ರಭೆಯೂ ಹೊರಸೂಸ-ಬಹುದು. ಧನವಿದ್ಯುತ್ಕಣ (β^+) ಹೊರಬಂದರೆ, ಕೇಂದ್ರಕಣದಲ್ಲಿ ಒಂದು ಸ್ಥೂಲ ಧನಕಣ ಕಡಿಮೆಯಾಗಿ ಒಂದು ತಟಸ್ಥ ಕಣ ಜಾಸ್ತಿಯಾಗುವದು; ಋಣವಿದ್ಯುತ್ಕಣ (β^-) ಹೊರಸೂಸಿದರೆ ಕೇಂದ್ರಕಣದಲ್ಲಿ ಒಂದು ತಟಸ್ಥ ಕಣ ಕಡಿಮೆಯಾಗಿ ಒಂದು ಸ್ಥೂಲಧನ ಜಾಸ್ತಿಯಾಗುವದು. ಈ ಕ್ರಿಯೆಯಿಂದ ಪರಮಾಣುಸಂಖ್ಯೆ ಒಂದರಿಂದ ಜಾಸ್ತಿಯಾಗುವದು. ಈ ಎರಡೂ ಕ್ರಿಯೆಗಳಲ್ಲಿ ದ್ರವ್ಯಮಾನ ಸಂಖ್ಯೆ ಬದಲಾಗುವದಿಲ್ಲ. ಅಂದರೆ ಕೇಂದ್ರಕಣದಲ್ಲಿ ಮೊದಲಿನಷ್ಟೇ ಮೂಲ ಕಣಗಳು ಉಳಿಯುತ್ತವೆ. ಕೇಂದ್ರಕಣವು ಅಲ್ಫಾಕಣವನ್ನು ಹೊರಸೂಸಿದರೆ ದ್ರವ್ಯಮಾನಸಂಖ್ಯೆ 4ರಿಂದಲೂ ಪರಮಾಣು ಸಂಖ್ಯೆ 2ರಿಂದಲೂ ಕಡಿಮೆ-ಯಾಗುವುದು. ಈ ಕ್ರಿಯೆಯಿಂದ ಕೇಂದ್ರಕಣವು 2 ಸ್ಥೂಲಧನಕಣಗಳನ್ನೂ ಮತ್ತು 2 ತಟಸ್ಥ ಕಣಗಳನ್ನೂ ಕಳೆದುಕೊಳ್ಳುವುದು. ಸಾಮಾನ್ಯವಾಗಿ ಇಂತಹ ಒಂದು ಪರಿವರ್ತನೆಯಿಂದಲೇ ಅನೇಕ ಮೂಲವಸ್ತುಗಳ ಕೇಂದ್ರಕಣಗಳು ಸ್ಥಿರಾವಸ್ಥೆಯನ್ನೂ ಹೊಂದುತ್ತವೆ. ಆದರೆ ಕೆಲವು ಮೂಲವಸ್ತುಗಳ ಕೇಂದ್ರ-ಕಣಗಳು ಪುನಃ ಪುನಃ ಪರಿವರ್ತನೆಯಾಗಿ ಕೊನೆಗೆ ಸ್ಥಿರಾವಸ್ಥೆಯನ್ನು ಹೊಂದುತ್ತವೆ.

ವಿಸರಣಸಾಮರ್ಥ್ಯವುಳ್ಳ ಯಾವುದೇ ಒಂದು ಕೇಂದ್ರಕಣವು ಅನಿಶ್ಚಿತ ಕಾಲದನಂತರ ವಿಸರಣಕ್ರಿಯೆಯನ್ನು ಪ್ರದರ್ಶಿಸಬಹುದು. ಆದರೆ ವಿಸರಣ ಸಾಮರ್ಥ್ಯವುಳ್ಳ ಅನೇಕ ಕೇಂದ್ರಕಣಗಳಿದ್ದರೆ (10,000 ಎಂದಿಟ್ಟುಕೊಂಡರೆ) ಅವುಗಳಲ್ಲಿ ಅರ್ಧದಷ್ಟು (ಎಂದರೆ 5,000) ಕೇಂದ್ರಕಣಗಳು ಒಂದು ನಿರ್ದಿಷ್ಟ ಅವಧಿಯಲ್ಲಿ ವಿಸರಣಕ್ರಿಯೆಯನ್ನು ಪ್ರದರ್ಶಿಸಿ ಸ್ಥಿರಾವಸ್ಥೆಯನ್ನು ಹೊಂದುತ್ತವೆ. ಉದಾಹರಣೆಗೆ ಈ ನಿರ್ದಿಷ್ಟ ಅವಧಿ 45 ನಿಮಿಷಗಳೆಂದು ತಿಳಿದರೆ, 45 ನಿಮಿಷಗಳನಂತರ ವಿಸರಣಸಾಮರ್ಥ್ಯವುಳ್ಳ 5,000 ಕೇಂದ್ರಕಣಗಳು ಉಳಿಯುತ್ತವೆ. ಮುಂದಿನ 45 ನಿಮಿಷಗಳಲ್ಲಿ 2500 ಕೇಂದ್ರಕಣಗಳು ವಿಸರಣವನ್ನು ಹೊರಸೂಸುವವು. ಹೀಗೆ ಪ್ರತಿ 45 ನಿಮಿಷಗಳಲ್ಲಿ ವಿಸರಣಸಾಮರ್ಥ್ಯವುಳ್ಳ ಕೇಂದ್ರಕಣಗಳ ಸಂಖ್ಯೆ ಅರ್ಧದಷ್ಟು ಕಡಿಮೆಯಾಗುತ್ತಾಹೋಗುವದು. ಈ ನಿರ್ದಿಷ್ಟಕಾಲಾವಧಿಗೆ (45 ನಿಮಿಷಗಳು ಈ ಉದಾಹರಣೆಯಲ್ಲಿ), ಕೇಂದ್ರ ಕಣಗಳ ಅರ್ಧಾಯುಷ್ಯ ಎನ್ನುವರು.

ಪ್ರಕೃತಿಯಲ್ಲಿ ಸಿಗುವ ವಿಸರಣಕ್ರಿಯಾಸಾಮರ್ಥ್ಯವುಳ್ಳ ಮೂಲವಸ್ತುಗಳ ಅರ್ಧಾಯುಷ್ಯವು 10 ಕೋಟಿ ವರ್ಷಗಳಿಗಿಂತ ಹೆಚ್ಚು ಇರುತ್ತದೆ. ಸುಮಾರು 400 ಕೋಟಿ ವರ್ಷಗಳ ಹಿಂದೆ ಭೂಮಿಯ ನಿರ್ಮಾಣವಾದಾಗ ಈ ಕೇಂದ್ರಕಣಗಳ ಉತ್ಪತ್ತಿಯಾಗಿರಬಹುದೆಂದೂ, ಅಲ್ಪ ಅರ್ಧಾಯುಷ್ಯದ ಇನ್ನೂ ಎಷ್ಟೋ ಮೂಲವಸ್ತುಗಳ ಕೇಂದ್ರಕಣಗಳು ಅನೇಕ ವರ್ಷಗಳ

ಹಿಂದೆಯೇ ಸ್ಥಿರಾವಸ್ಥೆಯನ್ನು ಹೊಂದಿರಬಹುದೆಂದು ತಜ್ಞರ ವಾದ. ಅದೇನೆ ಇರಲಿ, ಅಲ್ಪ ಅರ್ಧಾಯುಷ್ಯದ ವಿಸರಣಕ್ರಿಯಾಸಾಮರ್ಥ್ಯವುಳ್ಳ ಕೇಂದ್ರ ಕಣಗಳನ್ನು ಕೃತಕವಾಗಿಯೇ ಉತ್ಪಾದಿಸಬೇಕು. ಒಂದು ಸ್ಥಿರ ಕೇಂದ್ರಕಣವು ಮತ್ತೊಂದು ಕೇಂದ್ರಕಣದಲ್ಲಿ ಐಕ್ಯವಾಗುವಂತೆ ಮಾಡಿ ಹೊಸ ಕೇಂದ್ರಕಣ ವನ್ನು ನಿರ್ಮಿಸಬಹುದು. ಸಾಮಾನ್ಯವಾಗಿ ಈ ಹೊಸ ಕೇಂದ್ರಕಣವು ಅಸ್ಥಿರ ವಾಗಿದ್ದು ವಿಸರಣಕ್ರಿಯೆಯನ್ನು ಪ್ರದರ್ಶಿಸುತ್ತದೆ. ಈ ರೀತಿ ಕೃತಕವಾಗಿ ವಿಸರಣಸಾಮರ್ಥ್ಯವುಳ್ಳ ಕೇಂದ್ರಕಣಗಳನ್ನು ಉತ್ಪಾದಿಸಬಹುದು. ಆದರೆ ಎಲ್ಲ ಕೇಂದ್ರಕಣಗಳಲ್ಲೂ ಒಂದೇ ಚಿಹ್ನೆಯ ವಿದ್ಯುತ್ತು ಇರುವದರಿಂದ ಅವು ಪರಸ್ಪರ ವಿಕರ್ಷಿಸುತ್ತವೆ. ಹೀಗಾಗಿ ಎರಡು ಕೇಂದ್ರಕಣಗಳು ಒಂದರಲ್ಲೊಂದು ಸಂಯೋಗವಾಗುವಂತೆ ಮಾಡಲು, ಒಂದು ಕೇಂದ್ರಕಣವನ್ನು ಮತ್ತೊಂದು ಕೇಂದ್ರಕಣದೆಡೆಗೆ ಸಾಕಷ್ಟು ಚಲನಶಕ್ತಿಯಿಂದ ಎಸೆಯಬೇಕು. ಆದರೆ ಹೀಗೆ ಎಸೆಯಲ್ಪಟ್ಟ ಅನೇಕ ಕೇಂದ್ರಕಣಗಳು, ಪರಮಾಣುವಿನ ವಿದ್ಯುತ್ಕಣಗಳೊಡನೆ ಘರ್ಷಿಸುವದರಲ್ಲೇ ತಮ್ಮ ಚಲನಶಕ್ತಿಯನ್ನೆಲ್ಲಾ ಕಳೆದುಕೊಳ್ಳುತ್ತವೆ. ಲಕ್ಷದಲ್ಲಿ ಒಂದೋ ಎರಡೋ ಕೇಂದ್ರಕಣಗಳು ಮತ್ತೊಂದು ಕೇಂದ್ರಕಣದಲ್ಲಿ ಪ್ರವೇಶಿಸಿ ಹೊಸ ಕೇಂದ್ರಕಣವನ್ನು ಸೃಷ್ಟಿಸುತ್ತವೆ.

ಎರಡು ಕೇಂದ್ರಕಣಗಳು 10^{-12} ಸೆಂ. ಮೀ. ಅಂತರದಲ್ಲಿ ಬಂದಾಗ ಅವು ಪರಸ್ಪರ ಆಕರ್ಷಿಸಿ ಒಂದೇ ಸಂಯುಕ್ತ ಕೇಂದ್ರಕಣವಾಗುವವು. ಈ ಸಮ್ಮಿಳನ ಕ್ರಿಯೆಯಲ್ಲಿ ಸಾಕಷ್ಟು ಶಕ್ತಿ ಬಿಡುಗಡೆಯಾಗಿ, ಸಂಯುಕ್ತ ಕೇಂದ್ರಕಣವು ತಟಸ್ಥಕಣ, ಸ್ಥೂಲಧನಕಣ, ಯಾವುದೇ ಹಗುರಾದ ಕೇಂದ್ರಕಣ, ಇಲ್ಲವೆ ವಿದ್ಯುತ್ಕಾಂತ ಪ್ರಭೆಯನ್ನು ಹೊರಸೂಸುವುದು. ಸಂಯುಕ್ತ ಕೇಂದ್ರಕಣ ನಿರ್ಮಾಣವಾದ 10^{-17} ಕ್ಷಣದಲ್ಲೇ ಈ ಕ್ರಿಯೆ ಮುಗಿಯುವದು. ಎರಡು ಕೇಂದ್ರಕಣಗಳು ಸೇರಿ ಒಂದೇ ಕಣವಾಗಿ, 10^{-18} ಕ್ಷಣದಲ್ಲೇ ಎರಡು ಕೇಂದ್ರ ಕಣಗಳಾಗಿ ಪುನಃ ಒಡೆಯುವ ಈ ಕ್ರಿಯೆಗೆ ಕೇಂದ್ರಕಣ ಕ್ರಿಯೆ ಎಂದು ಹೆಸರು. ಸಂಯುಕ್ತ ಕೇಂದ್ರಕಣದಿಂದ ಕೇವಲ ವಿದ್ಯುತ್ಕಾಂತ ಪ್ರಭೆ ಹೊರ ಸೂಸಿದರೆ, ಅದಕ್ಕೆ ಪ್ರಭಾಪರ್ಯಾಯಿತ ಸಂಯೋಗ ಎಂದು ಹೆಸರು. ಹೀಗೆ ನಿರ್ಮಿತವಾದ ಹೊಸ ಕೇಂದ್ರಕಣದಲ್ಲಿ ತಟಸ್ಥಕಣ ಮತ್ತು ಸ್ಥೂಲಧನಕಣ ಗಳು ಒಂದು ನಿರ್ದಿಷ್ಟಪ್ರಮಾಣದಲ್ಲಿರದೆ, ಅದು ಅಸ್ಥಿರವಾಗಿ ವಿಸರಣಕ್ರಿಯೆ ಪ್ರದರ್ಶಿಸಬಹುದು. ಕೆಲವು ಕೇಂದ್ರಕಣಕ್ರಿಯೆಗಳಲ್ಲಿ ಎಸೆದ ಕೇಂದ್ರಕಣವೇ ಸಂಯುಕ್ತ ಕೇಂದ್ರಕಣದಿಂದ ಸ್ವಲ್ಪ ಕಡಿಮೆ ಚಲನಶಕ್ತಿಯಿಂದ ಹೊರಬರು ವುದು. ಗುರಿಯಾದ ಕೇಂದ್ರಕಣವೇ ಈ ಹೆಚ್ಚಿನ ಶಕ್ತಿಯನ್ನು ವಿದ್ಯುತ್ಕಾಂತ ಪ್ರಭೆಯ ರೂಪದಲ್ಲಿ ಹೊರಸೂಸಿ 10^{-17} ಕ್ಷಣದಲ್ಲಿ ತನ್ನ ಮೊದಲಿನ ಸ್ಥಿತಿ ಯನ್ನು ಹೊಂದುವುದು.

ತಟಸ್ಥ ಕಣಗಳಲ್ಲಿ ವಿದ್ಯುತ್ತಾಂಶವಿಲ್ಲದಿರುವದರಿಂದ ಅವು ಯಾವುದೇ ವಿಕರ್ಷಣೆಯನ್ನು ಅನುಭವಿಸದೇ ಕೇಂದ್ರಕಣಗಳ ಸಮೀಪಕ್ಕೆ ಹೋಗಬಲ್ಲವು. ಆದುದರಿಂದ ಅಲ್ಪ ಶಕ್ತಿಯ ತಟಸ್ಥ ಕಣಗಳೂ ಕೇಂದ್ರಕಣಗಳೊಡನೆ ಸಂಯೋಗವಾಗಬಲ್ಲವು. ತಟಸ್ಥಕಣ ಮತ್ತು ಕೇಂದ್ರಕಣಗಳ ಪ್ರಭಾಪರ್ಯಾಯಿತ ಸಂಯೋಗದಿಂದ ವಿಸರಣಕ್ರಿಯಾಸಾಮರ್ಥ್ಯವುಳ್ಳ ಹೊಸ ಕೇಂದ್ರಕಣವು ಸಾಮಾನ್ಯವಾಗಿ ನಿರ್ಮಾಣವಾಗುವದು. ತಟಸ್ಥಕಣವೂ ಅಸ್ಥಿರ; ಅದು 13 ನಿಮಿಷಗಳ ಅರ್ಧಾಯುಷ್ಯದಲ್ಲಿ ಸ್ಥೂಲಧನಕಣ ಮತ್ತು ಋಣವಿದ್ಯುತ್ಕಣವಾಗಿ ಪರಿವರ್ತನೆಯಾಗುವದು. ಆದ್ದರಿಂದ ತಟಸ್ಥಕಣಗಳನ್ನು ಮೊದಲು ಯಾವುದಾದರೂ ಕೇಂದ್ರಕಣಕ್ರಿಯೆಯಿಂದ ಉತ್ಪಾದಿಸಿ, ಆಮೇಲೆ ಅವನ್ನು ವಿಸರಣಕ್ರಿಯಾಸಾಮರ್ಥ್ಯವುಳ್ಳ ಕೇಂದ್ರಕಣಗಳನ್ನು ನಿರ್ಮಿಸಲು ಉಪಯೋಗಿಸಬೇಕು.

ಕೇಂದ್ರಕಣವಿಭಜನೆಯೆಂಬ ಒಂದು ವಿಶಿಷ್ಟ ರೀತಿಯ ಕೇಂದ್ರಕಣ ಕ್ರಿಯೆಯಿಂದ ವಿಸರಣಕ್ರಿಯಾ ಸಾಮರ್ಥ್ಯವಿರುವ ಬೇರೆ ಬೇರೆ ಮೂಲವಸ್ತುಗಳ ಕೇಂದ್ರಕಣಗಳನ್ನು ಉತ್ಪಾದಿಸಬಹುದು. ಒಂದು ತಟಸ್ಥಕಣವು ಯುರೇನಿಯಂ $_{92}U^{235}$ ಕೇಂದ್ರಕಣದಲ್ಲಿ ಸಂಯೋಗವಾಗುವುದರಿಂದ ನಿರ್ಮಾಣವಾದ ಸಂಯುಕ್ತ ಕೇಂದ್ರಕಣವು ದ್ರವ್ಯಮಾನದಲ್ಲಿ ಹೆಚ್ಚು ವ್ಯತ್ಯಾಸವಿರದ ಎರಡು ಕೇಂದ್ರಕಣಗಳಾಗಿ ಒಡೆಯುವದು. ಸಂಯುಕ್ತ ಕೇಂದ್ರಕಣಗಳು ಪ್ರತಿಸಲವೂ ಅವೇ ಎರಡು ಕೇಂದ್ರಕಣಗಳಾಗಿ ಒಡೆಯದೇ ಇರುವದರಿಂದ ಭಿನ್ನ ಭಿನ್ನ ಮೂಲವಸ್ತುಗಳ ಅಸ್ಥಿರ ಕೇಂದ್ರಕಣಗಳು ನಿರ್ಮಾಣವಾಗುತ್ತವೆ. ಇವುಗಳಿಗೆ ವಿಭಜನಾಖಂಡಗಳೆಂದು ಹೆಸರು. ಈ ಕೇಂದ್ರಕಣಗಳು ಬಹಳ ಅಸ್ಥಿರವಾಗಿದ್ದು ಅನೇಕ ಹಂತಗಳಲ್ಲಿ ವಿದ್ಯುತ್ಕಣಗಳನ್ನು ಹೊರಸೂಸಿ ಕೊನೆಗೆ ಸ್ಥಿರಾವಸ್ಥೆಯನ್ನು ಹೊಂದುತ್ತವೆ. ಪರಮಾಣುಕ್ರಿಯಾಕಾರಕಗಳಲ್ಲಿ ಕೇಂದ್ರಕಣಗಳ ವಿಭಜನೆಯಿಂದಲೇ ಶಕ್ತಿ ಬಿಡುಗಡೆಯಾಗುವದರಿಂದ ಈ ಕ್ರಿಯಾಕಾರಕಗಳಲ್ಲಿ ವಿಭಜನಾಖಂಡಗಳು ಸಹಜವಾಗಿಯೆ ವಿಪುಲವಾಗಿ ದೊರಕುತ್ತವೆ.

ಎರಡು ಕೇಂದ್ರಕಣಗಳಲ್ಲಿ, ಕೇಂದ್ರಕಣ ಕ್ರಿಯೆಯನ್ನು ಪ್ರಚೋದಿಸಲು ಒಂದು ಕೇಂದ್ರಕಣವನ್ನು ಮತ್ತೊಂದು ಕೇಂದ್ರಕಣದ ಕಡೆಗೆ ಸಾಕಷ್ಟು ಶಕ್ತಿಯಿಂದ ಎಸೆಯಬೇಕೆಂದು ಈಗಾಗಲೇ ತಿಳಿಸಿದೆ. ಪ್ರಕೃತಿಯಲ್ಲಿ ಸಿಗುವ ಸ್ವಾಭಾವಿಕ ವಿಸರಣಕ್ರಿಯೆಯಲ್ಲಿ ದೊರಕುವ ಹೆಚ್ಚು ಶಕ್ತಿಯ ಅಲ್ಫಾ ಕಣಗಳು ಅಂಗಾರ, ಅಲ್ಯೂಮಿನಿಯಂ ಅಥವಾ ಮ್ಯಾಗ್ನೆಶಿಯಂ ಮೊದಲಾದ ಹಗುರಾದ ಮೂಲವಸ್ತುಗಳ ಮೇಲೆ ಬೀಳುವಂತೆ ಮಾಡಿದಾಗ ವಿಸರಣಸಾಮರ್ಥ್ಯವಿರುವ ಕೇಂದ್ರಕಣಗಳು ನಿರ್ಮಾಣವಾಗುತ್ತವೆ. ಐರೀನ್ ಕ್ಯೂರಿ ಮತ್ತು ಜ್ಯೂಲಿಯಟ್ ಕ್ಯೂರಿ ಎಂಬ ವಿಜ್ಞಾನಿಗಳು 1934ರಲ್ಲಿ ಅಲ್ಯೂಮಿನಿಯಂ ಲೋಹದ ಹಾಳೆಯ

ಮೇಲೆ ಆಲ್ಫಾ ಕಣಗಳು ಬೀಳುವುದನ್ನು ನಿಲ್ಲಿಸಿದಮೇಲೂ, ಆ ಹಾಳೆಯು ವಿಸರಣ ಕ್ರಿಯೆಯನ್ನು ಪ್ರದರ್ಶಿಸುವುದೆಂದು ಕಂಡುಹಿಡಿದರು. ಈ ಪ್ರಯೋಗದಿಂದ ಅವರು ಕೇಂದ್ರಕಣ ಕ್ರಿಯೆಯ ಮೂಲಕ ಕೇಂದ್ರಕಣಗಳಲ್ಲಿ ವಿಸರಣ-ಕ್ರಿಯೆಯನ್ನು ಪ್ರಚೋದಿಸಲು ಸಾಧ್ಯವಿದೆಯೆಂದು ತೋರಿಸಿದರು. ಶಕ್ತಿವರ್ಧಕ ಯಂತ್ರಗಳಿಂದ ಹೆಚ್ಚು ಚಲನಶಕ್ತಿಯ ಕೇಂದ್ರಕಣಗಳನ್ನು ಉಪಯೋಗಿಸಿ ಸಹ ಕೇಂದ್ರಕಣಕ್ರಿಯೆಯನ್ನು ಪ್ರಚೋದಿಸಬಹುದು. ಸಾಮಾನ್ಯವಾಗಿ $_1H^1$, $_1H^2$, $_1H^3$, $_3He^3$ ಮತ್ತು Li^6 ಮುಂತಾದ ಯಾವುದೇ ಹಗುರಾದ ಕೇಂದ್ರಕಣಗಳನ್ನು ಈ ಶಕ್ತಿವರ್ಧಕ ಯಂತ್ರಗಳಲ್ಲಿ ಉಪಯೋಗಿಸಬಹುದು.

ಯಾವುದೇ ಮೂಲವಸ್ತುವಿನ ಕೇಂದ್ರಕಣಗಳನ್ನು ಶಕ್ತಿವರ್ಧಕ ಯಂತ್ರಗಳಿಂದ ಹೊರಬರುವ ಹೆಚ್ಚು ಚಲನಶಕ್ತಿಯ ಕೇಂದ್ರಕಣಗಳಿಗೆ, ಅಥವಾ ಪರಮಾಣು ಕ್ರಿಯಾಕಾರಕಗಳಲ್ಲಿರುವ ತಟಸ್ಥಕಣಗಳಿಗೆ ಗುರಿಪಡಿಸಿದಾಗ ವಿಸರಣಸಾಮರ್ಥ್ಯವುಳ್ಳ ಹೊಸ ಕೇಂದ್ರಕಣಗಳು ನಿರ್ಮಾಣವಾಗುತ್ತವೆ. ಹೀಗೆ ನಿರ್ಮಾಣವಾಗುವ ಕೇಂದ್ರಕಣಗಳ ಸಂಖ್ಯೆ ಗುರಿಪಡಿಸಿದ ವಸ್ತುವಿನ ಮೇಲೆ ಪ್ರತಿ ಸೆಕಂಡಿಗೆ ಬೀಳುವ ಕೇಂದ್ರಕಣಗಳ ಅಥವಾ ತಟಸ್ಥಕಣಗಳ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ವಿಸರಣಸಾಮರ್ಥ್ಯವಿರುವ ಕೇಂದ್ರಕಣಗಳು ನಿರ್ಮಾಣವಾದಂತೆ ಅವು ತಮ್ಮ ನಿರ್ದಿಷ್ಟ ಅರ್ಧಾಯುಷ್ಯದಂತೆ ಕ್ಷೀಣಿಸಿ ಸ್ಥಿರಾ-ವಸ್ಥೆಯನ್ನು ಹೊಂದುತ್ತವೆ. ಸ್ವಲ್ಪ ವೇಳೆಯನಂತರ ವಿಸರಣಸಾಮರ್ಥ್ಯ-ವುಳ್ಳ ಕೇಂದ್ರಕಣಗಳು ನಿರ್ಮಾಣವಾದ ಪ್ರಮಾಣ, ಅವು ಕ್ಷೀಣಿಸಿ ಸ್ಥಿರಾವಸ್ಥೆ-ಯನ್ನು ಹೊಂದುವ ಪ್ರಮಾಣಕ್ಕೆ ಸಮವಾಗುವುದು. ಆದುದರಿಂದ ಕೃತಕ ವಿಸರಣಸಾಮರ್ಥ್ಯವುಳ್ಳ ಕೇಂದ್ರಕಣಗಳನ್ನು ಒಂದು ನಿರ್ದಿಷ್ಟಪ್ರಮಾಣಕ್ಕಿಂತ ಹೆಚ್ಚಾಗಿ ನಿರ್ಮಾಣಮಾಡುವುದು ಸಾಧ್ಯವಿಲ್ಲ.

ಯಾವುದೇ ಮೂಲವಸ್ತುವಿನಲ್ಲಿ ಪ್ರತಿ ಘನ ಸೆಂಟಿಮೀಟರಿನಲ್ಲಿ ಹೆಚ್ಚು ಕಡಿಮೆ 10^{23} ಕೇಂದ್ರಕಣಗಳಿರುತ್ತವೆ. ಆದರೆ ಶಕ್ತಿವರ್ಧಕಯಂತ್ರದಿಂದ ಪ್ರತಿ ಸೆಕಂಡಿಗೆ ಕೇವಲ 10^{15} ಅಥವಾ 10^{16} ಕೇಂದ್ರಕಣಗಳೂ ಇಲ್ಲವೆ ಪರಮಾಣು ಕ್ರಿಯಾಕಾರಕದಿಂದ ಪ್ರತಿ ಸೆಕಂಡಿಗೆ 10^{13} ತಟಸ್ಥಕಣಗಳು ಗುರಿಪಡಿಸಿದ ವಸ್ತುವಿನ ಮೇಲೆ ಬೀಳುವದರಿಂದ, ಕೇಂದ್ರಕಣಕ್ರಿಯೆಯಲ್ಲಿ ಭಾಗವಹಿಸುವ ಕೇಂದ್ರಕಣಗಳ ಸಂಖ್ಯೆ ಗುರಿಪಡಿಸಿದ ವಸ್ತುವಿನಲ್ಲಿರುವ ಒಟ್ಟು ಕೇಂದ್ರಕಣಗಳ ಸಂಖ್ಯೆಗಿಂತ ಬಹಳ ಚಿಕ್ಕದು. ಆದುದರಿಂದ ಅಲ್ಪಪ್ರಮಾಣದಲ್ಲಿರುವ ವಿಸರಣ ಸಾಮರ್ಥ್ಯವುಳ್ಳ ಕೇಂದ್ರಕಣಗಳನ್ನೇ ಬೇರ್ಪಡಿಸುವದು ಉತ್ತಮ. ಯಾವುದೇ ಮೂಲವಸ್ತುವಿನ ಕೇಂದ್ರಕಣಗಳಿಂದ ನಿರ್ಮಾಣವಾದ ಹೊಸ ಕೇಂದ್ರಕಣಗಳ ಪರಮಾಣು ಸಂಖ್ಯೆ ಗುರಿಪಡಿಸಿದ ವಸ್ತುವಿನ ಕೇಂದ್ರಕಣಗಳ ಪರಮಾಣು ಸಂಖ್ಯೆಯಿಂದ ಭಿನ್ನವಾಗಿರುತ್ತದೆ. ಹೀಗಾಗಿ ವಿಸರಣಸಾಮರ್ಥ್ಯವುಳ್ಳ ಕೇಂದ್ರ

ಕಣಗಳ ಮತ್ತು ಉಳಿದ ಕೇಂದ್ರಕಣಗಳ ರಾಸಾಯನಿಕ ಗುಣಧರ್ಮಗಳು ಬೇರೆ ಬೇರೆ ಇರುತ್ತವೆ. ಇವುಗಳನ್ನು ರಾಸಾಯನಿಕ ಪದ್ಧತಿಗಳಿಂದ ವಿಂಗಡಿಸಬಹುದು. ಹೀಗೆಯೇ ಕೇಂದ್ರಕಣವಿಭಜನೆಯಲ್ಲಿ ನಿರ್ಮಿತವಾದ ವಿದಳನ ಖಂಡಗಳೂ ಬೇರೆ ಬೇರೆ ಮೂಲವಸ್ತುಗಳಿಗೆ ಸಂಬಂಧಿಸಿರುವದರಿಂದ ಅವುಗಳನ್ನು ರಾಸಾಯನಿಕ ಪದ್ಧತಿಗಳಿಂದ ವಿಂಗಡಿಸಬಹುದು.

ಒಂದು ತಟಸ್ಥಕಣವು ಕೇಂದ್ರಕಣದಲ್ಲಿ ಐಕ್ಯವಾದರೆ ಹೊಸ ಕೇಂದ್ರಕಣದ ಪರಮಾಣುಸಂಖ್ಯೆ ಬದಲಾಗುವದಿಲ್ಲ. ಈ ಕ್ರಿಯೆಯಲ್ಲಿ ವಿಸರಣಸಾಮರ್ಥ್ಯವುಳ್ಳ ಕೇಂದ್ರಕಣಗಳು ಮತ್ತು ಗುರಿಪಡಿಸಿದ ಮೂಲವಸ್ತುವಿನ ಕೇಂದ್ರಕಣಗಳು ಒಂದೇ ಮೂಲವಸ್ತುವಿಗೆ ಸೇರಿರುತ್ತವೆ. ಆದುದರಿಂದ ಇವುಗಳನ್ನು ರಾಸಾಯನಿಕ ಪದ್ಧತಿಗಳಿಂದ ವಿಂಗಡಿಸಲು ಸಾಧ್ಯವಿಲ್ಲ. ಆದರೆ ವಿಸರಣಸಾಮರ್ಥ್ಯವುಳ್ಳ ಕೇಂದ್ರಕಣಗಳನ್ನು ತ್ಸಿಲಾರ್ಡ ಮತ್ತು ಚಾಮರ್ಸ (Szillard & Chalmers) ಎಂಬ ವಿಜ್ಞಾನಿಗಳು ಕಂಡುಹಿಡಿದ ಪದ್ಧತಿಯಿಂದ ವಿಂಗಡಿಸಬಹುದು. ಕೇಂದ್ರಕಣದಲ್ಲಿ ತಟಸ್ಥಕಣವು ಸಂಯೋಗವಾದೊಡನೆಯೇ ವಿದ್ಯುತ್ಕಾಂತಪ್ರಭೆ ಹೊರಸೂಸುವದೆಂದು ಮೊದಲೇ ಹೇಳಿದ್ದೇವೆ. ಬಂದೂಕಿನಿಂದ ಗುಂಡನ್ನು ಒಂದು ದಿಕ್ಕಿನಲ್ಲಿ ಹಾರಿಸಿದಾಗ ಅದರ ಪ್ರತಿಕ್ರಿಯೆಯಿಂದ ಬಂದೂಕು ವಿರುದ್ಧ ದಿಕ್ಕಿನಲ್ಲಿ ಹಿಮ್ಮೆಟ್ಟುವಂತೆ, ಒಂದು ದಿಕ್ಕಿನಲ್ಲಿ ಹೊರಸೂಸಿದ ವಿದ್ಯುತ್ಕಾಂತಪ್ರಭೆಯ ಪ್ರತಿಕ್ರಿಯೆಯಿಂದ ಕೇಂದ್ರಕಣವೂ ವಿರುದ್ಧ ದಿಕ್ಕಿನಲ್ಲಿ ಹಿಮ್ಮೆಟ್ಟುವುದು. ಈ ಪ್ರತಿಕ್ರಿಯಾಶಕ್ತಿಯಿಂದ, ಈ ಕೇಂದ್ರಕಣಕ್ಕೆ ಸೇರಿದ ಪರಮಾಣು ತನ್ನ ಅಣುವಿನಿಂದ ಪ್ರತ್ಯೇಕವಾಗುತ್ತದೆ. ಹೀಗೆ ಬಿಡುಗಡೆ ಹೊಂದಿದ ಪರಮಾಣುಗಳು ಅಣುವಿನಲ್ಲಿ ತಾವು ಮೊದಲಿದ್ದ ಸ್ಥಾನಕ್ಕೆ ಹೋಗುವ ಸಂಭವ ಬಹಳ ಕಡಿಮೆ. ಹೀಗೆ ಸ್ವತಂತ್ರವಾಗಿರುವ ಪರಮಾಣುಗಳನ್ನು ಒಂದು ರೀತಿಯ ಸೋಸುವ ವಿಧಾನದಿಂದ ವಿಂಗಡಿಸಬಹುದು.

ವಿಸರಣಸಾಮರ್ಥ್ಯವಿರುವ ಒಂದು ಮೂಲದ ಸಾಮರ್ಥ್ಯವನ್ನು, ರೇಡಿಯಂ ಮೂಲವಸ್ತುವನ್ನು ಕಂಡುಹಿಡಿದ ವಿಜ್ಞಾನಿ ಕ್ಯೂರಿಯವರ ಗೌರವಾರ್ಥವಾಗಿ ಕ್ಯೂರಿ ಎಂಬ ಮೂಲ ಪ್ರಮಾಣದಲ್ಲಿ ಅಳೆಯುತ್ತಾರೆ. ಒಂದು ಮೂಲದ ವಿಸರಣಸಾಮರ್ಥ್ಯವು ಒಂದು ಕ್ಯೂರಿ ಎಂದರೆ, ಪ್ರತಿಕ್ಷಣದಲ್ಲಿ ಆ ಮೂಲದ 3.7×10^{10} ಕೇಂದ್ರಕಣಗಳು ವಿಸರಣವನ್ನು ಹೊರಸೂಸುತ್ತವೆ ಎಂದು ಅರ್ಥ. ಸಾಮಾನ್ಯವಾಗಿ ಕೇಂದ್ರಕಣಕ್ರಿಯೆಯನ್ನವಲಂಬಿಸಿ, 10^{-8} ರಿಂದ 10^{4} ಕ್ಯೂರಿ ಪ್ರಮಾಣದಲ್ಲಿ ಕೃತಕ ವಿಸರಣಮೂಲಗಳನ್ನು ತಯಾರಿಸಬಹುದು

ಕೃತಕ ವಿಸರಣಕ್ರಿಯೆಯಲ್ಲಿ ಕಂಡುಬರುವ ವಿಸರಣದ ಗುಣಧರ್ಮಗಳು ಮತ್ತು ಅದಕ್ಕೆ ಸಂಬಂಧಿಸಿದಂತೆ ಪರಮಾಣುವಿನಲ್ಲಿ ಆಗುವ ಬದಲಾವಣೆಗಳು

ಸ್ವಾಭಾವಿಕ ವಿಸರಣಕ್ರಿಯೆಯಲ್ಲಿರುವಂತೆಯೇ ಇರುತ್ತವೆ. ವಿಸರಣಕ್ರಿಯೆಯಲ್ಲಿ ಸಾಮಾನ್ಯವಾಗಿ ಕಂಡುಬರುವ ಮೂಲಕ್ರಿಯೆಗಳನ್ನು ಸ್ಥೂಲವಾಗಿ ಪರಿಶೀಲಿಸೋಣ. ಕೇಂದ್ರಕಣದಿಂದ ಹೊರಸೂಸಿದ ವಿದ್ಯುತ್ಕಣಗಳ ವೇಗವು ಕೇಂದ್ರಕಣದ ವಿದ್ಯುತ್ತಿನಿಂದಾಗಿ ಹೆಚ್ಚು ಕಡಿಮೆಯಾಗುತ್ತದೆ. ಹೀಗೆ ವೇಗೋತ್ಕರ್ಷವನ್ನು ಅನುಭವಿಸುವ ವಿದ್ಯುತ್ಕಣಗಳು ವಿದ್ಯುತ್ಕಾಂತಪ್ರಭೆಯನ್ನು ಹೊರಸೂಸುತ್ತವೆ. ಈ ವಿದ್ಯುತ್ಕಾಂತಪ್ರಭೆಗೆ ವೇಗೋತ್ಕರ್ಷ ಪ್ರಚೋದಿತ ಪ್ರಭೆ ಅಥವಾ ಸಂಕ್ಷಿಪ್ತವಾಗಿ ಉತ್ಕರ್ಷಪ್ರಭೆ ಎನ್ನಬಹುದು. ಈ ಉತ್ಕರ್ಷಪ್ರಭೆಯು ಅಧಿಕಪರಮಾಣು ಸಂಖ್ಯೆಯ ಮೂಲವಸ್ತುಗಳಲ್ಲಿ ಮಾತ್ರ ಗಣನೀಯವಾಗಿರುತ್ತದೆ. ವಿದ್ಯುತ್ಕಣವನ್ನು ಹೊರಸೂಸಿದನಂತರ ಪರಿವರ್ತನೆಹೊಂದಿದ ಕೇಂದ್ರಕಣವು ಕೆಲವು ವೇಳೆ ತನ್ನ ಯಾವದಾದರೊಂದು ಹೆಚ್ಚು ಶಕ್ತಿಯ ಸ್ಥಿತಿಯಲ್ಲಿ ಉಳಿಯಬಹುದು. ಇಂಥ ಕೇಂದ್ರಕಣವು ಈ ಹೆಚ್ಚಿನ ಶಕ್ತಿಯನ್ನು ಒಂದು ಇಲ್ಲವೆ ಹೆಚ್ಚು ಪ್ರಭಾಕಣಗಳ ರೂಪದಲ್ಲಿ ಹೊರಸೂಸುವದು. ಈ ಪ್ರಭಾಕಣಗಳು ನಿರ್ದಿಷ್ಟಶಕ್ತಿಯನ್ನು ಹೊಂದಿರುತ್ತವೆ.

ಇನ್ನೊಂದು ರೀತಿಯ ಕ್ರಿಯೆಯಲ್ಲಿ ವಿದ್ಯುತ್ಕಣವು ಅದೇ ಪರಮಾಣುವಿನ ಕೇಂದ್ರಕಣದಲ್ಲಿ ಸಂಯೋಗವಾಗುವುದರಿಂದ, ಆ ಕೇಂದ್ರಕಣವು ಸ್ಥಿರಾವಸ್ಥೆಯನ್ನು ಹೊಂದುವದು. ಕೇಂದ್ರಕಣಕ್ಕೆ ಅತ್ಯಂತ ಸಮೀಪದಲ್ಲಿದ್ದು ಅದಕ್ಕೆ ಹೆಚ್ಚು ಶಕ್ತಿಯಿಂದ ಬಂಧಿತವಾಗಿರುವ ವಿದ್ಯುತ್ಕಣಕ್ಕೆ K-ವಿದ್ಯುತ್ಕಣ ಎಂದು ಹೆಸರು. ಈ ವಿದ್ಯುತ್ಕಣಕ್ಕಿಂತ ಕಡಿಮೆ ಶಕ್ತಿಯಿಂದ ಬಂಧಿತವಾಗಿರುವ ವಿದ್ಯುತ್ಕಣಕ್ಕೆ L-ವಿದ್ಯುತ್ಕಣವೆಂದು ಹೆಸರು. ಕೇಂದ್ರಕಣವು K-ವಿದ್ಯುತ್ಕಣವನ್ನು ಸ್ವಾಧೀನಪಡಿಸಿಕೊಂಡಾಗ ಬಿಡುಗಡೆಯಾದ ಹೆಚ್ಚಿನ ಶಕ್ತಿಯು ಅಲ್ಪಕಣ ಎಂಬ ದ್ರವ್ಯರಾಶಿಯೇ ಇರದ ಕಣದ ರೂಪದಲ್ಲಿ ಹೊರಸೂಸುವದು. ಪರಮಾಣುವಿನಲ್ಲಿರುವ ವಿದ್ಯುತ್ಕಣ ಮತ್ತು ಕೇಂದ್ರಕಣಗಳೊಡನೆ ಈ ಅಲ್ಪಕಣವು ಬಹಳ ದುರ್ಬಲವಾಗಿ ಕೂಡುವದರಿಂದ ಅದರ ಇರುವಿಕೆಯನ್ನು ಗುರುತಿಸುವುದು ಕಷ್ಟ. ವಿದ್ಯುತ್ಕಣವು ಸಂಯೋಗವಾದಮೇಲೆ ಕೇಂದ್ರಕಣದ ದ್ರವ್ಯಮಾನಸಂಖ್ಯೆ ಬದಲಾಗದಿದ್ದರೂ, ಪರಮಾಣುಸಂಖ್ಯೆ ಒಂದರಿಂದ ಕಡಿಮೆಯಾಗುವದು. ಈ ಹೊಸ ಪರಮಾಣುವಿನಲ್ಲಿ K-ವಿದ್ಯುತ್ಕಣದ ಸ್ಥಾನ ಬರಿದಾಗುತ್ತದೆ. ಈ ಬರಿದಾದ ಸ್ಥಾನವನ್ನು L-ವಿದ್ಯುತ್ಕಣವು ಆಕ್ರಮಿಸುವದು. ಈ ವಿದ್ಯುತ್ಕಣ ಸ್ಥಾನಪರಿವರ್ತನೆಯಿಂದ ಉತ್ಪನ್ನವಾದ ಶಕ್ತಿಯು ವಿದ್ಯುತ್ಕಾಂತ ಪ್ರಭೆಯ ರೂಪದಲ್ಲಿ ಹೊರಸೂಸುವದು. ಈ ಪ್ರಭೆಗೆ K-ಕ್ಷ-ಕಿರಣಗಳೆಂದು ಹೆಸರು. ಹೀಗಾಗಿ ವಿದ್ಯುತ್ಕಣಸಂಯೋಗಕ್ರಿಯೆಯನ್ನು ಕೇವಲ K ಕ್ಷ-ಕಿರಣಗಳ ಹೊರಸೂಸುವಿಕೆಯಿಂದ ಕಂಡುಹಿಡಿಯಬಹುದು. ಕೇವಲ ಐತಿಹಾಸಿಕ ಕಾರಣಗಳಿಗಾಗಿ ವಿದ್ಯುತ್ಕಣ ಸ್ಥಾನಪರಿವರ್ತನೆಯಿಂದಾಗಿ ಪರಮಾಣು

ವಿನಿಂದ ಹೊರಬರುವ ಹೆಚ್ಚು ಶಕ್ತಿಯ ವಿದ್ಯುತ್ಕಾಂತಪ್ರಭೆಗೆ ಕ್ಷ-ಕಿರಣಗಳೆಂದೂ, ಕೇಂದ್ರಕಣದಿಂದ ಹೊರಬರುವ ವಿದ್ಯುತ್ಕಾಂತಪ್ರಭೆಗೆ ಗಾಮಾ ಕಿರಣಗಳೆಂದು ಹೆಸರು ಬಂದಿದೆ.

ಕೆಲವು ವೇಳೆ ಕೇಂದ್ರಕಣದಿಂದ ಹೊರಬಂದ ಗಾಮಾಕಿರಣವು ತನ್ನ ಎಲ್ಲ ಶಕ್ತಿಯನ್ನು ಅದೇ ಪರಮಾಣುವಿನ K-ಇಲ್ಲವೆ L-ವಿದ್ಯುತ್ಕಣಕ್ಕೆ ಕೊಡುವ ಸಂಭವವಿರುತ್ತದೆ. ಆಗ ವಿದ್ಯುತ್ಕಣವು ತಾನು ಗಳಿಸಿದ ಈ ಶಕ್ತಿಯ ಸ್ವಲ್ಪ ಭಾಗವನ್ನು ಪರಮಾಣುವಿನಿಂದ ತನ್ನ ಬಂಧನವನ್ನು ಬಿಡಿಸಿಕೊಳ್ಳಲು ಉಪಯೋಗಿಸಿ ಕಡಿಮೆ ಶಕ್ತಿಯಿಂದ ಹೊರಬರುತ್ತದೆ. ಹೀಗೆ ವಿದ್ಯುತ್ಕಣವು ಕಳೆದುಕೊಂಡ ಶಕ್ತಿಗೆ ಬಂಧನಶಕ್ತಿ ಎಂದು ಹೆಸರು ಈ ಕ್ರಿಯೆಯಿಂದಾಗಿ ಗಾಮಾಕಿರಣಗಳ ಮೂಲಗಳು ಒಂದೇ ಶಕ್ತಿಯ ವಿದ್ಯುತ್ಕಣಗಳನ್ನು ಹೊರಸೂಸುತ್ತವೆ. ಈ ಕ್ರಿಯೆಗೆ ಅಂತರಪ್ರಭಾವಿದ್ಯುತ್ಕಣ ಬದಲಾವಣೆ ಎಂದು ಹೆಸರು. ಈ ಕ್ರಿಯೆಯಿಂದ ಬರಿದಾದ K-ವಿದ್ಯುತ್ಕಣಗಳ ಸ್ಥಾನವನ್ನು L-ವಿದ್ಯುತ್ಕಣಗಳು ಆಕ್ರಮಿಸುವದರಿಂದ K-ಕ್ಷ-ಕಿರಣಗಳೂ ಹೊರಸೂಸುತ್ತವೆ.

ಮೇಲಿನ ಎಲ್ಲ ಕ್ರಿಯೆಗಳು, ಕೇಂದ್ರಕಣಪರಿವರ್ತನೆಗಳಲ್ಲಿ ಕಂಡುಬರುವ ಮೂಲಕ್ರಿಯೆಗಳು. ಯಾವದೇ ಕೇಂದ್ರಕಣ ಪರಿವರ್ತನೆಯಲ್ಲಿ ಅನೇಕ ಕ್ರಿಯೆಗಳು ಭಾಗವಹಿಸಬಹುದು.

ವಿಸರಣಸಾಮರ್ಥ್ಯವಿರುವ ಕೇಂದ್ರಕಣಗಳನ್ನು ವಿವಿಧ ರೀತಿಗಳಲ್ಲಿ ಉಪಯೋಗಿಸಬಹುದು. ಇವುಗಳ ಮುಖ್ಯ ಉಪಯೋಗಗಳನ್ನು ಈಗ ಪರ್ಯಾಲೋಚಿಸೋಣ. ಕೇಂದ್ರಕಣದಿಂದ ಹೊರಸೂಸಿದ ಕಣಗಳನ್ನು ಪರಿಶೀಲಿಸುವದರಿಂದ ಕೇಂದ್ರಕಣಗಳ ಗುಣಧರ್ಮಗಳನ್ನಾಳುವ ಭೌತಿಕ ನಿಯಮಗಳನ್ನು ತಿಳಿದುಕೊಳ್ಳಬಹುದು. ಈಗಾಗಲೇ 500ಕ್ಕೂ ಹೆಚ್ಚು ಕೃತಕ ಕೇಂದ್ರಕಣಗಳನ್ನು ವಿಜ್ಞಾನಿಗಳು ಪರಿಶೀಲಿಸಿದ್ದಾರೆ. ಆದರೆ ಈ ಪರಿಶೀಲನೆಯ ಸ್ಥೂಲ ರೂಪಗಳನ್ನು ಅರ್ಥಮಾಡಿಕೊಳ್ಳುವ ಅವಶ್ಯಕತೆ ಎಲ್ಲರಿಗೂ ಇಲ್ಲ. ಒಂದು ಜಾತಿಯ ಕೇಂದ್ರಕಣದಿಂದ ಹೊರಬರುವ ವಿಸರಣವು ವಿಶಿಷ್ಟ ಗುಣಧರ್ಮಗಳನ್ನು ಹೊಂದಿರುತ್ತದೆ. ಆ ವಿಶಿಷ್ಟ ಗುಣಧರ್ಮಗಳನ್ನು ಉಪಯೋಗಿಸಿಕೊಂಡು, ಯಾವದೇ ವಸ್ತುವಿನಲ್ಲಿ ಇದೇ ಜಾತಿಯ ಕೇಂದ್ರಕಣಗಳಿವೆಯೆಂದು ಕಂಡುಹಿಡಿಯಬಹುದು. ಇದರಿಂದ ರಸಾಯನಶಾಸ್ತ್ರ, ಜೀವಶಾಸ್ತ್ರ, ಕೃಷಿಶಾಸ್ತ್ರ ಮತ್ತು ವೈದ್ಯಕೀಯಶಾಸ್ತ್ರಗಳಿಗೆ ಸಂಬಂಧಿಸಿದ ರಾಸಾಯನಿಕ ಕ್ರಿಯೆಗಳಲ್ಲಿ ಯಾವದೇ ಮೂಲವಸ್ತುವಿನ ಪಾತ್ರವನ್ನು ನಿರ್ಧರಿಸಲು ಸಾಧ್ಯ. ಇದಲ್ಲದೆ ಕೃತಕವಿಸರಣಕ್ರಿಯೆಯನ್ನು, ಆಹಾರಪದಾರ್ಥಗಳು ಕೆಡದಂತೆ ಇಡುವದರಲ್ಲಿ, ವೈದ್ಯಕೀಯ ಚಿಕಿತ್ಸೆಯಲ್ಲಿ ಮತ್ತು ವಿವಿಧ ಯಂತ್ರೋಪಕರಣಗಳನ್ನು ಪರಿಶೀಲಿಸುವಲ್ಲಿ ಉಪಯೋಗಿಸಬಹುದು.

ಅಂಗಾರ

ಶ್ರೀನಿವಾಸ ಕುಲಕರ್ಣಿ

ಥಳಮುಳಿಸುವ ಥರದ ಮೇಲೆ
ಮನೆ ಕಟ್ಟಿ
ಮಾಲಕಿಯ ಮುದ್ರೆ
ಒತ್ತಿಕೊಂಡಿದ್ದೆ—
ದೃಷ್ಟಿಹರಿದಲ್ಲೆಲ್ಲ
ಸೃಷ್ಟಿ ಬೇಲಿಯ ಸುತ್ತಿ
ನಂದನದ ಸೆರೆಯೊಳಗೆ—
ಬಂಧಿಯಾಗಿದ್ದೆ
ಮರುಳ ಒಂಟೆಯೊಲು
ಮುಳ್ಳುಕಂಟಿಯ ತಿಂದು
ನನ್ನ ಗಂಟಲ ನಾನೇ
ಹರಿದುಕೊಂಡಿದ್ದೆ
ಭೂಕಂಪ ಮಹಾಪೂರ
ಪರವಾಗಿ ಬಂದಾಗ
ಜಲಬಿಂದುಮಾಲೆಯನೆ
ಧರಿಸಿಕೊಂಡಿದ್ದೆ
ಕತ್ತಲೆಯ ಕಮ್ಮಟದ
ನಾಣ್ಯಗಳ ಬಳಿಬಳಿದು
ವ್ಯರ್ಥ ಎಣಿಸುತ್ತ
ಕಾಲ ಕಳೆದಿದ್ದೆ—
ನನ್ನೊಳಗೆ ನೀನಿಳಿದು
ಬೆಳಕಿಂಡಿ ತೆರೆದಾಗ
ಭೂತಗನ್ನಡಿಯೊಳಗೆ
ಬಿಂಬಿಸಿದ್ದೆ
ಅಣುರೇಣು ಸಮ್ಮಿಳನ
ಜನ್ಮಜನ್ಮದ ಋಣಕೆ
ನಿನ್ನ ಸ್ಮರಣೆಯ ಸಿದಿಗೆ
ಬಿಗಿದುಕೊಂಡಿದ್ದೆ—
ಸೂರ್ಯಮಂಡಲವಪ್ಪಿ
ಸುಟ್ಟು ಕರಕಾದಾಗ
ದಿವ್ಯ ಉಪಕಾರಕ್ಕೆ
ಅಂಗಾರವಾಗಿದ್ದೆ. □ □

ಉಳಿಯ(=ಹುಳಿಯ)ಮೇಶ್ವರ ಚಿಕ್ಕಯ್ಯನ ಶಾಸನ

ಎಂ. ಎಂ. ಕಲಬುರ್ಗಿ

ರಾಯಚೂರ ಜಿಲ್ಲೆಯ ಸಿಂಧನೂರ ತಾಲೂಕಿನ ದೇವರಗುಡಿ ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನದ ಹೊರಗಡೆ ಒಂದು ಶಿಲಾಶಾಸನ ನಿಂತಿದೆ.[೧] ೧೨ನೆಯ ಶತಮಾನದ ರಾಜಕೀಯ ಧಾರ್ಮಿಕ ಹಿನ್ನೆಲೆಯಲ್ಲಿ ಶರಣ ಚಿಕ್ಕಯ್ಯನ ಪರಿಚಯವನ್ನೊದಗಿಸುವ ೭೪ ಪಙ್ತಿಗಳ ಈ ಶಾಸನ ಹುಳಿಯಮೇಶ್ವರ ದೇವರಿಗೆ ಬಿಟ್ಟ ಬೇರೆ ಬೇರೆ ಕಾಲದ ಐದು ದತ್ತಿಗಳನ್ನೊಳಗೊಂಡಿದೆ.

೧ನೆಯ ದತ್ತಿ : ಪಙ್ತಿ ೧–೧೩. ಹುಳಿಯಮೇಶ್ವರ ಲಿಂಗಕ್ಕೆ "ಕೇದಾರ ಪಂಡಿತರ ಕಾಲಂ ಕರ್ಚಿ" ಕದ್ದರನೂರ ನಾಲ್ವರು ಪ್ರಭುಗಳು ಚಾಳುಕ್ಯ ವಿಕ್ರಮನ ೨೫ನೆಯ ವರುಷ ಅಂದರೆ ಕ್ರಿ.ಶ ಸು. ೧೧೦೦ ರಂದು ನೀಡಿದ ದತ್ತಿ ಇದರ ವಿಷಯ.

೨ನೆಯ ದತ್ತಿ : ಪಙ್ತಿ ೧೩–೩೬. ಈಶ್ವರ ದಂಡನಾಯಕನು ಹುಳಿಯಮೇಶ್ವರ ದೇವರಿಗೆ ನೀಡಿದ ದತ್ತಿಯ ವಿಷಯವಿದೆ. ಮಿತಿ ಹೇಳಿಲ್ಲ.

೩ನೆಯ ದತ್ತಿ : ಪಙ್ತಿ ೩೬–೫೫. ಸೋವರಸ ದಂಡನಾಯಕ, ಈಶ್ವರ ದಂಡನಾಯಕರು ಚೌಂಡರಸನ ಹೆಸರಿನಲ್ಲಿ ಮತ್ತು ತಮ್ಮ ಹೆಸರಿನಲ್ಲಿ "**ಚಿಕ್ಕಯ್ಯ ಪಂಡಿತರ** ಕಾಲಂ ಕರ್ಚಿ" ಹುಳಿಯಮೇಶ್ವರ ದೇವರಿಗೆ ಬಿಟ್ಟ ದತ್ತಿ. ಮಿತಿ ಸರ್ವಧಾರಿ ಸಂವತ್ಸರ ಪುಷ್ಯ ಶುದ್ಧ ತ್ರಯೋದಶಿ ಆದಿವಾರ ಅಂದರೆ ಕ್ರಿ.ಶ. ೧೧೬೮ರ ಡಿಶಂಬರ ತಿಂಗಳಿನ ಒಂದು ದಿನ.

೪ನೆಯ ದತ್ತಿ : ಪಙ್ತಿ ೫೬–೬೧. ಸಿಂದರಾಚಮಲ್ಲನು ಹುಳಿಯಮೇಶ್ವರ ದೇವರಿಗೆ "**ಚಿಕ್ಕಯ್ಯ ಪಂಡಿತರ** ಕಾಲಂ ಕರ್ಚಿ" ಬಿಟ್ಟ ದತ್ತಿ. ಮಿತಿ ಹೇಳಿಲ್ಲ.

೫ನೆಯ ದತ್ತಿ : ಪಙ್ತಿ ೬೨–೬೪. ಸಿಂದ ಹರಿಹರದೇವನು "**ಚಿಕ್ಕಯ್ಯ ಪಂಡಿತರ** ಕಾಲಂ ಕರ್ಚಿ" ಹುಳಿಯಮೇಶ್ವರದೇವರಿಗೆ ಬಿಟ್ಟ ದತ್ತಿ. ಮಿತಿ ಹೇಳಿಲ್ಲ. ಎರಡನೆಯ ದತ್ತಿ ಭಾಗದಲ್ಲಿ

ಶ್ರೀ ಸಕಳ ದಿವಿಜಪತಿ ಪರ। ಮೇಶಂ ಶ್ರೀ ಶಂಭು ಹುಳಿಯಮೇಶ್ವರ ದೇವಂ।
ಭಾಸುರ ಶಶಾಂಕಜೂಟನು। ಮೇಶಂ ನಮಗೀಗೆ ಸಕಳಸುಖಸಂಪದಮಂ॥
ಕುನ್ತಳ ಕಾನ್ತೆಗೆ ನೋಡಲು। ಕಿನ್ನಿಡೆ ಕನ್ನಡಿಯೆನಿಪ್ಪ ಕೆಳವಾಡಿಯೊಳ।
ತ್ಯನ್ತ ಶುಭನಿಳಯ ಗೌರೀ। ಕಾನ್ತಂ ಶ್ರೀಹುಳಿಯಮೇಶ್ವರಂ ನೆಲಸಿರ್ದನು॥

೧. ಈ ಶಾಸನವನ್ನು ಅಚ್ಚುಮಾಡಿ ತಂದುಕೊಟ್ಟ ನನ್ನ ವಿದ್ಯಾರ್ಥಿಮಿತ್ರ ಶ್ರೀ ಮುಕುಂದಿಮಠ ಅವರ ನೆರವನ್ನು ನೆನೆಯುತ್ತೇನೆ.

ಎಂದು ಹೇಳಿದ ತರುವಾಯ ಚೌಂಡರಸನ ಮಂತ್ರಿ ಸೋಮದಂಡನಾಥ, ಸೋಮದಂಡನಾಥನ ತಮ್ಮ ಈಶ್ವರದಂಡನಾಥ, ಈಶ್ವರದಂಡನಾಥನು ಕೇವಾಡಿ ನಾಡನಾಳುತ್ತಿದ್ದ ವಿಷಯ, ಓರುವಾಯಿಯ ಮಲ್ಲಚಮೂವಲ್ಲಭ ಮತ್ತು ಚಿಕ್ಕಮಲ್ಲದೇವ ಚಮೂಪ, ಇವರ ಮತದಂತೆ ಈಶ್ವರದಂಡನಾಥನು ಹುಳಿಯುಮೇಶ್ವರ ದೇವರಿಗೆ ದತ್ತಿ ಬಿಟ್ಟ ವಿಷಯದೊಂದಿಗೆ ೨ನೆಯ ದತ್ತಿ ಕೊನೆಗೊಳ್ಳುತ್ತದೆ.

ಚಿಕ್ಕಯ್ಯನನ್ನು ಕುರಿತು ವಿವೇಚಿಸಬೇಕಾದ ನಮಗೆ ೩, ೪ ಮತ್ತು ೫ನೆಯ ದತ್ತಿಗಳು ಪ್ರಸ್ತುತವಾಗಿದ್ದು ಅವುಗಳ ಮುಖ್ಯ ಬರವಣಿಗೆ ಇಂತಿದೆ:

ಸಕಳಸುರ ಸಿದ್ಧ ಕಿನ್ನರ। ನಿಕರ ತಿರೀಟ ಬಹುರತ್ನಕೋಟಿರಂಜಿತಚರಣಂ।
ಸಕಳಗುರು ಹುಳಿಯುಮೇಶಾ। ಕರುಣದ ಭ್ರಿತ್ಯ ನನ್ನ ಚಿಕ್ಕಯತೀಂದ್ರಂ॥

ಲಾಳ ವರಾಳ ಗೂರ್ಜರ ತುರುಷ್ಕ ಹಿಮಾಚಳ ಮೇರೆಯುಪ್ಪಿನಂ।
ಕೇಳಿರೆ ಬೆಂಗಿಮಂಡಳ ಕಳಿಂಗ ಕುಳಂ ಜಳರಾಶಿ ಪೂರ್ಬ್ಬಕಂ।
ಚೋಳ ದಿಶಾವರಂ ನೆಗಳ್ದ ತೆಂಕಣ ಕೊಂಕಣ ಪಾಡುತಿಪ್ಪರೀ।
ಪಾಳಿತ ಕೀರ್ತ್ತಿಯುಂ ಹುಳಿಯುಮೇಶನ ಗೀತವ ಲೋಕಲೋಕದೊಳು॥

ತರ್ಕ್ಕ ವ್ಯಾಕರಣಂಗಳು। ಅಕ್ಕರನುಂ ಶಬ್ದಶಾಸ್ತ್ರಮುಂ ಪ್ರೋದುಗಳಂ।
ತಿಕ್ಕೆ ಶಿವಭಕ್ತಿಯೊಳು [ಸವೆ। ದ] ಕೆಯ್ಯಂ ಹಲರು ಮೆಚ್ಚಲೀ ಚಿಕ್ಕಯ್ಯ॥

ದಿಕ್ಕರಿಯ ಕಟದ ತಳದೊಳು। ಮಿಕ್ಕ ಸುರದ್ರುಮದ ಮೇರುಗಿರಿ ಮನ್ದಿರದೊಳು।
ಜೊಕ್ಕನೆ ಕೀರ್ತ್ತಿಲತಾವಧು। ಚಿಕ್ಕಯ್ಯನ ಹೆಸರ ಜಸನ ಬರೆಯಿಸುತಿರ್ದ್ದಳು॥

ಶ್ರೀ ಸ್ವಸ್ತಿ ಶ್ರೀಮತು ಸರ್ಬ್ಬಧಾರಿ ಸಂವತ್ಸರದ ಪುಷ್ಯ ಸುದ್ಧ ತ್ರಯೋದಶಿ ಆದಿವಾರದಂದುತ್ತರಾಯಣ ಸಂಕ್ರಾನ್ತಿ ಪರ್ಬ್ಬನಿಮಿತ್ತದಿಂ ಶ್ರೀಮನ್ಮಹಾಮಂಡಳೇಶ್ವರ ಚೌಂಡದೇವರಸರ ಹೇಳಿಕೆಯಿಂ ಮಹಾಪ್ರಧಾನ ಸೋಮರಸದಂಡನಾಯಕರ ಮತ್ತು ಈತನ ತಮ್ಮ ಈಶ್ವರದಂಡನಾಯಕರು ಶ್ರೀಮನ್ಮಹಾಲಿಂಗಂ ಹುಳಿಯುಮೇಶ್ವರ ದೇವರಂಗಭೋಗಕ್ಕಂ ಖಂಡಸ್ಫುಟಿತ ಜೀರ್ಣ್ಣೋದ್ಧಾರಕ್ಕವೆಂದು **ಆ ಮಠದಾಚಾರ್ಯರಪ್ಪ ಚಿಕ್ಕಯ್ಯ ಪಂಡಿತರ** ಕಾಲಂ ಕರ್ಚ್ಚಿ.... (ದತ್ತಿ ವಿವರಣೆಯಿದೆ)

ಸ್ವಸ್ತಿ ಸಮಸ್ತ ಪ್ರಸಸ್ತಿಸಹಿತಂ ಶ್ರೀಮನ್ಮಹಾಮಂಡಳೇಶ್ವರಂ ಶಿವಪಾದಶೇಖರಂ ಮಾಹೇಶ್ವರಜನ ಪ್ರಸಾದಾಸಾದಕಂ ಪರಬಳಸಾದಕಂ ಸಿಂದಕುಳಕಮಳಮಾರ್ತ್ತಾಂಡಂ ಶ್ರೀ ಕಲಿದೇವರ ಪಾದಾರಾಧಕನಪ್ಪ ರಾಚಮಲ್ಲದೇವರಸರು ಸೂರ್ಯಗ್ರಹಣನಿಮಿತ್ತದಿಂ....ಶ್ರೀಮನ್ಮಹಾಲಿಂಗಂ ಹುಳಿಯುಮೇಶ್ವರ ದೇವರಂಗಭೋಗಕ್ಕೆಂದು **ಆ ದೇವರ ಮಠದಾಚಾರ್ಯರಪ್ಪ ಚಿಕ್ಕಯ್ಯ ಪಂಡಿತರ** ಕಾಲಂ ಕರ್ಚ್ಚಿ....(ದತ್ತಿವಿವರಣೆಯಿದೆ).

ಸ್ವಸ್ತಿ ಶ್ರೀಮನ್ಮಹಾಮಂಡಳೇಶ್ವರಂ ಪಾತಾಳಚಕ್ರವರ್ತ್ತಿ ಸಿಂದನಾರಾಯಣಂ ನುಡಿದಂತೆಗಂಡನುಂ ನೀತಿಚಾಣಕ್ಯನುಂ ಶ್ರೀಮತುಕಪಾಳೇಸ್ವರ

ದೇವರ ಪಾದಾರಾಧಕಂ ಹರಿಹರದೇವರಸರು...ಶ್ರೀಮನ್ಮಹಾಲಿಂಗಂ ಹುಳಿಯು ಮೇಶ್ವರದೇವರಂಗಭೋಗಕೆಂದು **ಆ ದೇವರ ಮಠದಾಚಾರ್ಯ್ಯರಪ್ಪ ಚಿಕ್ಕಯ್ಯಪಂಡಿತರ** ಕಾಲಂ ಕರ್ಚ್ಚಿ....(ದತ್ತಿ ವಿವರಣೆಯಿದೆ. ಇನ್ನೆರಡು ಚಿಕ್ಕ ದತ್ತಿಗಳಿವೆ) ಇನ್ನು ಈ ಉದ್ಧರಣೆಗಳನ್ನು ವಿವೇಚಿಸಬಹುದು.

ಚಿಕ್ಕಯ್ಯನ ಕಾಲ : ಎಲಬುರ್ಗಿಯ ಸಿಂದಚಾವುಂಡ II, ಕುರಗೋಡ ರಾಚಮಲ್ಲ I, ಮತ್ತು ಸಿಂದ ಹರಿಹರದೇವ, ಈ ಮೂವರಿಂದ ಚಿಕ್ಕಯ್ಯ ದಾನಪಡೆದಿದ್ದಾನೆ. ಸಿಂದಚಾವುಂಡನು ದತ್ತಿನೀಡಿದ ಕಾಲ "ಸರ್ವಧಾರಿ ಸಂವತ್ಸರ ಪುಷ್ಯ ಶುದ್ಧ ತ್ರಯೋದಶಿ ಆದಿವಾರ ಉತ್ತರಾಯಣ ಸಂಕ್ರಾಂತಿ" ಅಂದರೆ ಕ್ರಿ.ಶ. ೧೧೬೮ರ ಡಿಸೆಂಬರದ ಒಂದು ದಿನ. ರಾಚಮಲ್ಲ Iನು ದತ್ತಿ ನೀಡಿದ ಮಿತಿ ಈ ಶಾಸನದಲ್ಲಿ ಹೇಳಿಲ್ಲವಾದರೂ ಈತನ ಕಾಲ ಕ್ರಿ. ಶ. ೧೧೭೩-೭೭ ಎಂಬುದು ಸರ್ವಶ್ರುತ. ಹರಿಹರದೇವನು ದತ್ತಿ ನೀಡಿದ ಮಿತಿ ಹೇಳಲಾಗಿಲ್ಲ; ಈತನಾರೆಂಬುದೂ ನನಗೆ ತಿಳಿದುಬರಲಿಲ್ಲ. ಬಹುಶಃ ಇದೇ ಸುಮಾರಿಗೆ ಬಾಳಿದ ವ್ಯಕ್ತಿಯಾಗಿರಬೇಕು.

ಇದೆಲ್ಲವನ್ನು ನೋಡಿದರೆ ಕ್ರಿ. ಶ. ೧೧೬೮ರಲ್ಲಿ ಇದ್ದ ಚಿಕ್ಕಯ್ಯನು ಕನಿಷ್ಟ ಪಕ್ಷ ಕ್ರಿ.ಶ. ೧೧೭೩ ಇಲ್ಲವೆ ೧೧೭೭ ರ ವರೆಗಾದರೂ ಬದುಕಿರಬೇಕೆನಿಸುತ್ತದೆ. ಅಂದರೆ ಬಸವಣ್ಣನವರ ಸಮಕಾಲೀನನಾಗಿದ್ದ ಚಿಕ್ಕಯ್ಯನು ಮುಂದೆ ಇನ್ನೂ ಕೆಲವು ವರುಷ ಬದುಕಿರಬಹುದು. ಆದಕ್ಕಾಗಿ ಕವಿಚರಿತೆಕಾರರು ಈತನ ಕಾಲ ಕ್ರಿ. ಶ. ೧೧೬೦ ಎಂದಿರುವುದು ಸತ್ಯಕ್ಕೆ ದೂರವಾಗಿಲ್ಲ. ಇನ್ನು ಚಿಕ್ಕಯ್ಯನ ವಚನಕ್ಕೆ ಸಂಬಂಧಿಸಿದ "ಅಂದು ಕಲ್ಯಾಣದಲ್ಲಿ ಹುಸಿಯುನೆ ದಿಟವ ಮಾಡಿ ಬದನೆ ಕಾಯಲಿಂಗವ ಮಾಡಿಸಲೀಸನೆ ನಮ್ಮ ಬಸವಣ್ಣನು" ಎಂಬ ಮಾತನ್ನು ಆಧಾರ ವಾಗಿಟ್ಟುಕೊಂಡು ಶ್ರೀ ಡಿ. ಎಲ್. ಎನ್. ಅವರು "ಈ ವಚನದಲ್ಲಿ ಬಸವನನ್ನು 'ನಮ್ಮ ಬಸವಣ್ಣ' ಎಂದು ಕರೆದಿರುವದನ್ನು ನೋಡಿದರೆ ಚಿಕ್ಕಯ್ಯನು ಇವನನ್ನು ಚೆನ್ನಾಗಿ ಬಲ್ಲವನಾಗಿರಬೇಕು. ಅಲ್ಲದೆ ಅವನು ಹಿಂದೆ ಮಾಡಿದ ಪವಾಡವನ್ನು ಕೆಲವು ಕಾಲದ ಮೇಲೆ ವರ್ಣಿಸಿರುವ ಹಾಗೆ ತೋರುತ್ತದೆ. ಇದರಿಂದ ಚಿಕ್ಕಯ್ಯನ ಕಾಲವು ಸುಮಾರು ೧೧೮೦ ಎಂದು ನಮಗೆ ತೋರುತ್ತದೆ"* ಎಂದು ಊಹಿಸಿದುದೂ ಸತ್ಯಕ್ಕೆ ದೂರವಾಗಿಲ್ಲ. ಒಟ್ಟಿನಲ್ಲಿ ಬಸವಣ್ಣನವರ ಸಮಕಾಲೀನನಾಗಿದ್ದ ಚಿಕ್ಕಯ್ಯನು ಮುಂದೆ ಇನ್ನೂ ಕೆಲವು ವರುಷ ಬದುಕಿದ್ದಾನೆಂಬುದು ಸ್ಪಷ್ಟ.

ಹುಳಿಯುಮೇಶ್ವರ-ಉಳಿಯುಮೇಶ್ವರ :

ಈ ಶಾಸನದ ಮೈತುಂಬ ಹುಳಿಯುಮೇಶಂ, ಹುಳಿಯುಮೇಶ್ವರಂ, ಹುಳಿಯುಮೇಶ್ವರದೇವಂ, ಶಂಭುಹುಳಿಯುಮೇಶ್ವರದೇವಂ, ಶ್ರೀ ಶಂಭುಹುಳಿಯು-

* ಕರ್ಣಾಟಕ ಕವಿಚರಿತೆ, ಅನುಬಂಧ II, ಪುಟ ೪೯; ೧೯೬೧ (ಪರಿಶೋಧಿತ ಮುದ್ರಣ).



ಹುಳಿಯಮೇಶ್ವರ ದೇವಾಲಯದ ಒಳಭಾಗ
ದೇವರಗುಡಿಗ್ರಾಮ

ಮೇಶ್ವರದೇವಂ. ಶ್ರೀ ಶರಣ ಹುಳಿಯುಮೇಶ್ವರದೇವಂ, ಶ್ರೀಮನ್ಮಹಾಲಿಂಗ ಹುಳಿಯುಮೇಶ್ವರ ಎಂಬ ಪದಗಳು ದೇವರ ಹೆಸರುಗಳಾಗಿ ಬಳಕೆಗೊಂಡಿವೆ.[೨] ಶಿವತತ್ತ್ವಚಿಂತಾಮಣಿಯಲ್ಲಿ (೩೮–೧೮೩)

........ಓಹಿಲಪುರದೊಳತಿಶಯಂ ।
ಪೆಸಗೆಸೆವ ಭಕ್ತಿಯಿಂದಿಪ್ಪನು ಹುಳಿಯುಮೇಶ್ವರನೆಂಬ ಶಿವಭಕ್ತನು ।

ಎಂಬ ಹೇಳಿಕೆಯೊಂದಿದೆ. ಈ ಶಾಸನೋಕ್ತ ಹೆಸರನ್ನು ಗಮನಿಸಿದರೆ ಇಲ್ಲಿ "ಹುಳಿಯುಮೇಶ್ವರನೆಂಬ ಶಿವಭಕ್ತನು" ಎಂಬುದೇ ಸರಿಯಾದ ಪಾಠವೆಂದು ಸ್ಪಷ್ಟವಾಗುತ್ತದೆ. ಶಾಸನದಲ್ಲಿ ದೇವರ ಹೆಸರಾಗಿರುವ ಈ ಪದ ಶಿವತತ್ತ್ವ-ಚಿಂತಾಮಣಿಯಲ್ಲಿ ವ್ಯಕ್ತಿ ಹೆಸರಾಗಿ ಬಳಕೆಗೊಂಡಿದೆ.

ಚಿಕ್ಕಯ್ಯನೆಂಬ ಒಬ್ಬ ಶರಣನ ಮುದ್ರಿಕೆ "ಉಳಿಯುಮೇಶ್ವರ" ಎಂಬುದು ಸುಪರಿಚಿತ. "ಎನ್ನದೇವ ಉಳಿಯುಮೇಶ್ವರನ ಲಿಂಗದ ಚಿಕ್ಕ" ಎಂಬ ವಚನ ವಾಕ್ಯ ಇದನ್ನು ಸ್ಪಷ್ಟಪಡಿಸುತ್ತದೆ. ಈ ವಚನಕಾರ ಉಳಿಯುಮೇಶ್ವರ ಚಿಕ್ಕಯ್ಯನು ಈ ಶಾಸನದಲ್ಲಿ ಕಂಡುಬರುವ ಹುಳಿಯುಮೇಶ್ವರ ದೇವರ ಮಠಾಚಾರ್ಯ ಚಿಕ್ಕಯ್ಯನೇ ಎಂದು ಬೇರೆ ಹೇಳಬೇಕಿಲ್ಲ. ಇಬ್ಬರ ಕಾಲ ಒಂದೇ ಎಂಬುದನ್ನು ಇಲ್ಲಿ ನೆನೆಯಬಹುದು.

ವಚನಗಳ (೧) ಉಳಿಯುಮೇಶ್ವರನ ಲಿಂಗದಚಿಕ್ಕ (೨) ಉಳುಮೇಶ್ವರ ಲಿಂಗವೆ ಬಾರಯ್ಯ (೩) ಉಳ್ಳಿಮೇಶ್ವರ ಲಿಂಗವೆ ಬಾರಯ್ಯ (೪) ಉಳಿಮೇಶ್ವರನ ಲಿಂಗದ ಚಿಕ್ಕ ಎಂಬ ಮಾತುಗಳನ್ನು ನೋಡಿದರೆ ಇಲ್ಲಿ ಮುದ್ರಿಕೆಯು ಅಲ್ಪ ವ್ಯತ್ಯಾಸದ ನಾಲ್ಕು ರೂಪಗಳಿದ್ದುದು ಸ್ಪಷ್ಟವಾಗುತ್ತದೆ. ಇವು 'ಹುಳಿಯುಮೇಶ್ವರ' ಎಂಬ ಪದದ ವ್ಯತ್ಯಸ್ತ ರೂಪಗಳು. ಆದಕ್ಕಾಗಿ ಇನ್ನು ಮುಂದೆ ಚಿಕ್ಕಯ್ಯನ ವಚನಗಳನ್ನು ಸಂಪಾದಿಸುವವರು "ಹುಳಿಯುಮೇಶ್ವರ" ಎಂಬ ಯೋಗ್ಯ ಪಾಠವನ್ನೇ ಮುದ್ರಿಕೆಯಾಗಿ ಸ್ವೀಕರಿಸಬೇಕಾಗುತ್ತದೆ.

ಚಿಕ್ಕಯ್ಯ : ಶರಣಸಮುದಾಯದಲ್ಲಿ ಕಂಡುಬರುವ ನಿಜಲಿಂಗ ಚಿಕ್ಕಯ್ಯ, ಮೋಕ್ಷದ ಚಿಕ್ಕಯ್ಯ, ಮಲಹರಕಾಯದ ಚಿಕ್ಕಯ್ಯಗಳಿಂದ ಈ ಹುಳಿಯು-

೨. ಭೈರವದೇವನು "ಮಲ್ಲಿಪಟ್ಟಣಮಂ ಪೊಕ್ಕು ಉಳಿಯುಮೇಶ್ವರಲಿಂಗಮಂ ಕಂಡು ನುತಿಸಿ" ಎಂದು 'ಭೈರವೇಶ್ವರಕಾವ್ಯ'ದ ಕಥಾಮಣಿಸೂತ್ರರತ್ನಾಕರ(ಪು. ೫)ದಲ್ಲಿ ಹೇಳಲಾಗಿದೆ. ಇಲ್ಲಿಯ 'ಉಳಿಯುಮೇಶ್ವರಲಿಂಗ' ಮತ್ತು ಶಾಸನೋಕ್ತ ಹುಳಿಯು-ಮೇಶ್ವರ ಒಂದೇ ಆಗಿದ್ದ ಪಕ್ಷದಲ್ಲಿ ಈ ದೇವರಗುಡಿ ಗ್ರಾಮದ ಪ್ರಾಚೀನ ಹೆಸರು ಮಲ್ಲಿ-ಪಟ್ಟಣವೆಂದೂ, ಭೈರವದೇವನು ಅಲ್ಲಿ ದರ್ಶನಮಾಡಿದ್ದನೆಂದೂ ಭಾವಿಸಬೇಕಾಗುತ್ತದೆ. ಈ ಹುಳಿಯುಮೇಶ್ವರ ದೇವಾಲಯದಿಂದ ಒಂದು ಮೈಲು ಅಂತರದಲ್ಲಿ ಮಲ್ಲಾಪುರ ಎಂಬ ಹೆಸರಿನ ಗ್ರಾಮವಿದೆ. ಇದೇ ಮಲ್ಲಿಪಟ್ಟಣವಾಗಿರಬಹುದು.

ಮೇಶ್ವರ ಚಿಕ್ಕಯ್ಯ ಭಿನ್ನವ್ಯಕ್ತಿ. ಈತನ ವರ್ಣನೆ ಶಾಸನದಲ್ಲಿ ಮನೋಜ್ಞವಾಗಿ ಬಿತ್ತರಗೊಂಡಿದೆ. ಅವನೊಬ್ಬ ಅನುಭಾವಿ, ಭಕ್ತನೆಂದು ಬಣ್ಣಿಸಲಾಗಿದೆ. ಈಗ ಉಪಲಬ್ಧವಿರುವ ಹಾಡು ಮತ್ತು ವಚನಗಳು ಅವನ ಪ್ರತಿಭೆಗೆ ಸಾಕ್ಷಿಯಾಗಿವೆ. ಕವಿಚರಿತೆಕಾರರು ಈತನ ಒಂದು ವಚನ ಹಾಗೂ ಹಾಡಿಗೆ ಸಂಬಂಧಿಸಿದ ಒಂದು ಷಟ್ಪದಿಯನ್ನು ಉದ್ಧರಿಸಿದ್ದಾರೆ. ಈ ಹಾಡನ್ನು ಡಾ|| ಎಲ್. ಬಸವರಾಜು ಶಿವದಾಸಗೀತಾಂಜಲಿ(ಪು. ೫)ಯಲ್ಲಿ ಇಡಿಯಾಗಿ ಕೊಟ್ಟಿದ್ದಾರೆ. ಶ್ರೀ ಡಿ. ಎಲ್. ಎನ್. ಅವರು "ಇವನ ವಚನಗಳಲ್ಲಿ ೩ ಮಾತ್ರ ದೊರೆತಿವೆ" ಎಂದು ಹೇಳಿದ್ದಾರೆ. ಆದರೆ ನನಗೆ ದೊರೆತುವು ೧೦ ವಚನ, ೧ ಹಾಡು (ಅನುಬಂಧ ನೋಡಿರಿ).

ಒಂದು ವಿಚಾರ :

ಶಾಸನೋಕ್ತ ಚಿಕ್ಕಯ್ಯನು ಹುಳಿಯುಮೇಶ್ವರವೆಂಬ ಸ್ಥಾವರಲಿಂಗದ ಭಕ್ತ. ದೇವಾಲಯ ಜೀರ್ಣೋದ್ಧಾರಕ್ಕಾಗಿ ದತ್ತಿ ಸ್ವೀಕರಿಸಿದ ಆಚಾರ್ಯಪುರುಷ. ಈ ಸ್ಥಾವರಲಿಂಗಪೂಜೆ, ದೇವಾಲಯನಿರ್ಮಾಣ ದಾನಸ್ವೀಕಾರಗಳು ವೀರ-ಶೈವಕ್ಕೆ ವಿರುದ್ಧವಾಗಿರುವದರಿಂದ ಚಿಕ್ಕಯ್ಯನನ್ನು ವೀರಶೈವನೆನ್ನಲು ಧೈರ್ಯ ಸಾಲದು. ಈತನು

"ಶೈವನೇಮಸ್ತರ ಕೈಯ್ಯಲುಪದೇಶವಾದರೇನಯ್ಯ ಅಲ್ಲಿ ಏನೂ ಊಣ-ಯವಿಲ್ಲ ಪಾರಂಪರ್ಯದಲ್ಲಿ ನಡೆದಿತ್ತಾಗಿ. ನದಿಯ ಮೂಲವನು ಗುರುವಿನ ಮೂಲವನು ಅಱಸುವರೆ? ಗುರುಲಿಂಗಜಂಗಮಸಾಕ್ಷಿಯಾಗಿ ಪಟ್ಟಾಭಿಷೇಕ ಪ್ರಣವಮಂತ್ರದಿಂ ಲಿಂಗದರ್ಶನವಾಯಿತ್ತಾಗಿ. ಕಳೆಯಬಾರದು ತನ್ನೊಳಗೆ ತಾನಜ್ಯೋತಿ ಕಱಗೊಂಡಿತ್ತಾಗಿ. ಅಂದು ಬಳ್ಳೇಶ್ವರದ ಮಲ್ಲಯ್ಯಗಳು ಬಳ್ಳವ ಲಿಂಗವ ಮಾಡಿದರೆಂದು ಕಳೆದರೆ ನಮ್ಮ ಪ್ರಮಥರು. ಅಂದು ತಿರುಕಾಳ-ಹಸ್ತಿಯಲ್ಲಿ ಕಣ್ಣಪ್ಪದೇವರು ಸುಜ್ಞಾನಭಕ್ತಿಯಿಂದ ಸ್ಥಾವರವನೆ ಗುರುರೂಪ-ಮಾಡಿ ಪೂಜಿಸಿದರೆಂದು ಕಳೆದರೆ ನಮ್ಮ ಪುರಾತನರು. ಅಂದು ಕಲ್ಯಾಣದಲ್ಲಿ ಹುಸಿಯನೇ ದಿಟವ ಮಾಡಿ ಬದನೆಯಕಾಯ ಲಿಂಗವಮಾಡಿ ಸಲಿಸನೆ ನಮ್ಮ ಬಸವಣ್ಣನು. ಇವರೆಲ್ಲರೂ ನಿಮ್ಮ ಭಜಿಸಿ ನಿಮ್ಮಂತ್ತಲಾದರು. ನಾ ನಿನಗೇನ ಮಾಡಿದೆನಯ್ಯ ಉಳಿಯುಮೇಶ್ವರಾ" ಎಂಬ ವಚನದಲ್ಲಿ ಶೈವನೇಮಸ್ತರ ಉಪ-ದೇಶವನ್ನು ಮನ್ನಿಸಿದರೂ, ಸ್ಥಾವರವನ್ನು ಮೆಚ್ಚಿದುದೂ ಈತನ ಶೈವಮನೋ-ಧರ್ಮವನ್ನು ವ್ಯಕ್ತಪಡಿಸುತ್ತದೆ. ಅದೇ ಸಮಯಕ್ಕೆ "ಎನ್ನಂತರಂಗದ ಜ್ಯೋತಿಯೆ ಬಸವಣ್ಣನಯ್ಯ ಎನ್ನ ಬಹಿರಂಗದ ಜ್ಯೋತಿಯೆ ಚನ್ನಬಸವಣ್ಣ-ನಯ್ಯ ; ಎನ್ನ ಸರ್ವಾಂಗದ ಜ್ಯೋತಿಯೇ ಪ್ರಭುದೇವರಯ್ಯ, ಇಂತಿವರ ಶ್ರೀಪಾದದಲ್ಲಿ ಉರಿಕರ್ಪುರ ಸಂಯೋಗದಂತೆ ಬೆರಸಿದೆನಯ್ಯ ಉಳಿಯು-ಮೇಶ್ವರಾ" ಎಂದು ಹೇಳಿದುದು ಈತನ ವೀರಶೈವ ಮನೋಧರ್ಮವನ್ನು ವ್ಯಕ್ತಪಡಿಸುತ್ತದೆ. ಅದಕ್ಕಾಗಿ ಚಿಕ್ಕಯ್ಯನು ಕೊಂಡಗುಳಿ ಕೇಶಿರಾಜ,

ಕೆಂಭಾವಿ ಭೋಗಣ್ಣ ಮೊದಲಾದವರಂತೆ ವೀರಶೈವವನ್ನು ಮನ್ನಿಸಿದ ಶೈವನೆಂದು ಹೇಳಬಹುದಾಗಿದೆ. ಇದೆಲ್ಲವನ್ನು ಗಮನಿಸಿದರೆ ಸ್ಥಾವರ ಇಷ್ಟಗಳನ್ನು ಸಮ-ಸಮವಾಗಿ ಪೂಜಿಸುತ್ತಿದ್ದ ಶಿವೋಪಾಸಕರಲ್ಲಿ ವಚನರಚನೆ ಸೆಲೆಯೊಡೆದು ೧೨ನೆಯ ಶತಮಾನದಲ್ಲಿ ಮಹಾಪೂರಗೊಂಡಿತೆಂದು ಈಗಿನ ಮಟ್ಟಿಗೆ ಊಹಿಸ-ಬಹುದಾಗಿದೆ.[೩]

ಅನುಬಂಧ

ಶ್ರೀ ನಂದಿನಾಥ ಭೃಂಗಿನಾಥ ವೀರಭದ್ರಗಣಂಗಳೆಲ್ಲ ನೀವು ಕೇಳಿರೆ. ನಿಮ್ಮ ತೊತ್ತು ಬಂದಿದ್ದಾನೆಂದು ನೀವು [೪]ಹೇಳಿರೇ.[೪] ನಿಮ್ಮ ಲೆಂಕ ಬಂದಿದ್ದಾನೆಂದು ನೀವು [೫]ಬನ್ನಿರೇ.[೫] ನಿಮ್ಮ ದಾಸ ಬಂದಿದ್ದಾನೆಂದು ನೀವು [೬]ಹೇಳಿರೇ.[೬] ಎನ್ನ ದೇವ [ಹುಳಿಯ]ಮೇಶ್ವರ [೭]ಪಿಂಗದ[೭] ಚಿಕ್ಕ ಬಂದಿದ್ದಾನೆಂದು ನೀವು ಹೇಳಿರೇ ॥ ೧ ॥

ವಾರಣಾಸಿ ಅವಿಮುಕ್ತಿಯಿಲ್ಲಿಯಿದಾನೆ. ಹಿಮದ ಕೇತಾರ ವಿರೂಪಾಕ್ಷ-ಯಿಲ್ಲಿಯಿದಾನೆ. ಗೋಕರ್ಣ ಸೇತುರಾಮೇಶ್ವರಯಿಲ್ಲಿಯೆಯಿದಾನೆ. ಶ್ರೀಶೈಲ ಮಲ್ಲಿನಾಥಯಿಲ್ಲಿಯೆಯಿದಾನೆ. ಸಕಲ ಲೋಕ ಪುಣ್ಯಕ್ಷೇತ್ರಯಿಲ್ಲಿಯೆಯಿದ್ದುತೆ ಸಕಳಲಿಂಗ [ಹುಳಿಯ]ಮೇಶ್ವರನಿದಾನೆ ॥ ೨ ॥

ಶೈವನೇಮಸ್ತರ ಕೈಯ್ಯಲ್ಲುಪದೇಶವಾದರೇನಯ್ಯ ಅಲ್ಲಿ ಏನೂ [೮]ವೂಣಯು[೮]ವಿಲ್ಲ ಪಾರಂಪರ್ಯದಲ್ಲಿ ನಡದಿತ್ತಾಗಿ. ನದಿಯ ಮೂಲವನು ಗುರುವಿನ ಮೂಲವನು ಅಱಿಸುವರೆ? ಗುರುಲಿಂಗಜಂಗಮ ಸಾಕ್ಷಿಯಾಗಿ ಪಟ್ಟಾಭಿಷೇಕ ಪ್ರಣವಮಂತ್ರದಿಂ ಲಿಂಗದರ್ಶನವಾಯಿತ್ತಾಗಿ. ಕಳೆಯ

---

೩. ಈ ಶಾಸನದಲ್ಲಿ ಬರುವ ಕೇದಾರಪಂಡಿತ, ಮತ್ತು ಚಿಕ್ಕಯ್ಯ ಪಂಡಿತ ಎಂಬ ಹೆಸರುಗಳೂ, ಸ್ಥಾವರಲಿಂಗಪೂಜೆಯ ವಿಷಯವೂ ಚಿಕ್ಕಯ್ಯನು ನಕುಲೀಶಪಾಶುಪತ ಇಲ್ಲವೆ ಕಾಳಾಮುಖನಾಗಿರಬಹುದೆಂಬ ಸೂಚನೆ ನೀಡುತ್ತವೆ. ಹಾಗಿದ್ದರೆ ವಚನರಚನೆ ಈ ಕಾಳಾಮುಖ ಇಲ್ಲವೆ ನಕುಲೀಶಪಾಶುಪತದಿಂದ ಸೆಲೆಯೊಡೆದು ಶರಣರಲ್ಲಿ ಸಾಗರ-ವಾಗಿರಬಹುದೇ? ಅಥವಾ ವೀರಶೈವ ಶರಣರಲ್ಲಿ ತಲೆದೋರಿದ ಈ ಸಾಹಿತ್ಯಪ್ರಕಾರ ವನ್ನು ೧೨ನೆಯ ಶತಮಾನದಲ್ಲಿ ಚಿಕ್ಕಯ್ಯ ಪಂಡಿತನಂಥ ಮಿಕ್ಕ ಶೈವರು ಅನುಸರಿ-ಸಿದರೇ? ವಿಚಾರಿಸಬೇಕು.

೪–೪ ಕೇಳಿರೇ (ಪ್ರತಿ ೪೩೪).

೫–೫. ಕೇಳಿರೇ ಬನ್ನಿರೇ (ಪ್ರತಿ ೪೭೮).

೬–೬. ಕೇಳಿರೇ (ಪ್ರತಿ ೪೩೮)

೭–೭. ಪಿಂಗುವ (ಪ್ರತಿ ೩೭, ೪೦).

೮–೮. ವುಣಯ (ಪ್ರತಿ ೪೦).

ಬಾರದು ತನ್ನೊಳಗೆ ತಾನಜ್ಯೋತಿ ಕಱಿಗೊಂಡಿತ್ತಾಗಿ ಅಂದು ಬಳ್ಳೇಶ್ವರದ ಮಲ್ಲಯ್ಯಗಳು ಬಳ್ಳವಲಿಂಗವ ಮಾಡಿದರೆಂದು ಕಳೆದರೆ ಎಮ್ಮ ಪ್ರಥಮರು. ಅಂದು ತಿರುಕಾಳಹಸ್ತಿಯಲ್ಲಿ ಕಣ್ಣಪ್ಪದೇವರು ಸುಜ್ಞಾನಭಕ್ತಿಯಿಂದ ಸ್ಥಾವರವನೆ ಗುರುರೂಪಮಾಡಿ ಪೂಜಿಸಿದರೆಂದು ಕಳೆದರೆ ನಮ್ಮ ಪುರಾತನರು. ಅಂದು ಕಲ್ಯಾಣದಲ್ಲಿ ಹುಸಿಯನೆ ದಿಟವ ಮಾಡಿ ಬದನೆಯಕಾಯ ಲಿಂಗವ ಮಾಡಿ ಸಲಿಸನೆ ನಮ್ಮ ಬಸವಣ್ಣನು. ಇವರೆಲ್ಲರೂ ನಿಮ್ಮ ಭಜಿಸಿ ನಿಮ್ಮಿತ್ತಲಾದರು. ನಾ ನಿನಗೇನ ಮಾಡಿದೆನಯ್ಯ [ಹುಳಿಯ]ಮೇಶ್ವರಾ ॥ ೩ ॥

ಒಂದು ಯೋನಿಯಲಿ ಬಂದ ದುಃಖವ ನಾನೆಂದಿಗೂ ಕಳೆಯಲಾರೆನಯ್ಯ. ಎಂಬತ್ತನಾಲ್ಕುಲಕ್ಷ ಯೋನಿಯೆಂದಡೆ ಇನ್ನೇವೆನಯ್ಯ. ನೊಂದೆನಯ್ಯ, ನೊಂದೆನಯ್ಯ, ಮತ್ತೊಂದನಱಿಯದ ಶಿಶು ನಾನು ಬೆಂದೆನಯ್ಯ. ಶಿವಶಿವಾ ಎನ್ನ ಕಂದ ನೀ ಬಾರಯೆಂದು ಕಂಬನಿಯ ತೊಡೆದು, ಎತ್ತಿ ಆನಂದದಿಂ ಕಂಡೆಜ಼ [ಹುಳಿಯ]ಮೇಶ್ವರಾ ॥ ೪ ॥

ಅಸ್ಥಿ ಚರ್ಮ ಮಾಂಸ ರಕ್ತ ಖಂಡದ ಜೀಲ ಬಾತಿಗೆಟ್ಟೊಡಲ ನಾನೆಂತು ಸಲಹುವೆನಯ್ಯ. ಹುರುಳಿಲ್ಲ ದೇಹ, ಸಂಸಾರ. ಎಂದಿಂಗೆ ನಾನಿದ ಹೊತ್ತು ತೊಳಲುವದ ಬಿಡುವೆನಯ್ಯ. ಎಂದಿಂಗೆ ನಾನಿದರ ಸಂಶಯುವನಳಿವೆನಯ್ಯ. ಎಡಹಿ ಕೊಡ ನೀರೊಳಗೆ ಮೊಡೆದಂತೆ ಎನ್ನೊಡಲದು ನಿಮ್ಮೊಳಿಂದು ನೆರೆವೆನೊ [ಹುಳಿಯ]ಮೇಶ್ವರಾ ॥ ೫ ॥

ಎಲುದೋರ ಸರಸವಾಡಲೇನು ಭೃಂಗೀಶನೆ? ಸೀಳಿ ಹೊದೆಯಲೇನು ಗಜಾಸುರನೆ? ಹೆಣಲೀಲೆಯಾಡಲೇನು ಅಂಧಕಾಸುರನೇ? ಮನವನಲ್ಲಾಡಲೇನು ಸಿರಿಯಾಳನೆ? ನೊಣ ಮೃಣದೋಪಾದಿ ನಾನು. ಎನ್ನನಿನಿತು ಬಳಲಿಸುವರೆ? ಕರುಣಿಸು ಕರುಣಾಕರ [ಹುಳಿಯ]ಮೇಶ್ವರಾ ॥ ೬ ॥

ಎಲುವೊಡೆದು ತನುಕರಗಿ ಮನವು ಜಜ್ಜರವೋಗಿ ಲಿಂಗದಲ್ಲಿ ನೀರು ನೀರಾಗಿ ಬೆರಸಲಿಬೇಕು. ಜಂಗಮದಲ್ಲಿ ವಾರಿಕಲ್ಲಾಗಿ ಕರಗಲಿಬೇಕು. ಸರ್ವಾಂಗ ಪುಳಕಂಗಳೊಡೆದು ಕಡಲುಗಳಾಗಿ ಸದ್ಗುರುವಿನೊಳು ಬೇಱಿಲ್ಲದಂತೆ ಬೆರಸಿ-ಸಿರಬೇಕು. ಇಂತೀ ತ್ರಿವಿಧ ಲಿಂಗವ ಕೂಡಿದಲ್ಲದೆ ಸುಖವಿಲ್ಲ ನೋಡಾ. ಇಂತಪ್ಪ ನಿರ್ವಾಣ ನಿಜಪದವೆಂದಪ್ಪುದೋ [ಹುಳಿಯ]ಮೇಶ್ವರಾ ॥ ೭ ॥

ಎನ್ನಂತರಂಗದ ಜ್ಯೋತಿಯೇ ಬಸವಣ್ಣನಯ್ಯ. ಎನ್ನ ಬಹಿರಂಗದ ಜ್ಯೋತಿಯೆ ಚೆನ್ನಬಸವಣ್ಣನಯ್ಯ. ಎನ್ನ ಸರ್ವಾಂಗದ ಜ್ಯೋತಿಯೆ ಪ್ರಭು-ದೇವರಯ್ಯ. ಇಂತಿವರ ಶ್ರೀಪಾದದಲ್ಲಿ ಉರಿಕರ್ಪುರ ಸಂಯೋಗದಂತೆ ಬೆರಸಿದೆ-ನಯ್ಯ [ಹುಳಿಯ]ಮೇಶ್ವರಾ ॥ ೮ ॥

ಬಸವಣ್ಣನೆ ಎನಗೆ ಗುರುಸ್ವರೂಪನಯ್ಯಾ. ಚೆನ್ನಬಸವಣ್ಣನೆ ಎನಗೆ ಲಿಂಗ ಸ್ವರೂಪನಯ್ಯಾ. ಸಿದ್ಧರಾಮಯ್ಯನೆ ಎನಗೆ ಜಂಗಮಸ್ವರೂಪನಯ್ಯಾ. ಮರುಳ ಶಂಕರದೇವರೆ ಎನಗೆ ಪ್ರಸಾದಸ್ವರೂಪನಯ್ಯಾ. ಪ್ರಭುದೇವರೆ ಎನಗೆ ಜ್ಞಾನಸ್ವರೂಪನಯ್ಯಾ. ಇಂತಿವರ ಶ್ರೀಪಾದದಲ್ಲಿ ಉರಿವುಂಡ ಕರ್ಪುರದಂತಡಗಿದೆನಯ್ಯ [ಹುಳಿಯು]ಮೇಶ್ವರಾ ॥ ೯ ॥

ಎನ್ನ ಮನವ ಮಂಚವಮಾಡಿ ತನುವ ಹಚ್ಚಡಿಸುವೆ ಬಾರಯ್ಯಾ. ಎನ್ನಂತರಂಗದಲ್ಲಿಪ್ಪ ಬಾರಯ್ಯಾ. ಎನ್ನ ಬಹಿರಂಗದಲ್ಲಿಪ್ಪ ಬಾರಯ್ಯ. ಎನ್ನ ಶಿವಲಿಂಗ ದೇವನೆ ಬಾರಯ್ಯಾ. ಎನ್ನ ಭಕ್ತದೇಹಿಕ ದೇವನೆ ಬಾರಯ್ಯ. ಎನ್ನ ಭಕ್ತವತ್ಸಲನೆ ಬಾರಯ್ಯ. ಓಂ ನಮಃ ಶಿವಾಯ ಎಂದು ಕರೆವೆನು, [ಹುಳಿಯು]ಮೇಶ್ವರ ಲಿಂಗವೆ ಬಾರಯ್ಯ. ॥ ೧೦ ॥

[೧ ಪಲ್ಲವ, ೫ ಸಾರ್ಥಕ ಷಟ್ಪದಿಗಳಿಂದ ಕೂಡಿದ ಒಂದು ಹಾಡು ಈತನ ಹೆಸರಿನಲ್ಲಿ ಲಭಿಸುತ್ತದೆ. 'ಶಿವದಾಸಗೀತಾಂಜಲಿ', ಪು. ೫ ನೋಡಿರಿ.]

ಧಾರವಾಡದ ಹರಿಜನರು*

ಎಸ್. ಕೆ. ಕಡೆತೋಟದ

೧. ಸಾಮಾಜಿಕ ಚಿತ್ರ

ಧಾರವಾಡ ನಗರವು ೧೬·೧ ಚೌ. ಮೈಲುಗಳಷ್ಟು ವಿಸ್ತಾರವಾಗಿದ್ದು ೨೪೦೦ ಫೂಟು ಸಮುದ್ರಪಾತಳಿಯಲ್ಲಿದೆ. ೧೯೬೧ನೆಯ ಇಸ್ವಿಯ ಜನಗಣತಿಯ ಪ್ರಕಾರ ಧಾರವಾಡ ನಗರದ ಜನಸಂಖ್ಯೆಯು ೭೭,೨೩೫ ಇದೆ. ನಾವು ಇದೇ ಇಸ್ವಿಯಲ್ಲಿ ಅಭ್ಯಾಸದ ಸಲುವಾಗಿ ಮಾಡಿದ ಈ ಹರಿಜನರ ಜನಗಣತಿಯು ೩,೨೩೭ ಇದೆ. ಈ ಸಂಖ್ಯೆಯನ್ನು ಇಡೀ ನಗರದ ಜನಸಂಖ್ಯೆಗೆ ಹೋಲಿಸಿದಾಗ ಪ್ರತಿಶತ ೪.೧೯ರಷ್ಟಿದೆ. ಮತ್ತು ಹರಿಜನರ ೨೩.೮೬ರ ಪಟ್ಟು ಇಡೀ ನಗರದ ಜನಸಂಖ್ಯೆ ಇದೆ. ಈ ಹರಿಜನರ ಸಂಖ್ಯೆಯು ಮತ್ತು ಕುಟುಂಬಗಳು ವಿವಿಧ ಓಣಿಗಳಲ್ಲಿ ಮತ್ತು ವಿಭಿನ್ನ ಜಾತಿಗಳಲ್ಲಿ ಪುಟ ೧೫೧ರಲ್ಲಿ ಕೋಷ್ಟಕಿನ ಪ್ರಕಾರ ಹಂಚಿಹೋಗಿದೆ.

ಪುಟ ೧೫೧ರಲ್ಲಿಯ ಕೋಷ್ಟಕ ೧ ರನ್ವಯ ಹರಿಜನರು ಧಾರವಾಡದಲ್ಲಿ ಹೆಚ್ಚಾಗಿ ೧೧ ಓಣಿಗಳಲ್ಲಿ ವಾಸಿಸಿದ್ದಾರೆ. ಒಂದೊಂದು ಓಣಿಯಲ್ಲಿ ಒಂದು ಜಾತಿಯ ಹರಿಜನರು ಬಹುಸಂಖ್ಯೆಯಲ್ಲಿ ಕಂಡುಬರುತ್ತಾರೆ. ಉಳಿದ ಜಾತಿಯ ಜನರು ಅತ್ಯಲ್ಪಸಂಖ್ಯೆಯವರಾಗಿದ್ದಾರೆ. ಅವರ ಓಣಿಗಳಲ್ಲಿ ಹರಿಜನರನ್ನು ಬಿಟ್ಟರೆ ಕೇವಲ ಹಿಂದುಳಿದ ಜಾತಿಯವರು, ಮುಸ್ಲಿಮರು ಮತ್ತು ಗೊಲ್ಲರಂತಹ ಗುಡ್ಡಗಾಡಿನ ಜನರು ವಾಸಿಸುತ್ತಾರೆಂದು ಕಂಡುಬರುತ್ತದೆ. ಇದಕ್ಕೆ ಹರಿಜನರ ಹಿಂದುಳಿಯುವಿಕೆಯೂ ಮತ್ತು ಅಸ್ಪೃಶ್ಯತಾಕಲ್ಪನೆಯೂ ಕಾರಣಗಳಾಗಿವೆ. ಉಚ್ಚಜಾತಿಯ ಹಿಂದುಗಳು ಹರಿಜನರ ಓಣಿಗಳಲ್ಲಿ ವಾಸಿಸುವದಿಲ್ಲ ಮತ್ತು ಅವರನ್ನು ತಮ್ಮ ಓಣಿಗಳಲ್ಲಿ ವಾಸಿಸಲಿಕ್ಕೆ ಒಪ್ಪಿಗೆ ಕೊಡುವದಿಲ್ಲ. ನಗರಜೀವನದಲ್ಲಿ ಮಾತ್ರ ಕೆಲವು ಅಪವಾದಗಳು ನಮಗೆ ಕಂಡುಬರುತ್ತವೆ. ಪುಟ ೧೫೧ರಲ್ಲಿಯ ಕೋಷ್ಟಕ ೧ರಿಂದ ಸಮಗಾರರು, ಕನ್ನಡ ಮಾದಿಗರು ಮತ್ತು ಚಲವಾದಿ ಜಾತಿಯ ಜನರು ಅಧಿಕವಾಗಿದ್ದಾರೆಂದು ತಿಳಿಯುತ್ತದೆ.

ಜಾತಿಗಳಲ್ಲಿ ಶ್ರೇಷ್ಠತೆಯ ಶ್ರೇಣಿ (Caste Hierarchy)

ಧಾರವಾಡ ಶಹರದಲ್ಲಿ ೧೦ ಜಾತಿಯ ಹರಿಜನರಿದ್ದಾರೆಂದು ಇಲ್ಲಿಯ ಕೋಷ್ಟಕ ೧ ರಿಂದ ತಿಳಿಯುವದು. ಈ ಎಲ್ಲ ಜಾತಿಯ ಹರಿಜನರು ತಮ್ಮ

* ಪ್ರಸ್ತುತ ನಿಬಂಧವು ಧಾರವಾಡದಲ್ಲಿ ಹರಿಜನರ ಬಗ್ಗೆ ಮಾಡಿದ ಕ್ಷೇತ್ರಕಾರ್ಯದ ಸಂಶೋಧನೆಯ ಮೇಲೆ ಆಧರಿತವಾಗಿದೆ.

ಕೋಷ್ಟಕ—೧

ಓಣಿಗಳು, ಜಾತಿಗಳು, ಕುಟುಂಬಗಳು ಮತ್ತು ಜನಸಂಖ್ಯೆ

ಓಣಿಗಳು	ಜಾತಿಗಳು	ಕುಟುಂಬಗಳು	ಜನಸಂಖ್ಯೆ	ಒಟ್ಟು ಕುಟುಂಬಗಳು
೧. ನಾಳಾಪುರ ಮತ್ತು	೧. ಕನ್ನಡ ಮಾದಿಗ	೧೩	೧೧೦	೨೩
ಕಮಲಾಪುರ		೧೦		
೨. ಸಯ್ಯದಾಪುರ	೧ ಮುಲಖಾನ	೧೬	೮೦	೧೬
೩. ಗೊಲ್ಲರ ಓಣಿ	೧. ಚಲವಾದಿ	೩	೨೧೭	೩೬
	೨. ಸಮಗಾರ	೨೯		
	೩. ಢೋರ	೨		
	೪ ಕನ್ನಡ ಮಾದರ	೨		
೪. ಮರಾಠಾಗಲ್ಲಿ	೧. ರಾಮೋಶಿ	೩೯	೨೮೭	೪೯
	೨. ಹುಲಸವಾರ	೯		
	೩. ಚಲವಾದಿ	೧		
೫. ಮನಿಕಿಲಾ	೧. ಸಮಗಾರ	೯೮	೧೧೨೧	೧೭೧
	೨. ಚಲವಾದಿ	೫		
	೩. ಮಾದರ	೨೫		
	೪. ಢೋರ	೪೨		
೬. ಜೈನ ಬಜಾರ	೧. ಮಾದರ	೧೩	೩೪೯	೬೯
	೨. ಚಲವಾದಿ	೫೪		
	೩. ಹುಲಸವಾರ	೨		
೭. ಮಾದರಮಡ್ಡಿ	೧. ಕನ್ನಡ ಮಾದರ	೩೬	೪೮೯	೯೪
	೨. ತೆಲುಗು ಮಾದರ	೩೬		
	೩. ಹುಲಸವಾರ	೨೨		
೮. ಚಪರಬಂದ ಓಣಿ	೧. ಮಾದರ	೧೧	೪೮	೧೧
೯. ನಾಳಮಡ್ಡಿ	೧. ಚಲವಾದಿ	೧೧	೧೩೭	೨೬
	೨. ಕನ್ನಡ ಮಾದರ	೧೧		
	೩. ಹುಲಸವಾರ	೨		
	೪. ಸಮಗಾರ	೨		
೧೦. ಕುರುಪತಿ ಕಂಪೌಂಡ	೧. ಕನ್ನಡ ಮಾದಿಗ	೧೩	೫೪	೧೩
೧೧. ಹೆಬ್ಬಳ್ಳಿ ಅಗಸಿ	೧. ಸಮಗಾರ	೨೨	೨೩೫	೩೮
	೨. ಮಚಿಗಾರ	೧೬		
೧೨. ವಿಭಿನ್ನ ಓಣಿಗಳು	ಎಲ್ಲ ಜಾತಿಯ ಜನರು	೧೫	೧೦೦	೧೫
ಒಟ್ಟು	ಎಲ್ಲ ಜಾತಿಯ ಜನರು	೫೬೧	೩೨೨೭	೫೬೧

ತಮ್ಮಲ್ಲಿಯೇ ಮೇಲು ಮತ್ತು ಕೀಳು ಜಾತಿಯವರೆಂಬ ಭಾವನೆಗಳನ್ನು ಹೊಂದಿದ್ದಾರೆ. ಕೆಳಗೆ ತೋರಿಸಿದ ಕೋಷ್ಟಕ ೨ರಲ್ಲಿ ಹರಿಜನರಲ್ಲಿ ಮೇಲು ಮತ್ತು ಕೀಳು ಜಾತಿಯವರು ಯಾರೆಂಬುದನ್ನು ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಈ ಅಭಿಪ್ರಾಯಗಳು ಸ್ವತಃ ವಿಭಿನ್ನಜಾತಿಯ ೨೮೦ ಹರಿಜನರ ಕುಟುಂಬಗಳ ಮುಖ್ಯಸ್ಥರಿಂದ ಪಡೆಯಲಾಗಿದೆ.

ಕೋಷ್ಟಕ ೨ರಿಂದ ಮಚಗಾರರು ಎಲ್ಲಕ್ಕೂ ಶ್ರೇಷ್ಠರೆಂದು ಮಲಖಾನಿಗಳು ಎಲ್ಲಕ್ಕೂ ಕನಿಷ್ಠರೆಂದೂ ತಿಳಿಯುತ್ತದೆ. ಸಾಮಾಜಿಕ ರೀತಿನೀತಿಗಳು (Customs) ಉದ್ಯೋಗಗಳು (Occupations), ಬಳಕೆ (Mixing), ಅಂತರ್‌ಜಾತೀಯ ಭೋಜನ (Inter-dining) ಮತ್ತು ಅಂತರ್‌ಜಾತೀಯ ವಿವಾಹ, (Inter-Caste Marriage) ಇತ್ಯಾದಿಗಳನ್ನು ಅವಲಂಬಿಸಿ ಈ ಮೇಲು ಕೀಳೆಂಬ ಭಾವನೆ ಬೆಳೆದಿದೆಯೆಂದು ಗೊತ್ತಾಗುತ್ತದೆ. ಹರಿಜನರ ಕೆಲವೇ ಜಾತಿಗಳಲ್ಲಿ ಅಂತರ್ ವಿವಾಹ (Inter-caste marriage) ಶಕ್ಯವಿದೆ. ಹುಲಸವಾರರು ಚಲವಾದಿಗಳ ಸಂಗಡ, ತೆಲುಗುಮಾದಿಗರು ಕನ್ನಡಮಾದಿಗರ ಸಂಗಡ ಅಂತರ್‌ವಿವಾಹಮಾಡಿಕೊಂಡ ಅನೇಕ ಉದಾಹರಣೆಗಳು ಸಿಗುತ್ತವೆ. ಧಾರವಾಡದಲ್ಲಿಲ್ಲದ ಅಂದರೆ ಬೇರೆ ಸ್ಥಳಗಳಲ್ಲಿರುವ ಉಪಜಾತಿಗಳೊಂದಿಗೆ ಸಹ ಇವರು ಮೇಲು ಕೀಳೆಂಬ ಭಾವನೆಗಳನ್ನಿಟ್ಟುಕೊಂಡು ವ್ಯವಹರಿಸುತ್ತಾರೆ.

ಕೋಷ್ಟಕ ೨ರಲ್ಲಿಯ ಹತ್ತು ಜಾತಿಗಳ ಹರಿಜನರ ಮತಗಳನ್ನು (Sects) ಕೆಳಗಿನಂತೆ ವಿಂಗಡಿಸಹುದು.

೧. **ವೀರಶೈವರು**	೨. **ವೈಷ್ಣವರು**
೧. ಸಮಗಾರ	೧. ತೆಲುಗು ಮಾದರ
೨. ಮಚಗಾರ	೨. ಹುಲಸವಾರ
೩. ಚಲವಾದಿ	೩. ರಾಮೋಶಿ
೪. ಕನ್ನಡ ಮಾದರ	೪. ಲಾಲಬೇಗಿ
೫. ಢೋರ	೫. ಮಲಖಾನ

ಮೇಲೆ ವಿಂಗಡಿಸಿದಂತೆ ೫ ಜಾತಿಯ ಹರಿಜನರು ವೀರಶೈವ ಧರ್ಮವನ್ನೂ ಮತ್ತು ಇನ್ನುಳಿದ ೫ ಜಾತಿಯ ಹರಿಜನರು ವೈಷ್ಣವ ಮತವನ್ನೂ ಅನುಸರಿಸುತ್ತಾರೆ. ಭಾರತದ ಇನ್ನಿತರ ಭಾಗಗಳಲ್ಲಿ ಹರಿಜನರು ಮುಖ್ಯವಾಗಿ ಶೈವರು ಮತ್ತು ವೈಷ್ಣವರಾಗಿದ್ದರೆ, ಇಲ್ಲಿಯ ಹರಿಜನರು ಮುಖ್ಯವಾಗಿ ವೀರಶೈವ ಧರ್ಮವನ್ನು ಅನುಸರಿಸುತ್ತಿರುವದು ಈ ರಾಜ್ಯದ ಮುಖ್ಯಧರ್ಮವಾದ ವೀರಶೈವ ಪ್ರಭಾವದ ದ್ಯೋತಕವಾಗಿದೆ.

ಕೋಷ್ಟಕ–೨

ಶ್ರೇಷ್ಠತೆಯ ಶ್ರೇಣಿ

ಜಾತಿಯ ಹೆಸರುಗಳು	ಶ್ರೇಷ್ಠತೆಯ ಶ್ರೇಣಿ										ಒಟ್ಟು
	೧	೨	೩	೪	೫	೬	೭	೮	೯	೧೦	
೧. ಮುಚಗಾರ	೧೨೮	೪೬	೨೨	೧೪	೫	—	—	—	—	—	೨೧[illegible]
೨. ಸಮಗಾರ	೭೧	೧೦೨	೩೮	೨೯	೬	೪	೨	—	—	—	೨೫೨
೩. ಢೋರ	೫೨	೩೪	೭೫	೮೧	೧೫	೩	—	—	—	—	೨೬೦
೪. ಚಲವಾದಿ	೨೯	೪೭	೬೨	೯೩	೨೧	೪	—	—	—	—	೨೫೬
೫. ಹುಲಸವಾರ	—	೫	೧೫	೭	೯೧	೯	೩	೨	೧	೩	೧೩೬
೬. ಕನ್ನಡಮಾದರ	—	೭	೮	೧೮	೩೯	೮೫	೫	೨	೧	೫	೧೭೦
೭. ತೆಲುಗುಮಾದರ	—	—	—	೫	೧೮	೨೩	೯೭	೧೭	೩೭	೪೨	೨೩೫
೮. ರಾಮೋಶಿ	—	—	—	—	೫	೨	೩೨	೫೬	೪೧	೪೨	೧೮೬
೯. ಲಾಲಬೇಗಿ	—	—	—	—	—	೧೫	೧೯	೨೧	೪೮	೫೬	೧೬೧
೧೦. ಮಲಕಾನ	—	—	—	—	—	—	೩೦	೪೨	೫೮	೫೭	೧೯೭
	೨೮೦	೨೮೦	೨೨೦	೨೪೭	೨೨೦	೧೨೫	೧೮೮	೧೪೦	೧೮೫	೨೨೧	

ಹರಿಜನರ ಉದ್ಯೋಗಗಳು

ಹರಿಜನರ ಉದ್ಯೋಗಗಳನ್ನು ಆನುವಂಶಿಕವಾದವುಗಳು ಮತ್ತು ಆಧುನಿಕ ಉದ್ಯೋಗಗಳೆಂದು ವಿಭಜಿಸಬಹುದಾಗಿದೆ. ಆನುವಂಶಿಕವಾಗಿ ಹರಿಜನರ ಪ್ರತಿಯೊಂದು ಜಾತಿಯು ಕೆಲವೊಂದು ಉದ್ಯೋಗಗಳನ್ನು ಮಾಡುತ್ತ ಬಂದಿದೆ. ಅವು :

ಜಾತಿ	ಆನುವಂಶಿಕ ಉದ್ಯೋಗ
೧. ಮಚಗಾರ	೧. ಮಂಚ್ಚಿಗಳನ್ನು ಮಾಡುವದು
೨. ಸಮಗಾರ	೨. ಪಾಪೋಸು ಮಾಡುವದು
೩. ಢೋರ	೩. ಚರ್ಮ ಹದಗೊಳಿಸುವದು
೪. ಚಲವಾದಿ	೪. ಕಸಗೂಡಿಸುವದು
೫. ಹುಲಸವಾರ	೫. ಸೈನಿಕ
೬. ಕನ್ನಡ ಮಾದಿಗ	೬. ಪಾಪೋಸು, ಚರ್ಮದ ಸಾಮಾನು
೭. ತೆಲುಗು ಮಾದಿಗ	೭. ,, ಮಾಡುವದು
೮. ರಾಮೋಶಿ	೮. ಸೈನಿಕ
೯. ಲಾಲಬೇಗಿ	೯. ಭಂಗಿ
೧೦. ಮಲಖಾನ	೧೦. ,,

ಈ ಆನುವಂಶಿಕ ಉದ್ಯೋಗಗಳು ಆಧುನಿಕ ಕಾಲದಲ್ಲಿ ಸಹಿತ ಇವರಿಂದಲೇ ಮಾಡಲ್ಪಡುತ್ತಿದ್ದರೂ ಇವರಲ್ಲಿ ಕೆಲವರು ಈ ಆನುವಂಶಿಕ ಉದ್ಯೋಗಗಳನ್ನು ಬಿಟ್ಟು ಬೇರೆ ಉದ್ಯೋಗಗಳನ್ನು ಕೈಕೊಂಡಿದ್ದಾರೆ. ಇದು ಕೆಳಗಣ ಕೋಷ್ಟಕ ೩ ರಿಂದ ತಿಳಿದುಬರುತ್ತದೆ. ೨೮೦ ಕುಟುಂಬಗಳ ಮುಖ್ಯಸ್ಥ-ರಲ್ಲಿ ಯಾವ ಯಾವ ಜಾತಿಯವರು ಯಾವ ಯಾವ ಉದ್ಯೋಗಗಳನ್ನು ಮಾಡುತ್ತಿದ್ದಾರೆಂಬುದು ತಿಳಿಯುತ್ತದೆ.

ಕೆಳಗಣ ಕೋಷ್ಟಕ ೩ ರ ಮೇಲಿಂದ ಆನುವಂಶಿಕ ಉದ್ಯೋಗಗಳಲ್ಲಿ ಕೆಲವೊಂದು ಜಾತಿಗಳಲ್ಲಿ ಬಹಳ ಬದಲಾವಣೆಯಾದುದು ಕಂಡುಬರುತ್ತದೆ. ಮಚಗಾರರು ಒಕ್ಕಲುತನವನ್ನು ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡಿ-ದ್ದಾರೆ. ಅವರು ಮಾಡುತ್ತಿದ್ದ ಮಂಚ್ಚಿಗಳ ಉಪಯೋಗ ಆಧುನಿಕ ಯುಗದಲ್ಲಿ ಕಡಿಮೆಯಾದುದೇ ಇದಕ್ಕೆ ಕಾರಣವೆನ್ನಬಹುದು. ಸಮಗಾರರು ಮಾತ್ರ ಮೊದಲಿನ ತಮ್ಮ ಪಾಪೋಸು ಮಾಡುವ ಉದ್ಯೋಗಕ್ಕೆ ಅಂಟಿಕೊಂಡಿದ್ದಾರೆ. ಢೋರರು ಚರ್ಮ ಹದಮಾಡುವ ಉದ್ಯೋಗವನ್ನು ಬಿಟ್ಟಿಲ್ಲ. ಚಲವಾದಿಗಳು

ಕೋಷ್ಟಕ – ೩

ಜಾತಿ ಮತ್ತು ಉದ್ಯೋಗ

ಜಾತಿ	ಕಸಗೂಡಿಸುವುದು	ಚರ್ಮದ ಕೆಲಸ	ಭಂಗಿ	ಸೇವೆ	ನೌಕರಿ	ಬೇಸಾಯು	ಕೂಲಿ	ಚರ್ಮದ ಹದ	ಬೇರೆ	ಒಟ್ಟು
೧. ಮುಚಗಾರ	—	೩	—	—	೭	೨೪	೩	—	೧	೩೮
೨. ಸಮಗಾರ	—	೧೧೩	—	೧೧	೧೯	—	೨	—	೧	೧೪೬
೩. ಢೋರ	—	—	—	೩	೬	೨	೨	೨೬	೨	೪೧
೪. ಚಲವಾದಿ	೧೭	—	—	೧೮	೨೬	೩	೧೫	—	೪	೮೩
೫. ಹುಲಸವಾರ	—	—	—	೫	೫	—	೭	—	೨	೧೯
೬. ಕನ್ನಡ ಮಾದರ	೬೪	೪	—	೭	೧೦	—	೪೯	—	೯	೧೪೧
೭. ತೆಲಗು ಮಾದರ	—	—	೪೩	—	—	—	೨	—	—	೪೫
೮. ರಾಮೋಶಿ	—	—	೧	—	೧೬	೫	೫	—	—	೨೭
೯. ಲಾಲಬೇಗ	—	—	೫	—	—	—	—	—	—	೫
೧೦. ಮುಲಖಾನ	—	—	೧೫	—	೧	—	—	—	—	೧೬
ಒಟ್ಟು	೮೧	೧೨೦	೬೩	೬೦	೭೯	೨೯	೭೯	೨೬	೨೪	೨೬೧
ಪ್ರತಿಶತ	೧೪.೪೩	೨೧.೩೯	೧೧.೨೨	೧೦.೬೯	೧೪.೨೬	೫.೩೪	೧೨.೮೦	೪.೬೨	೪.೦೯	೧೦೦

ಮುಖ್ಯವಾಗಿ ನೌಕರಿ ಸೇರಿದ್ದಾರೆ. ಧಾರವಾಡದಲ್ಲಿ ಅವರಿಗೆ ಅನೇಕ ಆಫೀಸುಗಳಲ್ಲಿ ಸೇವಕರೆಂದು ನೌಕರಿ ಮಾಡಲಿಕ್ಕೆ ಬಹಳ ಅನುವು ದೊರೆತಿದೆ. ಹುಲಸವಾರರಾದರೂ ಇಂಥವೇ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಕನ್ನಡ ಮಾದಿಗರು ತಮ್ಮ ಮೊದಲಿನ ಉದ್ಯೋಗವಾದ ಪಾಪೋಸು ಮತ್ತು ಒಕ್ಕಲುತನದ ಚರ್ಮದ ಸಾಮಾನು ಮಾಡುವ ಉದ್ಯೋಗಗಳನ್ನು ಬಿಟ್ಟು ನಗರ ಕಾರ್ಪೋರೇಶನ್ನಿನ ಕಸಗೂಡಿಸುವ ಮತ್ತು ಗಟಾರ ಸ್ವಚ್ಛಮಾಡುವ ಕೆಲಸಗಳಲ್ಲಿ ತೊಡಗಿದ್ದಾರೆ. ತೆಲುಗು ಮಾದಿಗರು ತಮ್ಮ ಮೂಲ ಸ್ಥಳಗಳಲ್ಲಿ ಕನ್ನಡ ಮಾದಿಗರಂತೆಯೇ ಚರ್ಮದ ಕೆಲಸಗಳನ್ನು ಮಾಡುತ್ತಿದ್ದವರು ಇಲ್ಲಿ ವಲಸೆ ಬಂದು ಭಂಗಿಗಳಾಗಿ ಕೆಲಸಮಾಡುತ್ತಿದ್ದಾರೆ. ರಾಮೋಶಿ ಜನರು ಹುಲಸವಾರರಂತೆ ನೌಕರಿಗಳಲ್ಲಿ ಸೇರ್ಪಡೆಯಾಗಿದ್ದಾರೆ. ಲಾಲಬೇಗಿ ಮತ್ತು ಮಲಖಾನ ಜಾತಿಯವರು ತಮ್ಮ ಆನುವಂಶಿಕ ಉದ್ಯೋಗವಾದ ಭಂಗಿ ಕೆಲಸವನ್ನೇ ಮಾಡುತ್ತಿದ್ದಾರೆ. ಹೀಗೆ ಕೆಲವೊಂದು ಜಾತಿಯವರು ಆನುವಂಶಿಕ ಉದ್ಯೋಗಗಳನ್ನು ಪೂರ್ಣವಾಗಿ ತೊರೆಯುತ್ತಿದ್ದರೆ ಇನ್ನು ಕೆಲವು ಜಾತಿಗಳ ಹರಿಜನರು ತಮ್ಮ ಆನುವಂಶಿಕ ಉದ್ಯೋಗಗಳಿಗೆ ಅಂಟಿಕೊಂಡಿದ್ದಾರೆ. ಹರಿಜನರು ತಮ್ಮ ಆನುವಂಶಿಕ ಉದ್ಯೋಗಗಳನ್ನು ಬಿಟ್ಟು ಬೇರೆ ಉದ್ಯೋಗಗಳನ್ನು ಕೈಕೊಂಡರೇ ಅವರು ಸುಧಾರಿಸುತ್ತಾರೆಂದು ನಾವು ಹೇಳಲಾರೆವು. ಸಮಾಜಕ್ಕೆ ಎಲ್ಲ ತರದ ಸೇವೆಯೂ ಅವಶ್ಯವಾಗಿದ್ದು ತಮ್ಮ ಉದ್ಯೋಗಗಳಲ್ಲಿ ಇದ್ದುಕೊಂಡೇ ತಮ್ಮ ಏಳ್ಗೆಯನ್ನು ಮತ್ತು ಸುಧಾರಣೆಯನ್ನು ಮಾಡಿಕೊಳ್ಳಲಿಕ್ಕೆ ಶಕ್ಯವಿದೆ ಎಂದು ಹೇಳಬಹುದು.

ಹರಿಜನರಲ್ಲಿ ಕುಟುಂಬವ್ಯವಸ್ಥೆ

ಮಾನವಶಾಸ್ತ್ರದಲ್ಲಿ ಕುಟುಂಬಗಳನ್ನು ಮುಖ್ಯವಾಗಿ ವಿಭಕ್ತ ಕುಟುಂಬ ಮತ್ತು ಅವಿಭಕ್ತ ಕುಟುಂಬ ಎಂದು ಎರಡು ವಿಧಗಳಲ್ಲಿ ವಿಭಾಗಿಸುತ್ತಾರೆ. ವಿಭಕ್ತ ಕುಟುಂಬದಲ್ಲಿ ಮುಖ್ಯವಾಗಿ ತಂದೆ ತಾಯಿ ಮಕ್ಕಳು ಇರುತ್ತಾರೆ. ಅವಿಭಕ್ತ ಕುಟುಂಬದಲ್ಲಿ ತಂದೆ ತಾಯಿ ಮಕ್ಕಳು ಸೊಸೆಯಂದಿರು ಮತ್ತು ಮೊಮ್ಮಕ್ಕಳು ಇರುತ್ತಾರೆ. ಹರಿಜನರಲ್ಲಿ ವಿಭಕ್ತ ಕುಟುಂಬಗಳೆಷ್ಟು? ಅವಿಭಕ್ತ ಕುಟುಂಬಗಳೆಷ್ಟು? ಅವರ ಒಲವು ಯಾವ ಕುಟುಂಬ ವ್ಯವಸ್ಥೆಯ ಕಡೆಗಿದೆ? ಏಕೆ? ಅವರ ಕುಟುಂಬವ್ಯವಸ್ಥೆಯಲ್ಲಿ ಏನಾದರೂ ಬದಲಾವಣೆಯಾಗಿದೆಯೇ? ಎಂಬುದನ್ನು ಈಗ ನೋಡಬಹುದು.

ಧಾರವಾಡದಲ್ಲಿಯ ಹರಿಜನರ ೫೬೧ ಕುಟುಂಬಗಳಲ್ಲಿ ೩೬೯ ವಿಭಕ್ತ ಕುಟುಂಬಗಳಾಗಿವೆ. ೧೯೨ ಅವಿಭಕ್ತ ಕುಟುಂಬಗಳಾಗಿವೆ. ಅಂದರೆ ಪ್ರತಿಶತ ೬೫.೪೦ ವಿಭಕ್ತ ಕುಟುಂಬಗಳಾಗಿವೆ. ಲಾಲಬೇಗಿಗಳನ್ನು ಬಿಟ್ಟು ಎಲ್ಲ ಜಾತಿಯ

ಹರಿಜನರಲ್ಲಿ ಅವಿಭಕ್ತ ಕುಟುಂಬಗಳಿಗಿಂತ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಾಗಿದೆ. ನಗರವಾಸ, ಶಿಕ್ಷಣಸಂಪರ್ಕ, ನೌಕರಿಹವ್ಯಾಸಗಳು ವಿಭಕ್ತ ಕುಟುಂಬಗಳು ಹೆಚ್ಚುತ್ತಿರುವುದಕ್ಕೆ ಕಾರಣಗಳೆಂದು ಹೇಳಬಹುದು. ಮೊದಲು ಹರಿಜನರಲ್ಲಿ ಅವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಿತ್ತೇ ಎಂಬುದು ಗೊತ್ತಿಲ್ಲ. ಆದರೆ ನಾವು ಹರಿಜನರನ್ನು ಪ್ರಶ್ನಿಸಿದಾಗ ಅವರು ಈಗ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದೂ ಯುವಕರು ಅವಿಭಕ್ತ ಕುಟುಂಬಗಳನ್ನು ನಿರಾಕರಿಸುತ್ತಾರೆಂದೂ ಹೇಳುತ್ತಾರೆ.

ಧಾರವಾಡದ ಹರಿಜನರಲ್ಲಿ ೪ ಮಾತೃಭಾಷೆಗಳನ್ನು ಕಾಣುತ್ತೇವೆ. ಅವು: (೧) ಕನ್ನಡ (೨) ತೆಲುಗು (೩) ಮರಾಠಿ (೪) ಹಿಂದೀ. ಕನ್ನಡ ಮಾತೃಭಾಷೆ ಇದ್ದವರು ಮೂಲತಃ ಕರ್ನಾಟಕದವರಾಗಿದ್ದಾರೆ. ತೆಲುಗು ಮಾತೃಭಾಷೆ ಇದ್ದವರು ಆಂಧ್ರ ಪ್ರದೇಶದಿಂದ ವಲಸೆ ಬಂದವರಾಗಿದ್ದಾರೆ (Immigrants). ಮರಾಠಿ ಮಾತನಾಡುವ ಹರಿಜನರು ಮಹಾರಾಷ್ಟ್ರದ ಜಿಲ್ಹೆಗಳಿಂದ ಬಂದವರಾಗಿದ್ದಾರೆ. ಹಿಂದೀ ಮಾತನಾಡುವವರು ಉತ್ತರ ಭಾರತದಿಂದ ಬಂದವರಾಗಿದ್ದಾರೆ. ಹರಿಜನರಿಗೆ ಈ ನಾಲ್ಕು ಮಾತೃಭಾಷೆಗಳಾಗಿದ್ದರೂ ವ್ಯವಹಾರದಲ್ಲಿ ಎಲ್ಲರೂ ಕನ್ನಡವನ್ನೇ ಬಳಸುತ್ತಾರೆ. ಈ ನಾಲ್ಕು ಭಾಷೆಗಳು ಮಾತೃಭಾಷೆಯಾದವರನ್ನು ನಾವು ಬೇರೆ ಬೇರೆ ಜಾತಿಗಳಲ್ಲಿ ವಿಂಗಡಿಸಬಹುದಾಗಿದೆ.

ಕೋಷ್ಟಕ–೪

ಜಾತಿಗಳು ಹಾಗೂ ಮಾತೃಭಾಷೆ

ಜಾತಿಗಳು	ಮಾತೃಭಾಷೆ	ಕುಟುಂಬಗಳ ಸಂಖ್ಯೆ	ಪ್ರತಿಶತ
೧. ಕನ್ನಡ ಮಾದಿಗ ೨. ಮಚಿಗಾರ ೩. ಚಲವಾದಿ ೪. ಸಮಗಾರ	ಕನ್ನಡ	೪೦೬	೭೨.೩೭
೧. ಢೋರ ೨. ರಾಮೋಶಿ ೩. ಹುಲಸವಾರ	ಮರಾಠಿ	೮೯	೧೭.೩೭
೧. ಲಾಲಬೇಗಿ ೨. ಮಲಖಾನ	ಹಿಂದೀ	೨೧	೩.೭೪
೧. ತೆಲಗು ಮಾದರ	ತೆಲಗು	೪೫	೮.೦೨
ಒಟ್ಟು ೧೦ ಜಾತಿಗಳು		೫೬೧	೧೦೦

ಹರಿಜನರ ಪ್ರತಿಯೊಂದು ಜಾತಿಯಲ್ಲಿ ತಮ್ಮ ಕುಟುಂಬವು ಯಾವ ಬೆಡಗಿಗೆ ಸೇರಿದೆ ಎಂಬುದನ್ನು ಹೇಳುತ್ತಾರೆ. ಇದು ಬ್ರಾಹ್ಮಣರ ಗೋತ್ರ ವಿದ್ದಂತೆ. ಒಂದೇ ಬೆಡಗಿಗೆ ಸೇರಿದ ಕುಟುಂಬಗಳು ಮದುವೆಯ ಸಂಬಂಧ (Matrimonial relationship ವನ್ನು ಬೆಳಸಲಿಕ್ಕೆ ಶಕ್ಯವಿಲ್ಲ. ಕೆಲವೊಂದು ಸಲ ಅವರ ಅಡ್ಡ ಹೆಸರುಗಳು ಬೆಡಗಿನ ಹೆಸರುಗಳಾಗಿವೆ. ಮದುವೆಯ ಸಂಬಂಧ ವನ್ನು ಬೆಳೆಸುವಾಗ ಜಾತಿ, ಬೆಡಗು, ಸಾಮಾಜಿಕ ಅಂತಸ್ತುಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವದೇ ಹೊರತು ಮಾತೃಭಾಷೆಯು ಅಡ್ಡ ಬರುವದಿಲ್ಲ.

ಹರಿಜನರಲ್ಲಿಯ ಸಾಮಾಜಿಕ ಸಂಸ್ಥೆಗಳು (Social Institutions)

ಹರಿಜನರ ಕೆಲವು ಸಾಮಾಜಿಕ ಸಂಸ್ಥೆಗಳ ಪರಿಚಯವನ್ನು ಮಾಡಿ ಕೊಳ್ಳದಿದ್ದರೆ ನಮಗೆ ಅವರ ಜೀವನದ ಪೂರ್ಣ ಸ್ವರೂಪ ಅರ್ಥ-ವಾಗದು.

೧. ಜಾತಿ ಸಂಸ್ಥೆಗಳು (Caste Councels) : ಹರಿಜನರ ಪ್ರತಿಯೊಂದು ಜಾತಿಯಲ್ಲಿ ಜಾತಿಸಂಸ್ಥೆಗಳು ಇವೆ. ಈಗ ಸರಕಾರವು ಜಾತಿಸಂಸ್ಥೆಗಳ ಕೆಲ ವೊಂದು ಅಧಿಕಾರಗಳನ್ನು ತೆಗೆದುಕೊಂಡಿದ್ದರೂ ಜಾತಿಸಂಸ್ಥೆಗಳು ಇನ್ನೂ ಹರಿಜನರ ಜೀವನದ ಅನೇಕ ಕಾರ್ಯಗಳಲ್ಲಿ ಪ್ರಬಲ ಸಂಸ್ಥೆಗಳಾಗಿವೆ. ಮನೆತನ ಗಳ ಜಗಳವನ್ನು, ಮನೆಯಲ್ಲಿಯ ಜಗಳವನ್ನು, ಜಾತಿಗಳಲ್ಲಿಯ ಜಗಳಗಳನ್ನು ಪರಿಹರಿಸುವಲ್ಲಿ ಈ ಜಾತಿಸಂಸ್ಥೆಗಳು ಸಜೀವ ಸಂಸ್ಥೆಗಳಾಗಿವೆ.

ಜಾತಿಸಂಸ್ಥೆಯ ಸದಸ್ಯರು ತಮ್ಮ ಜಾತಿಯ ಜನರಿಂದ ಆರಿಸಲ್ಪಟ್ಟವ-ರಾಗಿದ್ದು ಅವರಿಗೆ ಅನೇಕ ಅಧಿಕಾರಗಳನ್ನು ಕೊಡಲಾಗಿದೆ. ಅವರು ಯಾವುದೇ ಕುಟುಂಬವನ್ನು ಜಾತಿಯಿಂದ ಬಹಿಷ್ಕರಿಸಬಲ್ಲರು, ಜಾತಿಯ ಸದಸ್ಯನಿಗೆ ದಂಡ, ಶಿಕ್ಷೆ ವಿಧಿಸಬಲ್ಲರು. ವಿವಾಹ ಮತ್ತು ವಿವಾಹವಿಚ್ಛೇದನಗಳನ್ನು ಮಾಡುವಲ್ಲಿ ಅವರು ಮಹತ್ವದ ಪಾತ್ರವನ್ನು ಆಡುತ್ತಾರೆ.

ಜಾತಿಸಂಸ್ಥೆಯು ಮದುವೆ, ಜಾತ್ರೆ ಮುಂತಾದ ಧಾರ್ಮಿಕ ಕಾರ್ಯಗಳಿಗೆ ಬೇಕಾಗುವ ಹಣವನ್ನು ಕೂಡಿಸಬಲ್ಲದು. ಗುಡಿಗುಂಡಾರಗಳನ್ನು ಕಟ್ಟಿಸುವಾಗ ಮತ್ತು ಜೀರ್ಣೋದ್ಧಾರ ಮಾಡುವಾಗ ಮಹತ್ವದ ಪಾತ್ರ ವಹಿಸಬಲ್ಲರು. ಒಟ್ಟಾರೆ ಜಾತಿಸಂಸ್ಥೆಯ ಸದಸ್ಯರು ಉದಾರರೂ ಹಣಕ್ಕಾಗಿ ದುಡಿಯದವರೂ (Philanthropists) ಆಗಿದ್ದಾರೆ.

೨. ಹಲಗೆಯ ಮೇಳ : ಹರಿಜನರಲ್ಲಿ ಮತ್ತೊಂದು ಮಹತ್ವದ ಸಂಸ್ಥೆಯೆಂದರೆ ಹಲಗೆಯ ಮೇಳ. ಬಹುತರವಾಗಿ ಹೊಲೆಯರು ಮತ್ತು ಮಾದಿಗರು ಹಲಗೆಯ ಮೇಳಗಳನ್ನು ಸಂಘಟಿಸುತ್ತಾರೆ. ಅವರ ಕೆಲವು

ಹಲಗೆಯ ಮೇಳಗಳು (ಮಾಳಾಪೂರ ಮತ್ತು ಕಮಲಾಪೂರ ಹಲಗೆಯ ಮೇಳ) ಬಹು ನಿಪುಣತೆಯನ್ನು ಪಡೆದಿವೆ.

ಈ ಹಲಗೆಯ ಮೇಳಗಳು ಸ್ಪೃಶ್ಯರಿಗೆ ಮತ್ತು ಅಸ್ಪೃಶ್ಯರಿಗೆ ತಮ್ಮ ಸೇವೆಯನ್ನು ಸಲ್ಲಿಸುತ್ತವೆ. ಕಾಮನ ಹಬ್ಬದಲ್ಲಿ ಸ್ಪೃಶ್ಯರು ಇವರಿಗೆ ಹಣವನ್ನು ಕೊಟ್ಟು ಕರೆದುಕೊಂಡು ಹೋಗುತ್ತಾರೆ. ಸ್ಪೃಶ್ಯ ಮತ್ತು ಅಸ್ಪೃಶ್ಯರ ಅಂತ್ಯಯಾತ್ರೆಗಳಲ್ಲಿ ಹಲಗೆಯ ಮೇಳದವರು ವಾದ್ಯವನ್ನು ನುಡಿಸುತ್ತಾರೆ.

೩. ಭಜನೆಯ ಮೇಳಗಳು : ಇತ್ತಿತ್ತಲಾಗಿ ಹರಿಜನರ ಪ್ರತಿಯೊಂದು ಜಾತಿಯಲ್ಲಿ ಭಜನೆಯ ಮೇಳಗಳು ಸಂಘಟಿಸಲ್ಪಟ್ಟವೆ. ಪ್ರತಿಯೊಂದು ಓಣಿಗಳಲ್ಲಿ ಆ ಆ ಜಾತಿಯ ಜನರು ರಾತ್ರಿವೇಳೆಯಲ್ಲಿ ತಮ್ಮ ಓಣಿಗಳಲ್ಲಿಯ ಒಂದು ಭವ್ಯವಾದ ಗುಡಿಯಲ್ಲಿ ಕೂಡಿ ಭಜನೆಯ ಪದಗಳನ್ನು ಕಲಿಯುತ್ತಾರೆ. ಈ ಮೇಳದಲ್ಲಿ ಮುಖ್ಯವಾಗಿ ಹಾರ್ಮೋನಿಯಮ್, ತಾಳ, ತಂಬೂರಿ, ತಪ್ಪಡಿ, ಮದ್ದಲಿ ಮುಂತಾದ ವಾದ್ಯಗಳನ್ನು ಕಲಿಯುತ್ತಾರೆ. ಇಂಥ ಮೇಳಗಳು ಸಾಮಾಜಿಕ ಮತ್ತು ಧಾರ್ಮಿಕ ಸಮಾರಂಭಗಳಲ್ಲಿ ಬಹಳ ಉಪಯೋಗಿಸಲ್ಪಡುತ್ತಿವೆ. ಇವರು ಇಂಥ ಸಮಾರಂಭಗಳಲ್ಲಿ ಭಾಗವಹಿಸಿ ಹಣವನ್ನೂ ಗಳಿಸುತ್ತಾರೆ. ಈ ಹಣವು ಅವರ ಮೇಳಗಳ ಪ್ರಗತಿಗಾಗಿ ಉಪಯೋಗಿಸಲ್ಪಡುತ್ತದೆ. ಇಂಥ ಮೇಳಗಳ ಸೇವೆಯು ಸ್ಪೃಶ್ಯರಿಗೂ ಮತ್ತು ಅಸ್ಪೃಶ್ಯರಿಗೂ ಸಲ್ಲುತ್ತಿದೆ. ಭಜನಾ ಮೇಳದಲ್ಲಿ ಆ ಆ ಓಣಿಯ ಯಾವುದೇ ಇಷ್ಟವಿದ್ದ ವ್ಯಕ್ತಿಯು ಸೇರಬಲ್ಲನು. ಇದು ಕೇವಲ ಸಾಮಾಜಿಕ, ಧಾರ್ಮಿಕ ಸಂಸ್ಥೆಯಾಗಿದ್ದು ರಾಜಕೀಯದಿಂದ ಇಂಥ ಮೇಳಗಳು ಯಾವಾಗಲೂ ದೂರ ಇರುತ್ತವೆ.

ಜಾತಿಸಂಸ್ಥೆ. ಹಲಗೆಯ ಮೇಳ ಮತ್ತು ಭಜನಾಮೇಳಗಳಲ್ಲದೆ ಇನ್ನೂ ಅನೇಕ ಅಸ್ಥಿರವಾದ ಗುಂಪುಗಳನ್ನು ಮತ್ತು ಸಂಸ್ಥೆಗಳನ್ನು ಹರಿಜನರಲ್ಲಿ ಕಾಣುತ್ತೇವೆ. ವೇಳೆ ಕಳೆಯಲು ಇಸ್ಪೀಟು ಆಡುವ, ಹಣವನ್ನು ಆಟದಲ್ಲಿ ತೊಡಗಿಸುವ, ಜೂಜು, ಜಿದ್ದು ಆಡುವ ಗುಂಪುಗಳಿಗೇನೂ ಹರಿಜನರಲ್ಲಿ ಕೊರತೆ ಇಲ್ಲ.

ಸಾಮಾಜಿಕ ವ್ಯಕ್ತಿಗಳು

ಈಗ ಹರಿಜನರ ಕೆಲವು ಸಂಸ್ಥೆಗಳನ್ನು ನೋಡಿದೆವು. ಆದರೆ ಹರಿಜನರ ಸಾಮಾಜಿಕ ವ್ಯಕ್ತಿಗಳ ಪರಿಚಯ ಮಾಡಿಕೊಳ್ಳದೆ ನಮಗೆ ಅವರ ಸಮಾಜದ ಪೂರ್ಣ ಪರಿಚಯವಾಗಲಾರದು. ಆದುದರಿಂದ ಈ ಕೆಳಗೆ ಹರಿಜನರಲ್ಲಿಯ ಕೆಲವು ಮಹತ್ವದ ವ್ಯಕ್ತಿಗಳ ಪರಿಚಯ ಮಾಡಿಕೊಡಲಾಗುವದು.

೧. ಬಟ್ಟಲ ಹೊರುವ ಚಲವಾದಿ : ಬಟ್ಟಲು ಹೊರುವ ಚಲವಾದಿಯು ಚಲವಾದಿ ಜಾತಿಯವನಾಗಿದ್ದಾನೆ. ಇವನು ಯಾವಾಗಲೂ ತನ್ನ ಹೆಗಲ ಮೇಲೆ

ಒಂದು ಕಡೆ ಜಟ್ಟಲು ಇನ್ನೊಂದು ಕಡೆ ಗಂಟೆ ಇರುವ ಹಿತ್ತಾಳಿಯ ಸಳಿಯನ್ನು ಹೊತ್ತುಕೊಂಡು ಸ್ಪೃಶ್ಯರ ಮತ್ತು ಅಸ್ಪೃಶ್ಯರ ಸಾಮಾಜಿಕ ಮತ್ತು ಧಾರ್ಮಿಕ ಕ್ರಿಯೆಗಳಲ್ಲಿ ತನ್ನ ಸೇವೆಯನ್ನು ಸಲ್ಲಿಸುತ್ತಾನೆ. ವಾರ್ತೆಯನ್ನು ತಲುಪಿಸುವದು, ಜನರನ್ನು ಕೂಡಿಸುವದು, ಇವನ ಕೆಲಸವಾಗಿದೆ. ಚಲವಾದಿಯು ಸೇವೆಗಾಗಿ ಬಾಬು ಕೊಡಲಾಗುವದು. ಈತನು ವಂಶಪರಂಪರೆಯಿಂದ ತನ್ನ ಅಧಿಕಾರವನ್ನು ಪಡೆಯುತ್ತಾನೆ. ಇವನಿಲ್ಲದೆ ಯಾವದೇ ಸಾಮಾಜಿಕ, ಧಾರ್ಮಿಕ ಕಾರ್ಯಗಳು ನಡೆಯುವದಿಲ್ಲ. ಈತನಿಗೆ ಚಲವಾದಿ ಜಾತಿಯಲ್ಲಿ ಪೂಜಾರಿಯ ಸ್ಥಾನವಿದೆ. ಸಾಮಾಜಿಕ, ಧಾರ್ಮಿಕ ಕಾರ್ಯಗಳಲ್ಲಿ ಕೆಲವೊಮ್ಮೆ ಲಿಂಗಾಯತ ಜಂಗಮರು ಸಿಗದಿದ್ದರೆ ಇವನೇ ಆ ವಿಧಿಗಳನ್ನು ನೆರವೇರಿಸುತ್ತಾನೆ.

೨. **ಕಹಳೆಯವ :** ಕಹಳೆಯುವನು ಚಲವಾದಿ ಜಾತಿಯವನಾಗಿದ್ದಾನೆ. ಕಹಳೆಯನ್ನೂದುವುದರಿಂದ ಇವನಿಗೆ ಕಹಳೆಯುವನೆಂಬ ಹೆಸರು ಬಂದಿದೆ. ಕಹಳೆಯು ಯಾವಾಗಲೂ ಅವನ ಬಗಲಲ್ಲಿ ಜೋತಾಡುತ್ತಿರುವದು ಕಂಡುಬರುತ್ತದೆ.

ಈ ಕಹಳೆಯನ್ನು ಅವನು ಸ್ಪೃಶ್ಯ ಮತ್ತು ಅಸ್ಪೃಶ್ಯರ ಸಾಮಾಜಿಕ, ಧಾರ್ಮಿಕ ಸಮಾರಂಭಗಳಲ್ಲಿ ಊದಿ ಸೇವೆ ಸಲ್ಲಿಸುತ್ತಾನೆ. ಈ ಕಹಳೆಯ ಧ್ವನಿ ೧–೨ ಮೈಲುಗಳಷ್ಟು ದೂರದವರೆಗೆ ಕೇಳಿಬರುತ್ತದೆ. ಕಹಳೆಯುವನಿಗೆ ಅವನ ಸೇವೆಗಾಗಿ ಸ್ಪೃಶ್ಯರಿಂದ ಮತ್ತು ಅಸ್ಪೃಶ್ಯರಿಂದ 'ಬಾಬು' ಮತ್ತು 'ಆಯ'ಗಳು ಕೊಡಲ್ಪಡುತ್ತವೆ.

೩. **ಪೋತರಾಜ :** ಪೋತರಾಜನು ಮಾದಿಗ ಜಾತಿಯವನಾಗಿದ್ದಾನೆ. ಇವನು ವಿಶಿಷ್ಟ ರೀತಿಯ ಬಣ್ಣಬಣ್ಣದ ಉಡುಪನ್ನು ಧರಿಸುತ್ತಾನೆ. ಇವನ ಸೇವೆಯು ಮುಖ್ಯವಾಗಿ ಹರಿಜನ ದೇವತೆಗಳ ಜಾತ್ರೆಗಳಲ್ಲಿ ಇದೆ. ಅಂಥ ಜಾತ್ರೆಗಳ ಸಮಾರಂಭಗಳಲ್ಲಿ ಇವನು ಕೋಣ, ಕುರಿ, ಆಡು ಮತ್ತು ಕೋಳಿಗಳ ಬಲಿಯನ್ನು ಕೊಡುತ್ತಾನೆ. ಆಗ ಇವನು ದೇವತೆಯ ಪೂಜಾರಿಯಂತೆ ವರ್ತಿಸುತ್ತಾನೆ. ತನ್ನ ಈ ಸೇವೆಗಾಗಿ ಹರಿಜನರಿಂದ ಮತ್ತು ಉಚ್ಚ ಜಾತಿಯ ಹಿಂದುಗಳಿಂದ ಭಿಕ್ಷೆ ಬೇಡಿ ತನ್ನ ಜೀವನವನ್ನು ಸಾಗಿಸುತ್ತಾನೆ. ಇವನು ತನ್ನ ಉದ್ಯೋಗವನ್ನು ವಂಶಪರಂಪರವಾಗಿ ಪಡೆಯುತ್ತಾನೆ.

೪. **ಪೂಜಾರಿಗಳು :** ಎಲ್ಲ ಜಾತಿಯ ಹರಿಜನರಲ್ಲಿ ಎರಡು ವಿಧದ ಪೂಜಾರಿಗಳಿದ್ದಾರೆ. ಕೆಲವರು ಕೇವಲ ಗುಡಿಗಳಲ್ಲಿ ಪೂಜೆಪುರಸ್ಕಾರ ನಡೆಯಿಸುವವರು ಮತ್ತೆ ಕೆಲವರು ಸಾಮಾಜಿಕ, ಧಾರ್ಮಿಕ ವಿಧಿಗಳನ್ನು ತಮ್ಮ ಜಾತಿ

ಗಳಲ್ಲಿ ನೆರವೇರಿಸಲಿಕ್ಕೆ ಅರ್ಹತೆಪಡೆದವರು. ಹರಿಜನರ ಗುಡಿ–ಗುಂಡಾರಗಳ ಪೂಜಾರಿಗಳು ಅವರ ಜಾತಿಯುವರೇ ಆಗಿದ್ದಾರೆ. ಸಾಮಾಜಿಕ ಮತ್ತು ಧಾರ್ಮಿಕ ವಿಧಿಗಳನ್ನು ಮಾತ್ರ ಬ್ರಾಹ್ಮಣರ ಭಟ್ಟರಾಗಲೀ ಇಲ್ಲವೇ ಲಿಂಗಾಯತ ಜಂಗಮರಾಗಲೀ ನೆರವೇರಿಸುತ್ತಾರೆ. ಕೆಲವೊಂದು ಸಲ ಈ ಪೂಜಾರಿಗಳು ಇಂಥ ಸಮಾರಂಭಗಳನ್ನು ನೆರವೇರಿಸಬಲ್ಲರು.

೫. **ಬಸವಿಯರು :** ಬಸವಿಪದ್ಧತಿಯು ಹರಿಜನರಲ್ಲಿ ಚಲವಾದಿ, ಹುಲಸವಾರ ಮತ್ತು ಮಾದಿಗರಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಬಸವಿ ಬಿಟ್ಟ ಹೆಣ್ಣುಮಕ್ಕಳು ಮದುವೆಯಾಗದೇ ತಮ್ಮ ತಂದೆತಾಯಿಯ ಹತ್ತಿರ ಇದ್ದುಕೊಂಡು ಸ್ಪೃಶ್ಯರ ಮತ್ತು ಅಸ್ಪೃಶ್ಯರ ಸಂಗಡ ಸಂಭೋಗ ಸಂಬಂಧವನ್ನಿಟ್ಟುಕೊಂಡಿರುತ್ತಾರೆ. ಕೆಲವರು ಈ ವೃತ್ತಿಗಿಳಿಯುವ ಮೊದಲು ಧಾರ್ಮಿಕವಾಗಿ ದೇವರ ಹೆಸರಿನಲ್ಲಿಯಾಗಲೀ ಇಲ್ಲವೆ ಸೋದರಮಾವನ ಸಂಗಡವಾಗಲೀ ಮದುವೆಯಾಗುತ್ತಾರೆ. ಹೀಗೆ ಮದುವೆಯಾದನಂತರ ತಾವು ಬಸವಿಯರೆಂದು ಹೇಳಿಕೊಳ್ಳುತ್ತಾರೆ. ಈಗ ಬಸವಿಪದ್ಧತಿಯು ಕಾಯ್ದೆ ಬಾಹಿರವಾಗಿದ್ದು ಹರಿಜನರಲ್ಲಿ ಇದು ಕಡಿಮೆಯಾಗುತ್ತ ನಡೆದಿದೆ.

ಬಸವಿಯರಿಗೆ ಮೊದಲು ಹಿಂದೂ ಸಮಾಜದಲ್ಲಿ ವಿಶಿಷ್ಟ ಸ್ಥಾನಮಾನಗಳನ್ನು ಕೊಡಲಾಗಿತ್ತು. ಇವರು ದೇವತೆಗಳ ಧಾರ್ಮಿಕ ಸಮಾರಂಭಗಳಲ್ಲಿ ಕಳಸ ಹೊರುವ, ಆರತಿ ಹಿಡಿಯುವ, ಗುಡಿಗಳನ್ನು ಸ್ವಚ್ಛವಾಗಿಡುವ ಮುಂತಾದ ಕೆಲಸಗಳಿಗೆ ಮೀಸಲಾಗಿದ್ದರು. ಬಸವಿಯರಿಗೆ ಕೆಲಕಾಲದನಂತರ ವೇಶ್ಯೆಯರೆಂಬ ಅರ್ಥಬಂದಂತೆ ಕಾಣುತ್ತದೆ. ಕೆಲವು ದನಗಳನ್ನು ಸಹಿತ ದೇವರ ಹೆಸರಿನಲ್ಲಿ ಬಸವಿ ಬಿಡುವ ಪದ್ಧತಿ ಇದೆ. ಇಂಥವುಗಳಿಗೆ ಬಸವಿದನಗಳೆಂದೇ ಕರೆಯುತ್ತಾರೆ.

(ಮುಂದುವರಿಯುವುದು)

ಹರಿಹರದೇವ ಕೃತ

ನಂಬಿಯಣ್ಣನ ರಗಳೆ

ಅನಂತ ಬುರ್ಲಿ

'ನಂಬಿಯಣ್ಣನ ರಗಳೆ' 'ಬಸವರಾಜದೇವರಗಳೆ'ಯಷ್ಟೇ ಪ್ರಭಾವಿಯಾದ ಕೃತಿಯಾದರೂ ಒಟ್ಟುಪರಿಣಾಮದಲ್ಲಿ ಮಹಾಕೃತಿಯಲ್ಲವೆಂದು ನಮ್ಮ ಮತ. ಆದರಲ್ಲಿ ಶೃಂಗಾರಭಕ್ತಿಗಳ ಸಂಮಿಶ್ರ ಚಿತ್ರವು ಉಜ್ವಲವಾಗಿದೆ, ಕಲ್ಪನೆ ಎತ್ತರಕ್ಕೆ ಹಾರಿದೆ. ಆದರೆ ಮೂಲ ಕಥೆಗೆ ಕಟ್ಟುಬಿದ್ದು ಹರಿಹರನು ಬಿಡಿಸಿದ ನಂಬಿಯಣ್ಣನ ವ್ಯಕ್ತಿತ್ವದ ಚಿತ್ರ ಬಸವಣ್ಣನ ಚಿತ್ರದಷ್ಟು ಸಮಗ್ರತೆಯಿಂದ ಕೂಡಿಲ್ಲ, ಸಂಪೂರ್ಣ ಹೃದ್ಯವಾಗಿಲ್ಲ. ಅವನು ಪರವೆ ಸಂಕಿಲೆಯರಿಬ್ಬರಲ್ಲಿಯೂ ತೋರಿದ ಪ್ರಣಯವು ಈಶ್ವರನ ಆಜ್ಞೆಗೆ ಅನುಗುಣ, ಉತ್ಕಟವಾಗಿದ್ದರೂ ಮನುಷ್ಯಜೀವನದ ಉಚ್ಚಮೌಲ್ಯಗಳಿಗೆ ವಿರುದ್ಧವಾಗುತ್ತದೆ. ಹೀಗಾಗಿ ಆ ಪಾತ್ರದ ಉದಾತ್ತತೆಗೆ ಕುಂದು ಬಂದಿದೆ. ಅವನ ಚಂಚಲಶೃಂಗಾರ, ಸ್ಥಿರಭಕ್ತಿಗಳ ಸಮನ್ವಯವಿಲ್ಲದೆಹೋಗುತ್ತದೆ....ನಂಬಿಯಣ್ಣನ ಕಥೆ ಪೂರ್ಣವಾಗಿದ್ದರೂ ವ್ಯಕ್ತಿಚಿತ್ರ ಅಪೂರ್ಣ, ಅಸಮಗ್ರ.

—ಕನ್ನಡ ಸಾಹಿತ್ಯ ಚರಿತ್ರೆ (ಪುಟ ೧೮೬)

ಇದು ಡಾ. ರಂ. ಶ್ರೀ ಮುಗಳಿಯವರು ಹರಿಹರದೇವನ 'ನಂಬಿಯಣ್ಣನ ರಗಳೆ'ಯ ಬಗೆಗೆ ವ್ಯಕ್ತಪಡಿಸಿದ ಅಭಿಪ್ರಾಯವು. ಸುಪ್ರಸಿದ್ಧ ವಿಮರ್ಶಕರೆಂದು ಹೆಸರಾದ ಡಾ. ಮುಗಳಿಯವರು ಹೇಳಿದ ಮಾತುಗಳನ್ನು ಅಲ್ಲಗಳೆಯುವದು ಸಾಹಸದ ಮಾತಾದರೂ, ಅವರ ಮಾತುಗಳನ್ನು ಒರೆಗೆ ಹಚ್ಚಿ ನೋಡುವದು ತಪ್ಪಾಗಲಾರದೆಂದು ಭಾವಿಸಿದ್ದೇನೆ. ಹಿರಿಯರು ಹೇಳಿದುದನ್ನೆಲ್ಲ ಕಣ್ಣುಮುಚ್ಚಿ ಒಪ್ಪುವದು ನಮ್ಮಲ್ಲಿ ಸಂಪ್ರದಾಯವಾಗಿ ಬಂದಿದೆ. ಇದು ನಿಲ್ಲಬೇಕು. ವಿವೇಕಕ್ಕೆ ಒಪ್ಪಿದುದನ್ನು, ತರ್ಕಕ್ಕೆ ನಿಲ್ಲುವಂತಹದನ್ನು ಮಾತ್ರ ಒಪ್ಪಬೇಕು. ವಿಚಾರವಿಮರ್ಶೆ ಮತ್ತೆ ಮತ್ತೆ ನಡೆದಷ್ಟೂ ಉತ್ತಮ. ಯಾವದೇ ಕಾವ್ಯವನ್ನು ಅಭ್ಯಾಸಮಾಡುವಾಗ, ವಿಮರ್ಶಿಸುವಾಗ ಕವಿಯ ಕಾವ್ಯದ ಉದ್ದೇಶವನ್ನು, ಕವಿಹೃದಯವನ್ನು ಅವಶ್ಯವಾಗಿ ತಿಳಿದಿರಬೇಕು. ಅದಕ್ಕನುಗುಣವಾಗಿ ಕಾವ್ಯವನ್ನು ವಿಮರ್ಶಿಸಿ ಬೆಲೆಕಟ್ಟಬೇಕು. ಈ ದೃಷ್ಟಿಯಲ್ಲಿ 'ನಂಬಿಯಣ್ಣನ ರಗಳೆ'ಯನ್ನು ಅಭ್ಯಾಸಮಾಡುತ್ತಿರುವಾಗ ನನಗೆ ತೋಚಿದ ಕೆಲ

ವಿಚಾರಗಳನ್ನು ವಿದ್ವಾಂಸರೆದುರು ಮಂಡಿಸುವ ಯತ್ನ ಮಾಡಿದ್ದೇನೆ ಇಲ್ಲಿ. ವಿದ್ವಾಂಸ ವಿಮರ್ಶಕರು ಇನ್ನೊಮ್ಮೆ ಆಲೋಚಿಸಿ ನನ್ನ ಮಾತುಗಳ ಮಥನ ಮಾಡಿದರೆ ನನ್ನ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ನಂಬಿಯಣ್ಣನು ಅರವತ್ತು ಮೂವರು ಪುರಾತನರಲ್ಲಿ ಒಬ್ಬನು. ಬಸವಣ್ಣನವರು, 'ಶಿಶುವೆನ್ನಬಹುದೇ ನಂಬಿಯಣ್ಣನ....' ಎಂದು ನಂಬಿಯಣ್ಣನನ್ನು ನೆನೆದಿರುವರು. ಚೆನ್ನಬಸವಣ್ಣವರು, ನಂಬಿಯು 'ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ' ಎಂದು ಹೇಳಿದ್ದಾರೆ. ನಂಬಿಯಣ್ಣನ ಉಲ್ಲೇಖ ಶಿಲಾಶಾಸನಗಳಲ್ಲಿಯೂ ಬಂದಿದೆ. ಅರುವತ್ತುಮೂವರು ಪುರಾತನರು ಐತಿಹಾಸಿಕ ವ್ಯಕ್ತಿಗಳೆಂಬಲ್ಲಿ ಯಾವ ಸಂದೇಹವಿಲ್ಲ. ಅನೇಕ ಸಂಶೋಧಕರು ಅವರ ಕಾಲ ಮಿತಿಯನ್ನು ಗುರುತಿಸಿರುವದುಂಟು. ಬಸವಣ್ಣನವರ ಕಾಲಕ್ಕಾಗಲೆ ನಂಬಿಯಣ್ಣನ ಮಹಿಮೆ ಕನ್ನಡನಾಡಿನಲ್ಲಿ ಸಾಕಷ್ಟು ಹರಡಿರಬೇಕು. ತರುವಾಯ ಬಂದ ಹರಿಹರದೇವನು ಈ ಐತಿಹಾಸಿಕ ಪುರುಷ ಮಹಾಶರಣ ನಂಬಿಯಣ್ಣನ ಜೀವನವನ್ನು ತನ್ನ 'ನಂಬಿಯಣ್ಣನ ರಗಳೆ'ಯಲ್ಲಿ ಚಿತ್ರಿಸಿದ್ದಾನೆ. ನಂಬಿಯ ವ್ಯಕ್ತಿತ್ವದಲ್ಲಿ 'ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ'ಯೆಂದನಿಸಿಕೊಳ್ಳುವ ಮಹಾಪ್ರಸಾದಿಯನ್ನು ಗುರುತಿಸಿದ್ದಾನೆ. ಬಸವಾದಿ ಶರಣರು ಉಸುರಿದ ಮಹಾಪ್ರಸಾದಿಯ ಸರ್ವಲಕ್ಷಣಗಳನ್ನೂ ನಂಬಿಯ ವ್ಯಕ್ತಿತ್ವದಲ್ಲಿ ನಿಚ್ಚಳವಾಗಿ ಕಾಣಬಹುದಾಗಿದೆ. ಹರಿಹರನ 'ನಂಬಿಯಣ್ಣನ ರಗಳೆ'ಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಈ ಮಾತು ಸ್ಪಷ್ಟವಾಗುತ್ತದೆ. ಕುಮಾರವ್ಯಾಸ, ಚಾಮರಸರಂತೆ ಹರಿಹರದೇವನು ಕೂಡ ದಾರ್ಶನಿಕ ಕವಿಯೆಂಬುದನ್ನು ಲಕ್ಷ್ಯದಲ್ಲಿಡಬೇಕು. ಹರಿಹರನ ಪ್ರತಿಭೆ, ಸತ್ವಸಾಮರ್ಥ್ಯಗಳು ಉನ್ನತವಾದುವು ಎಂಬಲ್ಲಿ ಎರಡು ಮಾತಿಲ್ಲ. ಕಾವ್ಯದಲ್ಲಿ ಚಿತ್ರಿಸುವ ಮಹಾಪುರುಷನ ಒಳಹೊರಗನ್ನು ಅರಿತವನೇ ಅವನ ಅಂತರಂಗ ಬಹಿರಂಗದ ಚಿತ್ರವನ್ನು ಸಮರ್ಥವಾಗಿ ಕಲಾತ್ಮಕವಾಗಿ ಚಿತ್ರಿಸಬಲ್ಲನು. ಪ್ರಸಾದಿಯ ಭವ್ಯ ಜೀವನವನ್ನು ನಂಬಿಯಲ್ಲಿ ಕಂಡುಕೊಂಡ ಹರಿಹರ ಕವಿ ಅವನ ಭವ್ಯ ದಿವ್ಯ ಜೀವನವನ್ನು ಲಲಿತವಾಗಿ ಕಾವ್ಯರೂಪದಲ್ಲಿ ವರ್ಣಿಸಿದ್ದಾನೆ. ಹರಿಹರನು ನಂಬಿಯನ್ನು ಚಿತ್ರಿಸಿದ ಬಗೆಯನ್ನು ಕಾಣುವ ಮೊದಲು ಪ್ರಸಾದಿಯ ಲಕ್ಷಣಗಳೇನು ಎಂಬುದನ್ನು ಸ್ವಲ್ಪ ಸಮಾಲೋಚಿಸುವದು ಒಳಿತು.

ಲೋಕದಲ್ಲಿ ಸಾಮಾನ್ಯ ಮಾನವರಾದ ನಾವು ಪಂಚೇಂದ್ರಿಯಗಳ ಮೂಲಕ ಸರ್ವ ಸುಖೋಪಭೋಗಗಳನ್ನು ಪಡೆಯುತ್ತೇವೆ. ಅನುಭವಿಸುವಾಗ 'ನಾನು ಅನುಭವಿಸುತ್ತಿದ್ದೇನೆ' ಎಂಬ ಪ್ರಜ್ಞೆ ಸದಾ ಜಾಗೃತವಾಗಿರುತ್ತದೆ. 'ನಾನು' ಈ ಎಚ್ಚರ ಪ್ರತಿಯೊಂದರ ಭೋಗದಲ್ಲಿಯೂ ಇರುವದರಿಂದ, ಆಯಾ ಭೋಗಗಳಿಂದಾಗುವ ಸುಖದುಃಖಗಳಿಗೂ ನಾವು ಭಾಗಿಗಳಾಗುತ್ತೇವೆ.

ಇಂದ್ರಿಯಗಳ ಮೂಲಕ ಬರುವ ಅನುಭವಗಳು ಸುಖದುಃಖಾತ್ಮಕವಾದವು
ಕಾರಣ ಈ 'ನಾನು' ಎಂಬ ಅಹಂಕಾರವೇ ಈ ಸಂಸಾರದಲ್ಲಿ ನಮ್ಮನ್ನು ಬಂಧಿ
ಡುವ ಮೂಲ ಕಾರಣವೆಂದು ವೇದಾಂತಿಗಳು ಹೇಳುತ್ತಾರೆ. ಈ ಅಹಂಕಾರವೇ
ಮಾಯೆಯೆಂದು ಹೇಳಲಾಗುತ್ತದೆ. ಈ ಹಮ್ಮನ್ನು ಉಳಿದು ಮಾನವನು
ನಿಜಜ್ಞಾನವನ್ನು ಪಡೆದು ಸಾಧನದ ಮೂಲಕ ಷಟ್‌ಸ್ಥಲಗಳ ಮೆಟ್ಟಿಲುಗಳನ್ನು
ಏರಿ ಲಿಂಗದಲ್ಲಿ ಐಕ್ಯನಾಗುತ್ತಾನೆಂಬುದೇ ವೀರಶೈವಸಿದ್ಧಾಂತವೆಂದು ಹೇಳ
ಬಹುದು. ಮಾನವನಲ್ಲಿರುವ ಅಹಂಕಾರವು ಷಟ್‌ಸ್ಥಲಗಳ ಸಾಧನಮಾರ್ಗದಲ್ಲಿ
ಕ್ರಮೇಣ ಕರಗಿ ಶುದ್ಧ ಚಿತ್ ಮಾತ್ರ ಉಳಿದು, ಅರಿವು ಮರೆವುಗಳಿಂದತೀತ
ವಾದ ನಿಜದರಿವು ಮೂಡಿ ಅಂಗವು ಲಿಂಗದಲ್ಲಿ ಸಾಮರಸ್ಯ ಪಡೆಯುತ್ತದೆ. ಕಾರಣ
ಆತ್ಮನ ವಿಕಾಸದ ದಾರಿಯಲ್ಲಿ ಪ್ರಸಾದಿಸ್ಥಲವೂ ಒಂದು. ಪ್ರಸಾದಿಸ್ಥಲವು
ಮಾನವನ ಅಹಂಕಾರವನ್ನು ಅಳಿದು ಸರ್ವಾರ್ಪಣಭಾವವನ್ನು ನೀಡಿ ಮುಕ್ತಿಗೆ
ಅಣಿಗೊಳಿಸುತ್ತವೆ.

ಪ್ರಸಾದಿಯು ನಾಲಗೆ, ಕಣ್ಣು, ಕಿವಿ, ಮೂಗು ಹಾಗು ತ್ವಚೆ ಈ
ಪಂಚೇಂದ್ರಿಯಗಳ ಮೂಲಕ ನೇರವಾಗಿ ರಸ, ರೂಪ, ಶಬ್ದ, ಗಂಧ ಹಾಗು
ಸ್ಪರ್ಶಗಳನ್ನು ಪಡೆಯದೆ, ಆಸ್ವಾದಿಸದೆ, ಆಯಾ ಇಂದ್ರಿಯಗಳಲ್ಲಿ ಮುಖವಾಗಿ
ನೆಲೆಸಿರುವ ಗುರುಲಿಂಗ, ಶಿವಲಿಂಗ, ಪ್ರಸಾದಲಿಂಗ, ಆಚಾರಲಿಂಗ, ಹಾಗು
ಜಂಗಮಲಿಂಗಗಳಿಗೆ ಅರ್ಪಿಸಿ ತರುವಾಯ ಅದನ್ನು ಪ್ರಸಾದವಾಗಿ ಸ್ವೀಕರಿಸು
ತ್ತಾನೆ. ಇದನ್ನೇ 'ಲಿಂಗ ಮುಂತಾಗಿ ತನು ಹಿಂತಾಗಿ' ಭೋಗಿಸುವದೆಂದು
ಹೇಳುತ್ತಾರೆ. ಇದು ಪ್ರಸಾದಿಸ್ಥಲದಲ್ಲಿ ಮೊದಲ ಮೆಟ್ಟಿಲು. ಒಂದೊಂದು
ಸ್ಥಲದಲ್ಲಿಯೂ ಮತ್ತೆ ಆರು ಸ್ಥಲಗಳನ್ನಾಗಿ ಶರಣರು ವಿಭಾಗಿಸಿದ್ದಾರೆ
ಒಬ್ಬೊಬ್ಬ ಭಕ್ತನೂ ಒಂದೊಂದು ಸ್ಥಲದಲ್ಲಿ ನಿಂತು ಕೊನೆಯ ಮೆಟ್ಟಿಲ
ಮುಟ್ಟುತ್ತಾನೆ ನುಬಿಯಣ್ಣನು ಕೂಡ ಪ್ರಸಾದಿಸ್ಥಲದಲ್ಲಿ ನಿಂತು ಅದ
ಕೊನೆಯ ಮೆಟ್ಟಿಲು ಐಕ್ಯಸ್ಥಲವನ್ನು ತಲುಪಿದವನು. ಮಹಾಪ್ರಸಾದಿ
ಬಾಹ್ಯೇಂದ್ರಿಯಗಳು ಸ್ವತಂತ್ರವಾಗಿ ಯಾವ ಕಾರ್ಯವನ್ನೂ ಮಾಡಲಾರ
ಯಾವ ಭೋಗವೂ ಆಯಾ ಇಂದ್ರಿಯಗಳಲ್ಲಿ ನೆಲೆಸಿರುವ ಲಿಂಗಮುಖವಾಗಿಯೆ
ಬರಬೇಕು. ಮೊದಮೊದಲು ಲಿಂಗಮುಖವಾಗಿ ಭೋಗಿಸುವ ಪ್ರಸಾದಿ ಕ್ರಮೇ
ಬಾಹ್ಯೇಂದ್ರಿಯಗಳಲ್ಲಿ ಒಳಮುಖ ಮಾಡುತ್ತಾನೆ. ಈಗ ಇಂದ್ರಿಯಗಳ
ಬಾಹ್ಯ ವಿಷಯಗಳನ್ನು ಭೋಗಿಸುವ ಪ್ರಶ್ನೆಯೇ ಉಳಿಯುವದಿಲ್ಲ. ಅ
ಸರ್ವಾಂಗವೂ ಲಿಂಗರೂಪವಾಗುತ್ತದೆ. ತನುವೇ ಪ್ರಾಣಲಿಂಗವಾಗಿ ತಾ
ಲಿಂಗಮುಖವಾಗಿ ಭೋಗಿಸುವೆನೆಂಬ ಭೇದಜ್ಞಾನ ಇಲ್ಲವಾಗುತ್ತದೆ. ಈ ನ
ಯಲ್ಲಿ ತನಗೆ ಅರ್ಪಿಸಲೂ ಏನಿಲ್ಲ. ತಾನು ಅರ್ಪಿಸುವವನೂ ಅಲ್ಲವೆಂಬ ಅರಿ
ಮೂಡುತ್ತದೆ, ಎಲ್ಲವೂ ಲಿಂಗರೂಪವಾಗಿರುವಾಗ ಅರ್ಪಿಸುವದಾರಿಗೆ? ಏನನ್ನು

ಬ ಪ್ರಕ್ರಿ ಪ್ರಸಾದಿಗೆ ಎದುರಾಗುತ್ತದೆ. ಈ ನೆಲೆಯಲ್ಲಿ ನಿಂತವನೇ ಮಹಾಪ್ರಸಾದಿ. ನಂಬಿಯಣ್ಣನೂ ಈ ನೆಲೆಗೆ ತಲುಪಿ ಮುಕ್ತಿಪಡೆದ ಮಹಾಪುರುಷನು.

ದೇವರಿಗೆ ಅರ್ಪಿಸಿ ಸೇವಿಸುವ ಕೆಲವರಿಗೆ ಇದರಲ್ಲೇನು ಮಹಾವಿಶೇಷವಿದು ಅನಿಸಬಹುದು. ಆದರೆ ಅಂತಹರು ದೇವರ ಹೆಸರಿನಲ್ಲಿ ಎಲ್ಲಿ ಸವಿಯುತ್ತಾರೆ ಎಂಬುದನ್ನು ಲಕ್ಷಿಸಬೇಕು. ವೈಯಕ್ತಿಕವಾಗಿ ದೇವರಿಗೆ ಅರ್ಪಿಸಿದುದು ನಮಗೆ ಸೇವಿಸಲು ಸಿಗಲಾರದೆಂದಾದರೆ ಅರ್ಪಿಸಲೂ ಹಿಂದುಮುಂದೆ ನೋಡುವಷ್ಟು ಲೌಕಿಕಕ್ಕೆ ಅಂಟಿಕೊಂಡವರು ನಾವು. ತೆಂಗಿನಕಾಯಿಯಲ್ಲಿ ಒಂದು ಹೋಳಿಕೆ ಪೂಜಾರಿ ಇಟ್ಟುಕೊಂಡರೆ ಮನದಲ್ಲಿ ಮರುಗುತ್ತೇವೆ. ಒಂದಾಣೆ ಕೊಟ್ಟು ಪೂಜಾರಿಯಿಂದ ಅದನ್ನೂ ಪಡೆದುಕೊಳ್ಳುವ ಭಕ್ತರಿಗೇನೂ ಕಡಿಮೆಯಿಲ್ಲ. ಇಂದು ದೇವರಿಗೆ ಅರ್ಪಿಸುವದು ಒಂದು ಆಡಂಬರವಾಗಿ ಮಾತ್ರ ಉಳಿದಿದೆ. ಇನ್ನು ಸರ್ವೇಂದ್ರಿಯಗಳಿಂದ ಪಡೆವ ಸುಖಗಳನ್ನೂ ನಾವು ದೇವರಿಗೆ ಅರ್ಪಿಸಬಲ್ಲೆವೇ? ಎಂಬುದನ್ನು ವಿಚಾರಿಸಬೇಕು. ಸರ್ವಾರ್ಪಣಬುದ್ಧಿ ಬಹು ಕಠಿಣತಮವಾದುದು. 'ಅನುದಿನ ಬಾಹ್ಯ ಸುಖದುಃಖ ನಿನ್ನದಯ್ಯ' ಎಂದು ದಾಸರಂತೆ ನಿಶ್ಚಿಂತರಾಗಿ ಬದುಕುವ ಜನರೆಷ್ಟು? ಪ್ರತಿಯೊಂದಕ್ಕೂ ನನ್ನತನದ ಚೀಟಿ ಅಂಟಿಸಿ, ರಾಗದ್ವೇಷಗಳ ಕೊಳಚೆಯಲ್ಲಿ ಬೀಳುತ್ತೇವೆ. ನಮ್ಮಂತಹರಿಗೆ ನಂಬಿಯಣ್ಣನಂತಹ ಪ್ರಸಾದಿಯ ಬದುಕಿನ ಅರ್ಥವಾಗುವದು ಬಹಳ ಕಠಿಣ. ಮಾನವನಿಗೆ ಅತೀ ಆತ್ಮೀಯವಾದುದು, ಅಭಿಮಾನಕ್ಕೆ ಕಾರಣವಾದುದು 'ನಾನು' ಎಂಬುದು. ಅದನ್ನುಳಿದರೆ ಎರಡನೆಯದು ಹೆಣ್ಣು, ಸತಿ. ಲೋಕದಲ್ಲಿ ಈ ಸ್ತ್ರೀಗಾಗಿ ನಡೆವ ಕೋಲಾಹಲ, ರಕ್ತಪಾತಕ್ಕೆ ಎಣೆಯಿಲ್ಲ. ಪುರಾಣ ಇತಿಹಾಸಗಳಲ್ಲೂ ಇದಕ್ಕೆ ಬೇಕಾದಷ್ಟು ನಿದರ್ಶನಗಳು ದೊರೆಯುತ್ತವೆ. ಸ್ತ್ರೀಸುಖ ಮಾನವನ ಸುಖಗಳಲ್ಲಿ ಬಹು ವೈಯಕ್ತಿಕವಾದುದು. ಅದು ಸದಾ ತನ್ನದೇ. ಇನ್ನೊಬ್ಬರದಾಗಿದೆ ಎಂಬ ಕಲ್ಪನೆಯೇ ಅಸಹನೀಯವೆನಿಸುವದು. ಇನ್ನು ಇಂತಹ ರತಿಸುಖವನ್ನು ಅದು ತನ್ನದಲ್ಲ, ಪರಮಾತ್ಮನದು ಎಂದು ಅರ್ಪಿಸುವ ಮಹಾಭಕ್ತನ ನಿಲವನ್ನು ನಾವೆಂತು ಅರಿಯಬಲ್ಲೆವು? ನಂಬಿಯಣ್ಣ ಸಂಭೋಗವೂ ಪರಮಾತ್ಮಪೂಜೆಯೆಂದು ಭಾವಿಸಿದ ಮಹಾಭಕ್ತ, ಜ್ಞಾನಿ. ಸಂಭೋಗ ನಮ್ಮ ನಿಮ್ಮಂತೆ ಎರಡು ದೇಹಗಳ ಸಂಗಮವಲ್ಲ ಆತನಿಗೆ. ಛಾಂದೋಗ್ಯ ಉಪನಿಷತ್ತಿನಲ್ಲಿ ಹೇಳುವಂತೆ ಅದೊಂದು ವಾಮದೇವ್ಯಯಜ್ಞ. ದ್ವೈತಮತಸ್ಥಾಪಕ ಶ್ರೀ ಮಧ್ವಾಚಾರ್ಯರು ತಮ್ಮ 'ಸದಾಚಾರಸ್ಮೃತಿ'ಯಲ್ಲಿ ಹೇಳಿದಂತೆ ಅದು ಹರಿಪೂಜನ. ಪುಷ್ಪಂ ಪತ್ರಂ ಫಲಂ ತೋಯಂ ಗಳಿಗೇ ನಮ್ಮ ಅರ್ಪಣೆ ನಿಲ್ಲುತ್ತದೆ. ಅಂದಾಗ ನಂಬಿಯ ಅರ್ಪಣೆಯ ಅರ್ಥ ನಮಗಾಗುವದೆಂತು? ಹರಿಹರ ಕವಿ ತನ್ನ ಕಾವ್ಯದಲ್ಲೆಲ್ಲ ನಂಬಿ ಎಲ್ಲಾ ಸುಖಗಳನ್ನು ಶಿವನಿಗೆ ಅರ್ಪಿಸುವ ಶುಚಿಚಿತ್ತನೆಂದು ವರ್ಣಿಸಿದ್ದಾನೆ.

ಯಾವ ಸುಖವನ್ನೂ ತಟ್ಟನೆ ಶಿವನಿಗೆ ಅರ್ಪಿಸುವ ಪ್ರಜ್ಞೆಯನ್ನು ನಂಬಿಯಲ್ಲಿ ಕಾಣುತ್ತೇವೆ. ಹೀಗೆ ನಂಬಿಯಣ್ಣ ಮಹಾಪ್ರಸಾದಿ, ಅವನಿಗೆ ಎಲ್ಲವೂ ಶಿವಪೂಜೆ, ಶಿವಾರ್ಪಿತ. ಇಂತಹ ಪ್ರಸಾದಿಯ ಶೃಂಗಾರಸಂಭೋಗ ಲೌಕಿಕ ಜನಕ್ಕೆ ಅರ್ಥವಾಗದು. ಅರಿತುಕೊಳ್ಳಬೇಕಾದರೆ ಪ್ರಸಾದಿಯ ನೆಲೆಯನ್ನು ತಿಳಿದವರಾಗಿರಬೇಕು. ಆಗ ನಂಬಿಯ ಮಹೋನ್ನತ ವ್ಯಕ್ತಿತ್ವವನ್ನು ಅಂಶಮಾತ್ರವಾದರೂ ಅರಿಯಬಲ್ಲೆವು. ನಂಬಿಯ ಈ ಅಸಾಧಾರಣ ವ್ಯಕ್ತಿತ್ವವನ್ನು ಹರಿಹರಕವಿ ಬಹು ಮನಂಬುಗುವಂತೆ ಹೃದ್ಯವಾಗಿ ಕಾವ್ಯರೂಪದಲ್ಲಿ ಚಿತ್ರಿಸಿದ್ದಾನೆ. ಲೋಕದಲ್ಲಿ ವಿರಲವಾಗಿ ಕಾಣುವ ಇಂತಹ ಮಹಾವಿಭೂತಿಪುರುಷನ ಬದುಕನ್ನು ಚಿತ್ರಿಸಬೇಕಾದರೆ ಕವಿಯೂ ಅಂತಹ ಬಾಳನ್ನು ಬಾಳಿರಬೇಕು, ಅನ್ಯಾದೃಶ ಅನುಭವ ಪಡೆದವನಾಗಿರಬೇಕು. ಇಲ್ಲವಾದರೆ ಇಂತು ಮನದುಂಬಿ ತನ್ಮಯನಾಗಿ ನಂಬಿಯ ವ್ಯಕ್ತಿತ್ವವನ್ನು ಚಿತ್ರಿಸಲು ಸಾಧ್ಯವಿರಲಿಲ್ಲ.

ಕವಿ ಹರಿಹರನು ಚಿತ್ರಿಸಿದ ನಂಬಿಯ ಮಹತಿಯನ್ನು ರತ್ನಾಕರವರ್ಣಿಯ ಭರತೇಶನಿಗೆ ಹೋಲಿಸಿ ನೋಡಬೇಕು ಭರತೇಶನಿಗೆ ಯೋಗಭೋಗಗಳೆರಡೂ ಲೀಲಾರಂಗಗಳು. ಬೇಕುಬೇಕೆಂದಾಗ ಭೋಗದಿಂದ ಯೋಗಕ್ಕೆ, ಯೋಗದಿಂದ ಭೋಗಕ್ಕೆ ತಿರುಗಬಲ್ಲ ಮಹಾಪುರುಷನಾತ. ಸರ್ವಸುಖಗಳನ್ನೂ ಸವಿಯುತ್ತಿರುವಾಗಲೆ ತಟ್ಟನೆ ನಿರಂಜನಸಿದ್ಧನನ್ನು ನೆನೆದು ಮೈಮರೆವ ಯೋಗಿಯಾತ. ಯೋಗ–ಭೋಗಗಳ ಸಮನ್ವಯಕ್ಕೆ ಭರತೇಶನ ಬಾಳು ಆದರ್ಶ. ಅವನ ಬದುಕಿನಲ್ಲಿ ಭೋಗ-ಯೋಗಗಳೆರಡಕ್ಕೂ ಎಡೆಯಿದೆ. ಆದರೆ ನಂಬಿಯ ಜೀವನ ಇನ್ನೂ ಒಂದು ಹೆಜ್ಜೆ ಮುಂದಿದೆ. ನಂಬಿಗೆ ಭೋಗವೇ ಯೋಗ, ಯೋಗವೇ ಭೋಗ. ಯೋಗ-ಭೋಗಗಳಿವು ನಂಬಿಗೆ ಎರಡಾಗಿಲ್ಲ; ಒಂದಾಗಿವೆ. ನಮ್ಮ ಕಣ್ಣಿಗೆ ಯಾವುದು ಭೋಗವೆಂದು ತೋರುವದೋ ಅದು ಅವನಿಗೆ ಪರಮಾತ್ಮಯೋಗ. ನಾವು ಯಾವುದನ್ನು ಕಾಮಕೇಳಿಯೆಂದು ಹೇಳುತ್ತೇವೋ ಅದು ಅವನಿಗೆ ಪರಮಾತ್ಮಪೂಜೆ. ಕೃಷ್ಣ ಭರತೇಶರಂತೆ ಸಾವಿರ ಸಾವಿರ ಹೆಂಡಿರಲ್ಲಿ ಏಕಕಾಲಕ್ಕೆ ಅನಂತರೂಪಗಳಿಂದ ಭೋಗಿಸುವದಿಲ್ಲ ನಂಬಿ ನಿಜ. ಆದರೆ ಸಂಕಿಲೆ ಪರವೆಯರಿಬ್ಬರಲ್ಲಿಯೇ ಇವನ ಭೋಗವನ್ನು ಸಾಂಕೇತಿಕವಾಗಿ ಕವಿ ಚಿತ್ರಿಸಿ ಕೃತಾರ್ಥನಾಗಿದ್ದಾನೆ. ನಂಬಿಯು ನಿಜವಾಗಿ ವಿಟಪುರುಷನಂತೆ ಚಂಚಲನಾಗಿದ್ದರೆ ಇಬ್ಬರೇಕೆ ಹತ್ತಾರು ಸ್ತ್ರೀಯರಲ್ಲಿ ಆಸಕ್ತನಾಗಿ ಮೆರೆಯಬಹುದಿತ್ತು. ಆ ಸೌಕರ್ಯವೂ ಅವನಿಗಿತ್ತು. ಆದರೆ ಅವನ ಅವತಾರ ಅದಕ್ಕಾಗಿ ಇಲ್ಲ. ಭಕ್ತನ ಕಾಮಕ್ರೀಡೆಯನ್ನೂ ಪೂಜೆಯಾಗಿ ಕೈಕೊಳ್ಳುವನು ಶಿವನು ಎಂಬುದನ್ನು ಲೋಕಕ್ಕೆ ತೋರಬಂದ ದಿವ್ಯವಿಭೂತಿಪುರುಷ ನಂಬಿ— ಕವಿ ಹರಿಹರನಿಗೆ. ಸಕಲ ಸುಖಂಗಳ ಸವಿದು ಬರಲು ಶಿವನೇ ನಂಬಿಯನ್ನು ಭೂಲೋಕಕ್ಕೆ ಕಳುಹಿದ್ದಾನೆ. ನಂಬಿಗೆ ಈ ಲೋಕದಲ್ಲಿ ಸಕಲ ಭೋಗಂಗಳು ಶಿವನ ಆಜ್ಞಾರೂಪವಾಗಿವೆ. 'ಮಾಡಿತೆಲ್ಲಂ, ಪೂಜೆ

ಯಾಗಿ ಕೈಕೊಂಡಪೆಂ' ಎಂಬ ಶಿವನ ಆಶ್ವಾಸನೆಯಿದೆ. 'ನಿನ್ನ ಸುಖವೇ ಸುಖಂ, ನಿನ್ನ ನಲಿವೇ ನಲಿವು, ನಿನ್ನ ಆರ್ತಿಯೇ ಆರ್ತಿ....' ಎಂದು ಸಂತೈಸಿ ನಂಬಿಯನ್ನು ಬುವಿಗೆ ಕಳುಹಿದ್ದಾನೆ ಪರಶಿವನು. ಶಿವನ ಭಕ್ತವಾತ್ಸಲ್ಯಕರುಣೆಗಳ ಅಪಾರತೆಯನ್ನೂ, ಭಕ್ತನ ಬದುಕೇ ಶಿವಪೂಜೆಯೆಂಬುದನ್ನೂ ಸಾರಲು 'ನಂಬಿಯಣ್ಣನ ರಗಳೆ' ಬರೆಯಲ್ಪಟ್ಟಿದೆಯೆಂಬುದನ್ನು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ನಂಬಿಯ ಜೀವನವನ್ನು ನೋಡಬೇಕಲ್ಲದೆ, ಸಾಮಾನ್ಯ ಮಾನವನನ್ನು ಅಳೆಯುವ ಅಳತೆಗೋಲಿಂದ ನಂಬಿಯನ್ನು ಅಳೆದು, ಇದು ಭಕ್ತಿ ಇದು ಪ್ರೇಮ ಇದು ಶೃಂಗಾರ ಎಂದು ಹೇಳಿ ಮಾನವೀಯ ದೋಷಗಳನ್ನೆಲ್ಲ ಅವನಿಗೆ ಆರೋಪಿಸುವದು ತರವಲ್ಲ. ಅವನೆತ್ತರಕ್ಕೆ ನಮಗೆ ಏರಲಾಗದಿದ್ದರೆ ತಪ್ಪು ನಮ್ಮದು. ಅಲ್ಲಿ ಅಪಾರ್ಥ ಕಲ್ಪಿಸುವ ಸಾಹಸ ಮಾಡಬಾರದು. ಜನಸಾಮಾನ್ಯರು ಇಂತು ಕಾವ್ಯಗಳನ್ನು ಅಪಾರ್ಥ ಮಾಡಿಕೊಳ್ಳಬಾರದೆಂದೇ ಚಾಮರಸನಂತಹ ಕವಿ, 'ಸತ್ಯಶರಣರು ತಿಳಿವುದೀ ಪ್ರಭುಲಿಂಗಲೀಲೆಯನು' ಎಂದು ಸಾರಿಹೇಳಬೇಕಾಯಿತು. ಕವಿ ಹರಿಹರನು ಕೂಡ ಒಂದು ಸಂದರ್ಭದಲ್ಲಿ, **'ಸರ್ವಸುಖದೊಳು ಶಿವಭಕ್ತಿಸುಖಮುಂ ಸವಿವುತಿರ್ಪ ಸದ್ಭಕ್ತರು ಅವಧರಿಪುದು'** ಎಂದು ಸ್ಪಷ್ಟವಾಗಿ ಎಚ್ಚರಿಕೆ ಕೊಟ್ಟಿದ್ದಾನೆ.

ಅವತಾರಿಪುರುಷ ನಂಬಿಯ ಜೀವನವು ಅತಿಮಾನವತೆಯಿಂದ ಕೂಡಿದರೆ ಕಾವ್ಯವು ಸಾಮಾನ್ಯ ಜನರಿಗೆ ರುಚಿಸುವದೆಂತು? ಎಂಬ ಪ್ರಶ್ನೆ ಬರುವದು ಸ್ವಾಭಾವಿಕ. ಪ್ರತಿಭಾವಂತ ಕವಿ ಆದರ್ಶವನ್ನೂ ಲೌಕಿಕ ವರ್ಣಗಳಲ್ಲಿ ಚಿತ್ರಿಸಿ ಸೊಬಗುವಡೆವಂತೆ, ರಸಾಸ್ವಾದನೆಗೆ ಇಂಬಾಗುವಂತೆ ಮಾಡುತ್ತಾನೆ. ಆದರಿಂದಾಗಿ ನಂಬಿಯಂತಹ ಪ್ರಸಾದಿಯ ಬದುಕೂ ಮಾನವೀಯತೆಯ ಸಂಸ್ಪರ್ಶಹೊಂದಿ ವಿರಾಜಿಸುತ್ತದೆ. ಇಂತಹ ಎಡೆಯಲ್ಲಿ ಲೌಕಿಕ ಹಾಗು ಅಲೌಕಿಕಗಳಲ್ಲಿ ವಿರೋಧವಿದ್ದಂತೆ ಕಂಡುಬಂದರೆ, ಅದನ್ನು ಹೀಗಳೆಯದೆ ಸಮನ್ವಯಗೊಳಿಸಲು ಯತ್ನಿಸಬೇಕು. ಅದರ ಹಿಂದೆ ಪ್ರತಿಪಾದಿತವಾದ ತತ್ತ್ವವನ್ನು ಗುರುತಿಸಬೇಕು, ಇದು ಸರಿಯಾದ ವಿಮರ್ಶೆ. ಮಹಾಕವಿ ಇಂತಹ ವಿರೋಧಾಭಾಸವುಳ್ಳ ಪಾತ್ರಗಳನ್ನು ಸಾಂಕೇತಿಕವಾಗಿ ಬಳಸಿಕೊಂಡು ಮಹಾಕೃತಿಗಳನ್ನು ರಚಿಸುತ್ತಾನೆ. ಅದು ಸಾಮಾನ್ಯ ಸಹೃದಯರಿಗೆ ಒಂದು ವಿಸ್ಮಯಕಾರಕ ಕಥೆ, ರಸಿಕರಿಗೆ ರಸಾಸ್ವಾದನೆಯ ತಾಣ, ತತ್ತ್ವಜ್ಞಾನಿಗಳಿಗೆ ದರ್ಶನ. ಹೀಗೆ ಮಹಾಕವಿ ಒಂದು ಕಾವ್ಯದಿಂದ ಸಕಲರನ್ನೂ ರಂಜಿಸುತ್ತಾನೆ. ಕುಮಾರವ್ಯಾಸನು ಹೇಳಿದ 'ಅರಸುಗಳಿಗಿದು ವೀರ ದ್ವಿಜರಿಗೆ ಪರಮವೇದದ ಸಾರ....' ಎಂಬ ಮಾತನ್ನು ಇಲ್ಲಿ ನೆನೆದುಕೊಳ್ಳಬೇಕು.

ಹರಿಹರದೇವನು ಚಿತ್ರಿಸಿದ ನಂಬಿಯಣ್ಣನ ಪಾತ್ರವನ್ನು ಮೇಲಿನ ಮಾತುಗಳ ಹಿನ್ನೆಲೆಯಲ್ಲಿ ನೋಡಬೇಕು. 'ಪೋಗು ಮರ್ತ್ಯದೊಳು ಪುಟ್ಟು, ಅಂಜ-

ಲೇಕೆಲೆ ಮಗನೆ, ರಾಗದಿಂ ನಿನ್ನೊಡನೆ ಬರ್ಪೆ ನಾನೆಲೆ ಮಗನೆ' ಎಂದು ಹೇಳಿದಂತೆ, ಶಿವನು ಸುಕಲ್ಪಕ್ಕೆ ವಿರುದ್ಧವಾದ ಕನ್ಯೆಯಲ್ಲಿ ಸಂಬಂಧವುಂಟಾಗುತ್ತಿರುವ ಪ್ರಸಂಗದಲ್ಲಿ ವೃದ್ಧಮಾಹೇಶ್ವರನ ವೇಷದಿಂದ ಬಂದು ತಪ್ಪಿಸುತ್ತಾನೆ ಆ ಮದುವೆಯನ್ನು. ಆ ರೀತಿ ವೇಷಧರಿಸಿ ಬರುವ ಮುನ್ನ ಶಿವನು ಪಾರ್ವತಿಗೆ ಹೇಳಿದ ಮಾತುಗಳನ್ನು ಲಕ್ಷಿಸಬೇಕು. 'ಚೋಳ ದೇಶದ ತಿರುವಾರೂರೊಳಂ ತಿರುವತ್ತಿಯೂರೊಳಂ ಪರವೆ ಸಂಕಿಲೆಗಳೆಂಬ ನಾಮದಿಂ ಜನಿಯಿಸಿದರ್ಪರ್. **ಅವಂದಿರಂ ಆತನೊಳ್ ನೆರಪಿ ಸಕಲಸುಖವಂ ಪೂಜೆಯಾಗಿ ಕೈಕೊಂಡು ಬರ್ಪೆಂ'** ಎಂದು ನುಡಿಯುತ್ತಾನೆ. ಭಕ್ತನಿಂದ ಸಕಲಸುಖಗಳನ್ನು ಪೂಜೆಯಾಗಿ ಕೈಕೊಳ್ಳುವ ಆತ್ಯಾತುರ ಶಿವನಿಗೆ ಉಂಟು ಎಂಬುದನ್ನು ಕವಿ ಕಾಣಿಸಿದ ಬಗೆಯನ್ನು ಮರೆಯಬಾರದು.

ಭೂಮಿಗಿಳಿದು, ಜಡೆಯ ನಾಯನಾರ್ ಹಾಗು ಯಸ್ಯಜ್ಞಾನದೇವಿಯರ ಉದರದಲ್ಲಿ ಜನಿಸಿ ನರಸಿಂಗ ಮೊನೆಯರ ಲಾಲನೆ ಪಾಲನೆಯಲ್ಲಿ ಬೆಳೆದು ದೊಡ್ಡವನಾದ ನಂಬಿ ಹರೆಯಕ್ಕೆ ತಕ್ಕ ಆಸೆಹೊಂದಿರಲು, ತುಂಬುರನು ಕನ್ಯೆಯನ್ನು ನೋಡಿಬಂದು ಮದುವೆ ಗೊತ್ತುಮಾಡುತ್ತಾನೆ. ಇನ್ನೇನು ಮದು-ವೆಯ ಮುಹೂರ್ತ ಸಮೀಪಿಸಿದೆಯೆಂದಾಗ ಶಿವನು ವೃದ್ಧಮಾಹೇಶ್ವರನ ರೂಪದಲ್ಲಿ ಬಂದು ಮದುವೆ ಮುರಿಯುತ್ತಾನೆ. ನಂಬಿಯನ್ನು ಎಚ್ಚರಿಸಿ ಅವ-ತಾರಕಾರ್ಯದ ನೆನಹು ಕೊಡುತ್ತಾನೆ. ಕೂಡಲೆ ನಂಬಿಗೆ ವಿಸ್ಮರಣೆಯಾಗಿದ್ದ ಹಿಂದಿನ ನೆನಪು ಮರುಕಳಿಸುತ್ತದೆ. ಮನವು ತಲ್ಲಣಗೊಳ್ಳುತ್ತದೆ. ದೇವನಲ್ಲಿ ಕ್ಷಮೆ ಯಾಚಿಸುತ್ತಾನೆ. ಅಲ್ಲಿಂದ ತಿರುನಾವಲೂರಿಗೆ ಬಂದು ತಂದೆತಾಯಿಗಳಿಗೆ, ನರಸಿಂಗ ಮೊನೆಯರಿಗೆ 'ಇಲ್ಲಿಂದ ಎನಗೆ ಪಾರ್ವತಿಯೆ ತಾಯಿ, ವಿರೂಪಾಕ್ಷನೆ ತಂದೆ. **ಈ ಲೋಕಕ್ಕೆ ಪರವಶನಲ್ಲಂ, ಹರವಶಂ,** ಶಿವನೆಲ್ಲಿರಿಸಿದಂ ಅಲ್ಲಿರ-ವೇಳ್ಕುಂ' ಎಂದೆನ್ನುತ್ತಾನೆ. ಇನ್ನುಮುಂದಿನ ಅವನ ಬದುಕೆಲ್ಲ ಶಿವಾಧೀನ. ಶಿವ ಕುಣಿಸಿದಂತೆ ಕುಣಿವ ಸೂತ್ರದ ಗೊಂಬೆ ಮಾತ್ರ ತಾನು ಎಂಬ ಭಾವ ಅವನಲ್ಲಿ ಮೂಡಿನಿಂತಿದೆ. ಇಂತು ಸರ್ವಸ್ವವನ್ನು ಶಿವನಿಗೆ ಅರ್ಪಿಸಿದವಗೆ ಪಾಪಲೇಪವೆಲ್ಲಿಯದು? ಹೇರನೊಪ್ಪಿಸಿದವಂಗೆ ಎಲ್ಲಿಯದು ಸುಂಕ? ಕಾರಣ, ನಂಬಿಯ ಮುಂದಿನ ಬದುಕೆಲ್ಲ 'ಪದ್ಮಪತ್ರಮಿವಾಂಭಸಿ'.

ತಿರುವಾರೂರಿಗೆ ಬಂದ ನಂಬಿ ಪರವೆನಾಚಿಯರನ್ನು ಕಂಡು ಪ್ರೇಮ-ಪರವಶನಾಗಿದ್ದಾನೆ. ಪರವೆಯ ಸಖಿ ಬಂದು ಒಡತಿಯ ಆಸೆ ತಿಳುಹುತ್ತಾಳೆ. ನಂತರ ನಂಬಿಯು ಆರೂರ ಅರಸನು ಕಳುಹಿದ 'ಶಿವಪ್ರಸಾದಾಮೃತಮುಂ ರಸಮೊಸರ್ವ ಮುಪ್ಪಳಮುಂ ಚಿಲುಪಾಲ.......ಸವಿಗಳಂ ಒಂದುಗೂಡಿ ಮನಕ್ಕೆ ಇನಿದಾಗೆ, ಕಯ್ಗೆ ನಯವಾಗೆ, ನಾಸಿಕಕ್ಕೆ ಸೊಗಸಾಗೆ, ನಾಲಗೆಗೆ ರುಚಿಕರವಾಗೆ

ಶಿವಾರ್ಪಿತದೊಡನೆ' ಕೈಕೊಳ್ಳುತ್ತಾನೆ. ತರುವಾಯ ಪರವೆಯಲ್ಲಿಗೆ ತೆರಳಿ, ಅವಳೊಡನೆ ಹಂಸತೂಲಿಕಾತಲ್ಪದಲ್ಲಿ ಸುಖಿಸುತ್ತಿರುವಾಗ, ಗಗನದೊಳು ನಿಂದು ಶಿವನು 'ನೋಡು ನೋಡು ಪಾರ್ವತಿ, ನಿನ್ನ ಪರವೆಯ ರೂಪಂ ಎನ್ನ ನಂಬಿಯಣ್ಣನ ವಿಳಾಸಮುಂ. **ಇವರೀರ್ವರ ಸುಖದೋಜೆಯುಂ ಈ ಜಗತ್ತ್ರಯಂ ಮೆಚ್ಚೆ ಪೂಜೆಯಾಗಿ ಕೈಕೊಂಡಪೆಂ**' ಎಂದು ಹೇಳುತ್ತಾನೆ. ಇಂತಹ ಭಕ್ತರೀರ್ವರ ಸಂಗಸುಖವನ್ನು ಮಾನವೀಯ ಮೌಲ್ಯಗಳಿಂದ ಅಳೆಯುವದು ಉಚಿತವೇ ಎಂಬುದನ್ನು ಪರ್ಯಾಲೋಚಿಸಬೇಕು 'ಸುರತಸುಖದ ಸರೋನಿಧಿಯೊಳು ತೇಂಕಾಡುವ ದಂಪತಿ ತೆರೆಗಳಂತೆ ಇರುಳ್ ಪಗಲಂ ಅರಿಯದೆ ಪಲ ಕೆಲವು ದಿನಂಗಳು ನಿಮಿಷಂಗಳಾಗಿ' ಅವರಿಗೆ ತೋರಿದವಂತೆ. ಆ '**ಕಾಮರತಿ ಕ್ರೀಡಾಕಾರ್ಯಂ ಶಿವಾರ್ಪಿತಕಾರಣ**'ವಾಗುತ್ತಿತ್ತೆಂದು ಕವಿ ಎತ್ತಿ ಹೇಳುತ್ತಾನೆ. ಪಡಿಹೊನ್ನಿಗಾಗಿ ಊರೂರು ತಿರುಗಿ ಮರಳಿ ಬರುತ್ತಿರಲು, ವಿರಹದುರಿಯಲ್ಲಿ ಬೆಂದು ಪರಿತಪಿಸುವ ಪರವೆ ನಂಬಿಯಣ್ಣನನ್ನು ಕಂಡು 'ನಲಿನಲಿದು ಮಲೆತು ಬಿಗಿಯಪ್ಪಿ....ಹಸಿದ ಹಂಸೆಗೆ ಪಾಲ್ಗಡಲು ದೊರಕಿದಂದದಿಂ.... ಇರ್ವರುಂ ಸಮಸುಖಸರೋನಿಧಿಯೊಳೊಪ್ಪಿರಲು **ಶರ್ವನಂ ಸುಖದ ಸವಿ ಹತ್ತೆ ಸಾರಿ**'ತಂತೆ. 'ಗಿಳಿಗಳಂ ನುಡಿಸುತುಂ, ಹಂಸೆಯಂ ನಡಸುತುಂ, ಜಳಜದೊಳು ಸಿಕ್ಕಿ ಮೊರೆವಳಿಗಳಂ ಬಿಡಿಸುತುಂ, ಪಿಕದ ದನಿಗೇಳುತ್ತೆ, ನವಿಲ್ಗಳಂ ಕುಣಿಯಿಸುತೆ **ಸಕಳ ಸುಖನುಂ ಶಿವಂಗೊಡನೆ ಅರ್ಪಿಸುತ**' ಒಪ್ಪಿದನಂತೆ ನಂಬಿಯಣ್ಣ.

ಪಡಿಹೊನ್ನಿಗಾಗಿ ಊರೂರು ಅಲೆಯುತ್ತಿರಲು 'ಪರವೆಯರಗಲ್ಕೆ ಅಭ್ಯಾಸ'ವಾಯಿತಂತೆ ನಂಬಿಗೆ. ಕವಿ ಹರಿಹರನ ವಿಮರ್ಶಾತ್ಮಕ ಪ್ರಜ್ಞೆಯನ್ನು ಇಲ್ಲಿ ಕಾಣಬೇಕು. ಮುಂದೆ ಸಂಕಿಲೆಯರಲ್ಲಿ ನೆಲೆಯೂರಲಿರುವ ನಂಬಿಯ ಮನವು ಇದೀಗಲೆ ಪರವೆಯರ ಅಗಲ್ಕೆಯ ಅಭ್ಯಾಸ ಪಡೆಯಿತೆಂದು ಹೇಳುವಲ್ಲಿ ಕವಿಯ ಪ್ರತಿಭೆಯನ್ನು ಗುರುತಿಸಬೇಕು ಆದರೂ ಪರವೆಯರ ನೆನಪು ಆಗೀಗ ಬಂದು ಮನವ ಅಳ್ಕಿರಿಯೆ ವಿರಹವಿಹ್ವಲನಾಗುತ್ತಿದ್ದನಂತೆ. ಇಲ್ಲಿ ನಂಬಿಯಲ್ಲಿ ಮಾನವೀಯ ಸ್ವಭಾವದ ಸ್ವರ್ಣಸಂಸ್ಪರ್ಶವನ್ನು ಎಂತು ಸುಂದರವಾಗಿ ಮಾಡಿದ್ದಾನೆಂಬುದನ್ನು ಕಾಣಬೇಕು. ತಿರುವತ್ತಿಯೂರಿಗೆ ಬಂದ ನಂಬಿ ಶಿವಾಲಯದಲ್ಲಿ ಪೂಜೆಗೆಯ್ಯುತ್ತಿರುವ ಸಂಕಿಲೆಯನ್ನು ಕಾಣುತ್ತಲೇ 'ಮನಂಬಿರ್ದು ನೆನಹುಡುಗಿ ನಡೆಗೆಟ್ಟು ಕಂಪಿಸಿ ನಸುಬೆಮರ್ತ'ನಂತೆ. ಕವಿಯ ಇಂತಹ ಮನೋಹರವಾದ ಶಬ್ದಚಿತ್ರಗಳ ಸೊಗಸನ್ನು ಕಾಣಬೇಕಲ್ಲದೆ, ನಂಬಿಯಲ್ಲಿ ಸಾಮಾನ್ಯನ ಕಾಮೋದ್ರೇಕವನ್ನು ಕಾಣಲೆಳಸಬಾರದು. ಅತ್ತ ಸಖಿಯರು ಸಂಕಿಲೆಯನ್ನು ಎತ್ತಿ ಕರೆದೊಯ್ಯಲು ಇತ್ತ ನಂಬಿ ಶಿವನನ್ನು ಕಾಡುತ್ತಾನೆ ಅವಳಿಗಾಗಿ. ನಂಬಿಯನ್ನು ಸಂಕಿಲೆಯೊಂದಿಗೆ ನೆರಪುರದಲ್ಲಿ ಶಿವನು ಹೂಡಿದ ಆಟವನ್ನು ಬಹು

ವಿನೋದಪೂರ್ಣವಾಗಿ ಸ್ವಾರಸ್ಯವಾಗಿ ವರ್ಣಿಸಿ ಕಾವ್ಯಕ್ಕೆ ಕಳೆಗಟ್ಟಿದ್ದಾನೆ ಕವಿ. ಸಂಕಿಲೆಯ ತಾಯಿಯೆದುರು ಶಿವ ಹೇಳುವ ಮಾತುಗಳನ್ನು ಕೇಳಿ. 'ಈಗಳ್ ಮರ್ತ್ಯದೊಳ್ ಓರ್ವ ಪೊಸಮಗನಂ ಪಡೆದೆವು. ಅವನ ರೂಪಂ ಎಮ್ಮಿಂದಿಮ್ಮಡಿ, ಅವನ ಸೊಬಗು ಎಮ್ಮಿಂ ನೂರ್ಮಡಿ **ಆತನಂ ಸಂಕಿಲೆಯೊಳ್ ನೆರಪುವದಕ್ಕೆ ನಿಮ್ಮಲ್ಲಿಗೆ ಬಂದೆವು**' ಎಂದು ಸ್ಪಷ್ಟವಾಗಿ ಸಾರುತ್ತಾನೆ. ಒಂದು ವೇಳೆ ನಂಬಿ ಚಂಚಲಮನದ ವಿಟಪುರುಷನಂತೆ ಕಂಡ ಹೆಣ್ಣುಗಳನ್ನೆಲ್ಲ ಬಯಸುವ ಭಂಡನಾಗಿದ್ದರೆ ಶಿವನು ಇಂತು ಕುಂಟಣಿಯಾಗಿ ತಿರುಗಬಹುದಿತ್ತೇ ಎಂಬುದನ್ನು ವಿಚಾರಿಸಬೇಕು. ಇಷ್ಟು ಲೌಕಿಕವೂ ಕವಿ ಹರಿಹರನಿಗೆ ಗೊತ್ತಿರಲಿಲ್ಲವೆಂದು ಕಲ್ಪಿಸಬೇಕೆ? ನಂಬಿಯ ಬಳಿಗೆ ಬಂದು ಶಿವನು, **'ಇನ್ನು ಪೋಪೆವೆಲೆ ಮಗನೆ, ಹಸನನಾಯ್ತು ನಿನ್ನ ಹಜೆ'** ಎನ್ನುತ್ತಾನೆ. ನಂಬಿಯು ಸಂಕಿಲೆಯೊಂದಿಗೆ 'ಅತ್ಯನುಭವಸುಖದಿಂ' ಮತ್ತೆ ಮತ್ತೆ ಮೂರ್ಛಿಸೆ ಕರುಣದಿಂ ಶಿವನು **'ಎಚ್ಚರಿಸಿ ಅರ್ಚನೆಗೊಳ್ಳು'**ತ್ತಿದ್ದನಂತೆ. ಹಗಲಿರುಳು 'ಹಿಂದುಮುಂದರಿಯದೆ ಕೆಲಬಲನರಿಯದೆ ಮನವರಿಯದೆ ಮಯ್ಯರಿಯದೆ ಬುದ್ಧಿಯರಿಯದೆ ದ್ವೈತಾದ್ವೈತಸುಖಿಗಳಾಗಿ ಸಂಕಿಲಿಯುಲ್ಲದುಳಿದುದೆಲ್ಲಂ ಗಂಡು, ನಂಬಿಯಣ್ಣನಲ್ಲದುಳಿದುದೆಲ್ಲಂ ಹೆಣ್ಣಾಗಿ ತೋಱೆ' ಮಾಸಂಗಳ್ ನಿಮಿಷಂಗಳಾದುವಂತೆ. ಮೂರು ವರುಷ ಇಂತು ಕಳೆಯಲು 'ಕಟ್ಟಕ್ಕರಮಗಂ ಇಂತು ಕೆಟ್ಟು ಪೋದಪನೆಂದು **ಕೊಟ್ಟ ನಂಬುಗೆಯಂ ನೆನೆದು'** ಕಾಮಾರಿ ಕರುಣದಿಂ ಮಾರುತನನ್ನು ಕರೆದು ಪರವೆಯರ ನರುಸುಯ್ಯ ಸವಿಗಂಪನ್ನು, ತನ್ನ ಪ್ರಸಾದದ ಪರಿಮಳವನ್ನು ಕೊಂಡು ನಂಬಿಯೆಡೆ ಕಳುಹುತ್ತಾನೆ. ಆ ಪರಿಮಳವು ನಾಸಿಕದ ಬಳಿ ಸಾರಲು ಸೌಂದರನೆರ್ದೆ ಧಿಗಿಲೆಂದು, ಮನದ ಬೆಸುಗೆ ಬಿಟ್ಟು, ಚಿತ್ತವೆತ್ತಿಕ್ಕಿ, ಭೋಂಕನೆದ್ದು ಮರುಳಂತೆ ಮುನಿದಂತೆ ಕಾಮತಾಪದಿಂ ಕಣ್ಣಾಣದೆ ಉರವಣಿಸಿ ನಡೆತರುತ್ತಾನೆ. ಶಿವನಾಜ್ಞೆಯ ಸೀಮೆಯನ್ನು ಮೀರಿದಾಗ, ಸಂಕಿಲೆಯ ನೋಡಿದ ಕಣ್ಗಳು ಪರವೆಯರಂ ನೋಡಲಾಗದೆಂಬಂತೆ ಶಿವನಂ ಅಂತರ್ಮುಖದಿಂ ನೋಡಲೊಳಪೊಕ್ಕವೆಂಬಂತೆ ಕಣ್ ಮಾಯವಾದವಂತೆ. ಕಣ್ಣಿಗಾಗಿ ಶಿವನನ್ನು ಕಾಡುತ್ತ ಹೇಳುವ ನಂಬಿಯ ಮಾತುಗಳು ತುಂಬ ಅರ್ಥಪೂರ್ಣವಾಗಿವೆ. 'ಕೂಸಂ ಚಿವುಂಟುವೈ, ತೊಟ್ಟಿಲಂ ತೂಗುವೈ. **ನೋಡುವಡೆ ತಪ್ಪನಾ ನಿನ್ನ ಮೇಲಿಡುವೆನ್ನೆ, ಪ್ರೇರಕಂ ನೀನೆಂಡೊಡೆ ಎನ್ನ ಕಾರಣವುಂಟೆ?** ಎನ್ನುತ್ತಾನೆ.

ಪರವೆಯರ ಬಳಿ ಬಂದು ಭಂಗಗೊಂಡ ನಂಬಿಯು ಮತ್ತೆ ಶಿವನನ್ನು ಪರಿಪರಿಯಾಗಿ ಅಂಗಲಾಚುತ್ತಾನೆ. ಆಗ ಶಿವನು **'ನಂಬಿ ನೀಂ ಕಾರಣ ಗಿರಿಜೆಯನಗಲ್ದು, ಅಭಿಮಾನಮುಂ ನೋಡದೆ, ನುಡಿಯ ಕರ್ಕಶಮುಂ ಸೈರಿಸಿ, ವೇಶ್ಯಾಗೃಹನೆನ್ನದೆ ನಡೆದು ಪೋಗಿ ಪರವೆಯರಂ ಬೇಡಿಕೊಂಡು ಬಂದೆವು'** ಎಂದು ಹೇಳುವಲ್ಲಿಯ ಒಂದೊಂದು ಮಾತೂ ಧ್ವನಿಪೂರ್ಣವಾಗಿವೆ. ಭಕ್ತನಿಗಾಗಿ

ಶಿವನು ಪಟ್ಟ ಪಾಡನ್ನು ಇದಕ್ಕೂ ಇನ್ನಾವ ರೀತಿ ಸಮರ್ಥವಾಗಿ ಕವಿ ಹೇಳಲು ಸಾಧ್ಯ! ಅಂತೆಯೆ ಮತ್ತೆ ಪರವೆಯೊಡನೆ ನಂಬಿ ಸುಖದಿಂದಿರಲು **'ಕಾಮಸುಖಂ ಕಾಮಾರಿಗೇಱುತ್ತೆ'** ಇತ್ತಂತೆ. ಹೀಗಿರಲು ಅರಸ ಚೇರಮನು ಭಕ್ತನಂಬಿಯನ್ನು ಕಾಣಲು ಬಂದಿದ್ದಾನೆ. ನಂಬಿಯನ್ನು ಕಾಣುತ್ತಲೆ ನಮ್ಮಂತೆ ಮನದಲ್ಲಿ ಕಳವಳಿಸಿದ್ದಾನೆ, **'ಈ ನಿಲವೆ ಹರನನೊಲಿಸುವ ರೂಪು? ಶಿವಶಿವನೆ, ಪುರೆದ ಅರಿಸಿನದ ಕಂಪು ನಖರೇಖೆ ನಗೆನೋಗಂ. ಹರಪೂಜೆಯೇಕೆ ಇದೇಕೆ ಅಕ್ಕಟಾ'** ಎಂದು ಉದಾಸೀನಭಾವದಿಂದ ಅಲ್ಲಿಯೇ ತೂಕಡಿಸುತ್ತ ಕುಳಿತಾಗ ಶಿವನು ಮತ್ತೆ ಕನಸಿನಲ್ಲಿ ಕಾಣಿಸಿಕೊಂಡು, **'ನಂಬಿಯೆಂತಿರ್ದನಂತದು ಪೂಜೆ ಕೇಳೆನಗೆ, ನಂಬಿ ನೀನಾತನ ಪದಕ್ಕೆರಗು. ಸುಖ ನಿನಗೆ'** ಎಂದು ಹೇಳುತ್ತಾನೆ. ಚೇರಮ ನಡೆತಂದು ಕಾಣ್ಕೆಯಿತ್ತು ಕೈಮುಗಿದು ನಿಂತಾಗ ಯಾರೆಂದು ವಿಚಾರಿಸಿ ನಂಬಿ ಇರು ಇರೆಂದು ಹೇಳಿ ಗದುಗಿನಾಟದಲ್ಲಿ ಮಗ್ನನಾದನು. ತಾನೂ ಆಡಲೆಂದು ಚೇರಮ ಗದುಗಂ ಕೊಂಡು ಇಡಲು ತಾಗದೆ ಹೋಯಿತು. ಆಗ ಚೇರಮ 'ಏನಯ್ಯ ಶಿವಭಕ್ತರಪ್ಪೆವೊ ಅಲ್ಲವೊ ಏನು' ಎಂದು ಕೇಳಲು ನಂಬಿಯು,' **'ನಿಂದ ಗದುಗಂ ನೋಡ ಲಿಂಗವೆಂದೇ ನೆನೆದು ಬಂದ ಗದುಗಂ ಚೆಂಗಣೆಗಿಲಾಗಿಯೇ ನೆನೆದು ಇಡುವದು'** ಎಂದನಂತೆ. ಇಲ್ಲಿ ನಂಬಿಯು ಪರಮಾತ್ಮಾನುಸಂಧಾನದ ಬಗೆಯನ್ನು ಕಾಣಬೇಕು. ಅಂತೆ ಇಡಲು ತಟಲನೆ ತಾಗಿತಂತೆ. ಆಗ ನಂಬಿಯ ಮಹಿಮೆಯು ಅರಿವಾಯಿತು ಚೇರಮನಿಗೆ. ಗಡಗಡನೆ ನಡುಗಿ ಪದತಳಕ್ಕೆರಗಿ **'ದೇವ ನೀಂ ಮಾಳ್ವುದಂ ಪೂಜೆಯೆಂದರಿಯೆನ್ನೈ ದೇವ. ಹೊರವೇಷಮಂ ಕಂಡು ಮರುಳಾದೆನ್ನೈ. ಸೈರಿಪುದು ದೇವ ಎನ್ನ ಅಪರಾಧವೊಂದುಂ'** ಎಂದು ಶರಣುಹೋದನಂತೆ. ಈ ಒಂದು ಪ್ರಸಂಗದಿಂದಲಾದರೂ ನಾವು ನಂಬಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕೆಂದು ಕವಿ ಇಚ್ಛಿಸಿದಂತೆ ಕಾಣುತ್ತದೆ. ಮಹಾತ್ಮರನ್ನು ಮೇಲುನೋಟದಿಂದ ಅಳೆಯುವದು ತಪ್ಪೆಂಬುದನ್ನು ಮತ್ತೆ ಬೇರೆ ಹೇಳಬೇಕಾಗಿಲ್ಲ ಉಳಿದ ಕಾವ್ಯಗಳನ್ನು ಅಳೆದಂತೆ ನಂಬಿಯಣ್ಣನ ರಗಳೆಯನ್ನು ವಿಮರ್ಶಿಸುವದೂ ಚೇರಮನು ಅರಿಸಿನದ ಕಂಪುನಖರೇಖೆಯನ್ನು ಕಂಡು ಕನಲಿದುದೂ ಒಂದೇ ಎಂದು ಹೇಳದೆ ವಿಧಿಯಿಲ್ಲ. ಚೇರಮನನ್ನು ಕರೆತಂದು ಪರವೆಯರಲ್ಲಿ ಆತಿಥ್ಯನೀಡಿ ಬೀಳ್ಕೊಂಡ ನಂಬಿಯು ತಿರುನಾಳಪುರಕೆ ಬಿಜಯಂಗೈದನು. ಅವನ ವಿರಹವನ್ನು ತಾಳಲಾರದೆ 'ತೀರಿತಿನ್ನಿಲ್ಲಿಯ ಇರವು' ಎಂಬಂತೆ ಪರವೆ ಕೈಲಾಸಕ್ಕೆ ನಡೆದಳು. ಇತ್ತ ನಂಬಿ ದೇವಾಲಯವನ್ನು ಹೊಕ್ಕು ಹರನೆದುರು ನಿಂದು 'ದೇವ ನಿರ್ವಿಷಯಿಯಾನಾದೆ ಅವಧರಿಸು' ಎಂದನಂತೆ. ಅವನ ಅಂತಃಕರಣ ಅಂತು ಸರಿಯಾಗಿ ಆಡಿಸಿದೆ ಮಾತನ್ನು. ಇಲ್ಲಿಗೆ ಅವನ ಕಾಮಸುಖದ ಪೂಜೆ ಮುಕ್ತಾಯಗೊಂಡಿತು. ಆರೂರಿಂದ ಬಂದ ಓರ್ವನು ಪರವೆಯರ

ಮರಣದ ವಾರ್ತೆಯನ್ನು ಆರುಹಿದಾಗ ಕ್ಷಣಕಾಲ 'ಶೋಕಾಗ್ನಿ ಹೊತ್ತಿ ಹೊಗೆ ದಂತಾಗಿ ಬರೆದಂತೆ' ಇರ್ದನಂತೆ. ಬೇಗನೆ ತಿಳಿವುಗೊಂಡು, **'ಅಂತಕಂ ಮಾಡಲಾರಂ. ಹರನ ಕಾರ್ಯವಿದು. ಕಂತುಹರನೆಂಬುದಂ ತೋರುವ ವಿರಾಗವಿದು'** ಎಂದೆನ್ನುತ್ತಾನೆ. ಭಕ್ತರನ್ನು ಯಮನು ಮುಟ್ಟಲಾರನೆಂಬ ನಂಬಿಯ ಆತ್ಮ-ವಿಶ್ವಾಸವನ್ನು ಇಲ್ಲಿ ನೋಡಬೇಕು. ಪರವೆಯ ಮರಣವೂ ಕಾಮಹರನ ಕಾರ್ಯವಾಗಿ ತೋರುತ್ತದೆ. ಇಲ್ಲಿ ಕವಿಯು ಬಳಸಿದ 'ಕಂತುಹರ' ಪದದ ಔಚಿತ್ಯವನ್ನು ಅರಿಯಬೇಕು. ಇದು, ಕೈಲಾಸಕ್ಕೆ ಹೊರಡುವ ಮುನ್ಸೂಚನೆಯಾಗಿ ನಂಬಿಗೆ ತೋರಿರಬೇಕು.

ಮುಂದೆ ಮಹಾಟವಿಯಲ್ಲಿ ಹೋಗುವಾಗ ಕಂಡ ಅದ್ಭುತ ಕ್ರೂರಮೃಗಗಳನ್ನು ಕಂಡು, 'ಅಲ್ಲಲ್ಲಿ ಪುಟ್ಟಿದ ವೀರಾದ್ಭುತರಸಂಗಳಿಂದ ಪುಟ್ಟಿದ ಸುಖಂಗಳಂ ಶಿವಂಗರ್ಪಿಸುತೆ ನಡೆದನು. ತರುವಾಯ ಚೇರಮನ ಪುರಕ್ಕೆ ಬಂದು, ಅಲ್ಲಿ ಭಕ್ತರ್ ಗುಡಿಗಟ್ಟಿ ಮಂಗಳಮೃದಂಗ ನಾನಾವಿಳಾಸಿನೀ ನರ್ತನ ರತ್ನದರ್ಪಣ ....**ನಾಟ್ಯನಾಟಕಂಗಳ ನಡುವೆ ಪುಟ್ಟುವ ಸಕಲ ಸುಖಂಗಳಂ ಶಿವಂಗೆ'** ಅರ್ಪಿಸಿದನಂತೆ. ಹೀಗೆ **'ಎಲ್ಲಾ ಸುಖಂಗಳಂ ಶಿವಂಗರ್ಪಿಸುತೆ, ಎಲ್ಲಾ ವಿನೋದಮಂ ಶಿವಪೂಜೆಗೆಯ್ದುಸುತೆ'** ಇರಲು ಆ ದೇವಾಲಯಕ್ಕೆ ಶಿವನು ಕಳುಹಿದ ಐರಾವತವು ಬಂದುದು. ಅದನ್ನೇರಿ ಚೇರಮನೊಡನೆ ಕೈಲಾಸಕ್ಕೆ ಬಂದನು. ಶಿವನೋಲಗಕ್ಕೆ ಬಂದ ನಂಬಿಯನ್ನು ಕಂಡು ಶಿವನು, **'ಬಲ್ಲಾ ಉನೆ, ನಮ್ಮ ಶಿಶು ಪುಷ್ಪದತ್ತನಂ, ಎಲ್ಲಾ ಸುಖವನೆನಗೆ ಕೂಡುವ ಏಕಚಿತ್ತನಂ'** ಎಂದು ಪರಿಚಯ ಮಾಡಿಕೊಡುತ್ತಾನೆ. ಕಾವ್ಯದ ಕೊನೆಯಲ್ಲಿ ಶಿವನಿಂದಲೇ ನಂಬಿಗೆ ಪ್ರಶಸ್ತಿಪ್ರದಾನ ಮಾಡಿಸಿದ ಕವಿ ಹರಿಹರನ ಜಾಣ್ಮೆಗೆ ತಲೆಬಾಗಬೇಕು. ಹೀಗೆ ಕಾವ್ಯದ ಆದಿಮಧ್ಯಂತಗಳಲ್ಲಿ ನಂಬಿಯ ಉದಾತ್ತ ಬದುಕಿನ ಆದರ್ಶವನ್ನು ಎತ್ತಿತೋರಿ, ಆ ಮಹಾತ್ಮನನ್ನು ಎಂತು ಅರ್ಥಮಾಡಿ ಚಿತ್ರಿಸಿಕೊಳ್ಳಬೇಕೆಂಬುದನ್ನು ಸ್ಪಷ್ಟವಾಗಿ ತೋರಿದ್ದಾನೆ. ಇಷ್ಟು ಸಮಗ್ರವಾಗಿ ಒಂದಿನಿತು ಎಡವದೆ ಒಂದು ಮಹಾಪಾತ್ರವನ್ನು ಸಾಂಕೇತಿಕವಾಗಿ ಕಾವ್ಯದಲ್ಲಿ ಚಿತ್ರಿಸಿದುದು ತುಂಬ ವಿರಳವೆಂದೇ ಹೇಳಬೇಕು. ಚಾಮರಸನ ಪ್ರಭುದೇವ, ರತ್ನಾಕರವರ್ಣಿಯ ಭರತೇಶರನ್ನುಳಿದರೆ ಸಾಹಿತ್ಯದಲ್ಲಿ ಇಂತಹ ಬೇರೊಂದು ಪಾತ್ರ ದೊರೆವುದು ವಿರಳವೆಂದೇ ಹೇಳಬೇಕು.

ವಿದ್ವಾಂಸವಿಮರ್ಶಕರು ಮೇಲಿನ ಮಾತುಗಳನ್ನುಗಮನಿಸಿ ನಂಬಿಯಣ್ಣನ ರಗಳೆ ಮಹಾಕೃತಿಯು ಅಹುದೋ ಅಲ್ಲವೋ ಹೇಳಬೇಕು. ಇದು ಶೃಂಗಾರ ಭಕ್ತಿಗಳ ಸಂಮಿಶ್ರ ಚಿತ್ರವೋ ಎಂಬುದನ್ನು ಆಲೋಚಿಸಬೇಕು. 'ಸಮಗ್ರತೆಯಿಂದ ಕೂಡಿಲ್ಲ, ಸಂಪೂರ್ಣ ಹೃದ್ಯವಾಗಿಲ್ಲ' ಎಂಬ ಡಾ. ಮುಗಳಿಯವರ ಮಾತನ್ನು ಇನ್ನೊಮ್ಮೆ ಪರಿಕಿಸಬೇಕು. ಮನುಷ್ಯಜೀವನದ ಉಚ್ಚ ಮೂಲ

ಗಳಿಗೆ ವಿರುದ್ಧವಾಗುತ್ತದೆಂಬ ಮಹನೀಯರ ಮಾತು ಯೋಗ್ಯವೇ ? ವಿಚಾರಿಸಬೇಕು. ತಾರತಮ್ಯಜ್ಞಾನವಿಲ್ಲದೆ ಎಲ್ಲರನ್ನೂ ಒಂದೇ ಅಳತೆಗೋಲಿಂದ ಅಳೆವುದು ಉಚಿತವೇ ? ಹಾಗಾದರೆ ಭಂತೇಶ ಕೃಷ್ಣರಂತಹ ಪಾತ್ರಗಳ ಗತಿ ಯೇನು ? ನಂಬಿಯ ಪಾತ್ರದ ಉದಾತ್ತತೆಗೆ ಬಂದ ಕುಂದಾವುದು ? ಎಂಬುದನ್ನು ಇನ್ನೊಮ್ಮೆ ಮರುಪರಿಶೀಲಿಸಬೇಕು. ನಂಬಿಯದು ಚಂಚಲಶೃಂಗಾರವೇ? ಶೃಂಗಾರಭಕ್ತಿಗಳನ್ನು ಬೇರೆಬೇರೆಯಾಗಿ ಭಾವಿಸುವ, ಅನ್ನಮಯ, ಪ್ರಾಣ ಮಯ ಸ್ತರಗಳಲ್ಲಿ ಬೀಳೇಳುತ್ತಿರುವ ನಾವು ತಟ್ಟನೆ ಪಾತ್ರದಲ್ಲಿ ಸಮನ್ವಯ ಇಲ್ಲವೆಂದು ನುಡಿಯಬಾರದು. 'ನಂಬಿಯಣ್ಣನ ಕಥೆ ಪೂರ್ಣವಾಗಿದ್ದರೂ ವ್ಯಕ್ತಿ ಚಿತ್ರ ಅಪೂರ್ಣ ಅಸಮಗ್ರ' ಎಂಬ ಡಾ. ಮುಗಳಿಯವರ ಮಾತು ಸತ್ಯಕ್ಕೆ ಸಮೀಪವೇ ಎಂಬುದನ್ನು ಕನ್ನಡ ನಾಡಿನ ಇಂದಿನ ವಿಮರ್ಶಕರು ನಿರ್ಮಲ ಮನದಿಂದ ಪುನರಾಲೋಚಿಸಲೆಂದು ವಿನಯದಿಂದ ಪ್ರಾರ್ಥಿಸುತ್ತೇನೆ.

ನಾನು ವಿದ್ವಾಂಸರ ಸ್ಥಾನದಲ್ಲಿ ನಿಂತು ಈ ಮಾತುಗಳನ್ನು ಹೇಳುತ್ತಿಲ್ಲ. ಇಪ್ಪತ್ತೈದು ವರ್ಷಗಳ ಹಿಂದೆ ಈ ಕಾವ್ಯವನ್ನು ಓದಿದ್ದೆ. ಆಗ ಯಾವ ವಿಶೇಷ ಅರ್ಥವೂ ಹೊಳೆದಿರಲಿಲ್ಲ. ಇದೊಂದು ಶೃಂಗಾರ, ಭಕ್ತಿಗಳನ್ನು ಚಿತ್ರಿಸುವ ಕಾವ್ಯವೆಂದೇ ಬಗೆದಿದ್ದೆ. ಇದೀಗ ಮತ್ತೊಮ್ಮೆ ಅಭ್ಯಾಸಮಾಡುವ ಪ್ರಸಂಗದಲ್ಲಿ ವೀರಶೈವಸಿದ್ಧಾಂತದ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ಎಂತಹ ಅಪೂರ್ವ ದಾರ್ಶನಿಕ ಕಾವ್ಯವಿದೆಂಬ ವಿಚಾರ ಹೊಳೆಯಿತು. ನಂಬಿಯಣ್ಣನ ಅಲೌಕಿಕ ವ್ಯಕ್ತಿತ್ವ ಮನಸೆಳೆಯಿತು. ಈ ದಿಸೆಯಲ್ಲಿ ವಿಚಾರಿಸಲು ನನಗೆ ಪ್ರೇರಣೆ ಬಂದುದು ಗುರುಗಳಾದ ಶ್ರೀ ಮಲ್ಲಿನಾಥ ಕಲಬುರ್ಗಿಯವರ ಅಧ್ಯಾಪನದಿಂದ. ಅವರಿಗೆ ನಾನು ಕೃತಜ್ಞನಾಗಿದ್ದೇನೆ. ವಿಚಾರಮಂಡನೆಯಲ್ಲಿ ಇರಬಹುದಾದ ನನ್ನ ದೋಷಗಳನ್ನು ಕ್ಷಮಿಸಿ, ವಿಚಾರಗಳನ್ನು ಮಾತ್ರ ವಿಮರ್ಶಿಸಬೇಕೆಂದು ಪ್ರಾರ್ಥಿಸಿ ವಿರಮಿಸುತ್ತೇನೆ.

ಹೊಸಗನ್ನಡ ಸಾಹಿತ್ಯದ ಆದ್ಯರು

ವರದರಾಜ ಹುಯಿಲಗೋಳ

'ಹೊಸಗನ್ನಡ ಸಾಹಿತ್ಯ' ಎಂಬುದನ್ನು ಪ್ರಾಮುಖ್ಯವಾಗಿ ಇಪ್ಪತ್ತನೆಯ ಶತಮಾನ ಪೂರ್ವಾರ್ಧದ ಸಾಹಿತ್ಯವನ್ನು ಕುರಿತು ಉಪಯೋಗಿಸಿದೆ. ಸಾವಿರಾರು ವರುಷ ವಿಶೇಷ ವಿವಿಧತೆಯಲ್ಲಿ ಬೆಳೆಯದ ಕನ್ನಡ ಸಾಹಿತ್ಯವು ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಒಮ್ಮೆಲೇ ನೂರೆಂಟು ರೂಪಗಳನ್ನು ತಾಳಿ, ತನ್ನ ಬಣ್ಣ ಬಣ್ಣದ ಗರಿಗಳನ್ನು ಹರಹಿ, 'ಹೊಸ ಕಾಲದ ನವಿಲಿ'ನಂತೆ ನರ್ತಿಸಿದೆ.

ಕನ್ನಡದಲ್ಲಿ ಹೀಗೆ ಹೊಸ ಸಾಹಿತ್ಯರೂಪಗಳ ನಿರ್ಮಾಣವಾಗಲು ಅನೇಕ ಕಾರಣಗಳುಂಟು. ಮೊದಲನೆಯದಾಗಿ ಇಂಗ್ಲೀಷ್ ಸಾಹಿತ್ಯದ ಅಭ್ಯಾಸ ಹೊಸ ವಿಚಾರಗಳನ್ನು ಪ್ರಚೋದಿಸಿತು. ಸಾಹಿತ್ಯದ ಹೊಸ ರೂಪಗಳು ಕನ್ನಡಿಗರಿಗೆ ಕಂಡವು. ಎರಡನೆಯದಾಗಿ ೧೯ನೆಯ ಶತಮಾನದಲ್ಲಿ ರೆವರೆಂಡ್ ಕಿಟೆಲ್‌ರಂಥ ಮಿಶನರಿಗಳು ಕನ್ನಡ ಸಾಹಿತ್ಯದ ಸಮಗ್ರ ದೃಷ್ಟಿಯನ್ನು, ಕನ್ನಡ ಭಾಷೆಯ ಸತ್ತ್ವವನ್ನು ಕನ್ನಡಿಗರಿಗೆ ತೋರಿಸಿಕೊಟ್ಟರು. ೧೯ನೆಯ ಶತಮಾನದಲ್ಲಿ ಪ್ರಕಟವಾಗಿರುವ ಶಬ್ದಕೋಶಗಳು, ವ್ಯಾಕರಣಗಳು, ಭಾಷಾಶಾಸ್ತ್ರದ ಗ್ರಂಥಗಳು, ಹಳಗನ್ನಡ ಗ್ರಂಥಗಳ ಸಂಪಾದನೆ ಇವೆಲ್ಲವೂ ವಿದೇಶೀಯರಿಂದ ಶಾಸ್ತ್ರೋಕ್ತವಾಗಿ ಅಭ್ಯಸಿಸಲ್ಪಟ್ಟು ಒಂದು ಹೊಸ ಅಭ್ಯಾಸಕ್ರಮದ ರೀತಿಯಲ್ಲಿ ನೆಲಗಟ್ಟು ಹಾಕಲ್ಪಟ್ಟಿದೆ. ಇದರಿಂದ ಹೊಸ ಸಾಹಿತ್ಯಕ್ಕೆ ಒಂದು ದಾರಿಯನ್ನು ಮಾಡಿಕೊಟ್ಟಂತಾಗಿದೆ. ಕನ್ನಡದ ಅಚ್ಚುಖಾನೆಗಳೂ ಒಂದು ದೃಷ್ಟಿಯಿಂದ ಹೊಸ ಗ್ರಂಥಗಳು ಹೊರಬೀಳಲು ಅವಕಾಶ ಮಾಡಿಕೊಟ್ಟಿವೆ. ಬರೆದ ಗ್ರಂಥಗಳು ಬೇಗ ಪ್ರಕಟವಾಗುವುದನ್ನರಿತ ಲೇಖಕ ಹೊಸ ಸಾಹಿತ್ಯನಿರ್ಮಾಣಕ್ಕೆ ಸ್ಫೂರ್ತಿಯನ್ನು ಪಡೆದಿದ್ದಾನೆ. ಕೊನೆಯದಾಗಿ ಬಂಗಾಲಿ, ಮರಾಠಿ, ಇಂಗ್ಲೀಷ ಮುಂತಾದ ಭಾಷೆಗಳಿಂದ ೧೯ನೆಯ ಶತಮಾನದಲ್ಲಿ ಪ್ರಕಟವಾದ ಗ್ರಂಥಗಳೂ ಹೊಸ ಸಾಹಿತ್ಯಕ್ಕೆ ಸಾಕಷ್ಟು ಅನುವು ಮಾಡಿಕೊಟ್ಟಿವೆ.

ಸ್ವತಂತ್ರವಾದ ಹೊಸ ಸಾಹಿತ್ಯ ೨೦ನೆಯ ಶತಮಾನದ ಪೂರ್ವಾರ್ಧದಲ್ಲಿ ಸಾಕಷ್ಟು ಪುಷ್ಟಿಗೊಂಡಿದೆ. ಕಾದಂಬರಿ, ಸಣ್ಣಕಥೆ, ಪ್ರಬಂಧ, ಭಾವಗೀತ, ನಾಟಕ ಈ ಮುಂತಾದವುಗಳು ಹೊಸಸಾಹಿತ್ಯದ ವಿವಿಧರೂಪಗಳು. ಸಾಹಿತ್ಯದ ಈ ಬೇರೆ ಬೇರೆ ರೂಪಗಳನ್ನು ಕನ್ನಡದಲ್ಲಿ ಮೊದಲು ಯಾರು ಯಾರು ಬಳಕೆಗೆ ತಂದರು ಎಂಬುದರ ಬಗ್ಗೆ ಬೇರೆಬೇರೆ ಲೇಖನಗಳಲ್ಲಿ ವಿಚಾರಗಳು ವ್ಯಕ್ತವಾಗಿವೆ. ಅವುಗಳನ್ನು ಒಂದೆಡೆಗೆ ತಂದು, ಅವುಗಳ ಬಗ್ಗೆ ಕೆಲವು ವಿಚಾರ ಹೇಳುವುದು ಈ ಲೇಖನದ ಉದ್ದೇಶವಾಗಿದೆ.

ಹೊಸ ಸಾಹಿತ್ಯದ ವಿವಿಧ ರೂಪಗಳ ಮೊದಲ ಹರಿಕಾರರಿಗೆ ಯಾವಾಗಲೂ ಅಮೂಲ್ಯವಾದ ಸ್ಥಾನವಿದ್ದೇ ಇರುತ್ತದೆ. ಕೆಲವೊಂದು ಸಲ ಅಂಥ ಕೃತಿಗಳಲ್ಲಿ ವಿಶೇಷ ಸಾಹಿತ್ಯಸತ್ವ ಇರದೇ ಇರಬಹುದು. ಆದರೂ ಸಾಹಿತ್ಯಕ್ಕೆ ಮೊಟ್ಟಮೊದಲು ಹೊಸ ರೂಪ ಕೊಟ್ಟ ಶ್ರೇಯಸ್ಸು, ಸಾಹಸ ಅವರದಾಗಿರುತ್ತದೆ. ಇಂಥದೇನಾದರೂ ಹೊಸದು ಬೆಳಕು ಕಂಡಾಗ ಸಂಪ್ರದಾಯವಂತರು ಮೂಗುಮುರಿಯುವುದೂ ಉಂಟು. ಆ ಲೇಖಕನ ವಿರುದ್ಧ ಟೀಕೆ — ಉಗ್ರ ಟೀಕೆ — ಆಗುವುದೂ ಸಂಭವನೀಯ! ಇಂಥವುಗಳನ್ನೆಲ್ಲ ಎದುರಿಸಿದ ಶ್ರೇಯಸ್ಸು ಈ ಮೊದಲ ಹರಿಕಾರರಿಗೆ ಇರುತ್ತದೆ.

ಕಾದಂಬರಿ :

ಆಧುನಿಕ ಸಾಹಿತ್ಯದಲ್ಲಿ ಕಾದಂಬರಿ ಅತ್ಯಂತ ಜನಪ್ರಿಯವಾದ ಸಾಹಿತ್ಯದ ರೂಪವಾಗಿದೆ. ೧೯ನೆಯ ಶತಮಾನದಲ್ಲಿ ಈ ಕಾದಂಬರಿ ರೂಪದ ಸುಳುಹು ಹೊಳೆದಿದೆ. ಹಳೆಯ ರೀತಿಯನ್ನೇ ತೀಡಿದರೂ, ಅನುವಾದ ರೂಪದಲ್ಲಿ ಕಾದಂಬರಿ ಹೊಸತನಕ್ಕೆ ಪೀಠಿಕೆಯನ್ನು ಅಣಿಗೊಳಿಸಿದೆ.

ಕನ್ನಡದಲ್ಲಿ ಮೊದಲ ಕಾದಂಬರಿ ಯಾವುದು ? ಯಾರು ಮೊಟ್ಟಮೊದಲು ಕಾದಂಬರಿಗಳನ್ನು ಬರೆದವರು ? ಇದರ ಬಗ್ಗೆ ಕೆಲವು ವಾದವಿವಾದಗಳಿವೆ. ಬೋಳಾರ ಬಾಬೂರಾಯರ 'ವಾಗ್ದೇವಿ' ಮೊದಲ ಕಾದಂಬರಿಯೆಂದು ಮಂಗಳೂರಿನ ಮಿತ್ರರು ನುಡಿದರೆ, ಅ. ನ. ಕೃ. ಅವರು ಎಂ. ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ' ಎಂಬ ಸ್ವತಂತ್ರ ಕಾದಂಬರಿಯೆಂದು ಹೇಳಿರುವರು. ಆದರೆ ಇದಕ್ಕೂ ಮೊದಲಿನ ಕೃತಿಗಳೂ ಈಗ ಹೊರಬಿದ್ದಿವೆ.

ಡಾ. ರಂ. ಶ್ರೀ. ಮುಗಳಿಯವರು ಕನ್ನಡ ಸಾಹಿತ್ಯದ ಇತಿಹಾಸವನ್ನು ಬರೆಯುತ್ತ "ರೆ. ಕಿಗಲ್ ಅವರು ಮಾಡಿದ Pilgrim's Progress (John Bunyan) ಇವರ 'ಯಾತ್ರಿಕನ ಸಂಚಾರ' ಎಂಬ ಭಾಷಾಂತರವು ೧೮೪೭ರಲ್ಲಿ ಪ್ರಥಮ ಮುದ್ರಣವಾಗಿ ಹೊರಬಿದ್ದಿತು. ಸುದೀರ್ಘಕಥೆ ಅಥವಾ ಕಾದಂಬರಿಯಾಗಿ ಕನ್ನಡದಲ್ಲಿ ಇದೇ ಮೊದಲನೆಯದಾಗಿ ಪರಿಣಮಿಸಿತು"[1] ಎಂದು ನುಡಿದಿರುವರು. ಬಿ. ಶಂಕರಭಟ್ಟ ಮತ್ತು ಬಿ. ಎಮ್. ಶರ್ಮ ಅವರು ಈ ಗ್ರಂಥದ ಬಗ್ಗೆ ಹೇಳುತ್ತ "ಯಾತ್ರಿಕನ ಸಂಚಾರ"ವೆಂಬ ಹೆಸರಿನಿಂದ ಕನ್ನಡ ಗದ್ಯರೂಪಕ್ಕಿಳಿದ ಈ ಕೃತಿಗೆ ಹೊಸಗನ್ನಡ ಗದ್ಯಸಾಹಿತ್ಯದಲ್ಲಿ ಅದೊಂದು ವಿಶಿಷ್ಟ ಸ್ಥಾನವಿದೆ" ಎಂದು ಅಭಿಪ್ರಾಯಪಟ್ಟಿರುವರು.[2]

---

೧. ಕನ್ನಡ ಸಾಹಿತ್ಯದ ಇತಿಹಾಸ (ಸಾಹಿತ್ಯ ಅಕಾದೆಮಿ ಪ್ರಕಟಣೆ), ಪುಟ ೧೯೩.
೨. ನಮ್ಮ ಸಾಹಿತ್ಯ, ಪುಟ ೧೯.

ಗೋವಿಂದ ಪೈ ಅವರು ೧೮೪೭ಕ್ಕಿಂತಲೂ ಹಿಂದಕ್ಕೆ ಹೋಗಿ ೧೮೦೦ರಲ್ಲಿ ಯಾದವನೆಂಬ ಕವಿ "ಕಲಾವತಿಪರಿಣಯ" ಎಂಬ ಕಾದಂಬರಿಯನ್ನು ಹಳಗನ್ನಡ ಶೈಲಿಯಲ್ಲಿ ಬರೆದಿರುವನೆಂದೂ ತಿಳಿಸಿರುವರು.[೩] ಗೋವಿಂದ ಪೈ ಅವರು ಇದೇ ವಿಚಾರಗಳನ್ನು ಬರೆಯುತ್ತ ೧೮೨೩ರಲ್ಲಿ ಕೆಂಪುನಾರಾಯಣ ಬರೆದ "ಮುದ್ರಾ-ಮಂಜೂಷ" ಎಂಬ ಗ್ರಂಥವು ಕನ್ನಡದ ಪ್ರಥಮ ಸ್ವತಂತ್ರ ಕಾದಂಬರಿಯೆಂದು ಒಪ್ಪಿಕೊಳ್ಳಬಹುದಾಗಿದೆಯೆಂದೂ ಅಭಿಪ್ರಾಯಪಟ್ಟಿರುವರು.[೪] ಮುಮ್ಮಡಿ ಕೃಷ್ಣರಾಜರ ಆಸ್ಥಾನದಲ್ಲಿದ್ದ ಕೆಂಪುನಾರಾಯಣ 'ಮುದ್ರಾರಾಕ್ಷಸ' ಎಂಬ ಸಂಸ್ಕೃತ ನಾಟಕದ ಕಥೆಯನ್ನು ಆಧರಿಸಿ ಈ ಗ್ರಂಥವನ್ನು ಬರೆದಿರುವನು. ಮೂಲಕಥೆ ಸಂಸ್ಕೃತ ನಾಟಕದ್ದಾದರೂ, ಸ್ವತಂತ್ರವಾಗಿ ಬರೆಯಲ್ಪಟ್ಟಿದೆ ಎನ್ನುವಷ್ಟು, ಅದು ಸುಂದರವಾಗಿದೆಯೆಂಬ ಅಭಿಮತ ಗೋವಿಂದ ಪೈ ಅವರದಾಗಿದೆ.

ಆರ್.ಎನ್.ಎಮ್. ಅವರು 'ಕನ್ನಡ ಕಾದಂಬರಿಗಳ ಕಥೆ' ಎಂಬ ಲೇಖನವನ್ನು ಬರೆಯುತ್ತ—"ಕನ್ನಡಸಾಹಿತ್ಯದಲ್ಲಿ, ಕಾದಂಬರಿಗಳ ಬಗ್ಗೆ ೧೮೮೫ನೆಯ ಇಸವಿಗೆ ಮೊದಲು ಏನನ್ನೂ ಹೇಳುವುದು ಬಲು ಕಷ್ಟ. ೧೮೮೫ನೆಯ ಮಾರ್ಚ ೩೧ರಂದು ಮೈಸೂರು ನ್ಯಾಯಾಂಗ ಇಲಾಖೆಯಲ್ಲಿ ಅಧಿಕಾರಿಗಳಾಗಿದ್ದ ದಿ. ಬಿ. ವೆಂಕಟಾಚಾರ್ಯರು 'ದುರ್ಗೇಶನಂದಿನಿ' ಎಂಬ ಕಾದಂಬರಿಯನ್ನು ಪ್ರಕಟಿಸಿದರು....ಬಂಗಾಳಿ ಸಾಹಿತ್ಯದಲ್ಲಿ ತಮ್ಮ 'ಆನಂದಮಠ' ಕೃತಿಯಿಂದ ಕ್ರಾಂತಿಗೆ ಕಾರಣರಾದ ಬಂಕಿಂ ಬಾಬುರವರ ಮೂಲಕೃತಿಯಿಂದ ವೆಂಕಟಾಚಾರ್ಯರು ಅನುವಾದಿಸಿದ ಈ "ದುರ್ಗೇಶನಂದಿನಿ"ಯನ್ನೆ ಕನ್ನಡದಲ್ಲಿ ಪ್ರಪ್ರಥಮ ಕಾದಂಬರಿಯೆಂದು ಹೇಳಬಹುದು"[೫] ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಬಿ. ವೆಂಕಟಾಚಾರ್ಯರು ಬಂಕಿಮರ ಅನೇಕ ಕೃತಿಗಳನ್ನು ಕನ್ನಡಕ್ಕೆ ರೂಪಾಂತರಿಸಿ ಕಾದಂಬರಿ ಓದುವ ಅಭಿರುಚಿಯನ್ನು ಕನ್ನಡ ಜನತೆಗೆ ಒದಗಿಸಿರುವರು.

೧೮೦೦ ರಿಂದ ೧೮೮೫ರ ವರೆಗೆ ಈ ವಿವಿಧ ಕೃತಿಗಳು ಪ್ರಪ್ರಥಮ ಕಾದಂಬರಿಗಳೇ ಎಂಬ ಸ್ವಾರಸ್ಯಕರ ವಾದವಿದೆಯೆಂಬುದು ತಿಳಿದುಬರುವುದು. ಈ ಕೃತಿಗಳು ಭಾಷಾಂತರವಾಗಿದ್ದರೂ, ಸ್ವತಂತ್ರ ಕಾದಂಬರಿಗಳ ಸತ್ವ ಇವುಗಳಲ್ಲಿದೆ ಎಂಬ ಅಭಿಪ್ರಾಯ ಈ ವಿಮರ್ಶೆಯಿಂದ ವ್ಯಕ್ತವಾಗುತ್ತದೆ. ಏನೇ ಆದರೂ ಇವು ಸಂಪೂರ್ಣ ಸ್ವತಂತ್ರ ಕಾದಂಬರಿ ಎಂದು ನಾವು ಗಮನಿಸಲು ಬರುವಂತಿಲ್ಲ.

---

೩. ಕನ್ನಡ ನುಡಿ, ಸಂಪುಟ ೧೯, ಸಂಚಿಕೆ ೧೧, ಪುಟ ೨೯೦.

೪. ಕನ್ನಡ ನುಡಿ, ಸಂಪುಟ ೧೯, ಸಂಚಿಕೆ ೧೧, ಪುಟ ೨೯೦.

೫. ಕನ್ನಡ ನುಡಿ, ಸಂಪುಟ ೧೯, ಸಂಚಿಕೆ ೧೧, ಪುಟ ೨೯೧

೧೮೯೫ರಲ್ಲಿ ರೆಂಟ್ಲ ವೆಂಕಟಸುಬ್ಬರಾಯರು ಬರೆದ "ಕೇಸರಿವಿಲಾಸ" ಎಂಬುದು ಸ್ವತಂತ್ರ ಕಾದಂಬರಿ. ಈ ಕಾದಂಬರಿಕಾರರು ಮದ್ರಾಸಿನ ಮೈಲಾಪುರದಲ್ಲಿ ಅಡ್ವೊಕೇಟರಾಗಿ ಇದ್ದರಂತೆ.

ಗುಲವಾಡಿ ವೆಂಕಟರಾಯರು 'ಇಂದಿರಾಬಾಯಿ' ಎಂಬ ಕಾದಂಬರಿಯನ್ನು ೧೮೯೯ರಲ್ಲಿ ಬರೆದು ಪ್ರಕಟಿಸಿದ್ದಾರೆ. ಆಗಿನ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಲೆಕ್ಟರರಾಗಿದ್ದ ಕೌಚಮನ್ ಎಂಬವರು ಈ ಕಾದಂಬರಿಯನ್ನು ಇಂಗ್ಲೀಷಿನಲ್ಲಿ ಭಾಷಾಂತರ ಮಾಡಿ ಪ್ರಕಟಿಸಿರುವರು. ಸ್ವತಂತ್ರ ಕಾದಂಬರಿ ಹೀಗೆ ಇಂಗ್ಲೀಷಿನಲ್ಲಿಯೂ ಭಾಷಾಂತರವಾದುದು ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ. ಗುಲವಾಡಿ ವೆಂಕಟರಾಯರು 'ಸೀಮಂತಿನಿ' ಮತ್ತು 'ಭಾಗೀರಥಿ' ಎಂಬ ಇನ್ನೆರಡು ಕಾದಂಬರಿಗಳನ್ನು ಬರೆದಿರುವರು. ಇವರು ೧೮೪೪ ರಿಂದ ೧೯೧೩ ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬದುಕಿದ್ದು, ಸ್ವತಂತ್ರ ಸಾಮಾಜಿಕ ಕಾದಂಬರಿಗಳನ್ನು ಪ್ರಕಟಿಸಿರುವರು.

ಇದೇ ಕಾಲದಲ್ಲಿದ್ದ ಬೋಳಾರ ಬಾಬೂರಾಯರು 'ವಾಗ್ದೇವಿ' ಕಾದಂಬರಿಯನ್ನು ೧೯೦೫ರಲ್ಲಿ ಪ್ರಕಟಿಸಿರುವರು. ಗುಳ್ವಾಡಿ ಅಣ್ಣಾಜಿಯವರು 'ರೋಹಿಣಿ' ಎಂಬ ಕಾದಂಬರಿಯನ್ನು ೧೯೦೬ರಲ್ಲಿ ಪ್ರಕಟಿಸಿರುವರು. ಈ ಕಾದಂಬರಿಕಾರರೆಲ್ಲರೂ ದಕ್ಷಿಣ ಕನ್ನಡ ಜಿಲ್ಲೆಯವರೇ! ಸ್ವತಂತ್ರ ಸಾಮಾಜಿಕ ಕಾದಂಬರಿಗಳ ಜನ್ಮಸ್ಥಳ ದಕ್ಷಿಣ ಕನ್ನಡ ಜಿಲ್ಲೆಯೆಂದು ಹೇಳಬೇಕು.

"ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯನ್ನು ಹೇಳುವವರು ಗುಲವಾಡಿ ವೆಂಕಟರಾವ ಮತ್ತು ಅಣ್ಣಾಜಿರಾಯರಂಥವರ ಹೆಸರನ್ನು ಮರೆತೇ ಬಿಡುತ್ತಾರೆ, ಏತಕ್ಕೆ—ಎಂದು ನನಗೆ ತಿಳಿಯದ ಸಂಗತಿಯಾಗಿದೆ"[೬] ಎಂದು ಶ್ರೀ ಶಿವರಾಮ ಕಾರಂತರು ತಮ್ಮ ವಿಷಾದವನ್ನು ವ್ಯಕ್ತಮಾಡಿದ್ದಾರೆ. ಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿಗಳನ್ನು ಬರೆದ ಗುಲವಾಡಿ ವೆಂಕಟರಾಯರ ಬಗ್ಗೆ, ಅವರ ಕೃತಿಗಳ ಬಗ್ಗೆ ವಿಚಾರವಿಮರ್ಶೆ ನಡೆಯುವುದು ಅತ್ಯಗತ್ಯವಾಗಿದೆ. ಚರಿತ್ರೆಯ ದೃಷ್ಟಿಯಿಂದ ಪ್ರಥಮ ಸಾಮಾಜಿಕ ಕಾದಂಬರಿಗೆ ವಿಶೇಷ ಸ್ಥಾನವಿದೆ. 'ಇಂದಿರಾಬಾಯಿ' ಕಾದಂಬರಿ ಭಾರತದ ವಿವಿಧ ಭಾಷೆಗಳಿಗೂ ಭಾಷಾಂತರವಾಗಬೇಕು.

ಎಂ. ಎಸ್. ಪುಟ್ಟಣ್ಣನವರ "ಮಾಡಿದ್ದುಣ್ಣೋ ಮಹಾರಾಯ" ಮತ್ತು "ಮುಸುಕು ತೆಗೆಯೇ ಮಾಯಾಂಗನೆ" ಈ ಕಾದಂಬರಿಗಳು ಸುಮಾರು ೧೯೧೫ರಲ್ಲಿ ಪ್ರಕಟವಾಗಿವೆ. ಆದ್ದರಿಂದ ಎಂ. ಎಸ್. ಪುಟ್ಟಣ್ಣನವರೇ ಪ್ರಥಮ ಸಾಮಾಜಿಕ ಕಾದಂಬರಿ ಬರೆದರೆಂದು ಹೇಳಲು ಬರುವಂತಿಲ್ಲ. ಆರಂಭದ ಸ್ವತಂತ್ರ ಸಾಮಾಜಿಕ ಕಾದಂಬರಿಕಾರರಲ್ಲಿ ಇವರ ಹೆಸರನ್ನು ಸ್ಮರಿಸಬೇಕು.

---

೬. 'ಇಂದಿರಾಬಾಯಿ' ಕಾದಂಬರಿಯ ಮುನ್ನುಡಿಯಲ್ಲಿ, ಪುಟ vi.

೧೮೯೫ರಲ್ಲಿ ಪ್ರಕಟವಾದ 'ಕೇಸರಿವಿಲಾಸ' ಕಾದಂಬರಿಯ ಹೆಸರು ವಿಶೇಷ ಕೇಳಿಬಂದಿಲ್ಲ. ಆದರೆ "ಇಂದಿರಾಬಾಯಿ" ಇದೇ ಪ್ರಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿ ಎಂದು ಶಿವರಾಮ ಕಾರಂತ, ಗೋವಿಂದ ಪೈ ಮುಂತಾದವರು ಒಪ್ಪಿಕೊಂಡು ಲೇಖನ ಬರೆದಿರುವರು.

ಸಣ್ಣಕಥೆ :

ಸ್ವತಂತ್ರವಾದ ಸಣ್ಣಕಥೆಗಳು ೨೦ನೆಯ ಶತಮಾನದ ಆದಿಭಾಗದಲ್ಲಿ ಆರಂಭವಾಗಿವೆ. ಪಂಜೆ ಮಂಗೇಶರಾಯರು, ಕೆರೂರ ವಾಸುದೇವಾಚಾರ್ಯರು, ಎಂ. ಎನ್. ಕಾಮತರು ಸ್ವತಂತ್ರ ಸಣ್ಣ ಕಥೆ ಬರೆಯುವಲ್ಲಿ ಆದ್ಯರು.

ನಿಜವಾಗಿಯೂ ಪ್ರಥಮರಾದ ನಮ್ಮ ಲೇಖಕರನ್ನು ಸಾಹಿತ್ಯಚರಿತ್ರೆಕಾರರು ಮರೆಯುತ್ತಾರೆಂಬ ವಿಷಾದವನ್ನು ಸಣ್ಣಕಥೆಗಳ ಬಗ್ಗೆಯೂ ಶಿವರಾಮ ಕಾರಂತರು ವ್ಯಕ್ತಮಾಡಿದ್ದಾರೆ. "ಕನ್ನಡ ಕಿರುಗತೆಗಳ ಚರಿತ್ರೆಯನ್ನು ಹೇಳುವಾಗ, ಅಂಥವರಲ್ಲಿ ಪ್ರಥಮರಾದ ಪಂಜೆ ಮಂಗೇಶರಾಯರನ್ನು ಮರೆತುಬಿಡುತ್ತಾರೆ"[೭] ಎಂದು ಅವರು ನುಡಿದಿರುವರು. ಪಂಜೆ ಮಂಗೇಶರಾಯರು ೧೯೦೦ ಜುಲೈ ೧ರಂದು 'ಸುವಾಸಿನಿ' ಎಂಬ ಪತ್ರಿಕೆಯಲ್ಲಿ ತಮ್ಮ ಪ್ರಥಮ ಸಣ್ಣ ಕಥೆಯನ್ನು ಪ್ರಕಟಿಸಿರುವರು. 'ನನ್ನ ಚಿಕ್ಕಪ್ಪ' (೧೯೦೨) 'ನನ್ನ ಚಿಕ್ಕತಾಯಿ' (೧೯೦೦) ಇಂಥ ಕಥೆಗಳನ್ನು ಬರೆದು ಪ್ರಕಟಿಸಿರುವರು. ಇವರು ಬರೆದ 'ಭಾರತಶ್ರವಣ' (೧೯೦೨) ಒಂದು ಒಳ್ಳೇ ವಿನೋದಚಿತ್ರವಾಗಿದೆ ಎಂದು ಕೆ. ನರಸಿಂಹಮೂರ್ತಿಗಳು ಹೇಳಿರುವರು.[೮] ತ. ಸು. ಶಾಮರಾಯರು "ದಿವಂಗತ ಪಂಜೆ ಮಂಗೇಶರಾಯರಿಗೆ ಆ ಕೀರ್ತಿ (ಮೊದಲ ಸಣ್ಣ ಕಥೆಗಾರರು) ಸಲ್ಲಬೇಕೆಂಬುದು ನಿರ್ವಿವಾದವೆಂದು ತೋರುತ್ತದೆ"[೯] ಎಂದು ನುಡಿದಿರುವರು. ಗೋವಿಂದ ಪೈ, ಶಿವರಾಮ ಕಾರಂತ ಎಲ್ಲರೂ ಇಂಥದೇ ಅಭಿಪ್ರಾಯವನ್ನು ವ್ಯಕ್ತಮಾಡಿರುವರು.

ಮಂಗಳೂರಿನ ಎಂ. ಎನ್. ಕಾಮತರ 'ಅಂದಿನ ಆ ಊರು' ಎಂಬ ಕಥಾಸಂಗ್ರಹವೊಂದಿದೆ. ಇದರಲ್ಲಿ ಐದು ಕಥೆಗಳಿವೆ ಈ ಗ್ರಂಥಕ್ಕೆ ಮುನ್ನುಡಿಯನ್ನು ಬರೆಯುತ್ತ ಗೋವಿಂದ ಪೈಗಳು ೧೯೧೨ರಲ್ಲಿಯೇ ಎಂ. ಎನ್. ಕಾಮತರು ಸಣ್ಣ ಕಥೆ ಬರೆದಿರುವುದಾಗಿ ತಿಳಿಸಿದ್ದಾರೆ. ಇವರ ಕಥೆಗಳಲ್ಲಿ ಸುಖದ ಸಿಹಿ, ದುಃಖದ ಕಹಿ ಇವು ಕಂಡುಬಂದಿವೆಯೆಂದೂ ಅವರು ನುಡಿದಿರುವರು. ಪಂಜೆ ಮಂಗೇಶರಾಯರ ಕಥೆಗಳು ವ್ಯಕ್ತಿಚಿತ್ರಗಳಂತಿದ್ದರೆ, ಎಂ. ಎನ್. ಕಾಮತರ ಕಥೆಗಳಲ್ಲಿ ಕಥೆಯ ಅಂಶವು ಹೆಚ್ಚಾಗಿದೆ

೭. 'ಇಂದಿರಾಬಾಯಿ', ಮುನ್ನುಡಿ. ಪುಟ vi.
೮. ಪ್ರಬುದ್ಧ ಕರ್ಣಾಟಕ, ಸಂಪುಟ ೨೧, ಸಂಚಿಕೆ ೨.
೯. ಜೇವು-ಬೆಲ್ಲ, ಮುನ್ನುಡಿ, ಪುಟ ೨೧.

ಕೆರೂರು ವಾಸುದೇವಾಚಾರ್ಯರು ಇದೇ ಕಾಲದಲ್ಲಿ ಸಣ್ಣ ಕಥೆಗಳನ್ನು ಬರೆದಿರುವರು. 'ತೊಳೆದ ಮುತ್ತು', 'ಮಲ್ಲೇಶಿಯ ನಲ್ಲನಲ್ಲೆಯರು' ಇವು ಅವರು ಬರೆದ ಕಥೆಗಳಲ್ಲಿ ಪ್ರಸಿದ್ಧಿಯನ್ನು ಪಡೆದಿವೆ. ಪಂಜೆ ಮಂಗೇಶ-ರಾಯರಿಗಿಂತಲೂ ಕೆರೂರು ವಾಸುದೇವಾಚಾರ್ಯರು ಹೆಚ್ಚು ಕತೆಗಳನ್ನು ಬರೆದಿರುವರು. ಮರಾಠಿಯ 'ಸಂಪೂರ್ಣ ಕತೆ' ಎಂಬ ಸಾಹಿತ್ಯಪ್ರಕಾರದ ತಂತ್ರದ ಅನುಕರಣವನ್ನು ಇವರು ಮಾಡಿರುವಂತಿದೆ. ಆದ್ದರಿಂದ ಇವರ ಕತೆಗಳು ನೀಳ್ಗತೆಗಳೇ ಆಗಿವೆ. ಆದರೆ ಅವು ಯಶಸ್ವಿಯಾದ ಸಾಮಾಜಿಕ ಕತೆ-ಗಳಾಗಿವೆ. ಕೀರ್ತಿನಾಥ ಕುರ್ತಕೋಟಿಯವರು ಕೆರೂರು ವಾಸುದೇವಾ-ಚಾರ್ಯರನ್ನು ಸಣ್ಣ ಕತೆಗಾರರಲ್ಲಿ ಮೊದಲಿಗರೆಂದು ಒಪ್ಪಿಕೊಂಡು, ಏನೇ ದೋಷಗಳಿದ್ದರೂ "ಕೆರೂರರ ಕತೆಗಳಲ್ಲಿ ಕಥನಗುಣ ಎದ್ದು ಕಾಣುತ್ತದೆ" ಎಂದಿರುವರು.[೧೦]

೧೯೨೦ರಲ್ಲಿ ಶ್ರೀನಿವಾಸರು (ಮಾಸ್ತಿ ವೆಂಕಟೇಶ ಅಯ್ಯಂಗಾರ) 'ಮಧುರ ವಾಣಿ' ಪತ್ರಿಕೆಯಲ್ಲಿ ಆಗಾಗ ಪ್ರಕಟವಾಗಿದ್ದ ತಮ್ಮ ಕಥೆಗಳನ್ನು ಸಂಗ್ರಹಿಸಿ 'ಕೆಲವು ಸಣ್ಣ ಕಥೆಗಳು' ಎಂಬ ಹೆಸರಿನಲ್ಲಿ ಪ್ರಕಟಿಸಿದರು. "ಶ್ರೀನಿವಾಸರ ಕೃತಿ ಹೆಚ್ಚು ಜನಗಳ ಮೇಲೆ ಪರಿಣಾಮವನ್ನುಂಟುಮಾಡಿ, ಅನೇಕ ಸಾಹಿತಿಗಳನ್ನು ಕಥಾಸಾಹಿತ್ಯದ ಕಡೆಗೆ ತಿರುಗಿಸುವದರಿಂದ ಅವರನ್ನು ಈ ಸಾಹಿತ್ಯಪ್ರಕಾರದ **ಆದ್ಯ ಪ್ರವರ್ತಕರೆಂದು** ಕರೆಯುವ ರೂಢಿ ಬಂತು" ಎಂದು ಅ. ನ. ಕೃ. ಅವರು ನುಡಿದಿರುವರು.[೧೧] ಸಣ್ಣ ಕಥೆಗೆ ಸಾಹಿತ್ಯದಲ್ಲಿ ವಿಶೇಷ ಸ್ಥಾನ ಬರುವಂತೆ ಮಾಡಿದವರು ಪ್ರತಿಭಾಸಂಪನ್ನ ಶ್ರೀನಿವಾಸರೇ ಎಂದು ಅನೇಕರು ಒಪ್ಪಿ-ಕೊಂಡಿರುವರು. ೧೯೦೦ ರಿಂದ ೧೯೨೦ ರ ವರೆಗೆ ಸಾವಕಾಶವಾಗಿ ಬೆಳೆಯು ತ್ತಿದ್ದ ಸಣ್ಣಕಥೆ ಶ್ರೀನಿವಾಸರಿಂದ ಸಂಪನ್ನತೆಯನ್ನು ಪಡೆಯಿತು. "ಸಣ್ಣ ಕತೆ ಪಂಜೆ, ಕಾಮತ, ಕೆರೂರು ಇವರ ಬರವಣಿಗೆಯಲ್ಲಿ ಉಗಮಹೊಂದಿ ಮಾಸ್ತಿ-ಯವರಲ್ಲಿ ವಿಸ್ತಾರವಾದ ಪ್ರವಾಹವಾಯಿತು..... ಆಧುನಿಕ ಅರ್ಥದಲ್ಲಿ ಮಾಸ್ತಿ-ಯವರೇ **ಮೊದಲನೆಯ ಸಣ್ಣ ಕತೆಗಾರರು** ಎಂದು ಹೇಳಬಹುದು"[೧೨] ಎಂದು ರಂ. ಶ್ರೀ. ಮುಗಳಿಯವರು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿರುವರು.

ಕೆಲವೊಂದು ಭಿನ್ನಾಭಿಪ್ರಾಯಗಳಿದ್ದರೂ ಪಂಜೆ ಮಂಗೇಶರಾಯರನ್ನು ಮೊದಲ ಕಥೆಗಾರರೆಂದು ಮನ್ನಿಸಬೇಕು. 'ಕನ್ನಡ ಕಥೆಗಳ ವಿಧಾತ್ರ' ಎಂಬುದರ ಬಗ್ಗೆ ಬರೆಯುತ್ತ ಗೋವಿಂದ ಪೈ ಹೀಗೆ ಹೇಳಿರುವರು—"೧೯೦೦ ರ ವರೆಗೆ

---

೧೦. ನಡೆದುಬಂದ ದಾರಿ, ಸಂಪುಟ ೨೨, ಪುಟ ೭೯೭.

೧೧. ಸಾಹಿತ್ಯ ಮತ್ತು ಜೀವನ, ಪುಟ ೮೩.

೧೨. ಕನ್ನಡ ಸಾಹಿತ್ಯದ ಇತಿಹಾಸ, ಪುಟ ೧೯೯.

ಕನ್ನಡ ಸಾಹಿತ್ಯದ ಅಂಗವೆನಿಸತಕ್ಕ ಚಿಕ್ಕ ಕಥೆಗಳಿಲ್ಲದುದರಿಂದ, ಅದೊಂದು ನೂತನತೆಯನ್ನು ಸೃಜಿಸಿ ಅದನ್ನು ನಮ್ಮ ಸಾಹಿತ್ಯಕ್ಕೆ ಪ್ರೊತ್ತಮೊದಲು ದೊರಕಿಸಿಕೊಟ್ಟ ಪಂಜೆಯವರೇ ಕನ್ನಡ ಕಥೆಗಳ ವಿಧಾತೃರೆಂಬ ಸ್ವಯಂ ವ್ಯಕ್ತವಾದ ಸತ್ಯಕ್ಕೆ ಬೇರೊಂದು ಸತ್ಯಾಪನವು ಬೇಕೆಂದಿಲ್ಲ."[೧೩] ಆರ್. ಎಸ್. ಎಮ್. ಅವರು ಕನ್ನಡ ಸಣ್ಣ ಕತೆಗಳ "ಕಥೆ"ಯನ್ನು ಬರೆಯುತ್ತ ಅತ್ಯಂತ ಉತ್ಸಾಹದಿಂದ "೧೯೦೦ ಜುಲೈ ೧ನ್ನು ಕನ್ನಡ ಸಣ್ಣ ಕತೆಗಳ ಜನ್ಮದಿನವನ್ನಾಗಿ ಸುಲಭವಾಗಿ ಅಂಗೀಕರಿಸಬಹುದು"[೧೪] ಎಂದಿರುವರು.

ಭಾವಗೀತೆ :

ಹೊಸ ಕಾವ್ಯದ ವಿಶೇಷ ರೂಪವೆಂದರೆ ಭಾವಗೀತೆ. ಹೊಸ ಕಾವ್ಯದ ಇನ್ನೂ ವಿವಿಧ ಪ್ರಕಾರಗಳೂ ಉಂಟು. ಆದರೆ ಭಾವಗೀತೆ ಮೊದಲು ಆರಂಭವಾದ್ದರಿಂದ ಸಾಹಿತ್ಯದ ಈ ರೂಪವನ್ನು ಇಲ್ಲಿ ಎತ್ತಿಕೊಳ್ಳಲಾಗಿದೆ. ಆರಂಭ ಕಾಲದಲ್ಲಿ ಅನುವಾದವೋ ಸ್ವತಂತ್ರವೋ ಎಂಬುದನ್ನು ಹೇಳಲುಬಾರದಂತೆ ಈ ಭಾವಗೀತೆಗಳು ಕಂಡುಬರುತ್ತದೆ. ಹೊಸ ಭಾವ, ಹೊಸ ಛಂದಸ್ಸು, ನವೀನ ಶಬ್ದಸೃಷ್ಟಿ, ಕಿರಿದರಲ್ಲಿ ಪಿರಿದರ್ಥವನ್ನು ಹೇಳುವ ಶಕ್ತಿ ಇವೆಲ್ಲವೂ ಭಾವಗೀತೆಗಳಿಗೆ ರೂಪಕೊಟ್ಟಿವೆ.

ಸುಮಾರು ೧೮೫೭ರಲ್ಲಿ ಪ್ರಕಟವಾದ 'ಗೀತಪುಸ್ತಕಗಳು' ಎಂಬ ಮಿಶನರಿಗಳ ಕೃತಿಯಲ್ಲಿ ಇಂಗ್ಲೀಷ್, ಜರ್ಮನ್ ಗೀತೆಗಳ ಅನುವಾದವಿದೆ. ಬಾಯಬಲ್ಲದ ಸಂಗತಿಗಳನ್ನು ಅನುವಾದಿಸುವಾಗ ಅವರು ಪಾಶ್ಚಿಮಾತ್ಯ ಸಂಗೀತಕ್ಕೆ ಪ್ರಾಧಾನ್ಯ ಕೊಟ್ಟಿರುವರು. ಅಂತೆಯೆ ಕನ್ನಡದಲ್ಲಿದ್ದ ಸಾಂಪ್ರದಾಯಿಕ ರೀತಿಯನ್ನು ತೊರೆದು, ಹೊಸ ಛಂದಸ್ಸಿನಲ್ಲಿ ಅವರು ಬರೆಯುವ ಸಾಹಸ ಮಾಡಿದರು. ಉದಾಹರಣೆಗೆ ಕೆಳಗಿನ ಸಾಲುಗಳನ್ನು ನಿರೀಕ್ಷಿಸಬಹುದು.

> ಇಲ್ಲಿ ನಮ್ಮ ಸುಖ ಕಷ್ಟ !
> ಇಲ್ಲಿ ನಮ್ಮ ಲಾಭ ನಷ್ಟ !
> ನಮ್ಮ ಕ್ಷೇಮ ತಾಪವು !
> ನಮ್ಮ ನೀತಿ ಪಾಪವು !

ಇಂಥ ಅನುವಾದಗಳು ಭಾವಗೀತೆಯ ಲಕ್ಷಣವನ್ನು ಅದೆಷ್ಟೋ ಮಟ್ಟಿಗೆ ಪ್ರಕಟಿಸುತ್ತವೆ.

ಇಂಗ್ಲೀಷ್ ಕಾವ್ಯದ ಅನುವಾದ ೧೯ನೆಯ ಶತಮಾನದ ಕೊನೆ ಮತ್ತು ೨೦ನೆಯ ಶತಮಾನದ ಆದಿಯಲ್ಲಿ ನಡೆದಿದೆ. ಹ. ನಾರಾಯಣರಾಯರು, ಪಂಜೆ

---

೧೩. ಪಂಜೆಯವರ ನೆನಪಿಗಾಗಿ, ಪುಟ ೭.

೧೪. ಕನ್ನಡ ನುಡಿ, ಸಂಪುಟ ೨೦, ಸಂಚಿಕೆ ೫.

ಮಂಗೇಶರಾಯರು, ಗೋವಿಂದ ಪೈ, ಎಸ್. ಜಿ. ನರಸಿಂಹಾಚಾರ್ಯ, ಬಿ. ಎಂ. ಶ್ರೀಕಂಠಯ್ಯ ಎಲ್ಲರೂ ಈ ಕಾಲದಲ್ಲಿ ಇಂಗ್ಲೀಷ್ ಗೀತಗಳ ಅನುವಾದಗಳನ್ನು ಮಾಡಿರುವರು. ಸಾಮಾನ್ಯವಾಗಿ ಬಿ. ಎಂ. ಶ್ರೀ. ಅವರೇ ಕನ್ನಡ ಭಾವಗೀತೆಗಳಿಗೆ ಶ್ರೀಕಾರವನ್ನು ಹಾಕಿರುವರೆಂದು ವಿಮರ್ಶಕರು ಒಪ್ಪಿಕೊಂಡಿರುವರು. ಶ್ರೀ ಅವರ 'ಇಂಗ್ಲೀಷ ಗೀತ'ಗಳು ಅನುವಾದಗಳಾದರೂ ಕನ್ನಡದ ಕವನಗಳೇ ಎನ್ನುವಷ್ಟು ಪ್ರಭಾವಶಾಲಿಯಾಗಿವೆ. ೧೯೨೧ರಲ್ಲಿ ಪ್ರಕಟವಾದ ಈ ಗ್ರಂಥದಲ್ಲಿ ೬೦ ಅನುವಾದ ಕವನಗಳು, ಮೂರು ಸ್ವತಂತ್ರ ಕವನಗಳು ಒಳಗೊಂಡಿವೆ. "ಶ್ರೀ"ಯವರ 'ಇಂಗ್ಲೀಷ ಗೀತ'ಗಳಲ್ಲಿ ಎಲ್ಲ ಅಂಗಗಳಿಂದಲೂ ಪರಿಪೂರ್ಣವಾದ ಹೊಸಗನ್ನಡ ಕಾವ್ಯ ಸುಭದ್ರವಾಗಿ ಪ್ರತಿಷ್ಠಿತವಾಯಿತು" ಎಂದು ಕೀರ್ತಿನಾಥ ಕುರ್ತಕೋಟಿಯವರು ಈ ಗ್ರಂಥದ ಬಗ್ಗೆ ಹೇಳಿರುವರು.[೧೫]

ಪಂಜೆ ಮಂಗೇಶರಾಯರು ಸ್ವತಂತ್ರವಾದ ಕಾವ್ಯಗುಣವುಳ್ಳ ಭಾವಗೀತಗಳನ್ನು ಬರೆದಿರುವರು. 'ನಾಗರಹಾವು' 'ತೆಂಕಣ ಗಾಳಿಯಾಟ' ಇಂಥ ಪದ್ಯಗಳು ಹೃದ್ಯವಾಗಿದ್ದು ನವೋದಯಸ್ಫೂರ್ತಿಯಿಂದ ಕೂಡಿಕೊಂಡಿವೆ. ಶ್ರೀಯವರ ಭಾವಗೀತೆಗಳು ಪ್ರಕಟವಾಗುವುದಕ್ಕಿಂತ ಮೊದಲೇ ಪಂಜೆ ಮಂಗೇಶರಾಯರು ತಮ್ಮ ಕವನಗಳನ್ನು ಬರೆದಿರುವರು. ಪರೀಕ್ಷೆಯಲ್ಲಿ ಪರಾಜಿತನಾದ ವಿದ್ಯಾರ್ಥಿಯ ಪ್ರಲಾಪ (೧೯೦೧), ಕಬ್ಬಿಣದ ಬುದ್ಧಿವಾದ (೧೯೦೨) ಇಂಥ ಕವನಗಳು ಹೊಸ ವಿಚಾರಗಳಿಂದ ಕೂಡಿಕೊಂಡಿವೆ. ೨೦ನೆಯ ಶತಮಾನದ ಹೊಸತಿಲದಲ್ಲಿಯೇ ಅವರ ಕವನಗಳು ಹುಟ್ಟಿವೆ. ಈ ಕಾರಣದಿಂದಲೇ ಪಂಜೆಯವರು ಸ್ವತಂತ್ರ ಭಾವಗೀತೆ ಬರೆಯುವುದರಲ್ಲಿ ಮೊದಲಿಗರಾಗಿರುವರು. "ಬಹುಶಃ ಸ್ವತಂತ್ರ ಕವಿತೆಗಳನ್ನು ರಚಿಸಿದವರಲ್ಲಿ ಪಂಜೆಯವರೇ ಮೊದಲಿಗರೆಂದು ತೋರುತ್ತದೆ" ಎಂದು ರಂ. ಶ್ರೀ. ಮುಗಳಿ ಅಭಿಪ್ರಾಯವನ್ನು ವ್ಯಕ್ತಮಾಡಿರುವರು. ಗೋವಿಂದ ಪೈ ಮತ್ತು ಶಾಂತಕವಿಗಳು ಹೊಸ ಗೀತಗಳನ್ನು ಬರೆದು ಭಾವಗೀತೆಗಳಿಗೆ ಉತ್ತಮ ತಳಹದಿ ಹಾಕಿರುವರು. ಏನೇ ಆದರೂ ಸ್ವತಂತ್ರ ಭಾವಗೀತೆಗಳ ಬಗ್ಗೆ ವಿಚಾರಿಸುವಾಗ ಪಂಜೆ ಮಂಗೇಶರಾಯರನ್ನು ಮೊದಲ ಕವಿಗಳೆಂದು ಗಣಿಸಬಹುದಾಗಿ ತೋರುತ್ತದೆ.

ನಾಟಕ :

೧೯ನೆಯ ಶತಮಾನದ ಕೊನೆಯ ಭಾಗದಲ್ಲಿ ನಾಟಕರೂಪವು ಜನಪ್ರಿಯವಾಗತೊಡಗಿದೆ. ಇಂಗ್ಲೀಷ ಸಾಹಿತ್ಯದಿಂದ ಅನೇಕ ನಾಟಕಗಳು ಕನ್ನಡದಲ್ಲಿ ಭಾಷಾಂತರಗೊಂಡಿವೆ. ೧೮೮೫ರಲ್ಲಿ ಗುಂಡೋ ಕೃಷ್ಣ ಚುರಮುರಿಯವರು ಒಥೆಲೋ ನಾಟಕವನ್ನು 'ರಾಘವೇಂದ್ರರಾವ' ಎಂಬ ಹೆಸರಿನಲ್ಲಿ ಬರೆದು

---

೧೫. ನಡೆದುಬಂದ ದಾರಿ, ಸಂಪುಟ ೧, ಪುಟ ೪೦.

ಪ್ರಕಟಿಸಿರುವರು ಕೆರೂರು ವಾಸುದೇವಾಚಾರ್ಯರ 'ಸುರತನಗರದ ಶ್ರೇಷ್ಠಿ' (Merchant of Venice), 'ವಸಂತಯಾಮಿನಿ ಸ್ವಪ್ನಚಮತ್ಕಾರಗಳು' (Mid summer Night's Dream) ಇವು ಶೇಕ್ಸಪಿಯರ ನಾಟಕಗಳ ಅನುವಾದಗಳಾಗಿವೆ. ಧೋಂಡೋ ನರಸಿಂಹ ಮುಳಬಾಗಲ ಅವರು ವೇಣೀಸಂಹಾರ, ಮೃಚ್ಛಕಟಿಕ ಮುಂತಾದ ಸಂಸ್ಕೃತ ನಾಟಕಗಳನ್ನು ಭಾಷಾಂತರಿಸಿರುವರು. ಚುರಮುರಿ ಶೇಷಗಿರಿಯವರ 'ಕನ್ನಡ ಶಾಕುಂತಲ' ಕನ್ನಡ ನಾಟಕವೇ ಆಗಿದೆ. ಇವೆಲ್ಲ ನಾಟಕಗಳು ಭಾಷಾಂತರಗಳಾದರೂ, ಅವುಗಳಲ್ಲಿ ನಾಟಕಕಾರರ ಅದ್ಭುತ ಪ್ರತಿಭೆ ಪ್ರಕಟವಾಗಿದೆ. ಸ್ವತಂತ್ರ ಸಾಮಾಜಿಕ ನಾಟಕಗಳಿಗೆ ಪ್ರಚೋದಿಸುವ ಶಕ್ತಿ ಅವುಗಳಲ್ಲಿದೆ.

ಆರಂಭದ ನಾಟಕಗಳು ಮಹಾರಾಷ್ಟ್ರಕ್ಕೆ ಹೊಸ ನಾಟಕ ಬರೆಯಲು ಪ್ರಚೋದನೆ ಕೊಟ್ಟದ್ದು ಕನ್ನಡಿಗರಿಗೆ ಅಭಿಮಾನದ ಸಂಗತಿಯಾಗಿದೆ. ಚುರಮುರಿ ಅವರ 'ಕನ್ನಡ ಶಾಕುಂತಲ'ದ ಪ್ರಭಾವದಿಂದ ಮಹಾರಾಷ್ಟ್ರದಲ್ಲಿ ಒಂದು ನಾಟಕ ಪರಿಪಾಠವೇ ಆರಂಭವಾಗಿದೆ. ದಕ್ಷಿಣ ಕನ್ನಡದವರು ಸಾಂಗಲಿಯಲ್ಲಿ ಯಕ್ಷಗಾನ ಪ್ರಸಂಗ ತೋರಿಸಿದರ ಪರಿಣಾಮವಾಗಿ, ಅದರಲ್ಲಿಯ ಹಾಡುಗಳನ್ನೇ ಅನುಸರಿಸಿ ಸಾಂಗಲಿಯ ಶ್ರೀ ಭಾವೆಯವರು ಮಹಾರಾಷ್ಟ್ರ ನಾಟಕದ ಆರಂಭಮಾಡಿದರು. "ಹೀಗೆ ಅನುಕರಣಪ್ರಧಾನವಾದ ಕಾಲದಲ್ಲಿ ಕನ್ನಡಿಗರು ನೆರೆಯ ಭಾಷಾಬಂಧುಗಳಿಗೆ ಅನುಕರಣಯೋಗ್ಯವಾದ ಕಾರ್ಯವನ್ನು ಮಾಡಿದುದು ತುಂಬ ಸ್ತುತ್ಯ-ವಾಗಿದೆ" ಎಂದು ರಂ. ಶ್ರೀ. ಮುಗಳಿ ಕನ್ನಡಿಗರ ಈ ನಾಟಕಗಳನ್ನು ಹೊಗಳಿರುವರು.[೧೬]

ನಾಟಕಗಳಲ್ಲಿ ಸ್ವತಂತ್ರನಿರ್ಮಿತಿ ೧೮೮೭ರಲ್ಲಿಯೇ ಆದುದು ಅಭಿಮಾನದ ಸಂಗತಿಯೇ. ಕರ್ಕಿಯ ಸೂರಿ ವೆಂಕಟರಮಣಶಾಸ್ತ್ರಿಗಳು 'ಇಗ್ಗಪ್ಪ ಹೆಗಡೆಯ ವಿವಾಹಪ್ರಹಸನ' ಎಂಬ ಸ್ವತಂತ್ರ ನಾಟಕವನ್ನು ಹವ್ಯಕದೇಸಿಭಾಷೆಯಲ್ಲಿ ಬರೆದು ೧೮೮೭ರಲ್ಲಿ ಮುಂಬೈಯಲ್ಲಿ ಪ್ರಕಟಿಸಿರುವರು. ಇದು ಹವ್ಯಕದೇಸಿ ಭಾಷೆಯಲ್ಲಿ ಇದ್ದುದರಿಂದ ವಿಶೇಷ ಪ್ರಚಾರವನ್ನು ಪಡೆಯಲಿಲ್ಲ. ಆದರೆ ಉಳಿ-ದೆಲ್ಲ ಸಾಹಿತ್ಯದ ಪ್ರಕಾರಗಳಿಗಿಂತ ನಾಟಕವೇ ಈ ದೃಷ್ಟಿಯಿಂದ ಮೊದಲಾದದ್ದು ಅತ್ಯಂತ ಆಶ್ಚರ್ಯದ ಸಂಗತಿಯೇ !

ಹುಯಿಲಗೋಳ ನಾರಾಯಣರಾಯರು ೧೯೧೯ಕ್ಕಿಂತ ಮೊದಲು ೬-೭ ಐತಿಹಾಸಿಕ ನಾಟಕಗಳನ್ನು ಬರೆದಿರುವರು. ಆದರೆ ಸ್ವತಂತ್ರ ಸಾಮಾಜಿಕ ನಾಟಕಗಳನ್ನು ಅವರು ಬರೆದದ್ದು ೧೯೧೯ರಿಂದ. ಅವರ 'ಸ್ತ್ರೀಧರ್ಮರಹಸ್ಯ'ವು ೧೯೧೯ರಲ್ಲಿ ಪ್ರಕಟವಾಗಿದೆ. 'ಶಿಕ್ಷಣಸಂಭ್ರಮ'ವು ೧೯೨೦ರಲ್ಲಿ ಪ್ರಕಟವಾಗಿದೆ. ಕನ್ನಡದಲ್ಲಿ ಇವೇ ಪ್ರಪ್ರಥಮ ಸ್ವತಂತ್ರ ಸಾಮಾಜಿಕ ನಾಟಕಗಳು ಎಂದು

೧೬. ಸಾಹಿತ್ಯೋಪಾಸನೆ, ಪುಟ ೮೨.

ಹೇಳಬಹುದು. ಈ ನಾಟಕಗಳು ರಂಗಭೂಮಿಯ ಮೇಲೆ ಬರುತ್ತಿದ್ದುದರಿಂದ ಬಹುಬೇಗ ಪ್ರಚಾರಗೊಂಡು ಜನತೆಯ ಮೇಲೆ ಪರಿಣಾಮವನ್ನುಂಟು ಮಾಡಿದವು. ಇದೇ ಸಮಯಕ್ಕೆ ಟಿ. ಪಿ. ಕೈಲಾಸಂ ಅವರು 'ಟೊಳ್ಳು-ಗಟ್ಟಿ' ಎಂಬ ನಾಟಕವನ್ನು ಬರೆದಿರುವರು. ೧೯೨೦ರಿಂದ ಮುಂದೆ ಕೈಲಾಸಂ ಮತ್ತು ಶ್ರೀರಂಗ ಅವರು ಕನ್ನಡ ನಾಟ್ಯರಂಗದಲ್ಲಿ ಅದ್ಭುತ ಕ್ರಾಂತಿಯನ್ನು ಮಾಡಿರುವರು.

ಮೇಲಿನ ವಿವೇಚನೆಯಿಂದ ಸೂರಿ ವೆಂಕಟರಮಣಶಾಸ್ತ್ರಿಗಳಿಗಿಂತ ಹುಯಿಲಗೋಳ ನಾರಾಯಣರಾವ ಮತ್ತು ಕೈಲಾಸಂ ಅವರನ್ನು ಸ್ವತಂತ್ರ ನಾಟಕಕಾರರಲ್ಲಿ ಆದ್ಯರೆಂದು ಹೇಳುವುದು ವಿಹಿತವೆಂದು ತೋರುತ್ತದೆ.

ಲಲಿತ ಪ್ರಬಂಧ :

ಹೊಸ ರೀತಿಯ ಲಲಿತ ಪ್ರಬಂಧವು ಮೊದಲು ಹೆಚ್ಚಾಗಿ ಪತ್ರಿಕೆಗಳಲ್ಲಿ ಕಂಡಿದೆ. ೨೦ನೆಯ ಶತಮಾನದ ಆದಿಯಲ್ಲಿ ಶುಭೋದಯ, ಸಚಿತ್ರಭಾರತ, ಕಂಠೀರವ, ಸುವಾಸಿನಿ ಮುಂತಾದ ಪತ್ರಿಕೆಗಳಲ್ಲಿ ಲಲಿತಪ್ರಬಂಧಗಳ ಲಕ್ಷಣಗಳಿಂದ ಕೂಡಿದ ಲೇಖನಗಳು ಪ್ರಕಟವಾಗಿವೆ. ಈ ದೃಷ್ಟಿಯಿಂದ ಈ ಸಾಹಿತ್ಯ ರೂಪವನ್ನು ವಿವೇಚಿಸಿದರೆ, ಇದು ೨೦ನೆಯ ಶತಮಾನದ ಆದಿಯಲ್ಲೇ ಆರಂಭವಾಯಿತೆಂದು ಹೇಳಬಹುದು. ಕೆರೂರು ವಾಸುದೇವಾಚಾರ್ಯ, ಕಾವ್ಯಾನಂದ ಪುಣೇಕರ ಮುಂತಾದವರು ಪತ್ರಿಕೆಯಲ್ಲಿಯ ಲೇಖನಗಳಿಗಾಗಿಯೇ ಬಹಳ ಪ್ರಸಿದ್ಧಿಯನ್ನು ಪಡೆದುದು ಕಂಡುಬಂದಿದೆ.

'ಕನ್ನಡದಲ್ಲಿ ಪ್ರಬಂಧಗಳ ಅವತಾರ' ಎಂಬ ಲೇಖನವನ್ನು ಗೋವಿಂದ ಪೈ ಅವರು ಬರೆಯುತ್ತ ಕೆಲವು ಮಹತ್ವದ ಮಾತುಗಳನ್ನು ತಿಳಿಸಿರುವರು. "ಕನ್ನಡದಲ್ಲಿ ಪ್ರಬಂಧವು ಯಾವಂದು ಮೊದಲಾಯಿತೆಂದು ವಿಚಾರಿಸಿದರೆ, ನನಗಾದರೋ ಮಂಗಳೂರಿನ 'ಸುವಾಸಿನಿ' ಎಂಬ ಮಾಸಪತ್ರಿಕೆಯ ೧೯೦೦ನೆಯ ಇಸವಿಯ ಪ್ರಥಮ ಸಂಪುಟದ ಯಾವಂದು ಸಂಚಿಕೆಯಲ್ಲಿ ಪ್ರಕಟವಾದ ಶ್ರೀ ನಂದಳಿಕೆ ಲಕ್ಷ್ಮೀನಾರಣಪ್ಪನವರ 'ಜೋಗುಳ' ಎಂಬ ಚಲೋ ಲೇಖನದ ನೆನಪಾಗುತ್ತದೆ."[೧೭] ಗೋವಿಂದ ಪೈ ಅವರು ನಂತರ ಕೆಲವು ಲೇಖನಗಳನ್ನು ಹೆಸರಿಸಿರುವರು. ೧೯೦೨ರಲ್ಲಿ ಅದೇ ಪತ್ರಿಕೆಯಲ್ಲಿ ಎಂ. ಎನ್. ಶ್ರೀನಿವಾಸರಾಯರ 'ಭ್ರಮರ' ಮತ್ತು 'ಮೋಡ' ಎಂಬ ಲಲಿತಪ್ರಬಂಧ ಪ್ರಕಟವಾಗಿವೆ. ಮುಂದೆ ಸು. ೧೯೦೪ರ 'ಸತ್ಯದೀಪಿಕೆ' ಎಂಬ ಪತ್ರಿಕೆಯಲ್ಲಿ ಪಂಜೆ ಮಂಗೇಶರಾಯರ 'ಹಲ್ಲಿ' ಮತ್ತು 'ಬಂದಣಿಗೆ' ಎಂಬ ಮನೋಹರವಾದ ಲಲಿತಪ್ರಬಂಧ ಪ್ರಕಟವಾಗಿವೆ.

---

೧೭. ಕನ್ನಡನುಡಿ, ಸಂಪುಟ ೧೪, ಸಂಚಿಕೆ ೩, ಪುಟ ೭೦.

೧೯೧೬ರಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರು 'ಶಾಂತಿ' ಎಂಬ ಉತ್ತಮ ಲಲಿತಪ್ರಬಂಧವನ್ನೇ ಬರೆದಿರುವರು.

೧೯೨೭ರಲ್ಲಿ ವಿ. ಸೀತಾರಾಮಯ್ಯನವರ 'ಪಂಪಾಯಾತ್ರೆ' ಪುಸ್ತಕವು ಪ್ರಕಟವಾಗಿದೆ. ಇದು ಪ್ರವಾಸಕಥನದ ಸುದೀರ್ಘವಾದ ಪ್ರಬಂಧವಾದರೂ ಇದರಲ್ಲಿ ಲಲಿತಪ್ರಬಂಧದ ಲಕ್ಷಣಗಳಿವೆ; ಇದು ಶ್ರೇಷ್ಠ ಸತ್ವವುಳ್ಳ ಲಲಿತ-ಪ್ರಬಂಧವಾಗಿದೆ. 'ಪಂಪಾಯಾತ್ರೆ'ಯೇ ಲಲಿತಪ್ರಬಂಧದ ಮೊದಲನೆಯ ಗ್ರಂಥವೆಂದು ಹೇಳಬಹುದು.

೧೯೩೧ರಲ್ಲಿ ಲಲಿತಪ್ರಬಂಧಗಳಿಗೆ ನಿಶ್ಚಿತಸ್ವರೂಪವು ದೊರೆತಿದೆ. ಪುಸ್ತಕ ರೂಪದಲ್ಲಿ ೧೯೩೧ರಲ್ಲಿ ಧಾರವಾಡ ಗೆಳೆಯರ ಗುಂಪಿನ 'ಹರಟೆಗಳು', ಎಂ. ಜಿ. ವೆಂಕಟೇಶಯ್ಯನವರ 'ಪುಲ್ಲಯ್ಯನ ಪ್ರಬಂಧಗಳು', ಪು. ತಿ. ನರಸಿಂಹಾಚಾರ್ಯ ಅವರ 'ರಾಮಾಚಾರಿಯ ನೆನಪು' ಹೀಗೆ ಮೂರು ಗ್ರಂಥಗಳು ಪ್ರಕಟವಾಗಿವೆ.

೧೯೦೦ರಲ್ಲಿ ಆರಂಭವಾದ ಲಲಿತಪ್ರಬಂಧ ೧೯೩೧ರಲ್ಲಿ ಸಂಪೂರ್ಣ ಬೆಳ-ವಣಿಗೆಯನ್ನು ಪಡೆದಿದೆ. ೧೯೨೭ ಮತ್ತು ೧೯೩೧ರಲ್ಲಿ ಪ್ರಕಟವಾದ ಗ್ರಂಥಗಳು ಲಲಿತ ಪ್ರಬಂಧದ ಮೊದಲಿನ ಗ್ರಂಥಗಳೆಂದು ನಾವು ಹೆಸರಿಸಬಹುದು. ಉಳಿದೆಲ್ಲ ಸಾಹಿತ್ಯಪ್ರಕಾರಗಳು ಭಾಷಾಂತರಗಳಿಂದಲೇ ಆರಂಭವಾಗಿವೆ; ಆದರೆ ಲಲಿತಪ್ರಬಂಧ ಮಾತ್ರ ಮೊದಲಿನಿಂದಲೂ ಸ್ವತಂತ್ರವಾಗಿಯೆ ಉಗಮವಾಗಿದೆ ಎಂಬುದು ವಿಶೇಷವಾಗಿದೆ.

* * * *

ವಿವಿಧ ಸಾಹಿತ್ಯಪ್ರಕಾರಗಳ ಆರಂಭದ ವಿವರಗಳನ್ನು ವಿವೇಚಿಸಿದಾಗ, ಒಂದೆರಡು ಮಾತುಗಳು ಸ್ಪಷ್ಟವಾಗಿ ತಲೆದೋರುವವು. ೧೮೮೦ರಿಂದ ೧೯೨೦ರ ವರೆಗೆ ಹೊಸ ಸಾಹಿತ್ಯದ ಉಗಮವು ವಿವಿಧ ರೀತಿಗಳಲ್ಲಿ ಕಂಡುಬಂದಿದೆ. ಸುಮಾರು ಈ ನಾಲ್ವತ್ತು ವರುಷಗಳನ್ನು ಹೊಸ ಸಾಹಿತ್ಯದ ಆರಂಭದ ಕಾಲವೆಂದು ನಾವು ಗ್ರಹಿಸಬಹುದು. ೧೯೨೦ರಿಂದ ಮುಂದೆ ಹೊಸ ಸಾಹಿತ್ಯವು ತನ್ನ ನಿಶ್ಚಿತ ಮಾರ್ಗವನ್ನು ಕಂಡುಕೊಂಡು ಸತ್ವಯುತವಾಗಿ ಬೆಳೆಯುತ್ತ ನಡೆದಿದೆ. ಹೊಸ ಸಾಹಿತ್ಯರೂಪಗಳಿಗೆ ದಾರಿಮಾಡಿಕೊಟ್ಟವರಲ್ಲಿ ದಕ್ಷಿಣ ಕನ್ನಡದ ಬರಹಗಾರರು ಅಗ್ರಗಣ್ಯರಾಗಿದ್ದಾರೆಂಬುದೂ ಈ ವಿವೇಚನೆಯಿಂದ ತಿಳಿದುಬರುತ್ತದೆ. ಕೊನೆಯದಾಗಿ ನಮ್ಮ ನಾಟಕಗಳು ನೆರೆಹೊರೆಯವರಿಗೆ ಸ್ಫೂರ್ತಿಯನ್ನು ಕೊಟ್ಟಿವೆ; ಮತ್ತು ಲಲಿತಪ್ರಬಂಧಗಳು ಸ್ವತಂತ್ರವಾಗಿ ಅವತರಿಸಿವೆ ಎಂಬ ಹೆಮ್ಮೆಯ ಮಾತು ಮನನೀಯವಾಗಿದೆ.

ಮೈಸೂರು ರಾಜ್ಯದ ಪಟ್ಟಣಗಳು


ಶ್ರೀಮತಿ ಶಾರದಾ ಹುಲ್ಲೂರ

ಸುಮಾರು ೧೯೨ ಸಾವಿರ ಚದರ ಕಿಲೋಮೀಟರ ವಿಸ್ತಾರವಾದ ಮೈಸೂರು ರಾಜ್ಯದಲ್ಲಿ ಒಟ್ಟು ೨೧೪ ಪಟ್ಟಣಗಳಿವೆ. ಮೈಸೂರು ರಾಜ್ಯದ ೨.೩೬ ಕೋಟಿ ಜನರಲ್ಲಿ ಸುಮಾರು ೦.೫೩ ಕೋಟಿ ಜನರು ನಗರಗಳಲ್ಲಿ ವಾಸಿಸುತ್ತಿದ್ದಾರೆ. ಅಂದರೆ ಜನಸಂಖ್ಯೆಯು ಸುಮಾರು ಪ್ರತಿಶತ ೨೨ರಷ್ಟು ಜನರು ಪಟ್ಟಣಿಗರಾಗಿ-ದ್ದಾರೆ. ಇದನ್ನು ನಮ್ಮ ಇಡೀ ದೇಶದೊಡನೆ ಹೋಲಿಸಿದಾಗ ಸುಮಾರು ಪ್ರತಿಶತ ೪ರಷ್ಟು ಹೆಚ್ಚಾಗುತ್ತದೆ. ಅದರಂತೆಯೇ ನೆರೆಹೊರೆಯ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ಕೇರಳ ರಾಜ್ಯಗಳಿಗಿಂತ ಮೈಸೂರಿನ ಪ್ರಮಾಣವು ಹೆಚ್ಚಾಗಿರುವದು. ಆದರೆ ಮಹಾರಾಷ್ಟ್ರ ಮತ್ತು ಮದ್ರಾಸ ರಾಜ್ಯಗಳ ನಗರಗಳಲ್ಲಿ ವಾಸಿಸುವವರ ಪ್ರಮಾಣವು ಮೈಸೂರಿಗಿಂತಲೂ ಹೆಚ್ಚಾಗಿರುವದು. ಆದುದರಿಂದ ಮೈಸೂರು ರಾಜ್ಯದ ಸ್ಥಾನ ಮಧ್ಯದಲ್ಲಿ ಬರುತ್ತದೆ. (ಆಕೃತಿ–೧) ಮೈಸೂರಿನ ಸ್ಥಾನದ ಸ್ಥೂಲಕಲ್ಪನೆಯು ಕೆಳಗೆ ತೋರಿಸಿದ ಅಂಕಿಸಂಖ್ಯೆಗಳಿಂದ ಕಂಡುಬರುತ್ತದೆ.

ಅ.ಸಂ.	ರಾಜ್ಯದ ಹೆಸರು	ಪಟ್ಟಣಿಗರ ಪ್ರತಿಶತ ಪ್ರಮಾಣ*
೧	ಮೈಸೂರು	೨೨·೦
೨	ಆಂಧ್ರ ಪ್ರದೇಶ	೧೭ ೫
೩	ಮಹಾರಾಷ್ಟ್ರ	೨೭ ೫
೪	ಮದ್ರಾಸ	೨೬-೫
೫	ಕೇರಳ	೧೪·೭
	ಭಾರತ	೧೮.೦

ಎಲ್ಲ ಊರುಗಳನ್ನೂ ಪಟ್ಟಣ ಅಥವಾ ನಗರಗಳೆಂದು ಕರೆಯಲು ಬರು-ವದಿಲ್ಲ. ಅದೇ ರೀತಿ ಪಟ್ಟಣಗಳ ವ್ಯಾಖ್ಯೆಯು ಎಲ್ಲ ಕಾಲಗಳಲ್ಲಿಯೂ ಒಂದೇ ರೀತಿಯಾಗಿರುವುದಿಲ್ಲ. ಯಾವುದೇ ಒಂದು ಸ್ಥಳವು ಪಟ್ಟಣವಾಗಬೇಕಾದರೆ ಅದು ಕೆಲವೊಂದು ನಿರ್ದಿಷ್ಟ ಸಂಗತಿಗಳಿಂದ ಕೂಡಿರಬೇಕಾಗುತ್ತದೆ. ೧೯೬೧ರ ಜನಗಣತಿಯಲ್ಲಿ ಭಾರತದ ಸಂವಿಧಾನಕ್ಕೆ ಹೊಂದಿಕೆಯಾಗುವಂತೆ ಪಟ್ಟಣಗಳ

* ಮೇಲಿನ ಅಂಕಿ–ಸಂಖ್ಯೆಗಳನ್ನು ೧೯೬೧ನೆಯ ಜನಗಣತಿಯ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.



ಆಕೃತಿ-೧

ವ್ಯಾಖ್ಯೆಯನ್ನು ಕೊಡಲಾಗಿದೆ. ಅದನ್ನು ಆಧಾರವಾಗಿಟ್ಟುಕೊಂಡೇ ಮೈಸೂರಿನ ಊರುಗಳನ್ನು ಗ್ರಾಮ ಮತ್ತು ನಗರಗಳೆಂದು ವಿಂಗಡಣೆ ಮಾಡಿದ್ದಾರೆ. ಆ ವ್ಯಾಖ್ಯೆಯ ಪ್ರಕಾರ ಪಟ್ಟಣಗಳು ಈ ಕೆಳಗಿನ ಅರ್ಹತೆಗಳನ್ನು ಹೊಂದಿರಬೇಕು:

(೧) ಮ್ಯುನಿಸಿಪಾಲಿಟಿ ಆಡಳಿತವಿದ್ದ ಮತ್ತು ಕಾಂಟೋನಮೆಂಟು-ಗಳಿರುವ ಊರುಗಳು ಅದಲ್ಲದೆ ಕೆಲವೊಂದು ಲೋಕಲ್ ಬೋರ್ಡ್ ಆಡಳಿತ-ವಿರುವ ಊರುಗಳು ನಗರಗಳೆನಿಸುವವು.

(೨) ಇವುಗಳನ್ನು ಹೊರತುಪಡಿಸಿ ಉಳಿದ ಸ್ಥಳಗಳಲ್ಲಿ ಜನಸಂಖ್ಯೆಯು ೫೦೦೦ಕ್ಕಿಂತಲೂ ಹೆಚ್ಚು ಇರುವ ಮತ್ತು ಜನಸಾಂದ್ರತೆಯು ಪ್ರತಿ ಚದರ ಮೈಲಿಗೆ ಒಂದು ಸಾವಿರಕ್ಕಿಂತಲೂ ಹೆಚ್ಚು ಇರುವ ಸ್ಥಳಗಳನ್ನು ಪಟ್ಟಣಗಳೆಂದು ಪರಿಗಣಿಸಲಾಗುವದು.

(೩) ಒಟ್ಟು ಜನಸಂಖ್ಯೆಯು ೩/೪ ರಷ್ಟು ಪ್ರೌಢ ಜನರು ಒಕ್ಕಲುತನವಲ್ಲದೆ ಬೇರೆ ಉದ್ಯೋಗ ಮಾಡುತ್ತಿದ್ದರೆ ಅಂತಹವುಗಳನ್ನೂ ಪಟ್ಟಣಗಳೆಂದು ಕರೆಯಲಾಗುವುದು.

ಇವೆಲ್ಲ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳ ಆಧಾರದ ಮೇಲಿಂದ ೧೯೬೧ರಲ್ಲಿ ಮೈಸೂರಿನಲ್ಲಿ ಒಟ್ಟು ೨೧೪ ಪಟ್ಟಣಗಳನ್ನು ಗುರುತಿಸಲಾಗಿದೆ.


ಮೈಸೂರು ರಾಜ್ಯದ ಪಟ್ಟಣಗಳು :

ರಾಜ್ಯಗಳ ಪುನರ್ಘಟನೆಯು ನಿಯಮದ ಪ್ರಕಾರ ಹಳೆಯ ಮೈಸೂರು, ಮುಂಬಯಿ ರಾಜ್ಯದ ವಿಜಾಪುರ, ಧಾರವಾಡ, ಬೆಳಗಾಂವಿ ಮತ್ತು ಉತ್ತರ ಕನ್ನಡ ಜಿಲ್ಹೆಗಳು, ಮದ್ರಾಸ ರಾಜ್ಯದ ಬಳ್ಳಾರಿ, ದಕ್ಷಿಣ ಕನ್ನಡ ಜಿಲ್ಹೆಗಳು, ಹೈದಾರಾಬಾದ ರಾಜ್ಯದ ಬೀದರ, ಗುಲಬುರ್ಗಾ, ರಾಯಚೂರ ಜಿಲ್ಹೆಗಳು ಮತ್ತು ಕೊಡಗು ರಾಜ್ಯ ಇವೆಲ್ಲ ಕೂಡಿ ನವಮೈಸೂರು ರಾಜ್ಯದ ಉದಯವಾಯಿತು.

ಈ ನವಮೈಸೂರ ರಾಜ್ಯದ ಪಟ್ಟಣಗಳನ್ನು ತುಲನಾತ್ಮಕವಾಗಿ ಪರಿಶೀಲಿಸಿದಾಗ ಕೆಳಗಿನ ಸಂಗತಿಗಳು ಕಂಡುಬರುತ್ತವೆ :

(೧) ಒಟ್ಟು ಪಟ್ಟಣಗಳ ಅರ್ಧದಷ್ಟು ಅಂದರೆ ೧೧೦ ಪಟ್ಟಣಗಳು ಹಳೆಯ ಮೈಸೂರು ಪ್ರದೇಶದಲ್ಲಿ ಇರುತ್ತವೆ. ನಗರಗಳು ಯಾವುದೇ ಪ್ರದೇಶದ ಸರ್ವತೋಮುಖವಾದ ಬೆಳವಣಿಗೆಯನ್ನು ತೋರಿಸಬಲ್ಲ ಅಳತೆಗೋಲು ಎಂಬುದನ್ನು ನೆನೆದಾಗ, ಈ ಪ್ರದೇಶವು ಉಳಿದೆಲ್ಲ ಪ್ರದೇಶಗಳಿಗಿಂತ ಆರ್ಥಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ಮುಂದುವರಿದಿದೆಯೆನಿಸುತ್ತದೆ.

(೨) ಮುಂಬಯಿ ಕರ್ನಾಟಕದಲ್ಲಿ ಒಟ್ಟು ೫೨ ಪಟ್ಟಣಗಳಿವೆ. ಹೈದರಾಬಾದ ಕರ್ನಾಟಕದಲ್ಲಿ ೨೫, ಮದ್ರಾಸ ಕರ್ನಾಟಕದಲ್ಲಿ ೧೭ ಮತ್ತು ಕೊಡಗಿನಲ್ಲಿ ೧೦ ಪಟ್ಟಣಗಳಿವೆ. (ಆಕೃತಿ—೨)


ಮೈಸೂರು ರಾಜ್ಯ
ಮುಖ್ಯ ಪಟ್ಟಣಗಳು
ಬೀದರ
ಕಲಬುರ್ಗಿ
ವಿಜಾಪೂರ
ಬಾಗಲಕೋಟೆ
ರಾಯಚೂರು
ಜನಸಂಖ್ಯೆ
12,00,000
625,000
2,50,000
1,00,000
ಬೆಳಗಾಂವಿ
ಗದಗ-ಬೆಟಗೇರಿ
ಹೊಸಪೇಟೆ
ಬಳ್ಳಾರಿ
ಗೋವಾ
ಹುಬ್ಬಳ್ಳಿ-ಧಾರವಾಡ
ಕಾರವಾರ
ಹರಿಹರ
ದಾವಣಗೇರಿ
ಚಿತ್ರದುರ್ಗ
ಶಿವಮೊಗ್ಗಾ
ಭದ್ರಾವತಿ
ಅ
ರ
ಬ್ಬೀ
ಸ
ಮು
ದ್ರ
ತುಮಕೂರ
ಕೋಲಾರ
ಚಿಕ್ಕಮಂಗಳೂರು
ಹಾಸನ
ಬೆಂಗಳೂರು
ಮಂಗಳೂರು
ಮಡಿಕೇರಿ
ಮಂಡ್ಯ
ಮೈಸೂರು
20 0 20 60 100
ಕಿಲೋಮೀಟರಗಳು
ಆಕೃತಿ-3

ಆಕೃತಿ-೨

ಮೈಸೂರು ರಾಜ್ಯದಲ್ಲಿರುವ ೨೧೪ ಪಟ್ಟಣಗಳನ್ನು ಅವುಗಳಲ್ಲಿರುವ ಜನಸಂಖ್ಯೆಗನುಗಣವಾಗಿ ಆರು ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಅವು: *

ವರ್ಗಗಳು	ಜನಸಂಖ್ಯೆ	ಪಟ್ಟಣಗಳ ಸಂಖ್ಯೆ	ಜನಸಾಂದ್ರತೆ (ಪ್ರತಿ ಚದರ ಮೈಲಿ)
೧ನೆಯ ವರ್ಗ	೧೦೦,೦೦೦ ಮೇಲೆ	೬	೭೯೦೨
೨ನೆಯ ವರ್ಗ	೫೦,೦೦೦—೯೯,೯೯೯	೯	೯೪೩೭
೩ನೆಯ ವರ್ಗ	೨೦,೦೦೦—೪೯,೯೯೯	೩೦	೫೧೩೭
೪ನೆಯ ವರ್ಗ	೧೦,೦೦೦—೧೯,೯೯೯	೭೭	೨೦೯೦
೫ನೆಯ ವರ್ಗ	೫೦೦೦ — ೯,೯೯೯	೫೭	೨೯೭೧
೬ನೆಯ ವರ್ಗ	೫೦೦೦ಕ್ಕಿಂತ ಕಡಿಮೆ	೩೫	೩೬೫೬


ಮೈಸೂರು ರಾಜ್ಯದಲ್ಲಿ ಒಂದು ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆಯುಳ್ಳ ಪಟ್ಟಣಗಳು ಕೇವಲ ಆರು ಮಾತ್ರವಿದ್ದರೂ, ಅವುಗಳಲ್ಲಿ ಇರುವ ಜನರ ಪ್ರಮಾಣವು ಒಟ್ಟು ಪಟ್ಟಣಿಗರ ೪೧% ದಷ್ಟು ಇರುತ್ತದೆ. ಹೀಗೆ ಕೆಲವೇ ಪಟ್ಟಣಗಳಲ್ಲಿ ಬಹುಸಂಖ್ಯಾಕ ಜನರು ಕೇಂದ್ರೀಕೃತವಾಗಿರುವುದು ಕಂಡು ಬರುತ್ತದೆ. ಬೆಂಗಳೂರು, ಮೈಸೂರು, ಹುಬ್ಬಳ್ಳಿ–ಧಾರವಾಡ, ಮಂಗಳೂರು, ಕೋಲಾರ ಮತ್ತು ಬೆಳಗಾವಿಗಳು ರಾಜ್ಯದ ಅತೀ ದೊಡ್ಡ ಪಟ್ಟಣಗಳಾಗಿವೆ. ಕೊನೆಯ ವರ್ಗದ ೩೫ ಪಟ್ಟಣಗಳಲ್ಲಿ ಕೇವಲ ೨% ದಷ್ಟು ಜನರು ವಾಸಿಸುತ್ತಾರೆ. ಈ ಪಟ್ಟಣಗಳು ಆರ್ಥಿಕ ದೃಷ್ಟಿಯಿಂದ ಹಿಂದುಳಿದವುಗಳಾಗಿವೆ. ಅಧಿಕ ಸಂಖ್ಯೆಯಲ್ಲಿದ್ದ ೪ನೆಯ ವರ್ಗದ ಪಟ್ಟಣಗಳು ಮಧ್ಯಮ ವರ್ಗದವುಗಳಾಗಿವೆ. (ಆಕೃತಿ—೩)

ಕೆಳಗಿನ ಕಾಲಮುಗಳಲ್ಲಿ ಪಟ್ಟಣಸಂಖ್ಯೆ, ಅವುಗಳ ಪ್ರತಿಶತ ಪ್ರಮಾಣವನ್ನು ಕೊಟ್ಟಿರುವದರಿಂದ ರಾಜ್ಯದ ಪಟ್ಟಣಗಳ ಬಗ್ಗೆ ಸ್ಪಷ್ಟವಾದ ಕಲ್ಪನೆಯಾಗಲು ಅವಕಾಶವಾಗುತ್ತದೆ.†

ರಾಜ್ಯದಲ್ಲಿ ಜನಸಂಖ್ಯೆ ಮತ್ತು ಕ್ಷೇತ್ರದ ದೃಷ್ಟಿಯಿಂದ ಅತೀ ದೊಡ್ಡದಾದ ನಗರವು ರಾಜಧಾನಿಯಾದ ಬೆಂಗಳೂರಾಗಿದೆ. ೧೯೬೧ರಲ್ಲಿ ಅದರ ಜನಸಂಖ್ಯೆ

* ಮೈಸೂರು ರಾಜ್ಯದ ೧೯೬೧ ಜನಗಣತಿಯ ಹೊತ್ತಿಗೆಯ ಆಧಾರದಿಂದ ಈ ವರ್ಗೀಕರಣವನ್ನು ಮಾಡಲಾಗಿದೆ.

† ಮೈಸೂರು ರಾಜ್ಯದ ೧೯೬೧ ರ ಜನಗಣತಿಯ ಪುಸ್ತಕದಿಂದ ಈ ಅಂಕಿಗಳನ್ನು ಆಯ್ದುಕೊಳ್ಳಲಾಗಿದೆ.



ಆಕೃತಿ-೩

ವರ್ಗಗಳು	ಪಟ್ಟಣಗಳ ಸಂಖ್ಯೆ	%	ಜನಸಂಖ್ಯೆ	%	ಕ್ಷೇತ್ರ (ಚದರ ಕಿ ಮೀ.)	%
೧ನೆಯ ವರ್ಗ	೬	೨.೮	೨,೧೭೩,೧೬೯	೪೧	೭೧೨	೨೩
೨ನೆಯ ವರ್ಗ	೯	೪.೨	೬೬೨,೪೪೫	೧೩	೧೮೨	೬
೩ನೆಯ ವರ್ಗ	೩೦	೧೪.೦	೮೪೦,೧೩೯	೧೬	೪೨೪	೧೪
೪ನೆಯ ವರ್ಗ	೭೭	೩೬.೦	೧,೦೪೧,೨೮೪	೨೦	೧೨೯೧	೪೨
೫ನೆಯ ವರ್ಗ	೫೭	೨೬.೬	೪೨೪,೧೧೮	೮	೩೭೦	೧೨
೬ನೆಯ ವರ್ಗ	೩೫	೧೬.೪	೧೨೫,೩೩೮	೨	೮೯	೩
ಒಟ್ಟು	೨೧೪	೧೦೦	೫,೨೨೬,೪೯೩	೧೦೦	೩೦೬೮	೧೦೦

ಸುಮಾರು ೧೨ ಲಕ್ಷ. ಕ್ಷೇತ್ರ ೫೦೧·೨೧ ಚದರ ಕಿಲೋಮೀಟರ. ರಾಜ್ಯದ ಅತಿ ಚಿಕ್ಕದಾದ ಪಟ್ಟಣವು ಕೊಡಗುಜಿಲ್ಲೆಯ ಸುಂಟೀಕೊಪ್ಪವಾಗಿದೆ. ಇಲ್ಲಿ ಕೇವಲ ೧೩೦೦ ಜನರು ೦.೧೬ ಚ. ಕಿ.ಮೀಟರ ಕ್ಷೇತ್ರದಲ್ಲಿ ವಾಸಿಸುತ್ತಾರೆ. ಇವುಗಳ ಮೇಲಿಂದ ರಾಜ್ಯದ ಪಟ್ಟಣಗಳ ಕ್ಷೇತ್ರ ಮತ್ತು ಜನಸಂಖ್ಯೆಯಲ್ಲಿ ಇರುವ ಮಹದಂತರವು ತಿಳಿಯುವದು.

ಪಟ್ಟಣಗಳ ವರ್ಗೀಕರಣ :

ಬೇರೆ ಬೇರೆ ಪಟ್ಟಣಗಳನ್ನು ಅವುಗಳ ಮುಖ್ಯವಾದ ಗುಣಧರ್ಮಗಳ ಮೇಲಿಂದ ಬೇರೆ ಬೇರೆ ರೀತಿಯಾಗಿ ವರ್ಗೀಕರಿಸಲು ಬರುತ್ತದೆ. ವರ್ಗೀಕರಣದ ವಿಧಾನವು ಬೇರೆ ಬೇರೆಯಾದಂತೆ ಅನೇಕ ಬಗೆಯ ಪಟ್ಟಣಗಳು ಗೋಚರವಾಗುವವು. ಇದಲ್ಲದೆ ಒಂದೇ ಪಟ್ಟಣದಲ್ಲಿ ಮಹತ್ವದ ಸಂಗತಿಗಳು ಅಧಿಕ ಸಂಖ್ಯೆಯಲ್ಲಿ ಇದ್ದಾಗ ಆ ಪಟ್ಟಣವು ಹಲವಾರು ವರ್ಗಗಳಲ್ಲಿಯೂ ಬರಬಹುದು. ಹೀಗಾಗಿ ಪಟ್ಟಣಗಳನ್ನು ವರ್ಗೀಕರಿಸುವದು ತುಂಬಾ ಕಠಿಣವಾದ ಕಾರ್ಯವಾಗಿದೆ.

ಪಟ್ಟಣಗಳ ಹುಟ್ಟು, ಬೆಳವಣಿಗೆ ಮತ್ತು ಅಲ್ಲಿರುವ ಮಹತ್ವದ ಸಂಗತಿಗಳನ್ನು ಅವಲಂಬಿಸಿ ವರ್ಗೀಕರಣ ಮಾಡುವ ಪರಿಪಾಠವಿದೆ. ಇದರಲ್ಲಿ ಮುಖ್ಯವಾಗಿ—

(೧) **ಐತಿಹಾಸಿಕ ಪಟ್ಟಣಗಳು :** ಮೈಸೂರು, ವಿಜಾಪುರ, ಶ್ರೀರಂಗಪಟ್ಟಣ ಮುಂ.

(೨) **ಶೈಕ್ಷಣಿಕ ನಗರಗಳು :** ಬೆಂಗಳೂರು, ಧಾರವಾಡ, ಮೈಸೂರು, ಕಲಬುರ್ಗಿ ಮುಂತಾದವು.

(೩) **ಔದ್ಯೋಗಿಕ ಕೇಂದ್ರಗಳು :** ದಾಂಡೇಲಿ, ಭದ್ರಾವತಿ, ಬೆಂಗಳೂರು, ಬಾಗಲಕೋಟೆ ಮುಂ.

(೪) **ನೈಸರ್ಗಿಕ ಬಂದರುಗಳು :** ಕಾರವಾರ, ಮಂಗಳೂರು.

(೫) **ಪವಿತ್ರ ಸ್ಥಳಗಳು :** ಶ್ರವಣಬೆಳಗೊಳ, ಗೋಕರ್ಣ, ಶೃಂಗೇರಿ, ಉಡುಪಿ, ಸವದತ್ತಿ, ಕಲಬುರ್ಗಿ ಮುಂ.


ಹೀಗೆ ಅನೇಕ ವಿಧವಾಗಿ ಪಟ್ಟಣಗಳನ್ನು ವರ್ಗೀಕರಿಸಲು ಬರುತ್ತದೆ.

ಪಟ್ಟಣಗಳ ಬೆಳವಣಿಗೆ :

೧೯೦೧ರಿಂದ ೧೯೬೧ರ ವರೆಗೆ ದೊರೆಯುವ ಅಂಕಿಸಂಖ್ಯೆಗಳನ್ನು ಪರಿಶೀಲಿಸಿದಾಗ ಪಟ್ಟಣಗಳಲ್ಲಿ ಯಾವ ರೀತಿಯಾಗಿ ಜನಸಂಖ್ಯೆಯು ಅಭಿವೃದ್ಧಿ

ಹೊಂದುತ್ತಿದೆ ಎನ್ನುವ ಸಂಗತಿಯು ಕಲ್ಪನೆಯಾಗುತ್ತದೆ. ೧೯೦೧ರಲ್ಲಿ ನಗರಗಳಲ್ಲಿ ವಾಸಿಸುವವರ ಸಂಖ್ಯೆಯು ಕೇವಲ ೧೬ ಲಕ್ಷವಿತ್ತು. ಅದು ಬೆಳೆಯುತ್ತ ಹೋಗಿ ೧೯೬೧ರಲ್ಲಿ ೫೨ ಲಕ್ಷಕ್ಕೆ ಮುಟ್ಟಿದೆ. ಅಂದರೆ ಪಟ್ಟಣಿಗರ ಸಂಖ್ಯೆಯು ೬೦ ವರುಷಗಳಲ್ಲಿ ಮೂರರಷ್ಟು ಅಧಿಕವಾಗಿದೆ (ಆಕೃತಿ ೪). ಪ್ರತಿಶತ ಪ್ರಮಾಣವು ೧೨೫ ರಷ್ಟು ಅಗುವದರಿಂದ ರಾಜ್ಯದಲ್ಲಿ ಪಟ್ಟಣಗಳು ಬಹಳ ವೇಗವಾಗಿ ಬೆಳವಣಿಗೆ ಹೊಂದುತ್ತಲಿವೆ ಎಂದು ಹೇಳಬಹುದು. ಅದರಲ್ಲಿಯೂ ಮುಖ್ಯವಾಗಿ ಎರಡನೆಯ ಮತ್ತು ನಾಲ್ಕನೆಯ ವರ್ಗದ ಪಟ್ಟಣಗಳು ಅಧಿಕ ವೇಗದಿಂದಲೂ, ಒಂದನೆಯ ಮತ್ತು ಮೂರನೆಯ ವರ್ಗದ ಪಟ್ಟಣಗಳು ಸಾಮಾನ್ಯ ವೇಗದಿಂದಲೂ ಅಭಿವೃದ್ಧಿ ಹೊಂದುತ್ತಲಿವೆ. ಆದರೆ ಕೊನೆಯ ಎರಡು ವರ್ಗಗಳ ಪಟ್ಟಣಗಳ ಬೆಳವಣಿಗೆಯು ಕುಂಠಿತವಾಗಿರುವದು.

ರಾಜ್ಯದಲ್ಲಿ ೧೯೦೧ರಲ್ಲಿ ಒಂದನೆಯ ವರ್ಗದ ಪಟ್ಟಣವು ಕೇವಲ ಒಂದೇ ಒಂದು ಇದ್ದದ್ದು ೧೯೬೧ ರಲ್ಲಿ ಅವುಗಳ ಸಂಖ್ಯೆಯು ಆರಕ್ಕೆ ಏರಿದೆ. ಕೊನೆಯ ವರ್ಗದಲ್ಲಿದ್ದ ೧೧೨ ಪಟ್ಟಣಗಳು ಕುಂಠಿತವಾಗಿ ೩೫ಕ್ಕೆ ಇಳಿದಿವೆ. ಉಳಿದ ವರ್ಗದ



ಆಕೃತಿ-೪

ಪಟ್ಟಣಗಳಲ್ಲಿಯೂ ಅನೇಕ ಬದಲಾವಣೆಯಾಗಿವೆ. ಸಾಮಾನ್ಯವಾಗಿ ದೊಡ್ಡ ಮತ್ತು ಮಧ್ಯಮ ವರ್ಗದ ಪಟ್ಟಣಗಳು ಅಭಿವೃದ್ಧಿ ಹೊಂದಿದ್ದು ಚಿಕ್ಕ ಪಟ್ಟಣಗಳು ಹಿಂದೆಯೇ ಉಳಿದುಕೊಂಡಿರುವವು.

ಪಟ್ಟಣಗಳಲ್ಲಿಯ ಜನರು ಹಾಗೂ ಜೀವನಕ್ರಮ :

ಪಟ್ಟಣಗಳಲ್ಲಿ ವಾಸಿಸುವ ಜನರ ಜೀವನಕ್ರಮವು ಗ್ರಾಮಗಳಿಗಿಂತ ತೀರ ಭಿನ್ನವಾಗಿರುವದು. ಹಳ್ಳಿಗಳಲ್ಲಿ ಇರುವ ಜನರು ಮುಖ್ಯವಾಗಿ ಒಕ್ಕಲುತನ ಮಾಡುವರು. ಕೆಲವು ಜನರು ಮಾತ್ರ ಒಕ್ಕಲುತನಕ್ಕೆ ಸಂಬಂಧಿಸಿದ ಕೆಲವು ಸಣ್ಣಪುಟ್ಟ ಉದ್ಯೋಗಗಳನ್ನು ಚಿಕ್ಕ ಪ್ರಮಾಣದಲ್ಲಿ ಮಾಡುವರು. ಆದ್ದರಿಂದ ಅವರ ಜೀವನಕ್ರಮವು ಸಾದಾ ಮತ್ತು ಸರಳರೀತಿಯಲ್ಲಿ ಇರುವದು ಆದರೆ ಪಟ್ಟಣಿಗರ ಜೀವನಕ್ರಮವು ಸಂಕೀರ್ಣವಿರುವದು. ಪಟ್ಟಣಗಳಲ್ಲಿ ಅನೇಕ ಬಗೆಯ ಉದ್ಯೋಗಗಳು ಬೆಳೆದುಬಂದಿರುವವು. ಅವುಗಳಿಗೆ ಅನುಸಾರವಾಗಿ ಅಲ್ಲಿಯ ಜನಜೀವನಕ್ರಮವು ಸಾಗಿರುವದು. ಹಳ್ಳಿಪಟ್ಟಣಗಳ ಸಂಬಂಧವು ಅನಿವಾರ್ಯವಿರುವದು. ಏಕೆಂದರೆ ಹಳ್ಳಿಗಳಲ್ಲಿ ಬೆಳೆಯುವ ಆಹಾರ ಮತ್ತು ಕಚ್ಚಾಮಾಲುಗಳನ್ನು ಪಟ್ಟಣಿಗರು ಉಪಯೋಗಿಸುವರು ಮತ್ತು ಹಳ್ಳಿಗರು ಪಟ್ಟಣಗಳಲ್ಲಿ ತಯಾರಾದ ಅನೇಕ ವಸ್ತುಗಳನ್ನು ಉಪಯೋಗಿಸುವರು.

ಪಟ್ಟಣಗಳ ಭವಿಷ್ಯತ್ತು :

ರಾಜ್ಯದಲ್ಲಿಯ ಪಟ್ಟಣಗಳು ಭವಿಷ್ಯತ್ತಿನಲ್ಲಿಯೂ ಅಭಿವೃದ್ಧಿ ಹೊಂದುತ್ತ ಹೋಗುವವು. ಜನಸಂಖ್ಯಾಶಾಸ್ತ್ರಜ್ಞರ ಅಭಿಪ್ರಾಯದಂತೆ, ೧೯೭೧ ರಲ್ಲಿ ಮೈಸೂರಿನಲ್ಲಿ ಪಟ್ಟಣಿಗರ ಸಂಖ್ಯೆ ೬೧–೭೫ ಲಕ್ಷದವರೆಗೆ ಹೆಚ್ಚಾಗುವ ಸಂಭವವಿದೆ.

ಮೊದಲನೆಯ ವರ್ಗದಲ್ಲಿ ವಾಸಿಸುವವರ ಸಂಖ್ಯೆಯು ೧೯೭೧ರಲ್ಲಿ ೨೫ ಲಕ್ಷವಾಗಬಹುದೆಂದು ಅಂದಾಜು ಮಾಡಲಾಗಿದೆ. ದಾವಣಗೆರೆ, ಕಲಬುರ್ಗಿ, ಭದ್ರಾವತಿಯಂಥ ಎರಡನೆಯ ವರ್ಗದ ಪಟ್ಟಣಗಳು ಮೊದಲನೆಯ ವರ್ಗದಲ್ಲಿ ಬರಬಹುದು. ಇದರಂತೆಯೇ ಎರಡನೆಯ ಮತ್ತು ಮೂರನೆಯ ವರ್ಗದ ನಗರಗಳ ಸಂಖ್ಯೆಯಲ್ಲಿಯೂ ಬದಲಾವಣೆಯಾಗಬಹುದು.

ಮೈಸೂರು ರಾಜ್ಯದಲ್ಲಿ ದೊಡ್ಡ ಪಟ್ಟಣಗಳಿಗೆ ಉಜ್ವಲವಾದ ಭವಿಷ್ಯತ್ತು ಇರುವದು. ಅವುಗಳ ಅಭಿವೃದ್ಧಿ ಇನ್ನೂ ಹೆಚ್ಚು ಪ್ರಮಾಣದಲ್ಲಿ ಆಗುತ್ತದೆ. ಆದರಂತೆಯೇ ಮಧ್ಯಮ ವರ್ಗದ ಪಟ್ಟಣಗಳೂ ಬೆಳೆಯುತ್ತವೆ. ಚಿಕ್ಕಪುಟ್ಟ ಪಟ್ಟಣಗಳು ಅಷ್ಟೊಂದು ಅಭಿವೃದ್ಧಿಯಾಗುವದಿಲ್ಲ. ಅವುಗಳ ಅಭಿವೃದ್ಧಿಗೆ ಸರಕಾರವು ಅನೇಕ ಬಗೆಯ ಸೌಕರ್ಯಗಳನ್ನು ಒದಗಿಸಿಕೊಡಬೇಕಾಗುವುದು.

ತ್ರಿಪದಿಯೆ, ಕಂದವೆ, ಮತ್ತೊಂದೆ ?

(ಚಿಟಗುಪ್ಪಿಯವರಿಗೊಂದು ಪ್ರತಿವಾದ)

ಮೋವುಂಡಿ ಮಲ್ಲಾರಿ

ಶ್ರೀ ಮಂ. ಅ ರಾಮಾನುಜೈಯ್ಯಂಗಾರ್ಯರಿಂದ ಸಂಪಾದಿತವಾದ ರನ್ನನ ಗದಾಯುದ್ಧದ[1] ಪ್ರಥಮಾಶ್ವಾಸದ ೯ನೆಯ ಪದ್ಯವಾಗಿ, 'ತ್ರಿಪದಿ' ಎಂಬ ಹೆಸರನ್ನು ಹೊತ್ತು ಪ್ರಕಟವಾಗಿರುವ ಪದ್ಯವು ಛಂದೋವಿಷಯದಲ್ಲಿ ಪಂಡಿತರ ತಲೆತೀಟಿಗೆ ಕಾರಣವಾಗಿದೆ. ಆ ತ್ರಿಪದಿಯ ಸ್ವರೂಪವಿಂತಿದೆ :

> ಪದ್ಯರಚನೆಯೊಳ್ಕಾಳಿದಾಸನುಂ
> ಗದ್ಯರಚನೆಯೊಳ್ ಬಾಣನುಂ ಮುಂ ಕವಿಗಳಿರ್ವರುಂ
> ನೆಗಟ್ದರದಱಿಂ ಸತ್ಕವಿಗಳಿರ್ವರುಮೆನಗಭಿವಂದ್ಯರ್ ॥

ಇದನ್ನು ತ್ರಿಪದಿಯೆಂದೆ ಓದಲಿ, ಕಂದವೆಂದೆ ಓದಲಿ, ಯಾವ ಛಂದಃಪ್ರಕಾರವೆಂದೆ ಓದಲಿ, ತನ್ನ ವಿಸಂಗತ ಬಂಧದಿಂದ ಯಾವುದೂ ಅಲ್ಲವೆನಿಸಿ ಒಂದು ಸಮಸ್ಯೆಯಾಗಿ ನಿಲ್ಲುವುದು ನಿಜ. ಹಿಕ್ಕಿ ಹಿಕ್ಕಿ ನೋಡಿದಂತೆ ಬಿಚ್ಚಬಾರದ ದಸರಿದೊಡಕಾಗಿಯೆ ತೋರುತ್ತದೆ. ಇದನ್ನು ಲಕ್ಷಿಸಿದ ಗ್ರಂಥಸಂಪಾದಕರು ಮಾತೃಕೆಗಳಲ್ಲಿ ಕಂಡ ತ್ರಿಪದಿ ಎಂಬ ಹೆಸರಿಗೆ ಪ್ರಶ್ನೆಚಿಹ್ನವನ್ನೊಡ್ಡಿ [(ತ್ರಿಪದಿ) (?)] ತ್ರಿಪದಿಯಲ್ಲವೆಂಬ ಸಂದೇಹವನ್ನೆತ್ತಿದ್ದಾರೆ. ಗೋವಿಂದ ಪೈ, ಸೇಡಿಯಾಪು ಕೃಷ್ಣ ಭಟ್ಟರು ಮೂಲತಃ ಇದು ಕಂದಪದ್ಯವಿರಬೇಕೆಂದಿದ್ದಾರೆ.[2] ಶ್ರೀ ಚಿಟಗುಪ್ಪಿಯವರು ಈ ಪಂಡಿತದ್ವಯದ ಅಭಿಪ್ರಾಯವನ್ನೊಪ್ಪದೆ, ಇದು ತ್ರಿಪದಿಯೆ ಎಂದೂ, ಆದರೆ ಸಾಮಾನ್ಯಪರಿಚಿತ ತ್ರಿಪದಿಯಾಗಿರದೆ ಗಾಥಾವಂಶಾವಳಿಗೆ ಸೇರಿದ ಅಸಂಖ್ಯ, ಅನುಲೇಖ್ಯ ಛಂದೋಬಂಧಗಳ ಪೈಕಿ ಒಂದು ತ್ರಿಪದಿ ಎಂದೂ ತಮ್ಮ ಲೇಖನದಲ್ಲಿ ಸಾಧಿಸುವವರಾಗಿದ್ದಾರೆ. ನನ್ನ ಬುದ್ಧಿ ಈ ಎರಡೂ ಅಭಿಪ್ರಾಯಗಳನ್ನೊಪ್ಪದೆ ಮತ್ತೊತ್ತಟ್ಟಿಗೆ ಬೊಟ್ಟಿಟ್ಟು ತೋರಿಸುತ್ತಿದೆ. ಆ ಮೂರನೆಯ ವಿಚಾರವನ್ನಿಲ್ಲಿ ಪಂಡಿತರ ಚರ್ಚೆಗೊಳಪಡಲೆಂದು ಇಡುತ್ತಿದ್ದೇನೆ.

ಮೇಲಣ ಆ ಪದ್ಯದ ಛಂದೋಬಂಧವನ್ನು ಕುರಿತೊ, ಅರ್ಥವನ್ನು ಕುರಿತೊ, ಕರ್ತೃತ್ವವನ್ನು ಕುರಿತೊ ವಿಚಾರ ಮಾಡುವ ಮೊದಲು, ಪ್ರಸ್ತುತ

೧. ಪರಿಷ್ಕೃತ ತೃತೀಯ ಮುದ್ರಣ, ೧೯೨೫.

೨. 'ಕರ್ನಾಟಕ ಭಾರತಿ'ಯ ಮೊದಲ ಸಂಚಿಕೆಯಲ್ಲಿಯ ಶ್ರೀ ಚಿಟಗುಪ್ಪಿ ಭೀಮರಾಯರ 'ರನ್ನನ ಮೂರು ಸಮಸ್ಯಾತ್ಮಕ ಛಂದೋಬಂಧಗಳು' ಎಂಬ ಲೇಖನದಿಂದ ತಿಳಿದಂತೆ ಈ ಮಾತನ್ನು ಹೇಳಲಾಗಿದೆ.

ಪ್ರಕಟಿತ ಗದಾಯುದ್ಧ ಗ್ರಂಥದ ಜನ್ಮಕಥೆಯನ್ನು ಅರಿತುಕೊಂಡಿರುವುದು ಅತ್ಯಗತ್ಯ. ಅದರ ಹೆರಿಗೆಯ ಸಮಯದಲ್ಲಿ- ಚೊಚ್ಚಲ, ಮರುಚಲ, ಮೂರನೆಯ ಸಲವೂ—ಶುದ್ಧ ಪಾಠಗಳನ್ನು ಗುರುತಿಸುವುದಕ್ಕಾಗಿ ಸಂಪಾದಕರು ತಿಂದ ಬೇನೆ 'ಭೂಮಿಕೆ'ಯಲ್ಲಿ ಸಾದ್ಯಂತವಾಗಿ ವಿವೃತವಾಗಿದೆ. ಮೊದಲ ಆವೃತ್ತಿ ಎರಡು ಕಾಗದಪ್ರತಿಗಳಿಂದ ಮಾತ್ರ ಸಿದ್ಧವಾಗಿದೆ. ಕ ಎಂಬುದು ಯಾವುದೋ ಮಾತೃಕೆಯಿಂದ ಒಬ್ಬರು ಬರೆದುಕೊಟ್ಟುದು. ಅದರಲ್ಲಿ ಆ ಪ್ರತಿಕಾರರು ಅಲ್ಲಲ್ಲಿ ಸೀಸದ ಲೇಖನಿಯಿಂದ ಶುದ್ಧ ಪಾಠಗಳನ್ನು ಊಹಿಸಿ ಬರೆದಿರುವರು. ಗ ಎಂಬುದು ಅದೇ ಮಾತೃಕೆಯಿಂದ ಇನ್ನೊಬ್ಬರು ಮಾಡಿದ ನಕಲು. ಎರಡಕ್ಕೂ ಸಹಜವಾಗಿಯೇ ಪಾಠಭೇದಗಳು ಬಹಳವಿಲ್ಲ. ಈ ಕೊರಗಿನಿಂದ ಸಂಪಾದಕರು ತರುವಾಯದ ಆವೃತ್ತಿಗಳಿಗಾಗಿ ಅತ್ಯಂತವಾಗಿ ಪೇಚಾಡಿ ದೊರಕಿಸಿದ ಇನ್ನೆರಡು ಮಾತೃಕೆಗಳ ಸ್ಥಿತಿಯೂ ಅತಿಶೋಚನೀಯ: ಖ ಎಂಬುದು ತ್ರುಟಿತವಾದ, ಅಸಮಗ್ರವಾದ, ಅಪ್ರಯೋಜಕವಾದ ಪ್ರತಿ. ತ ಎಂಬುದು ಮದರಾಸು ಪ್ರಾಚ್ಯಕೋಶಾಗಾರದಲ್ಲಿದ್ದ ಬಹುಜೀರ್ಣವಾದ ಮಾತೃಕೆಯಿಂದ ಪ್ರಾಚೀನಾಕ್ಷರಗಳನ್ನು ನಿರ್ಧರಿಸುವ ವ್ಯುತ್ಪತ್ತಿ ಹೆಚ್ಚಾಗಿಲ್ಲದವರು ಪ್ರತಿಮಾಡಿದ್ದು. ಇಂತಹ ಪ್ರತಿಗಳೊಡನೆ ಗುದುಮುರಿಗೆ ಹಾಕಿ ಬಹುಪ್ರಯಾಸದಿಂದ ಸಂಪಾದಿಸಿದ್ದರೂ ೩ನೆಯ ಆವೃತ್ತಿಯ ಬಗೆಗೂ ಸಂಪಾದಕರಿಗೆ ತುಂಬ ಅಸಮಾಧಾನ. ಅವರು ಹೇಳಿದ್ದಾರೆ: "ಈ ಮುದ್ರಣದಲ್ಲಿ ಪ್ರಾಯಶಃ ೨ ರಿಂದ ೭ರ ತನಕ ಆಶ್ವಾಸಗಳಲ್ಲಿ ಮೂಲಪಾಠವು ಸರಿಯಾಗಿದೆ ಎಂದು ಹೇಳಬಹುದು. ೧, ೮, ೯, ೧೦ರಲ್ಲಿ ಅಪಭ್ರಂಶಗಳು ಸುಮಾರಾಗಿ ಬಿದ್ದಿವೆ; ಮತ್ತು ಹಲವು ಕಡೆಗಳಲ್ಲಿ ಮೂಲಪಾಠಗಳು ಸರಿಯಾಗಿಲ್ಲವೆಂದು ತೋರುತ್ತದೆ. ಅವನ್ನು ಮಾತೃಕೆಗಳಿಂದ ಸರಿಪಡಿಸಲು ಸಾಧ್ಯವಾಗಲಿಲ್ಲ; ಇದ್ದ ಹಾಗೆಯೇ ಮುದ್ರಿಸಿರುತ್ತೇನೆ."[೩]

ಈ ತೆರದ ಹಿನ್ನೆಲೆಯಲ್ಲಿ ಮೂಡಿಬಂದ ಗದಾಯುದ್ಧದ, ಅದೂ ಅಪಭ್ರಂಶಗಳ ಮೊಟ್ಟೆಯೆಂದು ಘಂಟಾಘೋಷವಾಗಿ ಹೇಳಿರುವ ಪ್ರಥಮಾಶ್ವಾಸದಲ್ಲಿಯ ಮೇಲಣ ಪದ್ಯದ ಕರ್ತೃತ್ವದ ಬಗೆಗೆ, ಅದರ ಛಂದೋಬಂಧದ ಬಗೆಗೆ ಸಾಶಂಕರಾಗಿದ್ದೇ ವಿಚಾರ ಮಾಡಬೇಕಾಗುತ್ತದೆ. ಪ್ರಾಚೀನ ಹಾಗೂ ಆಧುನಿಕ ಪ್ರತಿಕಾರರಿಂದ ಯಾವುದು ಯಾವ ರೂಪಕ್ಕೆ ಬಂದಿದೆಯೊ ಹೇಳುವುದು ಕಠಿನ. ಇದನ್ನು ಗೋವಿಂದ ಪೈ ಗಮನಿಸಿದ್ದಾರೆ ಇದರ ಕೊನೆಯ ಚರಣದ ಲಕ್ಷಣಗಳನ್ನು ಮಾತ್ರ ಗುರುತಿಸಿ ಇದು ತ್ರಿಪದಿಯಲ್ಲ, ಕಂದಪದ್ಯ ಇಲ್ಲಿದ್ದಿರಬೇಕೆಂದಿದ್ದಾರೆ.

'ರದಜಿಂ| ಸತ್ಕವಿ| ಗಳಿರ್ಪ| ರುಮೆನಗಭಿ| ಮಂದ್ಯರ್'

---

೩. ಗದಾಯುದ್ಧ (೧೯೨೫) : ಭೂಮಿಕೆ, ಪು. ೨೨.

ಎಂಬುದು ಕಂದದ ಕೊನೆಯಡಿಯಂತೇನೋ ತೋರುತ್ತದೆ. ಆದರೆ ಇಲ್ಲಿ ಐದನೆಯ ಗಣವು ಒಂದು ಮಾತ್ರೆಯಿಂದ ಉಬ್ಬಿದೆ. 'ರೆನಗಭೆ' ಎಂದು ತಿದ್ದಿಕೊಂಡಾಗ ಸರಿಹೋಗುತ್ತದೆ. ಪದ್ಯದ ಇನ್ನುಳಿದ ಭಾಗದ ಗತಿಯೇನು ?

ಇನ್ನು 'ತ್ರಿಪದಿ' ಎಂದಿರುವುದು ಪ್ರತಿಕಾರನ ಕೈಗಂಟಲ್ಲ, ಪರಂಪರೆಯಾಗಿ ರನ್ನನಿಂದಲೇ ಬಂದ ಹೆಸರೆಂದು ನಚ್ಚಿ, ಆದನ್ನು 'ಗಾಥಾತ್ರಿಪದಿ' ಎಂದು ಶ್ರೀ ಚಿಟಗುಪ್ಪಿಯವರು ಅತಿರಿಕ್ತವೈಚಕ್ಷಣ್ಯದಿಂದ ಸಾಧಿಸಿ ಇಡೀ ಪದ್ಯಕ್ಕೆ ಸ್ಥೈರ್ಯವನ್ನೊದಗಿಸಲು ಹವಣಿಸಿದ್ದಾರೆ. ಆದಕ್ಕಾಗಿ ಅವರು ವೇದಕಾಲದಿಂದ ಅರ್ವಾಚೀನಕಾಲದ ವರೆಗೂ ಶಾಸ್ತ್ರಗಳ ಆಳವಾದ—ಅಗಾಧವಾದ—ಅಭ್ಯಾಸದಲ್ಲಿ ಮುಳುಗಿ ಮೇಲಣ ತಮ್ಮ ಅಭಿಪ್ರಾಯವನ್ನು ಎತ್ತಿ ತಂದಿದ್ದಾರೆ. ಕೇವಲ ವರ್ಣವೃತ್ತಗಳ ಸಂಖ್ಯೆಯೆ ೧೩.೦೦,೦೦,೦೦೦ ಗಿಂತ ಹೆಚ್ಚು, ಆರ್ಯೆ ಒಂದರಲ್ಲಿಯೆ ೮,೧೯,೨೦,೦೦೦ ಭೇದಗಳು, ಶ್ರೀಕೃಷ್ಣನ ಮತದಲ್ಲಿ ಬುಡಮೇಲಾಗಿರುವ ಅಶ್ವತ್ಥವೃಕ್ಷದ ಎಲೆಗಳಷ್ಟು ಛಂದಗಳು, ರಾಜಶೇಖರನಂತೆ ಕಾವ್ಯಪುರುಷನ ರೋಮಗಳಷ್ಟು! ಈ ಮಾತುಗಳನ್ನು ಸಾಕ್ಷಾತ್ ಪರಮೇಶ್ವರನೆ ಹೇಳಿರಲಿ, ಪ್ರಸಿದ್ಧ ಶಾಸ್ತ್ರಕಾರರೆ ಹೇಳಿರಲಿ ಅತ್ಯುಕ್ತ್ಯಲಂಕಾರಗಳಲ್ಲದೆ, ಅದ್ಭುತಗಳಲ್ಲದೆ ಮತ್ತೇನು ? ಇಷ್ಟು ಛಂದಗಳನ್ನು ಎಣಿಸಿ ಗುಣಿಸಿ 'ನಿರ್ದಿಷ್ಟ'ಗೊಳಿಸುವುದಿರಲಿ, ಒಂದೆರಡು ಮೂರೆಂದು ಬರಿ ಅಂಕೆಗಳನ್ನೆಣಿಸುವುದೂ ಪವಾಡವೆಂದು ನನಗೆ ತೋರುತ್ತದೆ 'ಛಂದಸ್ಸಿಲ್ಲದ ಶಬ್ದವಿಲ್ಲವೆ'ಂದು ಭರತನು ಹೇಳಿದರೆ ಯಾರೇನು ನುಡಿದುದೆಲ್ಲ ಛಂದೋಬಂಧವೆಂದು ಹೇಳಬೇಕೆ ? ಎಂದರೆ ಅಪಭ್ರಂಶ ಅಪಲಾಪಗಳೆಲ್ಲ ಗಾಥಾಪ್ರಪಂಚದ ಯಾವುದೊಂದು ಮೂಲೆಯಲ್ಲಿ ಸಶಾಸ್ತ್ರೀಯವೆಂದು ನೆಲಸಬಹುದೆಂದಾಯಿತು. ಈ ತೆರದ ವಾದವು ಅಸಮಂಜಸ. ಶಾಸ್ತ್ರವೆಂದರೆ ಒಂದು ನಿರ್ದಿಷ್ಟವಾದ ನಿಯಮವನ್ನು ಅಸಂದಿಗ್ಧವಾಗಿ ಹೇಳಬೇಕು. ಇಂತಹದೊಂದು ನಮಗೆ ವಿಲಕ್ಷಣವೆಂದು ತೋರುವ ಪದ್ಯವನ್ನು ರತ್ನತ್ರಯದಲ್ಲೊಬ್ಬನಾದ, ಗಣ್ಯವಿದ್ವಾಂಸನೂ ಆದ ರನ್ನಮಹಾಕವಿ ರಚಿಸಿದ್ದಾನೆಂದು, ಆದಕ್ಕೆ ತ್ರಿಪದಿ ಎಂದಿದ್ದಾನೆಂದು ಹೇಳಿ, 'ನಿರಂಕುಶಾಃ ಕವಯಃ' ಎಂದು, ಅವನೊಬ್ಬ ಪ್ರಗತಿಶೀಲ ಕವಿಯೆಂದು ಒಪ್ಪವಿಡುವುದು ಧಾರ್ಷ್ಟ್ಯವೆ ಸರಿ.

ಇಷ್ಟಲ್ಲದೆ, ಶ್ರೀ ಚಿಟಗುಪ್ಪಿಯವರು, ತಾವು ತ್ರಿಪದಿಯೆಂದು ಸಾಧಿಸಿದ ಪದ್ಯದ ಮೂರನೆಯ ಪಾದದಲ್ಲಿ ಆದಿಪ್ರಾಸವು ತಪ್ಪಿಹೋಗಿದೆಯೆಂದು, ಆದನ್ನು ನೇರ್ಪುಗೊಳಿಸಲು ಹವಣಿಸಿರುವುದೂ ವ್ಯರ್ಥವಾಗಿದೆ. ಮೂರನೆಯ ಸಾಲಿನ ಮೊದಲ 'ನೆ'ಯನ್ನು ಎರಡನೆಯ ಸಾಲಿನ ಕೊನೆಗೆ ಎತ್ತಿಟ್ಟರೆ ಪ್ರಾಸವು ಸರಿಹೊಂದುತ್ತದೆ ಎಂದವರ ವಾದ. ಆದರೆ 'ಟ್ಟಿ' ಎಂಬುದು 'ದ್ಯ' ಎಂಬುದಕ್ಕೆ ಪ್ರಾಸೋಚಿತವಲ್ಲವೆಂದು ಅವರಿಗೆ ಹೊಳೆಯದೆ ಹೋದುದು ಆಶ್ಚರ್ಯ. ಎರಡನೆಯ ಆಶ್ಚರ್ಯವೆಂದರೆ ನಿತ್ಯಶಿಥಿಲವಾದ 'ನೆಗಟ್ಟಿ' ಎಂಬ ಶಬ್ದವನ್ನು

ಒತ್ತಾಗಿ ಉಚ್ಚರಿಸಬೇಕೆಂಬ ಅವರ ಸೂಚನೆ. ಇನ್ನೊಂದು ಆಶ್ಚರ್ಯವೆಂದರೆ, ದ್ವಿತ್ವ ಶಬ್ದಗಳ ಶೈಥಿಲ್ಯ-ಅಶೈಥಿಲ್ಯಗಳು ಕವಿಗಳ ಪಲ್ಲಟವು ಕವಿಗಳಿಗೆ 'ಅನುಕೂಲಸಿಂಧು'ವಾಗಿದ್ದಿತೆಂದು ಆರೋಪಿಸಿ ತಮ್ಮ ವಾದವನ್ನು ಸಮರ್ಥಿಸಿ-ಕೊಳ್ಳುತ್ತಾ ಅದಕ್ಕುದಾಹರಣವಾಗಿ ಕೊಟ್ಟ ರನ್ನನ ಪದ್ಯದ ಒಂದು ಚರಣದಲ್ಲಿ ಪಲ್ಲಟವಿಲ್ಲದಿರುವುದು.

ಹೀಗೆ ಈ ಪದ್ಯವನ್ನು ಕಂದವೆನ್ನುವ ಸೂಚನೆ ಅಪರಿಪೂರ್ಣತೆಯಿಂದಾಗಿ, ತ್ರಿಪದಿಯೆಂಬ ಪ್ರತಿಪಾದನೆ ಜೊಳ್ಳುತನದಿಂದಾಗಿ ಹಾರಿಹೋಗುತ್ತವೆ. ಹಾಗಾದರೆ ಗದಾಯುದ್ಧದ ಪ್ರಮಾಣಭೂತವಾದ ಶುದ್ಧ-ಸುಸ್ಥಿತ ಮಾತೃಕೆ ದೊರೆತು ಸಾಧುಪಾಠವು ಬಯಲಿಗೆ ಬರುವ ವರೆಗೆ ಈ ಸಮಸ್ಯೆ ಹೀಗೆಯೆ ಉಳಿಯತಕ್ಕುದೆ ? ಇದ್ದುದರಲ್ಲಿಯೇ ಪರಿಹಾರವು ದೊರಕುವುದೆ ? ನನ್ನ ಮಟ್ಟಿಗೆ ನನಗೊಂದು ಪರಿಹಾರವು ಕಂಡುಬಂದಿದೆ. ಈ ಪದ್ಯವು ರನ್ನಕೃತವೇ ಇರಲಿ, ಅನ್ಯಕೃತಕವೇ ಇರಲಿ—ಅದನ್ನು ನೋಡುವುದು ಬೇರೆಯ ವಿಷಯ, ಬೇರೆಯವರ ಕೆಲಸ—ಈಗಿರುವಂತೆ ಈ ಪದ್ಯಕ್ಕೆ ಶಾಸ್ತ್ರೀಯವೆನಿಸುವ ಲಕ್ಷಣ-ಗಳೇನಾದರೂ ಇವೆಯೆ, ಏನಾದರೂ ಹೆಸರಿಡಲು ಪಂಡಿತರಿಗೆ ಹಾದಿಯಾದೀತೆ ಎಂಬ ಕಡೆ ನನ್ನ ಬುದ್ಧಿಯನ್ನು ಬಲವಿದ್ದಷ್ಟು ಹರಿಸಿದ್ದೇನೆ.

ಇದರ ಮೊದಲ ಪಾದವನ್ನು ನೋಡಿ :

" ಪದ್ಯರಚನೆಯೊಳ್ ಕಾಳಿದಾಸನುಂ "

ಇದನ್ನು ಓದುತ್ತಿದ್ದಂತೆ ಒಂದು ಮಟ್ಟಿನಲ್ಲಿ ನಡೆಯುತ್ತಿದೆ ಎಂಬುದು ಗಮನಕ್ಕೆ ತಾನೆ ಬರುತ್ತದೆ. ಇದು ಏತರಂತೆ ನಡೆಯುತ್ತಿದೆ ? ಪಂಪಭಾರತದ ಮಂದಾನಿಲ ಅಥವಾ ಮಟ್ಟರಗಳೆಯನ್ನು ನೆನಸಿಕೊಳ್ಳಿ :

ನಂದನಂಗಳೊಳ್ ಸುಟಿಬ ಬಿರಯಿಯಿಂ
ಕಂಪು ಕಣ್ಮಲೆಯೆ ಪೂತ ಸುರಯಿಯಿಂ
... ...
ಬೆಳದು ಮುಗಮುಗಿಪ ಗಂಧಶಾಳಿಯಿಂ
ಅಲ್ಲಿ ಸುಟಿವ ಗಿಳಿವಿಂಡಿನೋಳಿಯಿಂ

ನಾಲ್ಕು ಮಾತ್ರೆಗಳ ನಾಲ್ಕು ಗಣಗಳನ್ನು ಪ್ರತಿಚರಣದಲ್ಲಿ ಒಳಗೊಂಡಿರುವುದು ಮಂದಾನಿಲರಗಳೆಯ ಲಕ್ಷಣ. ಆದರೆ ಪಂಪನ ಈ ರಗಳೆಯ ಚರಣದಲ್ಲಿ ಒಟ್ಟಿಗೆ ೧೬ ಮಾತ್ರೆಗಳಿದ್ದರೂ ಗಣಗಳಲ್ಲಿ 'ಇ | ಜ | ಇ | ಇ | ಗು' ಎಂಬ ವಿಪರ್ಯಾಸ ವನ್ನು ಕಾಣುತ್ತೇವೆ ನಾಗವರ್ಮನು ಛಂದೋಂಬುಧಿಯಲ್ಲಿ 'ಗಣನಿಯಮ-ವಿಪರ್ಯಾಸದೊಳೆಸೆವಡೆದೊಳ್ಪೆಸೆದು' ಎಂದು ಹೇಳಿರುವುದು ಪಂಪನ ಈ ರಗಳೆ

ಯನ್ನು ಲಕ್ಷಿಸಿರಬೇಕು ಎನ್ನುತ್ತಾರೆ ಡಾ. ಡಿ. ಎಸ್. ಕರ್ಕಿ.[೪] ಅವರು ಇದರ ಗಣಗಳನ್ನು '೩ | ೫ | ೩ | ೫' ಗಣಿಸುತ್ತಾರೆ. ಆದರೆ, ಪಂಪನು ರಗಳೆಯ ಪ್ರತಿಚರಣದ ಕೊನೆಯಲ್ಲಿ ನಿಯತವಾಗಿ ಗುರುವನ್ನಿಟ್ಟಿರುವುದನ್ನು, ಮತ್ತು ಕಡೆಂಗೋಡ್ಲು ಶಂಕರಭಟ್ಟರ ಮಂದಾನಿಲದಲ್ಲಿ[೫] ಪ್ರತಿಚರಣದಲ್ಲಿಯ ಕೊನೆಯ ಲಘು ಗುರುತ್ವವನ್ನು ಪಡೆದಿರುವುದನ್ನು ಅನುಲಕ್ಷಿಸಿ, ಕೊನೆಯದು ಗುರು-ಸಂಯುಕ್ತ ಮೂರು ಮಾತ್ರೆಯ ಗಣವೆನ್ನುತ್ತೇನೆ. ಅಂತ್ಯದ್ದು ೫ ಮಾತ್ರೆಗಳ ಗಣವೆಂದರೆ ಕೊನೆಯಲ್ಲಿ ಎರಡು ಲಘುಗಳೂ ಇದ್ದಾವು. ಹಾಗಾದಾಗ ಚರಣದ ಓದು ಗಕ್ಕನೆ ಮುಗಿಯುತ್ತದೆ. ಕೊನೆ ಸ್ವರಮಾಧುರ್ಯವನ್ನು ಹೊರಡಿಸುವ ಉದ್ದೇಶದಿಂದಲೇ ಪಂಪನು ನಿಯತವಾಗಿ ಗುರುವನ್ನಿಟ್ಟಿರಬೇಕು. ಆದುದರಿಂದ ಚರಣದ ಉತ್ತರಾರ್ಧವನ್ನು ೩ | ೫ ಎನ್ನುವುದಕ್ಕಿಂತ ೩ | ೩ | ಗು ಎನ್ನುವಲ್ಲಿ ಹೆಚ್ಚು ತಕ್ಕುಮೆಯಿದೆ ಎಂದು ನನಗೆ ತೋರಿದೆ.

ಇನ್ನು ತ್ರಿಪದಿಯೆನ್ನಲಾದ ಪದ್ಯದ ಮುಂದಣ ಭಾಗದಲ್ಲಿ ಸುಮಾರಾಗಿ ಇದೇ ಲಕ್ಷಣದ ಮೂರು ಸಾಲುಗಳುಂಟೆಂಬುದನ್ನು ಸಹಜವಾಗಿ ಗುರುತಿಸ-ಬಹುದು :

ಗದ್ಯರಚನೆಯೊಳ್ ಬಾಣನುಂ ಮುಂ
೩ | ೫ | ೩ | ೨ | ಗು

ಕವಿಗಳಿರ್ವರುಂ ನೆಗಟ್ದರದಱಿಂ ಸತ್
೩ | ೫ | ೩ | ೪ | ಗು

ಕವಿಗಳಿರ್ವರುಮೆನಗಭಿವಂದ್ಯರ್
೩ | ೫ | ೩ | ೨ | ಗು

ಮಟ್ಟರಗಳೆಯ ಲಕ್ಷಣವನ್ನು ಸರಿಯಾಗಿ ಹೊಂದಿರುವ ಪ್ರಥಮಚರಣಕ್ಕೆ ಮಿಕ್ಕ ಮೂರನ್ನು ಸರಿಹಚ್ಚಿನೋಡಿದಾಗ ಕೊನೆಗಳಲ್ಲಿ ವ್ಯಂಗವಿರುವುದು ಗೋಚರಿ-ಸುತ್ತದೆ. ರಗಳೆಯ ಲಕ್ಷಣವ್ಯಾಖ್ಯೆಗೆ ಈ ವೈಷಮ್ಯವು ಒಗ್ಗದು; ವಿಷಮ-ರಗಳೆ ಎನ್ನಲಿಕ್ಕೆ ಬಾರದು, ವಿಷಮವೃತ್ತ ಎಂದ ಹಾಗೆ. ಆದುದರಿಂದ, ಶುದ್ಧ ಮಟ್ಟರಗಳೆಯಾಗುವುದಕ್ಕಾಗಿ—ಈ ಪದ್ಯದಲ್ಲಿ ಅಪಭ್ರಂಶಗಳಿವೆ ಎಂಬ ಕಾರಣಕ್ಕಾಗಿ—ಈ ವಿಷಮತೆಯನ್ನು ಸರಿಪಡಿಸಲು ಕೊನೆಯನ್ನು ಕೊಂಚ ತಿದ್ದುವುದಕ್ಕೆ ಆಸ್ಪದವಿದೆ; ಹಳೆಯ ಗ್ರಂಥಗಳ ಸಂಪಾದನದೃಷ್ಟಿಯಲ್ಲಿ ತಪ್ಪಲ್ಲ. ಪರಿಷ್ಕೃತ ಪದ್ಯವಿಂತಾಗುತ್ತದೆ :

---

೪. ಛಂದೋವಿಕಾಸ, ಪುಟ ೧೫೭.

೫. ಛಂದೋವಿಕಾಸ, ಪುಟ ೧೬೮.

ಪದ್ಯರಚನೆಯೊಳ್ ಕಾಳಿದಾಸನುಂ
ಗದ್ಯರಚನೆಯೊಳ್ ಬಾಣನುಂ [ಮಹಾ]
ಕವಿಗಳಿರ್ವರುಂ ನೆಗಟ್ದರದಱಿಂ [ನಾ]
ಕವಿಗಳಿರ್ವರುಮೆನಗಭಿವಂದ್ಯ [ರಯ್]

ಇಂತು ಸರಿಪಡಿಸಿಕೊಂಡಮೇಲೆಯೂ ಒಂದು ಪ್ರಶ್ನೆ ತಲೆಯೆತ್ತುತ್ತದೆ. ರಗಳೆ-ಗಳಿರಬೇಕಾದ ಅಂತ್ಯಪ್ರಾಸವು ಇಲ್ಲಿಲ್ಲವಲ್ಲ, ಇದು ಸಣ್ಣ ಕೊರತೆಯಲ್ಲ ಎಂದು ಆಕ್ಷೇಪಿಸಬಹುದು. ರಗಳೆಗಳಲ್ಲಿ ಆದಿ–ಅಂತ್ಯಪ್ರಾಸಗಳೆರಡನ್ನೂ ಇಡುವುದು ರೂಢಿಯಷ್ಟೆ. ಆದರೆ ಆದಿಪಂಪನು ಅಂತ್ಯಪ್ರಾಸವನ್ನು ಸೊಗಸಾಗಿ ಅಳವಡಿಸಿ ಆದಿಪ್ರಾಸವನ್ನು ಕೈಬಿಟ್ಟಿದ್ದಾನೆ. ಆ ಕಾಲದಲ್ಲಿ, ಕನಿಷ್ಠಪಕ್ಷ ಅವನ ವಿಚಾರದಲ್ಲಿ ರಗಳೆಗೆ ಅಂತ್ಯಪ್ರಾಸವು ಮುಖ್ಯ, ಆದಿಪ್ರಾಸವು ಗೌಣವಾಗಿರಬಹುದು. ಆದರೆ, ಮೇಲಣ ರನ್ನನ ಪರಿಷ್ಕೃತ ಪದ್ಯದಲ್ಲಿ ಎರಡೆರಡು ಸಾಲುಗಳಿಗೆ ಆದಿಪ್ರಾಸವಿದೆ, ರಗಳೆಗಳಂತೆ; ಅಂತ್ಯಪ್ರಾಸವು ಲುಪ್ತವಾಗಿದೆ. ರನ್ನನು ಮಂದಾನಿಲರಗಳೆಯೆಂದೆ ಈ ಪದ್ಯವನ್ನು ರಚಿಸಿದುದಿದ್ದರೆ, ಅಂತ್ಯಪ್ರಾಸವನ್ನು ಗೌಣವಾಗಿ ಬಗೆದುಬಿಟ್ಟು, ಆದಿಪ್ರಾಸವನ್ನು ಮಾತ್ರ ಇಟ್ಟು, ಪಂಪನಿಗೆ ವಿಪರೀತವಾದ ಒಂದು ಪ್ರಯೋಗವನ್ನು ಮಂಡಿಸುವ ಪ್ರವೃತ್ತಿ ಅವನಿಗುಂಟಾಯಿತೆನ್ನೋಣವೆ? ಇದು ಕೊಂಚ ದುಡುಕಿನ ಊಹೆಯೆಂದೆ ಎನಿಸುತ್ತದೆ.

ಹೀಗೆ ನನ್ನ ಊಹಾಲೋಕದ ಇದು, ರಗಳೆಯೆಂಬ ಅಭಿಪ್ರಾಯವನ್ನು ರನ್ನನಲ್ಲಿ ಆರೋಪಿಸಲು ಹಿಂಜರಿಯುತ್ತಿದ್ದ ನನ್ನ ಮನಸ್ಸು ಯೋಚಿಸುತ್ತಿರುವಾಗ, ಈ ರಗಳೆಯ ಧಾಟಿ ಗುಂಜಿಸುವ ಅಕ್ಷರವೃತ್ತವೊಂದು ತನ್ನತ್ತ ಗಮನವನ್ನು ಸೆಳೆಯಿತು. ಅದು ೧೨ನೆಯ ಜಗತಿಯಲ್ಲಿ ಮತ್ತಕೋಕಿಲವೃತ್ತ. "ನ ಭ ಜರಂಗಳಿರೆ ಮತ್ತಕೋಕಿಲಂ (∪∪∪ | —∪∪ | ∪—∪ | —∪— |)" ಎಂದು ಅದರ ಲಕ್ಷಣವನ್ನು ಶಾಸ್ತ್ರವು ಹೇಳುತ್ತದೆ ರನ್ನನ ಈ ವಾದಗ್ರಸ್ತ ಪದ್ಯವನ್ನು ಮಲ್ಲಿನಾಥಪುರಾಣದ

ಪಗಲ ತಿಂಗಳವೊಲೇಕೆ ಕಾಂತಿಯಂ
ನಗೆಮೊಗಂ ಕೆದಱಿದಾನೆ ಪೊಕ್ಕ ಬೇ-
ಸಗೆಯ ಕಾಡಕೆಱೆಯಂತೆ ನಾಡೆಯುಂ
ಬಗೆ ಕಲಂಕಿದುದಿದೇಕೆ ಕೋಮಲೆ

ಎಂಬ ಮತ್ತಕೋಕಿಲದ ಒಡನೆಂದು, ಪಕ್ಕದಲ್ಲಿಟ್ಟು ನೋಡಬಹುದು. ಇದು ಅಕ್ಷರವೃತ್ತ, ಅದು ಎಂದರೆ ಮಟ್ಟುರಗಳೆ ಮಾತ್ರಾವೃತ್ತ; ರಚನೆಯಲ್ಲಿ ಭಿನ್ನ, ಧಾಟಿಯಲ್ಲಿ ಅಭಿನ್ನ. ಮತ್ತಕೋಕಿಲವನ್ನು ಮಾತ್ರಾಗಣಗಳಾಗಿ ವಿಂಗಡಿಸಿ ನೋಡಿದರೆ ಎರಡೂ ರಚನೆಯಲ್ಲಿಯೂ ಏಕರೂಪವನ್ನು ತಳೆಯುವುದನ್ನು ನಿಚ್ಚಳವಾಗಿ ಕಾಣಬಹುದು :

ಅಕ್ಷರಗಣಯೋಜನೆಯಲ್ಲಿ : ∪∪∪ | —∪∪ | ∪—∪ | —∪— |
ಮಾತ್ರಾಗಣಯೋಜನೆಯಲ್ಲಿ : ∪∪∪ | ∪∪∪ | —∪ | —∪ | —
೩ | ೫ | ೩ | ೩ | ಗು

'ಪದ್ಯರಚನೆಯೊಳ್' ಎಂಬ ಪದ್ಯವು ಅಖಂಡಿತವಾಗಿ ಮತ್ತಕೋಕಿಲದ ರೂಪಾಂತರವೆಂದು ತಿಳಿಯಲು ಸಾಧ್ಯವಿದೆ. ಈ ಸಾದೃಶ್ಯದಿಂದ, ಪ್ರತಿಭಾನ್ವಿತ ಕವಿಗಳಿಗೆ ಕೆಲವೊಂದು ಸುಗಮ ಅಕ್ಷರವೃತ್ತಗಳನ್ನು ಗುರುಲಘುಕ್ರಮದ ಬಂಧನದ ಕ್ಲಿಷ್ಟತೆಯನ್ನು ನೀಗಿಸಿ ಸುಲಲಿತಮಾತ್ರಾವೃತ್ತಗಳಾಗಿ ಪರಿವರ್ತಿಸಿ ಛಂದೋವೈವಿಧ್ಯವನ್ನು ಹೆಚ್ಚಿಸುವುದಕ್ಕೆ ಆಸ್ಪದವಿದ್ದಿತೆಂದು ಸ್ಪಷ್ಟವಾಗುತ್ತದೆ ಪ್ರತ್ಯುತ್ಪನ್ನಮತಿಗಳು ಈ ದಿಶೆಯಲ್ಲಿ ಪ್ರಯತ್ನಿಸುವುದು ಸ್ವಾಭಾವಿಕ. ರನ್ನನ ಹಿಂದಿನಿಂದಲೆ ಇಂತಹ ಪ್ರಯತ್ನಗಳ ಆರಂಭವಾಗಿರಬಹುದೆಂದು ಊಹಿಸಲು ಆಸ್ಪದವಿದೆ. ಅಂತಹದೊಂದು ಪ್ರಯೋಗದ ಉದಾಹರಣೆಯೆಂದು ರನ್ನನ ಈ ಪದ್ಯವನ್ನು ಎಣಿಸಿದರೆ ತಪ್ಪಾಗಲಿಕ್ಕಿಲ್ಲ.

ಒಟ್ಟಾರೆ, ನಾನಿಲ್ಲಿ ಎರಡು ವಿಚಾರಗಳನ್ನು ವಿಮರ್ಶಾವಿಚಕ್ಷಣರ ಗಮನಕ್ಕೆ ತಂದಿದ್ದೇನೆ :

(೧) ಗದಾಯುದ್ಧದ 'ಪದ್ಯರಚನೆಯೊಳ್' ಎಂಬ ಪದ್ಯವು ಮೂಲತಃ ಮಂದಾನಿಲ ಅಥವಾ ಮಟ್ಟರಗಳೆ ಇದ್ದಿರಬಹುದು; (೨) ಮತ್ತಕೋಕಿಲ ವೃತ್ತದ ಮಾತ್ರಾಗಣಕ್ಕೆ ತಿರುಗಿದ ರೂಪಾಂತರವಿರಬಹುದು. ಆದರೆ, ರಗಳೆಯಂತೆ ಎರಡೆರಡು ಸಾಲಿಗೆ ಆದಿಪ್ರಾಸವಿದ್ದರೂ ಅಂತ್ಯಪ್ರಾಸರಾಹಿತ್ಯದಿಂದ, ದೀರ್ಘವಾದ ವರ್ಣನೆಗಾಗಲಿ ಕಥಾವಿವರಣೆಗಾಗಲಿ ಇದನ್ನು ಬಳಸಿಲ್ಲವಾದುದರಿಂದ, ಒಂದು ಚಿಕ್ಕ ಮಾತನ್ನು ನಾಲ್ಕೇ ಪಙ್ಕ್ತಿಗಳಲ್ಲಿ ಹೇಳಿರುವುದರಿಂದ ಇದನ್ನು ರಗಳೆಯೆಂದು ಕರೆಯುವುದು ಸೂಕ್ತವೆನಿಸಲಾರದು. ಪೂರ್ವಕವಿಗಳು ಕಿರಿದರಲ್ಲಿ ಹೇಳಬೇಕಾದ ಒಂದು ಮಾತನ್ನೊ ಕಲ್ಪನೆಯನ್ನೊ ಹೇಳುವುದಕ್ಕೆ ಸಾಮಾನ್ಯವಾಗಿ ಕಂದಪದ್ಯವನ್ನು ಬಳಸುವುದುಂಟು. ಇಲ್ಲಿ ರನ್ನನು ಪೂರ್ವ ಕವಿಗಳಿಬ್ಬರನ್ನು ಚುಟಕವಾಗಿ ಸ್ಮರಿಸುವುದಕ್ಕೆ ಚಿಕ್ಕದೊಂದು ವೃತ್ತವನ್ನು—ಅಕ್ಷರವೃತ್ತವನ್ನು ಮಾತ್ರಾವೃತ್ತವನ್ನಾಗಿ ರೂಪಾಂತರಿಸಿ ಬಳಸಿದ್ದಾನೆ. ಹೀಗೆ ರೂಪಾಂತರಿಸುವುದರಿಂದ ಚರಣಗಳ ಮಾತ್ರೆಗಳ ಮೊತ್ತವು ವ್ಯತ್ಯಾಸಗೊಳ್ಳದಿದ್ದರೂ ಅಕ್ಷರಗಳ ಮೊತ್ತ ವ್ಯತ್ಯಾಸಗೊಂಡಿದೆ (ಪೂರ್ವಾರ್ಧದ ಚರಣಗಳಲ್ಲಿ ೧೧, ಉತ್ತರಾರ್ಧದ ಚರಣಗಳಲ್ಲಿ ೧೩); ನಾಲ್ಕು ಚರಣಗಳಿಗೂ ಏಕಪ್ರಾಸವನ್ನಿಡದೆ ಪೂರ್ವಾರ್ಧ ಉತ್ತರಾರ್ಧಗಳಿಗೆ ಬೇರೆ ಬೇರೆ ಪ್ರಾಸವನ್ನಿಡಲಾಗಿದೆ. ಈ ಎರಡು ಕಾರಣಗಳಿಂದ ಇದೊಂದು ಅರ್ಧಸಮಮಾತ್ರಾವೃತ್ತವೆಂದು ತಿಳಿಯುವುದಕ್ಕೆ ಪ್ರತ್ಯವಾಯವಿಲ್ಲ. ಮತ್ತಕೋಕಿಲದ ಮಾತ್ರಾವೃತ್ತರೂಪವಾದುದರಿಂದ ಮಾತ್ರಾವಿಶಿಷ್ಟಮತ್ತಕೋಕಿಲವೆಂದು ಸದ್ಯ ಎನ್ನಬಹುದೇನೋ. ಹೆಸರಿಡುವ ಕೆಲಸವನ್ನು ಪಂಡಿತಮಂಡಲಿಗೆ ಬಿಡುವ.

ಎಂಥ ರಮ್ಯವಾದ ಆಟ!

ಬಿ. ಜಿ. ಯಲ್ಲಟ್ಟಿ

ಆಚಿ ಮನಿ ಪವ್ ಈಚಿ ಮನಿ ಪವ್
ಉಪ್ಪ ಕೊಡು ಉಪ', ಆಚಿ ಮನಿ ಪವ್
ಉಪ್ಪಿಲ್ ಉಪ್, ಆಚಿ ಮನಿ ಪವ್
ಇಲ್ಲವಾದರಲ್ಲಿ ಬಿಡು, ಆಚಿ ಮನಿ ಜಿಗಿತ !
ಎಲ್ಲಿ ಸಿಗುವದಲ್ಲಿಗೆ
ಒಂದೆ ಒಂದು ಹುಲುಕಿಗೆ
ಪ್ರಾಣದಿಂದ ಪ್ರಾಣಕೆಂತು ಹಾರಿಗಾಲ ನೆಗೆತ !!
ಎಂಥ ರಮ್ಯವಾದ ಆಟ
ವಿಫಲ ಸಫಲ ಗೈವ ಮಾಟ !
ಇದರ ತಂತ್ರವರಿತವ
ಮಂತ್ರಪಠನಗೈದವ
ಅವನೆ ಸದಾ ನಿತ್ಯಸುಖಿ !
ಅವನೆ ಸರ್ವತೋಮುಖಿ !!

*   *   *   *

"ಎಲ್ಲಿ ಸಿಗುವದೆಮಗೆ ಬೋನ
ಅಲ್ಲೆ ನಮ್ಮ ನಿತ್ಯ ಠಾಣ !"—
ಅದೊ ಗುಳೇಕಾರರು
ನಿಂತಲ್ಲಿಯೆ ನಿಲ್ಲರು !
ಠಾಣದಿಂದ ಠಾಣಕೆಂತು ಪಯಣ ಬೆಳೆಸಿ ನಡೆವರು !
ಬೋನದಾಸೆ ಮುಗಿಯಿತೊ—
ಹೆಜ್ಜೆ ಯಾಚೆ ಜಿಗಿಯಿತೊ,
ಇಲ್ಲಿಯೇನು ಅಲ್ಲಿಯೇನು ಜಠರಾಗ್ನಿಯ ಪೂಜನ !
ಸ್ವಾಭಿಮಾನ ಹಿಡಿದರೇನು ಸುಟ್ಟನರಕ ಜೀವನ !!

*   *   *   *

ಒಮ್ಮೆ ಶುಕ್ಲ ಒಮ್ಮೆ ಕೃಷ್ಣ ಪಕ್ಷಕಲೆವ ಚಂದ್ರನು
ಯಾರಿಂದಲೊ ಎರವು ಪಡೆದು ತನ್ನದೆಂದೆ ಬಗೆವನು
ಕಪ್ಪುಕಲೆಯನಿರಿಸಿಕೊಂಡು ಶುಭ್ರನಾಗಿ ಮೆರೆವನು !
ಇಂದಿನಂತೆ ನಾಳೆಯಲ್ಲ ಇವನ ರಾಗ ಲಕ್ಷಣ,

ಒಮ್ಮೆ ದೀನ ಒಮ್ಮೆ ಧನಿಕ ಇವನ ಗತಿ ವಿಲಕ್ಷಣ !
ಆಚಿ ಮನಿ ಪವ್ ಈಚಿ ಮನಿ ಪವ್

* * * *

ಕರ್ಣನಿಂಥ ಆಟವನ್ನು ಏಕೆ ನೋಡಲಿಲ್ಲವೊ !
ಇದರ ಮರ್ಮವರಿತು ಸಂಧಿಲಾಭ ಪಡೆಯಲಿಲ್ಲವೊ !!
ಗಂಡಸಾಗಿ ಹೆಣ್ಣನಾಟ ನೋಡಲೇತಕೆಂದನೊ !
ಗಂಡಸಾಗಿ ಹೆಣ್ಣ ನಾಟವಾಡಲೇತಕೆಂದನೊ !!
ಹೆಣ್ಣು ಏನು ಗಂಡು ಏನು,
ಯಾರದಾಟವಾದರೇನು—
ಮನಸು ತಣಿದರಾಯಿತು !
ಬಯಕೆ ಸಂದರಾಯಿತು !
ಆಚಿ ಮನಿ ಈಚಿ ಮನಿ ಪವ್ ಎಂದು ಕರ್ಣನು
ಆಚೆ ಹೆಜ್ಜೆ ಈಚೆ ಸ್ವಲ್ಪ ಸರಿಸಿದ್ದರೆ ಆತನು
ಸಹಜ ಸಾರ್ವಭೌಮನಾಗಿ
ಮೆರೆಯುತಿದ್ದ ಕುಲಜನಾಗಿ !
ಗೆದ್ದೆತ್ತಿನ ಬಾಲ ಹಿಡಿದು ಉಘೋ ಎನುವ ಅಲ್ಪನಲ್ಲ !
ಹೊತ್ತ ನೆಲವನೊದ್ದು ಹೊರದ ಸ್ವರ್ಗಕಾಸೆಗೈವನಲ್ಲ !!
ಅಚಲನಿಷ್ಠ ಕರ್ಣನೆಂತು
ಗತ್ತಿನಾಟ ಮೆಚ್ಚಬಲ್ಲ !
'ನನ್ನಿಗಾಗಿ ಸತ್ತ ಹುಚ್ಚ'--
ನಗುವ ಜನವು ಇಲ್ಲದಿಲ್ಲ !!

* * * *

ಆಚಿ ಮನಿ ಪವ್ ಈಚಿ ಮನಿ ಪವ್
ಖರೆ ಖರೆ ಇದರ ಗುಟ್ಟನಿಂದಿನವರು ಅರಿತರು !
ಈ ಆಟದ ಬೆನ್ನುಹತ್ತಿ ಗದ್ದುಗೆಯಲಿ ಕುಳಿತರು.
ಒಮ್ಮೆ ಶುಕ್ಲ ಒಮ್ಮೆ ಕೃಷ್ಣ ಪಕ್ಷಕಿವರು ಸರಿವರು !
ಶುಕ್ಲದಲ್ಲಿ ಶಶಿಯ ಸುತ್ತು ಜಕ್ಕೆಯಾಗಿ ನಲಿವರು !
ಕೃಷ್ಣದಲ್ಲಿ ತಮಗೆ ತಾವೆ ಚಂದ್ರರಾಗಿ ಮೆರೆವರು !!
ಅಂತು ಗಗನ ಇವರ ವಾಸ !
ಆಸ್ಥಾನವೇ ಇವರ ಧ್ಯಾಸ !!
ಕೆಳಗಿನಿಳೆಯು ಅಂಧಕಾರ
ಇವರಿಂದಲೆ ದೂರ ದೂರ !! *

---

* ಧಾರವಾಡ ಆಕಾಶವಾಣಿಯಲ್ಲಿ ಬಿತ್ತರಿಸಲಾದ ಕವಿತೆ.

ಗ್ರಂಥಾವಲೋಕನ

ಬಿಡಿಸ್ವರವಚನಗಳು—ಸಂಪಾದಕರು : ಜಿ. ಎಮ್. ಉಮಾಪತಿಶಾಸ್ತ್ರಿ, ಎಂ. ಎ., ಶಾರದಾ ಭವನ ಪ್ರಕಾಶನ, ಬಾಗಿಲುಕೋಟೆ, ೧೯೬೪ ; ಬೆಲೆ : ರೂ. ೧.

'ಬಿಡಿಸ್ವರವಚನಗಳು' ಬೇರೆ ಬೇರೆ ಶರಣ ಕವಿಗಳಿಂದ ರಚಿತವಾದ ಮೂವತ್ತು ಅನುಭಾವದ ಹಾಡುಗಳ ಸಂಗ್ರಹ. ೨೭ ಪುಟಗಳ ಈ ಪುಸ್ತಿಕೆಗೆ ಸಂಪಾದಕರು ೧೨ ಪುಟಗಳ ಪ್ರಸ್ತಾವನೆ ಬರೆದು ಅದರಲ್ಲಿ ಗೀತಹಾಡುಗಳ ಬೆಳವಣಿಗೆ,— ಭಾವಗೀತೆ,— ತತ್ತ್ವಪದ,— ಸ್ವರವಚನ,— ಮೇಳಗೀತೆ—ಭಜನೆ,— ಪ್ರಕೃತ ಸ್ವರವಚನಗಳ ಮುದ್ರಿಕೆ,—ಕವಿಯು ಕಾಲ—ಕೃತಿಗಳ ಬಗೆಗೆ ವಿವರಣೆ ಹಾಗೂ ವಿಮರ್ಶೆ ಒದಗಿಸಿದ್ದಾರೆ

ಈ ಹಾಡುಗಳನ್ನು ಸಂಗ್ರಹಿಸಿದವರು 'ಕವಿ ಶಿವರುದ್ರಸ್ವಾಮಿ'. ಈತನು ತಾನೇ ಕಟ್ಟಿದ, ತನ್ನ ಕಾಲದಲ್ಲಿ ಪ್ರಚುರದಲ್ಲಿದ್ದು ತನಗೆ ಇಷ್ಟವೆನಿಸಿದ ಹಾಡುಗಳನ್ನು ಸಂಗ್ರಹಿಸಿರುವನು. ಈತನ ಗುರು ಮಹಾವಿದ್ವಾಂಸ ಹಾಗೂ ಪರಮಯೋಗಿಯಾದ 'ಮುದ್ದುಸಂಗಮುನಿ'. ಶಿವರುದ್ರಸ್ವಾಮಿಯೂ ಸಂಸ್ಕೃತ-ತೆಲಗು ಭಾಷೆಗಳೆರಡರಲ್ಲಿ ಪಾಂಡಿತ್ಯಪಡೆದಿದ್ದನೆನ್ನಲು 'ಮಾಯಾವಾದ ತಿರಸ್ಕಾರ' ಎಂಬ ಅವರ ತೆಲಗು ತಾತ್ತ್ವಿಕ ಕೃತಿ ನಿದರ್ಶನವಾಗಿದೆ. ಇವನ ಕಾಲ ಸುಮಾರು '೧೮೨೫' ಎಂದು ಸಂಪಾದಕರು ನಿರ್ಧರಿಸಿದ್ದಾರೆ.

ನಮ್ಮ ನಾಡಿನಲ್ಲಿ ಆಗಿಹೋದ ವಿಭೂತಿಪುರುಷರು ದರ್ಶಿಸಿದ ತಾತ್ತ್ವಿಕ ಪ್ರಪಂಚದ ಅನುಭಾವವನ್ನು, ಪ್ರತಿಭಾವಂತ ಮಹಾಕವಿಗಳು ರಚಿಸಿದ ಮಹಾ ಕಾವ್ಯ ಪುರಾಣ—ಹಾಡುಗಳ ಅನುಭವವನ್ನು ರೂಪಾಂತರಿಸಿ ಅಧ್ಯಾತ್ಮದಲ್ಲಿ ಆಸಕ್ತಿಯುಳ್ಳ ಜನಸಾಮಾನ್ಯರಿಗೆ ನೀಡುವ ಹಂಬಲ ಈ ಅನುಭಾವಿಗಳಲ್ಲಿ ಕಾಣುತ್ತಿದೆ. ಆದರೆ ಕೆಲಕೆಲವು ಕವಿಗಳು ತಮ್ಮ ಪಾಂಡಿತ್ಯ ಪ್ರದರ್ಶನದಲ್ಲಿಯೇ ಕೃತಕೃತ್ಯರಾಗಿದ್ದಾರೆ. ಈ ಪಂಡಿತ ಕವಿಗಳು ಒಂದೆಡೆ :

> ಫಾಲನೇತ್ರ ಫಣಿವಿಭೂಷಣ ಶ್ರೀಗೌರಿ
> ಲೋಲ ನಿಖಿಲಭುವನಪೋಷಣ
> ಬಾಲಚಂದ್ರ ಮೌಕುಟ ರುಂಡಮಾಲಾಧಾರ ತ್ರಿ
> ಶೂಲ...... (ಸ್ವರವಚನ ೨೦)

ಮತ್ತು

> ನಮೋ ನಾಗಭೂಷಣಾಯ ತ್ರಿಜಗಮೋಹಾ
> ಶಮನ ಮದನಹರಣಾಯ ಶಾರದಾ
> ರಮಣಸುತ ಚರಣಾಯ... (ಸ್ವ.ವ. ೨೧)

ಎಂದು ಮೊದಲಾಗಿ ಶಿವನಾಮಾವಳಿ ಪಠಣ ಮಾಡಿದರೆ ಸ್ವರವಚನ ೨೫ರಲ್ಲಿ ಬಸವನಾಮಾವಳಿಯ ಕೋಶವನ್ನೇ ರಚಿಸಿದ್ದಾರೆ. ಸ್ವರ....ಸ್ವರವಚನ ೮ ಮತ್ತು ೨೩ರಲ್ಲಿ ಶಿವಲೀಲೆಗಳನ್ನು ಛಂದೋಬದ್ಧವಾಗಿ ಸಂಗ್ರಹಿಸಿದ್ದಾರೆ. ಪಾಂಡಿತ್ಯಕ್ಕೆ ಶಿಖರವೆಂಬಂತೆ ಬೆಡಗಿನ ಮುಂಡಿಗೆ (ಸ್ವ.ವ. ೧೧–೧೨–೨೬) ಹಾಗೂ ಒಗಟಿನ ಜಾಲ (ಸ್ವ.ವ. ೨೯) ನಿರ್ಮಿಸಿದ್ದಾರೆ. ಇಂಥ ಶುಷ್ಕ ಹಾಡುಗಳು ಸಹ ಭಜನಾ ಮೇಳದವರ ಉತ್ಸಾಹ–ಕಂಠಮಾಧುರ್ಯ–ವಾದ್ಯಗಳ ಸಂಯೋಜನೆಯಲ್ಲಿ ಬೆರೆತು ಬಾಳಿಕೊಂಡು ಬಂದಿವೆ.

ಎರಡನೆಯದಾಗಿ ಇಲ್ಲಿ ಕಾಣುವವರು ಅನುಕರಣ ಕವಿಗಳು. ಸಂಪಾದಕರೇ ೧೬ನೆಯ ಸ್ವರವಚನ ನಿಜಗುಣರ ಕೈವಲ್ಯಪದ್ಧತಿಯ ಮೊದಲನೆಯ ಪದ್ಯದ ಅನುಕರಣವೆಂದು ಎತ್ತಿ ತೋರಿಸಿದ್ದಾರೆ. ಸ್ವಲ್ಪ ಪರಿಶ್ರಮಪಟ್ಟರೆ ಇದರಲ್ಲಿಯ ಬಹಳಷ್ಟು ಸ್ವರವಚನಗಳ ಮೂಲವನ್ನು ಹುಡುಕಿತೋರಿಸುವದು ಸಾಧ್ಯವಾಗ-ಬಹುದು. ೧೫ನೆಯ ಸ್ವರವಚನದ—

ನಾರಿಯರುಗಳ ನೋಡಿ ಚಲಿಸದಾ
ಧೀರನೇ ಶಿವಯೋಗಿಯೋ

ಎಂಬುದು

ಸೋಲದಾತನೆ ವಿರತನು । ಮನದೊಳಗೆ
ಬಾಲೆಯರ ಸಿಂಗರವನೆ ಕಂಡು

ಎಂಬ ನಿಜಗುಣರ ಹಾಡಿನ ರೂಪಾಂತರ. ಇದಲ್ಲದೆ

ಸಲೆ ಶಿವಾ ಎಂಬವರಿಗೆ ನಾನೆರಗುವೆ
ಶಿವನ ನೆನೆದವರೆನ್ನ ಅವರೆನ್ನ ಮನದೇವ
ಅವರೆನ್ನ ಕುಲದೈವ...... (ಸ್ವ.ವ. ೬)

ಎಂಬಲ್ಲಿ ಮತ್ತು

ಗಿರಿಗೆ ಚಳಿಯಾಗೆ ಪೊದಿಸುವರುಂಟೆ ಅಂ-
ಬರವುದುರೆ ಹೊರೆಯಾಗೆ ನಿಲಿಸುವರುಂಟೆ- (ಸ್ವ. ವ ೧೦)

ಮುಂತಾದವುಗಳಲ್ಲಿ ಬಸವಣ್ಣನವರ ಹಾಗೂ ಪ್ರಭುದೇವರ ವಚನಗಳು ಇಳಿದು ಬಂದಿರುವದು ಸ್ಪಷ್ಟವಿದೆ.

ಇನ್ನುಳಿದ ಕವಿಗಳೆಂದರೆ ತಮ್ಮ ಬಾಳಿನ ನಿರ್ವಾಲ್ಯವನ್ನು ಒಪ್ಪಿ-ಕೊಂಡವರು. ತತ್ಕಾಲೀನ ತಾತ್ತ್ವಿಕ ಹಾಗೂ ಲೌಕಿಕ ಪರಿಸರವನ್ನು ಯಥಾ-ವತ್ತಾಗಿ ನಿರೂಪಿಸಿದವರು. ತಾತ್ತ್ವಿಕ ಜಗತ್ತು ಅರಿವಿನ ಸಾಕ್ಷಾತ್ಕಾರದ ಹಂಬಲದಲ್ಲಿ ಸಾಧನೆಮಾಡದೆ, ಅಂಧಶ್ರದ್ಧೆಯಿಂದ ಕುರುಹುಗಳನ್ನೆ ಪೂಜಿಸುತ್ತ ಹೊರಟಿತ್ತು. ಇದನ್ನು ೩ನೆಯ ಸ್ವರವಚನದ—

ಶಾಸ್ತ್ರ ಶಬ್ದವ ಕಲಿತು ಮಾತು ಬಣ್ಣಿಸಬಹುದು.
ನೀತಿಮಾರ್ಗವ ನುಡಿದು ಹೇಳಬಹುದು
ಆದಿಯ ಪುರಾತನರೋದಿದ ವಚನ ಗೀತಗಳ-
ನಾದರಿಸಿ ಕೇಳಿ ತಲೆದೂಗಬಹುದು

ಈ ಮುಂತಾದ ಸಾಲುಗಳಲ್ಲಿ ಕಾಣಬಹುದು. ಇಂಥವರಿಗೆ ಸತ್ಯದ ಸಾಕ್ಷಾತ್ಕಾರ-ವಿರಲಿಲ್ಲವೆಂಬುದೂ ೧೯ನೆಯ ಸ್ವರವಚನದಲ್ಲಿ ಸೂಚಿತವಾಗಿದೆ—

ದೇಗುಲವ ಕಂಡು ದೇವನೆಂದು ಪೋದಡೆ
ಲಿಂಗವಿಲ್ಲದ ಮನ ನಾಚಿತ್ತಯ್ಯಾ

ಇಲ್ಲಿ ಲೌಕಿಕಪ್ರಪಂಚದ ಮಾತೂ ಅಷ್ಟೆ. ರಾಜಕೀಯ ಸಂಘಟನೆಯಿಲ್ಲದ್ದರಿಂದ ಸಾಮಾಜಿಕ ಶಕ್ತಿ ನಷ್ಟವಾಗಿತ್ತು. ಆದರಲ್ಲಿಯೇ ಈ ಕವಿಗಳು ಯಕ್ಷಗಾನ–ಗರಡಿಮನೆ–ಪಂಜರದಗಿಳಿ-ಪತಿಗೃಹಕ್ಕೆ ಹೊರಟ ಮಗಳು ಹಾಗೂ ಸತಿ–ಪತಿ ಪ್ರಣಯಗಳು ಇವೇ ಮೊದಲಾದ ರಸಪ್ರಸಂಗಗಳಿಂದ ಪ್ರೇರಣೆಹೊಂದಿದ್ದಾರೆ.

ಗೌರಮ್ಮಾ ಹೋಗಿ ಬಾರಮ್ಮಾ (ಸ್ವ.ವ. ೧೮)
ಮನವೆಂಬ ಗಿಳಿಯನೋದಿಸು (ಸ್ವ.ವ. ೧೭)

ಈ ಹಾಡುಗಳಲ್ಲಿ ಪಲ್ಲವಿಯಲ್ಲಿ ಕಾಣಿಸಿದ ಮಿಂಚು ಮುಂದೆ ಉಳಿದಿಲ್ಲ. ಇದ್ದು-ದರಲ್ಲಿ ಭಕ್ತಿರತಿಯ ಹಾಡುಗಳು ಸಹೃದಯರ ಮೆಚ್ಚುಗೆಗೆ ಪಾತ್ರವಾಗ-ಬಲ್ಲವು. ಚರ್ವಿತಚರ್ವಣವಾದ ಭಾವಗಳಿಂದ ಗೀಳೆನ್ನಿಸಲೂ ಬಹುದು. ಆದರೂ

ತೆರೆಹೊಯ್ಕಲು ಕೊಳನೊಳು ತಾವರೆ ತಾವರೆಗಮರಲು
ಸಿರಿಯಾಬ್ಜಮಧುವೆರಸಿದ ರಜದೊಬ್ಬುಳಿಯನೆ ಕಂಡು
ತರಳೆ ರಸದಾಂಬುಲಗುಟುಕನು ಮುಖದೊಳು ಮುಖವಿಡುತಾ
ವರ ಗೌರೀಶ್ವರ ನೋಡುವ ಭಾವವನೆ ನೆನೆನೆನೆದು (ಸ್ವ.ವ. ೨೮)

ಎಂಬ ಸಾಲುಗಳಲ್ಲಿ ಹಳೆಯ ಭಾವನೆಗೆ ಕವಿಪ್ರತಿಭೆ ಹೊಸ ಮೆರುಗನ್ನು ತಂದು-ಕೊಟ್ಟಿದೆ. ಅದೇ ರೀತಿ ೧೪ನೆಯ ಸ್ವರವಚನದ 'ಅಕ್ಕಾ ಯಾರಕ್ಕಾ' ಎಂಬ ಗೀತವೂ ಭಾವಗೀತದ ಲಕ್ಷಣವನ್ನು ಮೈಗೂಡಿಸಿಕೊಂಡಿದೆ. ಇಂತಹ ಸ್ವರ-ವಚನಗಳೇ ಮುಂದೆ ಬರುವ ಹೊಸ ಯುಗದ ಭಾವಗೀತೆಯ ಆತ್ಮಕ್ಕೆ ಅನು-ಗುಣವಾದ ಸುಂದರ ಶರೀರವನ್ನು ಜೋಪಾನವಾಗಿ ಕಾಯ್ದುಕೊಂಡು ಬಂದವು.

ಈ ಹಾಡುಗಳ ಭಾಷೆಯೂ ಕೂಡಾ ನಡೆದುಬಂದ ದಾರಿಯಲ್ಲೇ ನಡೆದಿದೆ. ನೂತನ ಪ್ರಯೋಗ ಸಂಸ್ಕಾರವಾಗಲಿ, ಜನಪದ ಸಾಹಿತ್ಯದ ಸಹಜ ಒಗರಾಗಲಿ ಇಲ್ಲಿ ಇಲ್ಲ. ಕೆಲವು ಕಡೆಯಂತೂ 'ಬಾರಾನೆನೆ ಮುದ್ದು ಗೌರೀಶ ?' ಯಾವಾಗನಾಗೆ–ಕಸನಿಗಿಂತ–ಜೆರೆಸಲಿಸಬೇಕು ಮುಂತಾದ ವಿಚಿತ್ರ ಪ್ರಯೋಗ-ಗಳು ಸಹೃದಯರನ್ನು ತಬ್ಬಿಬ್ಬು ಮಾಡುತ್ತವೆ.

ಒಟ್ಟಿನಲ್ಲಿ ಗೇಯತೆ ಈ ಹಾಡುಗಳ ಸ್ಥಾಯಿಗುಣ. ಸಾಹಿತ್ಯದ ಇತಿಹಾಸಕಾರರಿಗೆ ಯುಗಧರ್ಮವನ್ನು ಗುರುತಿಸಲು ಇಂಥ ಹೊತ್ತಿಗೆಗಳು ಸಾಧನ ಸಾಮಗ್ರಿಗಳಾಗಬಲ್ಲವು.

ಲಿಂ. ಡಾ. ಫ. ಗು ಹಳಕಟ್ಟಿಯವರಿಂದ ಕೈಕೊಂಡ ಶಿವಾನುಭವ-ಸಾಹಿತ್ಯ ಸಂಸ್ಕರಣ ಪರಂಪರೆಯನ್ನು ಮುಂದುವರಿಸಿ ಅಚ್ಚುಕಟ್ಟಾಗಿ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸುವ ಮಾನ್ಯ ಜಿ. ಎಂ. ಉಮಾಪತಿ ಶಾಸ್ತ್ರಿಗಳು ಸ್ತುತ್ಯರಾಗಿದ್ದಾರೆ. ಅವರಿಂದ ಅಮೂಲ್ಯ ಗ್ರಂಥಗಳ ಸಂಸ್ಕರಣ ಹಾಗೂ ಸಂಪಾದನ ಕಾರ್ಯ ಮುಂದುವರಿಯಲೆಂದು ಹಾರೈಸೋಣ.

—ಎ. ಎಸ್. ಹಿಪ್ಪರಗಿ

ಷೇಕ್ಸ್‌ಪಿಯರಿಗೆ ನಮಸ್ಕಾರ : ಸಂಪಾದಕರು : ಶಾ. ಬಾಲೂರಾವ್ ; ಪ್ರಕಾಶಕರು : ಕನ್ನಡ ಭಾರತೀ, ೪/೧೦, ವೆಸ್ಟರ್ನ್ ಎಕ್ಸ್‌ಟೆನ್‌ಷನ್ ; ಕರೋಲ್ ಬಾಗ್, ಹೊಸದಿಲ್ಲಿ–೫ ; ಪುಟಗಳು : ಡೆಮಿ ಆಕಾರದ ೫೬+೩೯೪ ; ಬೆಲೆ : ಇಪ್ಪತ್ತೈದು ರೂಪಾಯಿಗಳು ; ೧೯೬೬.

ಷೇಕ್ಸ್‌ಪಿಯರಿಗೆ ನಮಸ್ಕಾರ, 'ನಾನೂರನೆ ವರ್ಧಂತಿಯ ನೆನಪಾಗಿ ಕವಿ ಚಕ್ರವರ್ತಿಗೆ ಸಲ್ಲಿಸಿದ ಕನ್ನಡ ಗ್ರಂಥಾಂಜಲಿ'.

ಲೋಕಸಾಹಿತ್ಯದಲ್ಲಿ ಜರೆ ಕಾಣದ ವಿರಳ ಜವ್ವನಿಗರಲ್ಲಿ ಷೇಕ್ಸ್‌ಪಿಯರ್ ಅಗ್ರಗಣ್ಯ. ಕಾಲ ದೇಶಗಳನ್ನು ಅವನಷ್ಟು ಯಶಸ್ವಿಯಾಗಿ ದಾಟಿರುವ ಇನ್ನೊಬ್ಬ ಕವಿಯನ್ನು ಕಾಣುವುದು ಕಷ್ಟ. ಈ ಅದ್ವಿತೀಯ ಹಿರಿಮೆಗೆ ಅವನ ಕೃತಿಸಾಮರ್ಥ್ಯದಂತೆಯೇ, ಇಂಗ್ಲಿಷ್ ಭಾಷೆಯ ವ್ಯಾಪಕತೆಯೂ ಕಾರಣವಾಗಿದೆ. ನಾಲ್ಕು ವರ್ಷಗಳ ಕೆಳಗೆ ಲೋಕಾದ್ಯಂತ ಆಚರಿಸಲ್ಪಟ್ಟ ಈ 'ಸ್ಟ್ರ್ಯಾಟ್‌ಫರ್ಡ್ ಚಾರಣ'ನ ನಾನೂರನೆ ವರ್ಧಂತಿ ಅವನ ಬಗ್ಗೆ ಆರದ ಉತ್ಸಾಹವನ್ನು ತೋರಿಸಿತು. ಇದೇ ಸಂದರ್ಭದಲ್ಲಿ ಷೇಕ್ಸ್‌ಪಿಯರಿಗೆ ನಮಸ್ಕಾರ ಮಾಡಿ ಕನ್ನಡಿಗರೂ ತಮ್ಮ ಕೃತಜ್ಞತೆಗಳನ್ನು ಸಲ್ಲಿಸಿದರು. ಈ ಕೃತಜ್ಞತೆಯ ಶಾಶ್ವತ ಸ್ವರೂಪದ ಒಂದು ಭಾಗವಾಗಿ, ದೆಹಲಿ ಕನ್ನಡಿಗರ, ಮುಖ್ಯವಾಗಿ, ಸಂಪಾದಕ ಶಾ. ಬಾಲೂರಾವ್ ಹಾಗೂ ಅವರ ಮಿತ್ರರ ಪ್ರಯತ್ನ, ಸಾಹಸಗಳ ಫಲವಾಗಿ ನಮ್ಮೆದುರಿಗಿರುವ ಕೃತಿ ಪ್ರಕಟವಾಗಿದೆ.

ಈ ಕೃತಿಯ ವಿಷಯವಾಗಿ ಮೊತ್ತಮೊದಲು ಹೇಳಬೇಕಾದ ಮಾತೆಂದರೆ, ಕನ್ನಡ ಪ್ರಕಟಣ ಪ್ರಪಂಚದಲ್ಲಿ ಕಂಡರಿಯದ ಗ್ರಂಥವಿನ್ಯಾಸದ ಸೊಗಸು. ಸಮಕಾಲೀನ ಕನ್ನಡ ಗ್ರಂಥನಿರ್ಮಾಣಕಲೆಯಲ್ಲಿ ಮುದ್ರಕರೂ, ರಟ್ಟುಕಟ್ಟುವವರೂ ತೋರಬಹುದಾದ ಅತ್ಯುತ್ತಮ ಕೌಶಲಕ್ಕೆ ಈ ಗ್ರಂಥ ಒಂದು ಸಾಕ್ಷಿಯಾಗಿದೆ. ಗ್ರಂಥದ ಮುದ್ರಣ, ಹೊದಿಕೆಯ ವಿನ್ಯಾಸ, ರಟ್ಟು

ಕಟ್ಟುವಿಕೆ ಎಲ್ಲವೂ ಸಂಪೂರ್ಣವಾಗಿ ದೆಹಲಿಯಲ್ಲಿಯೇ ನಡೆದಿರುವುದು ಹೆಚ್ಚಿನ ಅಚ್ಚರಿಗೂ ಮೆಚ್ಚುಗೆಗೂ ಕಾರಣವಾಗಿದೆ. ಮುದ್ರಣಕಲೆಯಲ್ಲಿ ಒಂದು ಗ್ರಂಥ ಪಡೆಯಬಹುದಾದ ರಾಷ್ಟ್ರಪ್ರಶಸ್ತಿಯನ್ನು ಇದು ಗಳಿಸಿರುವುದು ಸಹಜ ವಾಗಿಯೇ ಇದೆ.

ಸುಪ್ರಸಿದ್ಧ ಕಲಾವಿದರಾದ ಆರ್. ಎಸ್. ಎನ್. ಅವರ ಹಲವು ಚಿತ್ರ ಗಳಿಂದಲೂ, ತುದಿಚಿತ್ರಗಳಿಂದಲೂ ಅಲಂಕಾರಗೊಂಡಿರುವುದು ಈ ಗ್ರಂಥದ ಇನ್ನೊಂದು ವಿಶೇಷವಾಗಿದೆ. ಷೇಕ್‌ಸ್ಪಿಯರನ ಶ್ರೀಮುಖವಲ್ಲದೆ, ಎಲಿಜಬೆತ್ ಯುಗದ ಜನಜೀವನದ ಹಲವು ಮುಖಗಳನ್ನು ಈ ಚಿತ್ರಗಳಲ್ಲಿ ಆರ್. ಎಸ್. ಎನ್. ಪ್ರತಿಭಾಪೂರ್ಣವಾಗಿ ಪ್ರತಿಕೃತಿಸಿದ್ದಾರೆ

ಸಂಪಾದಕರೂ, ಪ್ರಕಾಶಕರೂ ಆರಂಭದ ತಮ್ಮ ತಮ್ಮ ಮಾತುಗಳಲ್ಲಿ ತಾವು ಎದುರಿಸಬೇಕಾಗಿಬಂದ ಸಮಸ್ಯೆಗಳನ್ನೂ, ಪಟ್ಟ ಕಷ್ಟಗಳನ್ನೂ ಸೂಕ್ಷ್ಮ-ವಾಗಿ ಹೇಳಿಕೊಂಡಿದ್ದಾರೆ. ಆದರೆ ಗ್ರಂಥ ಪೂರ್ಣವಾದಾಗ ಅವರು ಅದೆಲ್ಲವನ್ನೂ ಮರೆತು ಸಂತೃಪ್ತಿಯ ನಿಟ್ಟುಸಿರು ಬಿಟ್ಟಿರಬಹುದೆಂಬುದು ಈ ವಿಮರ್ಶಕನ ಭರವಸೆ. ಮನಸ್ಸುಕೊಟ್ಟು ಕೆಲಸಕ್ಕೆ ತೊಡಗಿದಾಗ ಎಂಥ ಸಂದರ್ಭಗಳನ್ನಾದರೂ ಎದುರಿಸಿ ಯಶಸ್ಸುಗಳಿಸಬಹುದೆಂಬುದಕ್ಕೆ 'ಷೇಕ್‌ಸ್ಪಿಯರಿಗೆ ನಮಸ್ಕಾರ' ಗ್ರಂಥ ನಮ್ಮ ಕೈಯಲ್ಲಿದೆ.

* * * *

ಇದಿಷ್ಟೂ ಕಣಕವನ್ನು ಕುರಿತದ್ದಾಯಿತು. ಈಗ ಹೂರಣದ ಬಗೆಗೆ ನಾಲ್ಕು ಮಾತು ಹೇಳಬಹುದು.

ಪ್ರಕಾಶಕರ ಹಾಗೂ ಸಂಪಾದಕರ ಮಾತುಗಳಾದಮೇಲೆ ಷೇಕ್‌ಸ್ಪಿಯರಿಗೆ ರವೀಂದ್ರನಾಥ ಠಾಕೂರರು ಸಲ್ಲಿಸಿದ ನುಡಿನಮನವಿದೆ. ಇಲ್ಲಿ ಮೂಲ ಬಂಗಾಳಿ ಕವಿತೆ ಮತ್ತು ನಾರಾಯಣ ಸಂಗಮ ಅವರ ಕನ್ನಡ ಅನುವಾದ ಎರಡನ್ನೂ ಕೊಡಲಾಗಿದೆ. ಮುಂದೆ ಮೂವತ್ತಾರುಪುಟಗಳ ಪ್ರಸ್ತಾವನೆಯಿದ್ದು, ಅದರಲ್ಲಿ ಸಂಪಾದಕರು ಷೇಕ್‌ಸ್ಪಿಯರನ ಜೀವನ, ಕಾಲ, ಸಾಧನೆ, ಸಿದ್ಧಿಗಳ ಸ್ಥೂಲ ಪರಿಚಯ ಮಾಡಿಕೊಟ್ಟಿದ್ದಾರೆ. ಪುಸ್ತಕದ ಮಿಕ್ಕೆಲ್ಲ ಮೂರು ಭಾಗ ಗಳಾಗಿದ್ದು ಮೊದಲನೆಯದರಲ್ಲಿ ಹದಿನಾರು ಲೇಖನಗಳಿವೆ. ಎರಡನೆಯ ಭಾಗ ಭಾಷಾಂತರಗಳಿಗೆ ಮೀಸಲಾಗಿದ್ದು ಮೂರನೆಯದರಲ್ಲಿ ಕೃತಿಪರಿಚಯವಿದೆ. ಕೊನೆಯಲ್ಲಿ ಕನ್ನಡದಲ್ಲಿ ರೂಪುತಾಳಿರುವ ಷೇಕ್‌ಸ್ಪಿಯರನ ಕೃತಿಗಳನ್ನು ಮತ್ತು ಅವನ ಜೀವನದ ಮುಖ್ಯ ಸಂಗತಿಗಳನ್ನು ಪಟ್ಟಿ ಮಾಡಿರುವ ಎರಡು ಅನುಬಂಧಗಳಿವೆ

ಸಂಪಾದಕರಾದ ಬಾಲುರಾಯರು ಬರೆದಿರುವ ಪ್ರಸ್ತಾವನೆ ತುಂಬ ಸಮರ್ಥವಾಗಿದೆ. ಅದು ಷೇಕ್‌ಸ್ಪಿಯರನ ವ್ಯಕ್ತಿತ್ವ ಸಾಧನೆಗಳನ್ನು ಕಣ್ಣಿಗೆ

ಕಟ್ಟುವಂತೆ ವರ್ಣಿಸುತ್ತದೆ. ಪಾಂಡಿತ್ಯದ ಭಾರವಿಲ್ಲದೆ, ಆಲೋಚನೆಯ ಕಲಸುಮೇಲೋಗರವಿಲ್ಲದೆ, ಇದುವರೆಗೆ ಬಂದಿರುವ ಷೇಕ್ಸ್ಪಿಯರನ ಸಾಹಿತ್ಯದ ಮುಖ್ಯ ವಿಚಾರಗಳೆನ್ನೆಲ್ಲ ಗಮನಿಸಿರುವ ಈ ನಿರೂಪಣೆ ಷೇಕ್ಸ್ಪಿಯರಿಗೊಂದು ಒಳ್ಳೆಯ 'ಪ್ರವೇಶ'ವನ್ನೊದಗಿಸುತ್ತದೆ. ಮೂರನೆಯ ಭಾಗದಲ್ಲಿ ಅವರು ತಕ್ಕಷ್ಟು ದೀರ್ಘವಾಗಿ ಕೊಟ್ಟಿರುವ ಕೃತಿಪರಿಚಯಗಳೊಂದಿಗೆ ಇದು ಸೇರಿದರೆ ಒಂದು ಸ್ವತಂತ್ರ ಗ್ರಂಥವೇ ಆಗಬಹುದಾಗಿದೆ. 'ಷೇಕ್ಸ್ಪಿಯರಿಗೆ ನಮಸ್ಕಾರ' ಗ್ರಂಥದ ಹತ್ತಿರ ಹತ್ತಿರ ಅರ್ಧದಷ್ಟು ಬರವಣಿಗೆಯೆಲ್ಲ ಬಾಲುರಾಯರದೇ ಆಗಿದೆ. ಅವರ ಬರಿಯ ಕಥಾಸಾರಾಂಶಗಳೇ ಸ್ವಾರಸ್ಯಪೂರ್ಣವಾದ ಷೇಕ್ಸ್ಪಿಯರ್ ಕಥಾಸಂಕಲನವಾಗಬಹುದು. ಇಂಥ ಒಂದು ಪ್ರತ್ಯೇಕ ಪ್ರಕಟಣೆಯ ಯೋಜನೆ ಮಾಡಬೇಕೆಂದೂ, ಅದು ಆಗತ್ಯವೆಂದೂ ಈ ವಿಮರ್ಶಕ ಈ ಸಂದರ್ಭದಲ್ಲಿ ಸೂಚಿಸ ಬಯಸುತ್ತಾನೆ.

ತಮ್ಮ ಕೃತಿ ಪರಿಚಯಗಳ ಸೀಮಿತತೆಯ ಬಗೆಗೆ ವಿವರಣೆ ಕೊಡುತ್ತಾ ಬಾಲುರಾಯರು ಹೀಗೆ ಹೇಳಿಕೊಂಡಿದ್ದಾರೆ :

"ಮೊದಲು ಒಂದೊಂದು ಕೃತಿಯನ್ನೂ ಆದರ ಕಥಾಸಾರದ ಜೊತೆಗೆ ಸುದೀರ್ಘ ಚರ್ಚೆ ವಿಮರ್ಶೆಗಳೊಡನೆ ಪರಿಚಯ ಮಾಡಿಕೊಡುವುದೆಂಬ ವಿಚಾರವಿತ್ತು. ಹಾಗೆ ಮಾಡಿದ್ದಾದರೆ ಗ್ರಂಥದ ಗಾತ್ರ ಈಗಿನ ಒಂದೂವರೆಯಷ್ಟು ಬೆಳೆದು ಪ್ರಕಟನೆಯಲ್ಲಿ ಇದ್ದಿದ್ದು ವಿಳಂಬವಾಗುವುದೆಂಬ ಅಂಜಿಕೆಯಿಂದ ಆ ವಿಚಾರವನ್ನು ಕೈಬಿಡಬೇಕಾಯಿತು. ಸದ್ಯ ಸುದೀರ್ಘ ಚರ್ಚೆಯ ಗೊಡವೆಗೆ ಹೋಗದೆ ಕೃತಿಗಳ ಕಥಾಸಾರವನ್ನಷ್ಟೆ ಅವುಗಳ ರಚನೆ ಪ್ರಕಟನೆಗಳ ಕಾಲ, ಆಕರಗಳು ಹಾಗೂ ಎಂಟು ಹತ್ತು ಸಾಲುಗಳ ಚಿಟಿಕೆಯ ವಿಮರ್ಶೆಯೊಡನೆ ಸುಮಾರು ಮೂರು ಪುಟಗಳ ಮಿತಿಯಲ್ಲಿ ಕೊಡಲಾಗಿದೆ." (ಪುಟ ix)

ಇದು ತುಂಬ ನಿರಾಶಾದಾಯಕ ಪರಿಸ್ಥಿತಿ. ಈ ಗ್ರಂಥದಲ್ಲಿನ ಬಾಲುರಾಯರ ಬರವಣಿಗೆ ಸಮಕಾಲೀನ ಕನ್ನಡದ ಅತ್ಯಂತ ಹೃದ್ಯವಾದ ಬರವಣಿಗೆಯ ಮಾದರಿಯಾಗಿದೆಯೆಂಬುದನ್ನು ಗಮನಿಸಿದವರಿಗೆ, ಅವರು ವಿವರವಾಗಿ ಷೇಕ್ಸ್ಪಿಯರ್ ವಿಮರ್ಶೆಯನ್ನು ಬರೆಯದಿರುವುದು ನಷ್ಟವೆನ್ನಿಸದೆ ಇರದು. ಆದಷ್ಟು ಬೇಗನೆ ಅವರು ಪೂರ್ಣ ಪ್ರಮಾಣದ ಷೇಕ್ಸ್ಪಿಯರ್ ವಿಮರ್ಶೆಯನ್ನು ಬರೆಯಲಿ ಎಂಬುದೇ ನಮ್ಮ ಹಾರೈಕೆ.

* * * *

ಲೇಖನಗಳನ್ನು ಕುರಿತ ಮೊದಲನೆಯ ಭಾಗದಲ್ಲಿ ಹದಿನಾರು ಲೇಖನಗಳಿವೆ. ಡಿ. ವಿ. ಜಿ, ವಿ. ಸೀತಾರಾಮಯ್ಯ, ಶ್ರೀರಂಗ, ಎ. ಎನ್. ಮೂರ್ತಿರಾವ್, ಎಸ್. ವಿ. ರಂಗಣ್ಣನವರಂಥ ಹಿರಿಯರೂ, ಸುಮತೀಂದ್ರ ನಾಡಿಗ, ಗಿರಡ್ಡಿ ಗೋವಿಂದರಾಜ ಅವರಂಥ ತರುಣರೂ ಇಲ್ಲಿ ಬರೆದಿದ್ದಾರೆ. 'ಷೇಕ್ಸ್ಪಿಯರಿಗೆ

ನಮಸ್ಕಾರ', 'ಷೇಕ್‌ಸ್ಪಿಯರ್—ಒಂದು ನೋಟ', 'ಸಾಮಾನ್ಯರ ಷೇಕ್-ಸ್ಪಿಯರ್'—ಮೊದಲಾದ ಲೇಖನಗಳು ಷೇಕ್‌ಸ್ಪಿಯರನನ್ನು ಸಮಗ್ರವಾಗಿ ಸಾಮಾನ್ಯ ದೃಷ್ಟಿಕೋನದಿಂದ ನೋಡುತ್ತವೆ. 'ಷೇಕ್‌ಸ್ಪಿಯರನ ನಾಟಕಗಳಲ್ಲಿ ಪೂರ್ಣ ಸತ್ಯನಿರೂಪಣೆ', 'ಅತಿಮಾನುಷತೆ', 'ಸ್ತ್ರೀಪಾತ್ರಗಳು'—ಮೊದಲಾದ ಬರಹಗಳು ನಿರ್ದಿಷ್ಟವಾಗಿ ಷೇಕ್‌ಸ್ಪಿಯರ್ ಸಾಹಿತ್ಯವನ್ನು ವಿಚಾರಿಸಲು ಪ್ರಯತ್ನಿಸುತ್ತವೆ. ಮೂರ್ತಿರಾಯರು ಕನ್ನಡದಲ್ಲಿ ಷೇಕ್‌ಸ್ಪಿಯರ್ ಸಾಹಿತ್ಯದ ಸಮೀಕ್ಷೆ ಮಾಡಿದ್ದಾರೆ (ಈ ಲೇಖನವನ್ನು ಅವರು ಈ ಗ್ರಂಥಕ್ಕಾಗಿ ಬರೆದದ್ದಲ್ಲ ವೆಂಬುದು ಗಮನಾರ್ಹ !). ತ. ಸು. ಶಾಮರಾಯರು ಕನ್ನಡದಲ್ಲಿ ಪ್ರಕಟವಾಗಿ ರುವ ಷೇಕ್‌ಸ್ಪಿಯರನ ನಾಟಕಗಳನ್ನು ತುಲನೆ ಮಾಡಿದ್ದಾರೆ. ಕರ್ತೃತ್ವ ಸಮಸ್ಯೆಯ ವಿವೇಚನೆಯಲ್ಲಿ ಗೌರೀಶ ಕಾಯ್ಕಿಣಿ ಷೇಕ್‌ಸ್ಪಿಯರ್ 'ಮಿಥ್ಯೆ'ಯ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಇನ್ನೊಂದು ಲೇಖನದಲ್ಲಿ ಷೇಕ್‌ಸ್ಪಿಯರ್ ನಟ ಬಳ್ಳಾರಿ ರಾಘವಾಚಾರ್ಯರ ಪರಿಚಯವಾಗುತ್ತದೆ. ಷೇಕ್‌ಸ್ಪಿಯರನ ಸಾನೆಟ್ಟುಗಳನ್ನೂ ಅವನ ಕಾಲದ ರಂಗಭೂಮಿಯನ್ನೂ ಇನ್ನೆರಡು ಲೇಖನಗಳು ಪರಿಚಯ ಮಾಡಿಕೊಡುತ್ತವೆ.

ಹೀಗೆ ಈ ಭಾಗದ ಲೇಖನಗಳಲ್ಲಿ ವೈವಿಧ್ಯತೆಯಿದ್ದರೂ ಎರಡು ವಿಷಯ ಗಳನ್ನು ಹೇಳಬೇಕಾಗಿದೆ. ಒಂದು: ಲೇಖನಗಳನ್ನು ಬರೆಸುವುದರಲ್ಲಿ ಸಂಪಾದಕರು ಯಾವ ನಿರ್ದಿಷ್ಟವಾದ ಯೋಜನೆಯನ್ನು ಇಟ್ಟುಕೊಂಡಹಾಗಿಲ್ಲ. ಹಾಗಾಗಿ ಇದು ಕುರುಕಲಿಗೆ ಯೋಗ್ಯವಾದ ಚೌಚೌ ಭಾಗವಾಗಿದೆ. ಎರಡು : ಬರೆದಿರುವ ಲೇಖಕರಾದರೂ ಷೇಕ್‌ಸ್ಪಿಯರ್ ಪ್ರಪಂಚಕ್ಕೆ ಆಳವಾಗಿ ಇಳಿದಿದ್ದಾರೆಂದು ಹೇಳುವಂತಿಲ್ಲ. ಈ ಲೇಖಕರಲ್ಲಿ ಅನೇಕರು ಹಲವು ವರ್ಷಗಳಿಂದ ಷೇಕ್-ಸ್ಪಿಯರ್ ಸಂಬಂಧ ಬೆಳೆಸಿದವರು; ಹೆಸರುವಾಸಿಯಾದ ಷೇಕ್‌ಸ್ಪಿಯರ್ ಪಂಡಿತರು. ಆದರೂ ಈ ಲೇಖನಗಳು ವೃತ್ತಪತ್ರಿಕೆಯ ಜಾಳು ಲೇಖನಗಳಾ ಗಿದ್ದು, ಷೇಕ್‌ಸ್ಪಿಯರನಿಗೆ ಕನ್ನಡದ ಬುದ್ಧಿವಂತರ ಮಹತ್ವದ ಕಾಣಿಕೆಗಳಾಗ ದಿರುವುದು ಶೋಚನೀಯ.

ಗ್ರಂಥಕ್ಕೆ ಹೆಸರು ಕೊಟ್ಟಿರುವ ಡಿ. ವಿ. ಜಿ. ಅವರ ಲೇಖನ 'ಷೇಕ್ ಸ್ಪಿಯರಿಗೆ ನಮಸ್ಕಾರ' ಮೊದಲನೆಯದು. ಇದರ ಮೊದಲನೆಯ ಭಾಗ ಸಾಹಿತ್ಯದ ಮಹತ್ವವನ್ನು ತಿಳಿಸುವ ನಾಟಕ. ಲೋಕದ ಮಹಾ ನಾಟಕಕಾರನಿಗೆ ನಾಟಕದ ಮೂಲಕವೇ ಗೌರವ ಸೂಚಿಸಲು ಡಿ. ವಿ. ಜಿ. ದೃಢನಿರ್ಧಾರ ಮಾಡಿಕೊಂಡಂತೆ ಕಾಣುತ್ತದೆ. ಅವರು ಹೇಳಬಯಸಿರುವ ವಿಚಾರಕ್ಕೆ ಈ ಪೂರ್ವಪೀಠಿಕೆ ಅನವಶ್ಯಕ, ಮಾತ್ರವಲ್ಲ, ಬಾಲಿಶವಾಗಿಯೂ ಕಾಣುತ್ತದೆ. ಅವರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಹಾಗೂ 'ಸಾಹಿತ್ಯಶಕ್ತಿ'ಗಳನ್ನು ಬಲ್ಲವರಿಗೆ ಇಲ್ಲಿ ಏನೂ ಇಲ್ಲ. ಕಾವ್ಯವು ಜೀವನ ಪರಾಮರ್ಶೆ. ಅದರಿಂದ ಜೀವದ

ಉದ್ಧಾರ. ಅದು ಧರ್ಮಪ್ರಚೋದನೆ ಮಾಡುತ್ತದೆ. ಅದು ನೀತಿಸಾರ. "ಷೇಕ್‌ಸ್ಪಿಯರ್ ಕವಿಯಿಂದ ನಮಗೆ ಆಗುವ ಉಪಕಾರ ಇಂಥಾದ್ದು" ಅಷ್ಟೆ

ಮೂರ್ತಿರಾಯರ ಲೇಖನ, ಸಾಹಿತ್ಯ ಸಮೀಕ್ಷೆಯಾಗಿದ್ದರೂ ಈ ಸಂಕಲನದ ಒಂದು ಮಹತ್ವದ ಲೇಖನವಾಗಿದ್ದು ಕೆಲವು ತೂಕದ ಮಾತುಗಳನ್ನು ಒಳ-ಗೊಂಡಿದೆ. ನಮ್ಮ ಸಾಹಿತ್ಯದ ಚೂಲವನ್ನೊ ಬಾಲವನ್ನೊ ಇನ್ನೆಲ್ಲಿಯೋ ಹುಡುಕಲು ಯತ್ನಿಸುವವರಿಗೆ ಅವರ ಮಾತುಗಳು ಎಷ್ಟರಮಟ್ಟಿಗೆ ಹಿತವಾಗು-ತ್ತವೊ! ಅವರು ಹೇಳುತ್ತಾರೆ :

"ಆಧುನಿಕ ಕನ್ನಡ ಕಾವ್ಯದಲ್ಲಿ ಅಲ್ಲಲ್ಲಿ ಷೇಕ್‌ಸ್ಪಿಯರಿನ ಪ್ರತಿಧ್ವನಿ ಕೇಳಿ ಬರುತ್ತದೆಂಬುದು ನಿಜ ಇನ್ನು ಕೆಲವು ಕಾವ್ಯಭಾಗಗಳು ಷೇಕ್‌ಸ್ಪಿಯರನನ್ನು ನೆನಪಿಗೆ ತರುವಂತಿದ್ದರೂ ಆವು ಅವನಿಂದ ಪ್ರಾಪ್ತವಾದುವಲ್ಲ. ಉದಾಹರಣೆಗೆ ಅವನ 'ಆಲ್ ದಿ ವರ್ಲ್ಡ್ಸ್ ಎ ಸ್ಟೇಜ್' (ಇಡಿಯ ಜಗತ್ತೊಂದು ರಂಗಭೂಮಿ) ಅನ್ನು ನೆನಪಿಗೆ ತರುವ ಕಾವ್ಯಭಾಗಗಳು ಕನ್ನಡದಲ್ಲಿವೆ. ಆದರೆ ಜೀವನವೊಂದು ನಾಟಕ (ಮತ್ತು ದೇವರು ವಿಶ್ವದ ಮಹಾಸೂತ್ರಧಾರ) ಎಂಬ ವಿಚಾರಧಾರೆ ಎರಡು ಸಹಸ್ರ ವರ್ಷಗಳಿಗೂ ಹೆಚ್ಚು ಕಾಲದಿಂದ ನಮ್ಮಲ್ಲಿ ನಡೆದುಬಂದಿದೆ." (ಪು. ೧೩೬).

ಮುಂದುವರಿದು ಹೇಳುತ್ತಾರೆ :

"....ನಾಟಕಗಳಲ್ಲಿನ ಕಾವ್ಯಶೈಲಿ ಹಾಗೂ ಸೂಕ್ಷ್ಮತರ ಪಾತ್ರಸಂವಿಧಾನ ನಮಗೆ ಹೊಸತೂ ನಮ್ಮ ಮನಸೆಳೆಯುವಂತಹುದೂ ಆದರೂ ಅವುಗಳ ಬಗೆ ನಮಗೆ ಹೊಸತಲ್ಲ. ಮಾನವ ವ್ಯವಹಾರಗಳಲ್ಲಿ ದುರಂತಪ್ರಜ್ಞೆ, ಕೇಡಿನ ವಿಮರ್ಶಾತ್ಮಕ ಶಕ್ತಿ, ಅಂತಿಮದಲ್ಲಿ ಅದು ಅನುಭವಿಸುವ ವಿಫಲತೆ, ವಿಪತ್ತಿನ ಎದುರು ಮನಷ್ಯ ಸೆಟೆದುನಿಂತಾಗ ವ್ಯಕ್ತವಾಗುವ ಅವನ ಮಹಾವ್ಯಕ್ತಿತ್ವ, ಕೇಡಿನ ನಿರ್ನಾಮವಾದಮೇಲೆ ಮುಂದುವರಿಕೆಗೆ ಅನುವಾಗುವ ಹೊಸ ಹುಟ್ಟು, ಬದುಕಿನ ತೊರೆ ಎಡರುತೊಡರುಗಳನ್ನು ಲೆಕ್ಕಿಸದೆ ನಿರಂತರವಾಗಿ ಹರಿದೇ ತೀರುವುದೆಂಬ ಆಕಾಂಕ್ಷೆ, ಜೀವನರಹಸ್ಯವನ್ನು ಕುರಿತ ಚಿಂತನೆ—ಇವೆಲ್ಲವೂ ವಾಲ್ಮೀಕಿ, ವ್ಯಾಸ, ಕಾಳಿದಾಸ, ಭವಭೂತಿಯರನ್ನು ಓದಿದವರಿಗೆ ಆಶ್ಚರ್ಯ ವೆನ್ನುವಷ್ಟು ನವೀನವೇನಲ್ಲ...." (ಪು. ೧೩೯).

ಒಟ್ಟಿನಲ್ಲಿ, "ಈ ದರ್ಶನದ, ಪೂರ್ತಿಯಲ್ಲವಾದರೂ ಬಹ್ವಂಶದ, ಆದಿ ಮೂಲ ನಮ್ಮ ಪ್ರಾಚೀನ ಸಾಹಿತ್ಯದಲ್ಲೇ ಇದೆ" ಎಂಬುದು ಮೂರ್ತಿರಾಯರ ಸಮತೋಲನದ ತೀರ್ಪು

* * * *

ಭಾಷಾಂತರಗಳ ಭಾಗದಲ್ಲಿ ಮೂರು ಗುಂಪುಗಳಿವೆ. ಮೊದಲನೆಯದಾದ ಸಾನೆಟ್ ಮತ್ತು ಇತರ ಕವನಗಳ ಗುಂಪಿನಲ್ಲಿ ಹದಿನೇಳು ಅನುವಾದಗಳಿವೆ. ಎರಡನೆಯ ಗೀತಗಳ ಭಾಗದಲ್ಲಿ ಐದು ಹಾಡುಗಳಿವೆ. ನಾಟಕಗಳಿಂದ ಆರಿಸಿದ ಮೂರನೆಯ ಭಾಗದಲ್ಲಿ ಹದಿನಾಲ್ಕು ತುಣುಕುಗಳಿವೆ.

ಈ ಭಾಗದಲ್ಲಿಯೂ, ಪ್ರಸಿದ್ಧ ಕನ್ನಡ ಕವಿಗಳ ಕೈವಾಡವಿದ್ದರೂ, ಓದುಗರಿಗೆ ನಿರಾಶೆಯಾಗುತ್ತದೆಂದು ಹೇಳದೆ ವಿಧಿಯಿಲ್ಲ. ಇಲ್ಲಿನ ಭಾಷಾಂತರಗಳಲ್ಲಿ ಬಹುಪಾಲು ನೀರಸವಾಗಿದ್ದು, ಭಾಷಾಂತರಕಲೆಯ ಅಭ್ಯಾಸಗಳಂತೆ ತೋರುತ್ತವೆ.

ಆರಂಭಕಾಲದ ಭಾಷಾಂತರಕಾರರಾದ ಬಿ. ಎಂ. ಶ್ರೀ. ಹಟ್ಟಿಯಂಗಡಿ ನಾರಾಯಣರಾಯರನ್ನೂ ಕೈ ಬಿಡದಿರುವುದು ತುಂಬ ಉಚಿತವಾಗಿದೆ.

ಮೊದಲ ಬಾರಿಗೆ ಷೇಕ್ಸ್‌ಪಿಯರನ ಹದಿನಾರು ಸುನೀತಗಳು ಕನ್ನಡಕ್ಕೆ ಅನುವಾದವಾಗಿ ಬಂದಿವೆಯೆಂಬುದು ಸಂತೋಷದ ಮಾತಾದರೂ, ಸುನೀತದ ರಚನೆಯೇ ಉಳಿಯದೆ ಹೋಗಿರುವದೂ ಉಂಟು! ಚಂದ್ರಶೇಖರ ಪಾಟೀಲರ ಅನುವಾದ ಮುಕ್ತತೆಯತ್ತ ಜಾರುತ್ತದೆ; ಮುಗಳಿಯವರ ಅನುವಾದ ಸುನೀತ ರೂಪದಲ್ಲೇ ಇದೆ ಎಂಬುದು ಸಮಾಧಾನ! ಗೀತಗಳಲ್ಲಿ ಪು. ತಿ. ನ ಪದಗಳನ್ನು ಮರೆತು ಸಂಗೀತದತ್ತ ಒಲೆಯುವುದು ಅವರಿಗೆ ಹೊಸದಲ್ಲ, 'ಸಿಂಬಲೈನ್'ನಿಂದ ವಿನಾಯಕರು ಅನುವಾದಿಸಿರುವ ಗೀತದಲ್ಲಿ ಬರುವ,

> "ಓ ನಿಯತಿನಿಯಮವಿದ ಮಾರಿದವರೇ ಇಲ್ಲ
> ಮಣ್ಣುಮುಕ್ಕಿದರೆಲ್ಲರೂ ಮುಚ್ಚಿ ಕಣ್ಣು" (ಪು. ೧೮೨)

ಎಂಬಂಥ ಸಾಲುಗಳಿಗೆ ಮೂಲ ಯಾವುದೆಂದು ನೋಡುವುದು ಸಾಧ್ಯವಾಗಲಿಲ್ಲ! ಪ್ರಯತ್ನಪಟ್ಟು ಹುಡುಕಿದಾಗ ಅದು ಮೂಲದಿಂದ ಬಹುದೂರವೆಂದು ಗೊತ್ತಾಯಿತು.

ನಾಟಕಗಳ ಭಾಗದಲ್ಲಿಯೂ ಮೂಲದಲ್ಲಿ ಇರುವುದೆಷ್ಟನ್ನೋ ಕೈಬಿಡಲಾಗಿದೆ; ಹೊಸತೆಷ್ಟನ್ನೊ ಸೇರಿಸಲಾಗಿದೆ. ಪದಶಃ ಅನುವಾದಗಳಿಗೆ ಬೇಕಾದಷ್ಟು ಉದಾಹರಣೆಗಳು ದೊರೆಯುತ್ತವೆ. ಅನುವಾದಗಳಲ್ಲಿ ಕಲ್ಪನೆಯಾಗಲಿ, ಸ್ವೋಪಜ್ಞತೆಯಾಗಲಿ, ಕಾಣಿಸುವುದಿಲ್ಲ. 'Grim looked night', 'ಹುಬ್ಬುಗಂಟಿಸಿದ ಕತ್ತಲೆ'; 'See a voice', 'ಧ್ವನಿಯೊಂದು ಕಾಣುತಿದೆ'; 'Cause', 'ತತ್ತ್ವ ಸಮರ್ಥನೆ'; 'What does he say of Brutus ?', 'ಏನಂತೆ ಬ್ರೂಟಸ್ ಅದು', ಮೊದಲಾದ ಅನುವಾದಗಳು ಅಡಿಗಡಿಗೆ ದೊರಕುತ್ತವೆ. ಈ ಕೊನೆಯ ಉದಾಹರಣೆ ವಾಕ್ಯರಚನೆಯ ಅಸ್ಪಷ್ಟತೆಯ ದೊಡ್ಡ ಸಮಸ್ಯೆಯಿಂದ ಓದುಗರನ್ನು ಕಂಗಾಲು ಮಾಡುತ್ತದೆ. 'Most unkindest cut of all', ಎಂಬ ಪ್ರಸಿದ್ಧ ಸಾಲನ್ನು ರಾಘವಾಚಾರ್ಯರು "ಎಲ್ಲಕಿಂತತಿ ಪರಮ ನಿರ್ಘೃಣಾಘಾತವಿದು"

ಎಂದು ಅನುವಾದಿಸಿದ್ದಾರೆ. ಇಲ್ಲಿನ ಅನುವಾದ ವಿಫಲತೆಗೆ, ಭಾಷೆಯ ಉಪಯೋಗ ಸಾರ್ಥಕತೆಯ ವಿಚಾರದಲ್ಲಿ ತುಂಬ ಕಳಕಳಿ ಹೊಂದಿರುವ ಗೋಪಾಲಕೃಷ್ಣ ಅಡಿಗರ ಅನುವಾದದ ಮಾದರಿಯೊಂದನ್ನು ಕೊಟ್ಟರೆ ಸಾಕೆಂದು ತೋರುತ್ತದೆ.

"ನಾಳೆ, ಮತ್ತೂ ನಾಳೆ, ಮತ್ತೂ ನಾಳೆ
ತೆವಳುವುದು ಈ ಕ್ಷುದ್ರಗತಿಯಿಂದ ದಿನ ದಿನ ಹೀಗೆ
ಕಾಲಕಡತದ ಕೊಟ್ಟಕೊನೆಯ ಮಾತ್ರೆಯವರೆಗೆ,
ನಮ್ಮೆಲ್ಲ ನಿನ್ನೆ ಬೆಳಗಿದ್ದಾವೆ ಮೂರ್ಖರ ದಾರಿ
ಸಾವು ಧೂಳಿನ ಕಣಕೆ. ಆರು ಆರು, ಸಂಕ್ಷಿಪ್ತ ಮೋಂಬತ್ತಿಯೇ!
ಬದುಕು ಕೇವಲ ನಡೆವ ನೆಳಲು, ರಂಗದ ಮೇಲೆ
ತನ್ನೊಂದು ಗಳಿಗೆ ಸೆಟೆ ನಡೆವ, ಸಿಡಿವ ಬಡನಟ,
ಅನಂತರ ಅವನ ಸೊಲ್ಲಿಲ್ಲ; ಮಂಕನಾವನೊ ಹೇಳಿ-
ದಂಥ ಕಥೆ ಬರಿಗುಲ್ಲು, ಉದ್ರೇಕ, ವ್ಯಂಜಿಸುವಂಥ
ಅರ್ಥ ಕೇವಲ ಶೂನ್ಯ" (ಪುಟ ೨೨೩–೨೪)

ಇಲ್ಲಿ "Out, out, brief candle!" ಎಂಬ ಮಾತುಗಳನ್ನು "ಆರು, ಆರು, ಸಂಕ್ಷಿಪ್ತ ಮೋಂಬತ್ತಿಯೆ" ಎಂದು ಅನುವಾದಿಸಿರುವುದಂತೂ ಅತ್ಯಂತ ಹಾಸ್ಯಾಸ್ಪದವಾಗಿ ತೋರುತ್ತದೆ. ಮಾತುಗಳ ಬಳಕೆಯಲ್ಲಿ ಸಂಯಮವಿಲ್ಲವೆಂಬ ಆಪಾದನೆಗೆ ಒಳಗಾಗಿರುವ ತಲೆಮಾರಿನ ಲೇಖಕರ ಗುಂಪಿಗೆ ಸೇರಿರುವ ಡಿ. ವಿ. ಜಿ. ಅವರು ಇದೇ ಮಾತುಗಳನ್ನು ಹೀಗೆ ಅನುವಾದಿಸಿದ್ದಾರೆ :

"ನಂದು, ನಂದೆಲೆ ಸಣ್ಣ ಮಯಣಬತ್ತಿಯ ಸೊಡರೆ"

(ಡಿ. ವಿ. ಜಿ. 'ಮ್ಯಾಕ್‌ಬೆತ್'; ಪು. ೧೬೭)

'ಸಂಕ್ಷಿಪ್ತ ಮೋಂಬತ್ತಿ'ಗೂ, 'ಸಣ್ಣ ಮಯಣಬತ್ತಿಯ ಸೊಡರೆ'ಗೂ ಇರುವ ವ್ಯತ್ಯಾಸವನ್ನು ಕುರಿತು ವ್ಯಾಖ್ಯೆ ಮಾಡುವ ಅಗತ್ಯವಿಲ್ಲ.

* * * *

ಸಂಪಾದಕರ ಸಂಪಾದನಾಸಾಮರ್ಥ್ಯದ ಬಗೆಗೆ ಮೆಚ್ಚುಗೆಯ ಒಂದ ಮಾತನ್ನು ಹೇಳಿ ಈ ವಿಮರ್ಶೆಯನ್ನು ಮುಗಿಸಬಹುದು.

ಹಲವರನ್ನು ನಂಬಿ ಇಂಥದೊಂದು ಗ್ರಂಥವನ್ನು ಪ್ರಕಟಿಸುವುದ ಉಳಿದ ಭಾಷೆಗಳಲ್ಲಿ ಹೇಗೊ ಕನ್ನಡದಲ್ಲಂತೂ ತುಂಬ ಕಷ್ಟಸಾಧ್ಯ. ಲೇಖಕ ಸಹಕಾರ ಸಂಪಾದಕರ ಇಚ್ಛೆಯಂತೆ ಎಷ್ಟೋ ಸಂದರ್ಭಗಳಲ್ಲಿ ದೊರೆಯುವುದಿಲ್ ಮೊದಲ ಭಾಗದಲ್ಲಿ ಸೇರಬೇಕಾಗಿದ್ದ ಪ್ರೊ. ಎಸ್. ವಿ. ರಂಗಣ್ಣನವರ ಲೇಖ

ಅನುಬಂಧದೋಪಾದಿ ಕೊನೆಯಲ್ಲಿ ಸೇರಿಸುವುದು ಇದಕ್ಕೆ ಒಂದು ಉದಾಹರಣೆ. ವಿದೇಶದ ವ್ಯಕ್ತಿ ಸ್ಥಳ ಪುಸ್ತಕಗಳ ಹೆಸರುಗಳು ಹೇರಳವಾಗಿ ಬರುವ 'ಷೇಕ್ಸ್‌ಪಿಯರಿಗೆ ನಮಸ್ಕಾರ'ದಂಥ ಗ್ರಂಥದಲ್ಲಿ ಉಚ್ಚಾರದ ಏಕರೂಪತೆಯನ್ನೂ, ಬರವಣಿಗೆಯ ಕ್ರಮದ ಒಂದುತನವನ್ನೂ ಕಾಪಾಡಿಕೊಳ್ಳುವುದು ಬಹಳ ಕಷ್ಟ. ಬಾಲುರಾಯರು ಇದನ್ನು ತುಂಬ ದಕ್ಷತೆಯಿಂದ ನಡೆಸಿಕೊಟ್ಟಿದ್ದಾರೆ. ಈ ಗ್ರಂಥದ ಹೆಚ್ಚುಗಾರಿಕೆಯೆಲ್ಲವೂ ಅವರ ಶ್ರಮದ ದುಡಿಮೆಯ ಫಲ: ಕೊರತೆಗಳಿಗೆ ಅವರು ಹೊಣೆಯಲ್ಲ.

— ಹಾ. ಮಾ. ನಾಯಕ

ಸಾದರ ಸ್ವೀಕಾರ

೧. **ಬೆಳಕು ಬೆಳಕನೆ ಕೂಡಿತು** (ಕಥಾಸಂಕಲನ), ೧೯೬೬

ಲೇಖಕರು : ಜಿ. ಎಸ್. ಅನ್ನದಾನಿ
ಗ್ರಾಮಸೇವಕ ಗ್ರಂಥಮಾಲೆ, ಯಡಹಳ್ಳಿ — ಬೆಲೆ : ೧-೨೫

೨. **ಹರಳು-ಮುತ್ತು** (ಚುಟುಕುಗಳ ಸಂಗ್ರಹ), ೧೯೬೭

ಲೇಖಕರು : ಜಿ. ಎಸ್. ಅನ್ನದಾನಿ
ಮಿತ್ರಭಾರತೀ ಪ್ರಕಾಶನ, ವಿಜಾಪುರ — ಬೆಲೆ : ೧-೦೦

೩. **ರಥದ ಕುದುರೆಗಳು** (ಕಥಾಸಂಕಲನ), ೧೯೬೭

ಲೇಖಕರು : ಜಿ. ಎಸ್. ಅನ್ನದಾನಿ
ಗ್ರಾಮಸೇವಕ ಗ್ರಂಥಮಾಲೆ, ಯಡಹಳ್ಳಿ — ಬೆಲೆ : ೧-೫೦

೪ **ಮುಗುಳು-ನೊಗ್ಗೆ** (ಕವನಸಂಗ್ರಹ), ೧೯೬೮

ವಿವಿಧ ಲೇಖಕರು
ಕರ್ನಾಟಕ ಸಂಘ ಪ್ರಕಾಶನ, ಶ್ರೀ ಕಾಡಸಿದ್ಧೇಶ್ವರ ಆರ್ಟ್ಸ
ಮತ್ತು ಎಚ್. ಎಸ್. ಕೋತಂಬ್ರಿ ಸಾಯನ್ಸ
ಇನ್‌ಸ್ಟಿಟ್ಯೂಟ್, ಹುಬ್ಬಳ್ಳಿ — ಬೆಲೆ : ೧-೫೦

೫. **ಮಣ್ಣು-ಮಲ್ಲಿಗೆ** (ಕವನಸಂಗ್ರಹ), ೧೯೬೯

ಲೇಖಕರು : "ಮೇಘಮಿತ್ರ"
ಮಿತ್ರಭಾರತಿ ಪ್ರಕಾಶನ, ವಿಜಾಪುರ — ಬೆಲೆ : ೨-೫೦

೬. **ಸಿರಿಗಂಧ ಸೂಸ್ಯಾವೆ** (ಜಾನಪದ ಗೀತಸಂಕಲನ), ೧೯೬೮

ಸಂಪಾದಕ : ಜಿ. ಎಸ್. ಭಟ್, ಉಬರಡ್ಕ
ವಸಂತ ಸಾಹಿತ್ಯ, ಚೊಕ್ಕಾಡಿ (ದ. ಕ.) — ಬೆಲೆ : ೨-೦೦

೭. **ವಿನೋಚನೆ** (ಏಕಾಂಕ ನಾಟಕ)

ಲೇಖಕರು : ಎಸ್. ಆರ್. ನಾಯಕ
ಆರ್ಟ್ಸ ಆ್ಯಂಡ್ ಸಾಯಿನ್ಸ ಕಾಲೇಜ, ಹೊನ್ನಾವರ (ಉ. ಕ.) — ಬೆಲೆ : ೧-೨೫

೮. **ಸರ್ವಾಂತರಾತ್ಮನ ವಚನಗಳು** (ವಚನಸಂಗ್ರಹ), ೧೯೬೮

ಲೇಖಕರು : ಚಂದ್ರಶೇಖರ ಬಡಿಗಣ್ಣವರ
ಪ್ರಕಾಶಕರು : ವಿ. ವಿ. ಬಡಿಗಣ್ಣವರ ಬಂಧುಗಳು, ಗದಗ — ಬೆಲೆ : ೦-೪೦

೯. **Karnatak at a Glance** (ಮೈಸೂರುರಾಜ್ಯದ ಹಕ್ಕಿನೋಟ), ೧೯೬೭

ಲೇಖಕರು : ಎನ್. ನಾರಾಯಣ ಬಲ್ಲಾಳ
ಪ್ರಕಾಶಕರು : ರೇಖಾ ಪ್ರಕಾಶನ, ಉಡುಪಿ ಬೆಲೆ : ೧-೦೦

೧೦. **ಸಂಗಮ** (ಬಸವಣ್ಣನವರನ್ನು ಕುರಿತ ಕವನಗಳು), ೧೯೬೯

ಪ್ರಕಾಶಕರು : ಬಸವ ಸಮಿತಿ, ಬೆಂಗಳೂರು-೯ ಬೆಲೆ : ಸಾದಾ ೧-೨೫
ಕ್ಯಾಲಿ. ೧-೭೫

೧೧. **ನೈವೇದ್ಯ** (ಪ್ರಬಂಧ ಸಂಗ್ರಹ), ೧೯೬೯

ಲೇಖಕರು : ಕೆ. ವಿರೂಪಾಕ್ಷಗೌಡ ಮತ್ತು ಲದಾಫ ಹಕೀಮಸಾಹೇಬ
ಪ್ರಕಾಶಕರು : ಕೊಟ್ಟೂರೇಶ ಪ್ರಕಾಶನ, ಹಗರಿಬೊಮ್ಮನಹಳ್ಳಿ. ಬೆಲೆ : ೧-೫೦

೧೨. **ಮುತ್ತು** (ಮಕ್ಕಳ ಮಾಸಪತ್ರಿಕೆ), ಫೆಬ್ರುವರಿ ಸಂಚಿಕೆ, ೧೯೬೯

ಸಂಪಾದಕ-ಪ್ರಕಾಶಕರು : ಹಾಲೇಶ ಮೇಟಿ ಚಂದಾ : ವರ್ಷಕ್ಕೆ ೬-೦೦
ಬಿಡಿ ಸಂಚಿಕೆ ೦-೫೦

೧೩. **ಶ್ರೀ ಅಶ್ವಾರೂಢ ಬಸವೇಶ್ವರ** (ವಿಮರ್ಶಾತ್ಮಕ ಗ್ರಂಥ), ೧೯೬೯

ಲೇಖಕರು : ಚನ್ನಪ್ಪಗೌಡ ಮಾಸ್ತರ, ಎಲಬುರ್ಗಿ
ಪ್ರಕಾಶಕರು : ಬಸವತತ್ತ್ವ ಪ್ರಕಾಶನ ಸಮಿತಿ, ಯಲಬುರ್ಗಿ ಬೆಲೆ : ೧-೫೦

೧೪. **ಗೀತಗೌರವ** (ಕವನ ಸಂಕಲನ), ೧೯೬೯

ಲೇಖಕರು : ಡಾ. ಡಿ. ಎಸ್. ಕರ್ಕಿ
ಪ್ರಕಾಶಕರು : **ಡಾ. ಕರ್ಕಿ** ಷಷ್ಟ್ಯಬ್ದಿ ಸತ್ಕಾರ ಸಮಿತಿ,
ಹುಬ್ಬಳ್ಳಿ ಬೆಲೆ : ३-೦೦

ಸಂಪಾದಕೀಯ

ಈ 'ಅಕ್ಷಯತೃತೀಯಾ' ಸಂಚಿಕೆಯೊಂದಿಗೆ "ಕರ್ನಾಟಕ ಭಾರತಿ" ತನ್ನ ಮೊದಲ ವರುಷ ಮುಗಿಸಿ ಎರಡರಲ್ಲಿ ಕಾಲಿರಿಸುತ್ತಿದೆ. ವಿದ್ವಾಂಸ ಲೇಖಕರ ಬೆಂಬಲದಿಂದ ದಿನದಿನಕ್ಕೆ ಹೊಸ ಶಕ್ತಿಯನ್ನು ಸಂಪಾದಿಸತೊಡಗಿದೆ. ಇಂತಹ ಪ್ರೋತ್ಸಾಹ ನಿರಂತರವಾದಲ್ಲಿ ಇದು ತ್ರೈಮಾಸಿಕವಾಗುವ ದಿನ ದೂರವಿಲ್ಲವೆನಿಸುತ್ತದೆ.

ನಮ್ಮ ಬರೆಹಗಾರರ ಲೇಖನಪೂರೈಕೆಯಂತೆ ವಾಚಕವೃಂದದ ಬೇಡಿಕೆಯೂ ವರ್ಧಿಸುತ್ತ ನಡೆದಿದೆ. ನಮ್ಮ ನಿರೀಕ್ಷೆಮೀರಿ ಈ ಎರಡೂ ವಲಯಗಳಿಂದ ಬೆಂಬಲ ದೊರೆಯುತ್ತಿರುವುದನ್ನು ನೋಡಿದರೆ 'ಕರ್ನಾಟಕ ಭಾರತಿ' ಯಂತಹ ಪತ್ರಿಕೆಗಾಗಿ ಜನತೆಯಲ್ಲಿರುವ ಹಸಿವು ವ್ಯಕ್ತವಾಗುತ್ತದೆ.

ಹಸಿದವರಿಗೆ ಲೇಸನುಣಿಸಬೇಕೆಂಬ ಧ್ಯೇಯ, ಜ್ಞಾನಲೋಕಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳ ಉದಾತ್ತಕೋಶವಾಗಬೇಕೆಂಬ ಹಂಬಲ 'ಕರ್ನಾಟಕ ಭಾರತಿ'ಗೆ ಇದೆ. ಈ ಹಂಬಲವನ್ನು ಸಮರ್ಪಕವಾಗಿ ಈಡೇರಿಸಿದೆ ಎಂಬುದಕ್ಕೆ ಇದು ವಿಮರ್ಶಕರಿಂದ ಪಡೆದ ಸ್ವಾಗತವೇ ಸಾಕ್ಷಿ.

೧೯೬೯, ರಾಷ್ಟ್ರಪಿತ ಗಾಂಧೀಜಿ, ಕನ್ನಡ ಕಾದಂಬರಿಪಿತಾಮಹ ಗಳಗನಾಥ ಅವರ ಜನ್ಮಶತಾಬ್ದಿಗಳ ಪುಣ್ಯವರುಷ. ಅವರ ದಿವ್ಯಸ್ಮರಣೆ, ಮಿಕ್ಕ ಸಾಹಿತ್ಯಪ್ರಕಾರ, ನಿಸರ್ಗವಿಜ್ಞಾನ, ಸಮಾಜವಿಜ್ಞಾನಗಳನ್ನೊಳಗೊಂಡ ಲೇಖನಗಳು ಈ ಸಂಚಿಕೆಯಲ್ಲಿವೆ. ಹಿಂದಿನಂತೆ ಇನ್ನು ಮುಂದೆಯೂ ಲೇಖಕರು, ವಾಚಕರು 'ಕರ್ನಾಟಕ ಭಾರತಿ'ಗೆ ಬೆಂಬಲ ನೀಡಬೇಕೆಂದು ಪ್ರಾರ್ಥಿಸಿ ಈ ಸಂಚಿಕೆಯನ್ನು ಸಾಹಿತ್ಯಪ್ರಪಂಚಕ್ಕೆ ಸಲ್ಲಿಸುತ್ತೇವೆ.

ಶತಮಾನೋತ್ಸವಗಳು

೧೯೬೯, ಶತಮಾನೋತ್ಸವಗಳ ಸುಗ್ಗಿ. ರಾಷ್ಟ್ರಪಿತ ಗಾಂಧೀಜಿ, ಉರ್ದು ಮಹಾಕವಿ ಗಾಲೀಬ್, ಕನ್ನಡ ಕಾದಂಬರಿಪಿತಾಮಹ ಗಳಗನಾಥ, ಹೊಸಗನ್ನಡ ಸಾಹಿತ್ಯದ ಸ್ಫೂರ್ತಿಯುಳ್ಳ ಹಳಗನ್ನಡ ಕವಿ ಮುದ್ದಣ—ಇವರು ಜನಿಸಿ ಇಂದಿಗೆ ನೂರು ವರ್ಷಗಳು ಸಂದುವು. ಇವರೆಲ್ಲರ ಶತಮಾನೋತ್ಸವಗಳು ನಾಡಿನ ತುಂಬ ಸಂಭ್ರಮದಿಂದ ನೆರವೇರಿದುದು ಸಂಸ್ಮರಣೀಯ.

ಗಾಂಧೀಜಿ

ರಾಷ್ಟ್ರಪಿತ ಗಾಂಧೀಜಿ ಜಗದ ಪುಣ್ಯದಿಂದ ಅವತರಿಸಿದ ಮಹಾಪುರುಷ. ಅವರ ಜನ್ಮ ಭಾರತಕ್ಕೊಂದು ಗೌರವ. ಬುದ್ಧ, ಕ್ರೈಸ್ತ, ಮಹಾವೀರ, ಬಸವೇಶ್ವರ ಈ ಮಹಾಪುರುಷರ ಕಾರ್ಯವನ್ನು ನೂರ್ಮಡಿ ಶಕ್ತಿಯಿಂದ ಮುಂದುವರಿಸಿ ಜಗತ್ತಿಗೆ ಬೆಳಕನ್ನು ನೀಡಿದ ದಿವ್ಯಮಾನವನನ್ನು ನೆನೆದು ನಾಡು ಪುನೀತವಾಗಿದೆ. ಆ ಮಹಾತ್ಮನ ತತ್ತ್ವಾನುಷ್ಠಾನಕ್ಕೆ ತನು ಮನ ಧನ ದಿಂದ ಹೆಣಗಿ 'ಗಾಂಧೀಪ್ರಾಂತ' ಎಂದು ಹೆಸರಾದ ಕರ್ನಾಟಕದ ತುಂಬೆಲ್ಲ ಗಾಂಧೀ ಜನ್ಮಶತಾಬ್ದಿ ಮಹೋತ್ಸವ ಜರುಗಿದುದು ಉಚಿತವೆ. ಯಾವ ತತ್ತ್ವಗಳಿಗಾಗಿ ತಮ್ಮ ಜೀವನದ ಕೊನೆಯುವರೆಗೂ ದುಡಿದರೋ ಆ ಜೀವನ ಮೌಲ್ಯಗಳು ನಮ್ಮ ಜನಜೀವನದಲ್ಲಿ ಆಳವಡುವಂತೆ ರಾಷ್ಟ್ರಪಿತನು ಆಶೀರ್ವದಿಸಲಿ.

ಗಾಲೀಬ್

ಉರ್ದು, ಪಾರ್ಶಿ ಎರಡೂ ಭಾಷೆಗಳಲ್ಲಿ ಪ್ರಕಾಂಡ ಪಂಡಿತರಾಗಿದ್ದ ಮಿರ್ಝಾ ಗಾಲಿಬ್, ಮೊಗಲ ಸಾಮ್ರಾಟನ ಆಸ್ಥಾನಕವಿಯಾಗಿದ್ದರು. ಎರಡೂ ಭಾಷೆಗಳಲ್ಲಿ ಅನೇಕ ಕೃತಿ, ಕಾವ್ಯಗಳನ್ನು ರಚಿಸಿ ಉರ್ದೂಭಾಷೆಗೆ ಅಚ್ಚಳಿಯದ ಗೌರವವನ್ನು ಸಂಪಾದಿಸಿಕೊಟ್ಟರು. ಅವರದು ಗಝುಲ್‌ಗಳೊಂದಿಗೆ ಹೆಣೆದು-ಕೊಂಡ ಹೆಸರು. ಅವರ ಶತಮಾನೋತ್ಸವ ಸಂದರ್ಭದಲ್ಲಿ ನಮ್ಮ ಹಾರ್ದಿಕ ನಮನಗಳು.

ಗಳಗನಾಥ

ಕನ್ನಡ ಗದ್ಯಕ್ಕೊಂದು ಮಾದರಿಯನ್ನು ರೂಪಿಸಿ, ಹೊಸಗನ್ನಡ ಲೇಖಕರಿಗೆ ಮಾದರಿಯಾದ ಗಳಗನಾಥರು 'ಕನ್ನಡದಲ್ಲಿ ಏನಾದರೂ ಓದಲು ಇದೆಯೆ?' ಎಂಬ ಶಂಕೆಯಲ್ಲಿದ್ದ ಕನ್ನಡನಾಡಿನಲ್ಲಿ, ತಮ್ಮ ಕೃತಿಗಳ ಮೂಲಕ—ನೇರ ಪ್ರಯತ್ನಗಳ ಮೂಲಕ, ಅಪಾರ ವಾಚಕವೃಂದವನ್ನು ನಿರ್ಮಿಸಿ ಕೃತಕೃತ್ಯರಾದವರು. ತಮ್ಮ ಕೃತಿಗಳಿಂದ ದೇಶಭಕ್ತಿಯನ್ನೂ ಭಾರತೀಯ ಸಂಸ್ಕೃತಿಯ ಪುನರುದ್ಧಾರವನ್ನೂ ಸಾಧಿಸಿದ ಮಹಾನುಭಾವರು ಗಳಗನಾಥರು. ಅವರ ಜನ್ಮಶತಾಬ್ದಿ ಮಹೋತ್ಸವದ ಈ ಸಮಯದಲ್ಲಿ ಅವರಿಗೆ ನಮ್ಮ ಅನಂತ ವಂದನೆಗಳು.

ಮುದ್ದಣ

ಕನ್ನಡದಲ್ಲಿ ಷಟ್ಪದಿಯ ಸೆಲೆ ಬತ್ತಿ ಭಾವಗೀತದ ಸೆಲೆ ಇನ್ನೂ ಭವಿಷ್ಯ-ದಾಳದಲ್ಲಿದ್ದ ಬರಡು ಸಮಯದಲ್ಲಿ ತನ್ನ ವಿಶಿಷ್ಟಕೃತಿಗಳ ಮೂಲಕ ಕನ್ನಡ

ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿದವ ಮುದ್ದಣ. ತನ್ನ ಕೃತಿಗಳಲ್ಲಿ ಆತನು ಬಳಸಿದ ತಂತ್ರ ಮುಂದೆ ಹೊಸಗನ್ನಡದಲ್ಲಿ ನೆಲೆಯೂರಿ ನಿಲ್ಲಬಹುದಾದ ಅಂಶಗಳನ್ನೆಲ್ಲ ಗರ್ಭೀಕರಿಸಿಕೊಂಡಿತ್ತು. ಮುದ್ದಣ ಜನ್ಮಶತಮಾನೋತ್ಸವದ ಈ ಸಂಭ್ರಮದಲ್ಲಿ 'ಕರ್ನಾಟಕಭಾರತಿ' ಹೃತ್ಪೂರ್ವಕವಾಗಿ ಪಾಲುಗೊಳ್ಳುತ್ತದೆ.

ಗೌರವ ಪ್ರಶಸ್ತಿಗಳು

ಒಂದು ನಾಡಿನ ಕೀರ್ತಿ ಅಲ್ಲಿಯ ವ್ಯಕ್ತಿಗಳಿಗೆ ದೊರೆವ ಮಾನಮನ್ನಣೆಗಳಿಂದ ವ್ಯಕ್ತವಾಗುತ್ತದೆ. ಈ ವರ್ಷ ಕನ್ನಡಿಗರಿಗೆ ಸಂದ ಗೌರವ ರಾಷ್ಟ್ರೀಯ ಮಹತ್ವದುವುಗಳಾಗಿವೆ.

ಎಸ್. ನಿಜಲಿಂಗಪ್ಪ, ದ. ರಾ. ಬೇಂದ್ರೆ, ಜೆ. ಪಿ. ನಾಯಕ

ಅಖಂಡಕರ್ನಾಟಕದ ಶಿಲ್ಪಿಗಳಲ್ಲಿ ಹಿರಿಯರಾದ ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರು ಇಂದು ಭಾರತೀಯ ಮಹಾವ್ಯಕ್ತಿಗಳಾಗಿದ್ದಾರೆ. ಕವಿವರ್ಯ ಶ್ರೀ ದ. ರಾ. ಬೇಂದ್ರೆ ಭಾರತ ಸಾಹಿತ್ಯ ಅಕೆಡೆಮಿಯ ಫೆಲೋ ಆಗಿ ಭಾರತೀಯ ಮಹಾಕವಿಗಳ ಸಾಲಿನಲ್ಲಿ ನಿಂತಿದ್ದಾರೆ. ಶ್ರೀ ಜೆ ಪಿ. ನಾಯಕ ಶಿಕ್ಷಣಸಂಶೋಧನೆಯ ದೃಷ್ಟಿಯಲ್ಲಿ ಭಾರತೀಯ ಖ್ಯಾತಿಪಡೆದಿದ್ದಾರೆ. ನಮ್ಮ ವಿಶ್ವವಿದ್ಯಾಲಯವು ಈ ಮೂವರೂ ಮಹಾನುಭಾವರಿಗೆ ಗೌರವ ಡಾಕ್ಟರೇಟ್ ಪದವಿಗಳನ್ನಿತ್ತು ಸತ್ಕರಿಸಿದೆ. ಅವರಿಗೆ ನಮ್ಮ ಅಭಿನಂದನೆಗಳು.

ಕುವೆಂಪು

'ಕುವೆಂಪು' ಎಂಬ ಹೆಸರು ಆಧುನಿಕ ಕನ್ನಡದ ಉಸಿರಾಗಿದೆ. ಅವರು ಮಕ್ಕಳ ಸಾಹಿತ್ಯದಿಂದ ಮಹಾಕಾವ್ಯದವರೆಗೂ ರಚಿಸಿದ ಕೃತಿಗಳು ಕನ್ನಡದಲ್ಲಿ ಮೈಲುಗಲ್ಲಾಗಿವೆ. ಅವರ ಮೇರುಕೃತಿ 'ರಾಮಾಯಣದರ್ಶನಂ' ಅಖಿಲ ಭಾರತೀಯ ಸಾಹಿತ್ಯಕೃತಿಗಳಲ್ಲಿ ಶ್ರೇಷ್ಠವೆಂದು ಎಣಿಕೆಯಾಗಿ ಅದಕ್ಕೆ ಭಾರತೀಯ ಜ್ಞಾನಪೀಠದ ಪ್ರಶಸ್ತಿಯಲ್ಲಿ ಪಾಲು ದೊರೆತುದು ಕನ್ನಡಿಗರಿಗೆ ಹೆಮ್ಮೆಯ ವಿಷಯ ಕುವೆಂಪು ಅವರಿಗೆ ಸಂದ ಈ ಗೌರವ ಕನ್ನಡದ ಗೌರವ.

ಬಸವರಾಜ ಕಟ್ಟೀಮನಿ

ನೆಹರು ಪಾರಿತೋಷಕ ಒಂದು ಗಣ್ಯಪುರಸ್ಕಾರ. ಈ ಸಲ ಅದನ್ನು ಪಡೆಯುವ ಯೋಗ ಕನ್ನಡದ ಸುಪ್ರಸಿದ್ಧ ಸಾಹಿತಿ ಶ್ರೀ ಬಸವರಾಜ ಕಟ್ಟೀಮನಿ ಅವರಿಗೆ ಬಂದಿದೆ. "ಜ್ವಾಲಾಮುಖಿಯ ಮೇಲೆ" ಎಂಬ ಅವರ ಕಾದಂಬರಿಗೆ ನೆಹರು ಪಾರಿತೋಷಕ ಪ್ರಾಪ್ತವಾದುದು ಕನ್ನಡ ಸಾಹಿತ್ಯಕ್ಕೆ

ದೊರೆತ ಮನ್ನಣೆ. ಇಷ್ಟರಲ್ಲಿಯೇ ರಷಿಯಾ ದೇಶವನ್ನು ಸಂದರ್ಶಿಸಲಿರುವ ಅವರಿಗೆ ನಮ್ಮ ಹಾರ್ದಿಕ ಶುಭಾಶಯಗಳು.

ಮಾಸ್ತಿ

ಕನ್ನಡದ ಕಣಜವನ್ನು ನಾನಾಮುಖವಾಗಿ ತುಂಬಿದ ಹಿರಿಯ ಸಾಹಿತಿಗಳಲ್ಲಿ ಶ್ರೀ ಮಾಸ್ತಿ ಅವರು ಮುಖ್ಯರು. 'ಸಣ್ಣ ಕತೆಗಳ ಜನಕ' ಎಂದು ಖ್ಯಾತರಾದ ಅವರ ಕತೆಗಳು ಜಾಗತಿಕ ಭಾಷೆಗಳಲ್ಲಿ ಪರಿವರ್ತಿತವಾಗಿ ಮನ್ನಣೆ ಪಡೆಯಲರ್ಹವಾಗಿವೆ. ಅವರ "ಸಣ್ಣ ಕತೆಗಳು" ಎಂಬ ಕೃತಿಗೆ ಭಾರತೀಯ ಸಾಹಿತ್ಯ ಅಕೆಡೆಮಿಯ ಪಾರಿತೋಷಕ ಪ್ರಾಪ್ತವಾದುದು ಸಂತೋಷದ ವಿಷಯ. ಅವರಿಗೆ ನಮ್ಮ ಆದರದ ವಂದನೆಗಳು.

ಡಿ. ಕೆ. ಭೀ., ಅ. ನ. ಕೃ., ಸಾಲಿ, ಜಿ. ಪಿ. ರಾ., ಜಯದೇವಿತಾಯಿ

ಪ್ರೊ. ಡಿ. ಕೆ. ಭೀಮಸೇನರಾಯರು ನಮ್ಮ ಹಿರಿಯ ತಲೆಮಾರಿನ ವಿದ್ವಾಂಸರಲ್ಲಿ ಒಬ್ಬರು. ಹೊರನಾಡಿನಲ್ಲಿದ್ದು ಮೌನದಿಂದ ಮಾಡಿದ ಇವರ ತಪಸ್ಸು ಕನ್ನಡದ ಶಕ್ತಿಯನ್ನು ಹೆಚ್ಚಿಸಿದೆ.

ಅ. ನ. ಕೃ. ಎಂಬ ಹೆಸರು ಕನ್ನಡನಾಡಿನಲ್ಲಿ ಮನೆಮಾತಾಗಿದೆ. ಅವರ ಕಾದಂಬರಿ, ಕಥೆ, ನಾಟಕ ಮುಂತಾದ ಸಾಹಿತ್ಯ ಗಾತ್ರ, ಸತ್ತ್ವಗಳ ದೃಷ್ಟಿಯಿಂದ ಗಮನಾರ್ಹವಾಗಿದೆ. ಕನ್ನಡ ನಾಡುನುಡಿಯ ಉದ್ಧಾರಕ್ಕಾಗಿ ಅವರು ಮಾಡಿದ ಕಾರ್ಯ ಚಿರಸ್ಮರಣೀಯ.

ಶ್ರೀ. ಸಾಲಿ ರಾಮಚಂದ್ರರಾಯರು ಎಲೆಯ ಮರೆಯ ಹೂವಿನಂತೆ—ಕನ್ನಡಕ್ಕಾಗಿ ದುಡಿದವರು. ಪವಿತ್ರಜೀವನವನ್ನು ಸಾಗಿಸುವ ಶ್ರೀ. ಸಾಲಿ ಅವರು ವಯೋವೃದ್ಧರೂ, ಜ್ಞಾನವೃದ್ಧರೂ ಆಗಿ ನಾಡಿನ ಶುಭವನ್ನು ಹಾರೈಸುತ್ತಿರುವರು.

ಜಿ. ಪಿ. ರಾ. ಕನ್ನಡದಲ್ಲಿ ನಡೆದುದು ಮಾರ್ಗವಾಗಿದೆ. ಅವರ ರತ್ನನ ಸಾಹಿತ್ಯ ದೇಶೀಯ ರತ್ನವಾಗಿದೆ. ಜೈನ, ಬೌದ್ಧ, ಸಾಹಿತ್ಯಗಳ ಅಧ್ಯಯನಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ 'ರಾಜರತ್ನಂ' ಹೆಸರು ಕನ್ನಡದಲ್ಲಿ ಚಿರಕಾಲ ಉಳಿಯುವಂತಹದು.

ಸಿದ್ಧರಾಮನ ಸೊನ್ನಲಿಗೆಯಲ್ಲಿ ಕನ್ನಡದ ಕೋಟೆಯನ್ನು ಕಟ್ಟಿ ನಿಲ್ಲಿಸಿದವರು ಶ್ರೀಮತಿ ಜಯದೇವಿತಾಯಿ ಲಿಗಾಡೆ. ಸಿದ್ಧರಾಮನ ಮಹಾಜೀವನವನ್ನು ಕುರಿತು ಅವರು ಬರೆದ ಕೃತಿ ತ್ರಿಪದಿಸಾಹಿತ್ಯದಲ್ಲಿ ಎದ್ದುಕಾಣುತ್ತದೆ.

ಇವರೆಲ್ಲರಿಗೆ ಈ ವರುಷ ರಾಜ್ಯಸರಕಾರದ ಸಾಹಿತ್ಯ ಅಕೆಡೆಮಿಯ ಪುರಸ್ಕಾರ ದೊರೆತಿದೆ. ಅವರಿಗೆ ಧನ್ಯವಾದಗಳು.

ಡಾ. ಆರ್. ಬಿ. ಪಾಟೀಲ

ಡಾ. ರೇವಣಸಿದ್ಧಪ್ಪಗೌಡ ಪಾಟೀಲ ಅವರು ಆಧುನಿಕ ಧನ್ವಂತರಿಗಳು. ಹುಬ್ಬಳ್ಳಿಯ ಸಹಕಾರೀ ಆಸ್ಪತ್ರೆಯಲ್ಲಿ ಧರ್ಮಶ್ರೀ ಆಗಿ ನಿಂತ ಅವರಿಗೆ ಪದ್ಮಶ್ರೀ ಬಂದುದು ಎಲ್ಲರಿಗೂ ಸಂತಸದ ವಾತಾಗಿದೆ. ಅವರಿಗೆ ನಮ್ಮ ಅನಂತ ಧನ್ಯವಾದಗಳು.

ಸುವರ್ಣಮಹೋತ್ಸವಗಳು

ಈ ವರುಷ ಒಂದು ಮಹಾಶಿಕ್ಷಣ ಸಂಸ್ಥೆ, ಒಂದು ಉನ್ನತಮಟ್ಟದ ಪತ್ರಿಕೆ ತಮ್ಮ ಸುವರ್ಣಮಹೋತ್ಸವವನ್ನು ಆಚರಿಸಿದುದು ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತಹದು.

ಕರ್ನಾಟಕ ಲಿಬರಲ್ ಎಜ್ಯುಕೇಶನ್ ಸೊಸೈಟಿ

'ಸತ್ಯ, ಪ್ರೇಮ, ಸ್ವಾರ್ಥತ್ಯಾಗ' ಎಂಬ ಧ್ಯೇಯವನ್ನಿಟ್ಟುಕೊಂಡು ೧೯೧೬ರಲ್ಲಿ 'ಲಿಂಗಾಯತ ಎಜ್ಯುಕೇಶನ್ ಸೊಸಾಯಿಟಿ' ಎಂಬ ಹೆಸರಿನಿಂದ ಪ್ರಾರಂಭವಾದ ಈ ಸಂಸ್ಥೆಯ ವಿಕಾಸದೊಂದಿಗೆ ಉತ್ತರ ಕರ್ನಾಟಕದ ವಿಕಾಸ ವಾಯಿತೆಂದರೆ ಅತ್ಯುಕ್ತಿಯಲ್ಲ. ನಾಡಿನ ಹೆಮ್ಮೆಯ ಈ ಸಂಸ್ಥೆ ಸುವರ್ಣ-ಮಹೋತ್ಸವವನ್ನಾಚರಿಸಿದುದು ಮಂಗಲಕ್ಕೆ ಮಂಗಲ. ಈ ಸಂಸ್ಥೆಗೆ ಸರ್ವತೋಮುಖವಾದ ಯಶಸ್ಸು ಪ್ರಾಪ್ತವಾಗಲೆಂದು ಹಾರೈಸುತ್ತೇವೆ.

ಪ್ರಬುದ್ಧ ಕರ್ಣಾಟಕ

ಉನ್ನತಮಟ್ಟದ ಪತ್ರಿಕೆಗಳಲ್ಲಿ ಒಂದಾದ 'ಪ್ರಬುದ್ಧ ಕರ್ಣಾಟಕ'ದ ಹಿರಿಮೆ-ಯನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪಾಧ್ಯಾಪಕರು ಆದಿನಿಂದ ಇಂದಿನವರೆಗೆ ಪ್ರಾಣವಾಗಿ ನಿಂತು ಕಾಯ್ದುಕೊಂಡು ಬಂದಿದ್ದಾರೆ. ಈ ವರುಷ ಈ ಪತ್ರಿಕೆಯ ಸುವರ್ಣಮಹೋತ್ಸವವು ವೈಭವಪೂರ್ಣವಾಗಿ ನೆರವೇರಿತು. ಈ ಸಂದರ್ಭದಲ್ಲಿ ಅದು ಇತೋಪ್ಯತಿಶಯವಾಗಿ ಬೆಳೆಯಲೆಂದು ಹಾರೈಸುತ್ತೇವೆ.

ಈ ಸಂಚಿಕೆಯ ಲೇಖಕರು

೧ **ಶ್ರೀ ಮಧುಕರ ಯಕ್ಕುಂಡಿ :**

ಅಂಕೋಲೆಯ ಗೋಖಲೆ ಸೆಂಟಿನರಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು. ಕವನ, ವಿಮರ್ಶೆ ಬರೆಯುವಲ್ಲಿ ಆಸಕ್ತಿಯುಳ್ಳ ತರುಣ ಬರೆಹಗಾರರು.

೨ **ಶ್ರೀ ವೀ. ಜಿ. ಕುಲಕರ್ಣಿ :**

ಉತ್ತರ ಕರ್ನಾಟಕದ ಹಿರಿಯ ತಲೆಮಾರಿನ ಕನ್ನಡ ಪ್ರಾಧ್ಯಾಪಕರು. ಸಂಸ್ಕೃತ, ಕನ್ನಡ ಮತ್ತು ಇಂಗ್ಲಿಷ ಸಾಹಿತ್ಯದ ಘನ ವಿದ್ವಾಂಸರು. ಈಗ ಕರ್ನಾಟಕ ವಿಶ್ವ-ವಿದ್ಯಾಲಯದ ಕನ್ನಡ ವಿಭಾಗದಲ್ಲಿ ಯು. ಜಿ. ಸಿ. ಪ್ರಾಧ್ಯಾಪಕರಾಗಿದ್ದಾರೆ.

೩ **ಶ್ರೀ ಶಾಂತರಸ ರಾಯಚೂರು :**

ರಾಯಚೂರಿನ ಹಮ್‌ದರ್ದ ಹೈಸ್ಕೂಲಿನಲ್ಲಿ ಶಿಕ್ಷಕರಾಗಿರುವ ಇವರು ಕವಿಗಳು, ಕಾದಂಬರಿಕಾರರು, ಲೇಖಕರು, "ಪ್ರತೀಕ" ಎಂಬ ಪತ್ರಿಕೆಯ ಸಂಪಾದಕರು.

೪ **ಶ್ರೀ ರಾಜಶೇಖರ ಭೂಸನೂರಮಠ :**

ಧಾರವಾಡದ ಕರ್ನಾಟಕ ಸಾಯನ್ಸ ಕಾಲೇಜಿನಲ್ಲಿ ಭೌತಶಾಸ್ತ್ರದ ಅಧ್ಯಾಪಕರು. ಮಯೂರ, ಸುಧಾ ಪತ್ರಿಕೆಗಳಲ್ಲಿ ವೈಜ್ಞಾನಿಕ ಸಣ್ಣ ಕಥೆಗಳನ್ನು ಪ್ರಕಟಿಸುತ್ತಿದ್ದಾರೆ.

೫ **ಶ್ರೀ ಬಿ. ಎಂ. ಶ್ರೀ ಮಾಗಿ :**

ಹುನಗುಂದದ ಶ್ರೀ ವ್ಹಿ. ಎಂ. ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು. ತರುಣ ಕವಿಗಳು.

೬ **ಡಾ. ಬಿ. ಎಸ್. ಕುಲಕರ್ಣಿ :**

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಜೈನಸಾಹಿತ್ಯದ ಪ್ರಾಧ್ಯಾಪಕರು. ಸಮಯಪರೀಕ್ಷೆ, ನೇಮಿನಾಥಪುರಾಣಗಳ ಸಂಪಾದಕರು.

೭ **ಡಾ. ಜಿ. ಎಸ್. ಆಮೂರ :**

ಮರಾಠವಾಡ ವಿಶ್ವವಿದ್ಯಾಲಯದ ಇಂಗ್ಲಿಷ ಪ್ರಾಧ್ಯಾಪಕರು. ಸುರಿತ ವಿಮರ್ಶಕರು.

೮ **ಶ್ರೀ ಗಿರಡ್ಡಿ ಗೋವಿಂದರಾಜ :**

ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರು. ಕವಿಗಳು, ವಿಮರ್ಶಕರು. 'ಸಂಕ್ರಮಣ' ಪತ್ರಿಕೆಯ ಸಂಪಾದಕರಲ್ಲಿ ಒಬ್ಬರು.

೯ **ಡಾ. ಟಿ. ಸಿ. ದೇವರಾಜ :**

ಕರ್ನಾಟಕ ವಿಶ್ವವಿದ್ಯಾಲಯದ ಭೂಗರ್ಭಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು.

೧೦ ಶ್ರೀ ಬೆಟಗೇರಿ ಕೃಷ್ಣಶರ್ಮಾ :

ನಮ್ಮ ಹಿರಿಯ ತಲೆಮಾರಿನ ಕವಿ, ಕಾದಂಬರಿಕಾರ, ಕಥೆಗಾರ, ಲೇಖಕ, ಸಂಶೋಧಕ ಮತ್ತು ಸಂಪಾದಕರು. ಇವರ ಇತ್ತೀಚಿನ ಕೃತಿ “ನಮ್ಮ ಸಂಸ್ಕೃತಿ-ಪರಂಪರೆ”.

೧೧ ಶ್ರೀ ಕೃಷ್ಣಮೂರ್ತಿ ಕಿತ್ತೂರ :

ಹಾವೇರಿಯ ಶ್ರೀ. ಗುದ್ಲೆಪ್ಪ ಹಳ್ಳಿಕೇರಿ ಕಾಲೇಜದಲ್ಲಿ ಕನ್ನಡ ಅಧ್ಯಾಪಕರು, ವಿಮರ್ಶೆಯತ್ತ ಒಲವು.

೧೨ ಶ್ರೀ ಎನ್. ಉಮಾಕಾಂತ :

ಕರ್ನಾಟಕ ವಿಶ್ವವಿದ್ಯಾಲಯದ ಭೌತಶಾಸ್ತ್ರವಿಷಯದ ಪ್ರಾಧ್ಯಾಪಕರು. ವಿಜ್ಞಾನಕ್ಕೆ ಸಂಬಂಧಿಸಿದ ಕನ್ನಡ ಲೇಖನ ಬರೆಯುವಲ್ಲಿ ಅಭಿರುಚಿಯುಳ್ಳವರು.

೧೩ ಶ್ರೀ ಟಿ. ಎಸ್. ಮುಧೋಳೆ

ಕರ್ನಾಟಕ ವಿಶ್ವವಿದ್ಯಾಲಯದ ಭೌತಶಾಸ್ತ್ರವಿಭಾಗದಲ್ಲಿ ಸಂಶೋಧನ ಸಹಾಯಕರು.

೧೪ ಶ್ರೀ ಶ್ರೀನಿವಾಸ ಕುಲಕರ್ಣಿ :

ಧಾರವಾಡ ಆಕಾಶವಾಣಿ ವಿಭಾಗದಲ್ಲಿ ಪ್ರಸಾರ ನಿರ್ವಹಣಾಧಿಕಾರಿಗಳಾಗಿದ್ದಾರೆ. ತರುಣ ಕವಿಗಳು, ನಾಟಕಕಾರರು.

೧೫ ಶ್ರೀ ಎಂ. ಎಂ. ಕಲಬುರ್ಗಿ :

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಅಧ್ಯಾಪಕರು. “ಶಾಸನ ಸಂಪದ” ಗ್ರಂಥದ ಸಹಸಂಪಾದಕರು.

೧೬ ಶ್ರೀ ಎನ್. ಕೆ. ಕಡೆತೋಟದ :

ಕರ್ನಾಟಕ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದಲ್ಲಿ ಸಮೀಕ್ಷಕರು.

೧೭ ಶ್ರೀ ಅನಂತ ಬುರ್ಲಿ :

ಗದಗಿನ ವಾಣಿಜ್ಯ ಕಾಲೇಜದಲ್ಲಿ ಕನ್ನಡ ಅಧ್ಯಾಪಕರು. ಹರಿತ ವಿಮರ್ಶಕರು.

೧೮ ಶ್ರೀ ವರದರಾಜ ಹುಯಿಲಗೋಳ :

ಧಾರವಾಡದ ಬಾಸೆಲ್ ಮಿಶನ್ ಹಾಯಸ್ಕೂಲಿನ ಶಿಕ್ಷಕರು, ಕಾದಂಬರಿಕಾರರು, ವಿಮರ್ಶಕರು ಮತ್ತು ಕವಿಗಳು.

೧೯ ಶ್ರೀಮತಿ ಶಾರದಾ ಹುಲ್ಲೂರ :

ಕರ್ನಾಟಕ ವಿಶ್ವವಿದ್ಯಾಲಯದ ಭೂಗೋಲಶಾಸ್ತ್ರವಿಭಾಗದಲ್ಲಿ ಪ್ರಯೋಗದರ್ಶಕರು.

೨೦ ಶ್ರೀ ಮೇವುಂಡಿ ಮಲ್ಲಾರಿ :

ಹಿರಿಯ ತಲೆಮಾರಿನ ಕವಿಗಳು, ಸಂಶೋಧಕರು, ಸಂಪಾದಕರು, ಮತ್ತು ಕಥೆಗಾರರು. ಕರ್ನಾಟಕ ವಿಶ್ವವಿದ್ಯಾಲಯದ ‘ವಚನವಾಙ್ಮಯ’ ವಿಭಾಗದಲ್ಲಿ ರೈಟರರು.

೨೧ **ಶ್ರೀ ಬ. ಗಿ. ಯಲ್ಲಟ್ಟಿ :**

ರಬಕವಿಯ ಎಂ. ವ್ಹಿ. ಪಟ್ಟಣ ಮಾಧ್ಯಮಿಕ ಶಾಲೆಯಲ್ಲಿ ಶಿಕ್ಷಕರು. ಇವರ ೩, ೪ ಕವನಸಂಕಲನಗಳು ಬೆಳಕು ಕಂಡಿವೆ.

೨೨ **ಶ್ರೀ ಎಸ್. ಹಿಪ್ಪರಗಿ :**

ವಿಜಾಪುರದ ಸಂಗನಬಸವೇಶ್ವರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು.

೨೩ **ಡಾ. ಹಾ. ಮಾ. ನಾಯಕ :**

ಮಾನಸಗಂಗೋತ್ರಿಯ ಕನ್ನಡದ ಪ್ರಾಧ್ಯಾಪಕರು.

KARNATAK UNIVERSITY PUBLICATIONS
ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನೆಗಳು

I. Text Books
(ಪಠ್ಯಪುಸ್ತಕಗಳು)

		PRICE
1	Selections from Mahābhārata & Rāmāyaṇa (Sanskrit)	3.00
2	Sanskrit Selections for P. U. C. (Arts & Science)	1.50
3	ಕಾವ್ಯಮಂಜರಿ : ಭಾಗ ೧, ಸಂಪುಟ ೧	1·00
4	ಕಾವ್ಯಮಂಜರಿ : ಭಾಗ ೧, ಸಂಪುಟ ೨	1·00
5	ಕಾವ್ಯಮಂಜರಿ : ಭಾಗ ೨, ಸಂಪುಟ ೧	1.00
6	ಕಾವ್ಯಮಂಜರಿ : ಭಾಗ ೨, ಸಂಪುಟ ೨	1·00
7	ಗದ್ಯಮಂಜರಿ	2·00
8	ಕಾವ್ಯವಿಲಾಸ	1·50
9	ಗದ್ಯವಿಲಾಸ	1·25
10	ಕಾವ್ಯಕುಂಜ	1·50
11	ಕಾವ್ಯಮಂಜರಿ : ಭಾಗ ೧, ಸಂಪುಟ ೩	1·00

II. Research Publications Series
(ಸಂಶೋಧನ ಗ್ರಂಥಮಾಲೆ)

1	Pleistocene Studies in the Malaprabha Basin (Joint Publication of Karnatak University, Dharwar and Deccan College Research Institute, Poona)	—*R. V. Joshi*	15·00
2	The Karnatak Theatre	Ord. binding	3·00
	—*H. K. Ranganath*	Calico binding	5·00
3	Some Problems in Jaina Psychology	Full cal.	7·00
	—*T. G. Kalghatgi*	Half calico	6·00
4	ಕನ್ನಡ ಜಾನಪದ ಗೀತಗಳು	—*B. S. Gaddagimath*	5·00
5	The Concept of Comedy	—*G. S. Amur*	7·00

6 Local Self-Government in Mediaeval Karnatak — 7·00
—G. S. Dikshit

7 ಕನ್ನಡ ಸಾಹಿತ್ಯದಲ್ಲಿ ಹಾಸ್ಯ *—M. S. Sunkapur* — 8·00

8 Basic Syllabus in practice *—N. R. Hiremath* — 10·00

9 The Later Phase in the development of W. B. Yeats *—S. R. Mokashi* — 10·00

10 Some Studies in Boolean Algebra — 7·00
—E. Sampathkumarachar

11 History of South Kanara *—K. V. Ramesh* (IN PRESS)

12 ನೇಮಿಚಂದ್ರ *—B. S. Kulkarni* (,,)

13 Old People of Makunti *—H. M. Marulasiddiah* (,,)

III. Extension Lectures Publications Series

(ವಿಶೇಷ ಉಪನ್ಯಾಸ ಗ್ರಂಥಮಾಲೆ)

1 Introduction to Karnatak Mysticism — 1.00
—R. D. Ranade

2 Hindu Code Bill *—P. B. Gajendragadkar* — 2·00

3 Karnataka's Trans-Oceanic Contacts — 3.00
—B. A. Saletore

4 Kālidāsa *—R. D. Karmarkar* — 4.00

5 Bhavabhūti *—R. D. Karmarkar* — 3.00

6 Bāṇa *—R. D. Karmarkar* — 3·00

7 Rockets, Satellites and Space Travel — 2·00
—G. B. Pant

8 Purandara and Haridāsa Movement — 6.00
—M. V. Krishna Rao

9 ಮಹಾಕವಿ ಷಡಕ್ಷರದೇವ ಹಾಗು ಅವನ ಕೃತಿಗಳು — 3.00
—B. Shivamoorthy Shastry

10 Śaṅkara's Advaita *—R. D. Karmarkar* — 3·0

11 ಸಾಹಿತ್ಯ : ಸಂಪ್ರದಾಯ ಮತ್ತು ಹೊಸ ಮಾರ್ಗ — 4·0
—V. Sitaramaiah

12 ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕರತ್ನಗಳು — 3·0
—D. R. Bendre

13 ವಿಚಾರಸಾಹಿತ್ಯನಿರ್ಮಾಣ *—K. S. Karanth* — 2·0

14 ಕನ್ನಡ ರಂಗಭೂಮಿಯ ಪುರೋಭಿವೃದ್ಧಿ — 2·5
—Adya Rangacharya

15 ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು
—R. S. Mugali (IN PRESS

IV. Economics Series

1 A Survey of Handicrafts in Eight Districts of the Mysore State —*S. S. Mensinkai* 5·00
2 Community Development and Employment —*D. M. Nanjundappa* 3·00
3 Research Reporting in Social Sciences —*M. H. Gopal* 2·00
4 Economy of Scarcity Areas —*T. K. Meti* 4·00
5 Foreign Trade and Economic Development —*V. L. D'souza* 1·50
6 Food and Freedom —*V. M. Dandekar* 2·50
7 Local Taxation in Urban Areas —*D. M. Nanjundappa & M. V. Nadkarni* 3·00
8 Economic Development in India —*R. Balakrishna* 5·00
9 Economic Develoment of the under developed regions in Italy —*T. K. Meti* (IN PRESS)

V. ಕನ್ನಡ ಕಾವ್ಯಮಾಲೆ

Kannada Classical Series

1 ರಾಜಶೇಖರವಿಳಾಸ ಸಂಗ್ರಹ 2·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

2 ಸೋಮನಾಥಚಾರಿತ್ರ 5·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

3 ರಾಜಶೇಖರವಿಳಾಸಂ 10·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

4 ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ-ಭಾಗ ೧ 6·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

5 ತ್ರಿಷಷ್ಟಿಪುರಾತನಚಾರಿತ್ರ ಸಂ. : ಆರ್. ಸಿ. ಹಿರೇಮಠ 12·00

6 ಬಸವರಾಜವಿಜಯಂ ಸಂ. : ಆರ್. ಸಿ. ಹಿರೇಮಠ 20·00

7 ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ-ಭಾಗ ೨ 8·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

8 ಹರಿಹರದೇವಕೃತ ಪುರಾತನರ ಆರು ರಗಳೆಗಳು 4·00
ಸಂ. : ಆರ್. ಸಿ. ಹಿರೇಮಠ

9 ನೇಮಿನಾಥಪುರಾಣಂ ಸಂ. : ಬಿ. ಎಸ್. ಕುಲಕರ್ಣಿ 6·00

10 ಹರಿಹರದೇವಕೃತ ಪುರಾತನರ ರಗಳೆಗಳು (IN PRESS)
ಸಂ. : ಆರ್. ಸಿ. ಹಿರೇಮಠ

11 ಅಕಬ್ಬರ ಚರಿತ್ರೆ ಸಂ. : ಬೆಟಗೇರಿ ಕೃಷ್ಣಶರ್ಮ 4·00

VI. ಉಪನ್ಯಾಸ ಗ್ರಂಥಮಾಲೆ

Kannada Extension Lectures
Booklet Series

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

1. ಭವಭೂತಿ — ಕೆ. ಕೃಷ್ಣಮೂರ್ತಿ
2. ಮನೋರೋಗಗಳು — ಎನ್. ಆರ್. ಕುಲಕರ್ಣಿ
3. ಪ್ರಥಮ ಪಂಚವಾರ್ಷಿಕ ಯೋಜನೆ ಹಾಗೂ ಒಕ್ಕಲತನ — ಎನ್. ಪಿ. ಪಾಟೀಲ
4. ಗಾದೆಗಳು — ಎ. ಕೆ. ರಾಮಾನುಜನ್
5. ಭಾರತದಲ್ಲಿ ಜಾತಿಪದ್ಧತಿ — ವ್ಹಿ. ಎಸ್. ಡಿ'ಸೋಜಾ
6. ಕೀಟಕ ಪಿಡುಗುಗಳ ಸಮೀಕ್ಷಣೆ — ಎಸ್. ಎಸ್. ಕಟಗಿಹಳ್ಳಿಮಠ
7. ರಾಜಕೀಯ ಪಕ್ಷಗಳು — ಎನ್. ರಾಜಗೋಪಾಲರಾವ್
8. ಸ್ವಾದಿ ಅರಸುಮನೆತನ — ಎಸ್. ಎಸ್. ಮಾಳವಾಡ
9. ಮಕ್ಕಳ ಶಿಕ್ಷಣ — ಡಿ. ಎಸ್. ಕರ್ಕಿ
10. ಮೂಢ ನಂಬಿಕೆಗಳು — ಎಲ್. ಆರ್. ಹೆಗಡೆ
11. ಸಂಸ್ಕೃತ ಕವಯಿತ್ರಿಯರು — ಕೆ. ಟಿ. ಪಾಂಡುರಂಗಿ
12. ನಿತ್ಯಜೀವನದಲ್ಲಿ ರಸಾಯನಶಾಸ್ತ್ರ — ಬಿ. ವಿರೂಪಾಕ್ಷಪ್ಪ
13. ಸಾರ್ವಜನಿಕ ಆಡಳಿತ — ಜಿ. ಎಸ್. ಹಾಲಪ್ಪ
14. ವಿಚಾರವಾದ — ಗೌರೀಶ ಕೈಕಿಣಿ
15. ಮಹಾಕವಿ ಮಿಲ್ಟನ್ — ಜಿ. ಎಸ್. ಆಮೂರ
16. ಭಾರತದಲ್ಲಿ ಗ್ರಂಥಾಲಯ ಪ್ರಸಾರ — ಕೆ. ಎಸ್. ದೇಶಪಾಂಡೆ
17. ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ — ಬಿ. ಎಚ್. ಶ್ರೀಧರ
18. ಜನಸಂಖ್ಯೆ ಹಾಗೂ ಆಹಾರ ಸಮಸ್ಯೆ — ಪಿ. ಎಂ. ಉಮಾಕಾಂತಶಾಸ್ತ್ರಿ
19. ಸೌರವ್ಯೂಹ — ಸಿ. ಎನ್. ಶ್ರೀನಿವಾಸ ಅಯ್ಯಂಗಾರ
20. ಪ್ರಾಚೀನ ಭಾರತದಲ್ಲಿ ಸಾಮಾಜಿಕ ಜನಜೀವನ — ಸಿ. ವಿ. ರಂಗಸ್ವಾಮಿ
21. ಸಮಾಜ ಕಾರ್ಯ — ಎಚ್. ಎಂ. ಮರುಳಸಿದ್ಧಯ್ಯ
22. ಸಂಸತ್ತಿನ ಕಾರ್ಯಪದ್ಧತಿ — ಎ. ಎಂ. ರಾಜಶೇಖರಯ್ಯ
23. ಕನ್ನಡನಾಡಿನ ಶಾಸನಗಳು — ಪಿ. ಬಿ. ದೇಸಾಯಿ
24. ಕವೀಂದ್ರ ರವೀಂದ್ರರು — ಎಸ್. ಎಸ್. ಮಾಳವಾಡ
25. ನಾಗಾನಂದ — ಎಚ್. ಪಿ. ಮಲ್ಲೇದೇವರು
26. ಜೀವನದಲ್ಲಿ ನಗೆ — ಎಂ. ಎಸ್. ಸುಂಕಾಪುರ
27. ಬಸವಣ್ಣನವರ ಯೋಜನೆಗಳು — ಬಿ. ಸಿ. ಜವಳಿ
28. [illegible] ಕ್ರಾಂತಿ — ಸಿ. ವೀರಬಸಣ್ಣ
29. ಕನ್ನಡ ಕಥಾಸೃಷ್ಟಿ — ಬಿ. ಬಿ. ಮಹೀಶವಾಡಿ
30. ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರರಸ — ಕೆ. ಕೃಷ್ಣಮೂರ್ತಿ
31. ನೀರಾವರಿ ಬೇಸಾಯ — ಎಸ್. ಎ. ಹೊಸಮನಿ
32. ಸಾರ್ವಜನಿಕ ಅಭಿಪ್ರಾಯ — ಎನ್. ರಾಜಗೋಪಾಲರಾವ್
33. ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನಪ್ರಸಂಗ — ದೇವೇಂದ್ರಕುಮಾರ ಹಕಾರಿ

34. ಕನ್ನಡಕ್ಕೆ ಪುರಂದರದಾಸರು ನೀಡಿದ ಕೊಡುಗೆ — ಜಿ. ತಿ. ನಾಡಕರ್ಣಿ
35. ಫ್ಯಾಶನ್ನುಗಳು — ಕೆ. ಡಿ. ತಂಗೋಡ
36. ಮಹಾಕವಿ ರಾಘವಾಂಕನ ಪಾತ್ರಗಳಲ್ಲಿ ತತ್ವನಿಷ್ಠೆ — ಬಿ. ವ್ಹಿ. ಮಲ್ಲಾಪುರ
37. ಅಭಿವೃದ್ಧಿ ಯೋಜನೆಗಳಲ್ಲಿ ಸಹಕಾರದ ಪಾತ್ರ — ಎಸ್. ಜಿ. ಕರಭಂಟನಾಳ
38. ಕನ್ನಡ ಜೈನ ಪುರಾಣಗಳು — ಎಸ್. ಎನ್. ನಾಯಕ
39. ಕನ್ನಡ ನಾಟ್ಯಸೃಷ್ಟಿ — ಎಚ್. ಜಿ. ಲೋಕೂರ
40. ಹರಿಹರನು ಚಿತ್ರಿಸಿದ ಶಿವಶರಣೆಯರು — ಬಿ. ಬಿ. ಹೆಂಡಿ
41. ನೀವು ಬಯಸುವ ಮಗು ಗಂಡೋ? ಹೆಣ್ಣೋ? — ಕೆ. ಆರ್. ರಾಮಸ್ವಾಮಿ
42. ಆಂಡಯ್ಯ — ಬಿ. ಎಸ್. ಕುಲಕರ್ಣಿ
43. ಬೆಳವಲನಾಡಿನ ಬೆಳೆಗಳು — ಎಸ್. ಎ. ಹೊಸಮನಿ
44. ಜಾನಪದ ಕಥೆಗಳು — ಎಲ್. ಆರ್. ಹೆಗಡೆ
45. ಸುಧಾರಿಸಿದ ಬೇಸಾಯ — ಎ. ಸಿ. ಕಲ್ಯಾಣಿಮಠ
46. ಕನ್ನಡನಾಡಿನ ಐತಿಹಾಸಿಕ ಮಹಾಪುರುಷರು — ಬಿ. ಆರ್. ಗೋಪಾಲ್
47. ಗ್ರಂಥಾಲಯದ ಅಂತರಂಗ — ಎಸ್. ಆರ್. ಗುಂಜಾಳ
48. ಸ್ತ್ರೀ ಮತ್ತು ಶಿಕ್ಷಣ — ವನಮಾಲಾ ಆಚಾರ್
49. ಜಾಗತಿಕ ಸರಕಾರ — ಸಿ. ವೀರಬಸಣ್ಣ
50. ಸಮುದಾಯ ಸಂಘಟನೆ — ಎಚ್. ಎಂ. ಮರುಳಸಿದ್ಧಯ್ಯ
51. ಅಶೋಕನ ಧರ್ಮಶಾಸನಗಳು — ಶ್ರೀನಿವಾಸ ರಿತ್ತಿ
52. ಪ್ರಾಚೀನ ಭಾರತದ ರಾಜ್ಯಪದ್ಧತಿ — ಸಿ. ವ್ಹಿ. ರಂಗಸ್ವಾಮಿ
53. ಅಕ್ಕಮಹಾದೇವಿ ಮತ್ತು ಮೀರಾಬಾಯಿ — ಎಸ್. ಎಸ್. ಕಬ್ಬಿನ
54. ಕನ್ನಡ ಕಾವ್ಯದಲ್ಲಿ ವೀರರಸನಿರೂಪಣೆ — ಬಿ. ಬಿ. ಮಹೀಶವಾಡಿ
55. ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರಗಳು
— ಬಿ. ಸಿ. ಜವಳಿ
56. ಭಾರತ ರಾಜ್ಯಘಟನೆ — ಎಂ. ಎಸ್. ಪಾಟೀಲ
57. ಪಂಚಾಯತಿ ರಾಜ್ಯ — ಎಸ್. ಜಿ. ಕರಭಂಟನಾಳ ಮತ್ತು ಕೆ. ಡಿ. ಬಸವ
58. ವಿಷಮಜ್ವರ — ಪಿ. ಎಸ್. ಶಂಕರ
59. ಪುಸ್ತಕ ಭಾಂಡಾರ ಕಾಯದೆ — ಜಿ. ಎಂ. ಪಾಟೀಲ
60. ಸರ್ ಐಸಾಕ್ ನ್ಯೂಟನ್ — ಆರ್. ವ್ಹಿ. ಅಬ್ಬಿಗೇರಿ
61. ಗ್ರಾಮಾಭ್ಯುದಯದ ಯೋಜನಾಂಗಗಳು — ಟಿ. ಕೆ. ಮೇಟಿ
62. ಹರಿಜನರ ಸಮಸ್ಯೆಗಳು ಹಾಗು ಅವುಗಳ ಪರಿಹಾರ
— ಎನ್. ಕೆ. ಕಡೆತೋಟದ
63. ರಾಸಾಯನಿಕ ಕಿಣ್ವಗಳು — ಎಂ. ಎಸ್. ಎಸ್. ರಾವ್
64. ಪ್ರಜಾಪ್ರಭುತ್ವದ ಮೂಲತತ್ವಗಳು — ಕೆ. ಬಿ. ಬಕ್ಕಪ್ಪ
65. ಹೃದಯಾಘಾತ — ಪಿ. ಎಸ್. ಶಂಕರ್
66. ಆಭರಣಗಳ ಬಗೆಗೆ ಸಾಮಾಜಿಕ ದೃಷ್ಟಿಕೋನ — ಡಿ. ಎ. ಚಿಕ್ಕಿ
67. ಶ್ರೀ ರಾಮಾಯಣದರ್ಶನದಲ್ಲಿ ಕುವೆಂಪು ಸೃಜಿಸಿದ ಮೂರು ಪಾತ್ರಗಳು
— ಎಂ. ಜಿ. ಬಿರಾದಾರ
68. ಯೋಜನೆಗಳೇಕೆ ಬೇಕು ? — ಎಸ್. ಎಸ್. ಯಮ್ಮಿ
69. ಸಗರನಾಡಿನ ಶಿವಶರಣರು — ವ್ಹಿ. ಶಿವಾನಂದ

70. ವಿಜ್ಞಾನದ ದೃಷ್ಟಿಯಲ್ಲಿ ಸೃಷ್ಟಿ — ಆರ್. ಎನ್. ಘಟಕನೂರಮಠ
71. ವಿಜಯನಗರದ ನಿರ್ಣಾಯಕ ಯುದ್ಧ — ಎಸ್. ಬಿ. ಕೆಳದಿ
72. ಬಸವಣ್ಣನವರನ್ನು ಕುರಿತ ಶಾಸನಗಳು — ಎಂ. ಎಂ. ಕಲಬುರ್ಗಿ
73. ಆಧುನಿಕ ಭಾಷಾವಿಜ್ಞಾನ — ಜಿ. ಎಸ್. ಗಾಯಿ
74. ಪುರಾಣ ಜಿಜ್ಞಾಸೆ — ಎಲ್. ಆರ್. ಹೆಗಡೆ
75. ಭಾರತದಲ್ಲಿ ಕೃತ್ತನೆಯ ಪ್ರಯೋಗ — ವ್ಹಿ. ಎಸ್. ಕುಲಕರ್ಣಿ
76. ಅಧಿಕ ಉತ್ಪಾದನೆಗಾಗಿ ಮಿಶ್ರತಳಿ ಬೆಳೆಗಳು — ಬಿ. ಬಿ. ಕಲ್ಯಾಣಮಠ
77. ಕನ್ನಡ ನುಡಿಯ ಬೆಳವಣಿಗೆ — ಎಚ್. ಜಿ. ಲೋಕೂರ
78. ಹರಿಹರನ ಗಿರಿಜಾಕಲ್ಯಾಣ — ಜಿ. ವ್ಹಿ. ಶಿರೂರ
79. ಹೊಟ್ಟೆಯ ಹುಣ್ಣು — ಪಿ. ಎಸ್. ಶಂಕರ್
80. ಸಂಯೋಜಕ ಶಕ್ತಿ — ಬಿ. ಜಿ. ಜ್ಯೋತಿ
81. ಸಂಸದೀಯ ಸರಕಾರವು ಭಾರತಕ್ಕೆ ಒಪ್ಪುವುದೇ ?— ವಸಂತ ಪಾಟೀಲ
82. ನಮ್ಮ ರೈತರೇಕೆ ಹಿಂದುಳಿದಿದ್ದಾರೆ ? — ಎಂ. ಕೆ. ಕೆಂಪ್ಲಿ
83. ನಗೆಗಾರ ನಯಸೇನ — ಎಂ. ಎಸ್. ಸುಂಕಾಪುರ
84. ಶೂನ್ಯ ಸಂಪಾದನೆ — ಎಸ್. ವ್ಹಿ. ಕಂಬಿ
85. ಮಹಮೂದ ಗವಾನ — ಎಲ್. ಆರ್. ಕುಲಕರ್ಣಿ
86. ಕೆಳದಿಯ ನಾಯಕರು — ಜಿ. ಎಸ್. ದೀಕ್ಷಿತ

VII. ವಿಶೇಷ ವಾಙ್ಮಯ ಪ್ರಸಾರ ಪುಸ್ತಕಮಾಲೆ

		PRICE
1	ನಿಜಗುಣ ಶಿವಯೋಗಿ ಹಾಗೂ ಅವರ ಕೃತಿಗಳು	0·50
2	ಮಹಾಕವಿ ರನ್ನ ಹಾಗೂ ಅವನ ಕೃತಿಗಳು	1·00
3	ಮಹಾಕವಿ ಪಂಪ ಹಾಗೂ ಅವನ ಕೃತಿಗಳು	1·00
4	ಸರ್ವಜ್ಞ ಕವಿ : ಜೀವನ ಹಾಗೂ ಕಾವ್ಯ	1·50
5	ಬಸವಣ್ಣನವರ ವ್ಯಕ್ತಿತ್ವ ಹಾಗೂ ಜೀವನಸಿದ್ಧಿ	1·50
6	ಸಾಹಿತ್ಯ ವಿಮರ್ಶೆ	1·50

VIII. Other Publications

(ಇತರ ಪ್ರಕಟನೆಗಳು)

1	Hubli City—A Study in Urban Economic Life —*B. R. Dhekney*	10·00
2	Private International Law — *N. K. Dixit & Negalur Ranganath*	10·00
3	The Structure of Kannada — *R. C. Hiremath*	5·00
4	विवेकचिंतामणि (Marathi rendering of Nijaguna Shivayogi's Viveka Chintamani in Kannada) (Joint publication of the Karnatak University, Dharwar & the Poona University, Poona) —*Ed. D. N. Awalikar*	6·75

5 ಸಸ್ಯಶಾಸ್ತ್ರ — ಬಿ. ಎಸ್. ಚಿಕ್ಕಣ್ಣಯ್ಯ 1.50
6 ರಸಾಯನಶಾಸ್ತ್ರ — ಆರ್. ಎಸ್. ಹನುಸಾಗರ 4.00
7 ಪ್ರಾಯೋಗಿಕ ರಸಾಯನಶಾಸ್ತ್ರ — ಆರ್. ಬಿ. ಕಂಠಿ 3.00
8 ಕನ್ನಡ ಸಂತರ ಪರಮಾರ್ಥಪಥ 5.00
—ಅನು. : ಎಂ. ಎಸ್. ದೇಶಪಾಂಡೆ
9 ಕನ್ನಡ ಪರಮಾರ್ಥಸೋಪಾನ —ಸಂ. ಎಂ. ಎಸ್. ದೇಶಪಾಂಡೆ 2.50
10 Studies in State Administration 15.00
—Ed. *G. S. Halappa*
11 Yashodhara Charita —Ed. *K. Krishnamoorthy* 5.00
12 Essays in Sanskrit Criticism 5.00
—*K. Krishnamoorthy*
13 The First General Elections in Goa 3.00
—*G. S Halappa, A. M. Rajashekharaiah & K. Raghavendra Rao*
14 Sunyasampadane—Vol-I (*English Version of a Kannada work with Commentary and Notes*) 12.00
15 Kavi Kaumudi —Ed. *K. Krishnamoorthy* 1.50
16 ಚನ್ನಬಸವಣ್ಣನವರ ವಚನಗಳು —ಸಂ. ಆರ್. ಸಿ. ಹಿರೇಮಠ 15.00
17 ಷಟ್‌ಸ್ಥಲಪ್ರಭೆ —ಆರ್. ಸಿ. ಹಿರೇಮಠ 7.00
18 ಶ್ರೀ ಸಿದ್ಧರಾಮೇಶ್ವರ ವಚನಗಳು —ಸಂ. ಆರ್. ಸಿ. ಹಿರೇಮಠ 20.00
19 ಶಿವಶರಣೆಯರ ವಚನಗಳು (ಸಮಗ್ರ ಸಂಪುಟ) 20 00
—ಸಂ. ಆರ್. ಸಿ. ಹಿರೇಮಠ
20 Sunyasampadane—Vol-II 20.00
—Ed *S. S. Bhoosanurmath & Armando Menezes*
21 ಬಸವಣ್ಣನವರ ವಚನಗಳು —ಸಂ. ಆರ್. ಸಿ. ಹಿರೇಮಠ 20.00
22 ಮಹಾದೇವಿಯಕ್ಕನ ವಚನಗಳು —ಸಂ. ಆರ್. ಸಿ. ಹಿರೇಮಠ 7.00
23 ನೀಲಮ್ಮನ ವಚನಗಳು ಮತ್ತು ಲಿಂಗಮ್ಮನ ವಚನಗಳು 5.00
—ಸಂ. ಆರ್. ಸಿ. ಹಿರೇಮಠ
24 ಇಪ್ಪತ್ತೇಳು ಶಿವಶರಣೆಯರ ವಚನಗಳು 5.00
—ಸಂ. ಆರ್. ಸಿ. ಹಿರೇಮಠ
25 ಅಮುಗೆ ರಾಯಮ್ಮನ ವಚನಗಳು ಮತ್ತು ಅಕ್ಕಮ್ಮನ ವಚನಗಳು —ಸಂ. ಆರ್. ಸಿ. ಹಿರೇಮಠ 5.00
26 Critical Essays on Indian Writing in English 20.00
—Ed. *M. K. Naik, S. K. Desai and G. S. Amur*
27 Sāyaṇa's Subhāṣita-Sudhānidhi 10.00
—Ed. *K. Krishnamoorthy*
28 ಶಾಸನ ಸಂಪದ —Ed. *R. C. Hiremath & M M. Kalburgi* 2.00
29 ಶೂನ್ಯಸಂಪಾದನೆ —Ed. *R. C. Hiremath* (IN PRESS)

IX. UNIVERSITY JOURNALS

(Annuals)

1 Journal of the Karnatak University — Science
2 Journal of the Karnatak University — Humanities
3 Journal of the Karnatak University — Social Sciences

Rate of Annual Subscription for Each Journal:

Rs. 5-00 (In India)
2 Dollars
14 Shillings } (Foreign)

Karnatak University Bulletin (MONTHLY)

Subscription :

Monthly : 50 paise
Annual : Rs. 6/-

ಕರ್ನಾಟಕ ಭಾರತಿ (ಅಯನ ಪತ್ರಿಕೆ)

ವಾರ್ಷಿಕ ಚಂದಾ : ರೂ. ೫/- (ಅಂಚೆವೆಚ್ಚ ಸಹಿತ)
ಬಿಡಿ ಸಂಚಿಕೆಯ ಬೆಲೆ : ರೂ. ೩/- (ಅಂಚೆವೆಚ್ಚ ಪ್ರತ್ಯೇಕ)

For details please write to :

Director,
Extension Service & Publications
Karnatak University
DHARWAR-3 (Mysore State).

ವಿವರಗಳಿಗೆ ಬರೆಯಿರಿ :

ಡಾಯರೆಕ್ಟರ,
ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನೆ ವಿಭ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ-೩ (ಮೈಸೂರು ರಾಜ್ಯ)

ಸಂಯುಕ್ತ ಕರ್ನಾಟಕ ಪ್ರೆಸ್, ಹುಬ್ಬಳ್ಳಿ